ಡಿ. ವಿ. ಗುಂಡಪ್ಪ

30



ಜ್ಞಾಪಕಚಿತ್ರಶಾಲೆ – ೬

# ಹಲವರು ಸಾರ್ವಜನಿಕರು

# ಮುಖಪುಟ

## ಜ್ಞಾಪಕಚಿತ್ರಶಾಲೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**



**e-Book**
030v1.0.0
Date: October 10, 2018
ISBN: 9788193777954
Created by: Sriranga Digital Software Technologies Private Limited
srirangadigital.com

# ಅರಿಕೆ

ಈ ಪುಸ್ತಕವನ್ನು ಮಹಾಜನರಿಗೆ ಒಪ್ಪಿಸಲು ನನಗೆ ವಿಶೇಷ ಸಂತೋಷ. ಇದರಲ್ಲಿ ಪ್ರಸ್ತುತರಾಗಿರುವ ಮಹನೀಯರು ನನಗೆ ಗುರುಸ್ಥಾನದಲ್ಲಿರತಕ್ಕವರು. ಭಗವತ್ಕೃಪೆಯಿಂದ ನನಗೆ ಈ ಮಹನೀಯರ ಪರಿಚಯ ಲಭಿಸಿತು. ನಾನು ಈಗ ಧೈರ್ಯವಾಗಿ ಒಂದು ಮಾತನ್ನು ಹೇಳುತ್ತೇನೆ: ಶ್ರೀ ಶಿವಸ್ವಾಮಿ ಅಯ್ಯರವರಂಥ ಪ್ರಾಮಾಣಿಕರು, ನಮ್ಮ ವೆಂಕಟಕೃಷ್ಣಯ್ಯನವರಂಥ ಉದಾರಿಗಳು ಈ ಹೊತ್ತು ಇಂಡಿಯದಲ್ಲಿ ದುರ್ಲಭರಾಗಿದ್ದಾರೆ. ಅವರ ಕಾಲದಲ್ಲಿಯೇ ಅವರು ಅಸಮಾನರಾಗಿದ್ದರು. ಶ್ರೀ ಶಿವಸ್ವಾಮಿ ಅಯ್ಯರ್‌ರವರ ಜ್ಞಾನಾಸಕ್ತಿಯನ್ನೂ ಪಾಂಡಿತ್ಯವನ್ನೂ ವೆಂಕಟಕೃಷ್ಣಯ್ಯನವರ ಹೃದಯವೈಶಾಲ್ಯವನ್ನೂ ಕುರಿತು ನಮ್ಮ ಜನ ಧ್ಯಾನ ಮಾಡಿದಷ್ಟೂ ಅವರಿಗೆ ಶ್ರೇಯಸ್ಸು ಹೆಚ್ಚುವುದೆಂದು ನಾನು ನಂಬಿಕೊಂಡಿದ್ದೇನೆ.

ಈ ಗ್ರಂಥದಲ್ಲಿಯ ಪ್ರಕರಣಗಳು-ಒಂದೆರಡರ ವಿನಾ-ಮೊದಲನೆಯ ಸಾರಿ, 'ನೆನಪಿನ ಅಂಗಳ' ಎಂಬ ನನಗೆ ಇಷ್ಟವಾದ ಹೆಸರಿನಲ್ಲಿ 'ಸುಧಾ' ಪತ್ರಿಕೆಯಲ್ಲಿ ಪ್ರಕಟವಾದವು. ಎಂ. ವೆಂಕಟಕೃಷ್ಣಯ್ಯನವರನ್ನು ಕುರಿತ ಲೇಖನ ಅವರ ಸ್ಮಾರಕ ಸಂಪುಟಕ್ಕಾಗಿ ಬರೆದದ್ದು. ರಾಜಗೋಪಾಲಾಚಾರ್ಯರನ್ನು ಕುರಿತ ಪ್ರಬಂಧ ಈಚೆಗೆ-ಅವರು ನಿಧನರಾದ ಬಳಿಕ-ಬರೆದದ್ದು. 'ಸುಧಾ' ಪತ್ರಿಕೆಯ ಹಾಗೂ 'ತಾತಯ್ಯನವರು' ಸ್ಮಾರಕ ಸಂಪುಟದ ಸಂಪಾದಕರುಗಳಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಈ ಪ್ರಬಂಧಗಳನ್ನು ಕೈಯಿಂದ ಬರೆದು ಆಮೇಲೆ ಇವುಗಳ ಅಚ್ಚಿನ ಕರಡುಗಳನ್ನು ತಿದ್ದಿ ಅವಶ್ಯವಾದ ದಾಖಲೆಗಳನ್ನು ಸರಿಪಡಿಸಿ ಚಿತ್ರಪಟಗಳನ್ನು ಸಂಪಾದಿಸಿ ಪುಸ್ತಕವನ್ನು ಒಂದು ಆಕಾರಕ್ಕೆ ತಂದಾತ ನನ್ನ ಪ್ರಿಯ ಚಿರಂಜೀವಿ ಎಸ್. ಆರ್. ರಾಮಸ್ವಾಮಿ. ನನ್ನ ಇತರ ಪುಸ್ತಕಗಳಲ್ಲಿ ಆದಂತೆಯೇ ಇದರ ವಿಷಯದಲ್ಲಿಯೂ ಆತನಿಗೆ ನನ್ನಿಂದ ತುಂಬ ಪ್ರಯಾಸವಾಗಿದೆ. ಆ ಪ್ರಯಾಸವನ್ನು ನನ್ನ ಚಿರಂಜೀವಿ ಸಂತೋಷದಿಂದ, ನನ್ನ ಮೇಲಣ ಪ್ರೀತಿಯಿಂದ ತಾಳಿದ್ದಾನೆ. ಜಗದೀಶ್ವರನು ಈ ಚಿರಂಜೀವಿಯನ್ನು ಆಶೀರ್ವದಿಸಲಿ.

ಶ್ರೀ ಕೂಡಲಿ ಚಿದಂಬರಂ ಅವರು ಎಂದಿನಂತೆ ದಯೆ ತೋರಿದ್ದಾರೆ. ಮುದ್ರಣ ಕರ್ತರಾದ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್. ರಾಮರಾಯರು ಶ್ರದ್ಧೆಯಿಂದ ಸಹಕರಿಸಿದ್ದಾರೆ. ಈ ಇಬ್ಬರಿಗೂ ನನ್ನ ಕೃತಜ್ಞತೆ.

ಮಹಾಜನರು ದಯೆಯಿಟ್ಟು ಇದನ್ನು ಸ್ವೀಕರಿಸುವರೆಂದು ನಂಬಿದ್ದೇನೆ. ಇಂತು ಸರ್ವಂ ಶಿವಂ.

ಮೇ ೧೯೭೩

**ಡಿ.ವಿ.ಜಿ.**

# ೧ ಪಿ.ಎಸ್. ಶಿವಸ್ವಾಮಿ ಅಯ್ಯರ್

ಮಿರ್ಜಾ ಸಾಹೇಬರು ದಿವಾನರಾಗಿದ್ದಾಗ ೧೯೩೪-೩೫ರ ಸುಮಾರಿನಲ್ಲಿ, ಮದರಾಸಿನ ಕೆಲಮಂದಿ ಪ್ರಮುಖ ಜನರು ಬೇಸಗೆಯನ್ನು ಕಳೆಯಲು ಬೆಂಗಳೂರಿಗೆ ಬರುತ್ತಿದ್ದರು. ಅಂಥವರ ಪೈಕಿ ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರ್ ಅವರೂ ಒಬ್ಬರು. ಅವರು ಆಗರ್ಭಶ್ರೀಮಂತರು: “ಶುಚೀನಾಂ ಶ್ರೀಮತಾಂ ಗೇಹೇ” ಎಂಬಂತೆ, ಧನಿಕವಾದ ಶುಚಿವಂತ ವಂಶದಲ್ಲಿ ಹುಟ್ಟಿದವರು.

ಶಿವಸ್ವಾಮಿ ಅಯ್ಯರ್ ಪ್ರಸಿದ್ಧ ವಿದ್ವಾಂಸರು-ಸಂಸ್ಕೃತದಲ್ಲಿ, ಇಂಗ್ಲಿಷಿನಲ್ಲಿ, ನ್ಯಾಯಶಾಸ್ತ್ರದಲ್ಲಿ. ಮದರಾಸಿನ ಬಿ.ಎಲ್. ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ ತೇರ್ಗಡೆ ಪಡೆಯುವುದು ಆ ಕಾಲದಲ್ಲಿ ಒಂದು ಹೆಚ್ಚಿನ ಪ್ರಶಸ್ತಿ. ಶಿವಸ್ವಾಮಿ ಅಯ್ಯರ್ ಮೊದಲನೆಯ ವರ್ಗದಲ್ಲಿ ಮೊಟ್ಟಮೊದಲನೆಯವರಾಗಿ ಪ್ರಶಸ್ತಿ ಪಡೆದಿದ್ದರು.

ಶಿವಸ್ವಾಮಿ ಅಯ್ಯರ್ ಅವರ ಗೋಷ್ಠಿಗೆ ಸೇರಿದವರಲ್ಲಿ ನಾಲ್ವರೈವರನ್ನು ಇಲ್ಲಿ ಸ್ಮರಿಸಬಹುದು. ಎ.ಎಸ್. ಶ್ರೀನಿವಾಸಶಾಸ್ತ್ರಿಗಳು, ಟಿ.ಆರ್. ವೆಂಕಟರಾಮಶಾಸ್ತ್ರಿಗಳು, ಕೆ.ಬಿ. ರಾಮನಾಥಯ್ಯರ್, ಜಿ.ಎ. ನಟೇಶನ್, ಟಿ. ರಂಗಾಚಾರಿ, ಸರ್ ಎಸ್. ವರದಾಚಾರ್ಯರು. ಇವರು ಶಿವಸ್ವಾಮಿ ಅಯ್ಯರನ್ನು ಪದೇ ಪದೇ ಕಾಣುತ್ತಿದ್ದವರು.

ಶಿವಸ್ವಾಮಿ ಅಯ್ಯರ್ ಅವರು ವಕೀಲಿ ವೃತ್ತಿಯನ್ನು ಅವಲಂಬಿಸಿ ವಿಪುಲವಾಗಿ ಪ್ರತಿಫಲಗಳಿಸಿ, ಕಾಲಕ್ರಮದಲ್ಲಿ ಅಡ್ವೊಕೇಟ್ ಜನರಲ್ ಆಗಿದ್ದು, ಆಮೇಲೆ ಗವರ್ನರ್ ಪದವಿಯ ಮಂತ್ರಿಮಂಡಲದ (ಕೌನ್ಸಿಲ್) ಸದಸ್ಯರಾಗಿ ನೇಮಿಸಲ್ಪಟ್ಟು, ಕೊಂಚಕಾಲ ಗವರ್ನರ್ ಆಗಿಯೂ ಇದ್ದು ಕೀರ್ತಿಗಳಿಸಿದವರು.

ಅವರ ಅಧಿಕಾರ ಪದವಿಗಳ ಮಾತು ಅಷ್ಟು ವಿಶೇಷವಾದದ್ದೇನೂ ಅಲ್ಲ. ಅವರಲ್ಲಿ ವಿಶೇಷವಾದ ಗುಣಗಳು ಮುಖ್ಯವಾಗಿ ಮೂರೆಂದು ನನಗನ್ನಿಸುತ್ತದೆ:

1. ಅವರ ಪ್ರಾಮಾಣಿಕತೆ;
2. ಅವರ ವಿದ್ವನ್ನಿಷ್ಠೆ;
3. ಅವರ ಸದಾಚಾರನಿಷ್ಠೆ.

# ಜ್ಞಾನಪಿಪಾಸೆ

ಅವರ ವಿದ್ಯೋತ್ಸಾಹವನ್ನು ಕುರಿತು ಒಂದು ಸಂಗತಿ ಹೇಳಬಹುದು. ಅವರು ಬೆಂಗಳೂರಿನಲ್ಲಿ ವರ್ಷ ವರ್ಷವೂ ಎರಡು ಮೂರು-ನಾಲ್ಕು ತಿಂಗಳು ಕೂಡ ಇರುತ್ತಿದ್ದದ್ದುಂಟು. ಇಲ್ಲಿರುವಾಗ ಸಾಮಾನ್ಯವಾಗಿ ಸಂಜೆ ಸಂಜೆಯೂ ಲಾಲ್‌ಬಾಗಿಗೆ ಹೋಗುತ್ತಿದ್ದರು. ಲಾಲ್‌ಬಾಗಿನಲ್ಲಿ ಗ್ಲಾಸ್‌ಹೌಸ್ ಕಟ್ಟಡದ ಈಶಾನ್ಯಮೂಲೆಯಲ್ಲಿ ಅಥವಾ ಆಗ್ನೇಯ ಮೂಲೆಯಲ್ಲಿ ಕಟ್ಟಡದಿಂದ ದೂರವಾಗಿ, ತಂಪಾದ ಸ್ಥಳದಲ್ಲಿ ಮರಗಳ ಕೆಳಗೆ ಅವರು ಕೂಡಲು ಒಂದು ಜಾಗ ಗೊತ್ತಾಗಿರುತ್ತಿತ್ತು. ಅಂದಿನ ಲಾಲ್‌ಬಾಗಿನ ಅಧಿಕಾರಿಗಳು ಆ ಜಾಗದಲ್ಲಿ ನಾಲ್ಕೈದು ಒರಗುಬೆಂಚುಗಳನ್ನು ವರ್ತುಲಾಕಾರವಾಗಿ ಜೋಡಿಸಿರಿಸುತ್ತಿದ್ದರು. ಇದು ಬಹುಶಃ ಮಿರ್ಜಾ ಅವರ ಶಿಫಾರಸಿನ ಮೇರೆಗೆ. ಶಿವಸ್ವಾಮಿ ಅಯ್ಯರ್ ಅವರು ಅಲ್ಲಿಗೆ ಬಂದಾಗ ಅಲ್ಲಿ ಸೇರುತ್ತಿದ್ದ ಇತರರು ಬೆಂಗಳೂರಿನ ಕೆಲಮಂದಿ ಗಣ್ಯ ಜನರು:

(೧) ಜಡ್ಜಿ ಜಿ. ಶ್ರೀನಿವಾಸಯ್ಯರ್ ಅವರು, (೨) ಚೀಫ್ ಇಂಜಿನಿಯರ್ ಶ್ರೀನಿವಾಸಯ್ಯರ್ ಅವರು, (೩) ಡೆಪ್ಯುಟಿ ಡಿ.ಪಿ.ಐ., ಡಿ. ವೆಂಕಟರಾಮಯ್ಯನವರು, (೪) ಸಬ್ ಜಡ್ಜಿ ಟಿ. ವಾಸುದೇವರಾಯರವರು, (೫) ಪ್ರೊಫೆಸರ್ ಸಿ. ಆರ್. ನಾರಾಯಣರಾಯರವರು, (೬) ಡಾ॥ ಸಿ. ಬಿ. ರಾಮರಾಯರು, ಇನ್ನೂ ಏಳೆಂಟು ಮಂದಿ ಇಂಥವರು. ಮದರಾಸಿನಿಂದ ಬಂದವರ ಪೈಕಿ ಜಸ್ಟಿಸ್ ಕುಮಾರಸ್ವಾಮಿ ಶಾಸ್ತ್ರಿಗಳು, ವಕೀಲ ಗೋವಿಂದರಾಘವಯ್ಯರ್, ಎನ್. ಸುಬ್ಬರಾವ್ ಪಂತುಲು, ಟಿ. ರಂಗಾಚಾರ್ಯರು-ಈ ಶ್ರೇಣಿಯ ಪ್ರಸಿದ್ಧ ಪುರುಷರಿರುತ್ತಿದ್ದರು. ಈ ಸಭೆಯು ಲೋಕಾಭಿರಾಮ ವಿಷಯಗಳನ್ನು ಕುರಿತು ಹರಟುವುದು ಅಥವಾ ವಾಗ್ವಾದ ನಡಸುವುದು.

ಒಂದು ಸಾರಿ ಈ ಸಭೆಗೆ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರೂ, ಟಿ. ಆರ್. ವೆಂಕಟರಾಮ ಶಾಸ್ತ್ರಿಗಳವರೂ ಬಂದಿದ್ದರು. ಶ್ರೀನಿವಾಸ ಶಾಸ್ತ್ರಿಗಳವರು ಶಿವಸ್ವಾಮಿ ಅಯ್ಯರ್ರವರಿಗಿಂತ ವಯಸ್ಸಿನಲ್ಲಿ ಕಿರಿಯರು. ವೆಂಕಟರಾಮ ಶಾಸ್ತ್ರಿಗಳು ಶಾಸ್ತ್ರಿಗಳಿಗಿಂತ ಕಿರಿಯರು. ಮತ್ತು ವೆಂಕಟರಾಮ ಶಾಸ್ತ್ರಿಗಳು ಸ್ವಾಮಿ ಅಯ್ಯರ್ ಅವರ ಶಿಷ್ಯರೆಂಬಂತೆ ಇದ್ದವರು, ವಕೀಲಿ ಉದ್ಯೋಗವನ್ನು ಶಿವಸ್ವಾಮಿ ಅಯ್ಯರ್ ಅವರ ಆಫೀಸಿನಲ್ಲಿ ಕಲಿತವರು. ಆಗ ಅವರೊಡನೆ ಶಿವಸ್ವಾಮಿ ಅಯ್ಯರವರ ಆಫೀಸಿನಲ್ಲಿದ್ದವರು ಫೆಡೆರಲ್ ಕೋರ್ಟ್ ಜಡ್ಜಿ ಸರ್ ಎಸ್. ವರದಾಚಾರ್ಯರು.

ಈ ಮೂವರು ಲಾಲ್‌ಬಾಗಿನಲ್ಲಿ ಕಲೆತಿದ್ದ ಸಂಜೆ ಯಾವುದೋ ವಿಷಯ ಚರ್ಚೆಗೆ ಬಂತು. ಆಗ ಶಿವಸ್ವಾಮಿ ಅಯ್ಯರ್ ಅವರು ಆ ವಿಷಯಕ್ಕೆ ಸಂಬಂಧಪಟ್ಟ ಯಾವುದೋ ಸಂಗತಿಯನ್ನು ನೆನಪು ಮಾಡಿಕೊಂಡು ಶ್ರೀನಿವಾಸ ಶಾಸ್ತ್ರಿಗಳ ಕಡೆ ತಿರುಗಿ ಹೀಗೆಂದರು:

“Mr. Sastri, I gave you that book of Millikan's. What have you done with it?”

(ಶಾಸ್ತ್ರಿಗಳೆ, ನಾನು ನಿಮ್ಮ ಕೈಗೆ ಮಿಲ್ಲಿಕನ್ ಎಂಬಾತ ಬರೆದ ಪುಸ್ತಕವನ್ನು ಕೊಟ್ಟೆನಲ್ಲಾ- ಅದನ್ನೇನು ಮಾಡಿದಿರಿ?)

# ಶಾಸ್ತ್ರಿಗಳ ಪೀಕಲಾಟ

ಶಾ: (ಪಕ್ಕದಲ್ಲಿದ್ದ ನನ್ನೊಡನೆ) ಬಂತಲ್ಲಪ್ಪ ಪೀಕಲಾಟ! (ಎಂದು ಪಿಸುಗುಟ್ಟಿ, ತಮಿಳಿನಲ್ಲಿ)- "ಅದು ನನಗೆ ಏನೂ ತಿಳಿಯಲಿಲ್ಲ ಸಾರ್-ಬಹುಕಷ್ಟ."

ಶಿ: "ಅದು ಏಕೆ ಕಷ್ಟವಾಯಿತು?"

ಶಾ: "It is all Physics, far beyond me." (ಅದೆಲ್ಲ ಭೌತವಿಜ್ಞಾನ-, ನನಗೆ ಬಹಳ ದೂರವಾದದ್ದು.)

ಶಿ: "Why do you say so? You took a medal in Physics?"

(ಅದೇಕೆ ಹಾಗೆ ಹೇಳುತ್ತೀರಿ? ಭೌತ ವಿಜ್ಞಾನದಲ್ಲಿ ಪ್ರಶಸ್ತಿ ಪದಕವನ್ನು ಗೆದ್ದವರಲ್ಲವೆ ನೀವು?)

ಶಾ: "ನನ್ನ ಪದಕಕ್ಕೆ ಈ ಹೊತ್ತು ಏನು ಬೆಲೆ? ಅದು ಐವತ್ತು ವರ್ಷಗಳ ಹಿಂದಿನ ಮಾತು. ಭೌತಶಾಸ್ತ್ರ ಈ ಹೊತ್ತು ಗುರುತಿಗೆ ಸಿಕ್ಕದಷ್ಟು ದೊಡ್ಡದಾಗಿ ಬೆಳೆದಿದೆ. ನನ್ನ ಕೈ ಇಲ್ಲಿ ಸಾಗುವ ಹಾಗಿಲ್ಲ."

ಶಿ; (ನಿಟ್ಟುಸಿರುಬಿಟ್ಟು) "ಒಳ್ಳೆಯದು. ಪುಸ್ತಕ ಏನಾಯಿತು?"

ಶಾ: "ಅದು ನನ್ನ ಯೋಗ್ಯತೆಗೆ ಮೀರಿದ್ದೆಂದು ವೆಂಕಟರಾಮ ಶಾಸ್ತ್ರಿಗಳಿಗೆ ಕೊಟ್ಟೆ-ಅವರು ಯುವಕರಾದದ್ದರಿಂದ."

ಶಿ: "Venkatarama Sastri, what have you done with the book?"

(ವೆಂಕಟರಾಮಶಾಸ್ತ್ರಿಗಳೆ, ಆ ಪುಸ್ತಕ ಏನು ಮಾಡಿದ್ದೀರಿ?)

ವೆಂ: "I tried to read it, but had to give it up as far beyond me." (ಓದಲಿಕ್ಕೆ ಪ್ರಯತ್ನಮಾಡಿದೆ. ಅದು ನನಗೆ ಅತಿ ಪ್ರಯಾಸವೆಂದು ತೋರಿತು. ಕೈಬಿಟ್ಟೆ.)

ಶಿ: (ಕೊಂಚ ನಕ್ಕು) "ನೀವು ಮ್ಯಾತಮಾಟಿಕ್ಸಿನಲ್ಲಿ ಫಸ್‌ಟ್‌ಕ್ಲಾಸ್ ಫಸ್‌ಟ್ ಆದಿರಲ್ಲ? ಇನ್ನೂ ಕೊಂಚ ಪ್ರಯಾಸಪಡಬಾರದಾಗಿತ್ತೆ?"

ವೆಂ: "ನಾನು ಬಿ. ಎ. ಓದಿದಾಗ ಇದ್ದ ಗಣಿತಶಾಸ್ತ್ರ ಎಲ್ಲಿ, ಈ ಹೊತ್ತಿನದೆಲ್ಲಿ! ಅದರಲ್ಲಿಯೂ ಮಿಲ್ಲಿಕನ್ ಮಹಾ ಪ್ರೌಢ ಭೌತಗಣಿತ ವಿಜ್ಞಾನಿ, ಖಗೋಳವಿಜ್ಞಾನಿ. ಅವನ ಗಣಿತ ನನಗೆ ಅರ್ಥವಾಗುವುದುಂಟೆ?"

ಶಿ: "ಹಾಗಾದರೆ ಹೋಗಲಿ; ಪುಸ್ತಕ ಏನಾಯಿತು?"

ವೆಂ: "ಮದರಾಸಿಗೆ ಹೋದಮೇಲೆ ಕೊಡುತ್ತೇನೆ."

ಶಿ: "ನೀವಿಬ್ಬರೂ ಹೀಗೆ ಹೇಳಿದ ಮೇಲೆ ಇನ್ನು ಯಾರನ್ನಾದರೂ ನಾನು ಹುಡುಕಬೇಕು...ಯಾರಿದ್ದಾರೆ?... ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಯಾರೂ ಇರುವಂತೆ ತೋರುವುದಿಲ್ಲ ಈ ಕೆಲಸಕ್ಕೆ..."

ನಾನು: "ತಮಗೆ ಈ ವಯಸ್ಸಿನಲ್ಲಿ ಯಾತಕ್ಕೆ ಈ ಶ್ರಮ? ಮಿಲ್ಲಿಕನ್ನಿನಿಂದ ತಮಗೆ ಆಗಬೇಕಾದದ್ದೇನು?"

ಶಿ: "ಅದೇನಯ್ಯಾ ಹೀಗೆನ್ನುತ್ತೀರಿ? ಹೊಸಹೊಸದಾಗಿ ಜ್ಞಾನ ಬೆಳೆಯುತ್ತಿದೆ. ಜ್ಞಾನ ಯಾತಕ್ಕೆ ಎನ್ನುತ್ತಾರೆಯೆ? ಮಿಲ್ಲಿಕನ್ನಿನಂಥ ವಿಜ್ಞಾನಿ ಪ್ರಪಂಚದ ರಚನೆಯನ್ನೂ, ಅದರ ಚಲನವಲನಗಳನ್ನೂ ಕುರಿತು ಸಿದ್ಧಾಂತ ಮಾಡಿದರೆ, ಆ ಸಿದ್ಧಾಂತಕ್ಕೂ ನಮ್ಮ ಪೂರ್ವ ಜ್ಯೋತಿಷ್ಕರ ಸಿದ್ಧಾಂತಕ್ಕೂ ಎಷ್ಟು ಮಾತ್ರ ಹೊಂದಿಕೆಯುಂಟು; ಆ ಸಿದ್ಧಾಂತಕ್ಕೂ ನಮ್ಮ ವೇದಾಂತಮತಕ್ಕೂ ಸಮನ್ವಯವಾದೀತೋ ವಿರೋಧವೋ-ಇದನ್ನು ನಾವು ವಿಚಾರಮಾಡಿ ನೋಡಬೇಡವೆ?... ಇಷ್ಟಕ್ಕೂ ನಾನು ಇವರನ್ನು ಕೇಳಿದ್ದು ಏನನ್ನು? ಗ್ರಂಥ ಓದಿ ಅದರ ಸಾರಭಾಗವನ್ನು ಸಂಗ್ರಹ ಮಾಡಿಕೊಡಿರೆಂದು; ಅದೂ ಆಗದೆನ್ನುತ್ತಾರಲ್ಲ!"

ಎಲ್ಲರೂ ನಕ್ಕರು. ಎಲ್ಲರೂ ಗಂಭೀರ ಮೌನವನ್ನು ತಾಳಿದರು. ೮೦-೮೫ ವಯಸ್ಸಿನ ಈ ಮಹಾನುಭಾವರಿಗೆ ಈ ವಯಸ್ಸಿನಲ್ಲೂ ಎಷ್ಟುಮಟ್ಟಿನ ಜ್ಞಾನಕುತೂಹಲ! ನೂತನ ವಿಜ್ಞಾನದಲ್ಲಿ ಎಷ್ಟು ಆಸಕ್ತಿ!-ಎಂದು ಆಶ್ಚರ್ಯಪಟ್ಟರು.

ಇನ್ನೊಂದು ವ್ಯಕ್ತಿಲಕ್ಷಣವನ್ನು ಹೇಳುತ್ತೇನೆ.

ವೆಂಕಟರಾಮ ಶಾಸ್ತ್ರಿಗಳು ಯಾವುದೋ ವಕೀಲ ಕಾರ್ಯದ ನಿಮಿತ್ತವಾಗಿ ಬೆಂಗಳೂರಿಗೆ ಬಂದು ಮಾಡರ್ನ್ ಹಿಂದೂ ಹೊಟೇಲಿನ ಮಹಡಿಯ ಒಂದು ಕೊಠಡಿಯಲ್ಲಿ ತಂಗಿದ್ದರು. ಆ ಸಂಜೆ ಅವರೂ ನಾನು ಕೊಂಚ ದೂರ ವಾಯುಸೇವನೆಗಾಗಿ ತಿರುಗಾಡಿಕೊಂಡು ಬಂದೆವು. ಭೋಜನದ ವೇಳೆ ಬಂದಾಗ ಅವರು ಹೇಳಿದರು:

"ನೀನೂ ಇಲ್ಲಿಯೇ ಊಟ ಮಾಡು. ಆಮೇಲೆ ನಿನ್ನೊಡನೆ ನಾನು ಬರುತ್ತೇನೆ."

ಅದರಂತೆ ಊಟ ಮುಗಿಸಿಕೊಂಡು ನಾವಿಬ್ಬರೂ ಕಾರಿನಲ್ಲಿ ಕುಳಿತೆವು. ಆ ರಾತ್ರಿ ಬೆಳದಿಂಗಳು. ಘಂಟೆ ೮ ಆಗಿತ್ತು. ಶಾಸ್ತ್ರಿಗಳೆಂದರು:

"ಹೇಗೂ ಬಸವನಗುಡಿಯ ಕಡೆ ಹೋಗುತ್ತೇವೆ. ಶಿವಸ್ವಾಮಿ ಅಯ್ಯರ್ ಅವರನ್ನು ಒಂದು ಹತ್ತು ನಿಮಿಷ ನೋಡಿಕೊಂಡು ಬರೋಣ."

ಆ ವೇಳೆಗೆ ಕಾರು ಗೇಟಿನ ಬಳಿ ಬಂದಿತು. ಶಾಸ್ತ್ರಿಗಳು ಕಾರಿನ ಡ್ರೈವರನ್ನು ಕುರಿತು "ಕೊಂಚ ನಿಲ್ಲು, ಬರುತ್ತೇನೆ" ಎಂದು ಹೇಳಿ ಗಾಡಿಯಿಂದ ಕೆಳಕ್ಕಿಳಿದು ಹೋಟೆಲಿನೊಳಕ್ಕೆ ಹೋದರು. ನಾನು ಗಾಡಿಯಲ್ಲಿಯೇ ಕುಳಿತಿದ್ದೆ. ಒಂದೆರಡು ನಿಮಿಷವಾದ ಮೇಲೆ ಶಾಸ್ತ್ರಿಗಳು ಬಂದು ಗಾಡಿಯಲ್ಲಿ ಕುಳಿತು ಹೇಳಿದರು:

"ನಾನು ಪಂಚೆಯನ್ನು ಕಚ್ಚೆ ಹಾಕಿಕೊಳ್ಳುವುದಕ್ಕೋಸ್ಕರ ಒಳಗೆ ಹೋಗಿದ್ದೆ. ಶಿವಸ್ವಾಮಿ ಅಯ್ಯರ್ ಅವರ ಹತ್ತಿರ ಹೋಗುವಾಗ ಕಚ್ಚೆ ಹಾಕಿರಬೇಕು. ಹಾಗಿಲ್ಲದಿದ್ದರೆ ಅವರಿಗೆ ಸರಿಬೀಳುವುದಿಲ್ಲ."

# ವ್ಯಾಸಂಗ ನಿಷ್ಠೆ

ಆಗ ಶಿವಸ್ವಾಮಿ ಅಯ್ಯರ್ ಅವರು ಎಲ್. ಶ್ರೀನಿವಾಸಯ್ಯಂಗಾರ್ಯರ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿದ್ದರು. ನಾವಿಬ್ಬರೂ ಅವರಿಗೆ ಕಾಣಿಸಿದೊಡನೆಯೇ ಅವರು ಹೇಳಿದರು:

“ಓ....ಕೊಂಚ ತಡೆಯಿರಿ. ಅಲ್ಲಿ ಕುಳಿತುಕೊಳ್ಳಿ. ನಾನು ರೇಡಿಯೋ ಕೇಳುತ್ತಿದ್ದೇನೆ. ಇದು ಮುಗಿಸಿ ಬರುತ್ತೇನೆ.”

ಐದಾರು ನಿಮಿಷವಾದ ಮೇಲೆ ತಾವು ಕುಳಿತಿದ್ದ ಕಡೆಯಿಂದ ನಮ್ಮ ಹತ್ತಿರಕ್ಕೆ ಬಂದರು. ಬರುತ್ತಾ ಹೀಗೆಂದರು:

“ಈಗ ರೇಡಿಯೋದಲ್ಲಿ ಬರುತ್ತಿದ್ದದ್ದು ಸುಭಾಸಚಂದ್ರ ಬೋಸರ ಭಾಷಣ. ಆತ ಜರ್ಮನಿ ದೇಶದಲ್ಲಿ ಭಾಷಣ ಮಾಡಿದನಂತೆ. ಆ ಭಾಷಣದಲ್ಲಿ ಹದಿಮೂರು ವಿಷಯ (ಪಾಯಿಂಟು)ಗಳನ್ನು ಹೇಳಿದ್ದಾರೆ. ಒಂದನೆಯದು ಇದು...ಒಪ್ಪಬೇಕಾದದ್ದೇ. ಎರಡನೆಯ ಪಾಯಿಂಟು: ಇದು ಕೊಂಚ ಒಪ್ಪಬಹುದು. ಮೂರನೆಯ-ಇದು ಸರ್ವಥಾ ಒಪ್ಪಲಾಗುವುದಿಲ್ಲ. ನಾಲ್ಕನೆಯ ಪಾಯಿಂಟು-ಇದು ಉತ್ಪ್ರೇಕ್ಷೆ...”

ಈ ರೀತಿಯಾಗಿ ತಮ್ಮ ಮೆಮೊರ್ಯಾಂಡಮ್-ಕೈಚೀಟಿ ಪುಸ್ತಕದಲ್ಲಿ ಪೆನ್ಸಿಲಿನಲ್ಲಿ ಗುರುತು ಹಾಕಿಕೊಂಡಿದ್ದ ಹದಿಮೂರು ಪಾಯಿಂಟುಗಳನ್ನು ಪುನರಾವರ್ತನ ಮಾಡಿ ನಮಗೊಪ್ಪಿಸಿದರು.

ಇದು ಶಿವಸ್ವಾಮಿ ಅಯ್ಯರ್ ಅವರ ದಾರಿ. ಯಾವುದನ್ನು ಓದಲಿ, ಯಾವುದನ್ನು ಕೇಳಲಿ, ಅದರಲ್ಲಿ ಸಾರವಾದ ಸಂಗತಿ ಏನು, ಅದರ ಮುಖ್ಯವಾದ ಸಂಗತಿ ಏನು, ಅದರ ಮುಖ್ಯ ಪದ ಏನು-ಇದನ್ನು ಒಂದು ಕಾಗದದ ಮೇಲೆ ಗುರುತು ಮಾಡಿಡಬೇಕು. ಬಳಿಕ ಅದನ್ನು ಆಲೋಚನೆ ಪುನರಾಲೋಚನೆ ವಿಮರ್ಶೆ ಮಾಡಬೇಕು. ಅವರು ಹೀಗೆ ಮಾಡುತ್ತಿದ್ದದ್ದರಿಂದಲೇ ಅವರ ಮಾತಿನಲ್ಲಿ ಜೊಳ್ಳುಪೊಳ್ಳುಗಳೂ, ನಿರರ್ಥಕವಾದ ಅಲಂಕಾರಗಳೂ, ಕಿವಿಗೆ ಭರ್ತಿಮಾಡಿ ಬುದ್ಧಿಗೆ ಬಡಾಯಿ ಬುರುಡೆಯಂತಾಗುವ ವಾಗ್ವೈಖರಿಗಳೂ ಇರುತ್ತಿರಲಿಲ್ಲ. ಆಡಿದ ಮಾತು ಎರಡೇ ಆದರೂ ಅದು ತೂಕವಾದ, ಅರ್ಥಪುಷ್ಟಿಯುಳ್ಳ ಮಾತು.

# ಸಂಸ್ಕೃತ ಪಾಂಡಿತ್ಯ

ಶಿವಸ್ವಾಮಿ ಅಯ್ಯರ್ ಅವರು ಸಂಸ್ಕೃತ ಪಂಡಿತರು. ಅವರ ಮಿತ್ರರೂ ವಕೀಲಿ ವೃತ್ತಿಯಲ್ಲಿ ಅವರ ಪ್ರತಿಸ್ಪರ್ಧಿಯೂ ಆಗಿದ್ದವರು ವಿ. ಕೃಷ್ಣಸ್ವಾಮಿ ಅಯ್ಯರ್ ಅವರು. ವಿ. ಕೃಷ್ಣಸ್ವಾಮಿ ಅಯ್ಯರ್ ಅವರು ಮದರಾಸು ಮೈಲಾಪುರದಲ್ಲಿ ಒಂದು ಸಂಸ್ಕೃತ ಮಹಾಪಾಠಶಾಲೆಯನ್ನೂ, ವೆಂಕಟರಮಣ ಆಯುರ್ವೇದಿಕ್ ಡಿಸ್ಪೆನ್ಸರಿ ಎಂಬ ವೈದ್ಯಶಾಲೆಯನ್ನೂ ಸ್ಥಾಪಿಸಿದ ಮಹಾನುಭಾವರು. ಇವರೂ ಸಂಸ್ಕೃತದಲ್ಲಿ ಮಹಾ ಪಂಡಿತರು: 'ಆರ್ಯಚರಿತಮ್' ಎಂಬ ಸಂಸ್ಕೃತ ಗ್ರಂಥ ಸಂಕಲನವನ್ನು ಮಾಡಿದವರು. ಇವರು ತಮ್ಮ ಕಾಲೇಜಿಗೆ ಸಂಸ್ಕೃತ ಉಪಾಧ್ಯಾಯರನ್ನು ನಿಯಮಿಸಬೇಕಾಗಿ ಬಂದಾಗ, ಅಥವಾ ಬೇರೆ ಪಂಡಿತ ಪ್ರಸಕ್ತಿ ಬಂದಾಗ ನಿರ್ಣಯದ ಜವಾಬ್ದಾರಿಯನ್ನು ಶಿವಸ್ವಾಮಿ ಅಯ್ಯರ್‌ರವರಿಗೆ ಒಪ್ಪಿಸುತ್ತಿದ್ದರು. ಅಷ್ಟು ನಂಬಿಕೆ ಅವರಿಗೆ ಶಿವಸ್ವಾಮಿ ಅಯ್ಯರ್‌ರವರ ಪಾಂಡಿತ್ಯದಲ್ಲಿ ಮತ್ತು ನಿಷ್ಪಕ್ಷಪಾತದಲ್ಲಿ.

# ಪೂರ್ವಾಚಾರ ಶ್ರದ್ಧೆ

ಶಿವಸ್ವಾಮಿ ಅಯ್ಯರ್ ಅವರು ಗವರ್ನರ್ ಹುದ್ದೆಗೆ ಹತ್ತಿದಾಗಲೂ ತಮ್ಮ ಆಚಾರ ನಿಯಮಗಳನ್ನು ಎಳ್ಳಷ್ಟೂ ಸಡಿಲಿಸಿದವರಲ್ಲ. ಅವರು ವಿದೇಶ ಪ್ರಯಾಣ ಮಾಡಬೇಕೆಂದು ಸಲಹೆ ಬಂದಾಗ ತಮ್ಮ ತಾಯಿ ಇರುವವರೆಗೂ ಆಕೆಯ ಮನಸ್ಸಿಗೆ ಒಪ್ಪಲಾಗದ ಕೆಲಸವನ್ನು ತಾವು ಮಾಡತಕ್ಕವರಲ್ಲವೆಂದು ಪ್ರತಿಜ್ಞೆ ತೊಟ್ಟು ಪಾಲಿಸಿದರು. ತಾಯಿಯ ವರ್ಷಾಂತಕವಾದ ಮೇಲೆ ಯೂರೋಪ್ ಸಂಚಾರ ಮಾಡಿಕೊಂಡು ಬಂದರು. ಆದರೂ ಸ್ನಾನ, ಸಂಧ್ಯೆಗಳಲ್ಲಿ ಎಂದೂ ತಪ್ಪಿದವರಲ್ಲ. ವಯಸ್ಸಾಗಿ ಮೈಸ್ತೋಮ ಬೆಳೆದು ದೇಹಾಯಾಸವಾಗುತ್ತಿದ್ದಾಗಲೂ ಸ್ನಾನಮಾಡಿ ಬಂದು ಮಡಿಯುಟ್ಟು ಒಂದು ಗುಂಡುಮೇಜಿನ ಬಳಿ ಕುಳಿತುಕೊಳ್ಳುವರು. ವಿಭೂತಿ ಧರಿಸುವರು. ಸಂಧ್ಯಾವಂದನೆ ಮಾಡುವರು. ಪ್ರತಿದಿನವೂ ರಾತ್ರಿ ಸುಮಾರು ೯ ಘಂಟೆಗೆ ಭಾಗವತ ಪಾರಾಯಣ- ಭಾಗವತ ಅವರಿಗೆ ಪ್ರಿಯವಾದ ಗ್ರಂಥ.

ಭಾಗವತ ಕಷ್ಟವಾದ ಗ್ರಂಥ. ಆ ಕಷ್ಟಗಳನ್ನು ಸುಲಭಗೊಳಿಸುವುದು ಶಿವಸ್ವಾಮಿ ಅಯ್ಯರ್ ಅವರಿಗೆ ಸಂತೋಷ. ಇಲ್ಲಿ ಯಾತಕ್ಕೆ ಘುಞ್ ಪ್ರತ್ಯಯ ಬಂದಿದೆ; ಇಲ್ಲಿ ಯಾಕೆ ಕ್ವಿಪ್ ಬಂದಿದೆ; ಇಲ್ಲಿ ಯಾಕೆ ಔಣಾದಿಕ ಪ್ರಯೋಗ ಹಾಕಿದ್ದಾರೆ-ಇಂಥ ಜಟಿಲ ಪ್ರಶ್ನೆಗಳನ್ನು ಕೇಳುವುದುಂಟು. ಆದರೆ ಬರಿಯ ಪಾಂಡಿತ್ಯಕ್ಕೋಸ್ಕರ ಅವರು ಗ್ರಂಥ ಹಿಡಿದವರಲ್ಲ. ಅದರಲ್ಲಿ ಅವರಿಗೆ ಪರಮ ಭಕ್ತಿ.

ಒಂದು ಸಾರಿ ನನ್ನನ್ನು ಭಾಗವತದಲ್ಲಿಯ ರಾಮಕಥೆಯನ್ನು ಓದುವಂತೆ ಕೇಳಿದರು. ನಾನು ಕೊಂಚ ಅಧಿಕಪ್ರಸಂಗಿತನ ಮಾಡಿದೆ:

ನಾನು: “ಅದು ಯಾಕೆ? ನಿಮ್ಮನ್ನು ಅಳಿಸುವುದಕ್ಕೆ?”

ಶಿ: “ಅಯ್ಯೋ ಹುಚ್ಚ! ಕಥಾಸ್ವಾರಸ್ಯ ಹಾಗಿದೆಯಲ್ಲ! ಹಾಗೆ ರಸಪಾಕವಿದೆಯಲ್ಲ ಅದರಲ್ಲಿ!”

# ಯಥಾಕ್ರಮ

ಒಂದು ದಿನ ಸಂಜೆ ಶ್ರೀನಿವಾಸ ಶಾಸ್ತ್ರಿಗಳೂ ವೆಂಕಟರಾಮ ಶಾಸ್ತ್ರಿಗಳೂ ಅವರ ಮಿತ್ರಗೋಷ್ಠಿಗೆ ಸೇರಿದ ಎಂಟು ಹತ್ತು ಮಂದಿಯೂ ಲಾಲ್‌ಬಾಗಿಗೆ ಹೊರಟಿದ್ದೆವು-ಡಾ ॥ ಬಿ. ಕೆ. ನಾರಾಯಣರಾಯರ ಕಣ್ಣಾಸ್ಪತ್ರೆಯ ಮುಂದಿನ ರಸ್ತೆಯಿಂದ. ನಾವು ಕೊಂಚ ದೂರ ಮುಂದಕ್ಕೆ ಸಾಗುವ ವೇಳೆಗೆ ಡಾ ॥ ನಾರಾಯಣರಾಯರ ಮನೆಯ ಮುಂದುಗಡೆಯ ರಸ್ತೆಯಿಂದ ಶಿವಸ್ವಾಮಿ ಅಯ್ಯರ್ ಅವರು ಕಾರಿನಲ್ಲಿ ಕುಳಿತು ಲಾಲ್‌ಬಾಗಿಗೆ ಹೋಗುತ್ತಿದ್ದರು. ನಮ್ಮ ಗುಂಪನ್ನು ನೋಡಿ ಕಾರನ್ನು ನಿಲ್ಲಿಸಿ ಇಳಿದು ನಮ್ಮ ಕಡೆಗೆ ನಡೆದುಬರುತ್ತಿದ್ದರು. ಶಾಸ್ತ್ರಿಗಳು ಪಿಸುಮಾತಿನಲ್ಲಿ "ಅಯ್ಯಯ್ಯೋ! ಈ ಕಡೆ ಬರುತ್ತಾರಲ್ಲ!" ಎಂದರು. ಶಿವಸ್ವಾಮಿ ಅಯ್ಯರ್ ಬಂದೇಬಿಟ್ಟರು; ಅವರಿವರನ್ನು ಕುರಿತು ಕುಶಲ ಪ್ರಶ್ನೆ ಮಾಡಿ, ಆಮೇಲೆ ನನ್ನನ್ನು ದಿಟ್ಟಿಸಿ ನೋಡಿದರು-ತಲೆಯಿಂದ ಕಾಲಿನವರೆಗೂ. ನಾನು ಏನೋ ಬಂತು ನನಗೆ ಗ್ರಹಚಾರ ಎಂದುಕೊಂಡೆ. ಶಿವಸ್ವಾಮಿ ಅಯ್ಯರ್ ಮಾತನಾಡಲಿಲ್ಲ.

ಇನ್ನೆರಡು ಹೆಜ್ಜೆ ಮುಂದಿಟ್ಟೆವು. ಈ ಸಾರಿ ಅವರು ಮತ್ತೆ ನನ್ನನ್ನು ದಿಟ್ಟಿಸಿ ನೋಡಿದರು-ಕಾಲಿನಿಂದ ತಲೆಯವರೆಗೂ.

ಇನ್ನೂ ಮುಂದೆ ನಡೆದೆವು. ಮೂರನೆಯ ಸಾರಿ ಶಿವಸ್ವಾಮಿ ಅಯ್ಯರ್ ನನ್ನನ್ನು ನೋಡಿ ತಮಿಳಿನಲ್ಲಿ ಕೇಳಿದರು:

ಶಿ: "ಕಚ್ಛಂ ಪೋಡ್ರದಿಲ್ಲೆಯೊ?" (ಪಂಚೆ ಕಚ್ಚೆ ಹಾಕುವುದಿಲ್ಲವೊ?)

ನಾನು: "ಯಾವಾಗಲೂ ಹಾಕುತ್ತೇನೆ. ಈ ಹೊತ್ತು ಏನೋ ಮುಂಡು ಸುತ್ತಿಕೊಂಡು ಬಂದುಬಿಟ್ಟೆ."

ನನ್ನ ಅದೃಷ್ಟ ಚೆನ್ನಾಗಿತ್ತು. ಶಿವಸ್ವಾಮಿ ಅಯ್ಯರ್ ಅವರು ಆ ಸಬೂಬನ್ನು ಒಪ್ಪಿಕೊಂಡರು.

ಆದರೆ ಆಗ ಶ್ರೀನಿವಾಸಶಾಸ್ತ್ರಿಗಳು ನನ್ನ ಕಡೆ ತಿರುಗಿ, "ಒಳ್ಳೆಯ ವೇಳೆ ಆಯಿತು. 'ಮುಂಡು ಸುತ್ತುವುದರಲ್ಲಿ ಏನು ತಪ್ಪು?' ಎಂದು ತಕರಾರೆತ್ತಲಿಲ್ಲವಲ್ಲ ನೀನು!"

ನಾನು ಮೇಲೆ ಉದಾಹರಿಸಿದ ವೆಂಕಟರಾಮ ಶಾಸ್ತ್ರಿಗಳ ಪ್ರಸಂಗವನ್ನು ಹೇಳಿ, “ನಾನೇನು ಅಷ್ಟು ದುಷ್ಟನೆ?” ಎಂದೆ.

ಶಿವಸ್ವಾಮಿ ಅಯ್ಯರ್ ಅವರಿಗೆ ಎಲ್ಲವೂ ಯಥಾಕ್ರಮವಾಗಿರಬೇಕು, ನಿಯಮವೆಂದರೆ ಅವರದು ನಿಯಮ.

# ಷರತ್ತುಗಳು

ಒಂದು ದಿನ ಶಿವಸ್ವಾಮಿ ಅಯ್ಯರ್ ಅವರು “ನೀನು ಓದಬೇಕಾದದ್ದು ಒಂದು ಗ್ರಂಥವಿದೆ: ಮಿಸ್ಟರ್ ಅಂಡ್ ಮಿಸೆಸ್ ಸಿಡ್ನಿ ವೆಬ್, ಸಮಾಜ ವಿಜ್ಞಾನಿಗಳು ಬರೆದ ‘ದಿ ನ್ಯೂ ಸಿವಿಲೈಸೇಷನ್’ ಎಂಬ ಎರಡು ಸಂಪುಟಗಳ ಗ್ರಂಥ. ಅದನ್ನು ಬೇಕಾದರೆ ನಿನಗೆ ಎರವಲು ಕೊಟ್ಟೇನು. ಅದಕ್ಕೆ ನಾಲ್ಕು ಷರತ್ತು: (೧) ನೀನು ಪುಸ್ತಕವನ್ನು ಬೇರೆ ಯಾರಿಗೂ ಎರವಲು ಕೊಡಕೂಡದು; ನನಗೇ ವಾಪಸ್ ಕೊಡಬೇಕು. (೨) ಪುಸ್ತಕವನ್ನು ತುಂಬ ಅಗಲವಾಗಿ ತೆರೆಯಕೂಡದು. (೩) ತೆರೆದ ಮೇಲೆ ಮುಚ್ಚುವುದಕ್ಕೆ ಮುಂಚೆ ಹಾಳೆಗಳ ಮೇಲೆ ಕುಳಿತಿರುವ ಧೂಳನ್ನು ಬಟ್ಟೆಯಿಂದ ಒರಸಬೇಕು. (೪) ಪುಸ್ತಕದ ಮಾರ್ಜಿನುಗಳಲ್ಲಾಗಲಿ ಬೇರೆ ಭಾಗದಲ್ಲಾಗಲಿ ಗುರುತುಗಳನ್ನು ಮಾಡಕೂಡದು.”

ಈ ನಿಯಮಗಳು ಅವರು ಸ್ವಂತವಾಗಿ ಅನುಸರಿಸುತ್ತಿದ್ದ ನಿಯಮಗಳು. ಅವರು ಗ್ರಂಥ ವ್ಯಾಸಂಗ ಮಾಡುತ್ತಿದ್ದಾಗ ಯಾರಾದರೂ ಮಾತಿಗೆ ಬಂದರೆಂದರೆ ಮೊದಲು ತಮ್ಮ ಅಂಗವಸ್ತ್ರದಿಂದ ಪುಸ್ತಕದ ಹಾಳೆಗಳನ್ನು ನಯವಾಗಿ ಮೃದುವಾಗಿ ಒರಸಿ ಒಂದು ಗುರುತುಕಾಗದವಿಟ್ಟು ಪುಸ್ತಕವನ್ನು ಜಾಗರೂಕತೆಯಿಂದ ಮಡಿಸುವರು, ಮತ್ತು ಅವರು ಗ್ರಂಥವನ್ನಾಗಲಿ, ಪತ್ರಿಕೆಯನ್ನಾಗಲಿ ಓದುವಾಗ ಒಂದು ಕಾಗದವನ್ನೂ ಪೆನ್ಸಿಲನ್ನೂ ಕೈಯಲ್ಲಿ ಹಿಡಿದಿರುವರು. ಗುರುತು ಮಾಡಬೇಕೆನಿಸಿದ್ದನ್ನು ಈ ಚೀಟಿಯ ಮೇಲೆ ಬರೆಯುವರು, ಪುಸ್ತಕವನ್ನು ಕೆಡಿಸರು.

***

ಶಿವಸ್ವಾಮಿ ಅಯ್ಯರ್ ಅವರು ನೀತಿಯ ವಿಷಯದಲ್ಲಿ ತುಂಬಾ ಕಟ್ಟುನಿಟ್ಟು. ಯಾವ ವ್ಯಕ್ತಿಯಾದರೂ ಅಶುಚಿ, ಕೊಳಕು ಎಂದು ತಿಳಿದರೆ ಆ ವ್ಯಕ್ತಿಯನ್ನು ಹತ್ತಿರ ಬರಗೊಡಿಸರು.

ಶಿವಸ್ವಾಮಿ ಅಯ್ಯರ್ ಅವರಿಗೆ ಜಿಪುಣಿ ಎಂದು ಹೆಸರು ಬಂದಿತ್ತು. ಆದರೆ ಅದು ಅವರ ಅಂತರಂಗವನ್ನು ಕಾಣದವರ ಮಾತು. ನಾನೂ ಮೊದಮೊದಲು ಅವರು ಜಿಪುಣರೆಂದೇ ಅಂದುಕೊಂಡಿದ್ದೆ. ಕಾರಣವೇನೆಂದರೆ ಅವರ ಹೆಸರು ಯಾವ ಧರ್ಮದ ಚಂದಾ ಪಟ್ಟಿಗಳಲ್ಲಿಯೂ ಕಾಣಬರುತ್ತಿರಲಿಲ್ಲ. ವಾಸ್ತವವನ್ನು ನೋಡಿದ ಮೇಲೆ ನನ್ನ ಅಭಿಪ್ರಾಯ ಬದಲಾಯಿಸಿತು.

# ಪರಿವಾರ

ಅವರು ಕರಣಿಕರ ಪಾಠಶಾಲೆಯ ಎದುರಿಗಿರುವ ಬಂಗಲೆಯಲ್ಲಿ ಒಮ್ಮೆ ಬಿಡಾರ ಮಾಡಿದ್ದರು. ಗೇಟಿನಿಂದ ಹೋಗುತ್ತಲೇ ಮೊದಲು ನನಗೆ ಕಣ್ಣಿಗೆ ಕಾಣಿಸಿದ್ದು: ಒಂದು ಕೋಣೆಯಲ್ಲಿ ಒಬ್ಬ ಉಪಾಧ್ಯಾಯರು ಒಬ್ಬ ಚಿಕ್ಕ ಹುಡುಗಿಗೆ ಸಂಸ್ಕೃತ ಪಾಠ ಹೇಳುತ್ತಿದ್ದರು. ಇದನ್ನು ನಾನು ಶ್ರೀನಿವಾಸಶಾಸ್ತ್ರಿಗಳಿಗೆ ಹೇಳಿ "ಆ ಮಗು ಯಾರಿರಬಹುದು? ಶಿವಸ್ವಾಮಿ ಅಯ್ಯರ್ ಅವರಿಗೆ ಮಕ್ಕಳಿಲ್ಲವಲ್ಲ?" ಎಂದೆ.

ಶಾಸ್ತ್ರಿಗಳು: "ನಿನಗೆ ತಿಳಿಯದೆ? ಆ ಹುಡುಗಿ ಗೋಪಾಲನ್ ಅವರ ಮಗಳಿರಬಹುದು. ಗೋಪಾಲಯ್ಯರ್ ಅವರ ಮನೆವಾರ್ತೆಮನುಷ್ಯ, ಶಿವಸ್ವಾಮಿ ಅಯ್ಯರ್ ಎಲ್ಲಿ ಪ್ರಯಾಣ ಮಾಡಿದರೂ ಅಲ್ಲಿ ಕೆಲವು ದಿವಸ ತಂಗುವ ಹಾಗಿದ್ದರೆ ಜೊತೆಯಲ್ಲಿ ಗೋಪಾಲಯ್ಯರ್, ಆತನ ಸಂಸಾರ: ಪಾಠಹೇಳುವ ಮೇಷ್ಟರು ದೊರೆಸ್ವಾಮಿಶಾಸ್ತ್ರಿಗಳು, ಆತನ ಸಂಸಾರ: ಅವರ ಕಾರಿನ ಡ್ರೈವರು, ಆತನ ಸಂಸಾರ-ಇಷ್ಟು ಮಂದಿಯೂ ತಮ್ಮ ಸಂಸಾರದ ಭಾಗವೋ ಎಂಬಂತೆ ಬರಬೇಕು. ಅವರೆಲ್ಲರ ಅಶನ ವಸನಗಳನ್ನೂ ಶಿವಸ್ವಾಮಿ ಅಯ್ಯರ್ ಅವರೇ ನೋಡಿಕೊಳ್ಳುತ್ತಾರೆ. ಇದು ಅವರ ಪದ್ಧತಿ. ತಮ್ಮ ಜೊತೆಯಲ್ಲಿರುವವರು ಯಾವುದಕ್ಕೂ ಕೊರತೆ ಪಡಬಾರದು. ಅವರೆಲ್ಲ ಸಂತೋಷವಾಗಿದ್ದರೆ ಇವರಿಗೆ ಸಂತೋಷ."

ಒಂದೆರಡು ವರ್ಷ ಕಳೆದ ಮೇಲೆ ಶಿವಸ್ವಾಮಿ ಅಯ್ಯರ್ ಅವರು ನಾನು ಅವರಲ್ಲಿಗೆ ಹೋಗಿದ್ದಾಗ ಆ ಹೆಣ್ಣು ಮಗುವನ್ನು ಕರೆದು ತೋರಿಸಿ ಹೆಮ್ಮೆಯಿಂದ ಹೇಳಿದರು:

"ಈ ಹುಡುಗಿ ಪ್ಯಾಸ್ ಮಾಡಿದ್ದಾಳೆ. ಕನ್ನಡ ಕಲಿತಿದ್ದಾಳೆ. ಸಂಸ್ಕೃತ ಕಲಿಯುತ್ತಿದ್ದಾಳೆ. ಇವಳಿಗೆ ಒಳ್ಳೆಯ ವರನನ್ನು ಹುಡುಕುತ್ತಿದ್ದೇನೆ. ನಿನಗೆ ಯಾರಾದರೂ ತೋರಿದರೆ ಹೇಳು. ನಾನು ಹುಡುಗಿಗೆ ಒಂದಿಷ್ಟು ಚಿನ್ನ ಬೆಳ್ಳಿ ಮಾಡಿಸಿದ್ದೇನೆ. ಅವಳ ತಂದೆ ಸಾಲಂಕೃತವಾಗಿ ಕನ್ಯಾದಾನ ಮಾಡುತ್ತಾನೆ."

ಹೆಮ್ಮೆಯ ಜೊತೆಗೆ ಕಣ್ಣು ಸ್ವಲ್ಪ ಒದ್ದೆಯಾದಂತೆಯೂ ಕಾಣಿಸಿತು.

# ಅತಿಥಿ ಸತ್ಕಾರ

ಶಿವಸ್ವಾಮಿ ಅಯ್ಯರ್ ಯಾರನ್ನಾದರೂ ತಮ್ಮ ಮನೆಗೆ ಅತಿಥಿಯಾಗಿರಬೇಕೆಂದು ಕರೆದರೆ, ಆ ಅತಿಥಿ ರೈಲಿನಿಂದ ಇಳಿದ ಘಳಿಗೆಯಿಂದ ಮತ್ತೆ ರೈಲು ಹತ್ತುವವರೆಗೆ ಆತನ ಎಲ್ಲ ಉಪಚಾರ ವ್ಯವಸ್ಥೆಗಳೂ ಶಿವಸ್ವಾಮಿ ಅಯ್ಯರ್ ಅವರ ಜವಾಬ್ದಾರಿ. ಅತಿಥಿ ಕೂಡುವ ಕೋಣೆಯಲ್ಲಿ ಆತನ ಉಪಯೋಗಕ್ಕಾಗಿ ಸ್ಟಾಂಪ್ ಅಂಟಿಸಿದ ಕವರುಗಳೂ ಕಾರ್ಡುಗಳೂ ಇರುತ್ತಿದ್ದುವು. ಟವಲು, ಸೋಪು ಎಲ್ಲವೂ ಸಿದ್ಧವಾಗಿರುತ್ತಿದ್ದವು. ಆ ಅತಿಥಿ ಯಾವುದಕ್ಕೂ ಒದ್ದಾಡಬಾರದು. ಒಂದು ಕಾರು ಆತನ ಉಪಯೋಗಕ್ಕಾಗಿ ಇರುತ್ತಿತ್ತು. ಅದರಲ್ಲಿ ಆತ ಕುಳಿತ ಕೂಡಲೆ ಶಿವಸ್ವಾಮಿ ಅಯ್ಯರ್ ಅವರ ಗುಮಾಸ್ತೆ ಡ್ರೈವರಿನ ಪಕ್ಕದಲ್ಲಿ ಕೂಡುವನು. ಅತಿಥಿ ಎಲ್ಲೆಲ್ಲಿ ಹೋಗಬೇಕೆಂದರೆ ಅಲ್ಲಿಗೆ ಹೋಗುವುದು ಮಾತ್ರವಲ್ಲದೆ, ಅತಿಥಿಯು ಏನನ್ನಾದರೂ ಕೊಂಡು ಕೊಂಡರೆ ಗುಮಾಸ್ತನು ಅದನ್ನು ಗುರುತು ಮಾಡಿಟ್ಟುಕೊಂಡು ಮನೆಗೆ ಹೋದ ಬಳಿಕ ಯಜಮಾನರಿಗೆ ತಿಳಿಸಬೇಕು. ಆ ಬಿಲ್ಲುಗಳನ್ನು ಶಿವಸ್ವಾಮಿ ಅಯ್ಯರ್ ಕೊಡುತ್ತಿದ್ದರು.

ಅತಿಥಿಯು ವಾಪಸ್ ಹೋಗುವಾಗ ರೈಲು ಟಿಕೇಟನ್ನು ಗುಮಾಸ್ತನು ಕೊಂಡುಕೊಂಡು ಯಾರೂ ಕಾಣದಂತೆ ಅದನ್ನು ಅತಿಥಿಯು ಜೇಬಿನಲ್ಲಿಡುವನು. ತಮ್ಮ ಔದಾರ್ಯವು ಯಾರ ಗಮನಕ್ಕೂ ಬರಬಾರದೆಂಬುದು ಶಿವಸ್ವಾಮಿ ಅಯ್ಯರ್ ಅವರ ತಾತ್ಪರ್ಯ.

# ‘ಧರ್ಮಧ್ವಜರು’

ಒಂದು ಸಾರಿ ಬೆಂಗಳೂರಿನ ಲಯನ್ಸ್ ಇನ್‌ಸ್ಟಿಟ್ಯೂಟಿನಲ್ಲಿ ಶಿವಸ್ವಾಮಿ ಅಯ್ಯರ್ ಉಪನ್ಯಾಸ ಮಾಡುತ್ತಾ ಕೆಲ ಮಂದಿಯನ್ನು ‘ಧರ್ಮಧ್ವಜ’ ರೆಂದು ಹೇಳಿ ಕೊಂಚ ಉಪಹಾಸ ಮಾಡಿದ್ದು ನನಗೆ ಜ್ಞಾಪಕದಲ್ಲಿದೆ. “ಧರ್ಮ ಮಾಡತಕ್ಕವನು ಇತರರು ಅದನ್ನು ನೋಡಬೇಕೆನ್ನುವಂತೆ ಪ್ರಕಟವಾಗಿ ಧರ್ಮ ಮಾಡಿದರೆ ಅಂಥವನನ್ನು ಮನುಗಳು ಧರ್ಮಧ್ವಜನೆಂದು ಕರೆದಿದ್ದಾರೆ” ಎಂದು ಹೇಳಿ ಆ ವಾಕ್ಯವನ್ನು ಉದಾಹರಿಸಿದರು.

ಶಿವಸ್ವಾಮಿ ಅಯ್ಯರ್ ಧರ್ಮಿಷ್ಠರೆಂಬುದಕ್ಕೆ ಇನ್ನೊಂದು ನಿದರ್ಶನ ಕೊಡುತ್ತೇನೆ. ಅವರ ಜನ್ಮಸ್ಥಳವಾದ ತಿರುಕ್ಕಾಟ್ಟುಪಲ್ಲಿ ಎಂಬಲ್ಲಿ ಅವರು ಒಂದು ಹೈಸ್ಕೂಲನ್ನು ಸ್ಥಾಪನೆ ಮಾಡಿಸಿದ್ದಾರೆ. ಆ ಹೈಸ್ಕೂಲಿಗೆ ಸಂಬಂಧಪಟ್ಟಂತೆ ಒಂದು ವಿದ್ಯಾರ್ಥಿನಿಲಯವನ್ನಿರಿಸಿದ್ದಾರೆ. ಅಲ್ಲಿಯ ಮೇಷ್ಟರುಗಳ ಮತ್ತು ವಿದ್ಯಾರ್ಥಿಗಳ ಅಶನ ವಸತಿಗಳಿಗಾಗಿಯೂ ದೇಹಾರೋಗ್ಯಕ್ಕಾಗಿಯೂ ಎಷ್ಟು ಮುಂದಾಲೋಚನೆಯಿಂದ ಶಿವಸ್ವಾಮಿ ಅಯ್ಯರ್ ವ್ಯವಸ್ಥೆ ಮಾಡಿದ್ದಾರೆಂಬುದನ್ನು ಅಲ್ಲಿ ಹೋಗಿ ನೋಡಿ ತಿಳಿಯಬೇಕು. ಭೋಜನ ನಿವಾಸಗಳ ಅನುಕೂಲದ ಜೊತೆಗೆ ಮೇಷ್ಟರುಗಳ ಮಕ್ಕಳ ವಿದ್ಯಾಭ್ಯಾಸಕ್ಕೂ, ಮೇಷ್ಟರುಗಳು ವಿಶ್ರಾಂತರಾದ ಬಳಿಕ ಯತ್ಕಿಂಚಿತ್ತು ಆದಾಯಕ್ಕಾಗಿ ಇನ್ಶೂರೆನ್ಸ್ ಏರ್ಪಾಟಿನ ಬಗ್ಗೆಯೂ ಶಿವಸ್ವಾಮಿ ಅಯ್ಯರ್ ಮುಂದಾಲೋಚನೆ ವಹಿಸಿ ನಡಸಿದ್ದಾರೆ.

***

ಮದರಾಸಿನ ಮೈಲಾಪುರದಲ್ಲಿ ಅವರು ವಾಸವಾಗಿರಲು ಬಹು ಸೊಗಸಾದ ಮನೆಯನ್ನು ಕಟ್ಟಿಕೊಂಡಿದ್ದರು. ವಿಸ್ತಾರವಾದ ಆವರಣ. ಅಂದವಾದ ಕಟ್ಟಡ. ಸುತ್ತಲೂ ಹುಲ್ಲುಗಾವಲು. ಇದೆಲ್ಲವನ್ನೂ ಅವರು ತಮ್ಮ ಧರ್ಮಪತ್ನಿಯ ಹೆಸರಿನಲ್ಲಿ ಸ್ಥಾಪಿಸಿರುವ ಕಲ್ಯಾಣಿ ಸ್ಕೂಲಿಗೆ ದಾನವಾಗಿ ಕೊಟ್ಟರು. ಆ ಮನೆ ಎರಡು ಲಕ್ಷ ರೂಪಾಯಿಗೆ ವಿಕ್ರಯವಾಯಿತು. ಅದನ್ನು ಕೊಂಡುಕೊಂಡಾತ ಧನಾಢ್ಯ. ಆತ ಶಿವಸ್ವಾಮಿ ಅಯ್ಯರ್ ಅವರ ಬಳಿ ಬಂದು,

“ಸ್ವಾಮಿ, ಮನೆಯ ಕ್ರಯಪತ್ರವೇನೋ ಆಯಿತು. ಆದರೆ ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ: ನೀವು ಈ ಮನೆಯನ್ನು ಬಿಡಬೇಕಾಗಿಲ್ಲ. ನಿಮಗೆ ಇಷ್ಟವಿರುವಷ್ಟು ದಿವಸ ಇದು ನಿಮ್ಮ ಮನೆಯೇ ಎಂದು ತಿಳಿದು ಇಲ್ಲಿಯೇ ವಾಸ ಮಾಡಬೇಕು. ನನಗೆ

ಅದರಿಂದ ಕಿಂಚಿತ್ತೂ ತೊಂದರೆಯಿಲ್ಲ. ಈ ಮನೆ ನಿಮಗೆ ಅಭ್ಯಾಸವಾಗಿದೆ. ಬೇರೆ ಕಡೆ ನೀವು ಹೋಗಿ ಅವಸ್ಥೆ ಪಡುವುದು ನನಗೆ ಸಂತೋಷವಾಗದು"

–ಎಂದು ಬಹುವಿಧವಾಗಿ ಅಂಗಲಾಚಿದ. ಶಿವಸ್ವಾಮಿ ಅಯ್ಯರ್ ಒಪ್ಪಿದರೆ? ಪತ್ರ ರಿಜಿಸ್ಟರಾಗುವ ವೇಳೆಗೆ ಬೇರೆ ಮನೆ ಗೊತ್ತು ಮಾಡಿಕೊಂಡಿದ್ದರು. ಸಬ್ ರಿಜಿಸ್ಟ್ರಾರ್ ಆಫೀಸಿನಿಂದ ನೇರವಾಗಿ ಆ ಬಾಡಿಗೆ ಮನೆಗೆ ಹೋದರು.

# ಲೆಕ್ಕಾಚಾರ

ಶಿವಸ್ವಾಮಿ ಅಯ್ಯರ್ ಅವರು ಉದಾರಿಗಳು. ಔದಾರ್ಯದ ಜೊತೆಗೆ ಲೆಕ್ಕಾಚಾರ ಸೇರಿತ್ತು. ಈ ಲೆಕ್ಕಾಚಾರದ ಅವಾಂತರದಲ್ಲಿ ಅವರ ಔದಾರ್ಯಕ್ಕೆ ಸೇರಬೇಕಾದ ಕೀರ್ತಿ ಮುಳುಗಿಹೋಯಿತು!

ಒಂದು ಉದಾಹರಣೆ ಹೇಳುತ್ತೇನೆ.

ಶಿವಸ್ವಾಮಿ ಅಯ್ಯರ್ ಮಿತಸಂತಾನವಾದಿಗಳು. ಬೆಂಗಳೂರಿನಲ್ಲಿ ನೇಪಾಳದ ರಾಣಾ ಸಾಹೇಬರ ಮನೆಯಲ್ಲಿ ಒಂದು ಉಪನ್ಯಾಸ, ಮಿತಸಂತಾನವನ್ನು ಕುರಿತು. ರಾಣಾ ಸಾಹೇಬರು ಮಕ್ಕಳಿಲ್ಲದವರು. ಉಪನ್ಯಾಸಕರು ಶಿವಸ್ವಾಮಿ ಅಯ್ಯರ್. ಅಧ್ಯಕ್ಷರು ಸರ್ ಎಂ. ವಿಶ್ವೇಶ್ವರಯ್ಯನವರು. ಶ್ರೋತರಲ್ಲಿ ಹದಿನಾಲ್ಕು ಹದಿನೇಳು ಮಕ್ಕಳುಳ್ಳ ಒಬ್ಬ ಮಹನೀಯರು, ಹದಿನೇಳು ಹದಿನೆಂಟು ಮಕ್ಕಳುಳ್ಳ ಇನ್ನೊಬ್ಬರು! ಇದು ನಮಗೆ ಪದೇ ಪದೇ ಹಾಸ್ಯದ ವಿಷಯ.

ಅದು ಹಾಗಿರಲಿ. ಮದರಾಸಿನಲ್ಲಿ ಶಿವಸ್ವಾಮಿ ಅಯ್ಯರ್ ಅವರು ಸಂತಾನ ಪರಿಮಿತಿಯ ಅವಶ್ಯಕತೆಯನ್ನು ಕುರಿತು ಉಪನ್ಯಾಸಕೊಟ್ಟರು ಮತ್ತು ಆ ಉಪನ್ಯಾಸವನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರು. ಅದಾದ ಎರಡು ಮೂರು ದಿನಗಳಾದ ಮೇಲೆ ಶಿವಸ್ವಾಮಿ ಅಯ್ಯರ್ ಅವರ ಮಿತ್ರರೊಬ್ಬರು ಅವರಲ್ಲಿಗೆ ಹೋಗಿದ್ದರು. ಮಾತುಕಥೆಯ ಧೋರಣೆಯಲ್ಲಿ ಆ ಉಪನ್ಯಾಸದ ಪ್ರಸ್ತಾವ ಬಂತು. ಶಿವಸ್ವಾಮಿ ಅಯ್ಯರ್ ಮೇಜಿನ ಮೇಲಿದ್ದ ಆ ಲಘು ಪುಸ್ತಕದ ಪ್ರತಿಯನ್ನು ಕೈಗೆ ತೆಗೆದುಕೊಂಡು ಮಾತನಾಡುತ್ತಾ

“ನಿನಗದು ಬೇಕಾದರೆ ಇಲ್ಲಿದೆ. ನಾಲ್ಕಾಣೆ ಇಲ್ಲಿಟ್ಟರೆ ಕೊಡುತ್ತೇನೆ. ಈ ಉತ್ಪತ್ತಿಯನ್ನು ಮಿತಸಂತಾನ ಸಂಘಕ್ಕೆ ಕೊಡಬೇಕಾಗಿದೆ”

–ಎಂದು ಖಡಾ ಖಂಡಿತವಾಗಿ ಹೇಳಿದರು.

ಜಿಪುಣಿ ಎಂಬ ಹೆಸರು ಬರುವುದಕ್ಕೆ ಕಾರಣ ಇಂಥ ಪ್ರಸಂಗಗಳು.

ಶಿವಸ್ವಾಮಿ ಅಯ್ಯರ್ ಪರಸ್ಥಳಕ್ಕೆ ಹೋದಾಗ ಒಂದು ಬಂಗಲೆಯಲ್ಲಿ ಒಂದೆರಡು ದಿನ ತಂಗಿರುತ್ತಿದ್ದರು. ಅಲ್ಲಿಂದ ಅವರು ವಾಪಸು ಹೊರಡುವ ಹೊತ್ತಿಗೆ ಅವರ ಕಾರು ಸಿದ್ಧವಾಗಿ ಅವರ ಸಾಮಾನುಗಳನ್ನೆಲ್ಲ ಭರ್ತಿಮಾಡಿಕೊಂಡು ಕಾದಿರುತ್ತಿತ್ತು. ಶಿವಸ್ವಾಮಿ ಅಯ್ಯರ್ ಬಂಗಲೆಯಿಂದ ಹೊರಕ್ಕೆ ಬಂದು ಅಲ್ಲಿಯ ಆಳುಗಳ ಮುಖ್ಯಸ್ಥನು ಯಾರು ಎಂದು ಕೇಳುವರು. ಮುಖ್ಯಸ್ಥನು ಬಂದ ಕೂಡಲೆ,

“ಎಷ್ಟು ಮಂದಿ ಆಳುಗಳಿದ್ದಾರೆ? ಹೆಣ್ಣೆಷ್ಟು? ಗಂಡೆಷ್ಟು?” ಎಂದು ವಿಚಾರಿಸುವರು. ತಲೆಗೆ ಎಂಟಾಣೆಯಂತೆ ಲೆಕ್ಕಮಾಡಿ, ಮುಖ್ಯಸ್ಥನಿಗೆ ಒಂದು ರೂಪಾಯಿ–ಈ ಒಟ್ಟು ಮೊಬಲಗನ್ನು ತಮ್ಮ ಜೇಬಿನಿಂದ ತೆಗೆದು ಅವನ ಕೈಯಲ್ಲಿಟ್ಟು ತತ್‌ಕ್ಷಣ ಕಾರಿನಲ್ಲಿ ಕುಳಿತು ಹೊರಟುಬಿಡುವರು. “ಇಷ್ಟೇನೆ?” ಎಂದು ಆಳುಗಳಲ್ಲಿ ಕೆಲವರು ಅಂದುಕೊಳ್ಳುವರು.

ಹೀಗೆ ಅವರು ಜಿಪುಣಿ.

ಒಂದು ಸಾರಿ ಆಳುಗಳು ಇನ್ನೂ ಹೆಚ್ಚು ನಿರೀಕ್ಷಣೆ ಇಟ್ಟುಕೊಂಡಿದ್ದರೆಂದು ಯಾರೋ ಶಿವಸ್ವಾಮಿ ಅಯ್ಯರ್ ಅವರಿಗೆ ಹೇಳಿದಾಗ ಅವರು “ಸರಕಾರ ಸಂಬಳ ಕೊಡುತ್ತದಲ್ಲ? ಇದು ಮೇಲ್ಸಂಪಾದನೆ, ಇದು ಸಂಬಳಕ್ಕಿಂತ ಹೆಚ್ಚಾಗಬಾರದು” ಎಂದರು.

ಹೀಗೆ ಶಿವಸ್ವಾಮಿ ಅಯ್ಯರ್ ಎಂದರೆ ಎಲ್ಲ ಲೆಕ್ಕಾಚಾರ, ಎಲ್ಲ ತೂಕ ಮತ್ತು ಎಲ್ಲ ನಿಷ್ಕರ್ಷೆ.

# ಶಾಸ್ತ್ರಿಗಳ ಪೇಚು

ಒಂದು ಸಾರಿ ವಿದ್ಯಾರ್ಥಿಯೆಂದು ಹೇಳಿಕೊಂಡಾತನೊಬ್ಬ ಶ್ರೀನಿವಾಸ ಶಾಸ್ತ್ರಿಗಳಲ್ಲಿ ಹೋಗಿ ದ್ರವ್ಯಸಹಾಯ ಬೇಡಿದ. ಅವರು ತಮ್ಮ ಅಶಕ್ತಿಯನ್ನು ಹೇಳಿದರು.

ಆತ: "ನೀವು ಕೊಡಬೇಕೆಂದು ನಾನು ನಿರೀಕ್ಷಿಸಿರಲಿಲ್ಲ. ಕೊಡಿಸುವಿರೆಂದು ಆಶೆಯಿಟ್ಟುಕೊಂಡಿದ್ದೆ."

ಶಾ: "ನಾನು ಯಾರಿಂದ ಕೊಡಿಸುವುದು?"

ಆತ: "ಶಿವಸ್ವಾಮಿ ಅಯ್ಯರ್ ಅವರಿಗೆ ತಮ್ಮ ಮಾತಿನಲ್ಲಿ ತುಂಬ ವಿಶ್ವಾಸ. ಒಂದು ಚೀಟಿ ಬರೆದುಕೊಟ್ಟರೆ ಅವರಲ್ಲಿಗೆ ಹೋಗುತ್ತೇನೆ."

ಶಾಸ್ತ್ರಿಗಳು ಇದಕ್ಕೆ ಒಪ್ಪಿ ಪತ್ರ ಬರೆದುಕೊಟ್ಟರು, ಹೀಗೆ: "ಈತ ವಿದ್ಯಾರ್ಥಿ. ಹಣವಿಲ್ಲದ ಕಾರಣದಿಂದ ವಿದ್ಯೆಗೆ ಅಡಚಣೆಯಾಗಿದೆ. ದಯವಿಟ್ಟು ಸಹಾಯ ಮಾಡಬೇಕು."

ಆತ ಆ ಚೀಟಿಯನ್ನು ತೆಗೆದುಕೊಂಡು ಶಿವಸ್ವಾಮಿ ಅಯ್ಯರ್ ಅವರಲ್ಲಿಗೆ ಹೋದ. ಅವರು ಆತನ ಚರಿತ್ರೆಯನ್ನು ವಿಚಾರಿಸಿಕೊಂಡರು. ಬಳಿಕ ಹೀಗೆ ಹೇಳಿದರು:

ಶಿ: "ನೀವು ಇಪ್ಪತ್ತೈದು ರೂಪಾಯಿ ಸಾಲ ಕೇಳುತ್ತೀರಿ. ನಾನು ನಿಮಗೆ ಆ ಹಣ ಕೊಡುತ್ತೇನೆ. ಆದರೆ ನೀವು ಬಡವರೆಂದು ಹೇಳುತ್ತೀರಿ. ಆದದ್ದರಿಂದ ಅರ್ಧ ಹಣ ಹನ್ನೆರಡೂವರೆ ರೂಪಾಯಿಯನ್ನು ನಿಮಗೆ ದಾನವೆಂದೂ, ಉಳಿದದ್ದನ್ನು ಸಾಲವೆಂದೂ ಭಾವಿಸಬಹುದು."

ಆತ: "ನಾನು ತಮ್ಮನ್ನು ಎರಡು ತಿಂಗಳು ಬಿಟ್ಟು ನೋಡುತ್ತೇನೆ. ಪರೀಕ್ಷೆ ಮುಗಿದ ಮೇಲೆ ಊರಿಗೆ ಹೋಗಿ ಹಣ ಸರಿಮಾಡಿಕೊಂಡು ಬರುತ್ತೇನೆ."

ಶಿ: "ಆಗಬಹುದು."

ಎರಡು ತಿಂಗಳು ಕಳೆಯಿತು. ಜನವರಿ ಬಂತು. ಆಸಾಮಿಯ ಸುಳಿವಿಲ್ಲ. ಫೆಬ್ರವರಿ ಬಂತು. ಆಸಾಮಿ ಪತ್ತೆಯಿಲ್ಲ. ಮಾರ್ಚಿ ತಿಂಗಳೂ ಕಳೆಯಿತು. ಪತ್ತೆಯಿಲ್ಲ. ಏಪ್ರಿಲ್ ಬಂತು. ಶಿವಸ್ವಾಮಿ ಅಯ್ಯರ್ ಅವರು ಶ್ರೀನಿವಾಸ ಶಾಸ್ತ್ರಿಗಳ ಮನೆಗೆ ಬಂದು "ಆತನ ಅಡ್ರೆಸ್

ಇದ್ದರೆ ಕೊಡಿರಿ" ಎಂದರು. ಶಾಸ್ತ್ರಿಗಳಲ್ಲಿ ಆತನ ಅಡ್ರೆಸ್ ಇರಲಿಲ್ಲ. ಶಿವಸ್ವಾಮಿ ಅಯ್ಯರ್ ಶಾಸ್ತ್ರಿಗಳನ್ನು ತರಾಟೆಗೆ ತೆಗೆದುಕೊಂಡರು.

"ಏನಯ್ಯಾ-ಶಿಫಾರಸು ಮಾಡಿದ ದೊಡ್ಡ ಮನುಷ್ಯರು ನೀವು ಅವನ ಯೋಗ್ಯತೆ ವಿಚಾರಿಸಬೇಡವೆ? ಹನ್ನೆರಡೂವರೆ ರೂಪಾಯಿ ಉಚಿತವಾಗಿ ಕೊಟ್ಟವನಿಗೆ ಇನ್ನೊಂದು ಹನ್ನೆರಡೂವರೆ ರೂಪಾಯಿ ಕೊಟ್ಟಿದ್ದರೆ ದಾರಿದ್ರ್ಯ ಬಂದುಬಿಡುತ್ತಿತ್ತೆ? ಅವನು ಸಾಲವೆಂದು ಏಕೆ ಕೇಳಿದ? ಅವನು ಆ ಮಾತು ಹೇಳದಿದ್ದಿದ್ದರೆ ನನಗೆ ನಾಲ್ಕು ತಿಂಗಳಿಂದ ಈ ಚಿಂತೆ ಇರುತ್ತಿರಲಿಲ್ಲ."

ಈ ಸಾಲದ ವಿಷಯವನ್ನು ಶಾಸ್ತ್ರಿಗಳನ್ನು ಕಂಡಾಗಲೆಲ್ಲ ನಾಲ್ಕೈದು ಸಲ ಪ್ರಸ್ತಾವ ಮಾಡಿದರು. ಶಾಸ್ತ್ರಿಗಳು ಹೆದರಿ ತಲೆತಪ್ಪಿಸಿಕೊಂಡು ತಿರುಗುತ್ತಿದ್ದರು. ನನ್ನ ಸಂಗಡಲೇ ನಾಲ್ಕೈದು ಸಲ ಪೇಚಾಡಿಕೊಂಡರು.

# ವೇಳಾ ನಿಷ್ಕರ್ಷೆ

ಶಿವಸ್ವಾಮಿ ಅಯ್ಯರ್ರವರು ಕಾಲನಿಯಮ ವಿಷಯದಲ್ಲಿ ಅತ್ಯಂತ ಜಾಗರೂಕರು. ಅವರ ಮೈಯ ಮೇಲೆ ಸಾಮಾನ್ಯವಾಗಿ ಮೂರು ಗಡಿಯಾರಗಳಿರುತ್ತಿದ್ದವು. ಎರಡಂತೂ ತಪ್ಪಿದ್ದೇ ಇಲ್ಲ. ಕೈಗಡಿಯಾರ ಒಂದು; ವೇಸ್ಟ್ ಕೋಟ್‌ನಲ್ಲಿ ಚಿನ್ನದ ಸರಪಣಿಗೆ ತಗುಲಿ ಹಾಕಿದ್ದದ್ದೊಂದು. ಈ ಎರಡರ ಜೊತೆಗೆ ಕೋಟಿನ ಮೇಲ್ಜೋಬಿನಲ್ಲಿ ಒಂದು. ಅವರು ವೇಳೆ ತಿಳಿದುಕೊಳ್ಳಬೇಕೆನಿಸಿದಾಗ ಮೂರನ್ನೂ ನೋಡುವರು. ಮೂರೂ ಒಂದೇ ಸೂಚನೆ ನೀಡಿದರೆ ಆ ಸೂಚನೆ ಸರಿ. ಎರಡು ಒಂದು ಸೂಚನೆ ನೀಡಿದರೆ ಉಳಿದ ಒಂದು ಏಕೆ ಬೇರೆ ತೋರಿಸುತ್ತದೆ? ವಿಚಾರ ಮಾಡಬೇಕಾದದ್ದು! ಆ ಕೂಡಲೆ ಒಂದು ಪಬ್ಲಿಕ್ ಗಡಿಯಾರವನ್ನು ನೋಡಬೇಕು. ಅಥವಾ ಪ್ರಾಮಾಣಿಕರಾದವರು ಯಾರಾದರೂ ಸಿಕ್ಕಿದರೆ ಅವರನ್ನು ವಿಚಾರಿಸಿ ತಮ್ಮ ಗಡಿಯಾರವನ್ನು ತಿದ್ದಿಕೊಳ್ಳಬೇಕು. ಅವರು ಹೀಗೆ ಬಹಳ ನಸನಸೆ. ಇದರಿಂದ ನಮಗೆ ಒಂದೊಂದು ಸಲ ಬೇಸರ, ಒಂದೊಂದು ಸಲ ವಿನೋದ.

# ಶ್ರೀಮಂತಿಕೆ

ಊಟ ಉಪಚಾರಗಳ ವಿಷಯದಲ್ಲಿ ಅವರದು ಬಹುಮಟ್ಟಿಗೆ ಶ್ರೀಮಂತಿಕೆಯ ಅಭ್ಯಾಸ. ಮನೆ ವಿಶಾಲವಾಗಿರಬೇಕು. ಹೊಸ್ತಿಲುಗಳಿಲ್ಲದಿರಬೇಕು. ಬೆಳಕು ಚೆನ್ನಾಗಿ ಬರಬೇಕು. ಉಡುಪಿನಲ್ಲಿಯೂ ಉಡಿಗೆ ತೊಡುಗೆಗಳಲ್ಲಿಯೂ ನಸನಸೆ. ಅವರ ಡ್ರೆಸ್ಸಿಂಗ್ ರೂಮಿನಲ್ಲಿ ಗೋಡೆಯ ಪಕ್ಕದಲ್ಲಿ ಉದ್ದಕ್ಕೆ ಸಾಲಾಗಿ ನಾಲ್ಕೈದು ಸಣ್ಣಮೇಜುಗಳು. ಮೇಲೆ ವರಸೆಯಾಗಿ ಕೊರಳ ಪಟ್ಟಿಗಳು (ಕಾಲರುಗಳು), ನೆಕ್‌ಟೈಗಳು, ಅದಕ್ಕೆ ಚುಚ್ಚುವ ಪಿನ್ನುಗಳು, ಕರವಸ್ತ್ರಗಳು, ಆಮೇಲೆ ಷರಟುಗಳು, ಅದರ ಪಕ್ಕದಲ್ಲಿ ಕೈಗುಂಡಿ, ಕೊರಳ ಗುಂಡಿಗಳು, ಅದರ ಪಕ್ಕದಲ್ಲಿ ಕೋಟುಗಳು, ಇಜಾರುಗಳು, ರುಮಾಲುಗಳು, ಸೆಂಟ್ ಬಾಟ್ಲುಗಳು. ಈ ನಾನಾ ಸಾಮಾನುಗಳಲ್ಲಿ ಪ್ರತಿಯೊಂದರಲ್ಲೂ ನಾಲ್ಕೈದು ತರಹೆಗಳು. ಬಟ್ಟೆಗಳನ್ನು ಚೊಕ್ಕಟವಾಗಿ ಮಡಿಸಿ ಇಸ್ತ್ರಿಮಾಡಿಸಿ ಸಿದ್ಧವಾಗಿಟ್ಟಿರುತ್ತಿತ್ತು. ಶಿವಸ್ವಾಮಿ ಅಯ್ಯರ್ ಅವರು ಸಂದರ್ಭಕ್ಕೆ ತಕ್ಕಂತೆ, ಇಷ್ಟಕ್ಕೆ ಒಗ್ಗಿದಂತೆ ಉಡುಪನ್ನು ಆರಿಸಿಕೊಂಡು ಧರಿಸುವರು. ಇದು ನಸನಸೆ.

ಭೋಜನದಲ್ಲಿಯೂ ಹಾಗೆಯೇ–ಶ್ರೀಮಂತಿಕೆಯ ಲಕ್ಷಣ. ಉಪ್ಪಿನಕಾಯಿ ಚಟ್ನಿಯಿಂದ ಮೊದಲಾಗಿ ಹತ್ತು ಹದಿನಾಲ್ಕು ಬಗೆ ಇರಬೇಕು. ಎರಡು ತರಹ ಪಲ್ಯ, ಕೋಸುಂಬರಿಗಳು, ಹುಳಿ ಪಳಿದ್ಯ, ಸಾರು, ಹಪ್ಪಳ, ಸಂಡಿಗೆ, ಮತ್ತೇನಾದರೂ ಕರಿದದ್ದು, ಸಿಹಿ ಭಕ್ಷ್ಯ (ಜಿಲೇಬಿ, ಲಾಡು, ಇತ್ಯಾದಿ), ಮೊಸರು ಅಥವಾ ಗಟ್ಟಿ ಮಜ್ಜಿಗೆ-ಇಂಥ ಪದಾರ್ಥಗಳೆಲ್ಲ ಇರಬೇಕು. ವಿಶಾಲವಾದ ಎಲೆ. ಸಾವಕಾಶವಾಗಿ ಭೋಜನ. ಪಕ್ಕದಲ್ಲಿ ಜನ ಇರಬೇಕು. ತಮ್ಮಂತೆಯೇ ಅವರೂ ಭೋಜನ ಮಾಡಬೇಕು. ಸಂತೋಷವಾಗಿ ಊಟ ಮಾಡಬೇಕು. ಆತುರವಿಲ್ಲ.

# ಒಂದು ತಪಶೀಲು

ಒಂದು ದಿನ ಶಿವಸ್ವಾಮಿ ಅಯ್ಯರ್ ನನ್ನನ್ನು ಕುರಿತು ಹೇಳಿದರು: “ಅಯ್ಯಾ, ನಿನ್ನ ಮನೆಗೆ ಆಗಾಗ ಬರಬೇಕೆಂದು ನನಗೆ ಮನಸ್ಸು, ಆದರೆ ನನ್ನಿಂದ ನಿನಗೆ ಅಪಕೀರ್ತಿ ಬಂದೀತೋ ಏನೋ ಎಂದು ಭಯ.”

ನಾನು: “ಅದೇಕೆ ಅಪಕೀರ್ತಿ?”

ಶಿ: “ನಿನ್ನ ಮನೆ ಎತ್ತರದಲ್ಲಿದೆ. ಬೀದಿಯಿಂದ ಮೆಟ್ಟಲುಗಳೇನೋ ಇದೆ. ಆದರೆ ಆ ಮೆಟ್ಟಲನ್ನು ನಾನು ಹತ್ತಿದರೆ ಅಲ್ಲಿಯೇ ಬಿದ್ದುಹೋಗಬಹುದು. ಪ್ರಾಣವೇ ಹೋಗಬಹುದು. ಅದರಿಂದ ನಿನಗೆ ಅಪಕೀರ್ತಿ. ನಾನು ಸ್ಥೂಲದ ಮನುಷ್ಯ, ಮುದುಕ. ನನ್ನ ಕಾಲೋ-ದೊಡ್ಡದು. ಮೊದಲೇ ಬೃಹಚ್ಚರಣ, ನಿನ್ನ ಮೆಟ್ಟಲುಗಳು ಸಣ್ಣವು...”

ನಾನು ಅದರ ಅಭಿಪ್ರಾಯವನ್ನು ಗ್ರಹಿಸಿ ಹೇಳಿದೆ:

“ತಾವು ದಯಮಾಡಿ ಅಳತೆ ಹೇಳಿದರೆ ಬೇರೆ ಮೆಟ್ಟಲು ಹಾಕಿಸುತ್ತೇನೆ.”

ಶಿವಸ್ವಾಮಿ ಅಯ್ಯರ್ ತಮ್ಮ ಬೂಡ್ಸನ್ನು ಮುಂದಿಟ್ಟು,

“ಇದು ಹನ್ನೊಂದು ಅಂಗುಲಕ್ಕೂ ಹೆಚ್ಚಾಗಿದೆ. ನಿನ್ನ ಮೆಟ್ಟಲು ಒಂದಡಿಯಾದರೂ ಅಗಲವಿರಬೇಕು. ಮೆಟ್ಟಲಿನ ಎತ್ತರ ಮೂರು ಮೂರುವರೆ ಅಂಗುಲಕ್ಕೆ ಹೆಚ್ಚಿರಬಾರದು. ಇಷ್ಟಾದರೆ ಪ್ರಾಣಭಯವಿಲ್ಲ.”

ನಾನು ಆ ದಿನವೇ ಕೆಲಸಗಾರರಿಗೆ ಹೇಳಿಕಳುಹಿಸಿ ಹೊಸ ಮೆಟ್ಟಲನ್ನು ಕಟ್ಟಿಸಿದೆ. ಈಚೆಗೆ ಕಾಂಪೌಂಡ್ ಗೋಡೆಯನ್ನು ಹೊಸದಾಗಿ ಕಟ್ಟಿ ಮೆಟ್ಟಲನ್ನು ಹಾಕಿದಾಗ ಕೊಂಚ ವ್ಯತ್ಯಾಸವಾಗಿದೆಯೋ ಏನೋ.

# ‘ಗೋರೋಚನ’

ಶಿವಸ್ವಾಮಿ ಅಯ್ಯರ್ ಅವರು ಒಂದು ಸಾರಿಯ ಬೇಸಗೆಯಲ್ಲಿ ಎಂ. ಎನ್. ಕೃಷ್ಣರಾವ್ ಪಾರ್ಕಿನ ದಕ್ಷಿಣ ಕಡೆಯ ಗೇಟಿನ ಎದುರಿಗೆ ಎತ್ತರದಲ್ಲಿರುವ ಮನೆಯಲ್ಲಿ ಇದ್ದರು. ಅಂದು ಸಂಜೆ ಮಾಮೂಲಿನಂತೆ ೧೦-೧೫ ಮಂದಿಯ ಗೋಷ್ಠಿ ಸೇರಿತ್ತು. ಶಿವಸ್ವಾಮಿ ಅಯ್ಯರ್ ಅವರಿಗೆ ಕಿವುಡುತನ ಬಂದಿತ್ತು. ಆ ದಿವಸ ಅವರು ನನ್ನನ್ನು ಏನೋ ಕೇಳಿದರು. ನಾನು ಜವಾಬು ಹೇಳಿದೆ. ಎರಡು ನಿಮಿಷ ಸುಮ್ಮನಿದ್ದು ಇನ್ನೊಬ್ಬರ ಕಡೆಗೆ ತಿರುಗಿ ಕೇಳಿದರು:

“ಗ್ರಂದಿಗೆ ಅಂಗಡಿಯಲ್ಲಿ ಗೋರೋಚನ ಎಂಬ ಸಾಮಾನು ಸಿಕ್ಕುತ್ತದೆ. ಅದರ ವಿಷಯ ನಿಮಗೇನಾದರೂ ಗೊತ್ತಿದೆಯೆ?”

ಎಲ್ಲರೂ ಒಬ್ಬರೊಬ್ಬರ ಮುಖ ನೋಡಿಕೊಂಡರು. ಡಿ. ವೆಂಕಟರಾಮಯ್ಯನವರು ಹೇಳಿದರು.

ವೆಂ: “ಅದು ಏನೋ ಔಷಧದ ಸಾಮಾಗ್ರಿ. ಮಕ್ಕಳಿಗೆ ಹಾಕುತ್ತಾರೆ.”

ಶಿ: “ಮಕ್ಕಳಿಗೆ ಅದನ್ನು ಹಾಕುವುದು ಏಕೆ?”

ವೆಂ: “ನನಗೆ ಗೊತ್ತಿಲ್ಲ.”

ಜಿ. ಶ್ರೀನಿವಾಸಯ್ಯರ್: “ಗೋರೋಚನದಿಂದ ಗಂಟಲು ಶುದ್ಧಿಯಾಗುತ್ತದೆ. ಧ್ವನಿ ಚೊಕ್ಕಟವಾಗಿ ಗಟ್ಟಿಯಾಗಿ ಹೊರಡುತ್ತದೆ.”

ಶಿ: (ನನ್ನ ಕಡೆ ಬೆಟ್ಟು ತೋರಿಸಿ) “ಇವರ ಅಜ್ಜಿ ಅವನಿಗೆ ಮಣಗಟ್ಟಲೆ ಗೋರೋಚನ ಹಾಕಿರಬೇಕು.”

***

ಇನ್ನೊಂದು ದಿನ ವಿಶ್ವೇಶ್ವರಪುರದ ಮನೆಯಲ್ಲಿದ್ದಾಗ, ಸಂಜೆ ಗೋಷ್ಠಿ ಸೇರಿತ್ತು. ಅಲ್ಲಿಗೆ ಶಿವಸ್ವಾಮಿ ಅಯ್ಯರ್ ಅವರ ಸ್ನೇಹಿತರಾಗಿದ್ದ ತಿರುವಾಂಕೂರಿನ ದಿವಾನ್‌ಪೇಷ್ಕಾರ್ ನಾಗಮಯ್ಯರ್ ಅವರ ಮಗ ಶೇಷಾಚಲಂ ಎಂಬವರು ದಯಮಾಡಿಸಿದರು. ಕುಶಲ

ಪ್ರಶ್ನೆಯಾದ ಬಳಿಕ ಶೇಷಾಚಲಂ ಅವರು ಯಾವುದೋ ರಾಜಕೀಯ ಪ್ರಸ್ತಾವವನ್ನೆತ್ತಿದ್ದರು. ಹಾಗೆ ಮಾತು ಬೆಳೆದು ಆಗ ಮದರಾಸು ಪ್ರಾಂತದಲ್ಲಿ ಸಿ. ರಾಜಗೋಪಾಲಾಚಾರ್ಯರು ಮುಖ್ಯಮಂತ್ರಿಯಾಗಿದ್ದಾಗ ಹಾಕಿದ ಒಂದು ತೆರಿಗೆಯ ಮಾತುಬಂತು. ಶಿವಸ್ವಾಮಿ ಅಯ್ಯರ್ ಕೇಳಿದರು:

ಶಿ: "ಆ ತೆರಿಗೆ ನ್ಯಾಯವೆ?"

ಶೇ: "ತೆರಿಗೆ ಹಾಕದಿದ್ದರೆ ದೇಶ ಸಂರಕ್ಷಣೆಯಾಗುವುದು ಹೇಗೆ?"

ಶಿ: "ಬ್ರಿಟಿಷರು ಈ ದೇಶಕ್ಕೆ ಬಂದ ದಿವಸದಿಂದ ಇದುವರೆಗೆ ದೇಶ ಸಂರಕ್ಷಣೆ ಮಾಡಿದ್ದು ರಾಜಗೋಪಾಲಾಚಾರ್ಯರ ತೆರಿಗೆಯಿಂದಲೋ?"

ಎಲ್ಲರೂ ನಕ್ಕರು. ಅದನ್ನು ನೋಡಿ ಶಿವಸ್ವಾಮಿ ಅಯ್ಯರ್ ಅವರು ಹೇಳಿದರು:

"ನಾನು ರಾಜಗೋಪಾಲಾಚಾರ್ಯರನ್ನು ಅಲ್ಲಗಳೆಯುವವನಲ್ಲ. ಆತ ಮಹಾ ಸಮರ್ಥ. ಧೈರ್ಯಶಾಲಿ. ಹಾಗೆಯೇ ಚಮತ್ಕಾರಿ. ಆತ ಜಸ್ಟಿಸ್ ಪಾರ್ಟಿಯ ಬೆನ್ನು ಮೂಳೆ ಮುರಿದು ಹಾವಳಿ ತಪ್ಪಿಸಿದ. ಅಂಥ ಸಾಹಸ ಇನ್ನೊಬ್ಬರಿಂದ ಆಗತಕ್ಕದ್ದಲ್ಲ."

ಶಿವಸ್ವಾಮಿ ಅಯ್ಯರ್ ಅವರು ಮದರಾಸು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ೧೯೨೫ರ ಸುಮಾರಿನಲ್ಲಿ ಇಂಡಿಯಕ್ಕೆ ತಕ್ಕ ರಾಜನಿಬಂಧನೆ ಎಂಬ ವಿಷಯ ಕುರಿತು ಕೆಲವು ಉಪನ್ಯಾಸಗಳನ್ನು ಕೊಡಲು ಒಪ್ಪಿಕೊಂಡರು. ಆ ಉಪನ್ಯಾಸಗಳು ಗ್ರಂಥರೂಪದಲ್ಲಿ ಪ್ರಕಟವಾಗಿವೆ (Indian Constitutional Problems.)

ಆ ವಿಷಯದ ಒಂದು ಭಾಗ ದೇಶೀಯ ಸಂಸ್ಥಾನಗಳದು. ಇಂಡಿಯದ ರಾಜ್ಯವ್ಯವಸ್ಥೆಯಲ್ಲಿ ದೇಶೀಯ ಸಂಸ್ಥಾನಗಳ ಸ್ಥಾನ ಯಾವುದು? ಇದು ಶಿವಸ್ವಾಮಿ ಅಯ್ಯರವರು ಅವಶ್ಯವಾಗಿ ವಿಚಾರಮಾಡಬೇಕಿತ್ತು. ಅವರು ತೆಗೆದುಕೊಂಡಿದ್ದ ವಿಷಯದ ಒಂದು ಮುಖ್ಯಭಾಗ ಸಂಸ್ಥಾನಗಳದ್ದು.

ಅದಕ್ಕೆ ಮೊದಲೇ ಅದೇ ವಿಷಯದಲ್ಲಿ ನಾನು ಒಂದು ಸೂಚನಾವಳಿಯನ್ನು ತಯಾರುಮಾಡಿ ಪ್ರಕಟಪಡಿಸಿದ್ದೆ. ಶಿವಸ್ವಾಮಿ ಅಯ್ಯರವರು ಆ ನನ್ನ ಯೋಜನೆಯನ್ನು ತಮ್ಮ ಉಪನ್ಯಾಸಗಳಲ್ಲಿ ತಾವು ವಿಮರ್ಶನ ಮಾಡಬೇಕೆಂದು ಉದ್ದೇಶಪಟ್ಟರು. ಆದರೆ ಸೂಚನಾವಳಿಯನ್ನು ಬರೆದವರು ಯಾರು?

# ನನ್ನ ಪರಿಚಯ

ಆ ವೇಳೆಗೆ ನನಗೆ ಶಿವಸ್ವಾಮಿ ಅಯ್ಯರವರ ಪ್ರತ್ಯಕ್ಷ ಪರಿಚಯ ಆಗಿರಲಿಲ್ಲ. ಈಗ್ಗೆ ಸುಮಾರು ನಲವತ್ತೈದು ವರ್ಷದ ಹಿಂದಿನ ಮಾತು. ನನ್ನ ಲೇಖನವನ್ನು ಪ್ರಸ್ತಾವ ಮಾಡುವುದಕ್ಕೆ ಮುಂಚೆ, ನಾನು ಎಂಥವನೆಂಬುದನ್ನು ತಿಳಿದುಕೊಳ್ಳಬೇಕೆಂದು ಶಿವಸ್ವಾಮಿ ಅಯ್ಯರವರಿಗೆ ಕುತೂಹಲ ಹುಟ್ಟಿತಂತೆ. ಅವರು ತಮ್ಮ ಸ್ನೇಹಿತರಾದ ದಿವಾನ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಕಾಗದ ಬರೆದು ವಿಚಾರಿಸಿದರು. ಆಗ ವಿಶ್ವೇಶ್ವರಯ್ಯನವರು ದಿವಾನ್ ಪದವಿಯಿಂದ ನಿವೃತ್ತರಾಗಿದ್ದರು. ಅವರು ಬರೆದರಂತೆ: “ನೀವು ವಿಚಾರಿಸಿರುವ ಮನುಷ್ಯನನ್ನು ನಾನು ಬಲ್ಲೆ. ನೀವು ಬೆಂಗಳೂರಿಗೆ ಬಂದರೆ ನಿಮ್ಮಿಬ್ಬರ ಭೇಟಿಗೆ ಅನುಕೂಲಪಡಿಸಿಯೇನು.”

ಈ ಸಲಹೆಯಂತೆ ಶಿವಸ್ವಾಮಿ ಅಯ್ಯರ್ ಅವರು ಬೆಂಗಳೂರಿಗೆ ಬಂದು ವಿಶ್ವೇಶ್ವರಯ್ಯನವರ ಅತಿಥಿಯಾಗಿದ್ದರು. ವಿಶ್ವೇಶ್ವರಯ್ಯನವರು ನಮ್ಮಿಬ್ಬರ ಭೇಟಿಗಾಗಿ ಒಂದು ಭೋಜನಕೂಟವನ್ನೇರ್ಪಡಿಸಿದರು. ಆಗ ಅವರು ‘ಅಪ್‌ಲೆಂಡ್ಸ್’ ಎಂಬ ಬಂಗಲೆಯಲ್ಲಿ ವಾಸವಾಗಿದ್ದರು. ಆ ದಿನ ಊಟಕ್ಕೆ ಬಂದಿದ್ದವರಲ್ಲಿ ವಿಶ್ವೇಶ್ವರಯ್ಯನವರ ತಮ್ಮಂದಿರು ಮೋಕ್ಷಗುಂಡಂ ರಾಮಚಂದ್ರರಾಯರೂ ಅವರ ಅಣ್ಣನ ಮಕ್ಕಳು ಮೋಕ್ಷಗುಂಡಂ ಕೃಷ್ಣಮೂರ್ತಿಗಳೂ ಇದ್ದರು.

ನಾವು ಊಟದ ಕೋಣೆಯೊಳಕ್ಕೆ ಬಂದು ಮಣೆಯ ಮೇಲೆ ಕುಳಿತ ಕೂಡಲೆ ಶಿವಸ್ವಾಮಿ ಅಯ್ಯರ್ ಅವರು ನನ್ನ ಕಡೆಗೆ ತಿರುಗಿ ಕೇಳಿದರು:

# ವಿಚಾರಣೆ

ಶಿ: “ನೀವು ಬೃಹಚ್ಚರಣರೆಂದು ಕೇಳಿದ್ದೇನೆ...”

ಗುಂ: “ಹೌದು ಸ್ವಾಮಿ, ನಾನು ಆ ಗುಂಪಿನವನೇ.”

ಶಿ: “ಬೃಹಚ್ಚರಣರಲ್ಲಿ ಯಾವ ಪಂಗಡದವರು? ಬೃಹಚ್ಚರಣರಲ್ಲೂ ಹಲವು ಪಂಗಡ ಉಪಪಂಗಡಗಳಿವೆ ಎಂದು ಹೇಳುವರಲ್ಲ...”

ಗುಂ: “ನನ್ನ ಪಂಗಡವನ್ನು ಮಂಜಪುತ್ತೂರ್ ಎಂದು ಹೆಸರಿಸುವರು.”

ಶಿ: “ಮಂಜಪುತ್ತೂರು ಎಲ್ಲಿದೆ?”

ಗುಂ: “ತಂಜಾವೂರು ಜಿಲ್ಲೆಯ ಯಾವುದೋ ಒಂದು ಭಾಗದಲ್ಲಿದೆ. ನಾನೆಂದೂ ಅಲ್ಲಿಗೆ ಹೋಗಿಲ್ಲ. ಕೆಲವು ಶತಮಾನಗಳಿಂದ ನಮ್ಮ ಮನೆತನದವರು ಮೈಸೂರಿನಲ್ಲೇ ನೆಲಸಿದ್ದಾರೆ...”

ಶಿ: “ನಿಮ್ಮ ಮನೆಯಲ್ಲಿ ಹೆಂಗಸರು ವರಲಕ್ಷ್ಮೀವ್ರತ ಆಚರಿಸುವರೆ?”

ಗುಂ: “ಆಚರಿಸುವರು.”

ಶಿ: “ವಿನಾಯಕವ್ರತ?”

ಗುಂ: “ಆಚರಿಸುವರು.”

ಶಿ: “ದೀಪಾವಳಿ?”

ಗುಂ: “ಆಚರಿಸುವರು.”

ಶಿ: “ನಿಮ್ಮ ಮನೆಯ ಹೆಂಗಸರು ಕೊಶಾಂಪಡವೆ ವಾರೆಯಲ್ಲಿ ಸೀರೆ ಉಡುವರೆ?” (ಇದು ಕಾಲ ಬಳಿ ಸೀರೆಯ ನೆರಿಗೆ.)

ಗುಂ: "ಹಿಂದೆ ಹೆಂಗಸರು ಹೇಗೆ ಉಡುತ್ತಿದ್ದರೋ ನನಗೆ ತಿಳಿಯದು. ಸದ್ಯದಲ್ಲಿ ನಾವಂತೂ ಮುಲಕನಾಡು ಸಂಪ್ರದಾಯ ಆಚಾರಗಳನ್ನೇ ಅನುಸರಿಸುತ್ತಿದ್ದೇವೆ..."

ಇಲ್ಲಿ ವಿಶ್ವೇಶ್ವರಯ್ಯನವರೂ ಉಳಿದವರೂ ನಕ್ಕರು. ಈ ಎಲ್ಲ ಪ್ರಶ್ನೆಗಳೂ ಅವರ ನಗುವನ್ನು ಕೆರಳಿಸುತ್ತಿದ್ದವು. ಶಿವಸ್ವಾಮಿ ಅಯ್ಯರ್ ಹೇಳಿದರು:

"ನಾನು ಈ ತಪಶೀಲುಗಳನ್ನು ಕೇಳಿದ್ದೇನೆಂದು ನಗಬೇಕಾಗಿಲ್ಲ. ನನಗೆ ಬೇಕಾದದ್ದು ಈ ಆಸಾಮಿಯ ಶೀಲ ಸ್ವಭಾವಗಳ ತಿಳಿವಳಿಕೆ. ನಮ್ಮ ಶೀಲ ಸ್ವಭಾವಗಳನ್ನು ಸಣ್ಣ ಸಣ್ಣ ವಿಷಯಗಳು ರೂಪಗೊಳಿಸುತ್ತವೆ. ಆದದ್ದರಿಂದ ಕೇಳಿದೆ. ನಮ್ಮ ಕಾಲದಲ್ಲಿ ಪತ್ರಿಕಾಪ್ರಸಿದ್ಧಿ ಸುಲಭ. ಆದರೆ ಅದು ಅಗ್ಗದ ಸರಕು. ಪತ್ರಿಕೆಗಳಲ್ಲಿ ಚಮತ್ಕಾರವನ್ನೂ ಪಾಂಡಿತ್ಯವನ್ನೂ ಪ್ರದರ್ಶನ ಮಾಡಬಹುದು. ಅದು ಮನುಷ್ಯನ ವಾಸ್ತವದ ಯೋಗ್ಯತೆಯೆಂದು ಭರವಸೆ ಪಡಲಾಗದು. ಮನುಷ್ಯನೊಡನೆ ಮಾತುಕಥೆಯಾಡಿ ವಿಚಾರವಿನಿಮಯ ಮಾಡಿಕೊಂಡಾಗಲೇ ಆತನ ನಿಜವಾದ ಯೋಗ್ಯತೆ ತಿಳಿದುಬರುವುದು."

ಹೀಗೆ ಸಮಜಾಯಿಷಿ ಹೇಳಿದರು.

ಅನಂತರ ಭೋಜನ. ನಡುನಡುವೆ ಪ್ರಸಕ್ತ ವಿಷಯವನ್ನು ಕುರಿತು ಪ್ರಶ್ನೆ ಹಾಕುತ್ತಿದ್ದರು. ಯಾವುದೋ ಒಂದು ಪ್ರಶ್ನೆಗೆ ನಾನು ಉತ್ತರ ಹೇಳುವಾಗ, "ವಿತ್ ದಿ ಪಾಸಿಬಲ್ ಎಕ್ಸೆಪ್‌ಷನ್ ಆಫ್..." ಎಂಬ ಪದಪ್ರಯೋಗ ಮಾಡಿದೆ. ಅವರು ಅದನ್ನು ಹಿಡಿದರು:

"ಪಾಸಿಬಲ್ ಎನ್ನುತ್ತೀಯಲ್ಲ-ಅದರ ಅಂತರ್ಭಾವವೇನು?"

ವಿವರಗಳು ಈಗ ನನಗೆ ಮರೆತುಹೋಗಿವೆ. ಆದರೆ ಈ ದೊಡ್ಡ ಮನುಷ್ಯರೊಡನೆ ಮಾತನಾಡುವಾಗ ಬಹು ಜಾಗರೂಕನಾಗಿರಬೇಕೆಂದು ದೃಢವಾಗಿ ಮನಸ್ಸಿಗೆ ಬಂತು.

# ದೂರದೃಷ್ಟಿ

ಈ ಮೊದಲ ಭೇಟಿಯಾದ ಮೇಲೆ ನಾಲ್ಕಾರು ಸಾರಿ ಅವರು ನನ್ನನ್ನು ಅವರ ಮನೆಗೆ ಕರೆದು ರಾಜಕೀಯ ಪ್ರಶ್ನೆಗಳನ್ನು ಕುರಿತು ಚರ್ಚೆ ನಡಸಿದರು. ಆ ಚರ್ಚೆಯಿಂದ ಪ್ರಯೋಜನವಾದದ್ದು ನನಗೆ. ಒಂದು ಪಾರಿಭಾಷಿಕ ಶಬ್ದದ ವ್ಯಾಪನೆ ಎಷ್ಟೆಷ್ಟಿರುತ್ತದೆ, ಒಂದು ಅಭಿಪ್ರಾಯದ ಅಂತರ್ಭಾವದ ತೊಡಕುಗಳು ಎಲ್ಲೆಲ್ಲಿಗೆ ಹೋಗುತ್ತವೆ, ಒಂದು ಕಾರ್ಯಸೂಚನೆ ಮಾಡಿದರೆ ಅದಕ್ಕೆ ಅಡಚಣೆಗಳು ಎಷ್ಟು ದಿಕ್ಕುಗಳಿಂದ ಬಂದಾವು ಇದನ್ನೆಲ್ಲ ಅವರ ಮಾತು ದಿಗ್ದರ್ಶನ ಮಾಡಿಸುತ್ತಿತ್ತು.

# ಒಂದು ಉಪನ್ಯಾಸ

ಎರಡನೆಯ ಪ್ರಪಂಚಯುದ್ಧದ ಕಾಲದಲ್ಲಿ ಆಗ ಇಂಡಿಯದಲ್ಲಿದ್ದ ಬ್ರಿಟಿಷ್ ಸರಕಾರವು ಇಂಡಿಯದ ಸೈನ್ಯಬಲವನ್ನು ಅಭಿವೃದ್ಧಿಪಡಿಸುವ ಯೋಜನೆ ಮಾಡಿತ್ತು. ಆ ಸಂದರ್ಭದಲ್ಲಿ ಮದರಾಸಿನಲ್ಲಿ ಶಿವಸ್ವಾಮಿ ಅಯ್ಯರ್ ಅವರು ಸೈನ್ಯವನ್ನು ಬಲಪಡಿಸುವುದು ಇಂಡಿಯದ ಜನರ ಪ್ರಥಮ ಕರ್ತವ್ಯವೆಂದು ಉಪನ್ಯಾಸ ಮಾಡಿದರು. ಅದು ವಿಶ್ವವಿದ್ಯಾನಿಲಯದಲ್ಲಿ. ಆ ಉಪನ್ಯಾಸದಲ್ಲಿ ಅವರು ಹೇಳಿದರು:

“ನಾವು ಸ್ವರಾಜ್ಯ ಬೇಕೆನ್ನುತ್ತೇವೆ. ಹಾಗಾದರೆ ನಮ್ಮ ದೇಶವನ್ನು ನಾವು ಪರಕೀಯರಿಂದ ಸಂರಕ್ಷಿಸಿಕೊಳ್ಳಲು ಸಿದ್ಧರಾಗಿದ್ದೇವೆಯೆ? ಎದುವರೆಗೆ ನಮ್ಮ ಸ್ವಂತ ಸೈನ್ಯಬಲವಿಲ್ಲವೋ ಅದುವರೆಗೂ ನಮ್ಮ ಸ್ವರಾಜ್ಯ ಬರಿಯ ಹಗಲುಗನಸು. ಸೈನ್ಯ ನಮ್ಮದಾಗಬೇಕಾದರೆ ನಮ್ಮಲ್ಲಿ ವಿದ್ಯಾವಂತರಾದವರು ಮತ್ತು ಗಣ್ಯರಾದವರು ಸೇನೆಗೆ ಸೇರಬೇಕು. ಸೇನೆಯ ನೌಕರಿ ಕಂಗಾಳಿ ಜನಕ್ಕೂ, ಕೆಲಸಕ್ಕೆ ಬಾರದವರಿಗೂ, ಕೀಳುಮಟ್ಟದ ಜನಕ್ಕೂ ತಕ್ಕದ್ದೆಂದು ಶ್ರೇಷ್ಠ ಜನರು ಅದನ್ನು ಹೀನಾಯವಾಗೆಣಿಸಿದರೆ ಆ ಉದ್ಯೋಗಕ್ಕೆ ಗೌರವ ಬರಲಾರದು. ವಿದ್ವಜ್ಜನರೂ, ಸಮಾಜಪ್ರಮುಖರೂ ಸೈನ್ಯಸೇವೆಯಲ್ಲಿ ಸೇರಬೇಕು.”

ಇದು ಆ ಉಪನ್ಯಾಸದ ಸಾರಾಂಶ. ಆ ಮಾರನೆಯ ದಿನ ಬೆಳಗ್ಗೆ ಇಬ್ಬರು ವಿದ್ಯಾವಂತರಾದ ತರುಣರು ಶಿವಸ್ವಾಮಿ ಅಯ್ಯರವರಲ್ಲಿಗೆ ಹೋದರು. ಆ ಇಬ್ಬರೂ ಅವರ ಸ್ನೇಹಿತರ ಮಕ್ಕಳು. ಕುಶಲಪ್ರಶ್ನಾನಂತರ ಹೀಗೆ ಮಾತು:

“ನಿನ್ನೆ ನಾವಿಬ್ಬರೂ ಲೆಕ್ಚರಿಗೆ ಬಂದಿದ್ದೆವು.”

“ಸರಿ!”

“ಉಪನ್ಯಾಸ ಬಹಳ ಚೆನ್ನಾಗಿತ್ತು.”

“ಸರಿ.”

“ಬಹಳ ಸ್ಫೂರ್ತಿಪ್ರದವಾಗಿತ್ತು.”

“ಸರಿ.”

“ನಾವಿಬ್ಬರೂ ಸೈನ್ಯಕ್ಕೆ ಸೇರಬೇಕೆಂದು ಯೋಚಿಸಿದ್ದೇವೆ.”

“ದೇವರು ಒಳ್ಳೆಯದು ಮಾಡಲಿ. ನೀವು ಸ್ವತಂತ್ರರಾಗಿ ಈ ತೀರ್ಮಾನಕ್ಕೆ ಬಂದಿದ್ದರೆ ಅದಕ್ಕೆ ನನ್ನ ಅನುಮತಿ ಬೇಕಾಗಿಲ್ಲ ಉಪನ್ಯಾಸದ ಕಾರಣದಿಂದ ನೀವು ಈ ರೀತಿ ನಡೆಯುವುದಾದರೆ ಅದರ ಜವಾಬ್ದಾರಿ ನನಗೆ ಬೇಕಿಲ್ಲ. ನಿಮ್ಮ ಸ್ವತಂತ್ರ ವಿಚಾರದಿಂದ ನೀವು ನಡೆದುಕೊಂಡರೆ ಸರಿ.”

# ಮುಗಿಯದ ತರ್ಕ

ಮತ್ತೊಂದು ಸಾರಿ ಶಿವಸ್ವಾಮಿ ಅಯ್ಯರವರ ಉಪನ್ಯಾಸ ಕೇಳಿದ್ದ ಒಬ್ಬ ಯುವಕನು ಅವರನ್ನು ಕಂಡು ಹೇಳಿದ:

"ನಿಮ್ಮ ಉಪನ್ಯಾಸ ನಾನು ಕೇಳಿದೆ. ಬಹು ಚೆನ್ನಾಗಿತ್ತು."

ಶಿವಸ್ವಾಮಿ ಅಯ್ಯರ್ ಆಗ ಎಲ್ಲಿಯೋ ಹೋಗುತ್ತಿದ್ದವರು, ಈಗ ತಮ್ಮ ಸ್ನೇಹಿತರ ಮಗನೆಂದು ಗುರುತಿಸಿ ನಿಂತು ಆತ ಹೇಳಿದ್ದನ್ನು ಕೇಳಿದರು. ಆಗ ಅವರ ಜೊತೆಯಲ್ಲಿ ಮತ್ತೊಬ್ಬ ಸ್ನೇಹಿತರೂ ನಡೆದು ಬರುತ್ತಿದ್ದರು. ಆ ಯುವಕನ ಮೆಚ್ಚಿಕೆಯ ಮಾತನ್ನು ಕೇಳಿದ ಕೂಡಲೆ ಶಿವಸ್ವಾಮಿ ಅಯ್ಯರ್ ಅವರು ತಮ್ಮ ಎರಡು ಕೈಗಳನ್ನೂ ಜೋಡಿಸಿ ನೆತ್ತಿಯಿಂದ ಮೇಲಕ್ಕೆ ಹಿಡಿದು ಹೇಳಿದರು:

"ನಾನು ತುಂಬ ಕೃತಜ್ಞನಾಗಿದ್ದೇನೆ."

ಹೀಗೆ ಹೇಳಿ ಸರಸರ ನಡೆದುಹೋದರು. ಜೊತೆಯಲ್ಲಿದ್ದ ಸ್ನೇಹಿತರು ಕೇಳಿದರು:

ಸ್ನೇ: "ಅದೇಕೆ ಹೀಗೆ ಮಾಡಿದಿರಿ?"

ಶಿ: "ಈತ-ಆ ಸ್ನೇಹಿತರ ಮಗ. ಇವನನ್ನು ನಾನು ಬಾಲ್ಯದಿಂದ ಬಲ್ಲೆ. ಈಗ ಈತ ಗುಣದೋಷವಿಮರ್ಶೆ ಮಾಡಿ ನನಗೆ ಸರ್ಟಿಫಿಕೇಟ್ ಕೊಡುವಷ್ಟು ಸಮರ್ಥನಾಗಿದ್ದೇನೆಂದು ತಿಳಿದುಕೊಂಡಿದ್ದಾನೆ. ಇರಲಿ: ಬಾಧಕವಿಲ್ಲ. ಆದರೆ ಇಂಥ ಈ ಕಾಲದ ಯುವಕರೊಡನೆ ನಾನು ತರ್ಕಕ್ಕೆ ಸಿಕ್ಕಿಹಾಕಿಕೊಳ್ಳಬಾರದು. ಅದು ಮುಗಿಯದಿರುವ ತರ್ಕ."

# ರಾಜಕೀಯ ವಿಚಾರ

ಶಿವಸ್ವಾಮಿ ಅಯ್ಯರ್ ಅವರು ರಾಜಕೀಯದಲ್ಲಿ ಸೌಮ್ಯ ಪಕ್ಷಕ್ಕೆ ಸೇರಿದವರು. ಈ ಪಕ್ಷವನ್ನು "ಲಿಬರಲ್" ಎಂದು ಕರೆಯುವುದುಂಟು. ಅವರಿಗೆ ಉಗ್ರಪಂಥ ಸಮ್ಮತವಲ್ಲ. ಅವರು ತಿಲಕರ ಪಂಥಕ್ಕೆ ವಿರೋಧಿಗಳು; ಗೋಖಲೆ, ದಾದಾಬಾಯಿ ನವರೋಜಿ ರಾನಡೆ ಮೊದಲಾದವರ ಪಂಥಕ್ಕೆ ಸೇರಿದವರು. ಮಹಾತ್ಮ ಗಾಂಧಿಯವರ ಮಾರ್ಗವಂತೂ ಅವರ ದೃಷ್ಟಿಯಲ್ಲಿ ತೀರಾ ಅಸಂಗತವಾದದ್ದು. ಅದು ಅನರ್ಥಕಾರಿಯಾದದ್ದೆಂದೇ ಅವರು ಘಂಟಾಘೋಷವಾಗಿ ಹೇಳುತ್ತಿದ್ದರು.

ಮದರಾಸಿನಲ್ಲಿ ೧೯೪೦ ರ ಸುಮಾರಿನಲ್ಲಿ 'ಲಿಬರಲ್' (Liberal) ಉದಾರ ಪಕ್ಷದ ಸಮ್ಮೇಳನ ನಡೆಯಿತು. ಅದರ ವಿಷಯನಿಯಾಮಕ ಸಮಿತಿಯಲ್ಲಿ ದೇಶೀಯ ಸಂಸ್ಥಾನಗಳ ಭವಿಷ್ಯವನ್ನು ಕುರಿತು ಒಂದು ನಿರ್ಣಯವಿರಬೇಕೆಂದು ನಾನು ಸೂಚಿಸಿದೆ. ಶಿವಸ್ವಾಮಿ ಅಯ್ಯರವರು ಅದನ್ನು ವಿರೋಧಿಸಿದರು. ಅದರ ಮೇಲೆ ಕೊಂಚ ಬಿರುಸು ಮಾತುಗಳೇ ನಡೆದವು. ಶಿವಸ್ವಾಮಿ ಅಯ್ಯರವರ ಮುಖ ಕೋಪದಿಂದ ಕೆಂಪೇರಿತೆಂದೇ ಹೇಳಬೇಕು. ಅವರು ಅಷ್ಟು ಕಪ್ಪಲ್ಲದಿದ್ದರೆ ಆ ಕೆಂಪು ಎಲ್ಲರಿಗೂ ಕಣ್ಣಿಗೆ ಕಾಣಿಸುತ್ತಿತ್ತು. ನನ್ನ ಮುಖ ಹೇಗಿತ್ತೋ ನನಗೆ ಗೊತ್ತಿಲ್ಲ. ಆದರೆ ನಾನು ಚಿಕ್ಕ ವಯಸ್ಸಿನವನು, ಅಲ್ಪನು. ನನ್ನಂಥವನು ಅಂಥ ಮಹನೀಯರಿಗೆ ಎದುರಾಗಿ ನಿಂತು ಮಾತಾಡಿದೆನಲ್ಲ! ಎಂದು ಪಶ್ಚಾತ್ತಾಪ ಬಂತು. ಅಲ್ಲಿ ನನ್ನ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿದ್ದರೂ ಶಿವಸ್ವಾಮಿ ಅಯ್ಯರವರಿಗೆ ಹೆಚ್ಚು ಸಮೀಪರಾದ ದೊಡ್ಡ ಮನುಷ್ಯರಿದ್ದರು–ಟಿ. ಆರ್. ವೆಂಕಟರಾಮಶಾಸ್ತ್ರಿ ಮೊದಲಾದವರು. ಅವರು ಇಬ್ಬರಿಗೂ ಸಮಜಾಯಿಷಿ ಹೇಳಿದರು. ಅಂಥವರಲ್ಲಿ ಬಹು ಮುಖ್ಯರು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರು. ಸಿ. ಪಿ. ಯವರು ಶಿವಸ್ವಾಮಿ ಅಯ್ಯರವರನ್ನೂ ನನ್ನನ್ನೂ ತಮ್ಮ ಮನೆಗೆ ಕರೆದು ರಾಜ ಭೋಜನ ಮಾಡಿಸಿದರು. ಜಗಳ ಮರೆತುಹೋಯಿತು.

# ದೇಶೀಯ ಸಂಸ್ಥಾನಗಳು

ಆ ಕಾಲದಲ್ಲಿ ಬ್ರಿಟಿಷ್ ಇಂಡಿಯದ ಪ್ರಜಾನಾಯಕರಿಗೆಲ್ಲ ಶಿವಸ್ವಾಮಿ ಅಯ್ಯರವರ ಅಭಿಪ್ರಾಯವೇ ದೇಶೀಯ ಸಂಸ್ಥಾನಗಳ ರಾಜಕೀಯದ ವಿಷಯದಲ್ಲಿ ಸಾಮಾನ್ಯವಾಗಿ ಇತ್ತು. ಈ ಕಾರಣದಿಂದ ಆ ನಾಯಕರುಗಳಿಗೂ ನನ್ನೊಡನೆ ದೇಶೀಯ ಪ್ರಜೆಗಳಿಗೂ ಅಭಿಪ್ರಾಯ ಘರ್ಷಣೆ ಆಗಾಗ ಆಗುತ್ತಿತ್ತು. ಪುಣೆಯಲ್ಲಿ ಒಂದಾನೊಂದು ಸಭೆಯಲ್ಲಿ ಸರ್ ತೇಜಬಹದ್ದೂರ್ ಸಪ್ರುರವರಿಗೂ ನನಗೂ ಘರ್ಷಣೆ ನಡೆಯಿತು. ಅದೆಲ್ಲ ಈಗ ಮುಗಿದ ಕಥೆ.

ಶಿವಸ್ವಾಮಿ ಅಯ್ಯರವರ ಅಂದಿನ ವಾದವನ್ನು ಇಲ್ಲಿ ಸಂಗ್ರಹವಾಗಿ ತಿಳಿಸಬಹುದು; "ಅಯ್ಯಾ, ಈಗ ಬ್ರಿಟಿಷ್ ಇಂಡಿಯದ ಪ್ರಜೆಯಾದ ನಮ್ಮ ಪಾಡೇ ಎಷ್ಟೋ ತೊಡಕು ತೊಡಕಾಗಿದೆ. ಈ ತೊಡಕುಗಳ ಜೊತೆಗೆ ದೇಶೀಯ ಸಂಸ್ಥಾನಗಳ ಮಾತನ್ನು ಸೇರಿಸಿದರೆ ಇನ್ನೂ ದೊಡ್ಡ ತೊಡಕಾಗುತ್ತದೆ. ಅದು ಈಗ ಬೇಡ. ನಾವು ನದೀಪ್ರವಾಹದಲ್ಲಿ ಬಿದ್ದು ಒದ್ದಾಡುತ್ತಿದ್ದೇವೆ. ಈಗ ನಮ್ಮ ಮೈಯ ಮೇಲೆ ನಿಮ್ಮ ಭಾರವನ್ನೂ ಹಾಕಿದರೆ ಇಬ್ಬರೂ ಮುಳುಗಿ ಹೋದೇವು. ನೀವು ಇನ್ನು ಕೊಂಚಕಾಲ ಬೇರೆಯಾಗಿ ನಿಮ್ಮ ಚಳವಳವನ್ನು ಇಟ್ಟುಕೊಂಡಿರಿ; ನಮ್ಮೊಡನೆ ಬೆರೆಸಬೇಡಿ. ನಾವು ಪ್ರವಾಹದಿಂದ ಪಾರಾಗಿ ದಡ ಸೇರಿದ ಮೇಲೆ ನಿಮ್ಮನ್ನೂ ದಡಕ್ಕೆ ಸೆಳೆದುಕೊಳ್ಳುವ ಪ್ರಯತ್ನ ಸುಲಭವಾಗುತ್ತದೆ. ಅದುವರೆಗೆ ನಿಮ್ಮ ಪ್ರಶ್ನೆಯನ್ನು ಇಲ್ಲಿ ಎತ್ತಬೇಡಿ."

ನೆಹರೂ ಮಹಾಶಯನು ಈ ಪ್ರಶ್ನೆಯ ದ್ವಿಮುಖತೆಯನ್ನು ಒಪ್ಪಲಿಲ್ಲ. ಆತನ ಆತುರದಲ್ಲಿ ಬ್ರಿಟಿಷರು ಸಹಕರಿಸಿದರು. ತಮ್ಮನ್ನೇ ನಂಬಿಕೊಂಡಿದ್ದ ದೇಶೀಯ ರಾಜರನ್ನು ಮೌಂಟ್ ಬ್ಯಾಟನ್ ವೈಸ್‌ರಾಯನು ಹಠಾತ್ತಾಗಿ ಕೈ ಬಿಟ್ಟ. ಸಂಸ್ಥಾನಿಕ ಪ್ರಜೆಯನ್ನು ಯಾರೂ ಕೇಳಲಿಲ್ಲ. ಸಮಸ್ತ ಇಂಡಿಯದ ರಾಜ್ಯವ್ಯವಸ್ಥೆಯು ಸಂಸ್ಥಾನಗಳನ್ನೂ ಕಬಳಿಸಿತು. ಸಂಸ್ಥಾನಗಳ ಹೆಸರು ಗುರುತಿಲ್ಲದಂತೆ ಅಳಿಸಿಹೋಯಿತು.

***

ಶಿವಸ್ವಾಮಿ ಅಯ್ಯರ್ ಅವರ ಬುದ್ಧಿ ಕೆಲಸಮಾಡುತ್ತಿದ್ದ ರೀತಿಯನ್ನು ನಿದರ್ಶನ ಪಡಿಸುವ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ.

ಒಂದಾನೊಂದು ಲಿಬರಲ್ ಕಾನ್ಫರೆನ್ಸ್ ಸೇರತಕ್ಕದ್ದಿತು. ಆ ಕಾನ್ಫರೆನ್ಸಿನ ಅಂಗೀಕಾರಕ್ಕಾಗಿ ಕೆಲವು ನಿರ್ಣಯಗಳ ಕರಡುಗಳನ್ನು ಸಿದ್ಧಪಡಿಸಬೇಕಾಗಿತ್ತು. ಈ ಕರಡಿನ ಕೆಲಸವನ್ನು ಸಭಿಕರು ಶಿವಸ್ವಾಮಿ ಅಯ್ಯರ್ ಅವರಿಗೆ ಒಪ್ಪಿಸಿದ್ದರು. ಕರಡು ನಿರ್ಣಯದ ವಿಷಯಗಳಲ್ಲಿ ಒಂದು, ಸೈನ್ಯದ ಇಲಾಖೆಗೆ ಸಂಬಂಧಪಟ್ಟದ್ದು. ಆ ಕಾಲ ಬ್ರಿಟಿಷರ ಅಧಿಪತ್ಯದ್ದಷ್ಟೆ. ಸೈನ್ಯಾಧಿಕಾರಗಳನ್ನು ಬ್ರಿಟಿಷ್ ಸರಕಾರವು ಇಂಡಿಯ ದೇಶದವರಿಗೆ ಬಿಟ್ಟುಕೊಡಲು ಹಿಂಜರಿಯುತ್ತಿತ್ತು.

# ಉಭಯ ಸಂಕಟ

ಬ್ರಿಟಿಷರ ಈ ಮನೋಭಾವ ಎಲ್ಲರಿಗೂ ತಿಳಿದದ್ದಾಗಿತ್ತು. ಸೈನ್ಯಾಧಿಕಾರವನ್ನು ಅವರು ಇಂಡಿಯ ದೇಶದವರಿಗೆ ಸುಲಭವಾಗಿ ಬಿಟ್ಟುಕೊಟ್ಟಾರೆ? ಆದರೆ ಸೈನ್ಯಾಧಿಕಾರವನ್ನು ವಿನಾಯಿಸಿ ಸ್ವರಾಜ್ಯವೆಂದರೆ ಅರ್ಥವೇನು? ಸೈನ್ಯವಿಲ್ಲದೆ ರಾಜ್ಯವಿಲ್ಲ. ಆದದ್ದರಿಂದ ಸೈನ್ಯಾಧಿಕಾರವನ್ನು ನಾವು ಕೇಳಲೇಬೇಕು, ಹಾಗಾದರೆ ಉಪಾಯವೇನು? ಶಿವಸ್ವಾಮಿ ಅಯ್ಯರ್ ಅವರಿಗೆ ಇದು ಇಕ್ಕಟ್ಟು. ಬ್ರಿಟಿಷರು ಕೊಡುವ ಹಾಗಿಲ್ಲ; ಪಡೆದುಕೊಳ್ಳದೆ ನಮಗೆ ಸ್ವರಾಜ್ಯ ಸಿದ್ಧಿಯಾಗುವಂತಿಲ್ಲ.

ಶಿವಸ್ವಾಮಿ ಅಯ್ಯರ್ ಅವರು ಇಂಡಿಯ ದೇಶದ ಸೈನ್ಯದ ಇಲಾಖೆಯನ್ನೆಲ್ಲ ಅಮೂಲಾಗ್ರವಾಗಿ ಪರಿಶೀಲನೆ ಮಾಡಿದ್ದವರು. ಸೈನ್ಯದಲ್ಲಿ ಎಷ್ಟು ಭಾಗಗಳಿವೆ, ಎಷ್ಟು ತುಕಡಿಗಳಿವೆ, ಅಧಿಕಾರ ಸೋಪಾನದಲ್ಲಿ ಎಷ್ಟು ಮೆಟ್ಟಿಲುಗಳಿವೆ, ಸೈನ್ಯಕ್ಕೆ ಅವಶ್ಯವಾದ ದಿರಸು, ಆಯುಧಗಳು, ವಾಹನಗಳು, ಇತರ ಪರಿಕರ-ಈ ಎಲ್ಲ ತಪಶೀಲನ್ನೂ ಶಿವಸ್ವಾಮಿ ಅಯ್ಯರ್ ಅವರು ಕಾರ್ಯಕಾರಣ ವಿಮರ್ಶೆಯೊಡನೆ ತಿಳಿದುಕೊಂಡಿದ್ದರು. ಅವರ ಈ ಸೈನ್ಯ ಪಾಂಡಿತ್ಯವನ್ನು ಕುರಿತು ಜನ ಹಾಸ್ಯದ ಧ್ವನಿಯಲ್ಲಿ ಶ್ಲಾಘನೆ ಮಾಡುತ್ತಿದ್ದದ್ದುಂಟು.

“ಈ ಬ್ರಾಹ್ಮಣ, ಈ ಸಂಸ್ಕೃತಪಂಡಿತ, ಈ ಪೂರ್ವಾಚಾರ ವಿಶ್ವಾಸಿ, ಈ ವಾಗ್ವಾದ ಕುಶಲನಾದ ಲಾಯರಿ, ಈ ನೆಮ್ಮದಿವಂತ-ಈತನಿಗೆ ಹೇಗೆ ಬಂತು ಈ ಸೈನ್ಯದ ವಿಚಾರದ ತಿಳಿವಳಿಕೆ? ಉತ್ಸಾಹ?” ಎಂದು ಜನ ಅನ್ನುತ್ತಿದ್ದರು.

ಈಗ ಹೋಗೋಣ ಶಿವಸ್ವಾಮಿ ಅಯ್ಯರ್ ಅವರಿಗೆ ಬಂದಿದ್ದ ಉಭಯ ಸಂಕಟ ವಿಚಾರಕ್ಕೆ. ಕಾನ್‌ಫರೆನ್ಸಿಗಾಗಿ, ನಿರ್ಣಯದ ಕರಡನ್ನು ಹೇಳಿ ಬರೆಯಿಸುತ್ತಿದ್ದರು. ಯಾರೋ ಬರೆದುಕೊಳ್ಳುತ್ತಿದ್ದರು. ಹೇಳುವಾಗ ಮಾತು ಮಾತಿಗೂ ಕೊಂಚ ಆಲೋಚಿಸುವರು. ವಾಕ್ಯವನ್ನು ಆಲೋಚಿಸಿ ಒಂದೆರಡು ಮಾತಾದ ಬಳಿಕ “ಕೊಂಚ ತಡೆಯಿರಿ” ಎನ್ನುವರು. ಆಗ ಪರ್ಯಾಲೋಚನೆ ಹೀಗೆ: “ಸೈನ್ಯಾಧಿಕಾರಗಳಲ್ಲಿ ಶೇಕಡ ಐವತ್ತರಷ್ಟನ್ನು ಇಂಡಿಯದವರಿಗೆ ಕೊಡಬೇಕೆಂದು ಕೇಳಿದರೆ ನ್ಯಾಯ, ಆದರೆ ಬ್ರಿಟಿಷರು ಅಷ್ಟಕ್ಕೊಪ್ಪಲಾರರು. ಶೇ. ಇಪ್ಪತ್ತೈದರಷ್ಟನ್ನು ಕೇಳಿದರೆ ಅವರು ಕೊಟ್ಟಾರೋ ಹೇಗೋ. ಆದರೆ ಅದು ತೀರಾ ಸ್ವಲ್ಪ, ಎಷ್ಟೆಷ್ಟೂ ಸಾಲದು. ಮೂರರಲ್ಲೊಂದು ಭಾಗವನ್ನು ಕೇಳೋಣವೆ? ಅದೂ ಕೊಂಚವೇ. ಹಾಗಾದರೆ ಶೇ. ಐವತ್ತಕ್ಕೂ ಮೂವತ್ತಕ್ಕೂ ನಡುವೆ

ಒಂದು ಪ್ರಮಾಣವನ್ನು ಬೇಕೆಂದು ಕೇಳಬಹುದು. ಶೇ. ನಲವತ್ತು ಎಂದರೆ ಕೊಟ್ಟಾರೋ? ಅದು ನಮ್ಮ ಯೋಗ್ಯತೆಯ ದೃಷ್ಟಿಯಿಂದ ಅತಿಯಲ್ಲವೊ…”

# ಅಂತಸ್ಸಾಕ್ಷಿ

ಹೀಗೆ ವಿಚಾರ ಸರಣಿ. ಅಲ್ಲಿ ಕೊಡುವವರೂ ಇರಲಿಲ್ಲ; ಯೋಗ್ಯತೆಯ ವಿಚಾರ ಮಾಡಿದವರು ಮೊದಲೇ ಇರಲಿಲ್ಲ. ಆದರೆ ಶಿವಸ್ವಾಮಿ ಅಯ್ಯರ್ ಅವರ ಅಂತಸ್ಸಾಕ್ಷಿ ಎಂಬುದೊಂದಿತ್ತಲ್ಲ? ಸುಲಭವೋ ಕಷ್ಟವೋ; ಇಷ್ಟವೋ ಅನಿಷ್ಟವೋ; ನ್ಯಾಯವಾಗಂತೂ ಇರಬೇಕು. ಆ ನ್ಯಾಯ ಹೇಗೆ? ಇದು ಶಿವಸ್ವಾಮಿ ಅಯ್ಯರ್ ಅವರ ನೈಜ ಗುಣ. ತಮ್ಮ ಅಂತಸ್ಸಾಕ್ಷಿ ಒಪ್ಪಬೇಕು.

> ನಿಂದಂತು ನೀತಿನಿಪುಣಾ ಯದಿ ವಾ ಸ್ತುವನ್ತು ।
> ನ್ಯಾಯ್ಯಾತ್ಪದಾತ್ ಪ್ರವಿಚಲಂತಿ ಪದಂ ನ ಧೀರಾ ॥

ಕಾನ್ಷನ್ಸ್ ಎಂಬುದು ಶಿವಸ್ವಾಮಿ ಅಯ್ಯರ್ ಅವರಿಗೆ ಅಗ್ಗದ ಸರಕಾಗಿರಲಿಲ್ಲ. ಜನಾಭಿಪ್ರಾಯವೆಂಬ ದೈವದ ಮುಂದೆ ಕೂಡ ಅವರು ಅಂತಸ್ಸಾಕ್ಷಿಯನ್ನು ಮರೆತು ತಲೆಬಾಗಿದವರಲ್ಲ.

ಶಿವಸ್ವಾಮಿ ಅಯ್ಯರ್ ಅವರು ಅವಸಾನಕಾಲದಲ್ಲಿ ತಮ್ಮ ಪ್ರಿಯ ಪಂಡಿತರಾದ ರಾಮಚಂದ್ರಶಾಸ್ತ್ರಿಗಳವರನ್ನು ಹತ್ತಿರಕ್ಕೆ ಕರೆದು ಶ್ರೀಮದ್ಭಾಗವತದಿಂದ ರುಕ್ಮಿಣೀದೇವಿ ಶ್ರೀಕೃಷ್ಣನಿಗೆ ಹೇಳಿಕಳುಹಿಸಿದ ವಾರ್ತೆಯನ್ನೊಳಗೊಂಡ ಶ್ಲೋಕಗಳನ್ನೂ ಭಾಗವತದಲ್ಲಿಯ ಇನ್ನೊಂದೆರಡು ಸ್ತೋತ್ರಗಳನ್ನೂ ಕೇಳುತ್ತ ಕಳೇಬರವನ್ನು ತ್ಯಜಿಸಿದರು.

# ೨ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು

ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳವರನ್ನು ಕುರಿತು ಬರೆಯುವುದಾಗಲಿ ಬರೆಯಿಸುವುದಾಗಲಿ ನನಗೆ ತುಂಬ ಕಷ್ಟದ ಕೆಲಸ. ನಾನು ಎಲ್ಲಿ ಮೊದಲು ಮಾಡಬೇಕು, ಎಲ್ಲಿ ಕೊನೆ ಎಂಬ ವಿಷಯಾನುಕ್ರಮವೇ ಒಂದು ಕಷ್ಟಾಂಶ. ಅದಕ್ಕಿಂತ ಹೆಚ್ಚಾಗಿ ನನ್ನ ಮನಸ್ಸಿನ ಆವೇಗವನ್ನು ತಡೆದುಕೊಳ್ಳುವುದು ಕಷ್ಟ. ಅವರನ್ನು ನಾನು ಚಿಕ್ಕತಂದೆ ಎಂಬಂತೆ ಭಾವಿಸಿದ್ದೆ. ಅವರೂ ಹಾಗೆಯೇ ನನ್ನಲ್ಲಿ ಮಮತೆಯಿಟ್ಟಿದ್ದರು. ಈ ಮಮತೆಯ ಉದ್ವೇಗವು ತಪ್ಪಿಸಿಕೊಳ್ಳಲಾಗದ್ದು. ಆದರೆ ಅದರಿಂದ ನಿಷ್ಪಕ್ಷಪಾತತೆಯೆಂಬ ಗುಣಕ್ಕೆ ಬಾಧೆ ತಟ್ಟಬಹುದು. ನನ್ನ ಬಾಯಿಂದ ಒಂದು ಮಾತು ಹೆಚ್ಚಾಗಿ ಬಂದೀತು. ಆ ಭೀತಿಯಿಂದ ಮಾತು ಬಿಟ್ಟರೆ ಅದು ನ್ಯಾಯಕ್ಕಿಂತ ಕಡಮೆಯಾದೀತು. ಹೀಗೆ ಸಾಮಂಜಸ್ಯವನ್ನು ಕಾಣುವ ಕಷ್ಟ ದೊಡ್ಡದಾಗಿದ್ದರೂ, ಶ್ರೀನಿವಾಸ ಶಾಸ್ತ್ರಿಗಳವರನ್ನು ಸ್ಮರಿಸುವುದರಲ್ಲಿ ನನ್ನ ಮನಸ್ಸಿಗೆ ಒಂದು ಸಂತೋಷವುಂಟು. ಅದು ನನಗೆ ಕರ್ತವ್ಯವೆಂಬ ಶ್ರದ್ಧೆಯೂ ಉಂಟು. ಅದು ಮಹಾಜನರಿಗೆ ನಾನು ತಿಳಿಸಬೇಕಾದದ್ದೆಂಬ ಸುಕೃತಗೌರವವೂ ಉಂಟು. ಆದದ್ದರಿಂದ ಸಮಯಸ್ಫೂರ್ತಿಯಿಂದ ಬಂದದ್ದನ್ನು, ಆಯಾ ಕ್ಷಣಕ್ಕೆ ನೆನಪು ಬಂದಂತೆ, ಆಯಾ ಕ್ಷಣಕ್ಕೆ ಮಾತು ದೊರೆತಂತೆ, ಇಲ್ಲಿ ಗುರುತುಮಾಡಲು ಪ್ರಯತ್ನಿಸುತ್ತೇನೆ.

ಶ್ರೀನಿವಾಸ ಶಾಸ್ತ್ರಿಗಳ ಜೀವನಚರಿತ್ರೆಯನ್ನು ನನ್ನ ಮಾನ್ಯ ಮಿತ್ರರು ಶ್ರೀಮಾನ್ ಪಿ. ಕೋದಂಡರಾಯರು ಇಂಗ್ಲಿಷಿನಲ್ಲಿ ವಿಸ್ತಾರವಾಗಿ, ಸುಂದರವಾಗಿ ಬರೆದಿದ್ದಾರೆ. ಶಾಸ್ತ್ರಿಗಳ ಜನ್ಮದಿನ ಮೊದಲಾದ ತಪಶೀಲುಗಳನ್ನು ಅಲ್ಲಿ ಕಾಣಬಹುದು.

## ಡೆನ್ ಹ್ಯಾಮ್

ವರ್ಷ ೧೯೧೯ ಇರಬಹುದು. ಆಗ ಮದರಾಸಿನಲ್ಲಿ 'ಎಜುಕೇಷನಲ್ ರೆವ್ಯು' (Educational Review) ಎಂಬ ಮಾಸಪತ್ರಿಕೆ ಪ್ರಕಟವಾಗುತ್ತಿತ್ತು. ಅದನ್ನು ಶ್ರೀನಿವಾಸ ವರದಾಚಾರಿ ಅಂಡ್ ಕಂಪನಿ ಎಂಬ ಪುಸ್ತಕ ವ್ಯಾಪಾರ ಸಂಸ್ಥೆ ಪ್ರಕಟಿಸುತ್ತಿತ್ತು. ಅದು ಬಹಳ ದೊಡ್ಡ ಸಂಸ್ಥೆ. ಸುಮಾರು ೩೦ ವರ್ಷ ಪ್ರಸಿದ್ಧವಾಗಿ ಕೆಲಸ ಮಾಡಿ ಕಡೆಗೆ ಒಂದು ಅಗ್ನಿಯ ಅಪಘಾತದಿಂದ ನಷ್ಟಪಟ್ಟು ಆಮೇಲೆ ಮರೆಯಾಯಿತು. ಈಗ ಅದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಆ ಮಾಸಪತ್ರಿಕೆಗೆ ಸಂಪಾದಕರಾಗಿದ್ದವರು ಥಾಮಸ್ ಡೆನ್‌ಹ್ಯಾಮ್ (Thomas Denham) ಎಂಬವರು. ಇವರು ಆಗ ಪಚ್ಚೈಯಪ್ಪ ಕಾಲೇಜಿನ ಅಧ್ಯಕ್ಷರಾಗಿದ್ದರು. ಡೆನ್‌ಹ್ಯಾಮ್ ಅವರು ಚರಿತ್ರೆಯಲ್ಲಿಯೂ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳ ಪಾಠದಲ್ಲಿಯೂ ಪಂಡಿತರಾಗಿ ಪ್ರವೀಣರೆನಿಸಿದ್ದರು. ಆಮೇಲೆ ಇವರು ಮೈಸೂರು ಮಹಾರಾಜ ಕಾಲೇಜಿನ ಅಧ್ಯಕ್ಷರಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಪೂರ್ವಭಾವಿಯಾಗಿ ಯೋಜನೆಗಳನ್ನು ಸಿದ್ಧಪಡಿಸಿ, ಬಳಿಕ ರಿಜಿಸ್ಟ್ರಾರರಾಗಿಯೂ ಇದ್ದರು. ಸತ್ಪುರುಷರು. ನಮ್ಮ ಎಚ್. ವಿ. ನಂಜುಂಡಯ್ಯನವರಿಗೆ ಡೆನ್‌ಹ್ಯಾಮ್ ಅವರಲ್ಲಿ ತುಂಬ ವಿಶ್ವಾಸ.

ಡೆನ್‌ಹ್ಯಾಮ್‌ರವರು 'ಎಜುಕೇಷನಲ್ ರೆವ್ಯು' ಪತ್ರಿಕೆಯ ಸಂಪಾದಕರೆಂದು ಹೆಸರಾಗಿದ್ದರೂ, ವಾಸ್ತವವಾಗಿ ಪತ್ರಿಕೆಯ ಕಾರ್ಯವನ್ನು ನಡಸುತ್ತಿದ್ದವರು ಅದೇ ಪಚ್ಚೈಯಪ್ಪ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಕೆ. ಬಿ. ರಾಮನಾಥಯ್ಯರ್ ಅವರು.

# ರಾಮನಾಥಯ್ಯರ್

ರಾಮನಾಥಯ್ಯರ್ ಅವರನ್ನು ಕುರಿತು ವಿಶೇಷವಾಗಿ ಒಂದು ಮಾತು ಹೇಳಬೇಕಾದದ್ದಿದೆ. ಅವರ ಇಂಗ್ಲಿಷ್ ಪಾಂಡಿತ್ಯ ಎಷ್ಟು ಮಟ್ಟಿನದೆಂದರೆ, ಇಂಡಿಯ ದೇಶದ ವೈಸರಾಯರಲ್ಲಿ ಮಹಾ ವಿದ್ವಾಂಸನೆಂದೂ ಮಹೋದ್ಧತನೆಂದೂ ಹೆಸರಾಗಿದ್ದ ಲಾರ್ಡ್‌ಕರ್ಜನ್ನರು ರಾಮನಾಥಯ್ಯರ್ ಅವರ ಪಾಂಡಿತ್ಯವನ್ನು ಮೆಚ್ಚಿಕೊಂಡು ತಾನು ನಿಯಮಿಸಿದ ಎಜುಕೇಷನ್ ಕಮಿಷನ್ ಸಮಿತಿಗೆ ಅಯ್ಯರ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿದ. ವ್ಯಕ್ತಿಶಃ ರಾಮನಾಥಯ್ಯರ್ ಅವರು ನಯವಿನಯಗಳಿಂದಲೂ ಔದಾರ್ಯ ನಿಷ್ಪಕ್ಷಪಾತಗಳಿಂದಲೂ ಸಭ್ಯ ಶ್ರೇಷ್ಠರೆಂದು ಗಣ್ಯರಾಗಿದ್ದರು.

ಗೋವಿಂದರಾಘವಯ್ಯರ್ ಅವರನ್ನು ಲಿಬರಲ್ ಪಕ್ಷದ ವಾರ್ಷಿಕ ಅಧಿವೇಶನಕ್ಕೆ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಆಗ ಅದನ್ನು ಕುರಿತು ಮದರಾಸಿನ ‘ಹಿಂದೂ’ ಪತ್ರಿಕೆ ಹಾಸ್ಯಮಾಡಿ ಟೀಕಿಸಿತು- “ಲಿಬರಲ್‌ಗಳು ಕುಬ್ಜರು” ಎಂದು. ಪ್ರೊ ॥ ರಾಮನಾಥಯ್ಯರ್ ಅವರು ಇದಕ್ಕೆ ಉತ್ತರ ಬರೆದು “ನಿಮ್ಮ ಮಾತು ಬಹು ಚೆನ್ನಾಗಿದೆ. ಇಲ್ಲಿ ನಾವೆಲ್ಲ ಕುಬ್ಜರೇ. ಇಂಥ ಕುಳ್ಳರ ಸಭೆಗೆ ನಿಮ್ಮಂಥ ಅತ್ಯುನ್ನತರನ್ನು ಬರಮಾಡಿಕೊಳ್ಳಲಾದೀತೆ? ಗೋವಿಂದರಾಘವಯ್ಯರ್ ನೀವು ಹೇಳುವಂತೆ ಕುಳ್ಳರು (pigmy); ಅವರ ಅನುಯಾಯಿಗಳಾದ ನಾವೆಲ್ಲ ಕುಳ್ಳರೇ...” ಎಂದರು.

# ನೆಸ್‌ಫೀಲ್ಡ್

‘ಎಜುಕೇಷನಲ್ ರೆವ್ಯು’ ಪತ್ರಿಕೆಗೆ ವಿಮರ್ಶನೆಗಾಗಿ ಆಗಾಗ ಗ್ರಂಥಗಳು ಬರುತ್ತಿದ್ದವು. ಹಾಗೆ ಬಂದ ಗ್ರಂಥಗಳಲ್ಲಿ ಮ್ಯಾಕ್‌ಮಿಲ್ಲನ್ ಕಂಪನಿಯವರು ಪ್ರಕಟಪಡಿಸಿದ ವ್ಯಾಕರಣ ಗ್ರಂಥಾವಳಿ ಇತ್ತು. ಆ ಗ್ರಂಥಾವಳಿಯಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗಳಿಗೆ ಉದ್ದಿಷ್ಟವಾದ ಪುಸ್ತಕಗಳು ಮೂರೋ ನಾಲ್ಕೋ ಇದ್ದವು. ಗ್ರಂಥಕರ್ತ ಜೆ. ಸಿ. ನೆಸ್‌ಫೀಲ್ಡ್ ಎಂಬಾತ. ಈ ಗ್ರಂಥಗಳನ್ನು ವಿಮರ್ಶನೆಗಾಗಿ ಶ್ರೀನಿವಾಸ ಶಾಸ್ತ್ರಿಗಳವರ ಕೈಗೆ ಪತ್ರಕರ್ತರು ಕೊಟ್ಟರು. ಅದರ ಮೇಲೆ ಬಂದ ವಿಮರ್ಶೆಗಳು ‘ಎಜುಕೇಷನಲ್ ರೆವ್ಯು’ ಪತ್ರಿಕೆಯಲ್ಲಿ ಪ್ರಸಿದ್ಧಗೊಂಡವು.

ಆ ಕಾಲದಲ್ಲಿ ಮೈಸೂರು ಸರಕಾರದ ವಿದ್ಯಾ ಇಲಾಖೆಯವರು ‘ಎಜುಕೇಷನಲ್ ರೆವ್ಯು’ ಪತ್ರಿಕೆಯನ್ನು ಸಂಸ್ಥಾನದ ಎಲ್ಲ ವಿದ್ಯಾಶಾಲೆಗಳಿಗೂ ತಿಂಗಳು ತಿಂಗಳೂ ಕ್ರಮವಾಗಿ ಕಳುಹಿಸುತ್ತಿದ್ದರು. ನನ್ನ ಶಾಲೆಯಲ್ಲಿ ಇಂಗ್ಲಿಷ್ ಉಪಾಧ್ಯಾಯರಾಗಿದ್ದ ಕೆ. ವಿ. ರಾಮಸ್ವಾಮಯ್ಯರ್ [1] ಅವರಿಗೆ ‘ಎಜುಕೇಷನಲ್ ರೆವ್ಯು’ ಬಂದ ದಿನ ಹಬ್ಬ. ವಿದ್ಯಾರ್ಥಿಗಳನ್ನೆಲ್ಲ ಎದುರಿಗೆ ಕೂಡಿಸಿಕೊಂಡು ಆ ಪತ್ರಿಕೆಯ ಲೇಖನಗಳನ್ನು ತಾವೇ ಓದುವರು. ಒಂದೊಂದು ಸಾರಿ ವಿದ್ಯಾರ್ಥಿಗಳಿಂದ ಕೆಲವು ಲೇಖನಗಳನ್ನು ಓದಿಸುವರು. ಆಗ ಗ್ರಂಥವಾಚನವು ಪಾಠಕ್ರಮದಲ್ಲಿ ಒಂದು ಅವಶ್ಯವಾದ ಅಂಶ. ಉಚ್ಚಾರಣೆಯನ್ನೂ ಧ್ವನಿಯನ್ನೂ ಪರಿಷ್ಕಾರಪಡಿಸುವುದೇ ಅದರ ಉದ್ದೇಶ.

# ವಿಮರ್ಶನ ಲೇಖನಗಳು

‘ಎಜುಕೇಷನಲ್ ರೆವ್ಯು’ ಪತ್ರಿಕೆಯಲ್ಲಿ ನೆಸ್‌ಫೀಲ್ಡ್ ವೈಯಾಕರಣಿಯ ಇಂಗ್ಲಿಷ್ ವ್ಯಾಕರಣಗ್ರಂಥಗಳ ವಿಮರ್ಶನಲೇಖನಗಳು ಬಂದಾಗ ನಮ್ಮ ಮೇಷ್ಟರು ರಾಮಸ್ವಾಮಯ್ಯರ್ ಅವರಿಗೆ ಉತ್ಸಾಹದ ಆವೇಶ. ಎಲ್ಲ ಕೆಲಸವನ್ನೂ ಬದಿಗಿರಿಸಿ ಆ ಲೇಖನಗಳನ್ನು ನಮಗೆ ಓದಿಹೇಳುತ್ತಿದ್ದರು. ಆ ಟೀಕೆಗಳ ವಿಷಯ ಕೆಲವು ಇಂಗ್ಲಿಷ್ ಆಖ್ಯಾತಪ್ರತ್ಯಯಗಳ ರೂಪ ರೂಪಾಂತರಗಳು, ಅವುಗಳಿಗೆ ತಕ್ಕ ಪ್ರಯೋಗಸಂದರ್ಭಗಳು:

1. Will and shall
2. Would and should
3. May and might
4. Must and ought

ಇವುಗಳ ಜೊತೆಗೆ ಕೆಲವು ಸರ್ವನಾಮ ಶಬ್ದಗಳ ಚರ್ಚೆಯೂ ಇತ್ತು.

ನೆಸ್‌ಫೀಲ್ಡ್ ವೈಯಾಕರಣಿ ಮಾಡಿದ್ದ ಕೆಲವು ಪ್ರಮಾದಗಳನ್ನು ಶ್ರೀನಿವಾಸಶಾಸ್ತ್ರಿಗಳು ತಮ್ಮ ವಿಮರ್ಶೆಯಲ್ಲಿ ಎತ್ತಿ ತೋರಿಸಿದ್ದರು. ಅನೇಕ ಪ್ರಮಾಣಗಳನ್ನು ಕೊಟ್ಟು ಉದಾಹರಣೆಗಳೊಡನೆ ಪುಷ್ಟೀಕರಿಸಿದ್ದರು. ಅದರ ಮೇಲೆ ಟೀಕೆಗಳು ಪುಂಖಾನುಪುಂಖವಾಗಿ ಬೆಳೆದವು. ಆ ಚರ್ಚೆ ಕೆಲವು ತಿಂಗಳು ನಡೆಯಿತು. ಆ ದೀರ್ಘವಾದ ಚರ್ಚೆಯಲ್ಲಿ ಭಾಗವಹಿಸಿದವರು ಶಾಸ್ತ್ರಿಗಳ ಜೊತೆಗೆ ಪ್ರೊ॥ ರಾಮನಾಥಯ್ಯರ್, ಪುದುಕೋಟೆಯ ಕಾಮೇಶ್ವರ ಅಯ್ಯರ್, ಅವರ ಸೋದರ ಶಂಕರ ಕಾಮೇಶ್ವರಯ್ಯರ್, ‘ಸೋಷಲ್‌ರಿಫಾರ್ಮರ್’ ಪತ್ರಿಕೆಯ ಕೆ. ನಟರಾಜನ್, ಇನ್ನೂ ಇಬ್ಬರು ಮೂವರು ದ್ರಾವಿಡ ಜನರು. ಇವರು ಹೇಳಿದ ಕಕ್ಷಿಗಳಿಗೆ ಪ್ರತಿಕಕ್ಷಿಗಳಾಗಿ ಮುಂದೆ ಬಂದವರು ಬೆಂಗಳೂರಿನ ಜೆ. ಎಚ್. ವಾಲ್ಟನ್ (ಈತ ‘Synthesis’ ಎಂಬ ಗ್ರಂಥ ಬರೆದಿದ್ದ), ಷೆಪರ್ಡ್ (ಈತನೂ ವ್ಯಾಕರಣಗ್ರಂಥ ಬರೆದು ಪ್ರಸಿದ್ಧನಾಗಿದ್ದ), ಮೆಕ್‌ಮಾರ್ಡಿ ಎಂಬಾತ, ಇನ್ನೂ ಕೆಲವರು ಐರೋಪ್ಯರು ಅಥವಾ ಆಂಗ್ಲೋ ಇಂಡಿಯನರು.

ಈ ವಾದಸರಣಿಯಲ್ಲಿ ಅಯ್ಯರುಗಳು ಇಂಗ್ಲಿಷ್ ವ್ಯಾಕರಣದ ನಿಯಮಗಳನ್ನು ಹೇಳುವುದು; ಪರಂಗಿಯವರು ಉತ್ತರ ಹೇಳಹೊರಟು ಹಲ್ಲುಮುರಿದು ಹಿಂತಿರುಗುವುದು-ಇದು ಬಾಲ್ಯದಲ್ಲಿದ್ದ ನಮಗೆ ಒಂದು ದೊಡ್ಡ ಚೋದ್ಯ. ಇಂಗ್ಲಿಷ್ ಜನವನ್ನು ಅವರ ವ್ಯಾಕರಣದಲ್ಲಿಯೇ ನಮ್ಮ ಜನ ಸೋಲಿಸುತ್ತಿದ್ದಾರಲ್ಲ!-ಇದು ನಮ್ಮ ಮೆಚ್ಚಿಕೆ.

ಈ ಚರ್ಚೆ ಏಳೆಂಟು ತಿಂಗಳು ನಡೆದ ಮೇಲೆ ಮ್ಯಾಕ್‌ಮಿಲ್ಲನ್ ಕಂಪನಿಯವರೇ ತಮ್ಮ ಗ್ರಂಥಗಳನ್ನು ತಿದ್ದಿಸಿ ಪರಿಷ್ಕಾರ ಪಡಿಸುವುದಾಗಿ ಒಪ್ಪಿಕೊಂಡರು.

ಶ್ರೀನಿವಾಸ ಶಾಸ್ತ್ರಿಗಳವರ ಚರಿತ್ರೆಯಲ್ಲಿ ಇದೊಂದು ಕುತೂಹಲಕಾರಿಯಾದ ಪ್ರಕರಣ. ಅವರನ್ನು ನಾನು ಕಾಣುವುದಕ್ಕೆ ಎಷ್ಟೋ ವರ್ಷಗಳ ಹಿಂದೆಯೇ ನಾನು ಅವರ ಪಾಂಡಿತ್ಯಕ್ಕೆ ಮನಸೋತಿದ್ದೆನೆಂಬುದಕ್ಕೆ ರುಜುವಾತಾಗಿ ಈ ಕಥೆ ಹೇಳಿದೆ.

ಶ್ರೀನಿವಾಸಶಾಸ್ತ್ರಿಗಳನ್ನು ನಾನು ಮೊದಲು ಕಂಡದ್ದು ೧೯೧೦-೧೧ರಲ್ಲಿ ಎಂದು ಜ್ಞಾಪಕ.

# ಪರಿಚಯಾರಂಭ

ಅದಕ್ಕೆ ಹಿಂದೆಯೇ ಅವರು ನನ್ನನ್ನು ಕಂಡಿದ್ದರು. ೧೯೦೮ರ ಅಕ್ಟೋಬರಿನಲ್ಲಿ ದಸರಾ ಬರುವುದಕ್ಕೆ ಮುಂಚೆ ಒಂದು ರಾತ್ರಿ 'ಮೈಸೂರು ಸ್ಟ್ಯಾಂಡರ್ಡ್' ಪತ್ರಿಕೆಯ ಶ್ರೀನಿವಾಸ ಅಯ್ಯಂಗಾರ್ಯರೂ ನಾನೂ ಮದರಾಸಿಗೆ ಹೋಗುವುದಕ್ಕಾಗಿ ಬೆಂಗಳೂರು ರೈಲ್ವೆಸ್ಟೇಷನ್ನಿಗೆ ಹೋಗಿದ್ದೆವು. ಆ ಸಮಯದಲ್ಲಿಯೇ ಶ್ರೀನಿವಾಸ ಶಾಸ್ತ್ರಿಗಳು ಬೆಂಗಳೂರಿಗೆ ಬಂದದ್ದು. ಅದೇ ರಾತ್ರಿ, ಅದೇ ರೈಲಿನಿಂದ, ಮದರಾಸಿಗೆ ಹೋಗುವುದಕ್ಕಾಗಿ, ನಾವು ರೈಲಿನೊಳಗೆ ಹತ್ತುತ್ತಿದ್ದೆವು. ಅದನ್ನು ಕಂಡ ಶ್ರೀನಿವಾಸಯ್ಯಂಗಾರ್ಯರು ಶಾಸ್ತ್ರಿಗಳ ಬಳಿಗೆ ಹೋಗಿ ಮಾತನಾಡಿಸಿ ನಾನು ನಿಂತಿದ್ದ ಜಾಗಕ್ಕೆ ಕರೆತಂದು ನಮಗಿಬ್ಬರಿಗೂ ಪರಿಚಯ ಮಾಡಿಸಿದರು. ಇದು ಒಂದು ಕ್ಷಣಮಾತ್ರದಲ್ಲಿ ನಡೆದ ಕೆಲಸ. ಆಮೇಲೆ ಅಯ್ಯಂಗಾರ್ಯರು ಶಾಸ್ತ್ರಿಗಳೊಡನೆ ನಡೆದು ಅವರನ್ನು ಅವರ ಗಾಡಿಯಲ್ಲಿ ಕೂಡಿಸಿ ಬಂದರು. ಅನಂತರ ನನಗೆ ಹೇಳಿದರು: "ಶ್ರೀನಿವಾಸ ಶಾಸ್ತ್ರಿಗಳು ದೊಡ್ಡಮನುಷ್ಯರು. ಗೋಖಲೆಯವರ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಕಾರ್ಯಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ನೀನು ಅವರನ್ನು ಉತ್ತರೋತ್ತರ ಪರಿಚಯ ಮಾಡಿಕೊಳ್ಳಬೇಕಾದದ್ದು. ಈಗ ನಿನ್ನ ವಿಷಯವನ್ನು ನಾನು ಅವರಿಗೆ ಸೂಕ್ಷ್ಮವಾಗಿ ಹೇಳಿದೆ. ಅವರು ನನ್ನನ್ನು ಕೇಳಿದರು: "ಏನು ಸಾರ್? ನೀವು ಈ ಹುಡುಗನ ವಿಚಾರವನ್ನು ಚೆನ್ನಾಗಿ ಪರೀಕ್ಷೆ ಮಾಡಿ ತಿಳಿದುಕೊಂಡಿದ್ದೀರೋ? ಏಕೆಂದರೆ ಈ ಕಾಲದಲ್ಲಿ ಎಷ್ಟೋ ಮಂದಿ ದೇಶ ಸೇವೆಯ ಸೋಗುಹಾಕಿಕೊಂಡು ನಿಮ್ಮಂಥವರಲ್ಲಿ ನನ್ನಂಥವರಲ್ಲಿ ಬರುತ್ತಾರೆ. ನಮ್ಮೊಡನೆ ಮಾತನಾಡಿದ ನಟನೆ ತೋರಿಸಿ ಆಮೇಲೆ ಪೋಲೀಸಿನವರಿಗೆ ನಮ್ಮ ವಿಷಯದಲ್ಲಿ ಗೋಪ್ಯವಾಗಿ ಚಾಡಿ ಹೇಳುತ್ತಾರೆ."

ಹೀಗೆಂದು ಶಾಸ್ತ್ರಿಗಳು ಕೇಳಿದರಂತೆ. ಆಗಿನ ದೇಶಸ್ಥಿತಿಯ ವಾತಾವರಣ ಹಾಗಿತ್ತು.

# ಶಂಕರಮಠದ ಉಪನ್ಯಾಸ

೧೯೦೯-೧೦ರಲ್ಲಿ ಶಾಸ್ತ್ರಿಗಳು ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಪ್ರಚಾರ ಕಾರ್ಯಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ಆಗ ಅವರು ಶಂಕರಮಠದ ಉಪನ್ಯಾಸ ಭವನದಲ್ಲಿ ಮಾತನಾಡಿದ್ದು ನನಗೆ ಜ್ಞಾಪಕವಿದೆ. ಸೊಗಸಾದ ಇಂಗ್ಲಿಷ್. ವಿಷಯವೂ ಸೊಗಸಾದದ್ದು. “ನಮ್ಮ ದೇಶೋದ್ಧಾರದ ಪ್ರಯತ್ನವು ಸಾವಧಾನವಾಗಿಯೇ, ಮೆಟ್ಟಲು ಮೆಟ್ಟಲಾಗಿಯೇ ನಡೆಯತಕ್ಕದ್ದಾಗಿದೆ. ತಾಜಮಹಲ್ ಕಟ್ಟಡವನ್ನು ಕಟ್ಟಿದ ಶಿಲ್ಪಿಗಳು ಹೇಗೆ ಸಾವಕಾಶವಾಗಿ ಕಲ್ಲು ಕಲ್ಲನ್ನೂ ಅಳೆದು ಚೊಕ್ಕಟಪಡಿಸಿ ನಯಮಾಡಿ ಗೋಡೆ ಗೋಪುರಗಳನ್ನೆಬ್ಬಿಸಿದರೋ, ನಾವು ಹಾಗೆ ಜಾಗರೂಕರಾಗಿ, ನಯವಂತರಾಗಿ, ದೇಶಕಾರ್ಯ ಮಾಡಬೇಕಾಗಿದೆ” –ಎಂದು ಸೂಚಿಸಿದರು. ನಾನು ಈ ಭಾಷಣವನ್ನು ಕುರಿತು ನನ್ನ ಮಿತ್ರರಲ್ಲಿ ಟೀಕೆ ಮಾಡುವಾಗ ಹೆಚ್ಚಿನ ಉತ್ಸಾಹವನ್ನು ತೋರಿಸಲಿಲ್ಲ. ವಿಷಯವೂ ಸಾಮಾನ್ಯ, ಭಾಷಾಶೈಲಿಯೂ ಸಾಮಾನ್ಯ ಎಂದೆ. ನನ್ನ ಸ್ನೇಹಿತರಲ್ಲಿ ಕೆಲವರು “ಇದು ಅತ್ಯಾಕ್ಷೇಪಣೆ” ಎಂದರು. ಇನ್ನು ಕೆಲವರು “ಇದು ಅಸಹನೆಯ ಮಾತು” ಎಂದರು. “ನೀನು ಹಾಗೆ ಮಾತನಾಡು ನೋಡೋಣ” ಎಂದು ಕೆಲವರು ಮೂದಲಿಸಿದರು. ನಾನು ಆ ಸ್ನೇಹಿತರು ಮಾಡಿದ ಆಕ್ಷೇಪವನ್ನು ಒಪ್ಪಿಕೊಂಡೆ. ನಾನು ಆಡಿದ ಮಾತು ದುರಹಂಕಾರದ್ದೇ ಇದ್ದೀತು.

ಶಾಸ್ತ್ರಿಗಳ ವಾಕ್ಕಿನ ಸೌಲಭ್ಯ, ಲಾಲಿತ್ಯ ಮೊದಲಾದ ಗುಣಗಳ ಸೌಂದರ್ಯವನ್ನು ನಾನು ಕಂಡುಕೊಂಡದ್ದು ಅಲ್ಲಿಂದ ಎರಡು ವರ್ಷ ಕಳೆದ ಮೇಲೆ. ಮೊದಲು ಉದಾಸೀನನಾಗಿದ್ದು ಅನಂತರ ಶಿಷ್ಯಪಟ್ಟಕ್ಕೆ ಒದ್ದಾಡಿದವನು ನಾನು.

# ಮೊದಲ ಮಾತುಕತೆ

ಇದಾದ ಒಂದೆರಡು ವರ್ಷಗಳ ಅನಂತರ ಶಾಸ್ತ್ರಿಗಳು ಬೆಂಗಳೂರಿಗೆ ದಯಮಾಡಿಸಿದರು. ಆಗ ಟಿ. ಆನಂದರಾಯರ ದಿವಾನಗಿರಿ. ಶಾಸ್ತ್ರಿಗಳ ಒಂದಾನೊಂದು ಉಪನ್ಯಾಸಕ್ಕೆ ಮೈಸೂರು ಸರಕಾರ ತಡೆಗಟ್ಟಿತ್ತು. ನಾನು ಆಗ 'ಮೈಸೂರು ಟೈಮ್ಸ್' ಎಂಬ ಇಂಗ್ಲಿಷ್ ಪತ್ರಿಕೆಯ ಉಪಸಂಪಾದಕನಾಗಿದ್ದೆ. ಹುದ್ದೆ ಉಪಸಂಪಾದಕನದೆಂದಾದರೂ ನನ್ನ ಜವಾಬ್ದಾರಿ ಸಂಪಾದಕನದೇ ಆಗಿತ್ತು. ಸರಕಾರದ ವರ್ತನೆಯನ್ನು ಕುರಿತು ಒಂದು ಲೇಖನ ಬರೆದೆ. ಅದರ ಶೈಲಿ ಹೇಗಿತ್ತೋ ಈಗ ಮರೆತುಹೋಗಿದೆ. ನನ್ನ ಸುತ್ತಮುತ್ತಲಿನ ಸ್ನೇಹಿತರಿಗೆ ಆ ಲೇಖನ ಮೆಚ್ಚಿಕೆಯಾಯಿತು. ಅವರಲ್ಲಿ ಯಾರೋ ಒಬ್ಬರು-ಬಹುಶಃ ಕೆ. ಎಸ್. ಕೃಷ್ಣಯ್ಯರೇ ಇರಬಹುದು-ಆ ನನ್ನ ಲೇಖನವನ್ನು ಶ್ರೀನಿವಾಸ ಶಾಸ್ತ್ರಿಗಳ ಮುಂದೆ ಇಟ್ಟರು.

ಅಂದು ರಾತ್ರಿ ಒಂದು ಮಿತ್ರಗೋಷ್ಠಿಯ ಭೋಜನಕೂಟದಲ್ಲಿ ಶ್ರೀನಿವಾಸ ಶಾಸ್ತ್ರಿಗಳು ಮುಖ್ಯ ಅತಿಥಿಗಳಾಗಿದ್ದರು. ಆ ಭೋಜನಕೂಟ ನಡೆದದ್ದು ಬೆಂಗಳೂರು ಚಾಮರಾಜಪೇಟೆಯ ನಾಲ್ಕನೆಯ ರಸ್ತೆಯಲ್ಲಿ-ಎಲಿಫೆಂಟ್ ಲಾಡ್ಜ್ ಎಂಬ ಹೆಸರಿನ ಮನೆಯಲ್ಲಿ. ಆ ಮನೆ ಬೆಂಗಳೂರಿನಲ್ಲಿ ಪ್ರಸಿದ್ಧರಾಗಿದ್ದ ಆರ್. ಗೋಪಾಲಸ್ವಾಮಿ ಅಯ್ಯರ್ ಸಹೋದರರರದು. ಆ ಕಾಲಕ್ಕೆ ಅದು ಪ್ರಸಿದ್ಧವಾದ ಕುಟುಂಬ. ಆಗಾಗ ಅಲ್ಲಿ ಗಣ್ಯ ಜನರಿಗೆ ಔತಣ, ಉಪಚಾರಗಳು ನಡೆಯುತ್ತಿದ್ದವು. ಶ್ರೀನಿವಾಸ ಶಾಸ್ತ್ರಿಗಳು ಆ ರಾತ್ರಿ ಅಲ್ಲಿಗೆ ಅತಿಥಿಗಳಾಗಿ ಬಂದಾಗ ನಾನು ಅಲ್ಲಿದ್ದೆ. ಆಗಲೇ ಅವರಿಗೂ ನನಗೂ ಮೊದಲು ಮಾತು ಕಥೆ ನಡೆದದ್ದು. ಅದು ಒಂದೆರಡು ನಿಮಿಷಗಳ ವಿಚಾರ. ಬರಿಯ ಯೋಗಕ್ಷೇಮ ಪ್ರಶ್ನೆ.

# ಸಮಾಜ ಸೇವಾ ಸಂಸ್ಥೆ

೧೯೧೩-೧೪ರಲ್ಲಿ ದಿವಾನ್ ವಿಶ್ವೇಶ್ವರಯ್ಯನವರ ಪ್ರೋತ್ಸಾಹದಲ್ಲಿ ಒಂದು ಸಮಾಜ ಸೇವೆಯ ಸಂಸ್ಥೆ ಬೆಂಗಳೂರಿನಲ್ಲಿ ಏರ್ಪಾಟಾಗಿತ್ತು. ಅದರ ಹೆಸರು 'ಸಿವಿಕ್ ಅಂಡ್ ಸೋಷಲ್ ಪ್ರಾಗ್ರೆಸ್ ಅಸೋಸಿಯೆಷನ್' ಎಂದು. ಈ ಸಂಸ್ಥೆಗೆ ಆಗಿನ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರವರು ಪೋಷಕರಾಗಿದ್ದರು. ಸಂಸ್ಥೆಯ ಪ್ರಾರಂಭಭಾಷಣವನ್ನು ಕೊಡಲು ಶ್ರೀನಿವಾಸ ಶಾಸ್ತ್ರಿಗಳನ್ನು ಆಹ್ವಾನಿಸಿದ್ದರು. ಆ ಉಪನ್ಯಾಸ ಇಂಟರ್ಮೀಡಿಯೆಟ್ ಕಾಲೇಜಿನ ಸಭಾಮಂದಿರದಲ್ಲಿ ನಡೆಯಿತು. ಆ ಉಪನ್ಯಾಸದ ಪ್ರವಾಹದಲ್ಲಿ ಶಾಸ್ತ್ರಿಗಳವರು ಶ್ರೀಮದ್ರಾಮಾಯಣದ ಕೆಲವು ಶ್ಲೋಕಗಳನ್ನು ಉದಾಹರಿಸಿ ಅವುಗಳ ಅನುವಾದವನ್ನು ಇಂಗ್ಲಿಷಿನಲ್ಲಿ ಹೇಳಿದರು. ನನ್ನ ಮನಸ್ಸನ್ನು ಗೆದ್ದದ್ದು ಬಹುಶಃ ಈ ಭಾಷಣವೆಂದು ನನಗನಿಸುತ್ತದೆ. ಶ್ರೀರಾಮಚಂದ್ರನು ವನವಾಸಕ್ಕೆ ಹೊರಟಾಗ ಕೌಸಲ್ಯಾದೇವಿ ಹೇಳಿದ್ದು:

> ಯಂ ಪಾಲಯಸಿ ಧರ್ಮಂ ತ್ವಂ
> ಧೃತ್ಯಾ ಚ ನಿಯಮೇನ ಚ ।
> ಸ ವೈ ರಾಘವಶಾರ್ದೂಲ
> ಧರ್ಮಸ್ತ್ವಾಮಭಿರಕ್ಷತು ॥

ಇದನ್ನು ಹೇಳಿ ಶಾಸ್ತ್ರಿಗಳು ಧರ್ಮದ ಮಹಿಮೆಯನ್ನು ವಿಸ್ತರಿಸಿದರು.

# ಮಿತ್ರಗೋಷ್ಠಿ

ಅಲ್ಲಿಂದಾಚೆಗೂ ವರ್ಷಕ್ಕೊಮ್ಮೆ, ಎರಡು ವರ್ಷಕ್ಕೊಮ್ಮೆ, ಶ್ರೀನಿವಾಸಶಾಸ್ತ್ರಿಗಳು ಬೆಂಗಳೂರಿಗೆ ಬರುತ್ತಿದ್ದದ್ದುಂಟು. ಇಲ್ಲಿ ಅವರ ಸ್ನೇಹಿತರು ಬಹುಮಂದಿ ಇದ್ದರು. ಅವರಲ್ಲಿ ಕೆಲವರ ಹೆಸರುಗಳನ್ನು ಹೇಳುತ್ತೇನೆ: ಡಾಕ್ಟರ್ ಸಿ. ಬಿ. ರಾಮರಾಯರು, ಲಂಡನ್ ಮಿಷನ್ ಸ್ಕೂಲಿನ ಹೆಡ್‌ಮಾಸ್ಟರ್ ಕೆ. ರಾಮಚಂದ್ರರಾಯರು, 'ಮೈಸೂರು ಸ್ಟ್ಯಾಂಡರ್ಡ್' ಪತ್ರಿಕೆಯ ಎಂ. ಶ್ರೀನಿವಾಸಯ್ಯಂಗಾರ್ಯರು, ಸಬ್‌ಜಡ್ಜಿ ವರದರಾಜ ಅಯ್ಯಂಗಾರ್ಯರು, ಎಂ. ಬಿ. ಶ್ರೀನಿವಾಸಯ್ಯಂಗಾರ್ಯರ ತಮ್ಮಂದಿರಾದ ವರದಯ್ಯಂಗಾರ್ಯರು, ವಿದ್ಯಾ ಇಲಾಖೆಯ ಡಿ. ವೆಂಕಟರಾಮಯ್ಯನವರು.

೧೯೦೮ಕ್ಕೆ ಹಿಂದೆ ಜೇಮ್ ಕೇರ್ ಹಾರ್ಡಿ (Kier Hardie) ಎಂಬ ಪ್ರಸಿದ್ಧನಾದ ಬ್ರಿಟಿಷ್ ಕಾರ್ಮಿಕವರ್ಗಪ್ರಮುಖನು ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರಾಗಿದ್ದಾತ ಇಂಡಿಯಕ್ಕೆ ಬಂದ. ಆತನಿಗೆ ದೇಶ ತೋರಿಸಬೇಕೆಂದು ಗೋಖಲೆಯವರು ಶ್ರೀನಿವಾಸ ಶಾಸ್ತ್ರಿಗಳನ್ನು ಆತನ ಜೊತೆಯಲ್ಲಿ ಸಂಚಾರ ಮಾಡಬೇಕೆಂದು ನಿಯಮಿಸಿದರು. ಆಗ ಶಾಸ್ತ್ರಿಗಳು ಕೇರ್ ಹಾರ್ಡಿಯ ಜೊತೆಯಲ್ಲಿ ಬೆಂಗಳೂರು ಮೈಸೂರುಗಳಿಗೆ ಮಾತ್ರವಲ್ಲದೆ ಕೋಲಾರದ ಚಿನ್ನದ ಗಣಿ ಮೊದಲಾದ ಕಾರ್ಮಿಕ ಮುಖ್ಯತೆಯುಳ್ಳ ಜಾಗಗಳನ್ನು ನೋಡಿ ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೊಂಡು ಬಂದರು. ಹೀಗೆ ಮೈಸೂರುದೇಶ ಶ್ರೀನಿವಾಸ ಶಾಸ್ತ್ರಿಗಳಿಗೆ ಪರಿಚಿತವಾದದ್ದು.

# ಪ್ರಿವಿ ಕೌನ್ಸಿಲರ್

೧೯೨೧-೨೨ರಲ್ಲಿ ಶಾಸ್ತ್ರಿಗಳು ಇಂಗ್ಲೆಂಡ್, ಕೆನಡಾ, ನ್ಯೂಸಿಲೆಂಡ್ ಮೊದಲಾದ ವಿದೇಶಗಳಲ್ಲಿ ಪ್ರವಾಸ ಮಾಡಿದರು. ಅವರ ಕೀರ್ತಿ ಆ ವೇಳೆಗೆ ಹರಡಿತ್ತು. ಬ್ರಿಟಿಷ್ ಚಕ್ರವರ್ತಿಯವರು ಅವರಿಗೆ ಪ್ರಿವಿ ಕೌನ್ಸಿಲರ್ (P.C.: Privy Councillor) ಹುದ್ದೆಯನ್ನು ಕೊಟ್ಟು ಗೌರವಿಸಿದ್ದರು. ಈ ಗೌರವ ಪ್ರಧಾನವನ್ನು ಆಕ್ಷೇಪಿಸಿದವರೂ ಉಂಟು. ಈ ಆಕ್ಷೇಪಕರ್ತರನ್ನು ಉದ್ದೇಶದಲ್ಲಿರಿಸಿಕೊಂಡು ನಾನು ಒಂದು ಲೇಖನ ಬರೆದೆ-ಇಂಗ್ಲಿಷಿನಲ್ಲಿ. ಎರಡು ಮೂರು ತಿಂಗಳಾದ ಬಳಿಕ ಶಾಸ್ತ್ರಿಗಳು ಬೆಂಗಳೂರಿಗೆ ಬಂದರು. ಡಾ ॥ ಸಿ. ಬಿ. ರಾಮರಾಯರ ಅತಿಥಿಯಾಗಿದ್ದರು. ಆಗ ನಾನು ಅವರ ಬಳಿಹೋದೆ. ಅವರು ನನ್ನ ಲೇಖನವನ್ನು ಕುರಿತು ವಂದನೆಯ ಮಾತನ್ನು ಹೇಳಿ ಅದರಲ್ಲಿದ್ದ ಒಂದೆರಡು ಸ್ಖಾಲಿತ್ಯಗಳನ್ನು ಸೂಚಿಸಿದರು. ಆಗ ಅವರು ನನ್ನನ್ನು ಕಂಡು ಮಾತನಾಡಿಸಿದ ರೀತಿಯಿಂದ ನನಗೆ ಸಂತೋಷವಾಯಿತು.

***

# ವಿಶ್ರಾಂತಿ

೧೯೨೩ರಲ್ಲಿ ಶ್ರೀನಿವಾಸ ಶಾಸ್ತ್ರಿಗಳವರು ಆರೋಗ್ಯಕ್ಕಾಗಿ ಬೆಂಗಳೂರಿಗೆ ದಯಮಾಡಿದರು. ಅವರಿಗೆ ಇಂಗ್ಲೆಂಡಿನಲ್ಲಿದ್ದಾಗ ಆಗಾಗ ಹೃದಯಾಂಗದ ಸ್ಪಂದನೆಯೂ ಯಾತನೆಯೂ ಬರುತ್ತಿತ್ತು. ಆ ರೋಗವಿಷಯದಲ್ಲಿ ವಿಶೇಷ ಸಮರ್ಥರಾದವರು ಹಾರ್ಲಿಸ್ಟ್ರೀಟ್ ಎಂಬ ಬೀದಿಯಲ್ಲಿದ್ದಾರಂತೆ. ಆ ವಿಶೇಷಜ್ಞರು ಶಾಸ್ತ್ರಿಗಳ ಹೃದಯಾಂಗವನ್ನು ಪರೀಕ್ಷೆಮಾಡಿ ಅವರು ಯಾವುದಾದರೂ ತಂಪಾದ ಸ್ಥಳದಲ್ಲಿ, ಗಲಭೆಯಿಲ್ಲದ ಸ್ಥಳದಲ್ಲಿ ಒಂದೆರಡು ವರ್ಷ ವಿಶ್ರಾಂತಿ ಪಡೆಯತಕ್ಕದೆಂದು ಹಿತಸೂಚನೆ ಕೊಟ್ಟರಂತೆ.

ಮದರಾಸಿಗೆ ಬಂದಮೇಲೆ ಶಾಸ್ತ್ರಿಗಳು ಅಲ್ಲಿ ತಮ್ಮ ಸಹೋದ್ಯೋಗಿಯಾಗಿದ್ದ ನಮ್ಮ ವಾಜಪೇಯಂ ವೆಂಕಟಸುಬ್ಬಯ್ಯನವರೊಡನೆಯೂ ಆಪ್ತಸ್ನೇಹಿತರಾದ ಟಿ. ಆರ್. ವೆಂಕಟರಾಮಶಾಸ್ತ್ರಿ ಮೊದಲಾದವರೊಡನೆಯೂ ಆಲೋಚನೆ ಮಾಡಿದರು. ಅವರೆಲ್ಲರೂ ಬೆಂಗಳೂರೇ ತಕ್ಕ ಸ್ಥಳವೆಂದು ತೀರ್ಮಾನಿಸಿದರು ಆದರೆ ಒಂದು ಕಂಡಿಷನ್: “ಬೆಂಗಳೂರಿನಲ್ಲಿ ಅವರೊಡನೆ ಡಿ. ವಿ. ಜಿ. ಸಂತತವಾಗಿರುವುದಾಗಿ ಭರವಸೆ ಕೊಡಬೇಕು. ಹಾಗೆ ಅವರು ಭರವಸೆ ಕೊಟ್ಟರೆ ಶಾಸ್ತ್ರಿಗಳು ಆರೆಂಟು ತಿಂಗಳೂ ಬೆಂಗಳೂರಿನಲ್ಲಿ ನೆಲಸಿರತಕ್ಕದ್ದು.”

ಶಾಸ್ತ್ರಿಗಳ ವಾಸಕ್ಕಾಗಿ ಬಸವನಗುಡಿಯ ನಾಲ್ಕನೆಯ ಅಡ್ಡರಸ್ತೆಯಲ್ಲಿ ಟಿ. ಕೆ. ಶ್ರೀನಿವಾಸಶೆಟ್ಟರವರಿಗೆ ಸೇರಿದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡದ್ದಾಯಿತು. ಅದು ಮೂರು ಪಕ್ಕಗಳಲ್ಲಿ ರಸ್ತೆಗಳಿದ್ದ ಮನೆ. ಶಾಸ್ತ್ರಿಗಳವರ ಸಂಸಾರದ ವಸತಿಗೆ ತಕ್ಕಷ್ಟು ವಿಶಾಲವಾಗಿತ್ತು. ಕಟ್ಟಡದ ಸುತ್ತ ಒಂದು ಸಣ್ಣ ಕೈತೋಟ ಇತ್ತು. ಮನೆ ಲಾಲ್‌ಬಾಗಿಗೆ ಸಮೀಪವಾಗಿಯೂ ಇತ್ತು. ಆಮೇಲೆ ಮೂರು ನಾಲ್ಕು ಸಾರಿ ಶಾಸ್ತ್ರಿಗಳು ಬೆಂಗಳೂರಿಗೆ ಬಂದು ತಂಗಿದ್ದಾಗ ಅದೇ ಮನೆಯಲ್ಲಿದ್ದರು.

# ದಿನಚರಿ

ಅವರು ಬೆಂಗಳೂರಿನಲ್ಲಿದ್ದಾಗ ದಿನಚರಿ ಹೀಗೆ: ಪ್ರಾತಃಕಾಲ ೭ಕ್ಕೆ ಮುಂಚೆ ಹೊರಟು ಲಾಲ್‌ಬಾಗಿಗೆ ಹೋಗತಕ್ಕದ್ದು. ಅಲ್ಲಿ ಕೆರೆಕಟ್ಟೆಯ ಮೆಟ್ಟಲ ಮೇಲೆ ಅಥವಾ ಬೇರೆ ಬೆಂಚಿನ ಮೇಲೆ ಕೊಂಚ ಹೊತ್ತು ಕೂಡತಕ್ಕದ್ದು. ಅವರು ಏನಾದರೂ ಬರವಣಿಗೆಯನ್ನು ಉದ್ದೇಶದಲ್ಲಿರಿಸಿಕೊಂಡಿದ್ದರೆ ಅವರು ಹೇಳುವುದು, ನಾನು ಬರೆಯುವುದು. ಇದೊಂದು ಅರ್ಧ ಘಂಟೆ, ಮುಕ್ಕಾಲು ಘಂಟೆ. ನಾವು ಕುಳಿತಿದ್ದ ಜಾಗದ ಎದುರಿಗೆ ಜಿಂಕೆಗಳ ಪಂಜರ. ಜಿಂಕೆಗಳು ಹುಲ್ಲು ಮೆಲುಕು ಹಾಕುತ್ತಿರುವುದನ್ನೂ, ಓಡಾಡುತ್ತಿರುವುದನ್ನೂ ನೋಡಲು ಅವರಿಗೆ ತುಂಬ ಕುತೂಹಲ. ಅದನ್ನು ನೋಡುತ್ತ ಶಾಕುಂತಲದ 'ರೋಮಂಥಮಾಕುರ್ವತಿ' ಶ್ಲೋಕವನ್ನು ಹೇಳುವರು. ಮೆಲ್ಲಮೆಲ್ಲಗೆ ಅಲ್ಲಿ ನಡೆದಾಡುವರು. ಅವರು ಬೇಗ ಬೇಗ ಹೆಜ್ಜೆ ಇಡದಂತೆ ಆಗಾಗ ಅವರನ್ನು ತಡೆದು ಅವರ ವೇಗವನ್ನು ಮಂದ ಮಾಡುವುದು ನನಗಿದ್ದ ಕರ್ತವ್ಯ. ಒಂದೊಂದು ಸಾರಿ ಮಾತಿನ ಭರದಲ್ಲಿ ಹೆಜ್ಜೆ ತೀವ್ರವಾಗುತ್ತಿತ್ತು. ಅದರಲ್ಲಿಯೂ ಇನ್ನು ಯಾರಾದರೂ ಮಾತಿಗೆ ಸಿಕ್ಕಿದಾಗ ನಡಿಗೆಯ ವೇಗ ಜೋರಾಗುವುದು. ಅಂಥ ಹೊತ್ತಿನಲ್ಲಿ ನಾನು ಅವರನ್ನು ತಡೆಯಬೇಕೆಂದು ನನಗೆ ಅಪ್ಪಣೆಯಾಗಿತ್ತು. ಹಾಗೆ ನಡೆದಾಡುವ ಕಾಲದಲ್ಲಿ ಪ್ರಾಸಂಗಿಕವಾಗಿ ಯಾವಯಾವುದೋ ವಿಷಯಗಳು ಸಂಗತವಾಗುತ್ತಿದ್ದವು. ಲಾಲ್‌ಬಾಗಿನಲ್ಲಿ ಆಗ ಇದ್ದ ಮಾಧವೀಲತೆಯ ಬಳಿಗೆ ಆಗಾಗ ಹೋಗುತ್ತಿದ್ದೆವು. ಅದನ್ನು ನೋಡಿ ಅವರು ಶಾಕುಂತಲದ "ಕ್ಷಾಮಕ್ಷಾಮಕಪೋಲಂ... ಸ್ಪೃಷ್ಟಾ ಲತಾ ಮಾಧವೀ" ಪದ್ಯವನ್ನು ಜ್ಞಾಪಕ ಮಾಡಿಕೊಳ್ಳುವರು. ಅದರ ಪದಚ್ಛೇದಕ್ರಮವನ್ನು ವಿವರಿಸಿ ಅಲಂಕಾರವನ್ನು ಹೇಳುವರು. ಆ ಪದ್ಯದ ಸ್ವಾರಸ್ಯಾಂಶಗಳನ್ನು ವಿಸ್ತರಿಸುವರು. ಅವರ ಮಾತಿನ ವೈಖರಿಯೇ ನಮಗೆ ಒಂದು ಸೊಗಸು. ವ್ಯಾಖ್ಯಾನ ಪ್ರಸಂಗದಲ್ಲಿ ನಡುನಡುವೆ ಸಂಸ್ಕೃತ ವಾಕ್ಯಗಳಿಗೆ ಹೊರಳಿಕೊಳ್ಳುವರು. ಎರಡು ಮೂರು ನಿಮಿಷ ಅದು ಸಂಸ್ಕೃತ ಭಾಷಣದಂತೆ ಇರುವುದು.

ಒಂದು ದಿನ ಅಶೋಕವೃಕ್ಷವನ್ನು ನೋಡಿದೆವು. ಇದೇ ಸೀತಾಮಹಾದೇವಿಗೆ ಆಶ್ರಯ ಕೊಟ್ಟಿದ್ದ ಮರವೆಂದು ಹೇಳಿ ಪ್ರಶಂಸೆ ಮಾಡತೊಡಗಿದರು.

> ರಕ್ತಸ್ತ್ವಂ ನವಪಲ್ಲವೈರಹಮಪಿ
> ಶ್ಲಾಘ್ಯೈಃ ಪ್ರಿಯಾಯಾ ಗುಣೈಃ

ತ್ವಮಾಯಾನ್ತಿ ಶಿಲೀಮುಖಾಃ ಸ್ಮರಧನು-
ರ್ಮುಕ್ತಾಸ್ತಥಾ ಮಾಮಪಿ ।
ಕಾಂತಾಪಾದತಲಾಹತಿಸ್ತವ ಮುದೇ
ತದ್ವನ್ಮಮಾಪ್ಯಾವಯೋಃ
ಸರ್ವಂ ತುಲ್ಯಮಶೋಕಕೇವಲಮಹಂ
ಧಾತ್ರಾ ಸಶೋಕಃ ಕೃತಃ ॥

ಇದರಲ್ಲಿಯ ಶ್ಲೇಷೆ, ಅದರ ಸೊಗಸು-ಇದು ವ್ಯಾಖ್ಯಾನ ವಿಷಯ. "ಎಲೈ ಅಶೋಕವೆ, ನೀನು ಹೊಸ ಚಿಗುರಿನಿಂದ ರಕ್ತವರ್ಣವಾಗಿದ್ದಿ (ರಕ್ತ-ಕೆಂಪು). ನಾನಾದರೋ ಪ್ರಿಯಳ ಒಳ್ಳೊಳ್ಳೆಯ ಗುಣಗಳಿಂದ ರಕ್ತ (-ಅನುರಕ್ತ)ನಾಗಿದ್ದೇನೆ. ನಿನ್ನ ಬಳಿಗೆ ದುಂಬಿಗಳು (ಶಿಲೀಮುಖ) ಬಂದು ನಿನ್ನನ್ನು ಮುತ್ತುತ್ತವೆ. ನನ್ನನ್ನು ಮನ್ಮಥ ಧನುಸ್ಸಿನ ಬಾಣಗಳು ಮುತ್ತುತ್ತವೆ. ನಿನಗೆ ಕಾಂತೆಯ ಕಾಲಿನ ಒದೆತದಿಂದ ಸಂತೋಷ. ನನಗೂ ಹಾಗೆಯೇ. ಈ ರೀತಿಯಾಗಿ ನಿನಗೂ ನನಗೂ ಎಲ್ಲ ವಿಷಯಗಳಲ್ಲಿಯೂ ಸರಿ ಸಮಾನತೆಯುಂಟು. ಆದರೆ ಬ್ರಹ್ಮನು ನಿನ್ನನ್ನು ಅಶೋಕವನ್ನಾಗಿ ಮಾಡಿದ. ನನ್ನನ್ನು ಸಶೋಕ ಮಾಡಿದ."

ಇಲ್ಲಿ ಒಂದು ಶಾಸ್ತ್ರಸಂಕೇತ. ಅದು ಪ್ರಾಚೀನರ ವೃಕ್ಷದೋಹದ ಶಾಸ್ತ್ರದ್ದು. ಆ ಸಂಕೇತದಂತೆ ಕೆಲಕೆಲವು ಮರಗಳು ಹೂಬಿಡಬೇಕಾದರೆ ಕೆಲಕೆಲ ಜಾತಿಯ ಸುಂದರಿಯರು ಆ ಮರಕ್ಕೆ ಗೊತ್ತಾದ ಸೇವೆ ಸಲ್ಲಿಸಬೇಕು. ಅಶೋಕ ವೃಕ್ಷವನ್ನು ಆಕೆ ಕಾಲಿನಿಂದ ಒದೆಯಬೇಕು, ಇತ್ಯಾದಿ.

ಪಾದಾಘಾತಾದಶೋಕಸ್ತಿಲಕಕುರವಕೌ
ವೀಕ್ಷಣಾಲಿಂಗನಾಭ್ಯಾಂ
ಸ್ತ್ರೀಣಾಂ ಸ್ಪರ್ಶಾತ್ ಪ್ರಿಯಂಗುರ್ವಿಕಸತಿ ವಕುಲಃ
ಸೀಧು ಗಂಡೂಷಸೇಕಾತ್ ।
ಮಂದಾರೋ ನರ್ಮವಾಕ್ಯಾತ್ ಪಟುಮೃದುಹಸನಾತ್
ಚಂಪಕೋ ವಕ್ತ್ರವಾತಾತ್
ಚೂತೋ ಗೀತಾನ್ನಮೇರುರ್ವಿಕಸತಿ ಚ ಪುರೋ
ನರ್ತನಾತ್ ಕರ್ಣಿಕಾರಃ ॥

(‘ನಮೇರು’ ಎಂದರೆ ಸುರಹೊನ್ನೆ ಎಂದು ಕೆಲವರೂ ರುದ್ರಾಕ್ಷಿಹೂ ಎಂದು ಕೆಲವರೂ ಹೇಳುತ್ತಾರೆ.)

ಇಂಥ ಕವಿಸಮಯ ವಿವರಗಳನ್ನು ಶಾಸ್ತ್ರಿಗಳು ಹೇಳುವರು.

ಹೀಗೆ ವಿನೋದದ ಮಾತುಕಥೆಯಾಡಿಕೊಂಡು ಸುಮಾರು ೯ ಘಂಟೆಯ ವೇಳೆಗೆ ಹಿಂತಿರುಗುವೆವು. ಅಷ್ಟು ಹೊತ್ತಿಗೆ ಅಂದಿನ ದಿನಪತ್ರಿಕೆ ಬಂದಿರುವುದು. ಶಾಸ್ತ್ರಿಗಳು ಅದರ ಮುಖ್ಯಮುಖ್ಯ ಶೀರ್ಷಿಕೆಗಳನ್ನು ನೋಡಿ ಆ ಭಾಗಗಳನ್ನು ಓದ ಹೇಳುವರು. ಅದಾದ ಮೇಲೆ ಚರ್ಚೆ. ಹೀಗೆ ೧೧ ಘಂಟೆಯವರೆಗೆ. ಅನಂತರ ಭೋಜನ, ನಿದ್ರೆ.

ಮಧ್ಯಾಹ್ನ ೩ ಘಂಟೆಗೆ ಮತ್ತೆ ನಾನು ಅಲ್ಲಿರುತ್ತಿದ್ದೆ. ಆ ವೇಳೆಗೆ ಶಾಸ್ತ್ರಿಗಳವರ ಕುಟುಂಬ ಲಕ್ಷಮ್ಮನವರಿಗೂ ಕೈ ಬಿಡುವಾಗಿರುತ್ತಿತ್ತು. ನಾವೆಲ್ಲ ಕುಳಿತು ಏನಾದರೂ ಮಾತನಾಡುತ್ತಿರುವೆವು.

ನಾಲ್ಕೂವರೆ ಐದು ಘಂಟೆಯ ವೇಳೆಗೆ ಶಾಸ್ತ್ರಿಗಳನ್ನು ನೋಡಲು ಇತರ ಸ್ನೇಹಿತರು ಬರುವರು. ಒಂದೊಂದು ದಿನ ಒಂದು ಸಣ್ಣ ಗಾಳಿಯ ಸಂಚಾರ ಹೋಗುತ್ತಿದ್ದದ್ದುಂಟು. ಮೊದಮೊದಲು ಸಾಮಾನ್ಯವಾಗಿ ಒಂದು ಕೋಚ್ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ಕೊಂಚ ದೂರ ಗಾಳಿಸೇವನೆಗೆ ಹೋಗುತ್ತಿದ್ದೆವು. ಕೊಂಚ ಕಾಲವಾದ ಮೇಲೆ ಯಾರಾದರೂ ಸ್ನೇಹಿತರು ಕಾರನ್ನು ತರುವರು. ಅದರಲ್ಲಿ ಹೋಗಿ ಗಾಳಿ ಸೇವನೆ.

# ಮಹಾಕಾವ್ಯನಿಷ್ಠೆ

ಅವರು ಬೆಂಗಳೂರಿಗೆ ಬಂದ ಹೊಸತರಲ್ಲಿ ತೀರ ದುರ್ಬಲರಾಗಿದ್ದರು. ಆದರೆ ಹೊತ್ತು ಕಳೆಯುವುದು ಹೇಗೆ? ಈ ಮಾತು ಬಂದಾಗ ನಾನು ಒಂದೆರಡು ಪುಸ್ತಕಗಳನ್ನು ಕೊಡುವುದಾಗಿ ಹೇಳಿದೆ. ಆಗ ನಾನು ಗ್ರೀಕ್ ನಾಟಕ ಕವಿ ಸೋಫೊಕ್ಲೀಸ್ ಎಂಬಾತನ ಕೃತಿಗಳನ್ನು ಓದುತ್ತಿದ್ದೆ. ಆ ವಿಷಯದಲ್ಲಿ ನನಗೆ ಉತ್ಸಾಹ, ಕೊಂಚ ಅತ್ಯುತ್ಸಾಹವೆಂದೇ ಹೇಳಬೇಕು. ಅತ್ಯುತ್ಸಾಹವು ನನ್ನ ದೌರ್ಬಲ್ಯಗಳಲ್ಲೊಂದು. ಶಾಸ್ತ್ರಿಗಳು ಹೇಳಿದ ಉತ್ತರ ನಾನು ಬರೆದಿಡಬೇಕಾದದ್ದು:

“ನನಗೆ ಯಾತಕ್ಕೆ ಸಾರ್ ಈಗ ಹೊಸ ಓದು? ನನ್ನ ಹಳೆಯ ರಾಮಾಯಣ, ಹಳೆಯ ಷೇಕ್ಸ್ಪಿಯರ್-ಇದಿಷ್ಟು ಸಾಕು.”

# ಶಂಕರನಾರಾಯಣ ಶಾಸ್ತ್ರಿಗಳು

ಶ್ರೀನಿವಾಸಶಾಸ್ತ್ರಿಗಳ ತಂದೆಗಳು ಶಂಕರನಾರಾಯಣ ಶಾಸ್ತ್ರಿಗಳು ಹೆಸರುವಾಸಿಯಾದ ಪುರಾಣಿಕರು. ಅವರು ಶ್ರೀಮದ್ರಾಮಾಯಣವನ್ನು ಪುರಾಣ ಹೇಳುತ್ತಿದ್ದವರು. ಹೀಗೆ ಶಾಸ್ತ್ರಿಗಳ ರಾಮಾಯಣ ಪ್ರೀತಿಯೂ ರಾಮಾಯಣ ಪಾಂಡಿತ್ಯವೂ ಕುಲಪರಂಪರೆಯಿಂದ ಬಂದಿದ್ದವು. ಶಾಸ್ತ್ರಿಗಳವರ ಅಜ್ಜ, ಮುತ್ತಜ್ಜ, ಹಿರಿಯಜ್ಜಂದಿರು ವೇದವೇದಾಂತಸಂಪನ್ನರಾಗಿ ವಾರ್ಧಕ್ಯದಲ್ಲಿ ಯತ್ಯಾಶ್ರಮದಲ್ಲಿ ಸಿದ್ಧಿ ಹೊಂದಿದವರು.

ಶಾಸ್ತ್ರಿಗಳ ಜನ್ಮಸ್ಥಳ ಕುಂಭಕೋಣಕ್ಕೆ ಐದಾರು ಮೈಲಿ ದೂರದಲ್ಲಿರುವ ವಲಂಗಿಮಾನ್ ಎಂಬ ಗ್ರಾಮ. ಆ ಗ್ರಾಮದ ಹತ್ತಿರ ಶಾಸ್ತ್ರಿಗಳ ಪೂರ್ವಿಕರ ಸಮಾಧಿಗಳಿವೆ. ಆ ಸಮಾಧಿಗಳನ್ನು ದುರಸ್ತುಪಡಿಸಿ ಅಲ್ಲಿ ಆರಾಧನೆಯ ದಿನ ಪೂಜೆ ನಡಸುವುದಕ್ಕಾಗಿ ಶಾಸ್ತ್ರಿಗಳು ವರ್ಷವರ್ಷವೂ ಹಣ ಕಳುಹಿಸುತ್ತಿದ್ದದ್ದು ನನಗೆ ತಿಳಿದಿದೆ.

# ರಾಮಾಯಣ ವ್ಯಾಸಂಗ

ಶಾಸ್ತ್ರಿಗಳು ವಾಲ್ಮೀಕಿರಾಮಾಯಣವನ್ನು ಓದುವರು. ತಾವು ಓದಿದ ಪ್ರಕರಣಗಳನ್ನು ತಮಿಳು ಕವಿ ಕಂಬರ್ ಹೇಗೆ ಪ್ರತಿಪಾದಿಸಿದ್ದಾರೆಂದು ಕುಟುಂಬ ಲಕ್ಷ್ಮಮ್ಮನವರನ್ನು ಕೇಳುವರು: ಆಕೆ ತಮಿಳು ಸಾಹಿತ್ಯದಲ್ಲಿ ಹೆಚ್ಚು ಪರಿಚಿತಿ ಇದ್ದವರು. ಅಲ್ಲಿಯ ಸ್ವಾರಸ್ಯವನ್ನು ಕುರಿತು ಕೊಂಚ ಮಾತಾಗುವುದು. ಹೀಗೆ ಸಾವಕಾಶವಾಗಿ ಸಾಗಿತು ಅವರ ರಾಮಾಯಣ ವ್ಯಾಸಂಗ.

ಷೇಕ್‌ಸ್ಪಿಯರ್ ಗ್ರಂಥವನ್ನು ಡಾ ॥ ಸಿ. ಬಿ. ರಾಮರಾಯರು ಕೊಟ್ಟರು. ಅದು ಪೋಲಿಯೊ ಆಕಾರದ ಮೂರು ಸಂಪುಟಗಳ ಪುಸ್ತಕ: ದೊಡ್ಡ ಅಕ್ಷರದ್ದು. ಶಾಸ್ತ್ರಿಗಳು ಷೇಕ್‌ಸ್ಪಿಯರನ ಪಾತ್ರರಚನೆಯ ಕುಶಲತೆಯನ್ನು ಮೆಚ್ಚಿಕೊಳ್ಳುತ್ತ ಸಂದರ್ಭೋಚಿತವಾಗಿ ಬಂದ ಸಂವಾದಗಳನ್ನೂ ಸಮಾಲೋಚನವಾಕ್ಯಗಳನ್ನೂ ಮತ್ತೆ ಮತ್ತೆ ಓದಿ ವಿವರಿಸುವರು.

ಒಂದೊಂದು ದಿನ ಸಂಜೆ ಗಾಡಿಯಲ್ಲಿ ಕುಳಿತು ಪಟ್ಟಣದ ದರ್ಶನೀಯ ಸ್ಥಳಗಳನ್ನು ನೋಡಿಕೊಂಡು ಬರುವರು. ಇಂಥ ಸ್ಥಳಗಳಲ್ಲಿ ಒಂದು ಬಳೆಪೇಟೆಯಲ್ಲಿರುವ ಸುಗ್ರೀವನ ದೇವಸ್ಥಾನ. ಅದು ಶಾಸ್ತ್ರಿಗಳ ಮನಸ್ಸಿಗೆ ವಿಶೇಷದ ಸಂಗತಿಯಾಯಿತು. ಸುಗ್ರೀವನು ಶ್ರೀರಾಮನ ಸ್ನೇಹಿತ; ಧರ್ಮಕಾರ್ಯದಲ್ಲಿ ನೆರವಾದವನು. ಅಂಥ ಮಹಾನುಭಾವನನ್ನು ಸ್ಮರಿಸಿ ಗುಡಿ ಕಟ್ಟಿರುವುದು ಬಹಳ ಶ್ಲಾಘ್ಯವಾದ ಸಂಗತಿ. "ಸುಗ್ರೀವನನ್ನು ನೆನೆಯುವಂಥ ಸಾಧು ಸಜ್ಜನರು ಬೆಂಗಳೂರಿನಲ್ಲಿದ್ದರಲ್ಲ!" ಎನ್ನುತ್ತಿದ್ದರು. ಸುಗ್ರೀವನ ವಿಗ್ರಹದ ಯಾವುದೋ ಒಂದು ಲಕ್ಷಣವನ್ನು ಅವರು ಗುರುತಿಸಿ ಹೇಳಿದ್ದರು. ಈಗ ಮರೆತುಹೋಗಿದೆ.

ಶಾಸ್ತ್ರಿಗಳು ಅಣ್ಣತಮ್ಮಂದಿರಲ್ಲೆಲ್ಲ ಹಿರಿಯರು. ವಾಸುದೇವಶಾಸ್ತ್ರಿ, ನರಸಿಂಹಶಾಸ್ತ್ರಿ, ರಾಮಸ್ವಾಮಿಶಾಸ್ತ್ರಿ-ಇವರು ತಮ್ಮಂದಿರು. ವಾಸುದೇವಶಾಸ್ತ್ರಿಗಳು ಬಳ್ಳಾರಿ ಮೊದಲಾದ ಕಡೆ ಸ್ಕೂಲುಗಳ ಇನ್‌ಸ್ಪೆಕ್ಟರಾಗಿದ್ದರು. ವಿದ್ಯಾಸಂಪನ್ನರು. ನರಸಿಂಹಶಾಸ್ತ್ರಿಗಳು ಕೋಆಪರೇಟಿವ್ ಸಂಸ್ಥೆಗಳಲ್ಲಿದ್ದರು. ರಾಮಸ್ವಾಮಿಶಾಸ್ತ್ರಿಗಳು 'ಹಿಂದೂ' ಪತ್ರಿಕೆಯ ಸಹಾಯ ಸಂಪಾದಕರಾಗಿದ್ದರು. ಈ ಸಂದರ್ಭದಲ್ಲಿ ಒಂದು ಸಂಗತಿ ನೆನಪಿಗೆ ಬರುತ್ತದೆ.

ಒಂದಾನೊಂದು ದಿನ ಶಾಸ್ತ್ರಿಗಳು ನನ್ನನ್ನು ಕೇಳಿದರು:

ಶಾ: “ನಿನ್ನ ತಮ್ಮ ಏನು ಮಾಡುತ್ತಿದ್ದಾನೆ?”

ನಾನು: “ಕಾಲೇಜಿನಲ್ಲಿ ಓದುತ್ತಿದ್ದಾನೆ. ಮೈಸೂರಿನಲ್ಲಿ.”

ಶಾ: “ಅವನ ಐಚ್ಛಿಕ ವಿಷಯ ಏನು?”

ನಾನು: “ಪಾಲಿಟಿಕ್ಸ್, ಇಕನಾಮಿಕ್ಸ್ (ರಾಜ್ಯಶಾಸ್ತ್ರ-ಅರ್ಥಶಾಸ್ತ್ರ).”

ಶಾ: “ಅದು ಯಾಕೆ ಈ ವಿಷಯಗಳನ್ನು ಆರಿಸಿಕೊಟ್ಟೆ ನೀನು?”

“ನಾನು ಆರಿಸಿಕೊಟ್ಟದ್ದಲ್ಲ. ಅವನೇ ಆರಿಸಿಕೊಂಡದ್ದು. ಅವನೂ ನನ್ನಂತೆಯೇ ಪತ್ರಿಕೋದ್ಯೋಗಕ್ಕೆ ಸೇರಿದರೆ ಈ ಶಾಸ್ತ್ರಗಳು ಉಪಯೋಗಕ್ಕೆ ಬರಬಹುದೆಂದು ಅವನು ಯೋಚಿಸಿರಬೇಕು.”

ಶಾ: “ಸಾಕು ಸಾರ್ ಮನೆಗೊಬ್ಬ! ಸಂಸಾರಕ್ಕೆ ಅನ್ನ ಬಟ್ಟೆ ಕೊಡುವ ಉದ್ಯೋಗವನ್ನು ಅವನು ಹಿಡಿಯಲಿ. ನನ್ನ ಸಂಸಾರದಲ್ಲಿ ನನಗಾಗಿರುವ ಅನುಭವವನ್ನು ಕೇಳಿ. ನಾನಂತೂ ಸ್ಕೂಲ್‌ಮೇಷ್ಟರಾದೆ. ನನ್ನ ತಮ್ಮ ವಾಸುದೇವನೂ ಸ್ಕೂಲ್ ಮೇಷ್ಟರಾದ. ತಂದೆತಾಯಿಗಳನ್ನು ಮುಪ್ಪಿನಲ್ಲಿ ಸುಖವಾಗಿ ನೋಡಿಕೊಳ್ಳಬೇಕೆಂದು ನನ್ನ ಆಶೆ. ನನ್ನ ತಮ್ಮ ರಾಮಸ್ವಾಮಿ ಲಾಯರಾಗಬೇಕೆಂದು ಯೋಚನೆ ಮಾಡಿ ವಕೀಲ್ ಕೃಷ್ಣಸ್ವಾಮಯ್ಯರ್ ಅವರನ್ನು ಕೇಳಿಕೊಂಡೆ. ‘ನಿಮ್ಮ ಆಫೀಸಿನಲ್ಲಿ ಈ ಹುಡುಗನಿಗಾಗಿ ಒಂದು ಜಾಗ ಮೀಸಲಾಗಿಟ್ಟಿರಬೇಕು’ ಎಂದು. ಅವರು ದಯಮಾಡಿ ಒಪ್ಪಿದರು. ಆದರೆ ಈ ಹುಡುಗ ಬಿ. ಎಲ್. ಪ್ಯಾಸುಮಾಡಿದ್ದಾದ ಮೇಲೆ ಪತ್ರಿಕೋದ್ಯೋಗಕ್ಕೆ ಸೇರುತ್ತೇನೆಂದು ಹಟ ಹಿಡಿದ! ನನ್ನ ಯೋಚನೆ ಹಾಗೆ ಮುರಿದು ಹೋಯಿತು. ದೇಶಸೇವೆ ಎಂಬುದು ದೊಡ್ಡ ಉದ್ಯೋಗ. ಅದು ಬೇಡವೆಂದು ಯಾರು ತಾನೆ ಹೇಳಿಯಾರು? ಆದರೆ ಸಂಸಾರಕ್ಕೆ ಒಂದಿಷ್ಟು ಅನ್ನವಸ್ತ್ರಗಳನ್ನು ಕಾಣಿಸಬೇಕಲ್ಲ!”

ಶಾಸ್ತ್ರಿಗಳು ದಾರಿದ್ರ್ಯದ ಕಾರಣದಿಂದ ಮನಸ್ಸಿನಲ್ಲಿ ಕುಗ್ಗಿದವರಲ್ಲ. ಅವರ ಮನಸ್ಸು ಆ ಕಡೆ ಹೋದದ್ದನ್ನೇ ನಾನು ಕಾಣೆ. ಆದರೆ ಸಂಸಾರದಲ್ಲಿ ಒಂದೊಂದು ಸಾರಿ ಮುಗ್ಗಟ್ಟಿನ ಸಂದರ್ಭ ಬರುತ್ತದಲ್ಲ! ಅಂಥ ಸಮಯಗಳಲ್ಲಿ ಅವರು ಕೊಂಚ ಚಿಂತಾಕ್ರಾಂತರಾಗಿದ್ದದ್ದನ್ನು ನೋಡಿದ್ದೇನೆ.

# ಸ್ಮಾರ್ತಭಾಗವತ ಸಂಪ್ರದಾಯ

ಶಾಸ್ತ್ರಿಗಳ ಮನೆತನ ವೈದಿಕರದೆಂಬುದು ಹೆಸರಿನಿಂದಲೇ ಗೊತ್ತಾಗುತ್ತದೆ. ಅವರು ದ್ರಾವಿಡ ಬ್ರಾಹ್ಮಣರಲ್ಲಿ ವಡಮ (ಔತ್ತರೇಯ) ಎಂಬ ಪಂಗಡಕ್ಕೆ ಸೇರಿದವರು: ವಿಷ್ಣು ಭಕ್ತಿ ಪಂಥದವರು, ಅದ್ವೈತಿಗಳು. ಸ್ಮಾರ್ತ ಸಂಪ್ರದಾಯದಲ್ಲಿ ಭಾಗವತರೆಂಬ ಒಂದು ಒಳಪಂಗಡವುಂಟಷ್ಟೆ. ಶಾಸ್ತ್ರಿಗಳು ಇಂಥ ಒಂದು ಪಂಗಡಕ್ಕೆ ಸೇರಿದ್ದವರು. ಸಾಮಾನ್ಯವಾಗಿ ವಿಭೂತಿ ಧರಿಸುವರು. ವಿಶೇಷ ಸಂದರ್ಭಗಳಲ್ಲಿ ಗೋಪೀಚಂದನದಿಂದ ಊರ್ಧ್ವ ಪುಂಡ್ರವಿರಿಸಿಕೊಳ್ಳುವರು. ಇದು ಆ ಜನದ ಲಕ್ಷಣ. ಸಾಮಾನ್ಯವಾಗಿ ಶ್ರೀನಿವಾಸ ಶಾಸ್ತ್ರಿಗಳು ಈ ಬಾಹ್ಯ ಚಿಹ್ನೆಗಳನ್ನು ಧರಿಸುತ್ತಿರಲಿಲ್ಲ. ಅವರ ಷಷ್ಟ್ಯಬ್ದಿಯ ದಿವಸ ಅವರು ತೋಳಿನ ಮೇಲೆ ವಿಭೂತಿ ಧರಿಸಿ ಹಣೆಯಲ್ಲಿ ಗೋಪೀಚಂದನವಿಟ್ಟು, ಶಾಸ್ತ್ರಕರ್ಮಗಳು ಮುಗಿದ ಕೂಡಲೆ ಮಣೆಯಿಂದ ಎದ್ದು ಬಂದು ಗೋವಿಂದರಾಘವಯ್ಯರ್ ಅವರಿಗೆ ಸಾಷ್ಟಾಂಗ ಪ್ರಣಾಮಮಾಡಿ, ಅವರ ಎರಡು ಪಾದಗಳನ್ನೂ ಹಿಡಿದು ಪ್ರವರ ಹೇಳಿ, "ಅಹಂ ಭೋ ಅಭಿವಾದಯೇ" ಎಂದದ್ದನ್ನು ನಾನು ನೋಡಿದೆ. ಈ ಅಭಿವಾದನಕಾರ್ಯವಾದ ಬಳಿಕ ನಾನು ಶಾಸ್ತ್ರಿಗಳನ್ನು ಕೇಳಿದೆ: "ಇದು ಏನು ವಿಶೇಷ ಸಂಗತಿ ಈ ಹೊತ್ತು?"

# ಗೋವಿಂದರಾಘವಯ್ಯರ್

ಶಾಸ್ತ್ರಿಗಳು ಹೇಳಿದರು: "ಗೋವಿಂದರಾಘವಯ್ಯರ್ ಅವರು ನಿಜವಾಗಿ ಮಹನೀಯರು, ಪರಿಶುದ್ಧರು, ಮಹಾವಿದ್ವಾಂಸರು, ಪರಮಸಾತ್ತ್ವಿಕರು, ಮಹೋದಾರಿಗಳು. ಅವರ ಮನೆ ಧರ್ಮಸತ್ರ. ಅವರ ಮನೆಗೆ ಹೋಗಿ ಊಟ ಮಾಡದೆ ಬಂದ ವಿದ್ಯಾರ್ಥಿಯಿಲ್ಲ. ಎಲ್ಲ ಬಡ ವಿದ್ಯಾರ್ಥಿಗಳಿಗೂ ಗೋವಿಂದರಾಘವಯ್ಯರ್ ಆಧಾರ. ಇನ್ನೊಂದು ಸಂಗತಿ ಹೇಳುತ್ತೇನೆ. ಇದು ವೈಯಕ್ತಿಕವಾದದ್ದು. ಪೆಂಟ್‌ಲಂಡ್ ಶ್ರೀಮಂತನು ಮದರಾಸಿನ ಗವರ್ನರ್ ಆಗಿದ್ದಾಗ ಗೋವಿಂದರಾಘವಯ್ಯರ್ರವರನ್ನು ಲೆಜಿಸ್ಲೆಟಿವ್ ಸಭೆಗೆ ಸದಸ್ಯರನ್ನಾಗಿ ನಾಲ್ಕನೆಯ ಸಾರಿ ನಿಯಮಿಸಿದ. ಗೋವಿಂದರಾಘವಯ್ಯರ್ ಅವರು ಮಹಾಪ್ರಸಿದ್ಧರಾದ ಲಾಯರು. ಒಳ್ಳೆಯ ವಾಗ್ಮಿ. ಅವರದು ನಿಶಿತವಾದ ಸಂಸ್ಕೃತ ಪಾಂಡಿತ್ಯ. ನಿರ್ಮಲವಾದ ದೇಶಾಭಿಮಾನ. ಇಂಥವರಿಲ್ಲದಿದ್ದರೆ ಸಭೆಗೆ ಏನು ಬೆಲೆ?" -ಎಂದು ಪೆಂಟ್ ಲಂಡ್ ಪ್ರಭು ಗ್ರಹಿಸಿ ಅವರನ್ನು ಪುನಃ ಸದಸ್ಯತಕ್ಕೆ ಆರಿಸಿದ್ದ.

"ನಾಲ್ಕನೆಯ ಸಾರಿ ಇದು ನಡೆದಾಗ ಗೋವಿಂದರಾಘವಯ್ಯರ್ ಸರಕಾರಕ್ಕೆ ಪ್ರತ್ಯುತ್ತರ ಬರೆದು ತಮ್ಮ ವಾರ್ಧಕ್ಯದ ಕಾರಣವನ್ನು ಹೇಳಿ ಸದಸ್ಯತ್ವ ಬೇಡವೆಂದದ್ದಲ್ಲದೆ, ಆ ಜಾಗಕ್ಕೆ ನಾನು ತಕ್ಕವನೆಂದು ನನ್ನ ಹೆಸರನ್ನು ಶಿಫಾರಸು ಮಾಡಿದರು. ನನಗೆ ಇದರ ಸುಳಿವೇ ಬಂದಿರಲಿಲ್ಲ. ಗವರ್ನರನ ಸೆಕ್ರೆಟರಿ ನನಗೆ ಪತ್ರ ಬರೆದು ತಿಳಿಸಿದಾಗ ನನಗೆ ಆಶ್ಚರ್ಯವಾಯಿತು. 'ಸರಕಾರದವರು ಹೋಗಿಹೋಗಿ ಈ ಬಡ ಮೇಷ್ಟರ ಮೇಲೆ ಗಮನ ಬೀರಿದ್ದು ಹೇಗೆ? ನನಗಿಂತ ಎಷ್ಟೋ ಮಂದಿ ಗಣ್ಯರಿದ್ದಾರಲ್ಲ' ಎಂದು!

"ಆಗ ಗವರ್ನರ್ ಅವರು ನನಗೆ ಕರೆ ಕಳುಹಿಸಿ ಮುಖತಃ ಹೇಳಿದರು: 'ನಿನ್ನನ್ನು ಶಿಫಾರಸು ಮಾಡಿರುವವರು ಸಾಮಾನ್ಯರಾರೂ ಅಲ್ಲ: ಗೋವಿಂದರಾಘವಯ್ಯರ್ ಅವರು! ಅವರ ಮಾತನ್ನು ನಾವು ತಿರಸ್ಕರಿಸಲಾದೀತೆ? ನೀವು ತಿರಸ್ಕರಿಸುವಿರಾ?' ಎಂದರು. ನೋಡಿದಿಯಾ ಗೋವಿಂದರಾಘವಯ್ಯರ್ ಅವರ ದೊಡ್ಡತನವನ್ನು! ನಾನು ಈ ದಿವಸ ಕಾಲು ಮುಟ್ಟಿ ಪ್ರಣಾಮ ಮಾಡಲು ಇಂಥವರಿದ್ದಾರಲ್ಲ-ಎಂಬುದೇ ನನಗೆ ಸಂತೋಷ."

# ನಿರ್ಮಲಸ್ನೇಹ

ಗೋವಿಂದರಾಘವಯ್ಯರ್ ಅವರು ಬೆಂಗಳೂರಿಗೆ ಆಗಾಗ ಬರುತ್ತಿದ್ದರು. ಹೈಕೋರ್ಟಿನಲ್ಲಿ ವಕೀಲಿ ಉದ್ಯೋಗಕ್ಕಾಗಿ ಬರುತ್ತಿದ್ದದ್ದಲ್ಲದೆ ಬೇಸಗೆಯಲ್ಲಿ ವಿಶ್ರಾಂತಿಗಾಗಿಯೂ ಬರುತ್ತಿದ್ದದ್ದುಂಟು. ಬಹಳ ದೊಡ್ಡ ವಿದ್ವಾಂಸರು. ಆಚಾರ ವ್ಯವಹಾರಗಳಲ್ಲಿ ಪರಿಶುದ್ಧರೂ, ಪ್ರಾಮಾಣಿಕರೂ ಆಗಿದ್ದರು. ಅವರ ಯೋಗ್ಯತೆ ಎಷ್ಟು ದೊಡ್ಡದೆಂಬುದಕ್ಕೆ ಒಂದೇ ಉದಾಹರಣೆ ಸಾಕು: ಅವರು ದಿವಾನ್ ವಿಶ್ವೇಶ್ವರಯ್ಯನವರ ವಿಶ್ವಾಸಗೌರವಗಳಿಗೆ ಪಾತ್ರರಾಗಿದ್ದರು. ಕೆಲವು ಆಪ್ತ ವಿಚಾರಗಳಲ್ಲಿ ವಿಶ್ವೇಶ್ವರಯ್ಯನವರಿಗೆ ಮನಸ್ಸಮಾಧಾನವನ್ನು ಸಂಪಾದಿಸಿಕೊಟ್ಟು ನಿರ್ವಾಹ ಮಾಡಿದವರು ಗೋವಿಂದರಾಘವಯ್ಯರ್ ಮತ್ತು ಅವರು ಮಾಡಿದ ಸಹಾಯ ವಕೀಲ ವೃತ್ತಿಗೆ ಸಂಬಂಧಪಟ್ಟದ್ದಲ್ಲ; ಕೇವಲ ನಿರ್ಮಲ ಸ್ನೇಹದ್ದು.

# ಉಪರಮ

ಗೋವಿಂದರಾಘವಯ್ಯರ್ ಒಂದೊಂದು ಸಾರಿ ಬೇಸಗೆಯನ್ನು ಕಳೆಯಲು ಹಂಪೆಗೆ ಹೋಗುತ್ತಿದ್ದರು. ಹಂಪೆಯ ಆಕರ್ಷಣೆ ಏನೆಂದರೆ, ಅಲ್ಲಿಯ ಪವಿತ್ರ ಸಾನ್ನಿಧ್ಯ ಮತ್ತು ಪ್ರಶಾಂತತೆಯ ವಾತಾವರಣ. ಗೋವಿಂದರಾಘವಯ್ಯರ್ ಅವರು ಪ್ರತಿದಿನವೂ ಬೆಳಗ್ಗೆ ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ವಿರೂಪಾಕ್ಷದೇವಾಲಯದ ಗೋಪುರದಲ್ಲಿ ಎರಡನೆಯ ಅಂತಸ್ತಿಗೆ ಏಣಿ ಹತ್ತಿ ಹೋಗುವರು. ಸುಮಾರು ೮ ರಿಂದ ೧೨ರ ವರೆಗೂ ಅಲ್ಲಿಯೇ ಇರುವರು-ಗ್ರಂಥಕಾಲಕ್ಷೇಪ, ಧ್ಯಾನ-ಇದಕ್ಕಾಗಿ. ಅನಂತರ ಭೋಜನಾದಿಗಳು ಮುಗಿದ ಮೇಲೆ ಸುಮಾರು ೨.೩೦-೩.೦೦ ರಿಂದ ೫-೫.೩೦ ರವರೆಗೂ ಕಾಲಕ್ಷೇಪ. ಧ್ಯಾನ, ಶಾಂತಿ, ಇಷ್ಟಬಂದ ಗ್ರಂಥ ವ್ಯಾಸಂಗ.

ಅವರು ಎಲ್ಲಿ ಯಾವ ಗ್ರಂಥವನ್ನು ಕಂಡರೂ, ಅದರ ವಿಷಯ ತಮಗೆ ಮೆಚ್ಚಿನದಾದರೆ ಅದನ್ನು ಎರವಲು ತೆಗೆದುಕೊಂಡೋ ಅಥವಾ ಕ್ರಯಕ್ಕೆ ಕೊಂಡೋ ಓದಿ ಮುಗಿಸುವರು. ಅನಂತರ ಮಿತ್ರರೊಡನೆ ಅದನ್ನು ಕುರಿತು ವಿಮರ್ಶೆ ಮಾಡುವರು. ಇಂಥಾದ್ದು ಅವರ ಜ್ಞಾನಪಿಪಾಸೆ.

ಗೋವಿಂದರಾಘವಯ್ಯರ್ ವಕೀಲಿಗೆ ಬರುವುದಕ್ಕೆ ಮುಂಚೆ ಪಚ್ಚೈಯಪ್ಪ ಕಾಲೇಜಿನಲ್ಲಿ ತತ್ತ್ವಶಾಸ್ತ್ರ (ಫಿಲಾಸಫಿ) ಬೋಧಕರಾಗಿದ್ದರು. ಅನಂತರ ಅವರು ಸಾರ್ವಜನಿಕಕ್ಕೆ ಬಂದ ಮೇಲೆ ಅವರ ವಾಕ್ಪ್ರವಾಹ ಹಿಂದಿನಂತೆ ಸರಳವಾಗಿ, ಧಾರಾಳವಾಗಿ, ಗಂಭೀರವಾಗಿ ಹರಿದುಬರುತ್ತಿತ್ತು. ಅವರ ಮನೆ ಬಡ ವಿದ್ಯಾರ್ಥಿಗಳಿಗೆ ಅನ್ನಸತ್ರವಾಗಿತ್ತು.

ನಮ್ಮ ದೇಶದಲ್ಲಿ ಇಂಥ ಮಹನೀಯರ ಜೀವನಚರಿತ್ರೆಗಳನ್ನು ಬರೆದಿಡುವ ಸಂಪ್ರದಾಯ ಇನ್ನೂ ಬೆಳೆಯಬೇಕಾಗಿದೆ. ನಾನು ಗೋವಿಂದರಾಘವಯ್ಯರ್ ಅವರ ಸಮೀಪ ಬಂಧುಗಳಾದ ಒಬ್ಬಿಬ್ಬರಿಗೆ ಈ ಕರ್ತವ್ಯವನ್ನು ಸೂಚಿಸಿದೆ. ಅದು ಫಲಕ್ಕೆ ಬರಲಿಲ್ಲ.

***

# ಒಂದು ಶಂಕೆ

ಶ್ರೀನಿವಾಸ ಶಾಸ್ತ್ರಿಗಳು ಬಿ. ಎ. ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಮೊದಲನೆಯವರಾಗಿ ಉತ್ತೀರ್ಣರಾದರು. ಸಂಸ್ಕೃತದಲ್ಲಂತೂ ಅವರಿಗೆ ಪಾರಿತೋಷಕವಾಗಿ ಚಿನ್ನದ ಪದಕ ಬಂತು. ಅವರ ತಂದೆಗಳಾದ ಶಂಕರನಾರಾಯಣಶಾಸ್ತ್ರಿಗಳಿಗೆ ಪರಮ ಸಂತೋಷ. ಆ ಸಂತೋಷದಲ್ಲಿ ತಮ್ಮ ಸ್ನೇಹಿತರಿಗೆ ಒಂದು ಔತಣವನ್ನೇರ್ಪಡಿಸಿದರು. ಬಂದಿದ್ದ ಅತಿಥಿಗಳು ಬಹು ಮಂದಿ ವಿದ್ವಾಂಸರು. ಭೋಜನಕಾಲದಲ್ಲಿ ವಾಡಿಕೆಯಂತೆ ಅವರಲ್ಲಿ ಕೆಲವರು ಶ್ಲೋಕಗಳನ್ನು ಹೇಳಿದರು. ಒಬ್ಬರು ಹೇಳಿದ್ದು ಈ ಶ್ಲೋಕ:

> ಯದ್ದ್ವ್ಯಕ್ಷರಂ ನಾಮ ಗಿರೇರಿತಂ ನೃಣಾಂ
> ಸಕೃತ್ ಪ್ರಸಂಗಾತ್ ಅಘಮಾಶು ಹನ್ತಿ ಯತ್ ।
> ಜಗದ್ಗುರುಂ ದೇವಮಲಂಘ್ಯಶಾಸನಂ
> ಭವಾನಹೋ ದ್ವೇಷ್ಟಿ ಶಿವಂ ಶಿವೇತರಃ ॥

ಇದು ದಕ್ಷಬ್ರಹ್ಮನನ್ನು ಕುರಿತು ಒಬ್ಬ ಮಹರ್ಷಿಗಳು ಆಡಿದ ಮಾತು. ಜಗದೀಶ್ವರನಾದ ಶಿವನನ್ನು ಅಶಿವನಾದ ನೀನು ದ್ವೇಷಿಸಿದೆಯಲ್ಲ!

ಈ ಶ್ಲೋಕವನ್ನು ಕೇಳಿದಾಗ ಶಾಸ್ತ್ರಿಗಳವರು ಅದನ್ನು ಮತ್ತೊಂದು ಬಾರಿ ಹೇಳಬೇಕೆಂದು ಆ ವಿದ್ವಾಂಸರಲ್ಲಿ ಬಿನ್ನಯಿಸಿದರು. ಅವರು ಎರಡನೆಯ ಸಾರಿ ಹೇಳಿದರು. ಅದರ ಮೇಲೆ ಶಾಸ್ತ್ರಿಗಳ ಪ್ರಶ್ನೆ:

"ಶ್ಲೋಕದ ಉತ್ತರಾರ್ಧದಲ್ಲಿ 'ಶಿವಂ' ಎಂದಿದೆ. ಪೂರ್ವಾರ್ಧದಲ್ಲಿ 'ಯನ್ನಾಮ' ಎಂದಿದೆ. ಈ ಎರಡಕ್ಕೂ ಹೇಗೆ ಅನ್ವಯ?"

ವಿದ್ವಾಂಸರು ಏನೋ ಉತ್ತರ ಹೇಳಿದರು: "ಅದು ಪ್ರಾಚೀನ ಪ್ರಯೋಗ. ಅದನ್ನು ಹೆಚ್ಚು ಚರ್ಚಿಸಬಾರದು."

ಶಾ: "ಅನನ್ವಿತವಾದದ್ದಕ್ಕೆ ಪ್ರಾಚೀನವೆಂದು ಮನ್ನಣೆ ಕೊಡುವುದೆ?"

# ವಷಟ್ಕಾರ

ಶಾಸ್ತ್ರಿಗಳ ತೀರ್ಥರೂಪರು ಈ ಚರ್ಚೆಯನ್ನು ಕೇಳುತ್ತಿದ್ದರು. ಮಗನು ಆಡಿದ ಕಡೆಯ ಮಾತಿನಿಂದ ಅವರಿಗೆ ತುಂಬ ಕೋಪ ಬಂತು. ಅವರ ಮಗನನ್ನು,

“ಛೆ! ನಿನಗೆ ಅಹಂಕಾರ ಬಂದಿದೆ. ಆ ಚಿನ್ನದ ತುಂಡು ಬಂದಿತೆಂದು ನೀನು ಮೈ ಮರೆತು ವಿದ್ವಾಂಸರನ್ನು ಅಗೌರವ ಮಾಡುತ್ತೀಯಾ? ಅವರೆಷ್ಟು ದೊಡ್ಡವರು! ಎಂಥ ಪಂಡಿತರು! ನಿನಗೆ ಕೊಬ್ಬು”

-ಎಂದು ಬೈದರಂತೆ. ಶಾಸ್ತ್ರಿಗಳು ನನಗೆ ಇದನ್ನು ಹೇಳಿ “ನೋಡಿ ಸಾರ್, ನಾನು ಆ ಹೊತ್ತು ಪ್ರತಿಜ್ಞೆ ಮಾಡಿಬಿಟ್ಟೆ; ಇನ್ನೊಬ್ಬರ ವ್ಯಾಕರಣವನ್ನು ತಿದ್ದುವುದಕ್ಕೆ ಹೋಗುವುದಿಲ್ಲ. ಪೂರ್ವಿಕರಿಗೆ ಬಹು ಕೋಪ ಸಾರ್, ಬಹು ಕೋಪ.”

ನಾನು ಒಂದು ಕ್ಷಣ ಸುಮ್ಮನಿದ್ದು ಹೇಳಿದೆ:

“ನಿಮ್ಮ ಒಳ್ಳೆಯ ಪ್ರತಿಜ್ಞೆಯ ಫಲ ಗಾಂಧಿಯವರ ಪಾಲಿಗೆ ದೊರೆಯದೆ ಹೋಯಿತು. ಮೊನ್ನೆ ಅವರು ಬರೆದಿದ್ದ ಇಂಗ್ಲಿಷ್ ಲೇಖನದ ವ್ಯಾಕರಣ ದೋಷಗಳನ್ನೆಲ್ಲ ನೀವು ತಿದ್ದಿದ್ದನ್ನು ಅವರು ‘ಯಂಗ್ ಇಂಡಿಯ’ ಪತ್ರಿಕೆಯಲ್ಲಿ ಪ್ರಕಟಿಸಿದ್ದರಲ್ಲ!”

“ಏನು ಮಾಡುವುದು ಸಾರ್! ಬಹು ವರ್ಷ ಸ್ಕೂಲ್‌ಮೇಷ್ಟರಾಗಿ ವ್ಯಾಕರಣ ತಿದ್ದಿದ್ದ ಅಭ್ಯಾಸ ಸುಲಭವಾಗಿ ಬಿಟ್ಟುಹೋಗುತ್ತದೆಯೆ?”

ಎಲ್ಲರೂ ನಕ್ಕೆವು.

ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಪ್ರಸಂಗ.

# ಸತ್ಯಮೂರ್ತಿ

ಮದರಾಸಿನ ಪ್ರಸಿದ್ಧ ಕಾಂಗ್ರೆಸ್ ವಾಗ್ಮಿ ಸತ್ಯಮೂರ್ತಿಯವರು ಬೆಂಗಳೂರಿನಲ್ಲಿ ಭಾಷಣ ಮಾಡುವುದಾಗಿ ಪತ್ರಿಕೆಗಳಲ್ಲಿ ವರ್ತಮಾನ ಬಂದಿತ್ತು. ಗೊತ್ತಾದ ದಿನ ಶಾಸ್ತ್ರಿಗಳು ತಾವು ಆ ಉಪನ್ಯಾಸ ಕೇಳಲು ಉದ್ದೇಶಿಸಿ ನನ್ನನ್ನು ಕರೆದರು. ನಾನು ಮೂದಲಿಸಿದೆ:

ನಾನು: “ನೀವು ಹೋಗಬೇಕೆ ಅದನ್ನು ಕೇಳುವುದಕ್ಕೆ?”

ಶಾ: “ಹೋಗಬೇಡವೆ? ಆತ ಬಹು ಚೆನ್ನಾಗಿ ಮಾತನಾಡುತ್ತಾನೆ.”

ನಾನು: “ನೀವು ಹೋಗಿ ಉಪನ್ಯಾಸ ಕೇಳಿ, ಆಮೇಲೆ ಆತನ ವ್ಯಾಕರಣಕ್ಕಾಗಿ ದುಃಖಪಡುತ್ತೀರಿ.”

ಶಾ: “ಇಲ್ಲ ಸಾರ್-ಹೋಗಬೇಕು. ಹೋಗದೆ ಉಂಟೆ! ಸತ್ಯಮೂರ್ತಿ ಬುದ್ಧಿವಂತ, ಒಳ್ಳೆಯ ಚತುರ. ಉಪನ್ಯಾಸಕ್ಕೆ ಸಂಬಂಧಪಟ್ಟ ವಿಷಯವನ್ನು ಚೆನ್ನಾಗಿ ವ್ಯಾಸಂಗ ಮಾಡಿ ಬರುತ್ತಾರೆ. ಎಷ್ಟೋ ಹೊಸ ಪಾಯಿಂಟುಗಳನ್ನು ಎತ್ತುತ್ತಾನೆ. ಆತನ ಅಭಿಪ್ರಾಯಗಳನ್ನು ನಾವು ಒಪ್ಪಬೇಕಾದದ್ದಿಲ್ಲ. ಆದರೆ ಆತನ ವಾದಸರಣಿಯನ್ನು ಮೆಚ್ಚಿಕೊಳ್ಳಬಹುದಲ್ಲ! ಆತನು ಎತ್ತುವ ಪಾಯಿಂಟುಗಳನ್ನು ಗ್ರಹಿಸಬಹುದಲ್ಲ? ಬನ್ನಿ, ಹೋಗೋಣ.”

ಹೋಗಿ ಉಪನ್ಯಾಸ ಕೇಳಿದೆವು. ಆ ಜನಸ್ತೋಮದ ಅಂಚಿನಲ್ಲಿ ನಿಂತಿದ್ದೆವು. ಉಪನ್ಯಾಸ ಕೇಳಿ ಹಿಂದಕ್ಕೆ ಬರುವಾಗ ವ್ಯಾಖ್ಯಾನ ನಡೆಯಿತು, ತಮಿಳಿನಲ್ಲಿ.

“ಅಂದ Feller ಪಾರುಂಗೊ ಸಾರ್, ನಲ್ಲ Parliamentary manner...” (ಅವನನ್ನು ನೋಡಿ ಸಾರ್, ಒಳ್ಳೆಯ, ಸಭೆಗೆ ತಕ್ಕ ಶೈಲಿ). ವೀರ್ಯವತ್ತಾದ ಮಾತುಗಳು, ಬಹು ಗಂಭೀರವಾದ ಮಾತು. ಆದರೆ ಆತನಿಗೆ ನಾನು ಎಷ್ಟೋ ಸಾರಿ ಹೇಳಿದ್ದೇನೆ. ‘ನಿನ್ನ Preposition ಗಳನ್ನು ಜಾಗರೂಕತೆಯಿಂದ ನೋಡಿಕೊ’ ಎಂದು...

ಪ್ರಿಪೊಸಿಷನ್ ಎಂದರೆ ಪ್ರತ್ಯಯ ಸಮಾನವಾದ ಮಾತೆಂದಿಟ್ಟುಕೊಳ್ಳಬಹುದು. ‘Get on’ ಎಂಬುದರಲ್ಲಿರುವ ‘on’ ಎಂಬುದು ಪ್ರಿಪೊಸಿಷನ್.

# ಮಾತಿನ ಸೊಗಸು

ಹೀಗೆ ಪ್ರಾರಂಭ ಮಾಡಿ ಆ ದಿನದ ಭಾಷಣದಲ್ಲಿದ್ದ ಎರಡುಮೂರು ತಪ್ಪುಗಳನ್ನೆತ್ತಿ ತೋರಿಸಿದರು. ಅವರಿಗೆ ಇಂಗ್ಲಿಷಿನಲ್ಲಿ ಒಂದು ಸಣ್ಣ ಶಬ್ದ ಅಪಪ್ರಯೋಗವಾದದ್ದನ್ನು ನೋಡಿದರೂ ಮೈಮೇಲೆ ಪೆಟ್ಟು ಬಿದ್ದಂತೆ ನೋವಾಗುತ್ತಿತ್ತು.

ಇಂಗ್ಲಿಷ್ ಮಾತಿನ ಉಚ್ಚಾರಣೆಯ ವಿಷಯದಲ್ಲಿಯೂ ಹಾಗೆಯೇ. ಇಂಗ್ಲಿಷ್ ಭಾಷೆಯಲ್ಲಿ ಒಂದೊಂದು ಪದಕ್ಕೂ, ಅದರಲ್ಲಿ ಎರಡು ಮೂರು ಮಾತ್ರೆಗಳಿದ್ದರೆ ಅದರ ಪೈಕಿ ಒಂದು ಮಾತ್ರೆಯ ಮೇಲೆ ಸ್ವರಭಾರವಿರುತ್ತದೆ. ಇದಕ್ಕೆ ಆಕ್ಸೆಂಟ್ (Accent) ಎಂದು ಹೆಸರು. ಈ ಆಕ್ಸೆಂಟನ್ನು ಶಾಸ್ತ್ರಿಗಳು ಗಮನವಿರಿಸಿ ಮನ್ನಿಸುತ್ತಿದ್ದರು.

ಲಂಡನ್ ಪಟ್ಟಣದ ಪೌರಸಭೆಯು ಶಾಸ್ತ್ರಿಗಳವರನ್ನು ಒಂದು ಬಾರಿ ಗೌರವಿಸಿತು. ಅದು ಬಹಳ ದೊಡ್ಡ ಸಭೆ. ಪ್ರಮುಖರೂ ಗಣ್ಯರೂ ಆದ ಮಹಿಳೆಯರೂ ಮಹನೀಯರೂ ಆ ಔತಣಕೂಟದಲ್ಲಿ (Banquet) ನೆರೆದಿದ್ದರು. ಪೌರಾಧ್ಯಕ್ಷನು (Lord Mayor) ಶಾಸ್ತ್ರಿಗಳನ್ನು ಪ್ರಶಂಸಿಸಿ ಭಾಷಣಮಾಡಿದ. ಶಾಸ್ತ್ರಿಗಳು ಪ್ರತ್ಯುತ್ತರ ಹೇಳಿದರು. ಈ ಪ್ರತ್ಯುತ್ತರ ಭಾಷಣ ಮುಗಿದ ಕೂಡಲೆ ಆಗ ಸಭೆಯಲ್ಲಿದ್ದ ಲಾರ್ಡ್ ಸೈಮನ್ ಮಹಾಶಯನು ತನ್ನ ಸೆಕ್ರೆಟರಿಯ (Mr. Bach) ಕಡೆ ತಿರುಗಿ ಹೇಳಿದನಂತೆ:

“ಮಿ ॥ ಬಾಖ್, ನಮ್ಮ ಭಾಷೆ ಇಷ್ಟು ಸೊಗಸಾದದ್ದೆಂದು ಇದುವರೆಗೂ ತಿಳಿದಿರಲಿಲ್ಲ, ಎಷ್ಟು ಸುಂದರವಾಗಿತ್ತು!”

ಇದನ್ನು ಬಾಖ್ ಮಹಾಶಯನೇ ನನ್ನೊಡನೆ ಹೇಳಿದ.

# ಕಾವ್ಯವಾಚನ

ಶಾಸ್ತ್ರಿಗಳವರೂ ಅವರ ಬೆಂಗಳೂರು ಸ್ನೇಹಿತರೂ ಒಂದು ಸಂಜೆ ಎಸ್. ಜಿ. ಶಾಸ್ತ್ರಿಗಳವರ ಮನೆಯಲ್ಲಿ ಸೇರಿದ್ದೆವು. ಆಗ ಇಂಗ್ಲಿಷ್ ಸಾಹಿತ್ಯ ಬೋಧನೆಯ ವಿಷಯ ಮಾತಿಗೆ ಬಂತು. ಹಾಗೆ ಮಾತು ಬೆಳೆದು ಕಾವ್ಯದ ಕಡೆ ತಿರುಗಿತು. ಆಗ ಅಲ್ಲಿದ್ದ ವರ್ಡ್ಸ್‌ವರ್ತ್ ಕವಿಯ ಕಾವ್ಯಗ್ರಂಥದ ಕಡೆಗೆ ಗಮನ ಹೋಗಿ ಶಾಸ್ತ್ರಿಗಳು ಆ ಗ್ರಂಥದಿಂದ ಎರಡು ಮೂರು ಸಣ್ಣ ಸಣ್ಣ ಕಾವ್ಯಗಳನ್ನು ಓದಿದ್ದು ನನ್ನ ಜ್ಞಾಪಕದಲ್ಲಿ ನಿಂತಿದೆ. ಅವರು ಅಕ್ಷರ ಅಕ್ಷರಕ್ಕೂ ಅದಕ್ಕೆ ಸಲ್ಲುವ ಬೆಲೆಯನ್ನು ಕೊಟ್ಟು ಶ್ರೀಮದ್ರಾಮಾಯಣದಲ್ಲಿ ಹೇಳಿರುವಂತೆ ‘ಅವಿಲಂಬಿತಮದ್ರುತಂ’ - ಅಕ್ಷರ ಅಕ್ಷರವನ್ನೂ ಬಿಡಿಸಿ, ಆದರೆ ಎರಡಕ್ಕೂ ನಡುವೆ ಬಿಡುವಿಲ್ಲದಂತೆ ಧ್ವನಿಯನ್ನು ಭಾವಕ್ಕೆ ತಕ್ಕಂತೆ ಏರಿಸಿ ಇಳಿಸಿ, ಅರ್ಥವು ಕೂಡಲೆ ಮನಸ್ಸಿಗೆ ಹೋಗುವಂತೆ ಓದಿದರು. ಅದು ನಮಗೆ ಪಾಠ. ಈ ಪಾಠವನ್ನು ನಾನು ಪೂರ್ತಿ ಕಲಿತೆನೆಂದು ಹೇಳಲಾರೆ.

ಶಾಸ್ತ್ರಿಗಳು ಹಿಂದೂ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದಾಗ ಮದರಾಸಿಗೆ ಮಾರ್ಕ್ ಹಂಟರ್ (Mark Hunter) ಎಂಬ ಪ್ರಸಿದ್ಧ ಸಾಹಿತ್ಯ ವಿದ್ವಾಂಸ ಬಂದಿದ್ದ. ಆತ ಇಂಗ್ಲಿಷ್ ಕಾವ್ಯವಾಚನ ಕ್ರಮದಲ್ಲಿಯೂ ಷೇಕ್ಸ್ಪಿಯರನ ನಾಟಕಗಳ ಅಭಿನಯದಲ್ಲಿಯೂ ನಿಪುಣನೆನಿಸಿದ್ದ. ಆತನಲ್ಲಿ ಶ್ರೀನಿವಾಸಶಾಸ್ತ್ರಿಗಳು ತರಬೇತಿ ಪಡೆದರಂತೆ. ಆಗ ಅವರ ಜೊತೆಯಲ್ಲಿ ಬೆಂಗಳೂರಿನ (ಕಡೆಕಡೆಗೆ ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ) ಡಿ. ವೆಂಕಟರಾಮಯ್ಯನವರೂ ಸೇರಿದ್ದರು. ಇಬ್ಬರೂ ಎಲ್. ಟಿ. ವ್ಯಾಸಂಗ ಮಾಡುತ್ತಿದ್ದರು. ಹೀಗೆ ಪ್ರಾರಂಭವಾದ ಅವರ ಸ್ನೇಹ ಕಡೆಯವರೆಗೂ ಮಾಸದೆ ಒಂದೇ ರೀತಿ ಗಾಢವಾಗಿತ್ತು.

ಶಾಸ್ತ್ರಿಗಳಿಗೆ ಇಂಗ್ಲಿಷ್ ಸಾಹಿತ್ಯಪ್ರೇಮದ ಕಾರಣದಿಂದ ಗಾಢ ಸ್ನೇಹಿತರಾಗಿದ್ದ ಇನ್ನೊಬ್ಬರು ಬೆಂಗಳೂರಿನಲ್ಲಿ ಲಂಡನ್ ಮಿಷನ್ ಹೈಸ್ಕೂಲಿನ ಹೆಡ್‌ಮಾಸ್ಟರಾಗಿದ್ದ ಕೆ. ರಾಮಚಂದ್ರರಾಯರು.

# ‘ಟೀಚರ್-ಮ್ಯಾನೇಜರ್’ ಪದ್ಧತಿ

ಶ್ರೀನಿವಾಸ ಶಾಸ್ತ್ರಿಗಳಿಗೆ ಮೊದಲು ಪ್ರಸಿದ್ಧಿ ಬಂದದ್ದು ಮದರಾಸಿನ ತಿರುವಳ್ಳಿಕ್ಕೇಣಿಯಲ್ಲಿರುವ ಹಿಂದೂ ಹೈಸ್ಕೂಲ್ ಸಂಸ್ಥೆಯ ಅಧ್ಯಕ್ಷರಾಗಿ ಅವರು ತೋರಿದ ವಿಚಕ್ಷಣೆಯಿಂದ. ಮದರಾಸಿಗೆ ಬರುವುದಕ್ಕೆ ಮುಂಚೆ ಅವರು ಮಾಯಾವರ, ಕುಂಭಕೋಣ ಮೊದಲಾದ ಸ್ಥಳಗಳಲ್ಲಿ ಉಪಾಧ್ಯಾಯರಾಗಿದ್ದರು. ಆಗಿನ ವಿದ್ಯಾಸಂಸ್ಥೆಗಳ ಅವಸ್ಥೆಯನ್ನು ಅವರು ನನಗೆ ಒಂದು ಸಾರಿ ವರ್ಣಿಸಿದರು. ಆಗ ಟೀಚರ್-ಮ್ಯಾನೇಜರ್ ಪದ್ಧತಿಯ ಸ್ಕೂಲುಗಳು ಸಾಮಾನ್ಯವಾಗಿದ್ದವು. ಆ ಸ್ಕೂಲುಗಳು ಸರಕಾರಿಯವಲ್ಲ, ಸರಕಾರದಿಂದ ಕೊಂಚ ಕೊಂಚ ಸಹಾಯ (Grant) ಪಡೆಯುತ್ತಿದ್ದವು. ಸ್ಕೂಲಿನ ಸಕಲ ವ್ಯವಹಾರವೂ ಮ್ಯಾನೇಜರದಾಗಿತ್ತು. ಆ ಮ್ಯಾನೇಜರ್ ಎಂಬವನೇ ಸ್ಕೂಲಿನ ಮಾಲಿಕ. ಉಪಾಧ್ಯಾಯರುಗಳು ಆ ಮ್ಯಾನೇಜರ್ ಇಟ್ಟುಕೊಂಡ ಆಳುಗಳು. ಆ ಆಳುಗಳಿಗೂ ಆ ಮ್ಯಾನೇಜರಿಗೂ ಆಗಾಗ ತಕರಾರು-ಸಂಬಳದ ವಿಷಯದಲ್ಲಿ, ರಜಾ ವಿಷಯದಲ್ಲಿ, ವೇಳಾಪಾಠಪಟ್ಟಿಯ ವಿಷಯದಲ್ಲಿ, ಎಲ್ಲಕ್ಕಿಂತ ಹೆಚ್ಚಾಗಿ, ವಿದ್ಯಾರ್ಥಿಗಳನ್ನು ಕ್ಲಾಸಿನಿಂದ ಕ್ಲಾಸಿಗೆ ಪ್ರೊಮೋಷನ್ ಮಾಡುವ ವಿಷಯದಲ್ಲಿ. ಉಪಾಧ್ಯಾಯನು ಪರೀಕ್ಷೆಯ ಫಲಿತಾಂಶವನ್ನನುಸರಿಸಿ ಪ್ರೊಮೋಷನ್ ಕೊಡತಕ್ಕದ್ದೆನ್ನುವನು. ಮ್ಯಾನೇಜರಾದರೋ ಊರಿನ ಧನಿಕರು, ಮುಂದಾಳುಗಳು, ಅಧಿಕಾರಿಗಳು, ತನಗೆ ಬೇಕಾದವರು ಇಂಥವರ ಮಕ್ಕಳುಗಳಿಗೆ ಪ್ರೊಮೋಷನ್ ಕೊಡತಕ್ಕದ್ದು-ಎನ್ನುವನು. ಹೀಗೆ ತಕರಾರು ನಡೆದು ಎಷ್ಟೋ ಸ್ಕೂಲುಗಳು ಮುಚ್ಚಿಹೋದವಂತೆ.

ಅನಂತರ ಬಂದದ್ದು ಟೀಚರ್-ಮ್ಯಾನೇಜರ್ ಪದ್ಧತಿ. ಈ ಹೊಸ ಪದ್ಧತಿಯಲ್ಲಿ ಮ್ಯಾನೇಜರಾದವನು ಉಪಾಧ್ಯಾಯನಾಗಿರಬೇಕು. ಆದದ್ದರಿಂದ ಅವನೇ ಮುಖ್ಯೋಪಾಧ್ಯಾಯ. ಈ ಪದ್ಧತಿಯಲ್ಲಿ ಹಿಂದಿನಂತೆ ತಕರಾರುಗಳಿದ್ದದ್ದಲ್ಲದೆ ಈಗ ಮುಬ್ಭಾಗವಾಯಿತು. (೧) ಮುಖ್ಯೋಪಾಧ್ಯಾಯನ ಮ್ಯಾನೇಜರುತನ, (೨) ಆತನ ಮುಖ್ಯೋಪಾಧ್ಯಾಯತನ, (೩) ಮಿಕ್ಕ ಉಪಾಧ್ಯಾಯರ ಪಕ್ಷ. ಈಗ ಮೇಷ್ಟರುಗಳಲ್ಲಿಯೇ ತಕರಾರು.

# ಕೊತ್ತುಕ್ಕಾರ ಪಂಜು

ಈ ಅವ್ಯವಸ್ಥೆ ಎಷ್ಟು ದೂರ ಹೋಯಿತೆಂದರೆ ಮಾಯಾವರದಲ್ಲಿ ಆ ಸಮೀಪದ ಒಂದು ಊರಿನಲ್ಲಿ ಉಪಾಧ್ಯಾಯರುಗಳಿಗೆ ಬಹು ಕಾಲ ಸಂಬಳವೇ ಕೈ ಸೇರಲಿಲ್ಲ. ಅವರು ಬೊಬ್ಬೆ ಹಾಕಿದರು. ಮ್ಯಾನೇಜರ್-ಹೆಡ್‌ಮಾಸ್ಟರನ್ನು ಬೇಡಿ ನೋಡಿದರು. ಹೆದರಿಸಿ ನೋಡಿದರು. ಆತನು ಯಾವುದಕ್ಕೂ ಸಿಗ್ಗಲಿಲ್ಲ.

ಆಗ ಮೇಷ್ಟರುಗಳು ಆ ಊರಿನಲ್ಲಿ ಶವವಾಹಕರಲ್ಲಿ ಮುಖ್ಯಸ್ಥನಾದ ಪಂಜು ಎಂಬವನನ್ನು ಮೊರೆಹೊಕ್ಕರು. ಆತನ ಹೆಸರು ಕೊತ್ತುಕ್ಕಾರ ಪಂಜು. ಅವನು ಹೆಣ ಹೊರುವ ಕಂಟ್ರ್ಯಾಕ್ಟುದಾರ. ಶಾಸ್ತ್ರಿಗಳು ಈ ಕಥೆಯನ್ನು ಬಹಳ ವಿನೋದಕರವಾಗಿ ಹೇಳುತ್ತಿದ್ದರು. ಕೊತ್ತುಕ್ಕಾರ ಪಂಜು ಒಳ್ಳೆಯ ಕಟ್ಟುಮಸ್ತಾದ ಆಳು. ಅವನ ಸಂಗಡಿಗರು ಎಂಟು ಹತ್ತು ಮಂದಿ ಅವನಂಥವರು. ಆ ಪಂಜುವಿಗೆ ಮೇಷ್ಟರುಗಳ ಬೇಡಿಕೆ ನ್ಯಾಯವೆಂದು ತೋರಿತು. ಆತ ಹೇಳಿದ: “ನಾನು ನಿಮಗೆ ಸಂಬಳ ಕೊಡಿಸುತ್ತೇನೆ. ಈ ವಿಚಾರವನ್ನು ನನಗೆ ಬಿಡಿ.” ಹೀಗೆ ಧೈರ್ಯ ಹೇಳಿ ತನ್ನ ಪಡೆಯನ್ನು ಕಟ್ಟಿಕೊಂಡು ಸ್ಕೂಲಿಗೆ ಹೋದ. ಅಲ್ಲಿಯ ಮ್ಯಾನೇಜರ್-ಹೆಡ್‌ಮಾಸ್ಟರನ್ನು ಸುತ್ತುಗಟ್ಟಿ (ಘೇರಾವ್) ಗರ್ಜಿಸಲಾರಂಭಿಸಿದ. ಹೆಡ್‌ಮಾಸ್ಟರು “ನಿಮಗೆ ಏನು ಬೇಕೋ ಹೇಳಿದರೆ ಈಗಲೇ ಕೊಟ್ಟು ಬಿಡುತ್ತೇನೆ” ಎಂದ. ಪಂಜು “ನೀವು ಆ ಜಾಗದಿಂದ ಹೊರಡಬೇಕು. ಇಲ್ಲದಿದ್ದರೆ ನಾವು ನಿಮ್ಮನ್ನು ಹೊರಡಿಸುತ್ತೇವೆ. ಇಂದಿನಿಂದ ನಾನೇ ಹೆಡ್‌ಮಾಸ್ಟರು” ಎಂದ.

ಬಡ ಮೇಷ್ಟರುಗಳಿಗೆ ಧೈರ್ಯ ಬಂದಿತಾದರೂ ಅವರಲ್ಲಿ ಕೆಲವರು ಪಂಜುವಿನ ಕೈ ಕೆಳಗೆ ಕೆಲಸ ಮಾಡಲು ಹೆದರಿದರು. ಇಷ್ಟಾದ ಮೇಲೆ ಊರಿನ ಪಂಚಾಯಿತಿ ನಡೆದು ಸ್ಕೂಲಿಗೆ ಹೊಸ ವ್ಯವಸ್ತೆ ಬಂದಿತು.

ಈ ಕಥೆಯನ್ನು ಶಾಸ್ತ್ರಿಗಳು ವಿವರಿಸಿ ಹೇಳಿ, “ಇಂಥಾದ್ದು ಸಾರ್ ನಾನು ಪಟ್ಟ ಪಾಡು! ಹಾಗಿತ್ತು ವಿದ್ಯಾಪ್ರಚಾರದ ವಿಚಕ್ಷಣೆ ನಾನು ಮೇಷ್ಟರಾಗಿದ್ದ ಹೊಸತಿನಲ್ಲಿ” ಎಂದರು.

# ಬೆಂಗಳೂರಿನ ಒಂದು ಹಗರಣ

ಅವರು ಬೆಂಗಳೂರಿನಲ್ಲಿದ್ದಾಗ ಕೊತ್ತುಕ್ಕಾರ ಪಂಜು ಪ್ರಕರಣಕ್ಕೆ ಸಮಾನವಾದದ್ದು ಒಂದು ಸಂದರ್ಭ ನಡೆಯಿತು. ಬೆಂಗಳೂರಿನ ಒಂದಾನೊಂದು ಹೈಸ್ಕೂಲು ಸಾಹುಕಾರರ ಆಡಳಿತದಲ್ಲಿತ್ತು. ಆ ಸಾಹುಕಾರರು ಉದಾರಿಗಳು, ಧರ್ಮಿಷ್ಠರು. ಆದರೆ ಅವರಿಗೆ ತಮ್ಮ ಸ್ನೇಹಿತರ ದಾಕ್ಷಿಣ್ಯದ ಒತ್ತಡ ಬಲವಾಗಿತ್ತು. ಸಾಹುಕಾರರ ಆ ಸ್ನೇಹಿತರು ಒಬ್ಬ ದೊಡ್ಡ ಸರಕಾರಿ ಅಧಿಕಾರಿಗಳು. ಈ ಅಧಿಕಾರಿಯ ಮಕ್ಕಳಿಬ್ಬರೂ ಆ ಸ್ಕೂಲಿನಲ್ಲಿ ವಿದ್ಯಾರ್ಥಿಗಳಾಗಿದ್ದರು. ಆ ಇಬ್ಬರು ವಿದ್ಯಾರ್ಥಿಗಳೂ ಬೇರೆ ಬೇರೆ ತರಗತಿಗಳವರು. ಎರಡು ಮೂರು ವರ್ಷ ಕಳೆದರೂ ಅವರಿಗೆ ಮೇಲ್ತರಗತಿಗೆ ಪ್ರೊಮೋಷನ್ ಆಗಲಿಲ್ಲ. ಆ ಇಬ್ಬರು ವಿದ್ಯಾರ್ಥಿಗಳಿಗೂ ಪ್ರೊಮೋಷನ್ ಮಾಡಿಸಬೇಕೆಂದು ಅವರ ತಂದೆತಾಯಿಗಳ ಹಟ. ವಿದ್ಯಾರ್ಥಿಗಳು ದಡ್ಡರೆಂದೂ, ಓದುವವರಲ್ಲವೆಂದೂ ಅವರಿಗೆ ಓದು ಬೇಡವೆಂದೂ ಮೇಷ್ಟರುಗಳ ವಾದ. ಈ ವಾದಕ್ಕೆ ರುಜುವಾತಾಗಿ ಆ ವಿದ್ಯಾರ್ಥಿಗಳು ಪರೀಕ್ಷೆಗೆ ಕೊಟ್ಟಿದ್ದ ಉತ್ತರಪತ್ರಗಳನ್ನು ಮೇಷ್ಟರುಗಳು ತೋರಿಸುತ್ತಿದ್ದರು. ಹೀಗೆ ಘರ್ಷಣೆ ಹುಟ್ಟಿ ಸಾಹುಕಾರರು ಆ ಉಪಾಧ್ಯಾಯರನ್ನು ಕೆಲಸದಿಂದ ವಜಾ ಮಾಡುವುದಾಗಿ ಹೆದರಿಸಿದರು. ಆಗ ಆ ಉಪಾಧ್ಯಾಯರು ಭಯಪಟ್ಟು ಶ್ರೀನಿವಾಸಶಾಸ್ತ್ರಿಗಳ ಬಳಿಗೆ ಬಂದು ತಮ್ಮ ಸಂಕಟವನ್ನು ಹೇಳಿಕೊಂಡರು.

ಶಾಸ್ತ್ರಿಗಳು ಆ ವಿದ್ಯಾರ್ಥಿಗಳ ಉತ್ತರಪತ್ರಗಳನ್ನು ತೆಗೆದುಕೊಂಡು ನೋಡಿ, ಆ ಕಾಲದಲ್ಲಿ ಬೆಂಗಳೂರು ಕಂಟೋನ್ಮೆಂಟಿನ ಕಲೆಕ್ಟರಾಗಿದ್ದ ಮೆಕೀವರ್ MacIver, ಐ.ಸಿ.ಎಸ್.) ಎಂಬಾತನಲ್ಲಿಗೆ ಹೋಗಿ ಸಂದರ್ಭವನ್ನು ವಿವರಿಸಿದರು. ಆತ ವಿದ್ಯಾಭಿಮಾನಿ. ಅಷ್ಟೇ ಅಲ್ಲದೆ ಆತನು ಆ ಸ್ಕೂಲಿನ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷನಾಗಿದ್ದ. ಆತನ ತೀರ್ಮಾನದಂತೆ ಉಪಾಧ್ಯಾಯರುಗಳಿಗೆ ಅನುಕೂಲವಾಯಿತು. ಸಾಹುಕಾರರಿಗೆ ಸಮಾಧಾನವಾಯಿತು.

# ಸಾಹಿತ್ಯಪಾಠ

ಶಾಸ್ತ್ರಿಗಳು ತಿರುವಳ್ಳಿಕ್ಕೇಣಿಯ ಹಿಂದೂ ಹಿಸ್ಕೂಲಿನ ಉಪಾಧ್ಯಾಯರಾಗಿ ಸೇರಿದ ಮೇಲೆ ಅವರ ಕೀರ್ತಿ ಹೆಚ್ಚಿತು. ಅವರ ಬೋಧನ ವಿಚಕ್ಷಣೆ, ವ್ಯವಸ್ಥಾ ವಿಚಕ್ಷಣೆ ಎರಡೂ ಅದಕ್ಕೆ ಕಾರಣ. ಅವರ ಬೋಧನೆಯನ್ನು ಕುರಿತು ಬಹು ಮಂದಿ ಅವರ ಶಿಷ್ಯರು ಕೊಂಡಾಡಿದ್ದನ್ನು ನಾನು ಕೇಳಿದ್ದೇನೆ. ಅವರ ಬೋಧನಕ್ರಮದ ಗುಣ ಅವರ ಭಾಷಾಪಾಂಡಿತ್ಯದಿಂದ ಬಂದದ್ದು. ಅವರ ಕರ್ತವ್ಯಶ್ರದ್ಧೆಯಿಂದಲೂ ಬಂದದ್ದು. ಅವರು ಹೇಳುತ್ತಿದ್ದುದು ಇಂಗ್ಲಿಷ್ ಸಾಹಿತ್ಯ ಪಾಠ. ಭಾಷಾ ಪ್ರಯೋಗ, ಪ್ರಯೋಗದ ವ್ಯಾಕರಣ, ಆ ಭಾಷೆಯ ವಿಶೇಷ ಮರ್ಯಾದೆ (Idiom) ಮತ್ತು ಪದದ ಉಚ್ಚಾರಣೆ–ಇವೆಲ್ಲಕ್ಕೂ ಎಚ್ಚರಿಕೆಯಿಂದ ಗಮನ ಕೊಡುತ್ತಿದ್ದರಂತೆ. ಅವರ ಶಿಷ್ಯರಲ್ಲಿ ಒಬ್ಬಾತ ಕಾಲಕ್ರಮದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಸ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ ॥ ಎಂ. ಎ. ಸಂಪತ್‌ಕುಮಾರನ್ ಅವರು. ಆತನು ಶಾಸ್ತ್ರಿಗಳ ಕೈಯಿಂದ ಕಿವಿ ಹಿಂಡಿಸಿ ಕೊಂಡದ್ದನ್ನು ಸ್ನೇಹಿತರಿಗೆ ಪದೇ ಪದೇ ಹೇಳುತ್ತಿದ್ದ.

ಬೆಂಗಳೂರು ಶಂಕರಪುರದ ಮೊದಲನೆಯ ಅಡ್ಡ ರಸ್ತೆಯಲ್ಲಿ ಸಿ. ಕೃಷ್ಣಮೂರ್ತಿ ಎಂಬ ಅಡ್ವೊಕೇಟರು ವಾಸವಾಗಿದ್ದರು. ಆ ಕಾಲದಲ್ಲಿ ಅವರು ಹೆಸರುವಾಸಿಯಾದ ವಕೀಲರು, ಸಾರ್ವಜನಿಕರು. ಅವರ ಅಳಿಯ ಪಾರ್ಥಸಾರಥಿ ಎಂಬವರು. ಇವರು ಕೃಷ್ಣಮೂರ್ತಿಗಳ ಆಫೀಸಿನಲ್ಲೇ ಲಾಯರಾಗಿದ್ದವರು. ಪಾರ್ಥಸಾರಥಿಯವರ ಮನೆಯಲ್ಲಿ ಬಹುಶಃ ಅವರ ಮಗಳ ಮದುವೆಯ ಸಂದರ್ಭದಲ್ಲಿ ಶ್ರೀನಿವಾಸಶಾಸ್ತ್ರಿಗಳು ಅಲ್ಲಿಗೆ ಬರಬೇಕೆಂದು ಕೃಷ್ಣ ಮೂರ್ತಿಗಳು ಆಹ್ವಾನಿಸಿ ಬಂದರು. ಶ್ರೀನಿವಾಸಶಾಸ್ತ್ರಿಗಳು ಅಂಥ ದೊಡ್ಡ ಮನುಷ್ಯರಿಗೆ ಪ್ರತಿಗೌರವ ತೋರಬೇಕೆಂದು ಮದುವೆಯ ಮನೆಗೆ ಹೋದರು. ಅಲ್ಲಿ ತಾಂಬೂಲ ಕೊಡುವಾಗ ಪಾರ್ಥಸಾರಥಿಯವರು ಶಾಸ್ತ್ರಿಗಳನ್ನು ಮಾತನಾಡಿಸುತ್ತ, “ನಾನು ತಮ್ಮ ಶಿಷ್ಯ” ಎಂದರು.

“ಯಾವಾಗ? ಎಲ್ಲಿ?”

“ಮದರಾಸಿನಲ್ಲಿ-ಹಿಂದೂ ಹೈಸ್ಕೂಲಿನಲ್ಲಿ” ಹೀಗೆ ಹೇಳಿ ಅಷ್ಟಕ್ಕೆ ಬಿಡದೆ–

“ಆಗ ಕಪಾಳದ ಮೇಲೆ ಪೆಟ್ಟು ತಿಂದದ್ದು ಜ್ಞಾಪಕವಿದೆ” ಎಂದರು.

ಶಾಸ್ತ್ರಿಗಳು ಈ ಮಾತನ್ನು ಕೇಳಿದ ಮೇಲೆ ಕುಗ್ಗಿಹೋದವರಂತೆ–

“ಕ್ಷಮಿಸಬೇಕು ಸಾರ್” -ಎನ್ನುತ್ತ ತಮ್ಮ ಕೆನ್ನೆಗಳನ್ನು ಮುಟ್ಟಿಕೊಂಡರು.

“ಆಗ ನನ್ನದು ಚಿಕ್ಕ ವಯಸ್ಸು, ಇಂಥದು ಎಷ್ಟು ಮಾಡಿದ್ದೆನೋ! ದಯವಿಟ್ಟು ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬಾರದು. ಆ ಭರವಸೆ ಕೊಟ್ಟರೆ ತಾಂಬೂಲ ತೆಗೆದುಕೊಳ್ಳುತ್ತೇನೆ” ಎಂದರು. ನಮಗೆಲ್ಲ ನಗು. ಶಾಸ್ತ್ರಿಗಳು,

“ಏನು ಮಾಡುವುದು ಸಾರ್! ಸ್ಕೂಲ್ ಮೇಷ್ಟರ ಕಸಬು ಅಂಥದು!”

ಎಂದು ವ್ಯಾಕುಲದಿಂದ ಹೇಳಿದರು.

ಆದರೆ ಶಿಷ್ಯರ ತಂದೆತಾಯಿಗಳೂ, ಊರಿನ ಮಹಾಜನರೂ ಶಾಸ್ತ್ರಿಗಳನ್ನು ತುಂಬ ಮೆಚ್ಚಿಕೊಂಡಿದ್ದರು. ಸ್ಕೂಲಿನ ವಿಷಯದಲ್ಲಿ ಜನಾಭಿಪ್ರಾಯ ಹೆಚ್ಚಿತು. ಮೂರು ನಾಲ್ಕು ವರ್ಷಗಳಲ್ಲಿ ಶಾಸ್ತ್ರಿಗಳನ್ನು ಮುಖ್ಯೋಪಾಧ್ಯಾಯರ ಪದವಿಗೆ ನಿಯಮಿಸಲಾಯಿತು. ಆಗಿನ ಅವರ ವಿಚಕ್ಷಣೆಗೆ ಒಂದು ನಿದರ್ಶನ ಹೇಳುತ್ತೇನೆ.

# ಪ್ರವೇಶ ಪರೀಕ್ಷೆ

ಹಿಂದೂ ಹೈಸ್ಕೂಲಿಗೆ ವಿದ್ಯಾರ್ಥಿಯಾಗಿ ಸೇರಬೇಕೆಂದು ಬಂದ ಹುಡುಗರನ್ನು ತಾವು ಸ್ವತಂತ್ರ ಪರೀಕ್ಷೆ ನಡೆಸಿ ಸೇರಿಸಿಕೊಳ್ಳುವುದು ಶಾಸ್ತ್ರಿಗಳ ಪದ್ಧತಿ. ಪಬ್ಲಿಕ್ ಪರೀಕ್ಷೆಯಲ್ಲಿ ಅದು ಹಳೆಯ ಲೋವರ್ ಸೆಕೆಂಡರಿ ಮಟ್ಟದ ಪರೀಕ್ಷೆ-ವಿದ್ಯಾರ್ಥಿಯು ತೇರ್ಗಡೆಯಾಗಿದ್ದದ್ದು ಶಾಸ್ತ್ರಿಗಳಿಗೆ ಸಾಲದು.

ಹೀಗಿದ್ದಾಗ ಇಬ್ಬರು ಆಂಧ್ರ ಪ್ರಾಂತದ ವಿದ್ಯಾರ್ಥಿಗಳು ಹಿಂದೂ ಹೈಸ್ಕೂಲಿಗೆ ಸೇರಬೇಕೆಂದು ಅಪ್ಲಿಕೇಷನ್ ಹಾಕಿ ಮದರಾಸಿಗೆ ಬಂದರು. ಅವರಲ್ಲೊಬ್ಬರು ಉತ್ತರೋತ್ತರ ನಮ್ಮ ಸಂಸ್ಥಾನದ ದಿವಾನರಾದ ನ್ಯಾಪತಿ ಮಾಧವರಾಯರು. ಇನ್ನೊಬ್ಬಾತನ ಹೆಸರು ನನಗೆ ಮರೆತುಹೋಗಿದೆ.

ಈ ಇಬ್ಬರು ವಿದ್ಯಾರ್ಥಿಗಳು ಶಾಸ್ತ್ರಿಗಳ ಮುಂದೆ ಬಂದಾಗ ಶಾಸ್ತ್ರಿಗಳು ಒಂದು ಪ್ರಶ್ನೆ ಹಾಕಿದರು:

“Please construct a sentence with the phrase 'had it not been' thrown into it.”

ಆ ಇನ್ನೊಬ್ಬ ವಿದ್ಯಾರ್ಥಿ ಕೂಡಲೆ ಹೇಳಿದ:

“Had it not been for the fact that you are the headmaster here, we would not have been particular about applying for seats here!”

ಶಾಸ್ತ್ರಿಗಳಿಗೆ ಪರಮ ಸಂತೋಷ. ಅವರು ಆ ಕ್ಷಣವೇ ತಮ್ಮ ಸಹಾಯೋಪಾಧ್ಯಾಯರನ್ನು ಕರೆದು ಹೇಳಿದರು;

“ಸುಬ್ರಹ್ಮಣ್ಯಯ್ಯರ್ವಾಳ್, ಈ ಹುಡುಗರನ್ನು ಮೊದಲು ಕರೆದುಕೊಂಡು ಹೋಗಿ ಕ್ಲಾಸಿನಲ್ಲಿ ಕೂಡಿಸಿ. ನಾವು ಅವರಿಗೆ ಸೀಟು ಕೊಡಬೇಕಾಗಿಲ್ಲ; ಅವರು ಅದನ್ನು ಗೆದ್ದುಕೊಂಡಿದ್ದಾರೆ. ಸೀಟುಗಳು ಅವರವು.”

ಇದು ಶಾಸ್ತ್ರಿಗಳ ದಾರಿ. ಅವರ ಎಲ್ಲ ವ್ಯವಹಾರಕ್ಕೂ ಈ ನೀತಿಯನ್ನು ಅನ್ವಯಿಸಬಹುದು. ಗುಣಕ್ಕೆ ಮೆಚ್ಚಿಕೆ.

ಶ್ರೀನಿವಾಸ ಶಾಸ್ತ್ರಿಗಳಿಗೆ ಉಪಾಧ್ಯಾಯ ವೃತ್ತಿಯಲ್ಲಿ ಅತ್ಯಂತ ಗೌರವ. ಕಡೆಯವರೆಗೂ ಅವರು ತಮ್ಮ ಉಪಾಧ್ಯಾಯ ವೃತ್ತಿಯನ್ನು ನೆನೆದು ಹೆಮ್ಮೆಪಡುತ್ತಿದ್ದರು.

# ದುಗುಡ

ಒಂದು ಸಲ, ಶ್ರೀನಿವಾಸ ಶಾಸ್ತ್ರಿಗಳು ಬೆಂಗಳೂರಿನಲ್ಲಿದ್ದಾಗ, ಅವರ ಮನೆಗೆ ಅತಿಥಿಗಳಾಗಿ ಪುಣೆಯಿಂದ ನಾಲ್ವರು ಸ್ನೇಹಿತರು ಬಂದಿದ್ದರು. ಅವರು ಬಂದು ಮನೆ ಸೇರಿದ್ದು ಸಂಜೆ. ಬಂದವರು ಅಲ್ಲಿ ರಾತ್ರಿ ಭೋಜನ ತೀರಿಸಿಕೊಂಡು ವಿಶ್ರಮಿಸಿದರು. ಮಾರನೆಯ ದಿನ ಬೆಳಗ್ಗೆ ನಾನು ಯಥಾಪ್ರಕಾರ ಸುಮಾರು ೭ ಘಂಟೆಯ ಹೊತ್ತಿಗೆ ಶಾಸ್ತ್ರಿಗಳ ಮನೆಗೆ ಹೋದೆ. ಪದ್ಧತಿಯಂತೆ ವಾಕಿಂಗ್ ಹೋಗಲು ಶಾಸ್ತ್ರಿಗಳು ಆಗ ತಾನೆ ಉಡುಪು ಹಾಕಿಕೊಂಡು ಸಿದ್ಧರಾಗುತ್ತಿದ್ದರು. ಮುಖ ಪ್ರಸನ್ನವಾಗಿರಲಿಲ್ಲ, ಗಂಭೀರವಾಗಿತ್ತು. ನಾನು ಕೇಳಿದೆ:

“ಸ್ನೇಹಿತರು ಬರಲಿಲ್ಲವೆ?”

ನನ್ನ ಪ್ರಶ್ನೆಗಾಗಿ ಅವರು ಕಾದಿದ್ದಂತೆ ತೋರುತ್ತದೆ.

“ಸ್ನೇಹಿತರು ಯಾರು ಸಾರ್ ಈ ಮನೆಗೆ? ಹೇಳುವವರಿಲ್ಲ. ಕೇಳುವವರಿಲ್ಲ. ಬಂದವರನ್ನು ಆದರಿಸುವುದಕ್ಕೆ ಗತಿಯಿಲ್ಲ. ಒಂದು ಬಟ್ಟಲು ಕಾಫಿಗೆ ಗತಿಯಿಲ್ಲದ ಮನೆ ಇದು.”

# ಉದ್ವೇಗ

ಹೀಗೆ ಹತ್ತು ನಿಮಿಷ ಮೂದಲಿಕೆಯ ಮಳೆಗರೆದರು. ಬಹು ಕಟುವಾಗಿತ್ತು ಮಾತು. ನಾನು ಅಡಿಗೆಮನೆಗೆ ಹೋಗಿ ಲಕ್ಷ್ಮಮ್ಮನವರಿಗೆ ಕಾಣಿಸಿಕೊಂಡೆ. ಆಕೆ ಮುಖ ಚಿಕ್ಕದು ಮಾಡಿಕೊಂಡು,

“ನಾನೇನು ಮಾಡಲಪ್ಪ! ಇವರು ಹೀಗೆ ರೇಗುತ್ತಾರೆ. ನಾನು ೬ ಘಂಟೆಗೇ ಕಾಫಿ ಚಹಾ ಎರಡೂ ತಯಾರು ಮಾಡಿ ಆ ಸ್ನೇಹಿತರ ಕೊಠಡಿಗೆ ತೆಗೆದುಕೊಂಡು ಹೋದರೆ, ಅವರು ಅಲ್ಲಿ ಇಲ್ಲವೇ ಇಲ್ಲ-ಬಾಗಿಲು ಸೆಳೆದುಕೊಂಡು ಹೊರಟುಹೋಗಿದ್ದರು. ನಾನು ಅವರಿಗೆ ಉಪಚಾರ ಮಾಡಲಿಲ್ಲವಂತೆ! ಬಂದವರು ಹೊರಕೊಠಡಿಯಲ್ಲಿ ಮಲಗಿದ್ದು ೫ ಘಂಟೆಗೇ ಎದ್ದು ಯಾರಿಗೂ ಹೇಳದೆ ಹೊರಟುಹೋದರು. ನಾನು ಏನು ಮಾಡಬೇಕು?”

-ಹೀಗೆ ಅಂಗಲಾಚಿದರು. ನನಗೆ ಅರ್ಥವಾಯಿತು. ಆಕೆಯಿಂದ ಯಾವ ತಪ್ಪೂ ಆಗಿರಲಿಲ್ಲ. ಆ ಸ್ನೇಹಿತ ಮಹನೀಯರು ಆತುರದವರೆಂದು ನನಗೆ ತಿಳಿದಿತ್ತು. ಆಮೇಲೆ ಶಾಸ್ತ್ರಿಗಳವರಿಗೆ ನಾನು ಏನೋ ಒಂದು ಸಮಾಧಾನದ ಮಾತನ್ನು ಹೇಳಿದೆ. ಬಳಿಕ ಇಬ್ಬರೂ ಲಾಲ್‌ಬಾಗಿನ ಕಡೆ ಹೊರಟೆವು. ನಾವು ಪಶ್ಚಿಮದ ಕಡೆಯ ಗೇಟನ್ನು ತಲಪುವ ವೇಳೆಗೆ ಆ ನಾಲ್ವರು ಸ್ನೇಹಿತರೂ ಲಾಲ್‌ಬಾಗಿನ ಒಳಗಿನಿಂದ ಉಲ್ಲಾಸವಾಗಿ ಬರುತ್ತಿದ್ದರು. ಅವರನ್ನು ನೋಡಿದಾಗ ಶಾಸ್ತ್ರಿಗಳಿಗೆ ಸಮಾಧಾನವಾಯಿತು. ಆದರೂ ಇನ್ನೂ ಮನಸ್ಸಿನಲ್ಲಿ ಉದ್ವೇಗವಿತ್ತು.

“ಏನಯ್ಯಾ! ನನ್ನ ಮನೆಗೆ ಬಂದವರಿಗೆ ಬೆಳಗ್ಗೆ ಒಂದು ಲೋಟ ಕಾಫಿಯೂ ಇಲ್ಲದ ಹಾಗಾಯಿತಲ್ಲ! ಮನೆಯ ಹೆಂಗಸಿಗೆ ಅತಿಥಿಯನ್ನಾದರಿಸಬೇಕೆಂದು ತಿಳಿವಳಿಕೆ ಇಲ್ಲದೆ ಹೋಯಿತಲ್ಲ!”

# ಸಮಾಧಾನ

ಆ ಸ್ನೇಹಿತರು ನಾಲ್ವರೂ ಗಟ್ಟಿಯಾಗಿ ನಕ್ಕು ಹೇಳಿದರು:

“ನಾವು ಬೆಂಗಳೂರಿಗೆ ಬಂದದ್ದು ಲಾಲ್‌ಬಾಗನ್ನು ನೋಡಬೇಕು, ತಂಪು ಹೊತ್ತಿನಲ್ಲಿ ನೋಡಬೇಕು-ಎಂದು. ಕಾಫಿಯ ಸಮಾರಾಧನೆಗೆ ಕುಳಿತರೆ ಆ ಸುಖವೂ ಪೂರ್ತಿಯಾಗುವುದಿಲ್ಲ; ತಂಪು ಹೊತ್ತೂ ಇರುವುದಿಲ್ಲ. ನಾವು ೫ ಘಂಟೆಗೇ ಇಲ್ಲಿಗೆ ಬರಬೇಕೆಂದು ಮೊದಲೇ ಮನಸ್ಸು ಮಾಡಿಕೊಂಡಿದ್ದೆವು.”

ಆ ನಾಲ್ವರು ಸ್ನೇಹಿತರೂ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಮೆಂಬರುಗಳು. ಅವರಲ್ಲಿ ಒಬ್ಬರು ಶ್ರೀಧರ ಗಣೇಶ ವಜೆ. ಇನ್ನೊಬ್ಬರು ಡಿ. ವಿ. ಅಂಬೇಕರ್. ಮೂರನೆಯವರು ಆರ್. ಆರ್. ಬಖಲೇ. ನಾಲ್ಕನೆಯವರ ಹೆಸರು ಮರೆತುಹೋಗಿದೆ. ಆ ನಾಲ್ವರೂ ಲಾಲ್‌ಬಾಗಿನಿಂದ ಶಾಸ್ತ್ರಿಗಳ ಮನೆಗೆ ಬಂದು, ನಾವು ಅಲ್ಲಿಗೆ ಬರುವ ವೇಳೆಗೆ ತಮ್ಮ ಚಹಾ ಉಪಾಹಾರಗಳನ್ನು ಮುಗಿಸಿದ್ದರು. ಎಲ್ಲರಿಗೂ ಸಂತೋಷವಾಯಿತು.

***

ಅಲ್ಲಿಂದ ಎಂಟು ಹತ್ತು ದಿನ ಕಳೆದಮೇಲೆ ಒಂದು ಸಂಜೆ ಶಾಸ್ತ್ರಿಗಳು, ಅವರ ಭಾರ್ಯೆ, ನಾನು-ಮೂವರೂ ಲಾಲ್‌ಬಾಗಿನಲ್ಲಿ ವಾಕಿಂಗ್ ಹೋಗುತ್ತಿದ್ದೆವು. ಗ್ಲಾಸ್‌ಹೌಸ್ ದಾಟಿ ಕೆರೆಯ ಹತ್ತಿರಕ್ಕೆ ಬರುತ್ತಿದ್ದಾಗ ಶಾಸ್ತ್ರಿಗಳು ಏಕೋ ಕೋಪದ ಮಾತನ್ನೆತ್ತಿದರು. ನನಗೆ ತೋರುತ್ತದೆ, ಅವರ ಮನಸ್ಸಿನಲ್ಲಿ ಆ ದಿನ ಪುಣೆಯ ಸ್ನೇಹಿತರು ಬಂದಿದ್ದಾಗ ತಾವು ಕೋಪಿಸಿಕೊಂಡು ರೇಗಾಡಿದ್ದದ್ದರ ಜ್ಞಾಪಕ ಅವರನ್ನು ಚುಚ್ಚುತ್ತಿತ್ತೆಂದು. ಹೀಗೆ ಪರಿತಾಪಪಡುವುದು ಅವರ ಸ್ವಭಾವ. ಆ ಸಂಜೆ ಅವರು ನನ್ನ ಕಡೆ ತಿರುಗಿ ಹೇಳಿದರು:

“ನಮ್ಮ ಪೂರ್ವಿಕರುಗಳಿಗೆ ಬಹು ಕೋಪ ಸಾರ್. ದೂರ್ವಾಸರೇ ಅದಕ್ಕೆ ಸಾಕ್ಷಿ. ಮಿಸುಕಿದರೆ ಕೋಪ. ಶಕುಂತಲೆ ಪಾಪ ಏನು ಮಾಡಿದಳು! ಅಕಾರಣವಾಗಿ ಅವಳಿಗೆ ಶಾಪವಿಟ್ಟರು. ನನಗೆ ತೋರುತ್ತದೆ, ಅದೊಂದು ಪ್ರಾಕೃತ ಸ್ಥಿತಿಯ ಲಕ್ಷಣವೆಂದು. ಋಷಿಗಳು ಗಡ್ಡ ಮೀಸೆ ಬೆಳಸಿಕೊಂಡು, ಯಾವ ನಾಜೂಕೂ ಕಾಣದೆ, ಕಂಡ ಕಂಡವರ ಮೇಲೆಲ್ಲ ಹುಚ್ಚುಹುಚ್ಚಾಗಿ ತಿರುಗಿಬೀಳುವುದು! ನನ್ನ ಪೂರ್ವಿಕರೂ ಹಾಗೆಯೇ ಸಾರ್- ನನ್ನ ತಾತನಿಗೆ ಪ್ರಚಂಡ ಕೋಪ. ನನ್ನ ತಂದೆಗೂ ಹಾಗೆಯೇ-ನಮ್ಮ ತಾಯಿಯನ್ನು ಹೀನಾಮಾನ ಬಯ್ಯುತ್ತಿದ್ದರು.

‘ನಿನ್ನ ಅಡಿಗೆ ಬೇಡ, ನಿನ್ನ ಊಟ ಬೇಡ’ -ಎಂದೆಲ್ಲ ಬಯ್ಯುತ್ತಿದ್ದರು. ಹೀಗೆ ಹಿಂದೆ ಮುಂದೆ ನೋಡದೆ ರೇಗಾಡುತ್ತಿದ್ದರು ಪೂರ್ವಿಕರು. ನಮ್ಮ ಮನೆಯಲ್ಲೆಲ್ಲ ನಾನೊಬ್ಬನೇ ಕೋಪವಿಲ್ಲದವನು.”

ಲಕ್ಷ್ಮಮ್ಮನವರು ಆ ಕೂಡಲೆ “ಆಹಾ!” ಎಂದರು.

ಶಾಸ್ತ್ರಿಗಳು: “ಏನು ಲಕ್ಷ್ಮೀ, ನಾನು ನಿನ್ನನ್ನು ಎಂದಾದರೂ ಹೊಡೆದಿದ್ದೇನೆಯೆ? ಕೈಕಾಲು ಮುರಿದಿದ್ದೇನೆಯೆ?”

ಲಕ್ಷ್ಮಮ್ಮನವರು: “ಅದರ ಹೊರತು!” (“ಅದು ತವಿರ!...”)

ಶಾಸ್ತ್ರಿಗಳು: “ಏನು ಹೀಗಂತಿ?”

ಲಕ್ಷ್ಮಮ್ಮನವರು: “ವಜೆ, ಅಂಬೇಕರ್ ಬಂದಿದ್ದ ದಿವಸ...”

ಶಾಸ್ತ್ರಿಗಳು: “ಎಂದೋ ಒಂದು ದಿನ ಹಾಗಾದರೆ ಅದು ನನ್ನ ಸ್ವಭಾವ ಎನ್ನುತ್ತೀಯಾ?”

ನಾನು ಸಾಹಸಮಾಡಿ ಬಾಯಿಹಾಕಿದೆ: “ನಿಮ್ಮ ಕೇಸು ಬಿದ್ದು ಹೋಯಿತು.” ಮೂವರೂ ನಗುತ್ತ ಮನೆಗೆ ಬಂದೆವು.

# “ಕೋಪ ಕೂಡದು”

ಶಾಸ್ತ್ರಿಗಳು ತಾಳ್ಮೆಯನ್ನೂ ವಿಧೇಯತೆಯನ್ನೂ ಉಪದೇಶಿಸುತ್ತಿದ್ದವರು. ಇದಕ್ಕಾಗಿ ಒಂದೊಂದು ಸಾರಿ ಸ್ನೇಹಿತರೇ ಅವರನ್ನು ಹಾಸ್ಯ ಮಾಡುತ್ತಿದ್ದದ್ದುಂಟು. ಅವರು ಮದರಾಸಿನಲ್ಲಿ ಮಾಡಿದ ಒಂದು ಉಪನ್ಯಾಸದಲ್ಲಿ ರಾಜಕೀಯ ವಿಷಯದಲ್ಲಿ ಕೋಪ ತಕ್ಕದ್ದಲ್ಲವೆಂದೂ ಕೋಪವನ್ನು ಕೆರಳಿಸುವ ಸಂದರ್ಭಗಳು ಬಂದಾಗ್ಯೂ ಆಗ ಸಹನೆಯನ್ನೂ ಶಾಂತಿಯನ್ನೂ ತೋರುವುದೇ ಧರ್ಮವೆಂದೂ ಒತ್ತೊತ್ತಿ ಹೇಳಿದರು. ಅದಾದ ಮಾರನೆಯ ದಿನ ಪತ್ರಿಕೆಗಳಲ್ಲಿ ಆ ಭಾಷಣದ ವರದಿ ಬಂದಿದ್ದದ್ದನ್ನು ನೋಡಿ ಅವರ ಆಪ್ತ ಮಿತ್ರರ ಗೋಷ್ಠಿಯಲ್ಲಿ ಹೀಗೆ ಮಾತುಕಥೆ ನಡೆಯಿತು:

ಒಬ್ಬರು: “ಇದೇನಯ್ಯ ಅಕ್ರಮ! ಸರಕಾರಕ್ಕೆ ನ್ಯಾಯವೆಂಬುದರ ಸ್ಮರಣೆಯೇ ಇಲ್ಲವಲ್ಲ!”

ಇನ್ನೊಬ್ಬರು: “ಹಾಗೆನ್ನಬೇಡಿ ಸಾರ್. ಅದು ಕೋಪದ ಮಾತು. ಕೋಪ ಕೂಡದೆಂದು ಶಾಸ್ತ್ರಿಗಳು ಹೇಳಿದ್ದಾರೆ.”

ಒಂದು ಹೋಟಲಿನಲ್ಲಿ: “ಏನಯ್ಯ ಇಷ್ಟು ಖಾರವಾಗಿದೆ? ಬೆಂಕಿ ಬೆಂಕಿಯಾಗಿದೆಯಲ್ಲ!”

ಇನ್ನೊಬ್ಬರು: “ಹಾಗೆನ್ನಬೇಡಿ ಸಾರ್. ಶಾಸ್ತ್ರಿಗಳು ಕೋಪ ಮಾಡಬೇಡವೆಂದು ಹೇಳಿದ್ದಾರೆ.”

ಮಾರ್ಕೆಟಿನಲ್ಲಿ: “ಹೇಗಮ್ಮ ಬದನೆಕಾಯಿ?”

ಆಕೆ: “ಎಂಟಾಣೆ ಪಂಚೇರು.”

ಈತ: “ಅದೇನಮ್ಮ ಇಷ್ಟೊಂದು ಬೆಲೆ?”

ಆಕೆ: “ಬೇಕಾದರ ತೆಗೆದುಕೊಳ್ಳಿ, ಬೇಡದಿದ್ದರೆ ಅಲ್ಲೇ ಬಿಟ್ಟುಹೋಗಿ.”

ಗಿರಾಕಿ: “ಅದೇಕಮ್ಮ ಅಷ್ಟು ಕೋಪ? ಕೋಪ ಮಾಡಬಾರದೆಂದು ಶಾಸ್ತ್ರಿಗಳು ಹೇಳಿದ್ದಾರೆ.”

ಹೀಗೆ ಬಂತು ಶಾಸ್ತ್ರಿಗಳ ಉಪದೇಶಕ್ಕೆ ಪ್ರತಿಕ್ರಿಯೆ. ಇದು ಬೆಂಗಳೂರಿನಲ್ಲಿಯೂ ನಡೆಯಿತು, ನನ್ನ ಎದುರಿನಲ್ಲಿಯೇ.

# ಒಂದು ಭೋಜನ ಪ್ರಸಂಗ

ಅಣ್ಣಾಮಲೈನಗರದಲ್ಲಿ ಒಂದು ಪ್ರಸಂಗ. ಭೋಜನದ ವೇಳೆ. ಶಾಸ್ತ್ರಿಗಳು ತಟ್ಟೆಯ ಮುಂದೆ ಕುಳಿತಿದ್ದಾರೆ. ಅದರಲ್ಲಿ ಬಡಿಸಿದ್ದದ್ದು ಒಂದಷ್ಟು ಸೊಪ್ಪಿನ ಪಲ್ಯ, ಹುರುಳಿಕಾಯಿ ಪಲ್ಯ, ಒಂದಷ್ಟು ತುಪ್ಪ, ಬ್ರೆಡ್ಡಿನ ಎರಡು ಸ್ಲೈಸುಗಳು. ಮಿಕ್ಕ ಎಲೆಗಳಲ್ಲಿ ಅನ್ನ, ತೊವ್ವೆ, ಮಜ್ಜಿಗೆ ಪಳಿದ್ಯ, ಪಲ್ಯಗಳು, ಅವುಗಳ ಜೊತೆಗೆ ಕರಿದ ಹಪ್ಪಳ ಸಂಡಿಗೆ. ಶಾಸ್ತ್ರಿಗಳಿಗೆ ಹಸಿವಾಗಿತ್ತೆಂದು ತೋರುತ್ತದೆ. ಅವರು ಮಿಕ್ಕವರಿಗಿಂತ ಒಂದೆರಡು ನಿಮಿಷ ಮುಂಚೆ ಕುಳಿತು ಪ್ರಾರಂಭ ಮಾಡದೆ ರೇಗಾಡುತ್ತಿದ್ದರು. “ನನ್ನನ್ನು ಯಾರು ಕೇಳುತ್ತಾರೆ! ನಾನು ತಿಂದರೇನು ಬಿಟ್ಟರೇನು?” - ಈ ವಿಧವಾಗಿ. ನಾವೂ ಅಲ್ಲಿಗೆ ಹೋಗಿ ಊಟಕ್ಕೆ ಕುಳಿತೆವು. ಪ್ರೊ ॥ ಸುಂದರನ್, ಸೆಕ್ರೆಟರಿ ವೆಂಕಟರಾಮನ್, ಮತ್ತೊಬ್ಬರು, ನಾನು. ನಾನು ಧೈರ್ಯಮಾಡಿ ಕೇಳಿದೆ:

“ಏಕೆ ತಕರಾರು?”

ನನ್ನ ಪ್ರಶ್ನೆಗಾಗಿ ಶಾಸ್ತ್ರಿಗಳು ಕಾದಿದ್ದರೆಂದು ತೋರುತ್ತದೆ. ಅವರು ಹೇಳಿದರು:

“ನೋಡಿ ಸಾರ್-ನಿಮಗೆಲ್ಲ ಹಪ್ಪಳ ಸಂಡಿಗೆ ಹಾಕಿ, ನನಗೆ ಹಪ್ಪಳ ಕೂಡ ಹಾಕಿಲ್ಲವಲ್ಲ!”

ಇದನ್ನೆಲ್ಲ ನೋಡುತ್ತಿದ್ದ ಅನಸೂಯಮ್ಮ ಆಗ ಹೇಳಿದರು: “ಕರಿದ ಪದಾರ್ಥ ಅವರಿಗೆ ಕೂಡದು; ಅವರು ಮೃದುವಾಗಿ ಬೆಂದ ಪಲ್ಯ, ಬ್ರೆಡ್ಡು, ಗಟ್ಟಿ ಮಜ್ಜಿಗೆ ಇಷ್ಟರಲ್ಲಿಯೇ ಇರಬೇಕಾದವರೆಂದೂ ಕರಿದ ಪದಾರ್ಥ ಕೂಡದೆಂದೂ ಡಾಕ್ಟರು ಹೇಳಿದ್ದಾರೆ.”

ಶಾಸ್ತ್ರಿಗಳು: “ಕರಿದ ಹಪ್ಪಳ ಬೇಡವೆಂದರೆ ಸುಟ್ಟ ಹಪ್ಪಳ ಹಾಕುವುದಕ್ಕೆ ಏನಾಗಿತ್ತು?”

ನಮಗೆಲ್ಲ ತಡೆಯಲಾರದಷ್ಟು ನಗು. ಸುಟ್ಟ ಹಪ್ಪಳ ತಟ್ಟೆಯಲ್ಲಿ ಬಿದ್ದ ಮೇಲೆ ಶಾಸ್ತ್ರಿಗಳ ಭೋಜನ, ಆಮೇಲೆ ಎಲ್ಲ ಸುಮುಖ.

ಅವರು ಕೆಲವು ಕಾಲ ಯುನಾನಿ ವೈದ್ಯದಲ್ಲಿದ್ದರು. ಮದರಾಸಿನಲ್ಲಿ ಸೈಯದ್ ಮಹಮದ್ ಉಸ್ಮಾನ್ ಸಾಹೇಬರು ಪ್ರಸಿದ್ಧರಾದ ಯುನಾನಿ ವೈದ್ಯರು. ಅವರು ಕೆಲವು ಕಾಲ ರಾಜಕೀಯದಲ್ಲಿಯೂ ಪ್ರಸಿದ್ಧರಾಗಿ ಮದರಾಸಿನ ಎಕ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿದ್ದು,

ಕೆಲವು ದಿವಸ ಗವರ್ನರಾಗಿಯೂ ಇದ್ದರೆಂದು ನನ್ನ ಜ್ಞಾಪಕ. ಅವರು ಶಾಸ್ತ್ರಿಗಳಿಗೆ ಚಿಕಿತ್ಸೆ ಮಾಡಲೊಪ್ಪಿಕೊಂಡು ಯಾವುದೋ ಪುಡಿಯನ್ನು ಔಷಧವಾಗಿ ಕೊಟ್ಟಿದ್ದರು. ಪ್ರತಿದಿನವೂ ಬೆಳಿಗ್ಗೆ ೫ ಗಂಟೆಯ ವೇಳೆಗೆ ಒಂದು ನಿಂಬೆಹಣ್ಣನ್ನು ಹೆಚ್ಚಿ ಆ ಪುಡಿಯನ್ನು ಎರಡು ಹೋಳುಗಳ ಮೇಲೆಯೂ ಉದುರಿಸಿ ಅವೆರಡನ್ನೂ ಒಟ್ಟಿಗೆ ಸೇರಿಸಿ ಒಂದು ಲೋಟದಲ್ಲಿ ಹಿಂಡತಕ್ಕದ್ದು. ಆ ಲೋಟದಲ್ಲಿ ಒಂದಿಷ್ಟು ತಣ್ಣೀರು ಇರಬೇಕಾದದ್ದು. ನಿಂಬೆಹಣ್ಣನ್ನು ಹಿಂಡಿ ಆ ಪುಡಿಯ ಸಮೇತ ಆ ರಸವನ್ನು ಲೋಟದೊಳಕ್ಕೆ ಹಾಕಿದ ಬಳಿಕ, ಒಂದು ಚಮಚ ಜೇನುತುಪ್ಪವನ್ನು ಅದರೊಳಕ್ಕೆ ಬೆರಸತಕ್ಕದ್ದು. ಇದು ಔಷಧ. ಇದನ್ನು ಶಾಸ್ತ್ರಿಗಳು ಕ್ರಮವಾಗಿ ಕೆಲವು ತಿಂಗಳ ಕಾಲ ಸೇವಿಸಿದರು. ಅವರು ಪ್ರಯಾಣದಲ್ಲಿದ್ದಾಗ ಔಷಧವನ್ನು ತಯಾರು ಮಾಡುವ ಕೆಲಸ ನನಗೆ ಸೇರಿದ್ದು. ಒಂದೊಂದು ದಿನ ಅವರು ಬೇಸರಪಡುವರು. ಕಾರಣ, ಬೆಳಗಿನ ಜಾವ ಒಳ್ಳೆಯ ನಿದ್ದೆಯ ಹೊತ್ತಿನಲ್ಲಿ ನಾನು ಎದ್ದು ಈ ರೇಜಿಗೆಯ ಕೆಲಸ ಮಾಡಬೇಕಾಗುತ್ತದಲ್ಲ ಎಂದು. ಆಗ ಏನಾದರೂ ತಮಾಷೆಯ ಮಾತನ್ನಾಡಿ ಅವರನ್ನು ಔಷಧ ಸೇವನೆಗೆ ಒಡಂಬಡಿಸಬೇಕಾಗುತ್ತಿತ್ತು. “ತಾಳ್ಮೆ ಇರಬೇಕೆಂದು ನೀವೇ ಹೇಳುತ್ತಿದ್ದೀರಲ್ಲ?” ಎಂದರೆ ಅವರು “ಏನು, ನೀನು ನನ್ನ ಮಾತಿನಿಂದ ನನ್ನನ್ನೇ ನೇಣುಹಾಕುತ್ತಿ” ಎನ್ನುವರು.

# ನನ್ನ ಕೋಪ

ಇನ್ನೊಂದು ಪ್ರಸಂಗ. ಕೊಚ್ಚಿಯಿಂದ ವಾಪಸು ಬರುವಾಗ ನಾವಿಬ್ಬರೂ ಎರಡನೆ ಕ್ಲಾಸಿನಲ್ಲಿ ಕೆಳಗಡೆಯ ಮಂಚಗಳ ಮೇಲೆ ಕುಳಿತಿದ್ದೆವು, ಎದುರುಬದುರಾಗಿ. ಮಧ್ಯಾಹ್ನ ಮೂರು ಘಂಟೆ ಇರಬಹುದು. ನಾವಿಬ್ಬರೂ ಮಲಗಿ ನಿದ್ರೆಮಾಡಿ ಎದ್ದು ಕುಳಿತಿದ್ದೆವು. ಶಾಸ್ತ್ರಿಗಳವರು ಕುಳಿತಿದ್ದ ಮಂಚದ ಮೇಲ್ಮಂಚದ (Upper berth) ಮೇಲೆ ಇನ್ನು ಯಾರೋ ಒಬ್ಬ ಮಲಗಿದ್ದು ಎದ್ದು ಕುಳಿತು ತಾನು ಹೊದ್ದಿದ್ದ ಬಟ್ಟೆಗಳನ್ನು ಒಂದು ಪಕ್ಕಕ್ಕೆ ತಳ್ಳಿ, ತನ್ನ ಎರಡು ಕಾಲುಗಳನ್ನೂ ಇಳಿಯಬಿಟ್ಟ. ಕಾಲುಗಳು ಶಾಸ್ತ್ರಿಗಳ ತಲೆಯನ್ನು ಸೋಕುತ್ತಿತ್ತು. ನಾನು ಎದುರುಸೀಟಿನ ಮೇಲೆ ಕುಳಿತಿದ್ದದ್ದರಿಂದ ಮೇಲ್ಮಂಚದ ಮೇಲಿನ ಆಸಾಮಿ ನನ್ನ ಕಣ್ಣಿಗೆ ಕಾಣಿಸುತ್ತಿದ್ದ. ನಾನು "ಏಯ್" ಎಂದು ಕೂಗು ಹಾಕಿದೆ. ಶಾಸ್ತ್ರಿಗಳು ಕೂಡಲೆ ನನ್ನ ಭುಜವನ್ನು ಹಿಡಿದು "ಬಾಯಿ ಮುಚ್ಚಿ ಕೂಡು" ಎಂದರು. ನಾನು "ತಲೆಯ ಮೇಲೆ ಕಾಲಿಡುತ್ತಿದ್ದರೆ ಸುಮ್ಮನಿರುವುದೆ?" ಎಂದೆ. "ಇಟ್ಟರೆ ಇಟ್ಟುಕೊಳ್ಳಲಿ, ಕೆಲವು ನಿಮಿಷ ತಾನೆ? ಇದಕ್ಕೆ ಜಗಳ ಯಾಕೆ? ನೀನು ಯಾರೊಡನೆಯೂ ಜಗಳಕ್ಕೆ ಹೋಗಬೇಡ" ಎಂದು ಶಾಸ್ತ್ರಿಗಳು ಬುದ್ಧಿವಾದ ಹೇಳಿದರು.

ಶಾಸ್ತ್ರಿಗಳಿಗೆ ನನ್ನ ವಿಷಯದಲ್ಲಿ ಏನೋ ಒಂದು ಶಂಕೆ-ನಾನು ಜಗಳಗಂಟಿ ಎಂದು. ನನಗೆ ಅವರು ಏನಾದರೂ ಬುದ್ಧಿಮಾತು ಹೇಳಬೇಕೆನಿಸಿದರೆ ಸಾಮಾನ್ಯವಾಗಿ "ಸಾರ್" ಎನ್ನುವರು. ಈ ಮರ್ಯಾದೆ ಬಂದರೆ ನಾನು ಮೈಮುಟ್ಟಿ ನೋಡಿಕೊಳ್ಳುತ್ತಿದ್ದೆ. ಒಂದು ಸಾರಿ ಶಿವಸ್ವಾಮಿ ಅಯ್ಯರಿಗೂ ನನಗೂ ವಾಗ್ವಾದ ನಡೆದಾಗ ಶಾಸ್ತ್ರಿಗಳು ಹೇಳಿದ್ದನ್ನು ಬೇರೊಂದು ಕಡೆ ಬರೆದಿದ್ದೇನೆ. ಶಿವಸ್ವಾಮಿ ಅಯ್ಯರವರು ನಾನು ಏಕೆ ಪಂಚೆ ಕಚ್ಚೆ ಹಾಕಿಕೊಳ್ಳಲಿಲ್ಲವೆಂದು ಕೇಳಿದಾಗ ನಾನು "ಏನೋ ಈ ದಿವಸ ಅವಸರ. ಆದದ್ದರಿಂದ ತಪ್ಪಿದೆ" ಎಂದು ಒಪ್ಪಿಕೊಂಡೆನಲ್ಲ! ಆದದ್ದರಿಂದ ಶಾಸ್ತ್ರಿಗಳಿಗೆ ಸಮಾಧಾನ "(ನಲ್ಲ ವೇಳೆಯಾಚಿ) ಒಳ್ಳೆಯ ವೇಳೆಯಾಯಿತು, ಹೇಳಿದ ಮಾತನ್ನು ನೀನು ಕೇಳಿದೆಯಲ್ಲ!" ಎಂದರು. ನಾನು ಹೇಳಿದೆ: "ನಾನು ಯಾವಾಗಲೂ ಕೇಳುತ್ತಲೇ ಇದ್ದೇನೆ. ನಾನು ಎಂದು ಅವಿಧೇಯನಾಗಿದ್ದೆ?" ಶಾಸ್ತ್ರಿಗಳು "ಈಗ ಆ ಮಾತು ಬೇಡ. ನಾನು ಉದಾಹರಣೆ ಹೇಳಿದರೆ ನೀನು ಮತ್ತೊಂದು ಜಗಳಕ್ಕೆ ಆರಂಭಿಸುತ್ತಿ" ಎಂದು ಚೀಮಾರಿ ಹಾಕಿದರು. ಇದೆಲ್ಲ ಬರಿಯ ವಿನೋದ.

# ಒಂದು ವಾಗ್ವಾದ

ನಾನು ಅಣ್ಣಾಮಲೈ ನಗರಕ್ಕೆ ಹೋಗಿದ್ದಾಗ ಅವರಿಗೂ ನನಗೂ ಒಂದು ವಾಗ್ವಾದ. ನಾವಿಬ್ಬರೂ ರಾತ್ರಿಯ ಆಹಾರಕ್ಕೆ ಕುಳಿತಿದ್ದೆವು. ಮಹಾಮಹೋಪಾಧ್ಯಾಯ ಎಸ್. ಕುಪ್ಪುಸ್ವಾಮಿ ಶಾಸ್ತ್ರಿಗಳು ಬರಿಯ ಪ್ರೇಕ್ಷಕರಾಗಿ ಅಲ್ಲಿ ಕುಳಿತಿದ್ದರು. ಪಾಯಸವನ್ನೋ ಅಥವಾ ಸಾರಿನಂಥ ಒಂದು ಪಾಕವಿಶೇಷ (Soup) -ನೀರುನೀರಾದ ಕೂಟನ್ನೋ ತಟ್ಟೆಯಲ್ಲಿ ಹಾಕಿ ನಮ್ಮಗಳ ಕೈಗೆ ಕೊಟ್ಟಿದ್ದರು. ತಟ್ಟೆಯಿಂದ ಚಮಚದಲ್ಲಿ ಆ ರಸವನ್ನೆತ್ತಿ ಬಾಯೊಳಕ್ಕೆ ಸೇರಿಸಬೇಕಾಗಿತ್ತು. ನಾನು ತಟ್ಟೆಯನ್ನು ನನ್ನ ಎದುರುಗಡೆಗೆ ಓರೆ ಮಾಡಿ ಭೋಜನ ಮಾಡಲಾರಂಭಿಸಿದೆ. ಶ್ರೀನಿವಾಸ ಶಾಸ್ತ್ರಿಗಳು ನನ್ನನ್ನು ಕುರಿತು "ಅದಲ್ಲ ಕ್ರಮ. ತಟ್ಟೆಯನ್ನು ನಿನ್ನ ಕಡೆಗೆ ಓರೆಮಾಡಿಕೊಳ್ಳಬೇಕು" ಎಂದರು.

ನಾನು: "ಅದರಲ್ಲೇನು ಹೆಚ್ಚು ಅನುಕೂಲ?"

ಶ್ರೀ: "ಅದು ಸಂಪ್ರದಾಯ."

ನಾನು: "ಅದು ಪರಂಗಿಯವರ ಸಂಪ್ರದಾಯ ಮತ್ತು ಅಕಾರಣವಾದದ್ದು. ಅದನ್ನು ನಾವು ಯಾಕೆ ಅನುಸರಿಸಬೇಕು?"

ಹೀಗೆ ಬೆಳೆಯಿತು ವಾದ. ಕುಪ್ಪುಸ್ವಾಮಿಶಾಸ್ತ್ರಿಗಳು ಹತ್ತು ನಿಮಿಷ ಇದನ್ನು ಕೇಳಿದರು. ಅವರ ಮನಸ್ಸಿನ ಒಲವು ಬಹುಶಃ ನನ್ನ ಪಕ್ಷದಲ್ಲಿತ್ತೆಂದು ತೋರುತ್ತದೆ. ಅವರು ಹೇಳಿದರು:

"ಸಂಪ್ರದಾಯವೆಂದಷ್ಟೇ ಹೇಳಿದರೆ ಅಲ್ಲಿ ಕಾರ್ಯಕಾರಣ ಭಾವ ವಿಚಾರವೇ ಅಪ್ರಕೃತವಾಗುತ್ತದೆ. ಏನೋ ಗತಾನುಗತಿಕ."

ಬಹುಶಃ ಇದೂ ಇಂಥ ಇತರ ಸಂದರ್ಭಗಳೂ ಶ್ರೀನಿವಾಸ ಶಾಸ್ತ್ರಿಗಳ ಮನಸ್ಸಿನಲ್ಲಿ ನಿಂತಿದ್ದವೆಂದು ತೋರುತ್ತದೆ. ಆದದ್ದರಿಂದ ಅವರ ದೃಷ್ಟಿಯಲ್ಲಿ ನಾನು ಕೊಂಚ ಕಲಹ ಪ್ರಿಯನೆನಿಸಿದೆ.

# ಚೀಮಾರಿ

ಒಂದು ಸಾರಿ ಬಹು ಪ್ರಸಿದ್ಧರಾದ ವೈದ್ಯರೊಬ್ಬರು ಶಾಸ್ತ್ರಿ ಮಿತ್ರರಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಅವರು ಯಾವುದೋ ಒಂದು ಷೇಕ್‌ಸ್ಪಿಯರ್ ವಾಕ್ಯವನ್ನು ಪ್ರಸ್ತಾವಿಸಿದರು. ನಾನು "ಆ ವಾಕ್ಯದ ಅರ್ಥ ಹಾಗಲ್ಲ, ಹೀಗೆ" ಎಂದು ತಿದ್ದಾವಣೆ ಸೂಚಿಸಿದೆ. ಶಾಸ್ತ್ರಿಗಳ ಮುಖ ಗಂಭೀರವಾಯಿತು. ಆ ಮಾನ್ಯ ಮಹನೀಯರು ಹೊರಟು ಹೋದ ಬಳಿಕ ಶಾಸ್ತ್ರಿಗಳು ನನ್ನನ್ನು ಉದ್ದೇಶಿಸಿ "ನಿನಗೆ ಏನೋ ಓದಿದ್ದೇನೆಂಬ ಕೊಬ್ಬು. ಓದಿ ಏನು ಪ್ರಯೋಜನ?-ರಾಯರು ಎಂಥ ಮಹನೀಯರು! ಅವರ ವಿಷಯದಲ್ಲಿ ನನಗೆ ಎಂಥ ಗೌರವವಿದೆಯೆಂಬುದನ್ನು ನೀನು ಬಲ್ಲೆ. ಅವರ ವಿದ್ಯೆಯಾದ ವೈದ್ಯಶಾಸ್ತ್ರದಲ್ಲಿ ಅವರು ಪ್ರವೀಣರೆಂದು ಲೋಕವೇ ಕೊಂಡಾಡುತ್ತದೆ. ಅವರಿಂದ ನನಗೆ ಎಷ್ಟು ಉಪಕಾರವಾಗಿದೆ! ಲೋಕದಲ್ಲಿ ಎಷ್ಟುಮಂದಿಗೆ ಎಷ್ಟು ಉಪಕಾರ ಮಾಡಿದ್ದಾರೆ! ನೀನು ಅದನ್ನೆಲ್ಲ ಮರೆತು ನಿನ್ನ ಷೇಕ್‌ಸ್ಪಿಯರ್ ಪಾಂಡಿತ್ಯವನ್ನು ಹೊರಕ್ಕೆ ತರಲು ಹೊರಟೆಯಲ್ಲ!"

ಹೀಗೆ ಮುಖ ಪ್ರಕ್ಷಾಳನ ಮಾಡಿದರು.

# ರಾಮಾಯಣೋತ್ಸಾಹ

ಶ್ರೀನಿವಾಸ ಶಾಸ್ತ್ರಿಗಳವರಿಗೆ ಶ್ರೀಮದ್ರಾಮಾಯಣ ವಿಷಯದಲ್ಲಿ ಭಕ್ತಿಯು ಕುಲ ಕ್ರಮಾಗತವಾಗಿದ್ದದ್ದೆಂದು ಹಿಂದೆ ಹೇಳಿದೆ. ಅವರು ಬೆಂಗಳೂರಿನಲ್ಲಿ ಇಳಿದುಕೊಂಡಿದ್ದಾಗ ಒಂದು ಸಾರಿ ಅವರ ಆಪ್ತ ಸ್ನೇಹಿತರಾದ ಎಂ. ವೆಂಕಟರಂಗರಾವ್ ಎಂಬ ಆಂಧ್ರರು ಅವರ ಅತಿಥಿಯಾಗಿದ್ದರು. ಒಂದು ಸಂಜೆ ವೆಂಕಟರಂಗರಾಯರೂ ಶಾಸ್ತ್ರಿಗಳವರೂ ಇಬ್ಬರು ಮೂವರು ಸ್ನೇಹಿತರೂ ಸೇರಿ ಕಾರಿನಲ್ಲಿ ನಂದಿಬೆಟ್ಟದ ರಸ್ತೆಯಲ್ಲಿ ಹೊರಟೆವು. ಆ ಸಣ್ಣ ಪ್ರಯಾಣದಲ್ಲಿ ನಡೆದ ಒಂದು ಪ್ರಸಂಗವನ್ನು ಈಗ ಹೇಳ ಹೊರಟಿದ್ದೇನೆ.

# ವೆಂಕಟರಂಗರಾಯರು

ವೆಂಕಟರಂಗರಾಯರು ನಲವತ್ತು ವರ್ಷಕ್ಕೆ ಹಿಂದಿನ ಮದರಾಸಿನಲ್ಲಿ ದೇಶಹಿತ ಪ್ರವೃತ್ತಿಯುಳ್ಳ ವಿದ್ವನ್ಮಂಡಲಿಯಲ್ಲಿ ಗಣ್ಯರಾಗಿದ್ದರು. ಅವರು ಸಂಸ್ಕೃತ ಸಾಹಿತ್ಯ ಆಂಗ್ಲ ಸಾಹಿತ್ಯಗಳೆರಡನ್ನೂ ತಮ್ಮದನ್ನಾಗಿ ಮಾಡಿಕೊಂಡಿದ್ದರು. ಇಂಥ ಇತರರು ಪ್ರೊ ॥ ಕೆ. ಸುಂದರರಾಮಯ್ಯರ್, ಪ್ರೊ ॥ ಮಳೂರು ರಂಗಾಚಾರ್ಯರು, ಪ್ರೊ ॥ ವೈದ್ಯನಾಥಯ್ಯರ್ ಅವರು, ಹಿಂದೆ ಸ್ಮರಿಸಿರುವ ಪ್ರೊ ॥ ಕೆ. ಬಿ, ರಾಮನಾಥಯ್ಯರ್, ಬೌದ್ಧ ಸಾಹಿತ್ಯದಲ್ಲಿ ಪರಿಣತರಾದ ಪ್ರೊ ॥ ಲಕ್ಷ್ಮೀನರಸು ಅವರು. ಈ ಮಹಾಶಯರು ಆಗಾಗ ಸಭೆ ಸೇರಿಸಿ ದೇಶದ ವಿದ್ಯಾಪರಿಸ್ಥಿತಿಯನ್ನೂ ಸಮಾಜಪರಿಸ್ಥಿತಿಯನ್ನೂ ಸುಧಾರಣೆಯ ಪ್ರಶ್ನೆಗಳನ್ನೂ ಸಮಾಲೋಚಿಸುವರು.

ಆಗ ಸಮಾಜ ಸುಧಾರಕರಲ್ಲಿ ಎರಡು ಪಂಗಡ: (೧) ರ್‍ಯಾಷನಲ್ (Rational) ಎಂಬುದೊಂದು; ಇದು ಕಾರ್ಯಕಾರಣವಾದದ ಆಧಾರದ ಮೇಲೆ ಸಮಾಜವನ್ನು ಕಟ್ಟಬೇಕು ಎಂಬುದು. (೨) ಇನ್ನೊಂದು ನ್ಯಾಷನಲ್ (National) ಎಂಬುದು; ಈ ವಾದದವರಲ್ಲಿ ಸಂಪ್ರದಾಯ ಪದ್ಧತಿಗಳನ್ನು ಆಧಾರವಾಗಿ ಇರಿಸಿಕೊಂಡು ಸುಧಾರಣೆ ನಡಸಬೇಕು; ದೇಶಾಚಾರವನ್ನು ಪೂರ್ತಿಯಾಗಿ ಬಿಟ್ಟು ಕೇವಲ ಯುಕ್ತಿ ಚಮತ್ಕಾರಗಳಿಂದ ಸಮಾಜರಚನೆ ಮಾಡತಕ್ಕದ್ದಲ್ಲ-ಇದು ಅಭಿಪ್ರಾಯ. ಈ ಎರಡು ಮತಗಳಲ್ಲಿ ಸುಂದರರಾಮ ಅಯ್ಯರ್, ರಂಗಾಚಾರ್ಯರು, ವೆಂಕಟರಂಗರಾಯರು ದೇಶಸಂಪ್ರದಾಯಕ್ಕೆ ಸಮನ್ವಯವಾಗುವ ಸುಧಾರಣೆ ನಡಸಬೇಕೆಂದು ವಾದಿಸಿ ನ್ಯಾಷನಲ್ ಕಕ್ಷಿಗೆ ಸೇರಿದವರು.

ವೆಂಕಟರಂಗರಾಯರು ಆಗ ಮದರಾಸಿನಲ್ಲಿದ್ದ ಲ್ಯಾಂಡ್ ಹೋಲ್ಡರ್ಸ್ ಅಸೋಸಿಯೇಷನ್ ಎಂಬ ಜಮೀನ್ದಾರರ ಸಂಘದ ಕಾರ್ಯದರ್ಶಿಯಾಗಿದ್ದರು. ಅವರು ಸ್ವತಃ ಜಮೀನುಳ್ಳವರು. ಅವರು ಸಾಹಿತ್ಯವ್ಯಾಸಂಗ ಮಾಡಿದ್ದು ಕೇವಲ ಜ್ಞಾನಾಪೇಕ್ಷೆಯಿಂದ; ತಮ್ಮ ಸ್ವಂತ ಅಂತರಂಗಸಂಸ್ಕಾರಕ್ಕಾಗಿ. ಅವರು ಎಂ. ಎ. ಪ್ಯಾಸ್ ಮಾಡಿದ್ದವರು; ಆಂಧ್ರದ ಪ್ರೌಢ ಸಾಹಿತ್ಯವನ್ನು ಪರಿಶೀಲಿಸಿದ್ದವರು. ಹಾಗೆಯೇ ಸಂಸ್ಕೃತದ ಪುರಾಣ ಸಾಹಿತ್ಯದಲ್ಲಿ ಪರಿಣತರಾಗಿದ್ದವರು. ನಡತೆಯಲ್ಲಿ ಪ್ರಾಮಾಣಿಕರು, ಸರಳರು, ವಿನಯ ಸಂಪನ್ನರು. ಶ್ರೀನಿವಾಸ ಶಾಸ್ತ್ರಿಗಳಿಗೆ ಅವರು ಪರಮ ಪ್ರಿಯರಾದ ಸ್ನೇಹಿತರು.

# ವ್ಹಿಟ್ಲೆ ಕಮಿಷನ್

ಮೇಲೆ ನಾನು ಹೇಳಿದ ದಿವಸ ಕಾರಿನಲ್ಲಿ ಶಾಸ್ತ್ರಿಗಳೂ ವೆಂಕಟರಂಗರಾಯರೂ ಪ್ರಯಾಣ ಮಾಡುತ್ತಿದ್ದಾಗ ಮಾತುಕಥೆ ನಡೆಯುತ್ತಿತ್ತು. ಶಾಸ್ತ್ರಿಗಳು ವ್ಹಿಟ್ಲೆ ಕಮಿಷನ್ ಎಂಬ ಸಮಿತಿಯ ಸದಸ್ಯರಾಗಿದ್ದ ಕಾಲ ಅದು. ಸಮಿತಿಯ ಕೆಲಸ ಮುಪ್ಪಾಗ ಪಾಲು ಮುಗಿದಿತ್ತು. ವರದಿ ತಯಾರು ಮಾಡುವ ಕಾಲ ಬಂದಿತ್ತು. ಸರಕಾರಿ ಕಛೇರಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ಆಯಾ ಸಂಸ್ಥೆಯ ಯಜಮಾನರಿಗೂ ಅಲ್ಲಲ್ಲಿಯ ಜೀತಗಾರರಿಗೂ ಉಂಟಾಗಬಹುದಾದ ತಕರಾರನ್ನು ಪರಿಹರಿಸುವುದು ಹೇಗೆ, ಯಜಮಾನವರ್ಗಕ್ಕೂ ಜೀತವರ್ಗಕ್ಕೂ ಅನ್ಯೋನ್ಯ ಸ್ನೇಹ ಸಹಾನುಭೂತಿಗಳನ್ನು ಉಂಟುಮಾಡುವುದು ಹೇಗೆ? ಈ ಪ್ರಶ್ನೆಗಳನ್ನು ಎಲ್ಲ ದೃಷ್ಟಿಗಳಿಂದಲೂ ಪರ್ಯಾಲೋಚಿಸಿ ಜನಾಭಿಪ್ರಾಯವನ್ನು ಸಂಗ್ರಹಿಸಿ ಅದನ್ನು ವಿಮರ್ಶೆ ಮಾಡಿ ಉಚಿತ ತೋರಿದ ಸಲಹೆಗಳನ್ನು ಸರಕಾರಕ್ಕೆ ಬಿನ್ನಹ ಮಾಡುವುದು ಆ ಸಮಿತಿಯ ಕರ್ತವ್ಯವಾಗಿತ್ತು. ಆ ಸಮಿತಿಯ ಅಧ್ಯಕ್ಷ ಇಂಥ ಕೆಲಸದಲ್ಲಿ ತುಂಬ ಅನುಭವಿಯೆಂದು ಇಂಗ್ಲೆಂಡಿನಲ್ಲಿ ಪ್ರಸಿದ್ಧನಾಗಿದ್ದ ವ್ಹಿಟ್ಲೆ ಎಂಬಾತ. ಆತನ ಸಲಹೆಯಂತೆ ಬ್ರಿಟಿಷ್ ಸರಕಾರವು ರಚಿಸಿದ ವ್ಹಿಟ್ಲೆ ಕೌನ್ಸಿಲ್ ಎಂಬ ಸಮಿತಿಗಳು ಈ ಹೊತ್ತಿಗೂ ಇಂಗ್ಲೆಂಡಿನಲ್ಲಿ ಕೆಲಸ ಮಾಡುತ್ತ ದೇಶಪ್ರಯೋಜಕಗಳಾಗಿವೆ. ಅದರಂತೆ ನಮ್ಮ ದೇಶಕ್ಕೆ ಹೊಂದಿಕೊಳ್ಳುವ ಒಂದು ವ್ಯವಸ್ಥೆ ಯನ್ನು ಮಾಡಲಾದೀತೆ ಎಂದು ಯೋಚನೆಮಾಡಿ ಸಲಹೆ ನೀಡುವುದು ವ್ಹಿಟ್ಲೆ ಕಮಿಷನ್ನಿಗಿದ್ದ ಕರ್ತವ್ಯ. ಈ ಕೆಲಸ ನಡಸುವುದಕ್ಕಾಗಿ ಸಮಿತಿಯು ದೇಶದ ನಾನಾ ಪ್ರಾಂತಗಳಲ್ಲಿ ಸಂಚಾರ ಮಾಡಿ ಮಹಾಜನಾಭಿಪ್ರಾಯವನ್ನು ಸಂಗ್ರಹಿಸಿತ್ತು. ಈ ದೇಶಾಟನೆಯ ಅವಸರದಲ್ಲಿ ಶಾಸ್ತ್ರಿಗಳ ದೇಹ ಶಕ್ತಿ ಕುಗ್ಗಿತ್ತು.

# ಒಂದು ರಾಮಾಯಣ ಸನ್ನಿವೇಶ

ಆ ಸಂಜೆ ನಾವು ಕಾರಿನಲ್ಲಿ ಹೋಗುತ್ತಿದ್ದಾಗ ಯಾವುದೋ ರಾಮಾಯಣ ಪ್ರಸ್ತಾವ ಬಂತು. ಶಾಸ್ತ್ರಿಗಳವರಿಗೆ ಅದರಿಂದ ಉತ್ಸಾಹ ಕೆರಳಿತು. ದೇವನಹಳ್ಳಿಯಿಂದಾಚೆ ಕಾರು ಹೋಗಿದ್ದಾಗ ಅಲ್ಲಿ ಒಂದು ಕಡೆ ಕಾರು ನಿಲ್ಲಿಸಿದೆವು. ಶಾಸ್ತ್ರಿಗಳು ರಾಮಾಯಣದ ಯಾವುದೋ ಪ್ರಕರಣದಲ್ಲಿ ತದೇಕಚಿತ್ತರಾಗಿದ್ದರು. ಆ ಪ್ರಕರಣವನ್ನು ಕುರಿತು ಬೇರೆ ಬೇರೆ ರಾಮಾಯಣ ಕವಿಗಳು ಯಾರು ಯಾರು ಹೇಗೆ ಹೇಗೆ ಕಥಾನಿರ್ವಾಹ ಮಾಡಿದ್ದಾರೆ ಎಂಬುದನ್ನು ವರ್ಣಿಸುತ್ತಿದ್ದರು. ಜಾನಕೀಪರಿಣಯಕಾರ, ಅನರ್ಘರಾಘವಕಾರ, ಕಾಳಿದಾಸ, ಹನೂಮನ್ನಾಟಕಕಾರ, ತಮಿಳಿನ ಕಂಬರ್, -ಈ ಮತ್ತು ಇತರ ಕವಿಗಳಿಂದ ವಾಕ್ಯಗಳನ್ನು ಉದಾಹರಿಸುತ್ತ ಮಹೋಪನ್ಯಾಸ ಮಾಡಿದರು. ಅದರಲ್ಲಿ ಒಂದು ಸಂದರ್ಭ ನನ್ನ ಮನಸ್ಸಿನಲ್ಲಿ ಕಣ್ಣಿಗೆ ಕಟ್ಟಿದಂತೆ ನಿಂತಿದೆ. ಶ್ರೀರಾಮಚಂದ್ರನು ಸೀತಾ ಸಮೇತನಾಗಿ ಲಂಕೆಯಿಂದ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಹಿಂತಿರುಗುತ್ತಿದ್ದಾನೆ. ಆಗ ಆತನು ಸೀತಾದೇವಿಗೆ ತಾನು ಹಿಂದೆ ನೋಡಿದ್ದ ಪ್ರಯಾಣ ಮಾರ್ಗವನ್ನು ಜ್ಞಾಪಕಕ್ಕೆ ತಂದುಕೊಳ್ಳಲು ಯತ್ನಿಸುತ್ತಾನೆ. ದಂಡಕಾರಣ್ಯ ಪ್ರಾಂತಕ್ಕೆ ಬಂದಾಗ ಶ್ರೀರಾಮನಿಗೆ ಹಳೆಯ ಸ್ಥಳ ಸನ್ನಿವೇಶದ ನೆನಪು ಮಾಸಿಹೋಗಿದೆ. ಆ ಸ್ಥಳವನ್ನು ಗುರುತಿಸಲು ಪ್ರಯತ್ನಿಸುತ್ತಾನೆ. ಈ ಸಂದರ್ಭವನ್ನು ಭವಭೂತಿ ಚಿತ್ರಿಸಿದ್ದಾನೆ.

> ಪುರಾ ಯತ್ರ ಸ್ರೋತಃ
> ಪುಲಿನಮಧುನಾ ತತ್ರ ಸರಿತಾಂ
> ವಿಪರ್ಯಾಸಂ ಯಾತೋ
> ಘನವಿರಲಭಾವಃ ಕ್ಷಿತಿರುಹಾಮ್ ।
> ಬಹೋರ್ದೃಷ್ಟಂ ಕಾಲಾದಪರಮಿವ
> ಮನ್ಯೇ ವನಮಿದಂ
> ನಿವೇಶಃ ಶೈಲಾನಾಂ ತದಿದಮಿತಿ
> ಬುದ್ಧಿಂ ದ್ರಢಯತಿ ॥

“ಮೊದಲು ಎಲ್ಲಿ ನದಿ ಹರಿಯುತ್ತಿತ್ತೋ ಅಲ್ಲಿ ಈಗ ಉಸುಬು ತುಂಬಿ ಮರಳು ಕಾಡಾಗಿದೆ. ನದಿಯಾದರೋ ತನ್ನ ಪೂರ್ವಪಾತ್ರವನ್ನು ಬಿಟ್ಟು ಬೇರೆಯಾಗಿ ಹರಿಯುತ್ತಿದೆ. ಕಾಡುಗಳೋ ಎಂದರೆ ಆಗ ದಟ್ಟವಾಗಿ ಬೆಳೆದಿದ್ದ ಕಡೆ ಈಗ ಬಿಡುಬಿಟ್ಟಿದೆ. ಆಗ ಬಿಡುವು ಬಿಟ್ಟಿದ್ದ

ಜಾಗದಲ್ಲಿ ಈಗ ಗಿಡಮರಗಳು ಹಬ್ಬಿವೆ. ಆ ಹೊತ್ತಿನಿಂದ ಇಂದಿಗೆ ಬಹುಕಾಲ ಕಳೆದಿದೆ. ಆದದ್ದರಿಂದ ಗುರುತುಗಳು ಅಳಿಸಿಹೋಗಿ ಇದು ಆ ಪ್ರದೇಶವಲ್ಲದೆ ಬೇರೆ ಯಾವುದೋ ಎಂಬಂತೆ ತೋರುತ್ತಿದೆ. ಆದರೆ ಇದು ಅದೇ ಜಾಗವೇ ಎಂದು ನಿಶ್ಚಯ ಮಾಡಿಕೊಡಲು ಬೆಟ್ಟಗಳು ಸ್ಥಿರವಾಗಿ ನಿಂತಿವೆ. ಬೆಟ್ಟಗಳನ್ನು ನೋಡಿ ನಾವು ಸ್ಥಳವನ್ನು ಇಂಥದೆಂದು ನಿರ್ಧರಿಸಬಹುದಾಗಿದೆ."

ಈ ಶ್ಲೋಕವನ್ನು ಉದಾಹರಣೆ ಮಾಡಿ ಅದರ ಮೇಲೆ ಸಂಸ್ಕೃತದಲ್ಲಿ ಟೀಕೆ ಆರಂಭಿಸಿದರು: ಇಲ್ಲಿ ಅಲಂಕಾರ ಅರ್ಥಾಂತರನ್ಯಾಸ, "ಗುಣವದ್ ವಸ್ತು-ಸಂಸರ್ಗಾದ್ ಯಾತಿ ನೀಚೋಽತಿಗೌರವಮ್" -ಇತ್ಯಾದಿಯಾಗಿ.

# ಪ್ರಕೃತಾನ್ವಯ

ಈ ವ್ಯಾಖ್ಯಾನವಾದ ಮೇಲೆ ಶಾಸ್ತ್ರಿಗಳು ಹೇಳಿದರು: "ಇದು ನಮ್ಮ ಇಂಡಿಯ ದೇಶಕ್ಕೆ ಈ ಹೊತ್ತು ಜ್ಞಾಪಕದಲ್ಲಿರಬೇಕಾದ ತತ್ತ್ವ. ಆಯಾ ಕ್ಷಣದ ಅನುಕೂಲವನ್ನು ಯೋಚಿಸುವವರೂ ಸಂದರ್ಭಕ್ಕೆ ತಕ್ಕಂತೆ ಹೊರಳಿಕೊಳ್ಳುವವರೂ ಲಾಭವೇ ನೀತಿಯೆಂದೂ ನಡೆಯುವವರೂ ಯಾವ ದೇಶದಲ್ಲಿ ಪ್ರಮುಖರಾಗಿರುತ್ತಾರೋ ಆ ದೇಶಕ್ಕೆ ಕ್ಷೇಮವಾಗಲಾರದು. ನೀರು, ಕಾಡು, ಮರಳು ಇವೆಲ್ಲ ಸ್ಥಾನವನ್ನು ಬದಲಾಯಿಸಿಕೊಳ್ಳುತ್ತವೆ. ಪರ್ವತಗಳು ಸ್ಥಿರವಾಗಿ ನಿಂತು ಮಾರ್ಗದರ್ಶಕವಾಗುತ್ತವೆ. ಒಂದು ತತ್ತ್ವಕ್ಕಾಗಿ ನಿಲ್ಲುವ ಜನ ಯಾವ ದೇಶದಲ್ಲಿರುತ್ತಾರೋ ಆ ದೇಶಕ್ಕೆ ಕ್ಷೇಮವುಂಟು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ವಾಲ್ಮೀಕಿ ಋಷಿಗಳು ಶ್ರೀರಾಮನನ್ನು

ಧೈರ್ಯೇಣ ಹಿಮವಾನಿವ

ಎಂದು ವರ್ಣಿಸಿದ್ದಿರಬೇಕು. ನಾವು ಒಂದು ತತ್ತ್ವಕ್ಕಾಗಿ ಬದುಕಬೇಕು. ಹಾಗಲ್ಲದೆ ಗಾಳಿ ಬೀಸಿದ ಕಡೆ ಹೋಗುತ್ತಿದ್ದರೆ ಕ್ಷೇಮದ ಮಾತು ಹಾಗಿರಲಿ, ನಮ್ಮ ಶೀಲವೇ (Character ಕ್ಯಾರಕ್ಟರ್) ನಾಶವಾಗುತ್ತದೆ. ನಮ್ಮ ಜೀವವೇ ಭ್ರಷ್ಟವಾಗುತ್ತದೆ. ಈ ಹೊತ್ತು ನಮ್ಮ ದೇಶದ ಪ್ರಮುಖರಲ್ಲಿ ಗಾಂಧಿಯವರೊಬ್ಬರನ್ನು ವಿನಾಯಿಸಿದರೆ ಮಿಕ್ಕ ಎಷ್ಟು ಮಂದಿಯ ವಿಷಯದಲ್ಲಿ ನಾವು 'ನಿವೇಶಃ ಶೈಲಾನಾಂ' ಎಂದು ಹೇಳಲಾದೀತು?"

ಈ ಉಪನ್ಯಾಸ ಮುಗಿಯುವ ವೇಳೆಗೆ ಕತ್ತಲಾಗುತ್ತ ಬಂತು. ಶಾಸ್ತ್ರಿಗಳ ಧ್ವನಿಯೂ ಶ್ವಾಸಶಕ್ತಿಯೂ ತುಂಬ ಇಳಿದುಹೋಗಿದ್ದವು. ಅಲ್ಲಿಗೆ ಮಾತು ನಿಲ್ಲಿಸತಕ್ಕದ್ದೆಂದು ವೆಂಕಟರಂಗರಾಯರು ಒತ್ತಾಯಪಡಿಸಿದರು.

ಅಲ್ಲಿಂದ ಮೂರು ನಾಲ್ಕು ದಿನ ಕಳೆದ ಬಳಿಕ ವೆಂಕಟರಂಗರಾಯರೂ ನಾನೂ ಒಂದು ತಕರಾರೆತ್ತಿದೆವು.

ವೆಂ: "ಶಾಸ್ತ್ರಿಗಳೆ, ಏನು ಕೆಲಸ ನೀವು ಮಾಡುತ್ತಿರುವುದು? ಮೊನ್ನೆ ಸಂಜೆ ನೀವು ಮಾಡಿದ ವ್ಯಾಖ್ಯಾನ ಸಾವಿರ ಮಂದಿಯ ಸಭೆ ಕೇಳಬೇಕಾಗಿದ್ದದ್ದು. ನಿಮ್ಮ ಪಾಂಡಿತ್ಯದ ಪ್ರಯೋಜನವೂ ನಿಮ್ಮ ಕಾವ್ಯರಸಾನುಭವದ ಪ್ರಯೋಜನವೂ ನಮ್ಮ ಜನಕ್ಕೆ ದೊರೆಯ ಬೇಡವೆ?"

ನಾನು: "ಗ್ರೀಕ್ ಕಾವ್ಯಗಳಿಗೆ ಇಂಗ್ಲಿಷಿನಲ್ಲಿ ಗಿಲ್‌ಬರ್ಟ್ ಮರ‍್ರೆ (Gilbert Murry) ವಿದ್ವಾಂಸನು ಎಂಥ ಟೀಕೆಗಳನ್ನೂ ವಿವರಗಳನ್ನೂ ಬರೆದು ಲೋಕೋಪಕಾರ ಮಾಡಿದ್ದಾನೋ ಅಂಥ ಸೇವೆಯನ್ನು ನಮ್ಮ ದೇಶದ ಕವಿಗಳಿಗೆ ಮಾಡುವ ಅಧಿಕಾರವನ್ನು ಭಗವಂತ ನಿಮಗೆ ಅನುಗ್ರಹಿಸಿದ್ದಾನೆ. ನಮ್ಮ ಕಾವ್ಯನಾಟಕಗಳಿಗೆ ಅಂಥ ವಿವರಣೆ ಶೋಧನೆಗಳು ನಡೆದಲ್ಲದೆ ಸಂಸ್ಕೃತ ಸಾಹಿತ್ಯವು ಜಗತ್ತಿನಲ್ಲಿ ಜನದ ಆದರಣೆ ಪಡೆಯುವ ಆಸೆಯಿಲ್ಲ."

ಶಾಸ್ತ್ರಿಗಳು ನಮ್ಮ ವಾದವನ್ನು ಅಂಗೀಕರಿಸಿದರು. ಅವರು ಹೇಳಿದರು: "ನನ್ನ ಮನಸ್ಸೆಲ್ಲ ಈ ಕಡೆಯೇ ಇದೆ. ನನಗೆ ಸಂತೋಷವಿರುವುದು ನೈಜವಾಗಿ ಕಾವ್ಯಪಾಠದಲ್ಲಿ-ಅದಕ್ಕೆ ನನ್ನನ್ನು ಬಿಟ್ಟುಕೊಟ್ಟರೆ ಸಾಕಾಗಿದೆ. ಯಾರಿಗೆ ಬೇಕಾಗಿದೆ ಸಾರ್ ಈ ವ್ಹಿಟ್ಲಿಕಮಿಷನ್ನು, ಈ ಹಾರಾಟ? ಈ ರಾಜಕೀಯ ನನಗೆ ಸಾಕಾಗಿದೆ. ಪೂರ್ವದ ಮಹನೀಯರ ಸಹವಾಸಕ್ಕೆ ನನ್ನನ್ನು ಬಿಟ್ಟರೆ ನನ್ನ ಜನ್ಮ ಸಾರ್ಥಕವಾದೀತು ಎಂದುಕೊಳ್ಳುತ್ತೇನೆ. ಏನು ಮಾಡಲಿ?"

ಶಾಸ್ತ್ರಿಗಳ ತೀರ್ಥರೂಪರು ಶಂಕರನಾರಾಯಣ ಶಾಸ್ತ್ರಿಗಳು ರಾಮಾಯಣ ಪ್ರವಚನದಿಂದ ಪ್ರಸಿದ್ಧರಾಗಿದ್ದರು. ಶಾಸ್ತ್ರಿಗಳವರಿಗೆ ರಾಮಾಯಣಶ್ರದ್ಧೆ ಕುಲಧನವಾಗಿ ಬಂದಿತ್ತೆನ್ನಬಹುದು.

ಶಾಸ್ತ್ರಿಗಳು ತಾವೂ ರಾಮಾಯಣದ ವಿವರಣೆಯನ್ನು ಕೈಕೊಳ್ಳುವುದು ಯುಕ್ತವೆಂದೂ ಅದು ಅವರಿಗೆ ಕರ್ತವ್ಯವೆಂದೂ ರಾಜಕೀಯದ ಮರುಭೂಮಿಯಲ್ಲಿ ಅವರು ಬೇಸಾಯ ಮಾಡಿದ್ದು ಸಾಕೆಂದೂ ಅವರಿಗೆ ಸಹಜವಾದ ಕಾರ್ಯಕ್ಷೇತ್ರ ಸಾಹಿತ್ಯವೆಂದೂವಾದಿಸುತ್ತಿದ್ದ ಸ್ನೇಹಿತರು ಹತ್ತಾರು ಮಂದಿ. ಅವರಲ್ಲಿ ನಾನೂ ಒಬ್ಬ. ಅವರು ತಮ್ಮದೇ ಆದ ವಿಶೇಷ ಶೈಲಿಯಲ್ಲಿ ನಮ್ಮ ಪ್ರಾಚೀನ ವಾಙ್ಮಯವನ್ನು ನವೀನ ಲೋಕಕ್ಕೆ ಗ್ರಾಹ್ಯವಾಗುವ ಭಾಷೆಯಲ್ಲಿ ಪ್ರತಿಪಾದಿಸುವುದೇ ಅವರ ಜೀವಿತಕರ್ತವ್ಯವೆಂದು ನಾನು ಆಗಾಗ ವಿಜ್ಞಾಪನೆ ಮಾಡಿದ್ದುಂಟು. ನಾನು ಹೀಗೆ ಹೇಳಿದಾಗಲೆಲ್ಲ ಅವರು "ನಾನು ರಾಮಾಯಣವನ್ನು ಚೆನ್ನಾಗಿ ('ಶೆಮ್ಮೆಯಾ') ಓದಿಯೇ ಇಲ್ಲವಲ್ಲ!" ಎಂದು ಸಬೂಬು ಹೇಳುತ್ತಿದ್ದರು. ಅವರ ಕಾರಣವನ್ನು ನನ್ನ 'ಸಬೂಬು' ಎಂದಿದ್ದೇನೆ.

# ಆಲೋಡನೆ

ಶಾಸ್ತ್ರಿಗಳಿಗೆ ವಿಷಯಜ್ಞಾನದ ಕೊರತೆ ಎಷ್ಟುಮಾತ್ರವೂ ಇದ್ದದ್ದಲ್ಲ. ಅವರು ಸಂಸ್ಕೃತ ಶ್ರೀಮದ್ರಾಮಾಯಣವನ್ನು ಪದೇ ಪದೇ, ಬಹುಶಃ ದಿನಂಪ್ರತಿ ಆಲೋಡನೆಯಲ್ಲಿಟ್ಟುಕೊಂಡಿದ್ದರು. ಸಂಸ್ಕೃತ ಮೂಲವನ್ನು ಓದುತ್ತಿದ್ದಾಗ ಆ ಪ್ರಕರಣವನ್ನು ಇತರ ಕವಿಗಳು ಹೇಗೆ ಹೇಗೆ ನಿರೂಪಿಸಿದ್ದಾರೆ, ಎಂಬ ಕುತೂಹಲ ಅವರ ಮನಸ್ಸಿನಲ್ಲಿ ತಲೆದೋರುವುದು. ಆ ಕೂಡಲೆ ತಮ್ಮ ಭಾರ್ಯೆಯನ್ನು ಕರೆಯುವರು.

"ಲಕ್ಷ್ಮೀ, ಕಂಬರ್ ಈ ಸಂದರ್ಭದಲ್ಲಿ ಏನು ಬರೆದಿದ್ದಾರೆ ಓದು. ಕೇಳೋಣ."

ಆಕೆ ಕಂಬರಾಮಾಯಣ ವಾಕ್ಯಗಳನ್ನು ಓದಿದ ಬಳಿಕ ತಮ್ಮ ಮಿತ್ರರಾಗಿದ್ದ ಸಿ. ಆರ್. ಶ್ರೀನಿವಾಸಯ್ಯಂಗಾರ್ಯರು ವಾಲ್ಮೀಕಿಯ ತಮಿಳು ತರ್ಜುಮೆಯಲ್ಲಿ ಹೇಗೆ ಬರೆದಿದ್ದಾರೆ ಎಂದು ನೋಡುವರು. ಆಮೇಲೆ ಅದೇ ಪ್ರಕರಣವನ್ನು ಕಾಳಿದಾಸನು ಹೇಗೆ ಪುನರ್ನಿರ್ಮಾಣ ಮಾಡಿದ್ದಾನೆ?-ಭವಭೂತಿ ಅದನ್ನು ಹೇಗೆ ನಿರ್ವಹಿಸಿದ್ದಾನೆ-ಈ ರೀತಿ ವಿಸ್ತಾರವಾಗಿ ಸಂಚಾರ ಮಾಡುವರು. ಬಳಿಕ ಇಷ್ಟರಾದವರೊಡನೆ ಪ್ರಕರಣವನ್ನು ಪುನಃ ಪ್ರತಿಪಾದನೆ ಮಾಡುವರು. ಇದೆಲ್ಲ ನಾನು ಕಣ್ಣಾರ ಕಂಡಿರುವ ಸಂಗತಿ.

# ತನ್ಮಯತೆ

ಒಂದು ದಿನ ಸುಮಾರು ೧೧ ಘಂಟೆ. ಶ್ರೀರಾಮಚಂದ್ರನು ರಾವಣವಧಾನಂತರ ಸೀತಾದೇವಿಯನ್ನು ಕುರಿತು ಆಡಿದ ಮಾತುಗಳನ್ನೋದಿ ಕೆರಳಿದರು ಶಾಸ್ತ್ರಿಗಳು.

ರಾವಣಾಂಕಪರಿಭ್ರಷ್ಟಾ...

ಇತ್ಯಾದಿ ವಾಕ್ಯಗಳು "ಛೆ ಛೆ! ರಾಮಚಂದ್ರನ ಬಾಯಲ್ಲಿ ಇಂಥ ಮಾತುಗಳು ಬರಬಹುದೆ? ಅವನೇನು ಗ್ರಾಮ್ಯ ಮನುಷ್ಯನಂತಾಡಿದ್ದಾನಲ್ಲ!" ಎಂದು ರೇಗಾಡಿದರು. ಲಕ್ಷ್ಮಮ್ಮನವರು ಸ್ತಬ್ಧರಾಗಿ ನೋಡುತ್ತಿದ್ದರು. ಎಂಟು ಹತ್ತು ನಿಮಿಷ ಕಳೆದ ಮೇಲೆ ರೇಗಾಟ ತಾನಾಗಿ ಇಳಿಮುಖವಾಯಿತು.

ಹೀಗೆ ಗ್ರಂಥಪರಿಶೀಲನೆ ಮಾಡಿದ್ದವರು ತಮ್ಮ ಅಸಮರ್ಥತೆಯನ್ನು ಹೇಳಿಕೊಂಡರೆ ಅದನ್ನು ಯಾರು ಅಂಗೀಕರಿಸಿಯಾರು? ಮದರಾಸಿನಲ್ಲಿ ಟಿ. ಆರ್. ವೆಂಕಟರಾಮಶಾಸ್ತ್ರಿ ಮೊದಲಾದ ಸ್ನೇಹಿತರ ಒತ್ತಾಯ ಬಲವತ್ತರವಾಯಿತು. ೧೯೪೪ ರಲ್ಲಿ ಶಾಸ್ತ್ರಿಗಳು ಅದಕ್ಕೆ ಮನ್ನಣೆ ಕೊಟ್ಟು ಉಪಕ್ರಮ ಮಾಡಿದರು ತಮ್ಮ ರಾಮಾಯಣೋಪನ್ಯಾಸಗಳನ್ನು.

# ರಾಮಾಯಣೋಪನ್ಯಾಸಗಳು

ಉಪನ್ಯಾಸಮಾಲಿಕೆ ಪ್ರಾರಂಭವಾದದ್ದು ಮಿತ್ರಗೋಷ್ಠಿಗಾಗೆಂದು. ಅದು ವೆಂಕಟರಾಮಶಾಸ್ತ್ರಿಗಳ ಮನೆಯ ಆವರಣದಲ್ಲಿ. ಪ್ರಾರಂಭದ ಉಪನ್ಯಾಸಕ್ಕೆ ಬಂದಿದ್ದ ಜನ ಅದನ್ನು ಕುರಿತು ತಮ್ಮ ತಮ್ಮ ಇಷ್ಟಮಿತ್ರರಲ್ಲಿ ಹೇಳುತ್ತಹೋದದ್ದರ ಫಲವಾಗಿ, ಸಭೆ ದಿನೇದಿನೇ ದೊಡ್ಡದಾಗುತ್ತ ಬಂತು. ಪರಸ್ಥಳಗಳಿಂದ ಅದನ್ನು ಕೇಳಲು ಜನ ಬಂದರು. ಶ್ರೀರಾಮಚಂದ್ರನ ಮಾಹಾತ್ಮ್ಯೆಯನ್ನು ಕುರಿತು ಹೇಳುವಾಗ ಶಾಸ್ತ್ರಿಗಳ ಭಾವಾವೇಶ ಗಂಟಲು ಕಟ್ಟುವಷ್ಟಾಯಿತು. ಕಣ್ಣುಗಳಲ್ಲಿ ಕಂಬನಿ ತುಂಬಿತು. ಕೊಂಚ ಹೊತ್ತು ಮೌನವಾಗಬೇಕಾಯಿತು. ಅಲ್ಲಿದ್ದ ಜನ ತಲ್ಲೀನರಾಗಿದ್ದರು. ಆ ಹೊತ್ತು ತಮ್ಮ ಜನ್ಮ ಸಾರ್ಥಕವಾಯಿತೆಂದುಕೊಂಡರು.

ಶಾಸ್ತ್ರಿಗಳ ರಾಮಾಯಣೋಪನ್ಯಾಸ ಮಾಲಿಕೆಯ ಸಮಾಪನ ಸಂದರ್ಭದಲ್ಲಿ ಆ ಉಪನ್ಯಾಸಗಳನ್ನು ಕೇಳಿದ್ದ ಸಭಾಜನರ ಮನಸ್ತೃಪ್ತಿಯನ್ನೂ ಸಂತೋಷವನ್ನೂ ವ್ಯಕ್ತಗೊಳಿಸುವುದಕ್ಕಾಗಿ ಒಂದು ಸಮಾರಂಭ ಏರ್ಪಟ್ಟಿತ್ತು. ಆಗ ಒಂದು ದೊಡ್ಡ ಬೆಳ್ಳಿಯ ತಟ್ಟೆಯಲ್ಲಿ ಒಂದು ರಾಮಾಯಣಶ್ಲೋಕದ ಅಕ್ಷರಗಳನ್ನು ಕೆತ್ತಿಸಿ, ಅದನ್ನು ಶಾಸ್ತ್ರಿಗಳಿಗೆ ಒಪ್ಪಿಸಿದರು. ಆ ಶ್ಲೋಕವು ಶ್ರೀರಾಮಚಂದ್ರನು ಆಂಜನೇಯಮೂರ್ತಿಯೊಡನೆ ಮೊದಲ ಸಾರಿ ಮಾತನಾಡಿದಾಗ ಆಂಜನೇಯನ ವಾಕ್ಯರೀತಿಯನ್ನು ಶ್ರೀರಾಮನು ಮೆಚ್ಚಿಕೊಂಡು ಆಡಿದ ಮಾತು. ಆ ಶ್ಲೋಕವು ಶಾಸ್ತ್ರಿಗಳ ವಾಕ್ಯರೀತಿಗೆ ಅನ್ವಯಿಸುತ್ತದೆಂಬುದು ಆ ಸಭಾಜನದ ತಾತ್ಪರ್ಯ:

> ಸಂಸ್ಕಾರಕ್ರಮಸಂಪನ್ನಾಂ
> ಅದ್ರುತಾಮವಿಲಂಬಿತಾಮ್ ।
> ಉಚ್ಚಾರಯತಿ ಕಲ್ಯಾಣೀಂ
> ವಾಚಂ ಹೃದಯಹಾರಿಣೀಮ್ ॥

ಕಾವ್ಯಮೀಮಾಂಸಕರಲ್ಲಿ ‘ರೀತಿಮತ’ ವೊಂದುಂಟು:

> ರೀತಿರಾತ್ಮಾ ಕಾವ್ಯಸ್ಯ॥

ಶಾಸ್ತ್ರಿಗಳ ಕಲೆಯ ವಿಷಯದಲ್ಲಿ ಇದು ಹೊಂದುತ್ತದೆ. ಅವರ ಉಪನ್ಯಾಸ ಒಂದು ಕಾವ್ಯ. ಅದರ ಸ್ವಾರಸ್ಯಸ್ಥಾನ ಅದರ ರೀತಿ.

# ತೇವಾರ ಕಛೇರಿ

ಇನ್ನೊಂದು ಅನುಭವವನ್ನು ಹೇಳುತ್ತೇನೆ.

ಶಾಸ್ತ್ರಿಗಳು ಅಣ್ಣಾಮಲೈ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾಗಿದ್ದಾಗ ನಾನು ಅಣ್ಣಾಮಲೆಗೆ ಹೋಗಿದ್ದೆ, ಅಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಗೋಖಲೆಯವರ ಜನ್ಮ ದಿವಸದ ಭಾಷಣವನ್ನು ಕೊಡುವುದಕ್ಕಾಗಿ. ಅಂದು ಶಾಸ್ತ್ರಿಗಳು ಊರಿನಲ್ಲಿರಲಿಲ್ಲ. ದೆಹಲಿಗೆ ಹೋಗಿದ್ದರು. ಉಪನ್ಯಾಸದ ಮಾರನೆಯ ದಿನವೋ ಮೂರನೆಯ ದಿನವೋ ಹಿಂತಿರುಗಿ ಬಂದರು. ನಾನು ಆ ಒಂದು ದಿನ ಅಲ್ಲಿದ್ದು ಮಾರನೆಯ ದಿನ ಹಿಂತಿರುಗಬೇಕೆಂದಿದ್ದೆ. ನನ್ನ ಕಾರ್ಯಕ್ರಮವನ್ನು ಶಾಸ್ತ್ರಿಗಳಿಗೆ ಅರಿಕೆ ಮಾಡಿದಾಗ ಅವರು ಹೇಳಿದರು:

“ಏನಯ್ಯಾ! ಚಿದಂಬರಕ್ಕೆ ಬಂದವನು ತೇವಾರವನ್ನು ಕೇಳದೆ ಹಿಂದಕ್ಕೆ ಹೋಗುವುದುಂಟೆ! ನೀನು ಹುಚ್ಚ. ಇನ್ನೆರಡು ದಿನ ಇರು. ತೇವಾರಕ್ಕೆ ಏರ್ಪಾಟು ಮಾಡುತ್ತೇನೆ.”

ಅದರಂತೆ ಒಂದು ದಿನ ವೈಸ್ ಚಾನ್ಸ್‌ಲರ ಸನ್ನಿಧಿಯಲ್ಲಿ ತೇವಾರದ ಕಛೇರಿ ನಡೆಯಿತು. ತೇವಾರವೆಂಬುದು ತಮಿಳಿನ ಶಿವಸ್ತೋತ್ರ ಪ್ರಬಂಧ. ಶೈವ ಮಹಾಪುರುಷರು ಹಾಡಿದ ಈ ಸ್ತೋತ್ರಗಳು ತಮಿಳು ಶೈವರಿಗೆ ವೇದಪ್ರಾಯವಾದವು. ಆ ಪ್ರಬಂಧಗಳನ್ನು ನನಗೆ ವಿವರಣೆ ಮಾಡಿ ಹೇಳುವುದಕ್ಕೋಸ್ಕರ ತಮಿಳು ಮಹಾವಿದ್ವಾನ್ ರಾಘವಯ್ಯಂಗಾರ್ಯರನ್ನು ಬರಮಾಡಿದ್ದರು. ತೇವಾರಗಳನ್ನು ಹಾಡಿದ್ದು ಏಳೆಂಟು ಮಂದಿಯ ಒಂದು ಗುಂಪು. ಅದು ತಾಳ ಮೃದಂಗ ಸಮೇತವಾಗಿತ್ತು. ತೇವಾರವನ್ನು ಹಾಡುವ ಸಂಪ್ರದಾಯವೊಂದು ಪ್ರಾಚೀನವಾದದ್ದುಂಟು. ಹಾಡುಗಳ ರಾಗಗಳೂ ತಾಳಗತಿಯೂ ಸಂಪ್ರದಾಯದಿಂದ ಬಂದಿರುತ್ತವೆ. ಹಾಡುವವರನ್ನು ಕ್ರಮವಾಗಿ ಗುರುಕುಲದಲ್ಲಿ ತಯಾರು ಮಾಡಿಸಿರುತ್ತಾರೆ. ಇವರನ್ನು ತಯಾರುಮಾಡುವುದಕ್ಕಾಗಿ ಚಿದಂಬರದಲ್ಲಿ ತೇವಾರದ ಪಾಠಶಾಲೆಯೇ ಒಂದಿತ್ತು. ಶಾಸ್ತ್ರಿಗಳು ಹೇಳಿದರು:

“ಇಂಥ ತೇವಾರ ಪಾಠಶಾಲೆಗಳನ್ನು ನಮ್ಮ ನಾಟುಕೋಟಿ ಚೆಟ್ಟಿಯಾರುಗಳು ನೆಲಸಿರುವ ಎಲ್ಲ ದೇಶಗಳಲ್ಲೂ ಸ್ಥಾಪಿಸಿರುತ್ತಾರೆ. ಬರ್ಮದಲ್ಲಿ, ಮಲೇಶಿಯಾದಲ್ಲಿ-ಇನ್ನು ಬೇರೆ

ದ್ವೀಪಾಂತರಗಳಲ್ಲಿ-ಅಲ್ಲಿಯ ಶಿವಾಲಯಗಳಲ್ಲಿ ಪೂಜೆ ನಡೆಯುವಾಗ ತದಂಗವಾಗಿ ತೇವಾರಗಳನ್ನು ಹಾಡುವುದು ಕ್ರಮ. ಈ ಕೈಂಕರ್ಯಕ್ಕಾಗಿ ನಾಟುಕೋಟಿ ಚೆಟ್ಟಿಯಾರುಗಳು ಉದಾರವಾಗಿ ದ್ರವ್ಯವನ್ನು ವ್ಯಯ ಮಾಡಿದ್ದಾರೆ."

ತೇವಾರದ ಕಛೇರಿ ಸುಮಾರು ಎರಡು ಘಂಟೆ ಹೊತ್ತು ನಡೆಯಿತು. ಅದನ್ನು ಕೇಳಿದ್ದರಿಂದ ನನ್ನ ಮನಸ್ಸಿಗೆ ಸಂತೋಷವಾದದ್ದಲ್ಲದೆ ತಮಿಳಿನ ಗೇಯ ಛಂದಸ್ಸಿನ ರೂಪವನ್ನು ಕುರಿತು ನನಗೆ ಕೊಂಚ ತಿಳಿವಳಿಕೆ ಬಂತು.

# ವ್ಯಾಧಿ

ನಾನು ಹೇಳಬೇಕೆಂದು ಹೊರಟ ವಿಷಯ ಬೇರೆಯದು. ತೇವಾರದ ಕಛೇರಿ ನಡೆದ ಮಾರನೆಯ ದಿನ ಶಾಸ್ತ್ರಿಗಳಿಗೆ ಮೈ ಕೊಂಚ ಅಲಸಿಕೆಯಾಗಿತ್ತು-ಹಿಂದಿನ ಎರಡು ಮೂರು ದಿನಗಳ ದೂರಪ್ರಯಾಣದ ಕಾರಣದಿಂದ ಇರಬಹುದು. ಭೋಜನಕಾಲದಲ್ಲಿಯೆ ಸ್ವಲ್ಪ ದುರ್ಬಲತೆ ತೋರಿತು. ವಿಶ್ರಾಂತಿಯಿಂದ ಸರಿಹೋಗಬಹುದೆಂದು ನಾವು ಅಂದುಕೊಂಡಿದ್ದೆವು. ಆದರೆ ಮಧ್ಯಾಹ್ನ ಒಂದು ಒಂದೂವರೆ ಘಂಟೆಯ ಸುಮಾರಿನಲ್ಲಿ ಅವರಿಗೆ ಎದೆಶೂಲೆ ಹೆಚ್ಚಾಯಿತು. ನಾಲ್ಕೈದು ನಿಮಿಷಗಳಲ್ಲಿ ಮಾತನಾಡುವುದೇ ಕಷ್ಟವಾಯಿತು. ಮಂಚದ ಮೇಲೆ ಮಲಗಿಸಿದೆವು. ಅವರು ಕೈಯನ್ನು ಎದೆಯ ಮೇಲಿಟ್ಟು ಒತ್ತಿಕೊಳ್ಳುತ್ತಿದ್ದರು. ನೋವು ಹೆಚ್ಚಾಗಿದ್ದಂತಿತ್ತು.

ಆಗ ಏನು ಮಾಡಬೇಕೆಂದು ನನಗೆ ತೋರಲಿಲ್ಲ. ಅದುವರೆಗೆ ನಾನು ಅಂಥ ಕಾಯಿಲೆಯನ್ನು ನೋಡಿರಲಿಲ್ಲ. ಉತ್ಕ್ರಮಣ ಕಾಲದ ಸ್ಥಿತಿ ಎಂಥದೆಂಬುದು ನನಗೆ ತಿಳಿದಿರಲಿಲ್ಲ. ಆಗ್ಗೆ ನನ್ನ ತಂದೆತಾಯಿಗಳಿಬ್ಬರೂ ದೃಢಕಾಯರಾಗಿದ್ದದ್ದರಿಂದ ಯಾವ ಪ್ರಬಲವ್ಯಾಧಿಯ ಅರಿವೂ ನನಗೆ ಉಂಟಾಗಿರಲಿಲ್ಲ. ಶಾಸ್ತ್ರಿಗಳ ಜೊತೆಯಲ್ಲಿದ್ದವರು-ಸೇವಕರನ್ನು ಬಿಟ್ಟರೆ-ಮೂರೇ ಮಂದಿ: ನಾನು: ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಸೂರ್ಯನಾರಾಯಣರಾಯರ ಭಾರ್ಯೆ ಅನಸೂಯಮ್ಮ ಎಂಬಾಕೆ; ವೆಂಕಟರಾಮ್ ಎಂಬ ಪ್ರೈವೇಟ್ ಸೆಕ್ರೆಟರಿ. ಈ ವೆಂಕಟರಾಮ್ ೨೫-೨೬ ವಯಸ್ಸಿನವನು. ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬುದ್ಧಿವಂತನೆಂದೂ ಒಳ್ಳೆಯವನೆಂದೂ ಹೆಸರು ಪಡೆದಿದ್ದ. ವೈದ್ಯಸಹಾಯವಾದರೋ ವೈಸ್‌ಚಾನ್ಸಲರ ಮನೆಗೆ ಆರೇಳು ಮೈಲಿ ದೂರದಿಂದ ಬರಬೇಕಾಗಿತ್ತು. ನಾನು ಒಂದು ಯೋಚನೆ ಮಾಡಿದೆ. ವೆಂಕಟರಾಮ್ ಕಾರಿನಲ್ಲಿ ಹೋಗಿ ಡಾಕ್ಟರನ್ನು ಕರೆತರತಕ್ಕದ್ದು. ಅದಕ್ಕೆ ಬೇಕಾಗುವ ೧೫-೨೦ ನಿಮಿಷಗಳಲ್ಲಿ ಅನಸೂಯಮ್ಮನವರು ಗ್ರಾಮೊಫೋನ್ ಮುಂದೆ ನಿಂತು ಸಂಗೀತ ರೆಕಾರ್ಡು ಹಾಕತಕ್ಕದ್ದು. ನಾನು ಶಾಸ್ತ್ರಿಗಳ ಹತ್ತಿರ ನಿಂತು ಅವರ ಕೈ ಕಾಲುಗಳನ್ನು ಒತ್ತಿ ಸವರತಕ್ಕದ್ದು. ಡಾಕ್ಟರು ಬಂದಾಗ ಅವರು ಹೇಳಿದಂತೆ ನಡೆಯತಕ್ಕದ್ದು.

# ಅವಸಾನ ಪ್ರಾರ್ಥನೆ

ಇದರಂತೆ ಅನಸೂಯಮ್ಮನವರು ರೆಕಾರ್ಡು ಹಾಕುತ್ತಿದ್ದರು. ಶಾಸ್ತ್ರಿಗಳಿಗೆ ಇಷ್ಟವಾದ ರಾಗಗಳಾವುವೆಂಬುದನ್ನು ಆಷ್ಟಿಷ್ಟು ತಿಳಿದಿದ್ದ ನಾನು ಯಾವ ಯಾವ ರೆಕಾರ್ಡು ಹಾಕಬೇಕೆಂಬುದನ್ನು ಆಕೆಗೆ ಹೇಳಿದ್ದೆ. ನಾನು ಶಾಸ್ತ್ರಿಗಳ ಕೈಕಾಲು ಒತ್ತುತ್ತಿದ್ದೆ. ಶಾಸ್ತ್ರಿಗಳಾದರೋ ಇಹಲೋಕದ ಜ್ಞಾನವಿಲ್ಲದವರಂತೆ ಸ್ತಬ್ಧರಾಗಿ ಕೈಕಾಲು ಮುದುಡಿಕೊಂಡು ಮಲಗಿದ್ದರು. ಅನಸೂಯಮ್ಮನವರು ನಾಲ್ಕೈದು ಯಾವಯಾವುದೋ ರೆಕಾರ್ಡುಗಳನ್ನು ಹಾಕಿ ಅವು ಮುಗಿದ ಮೇಲೆ, ಯದುಕುಲ ಕಾಂಭೋದಿ ರಾಗದ “ಪಾಹಿ ರಾಮಚಂದ್ರ ರಾಘವ” ಎಂಬ ರೆಕಾರ್ಡನ್ನು ಹಾಕಿದ್ದರು. ಅದು ಮುಸುರಿ ಸುಬ್ರಹ್ಮಣ್ಯ ಅಯ್ಯರ್ ಅವರು ಹಾಡಿದ್ದದ್ದು, ತ್ಯಾಗರಾಜರ ಕೀರ್ತನೆ. ಹಾಡು ಮುಗಿದು ಕಡೆಗೆ ಬರುತ್ತಿದ್ದಾಗ, ಇನ್ನೇನು ಮುಗಿಯಿತು ಎನ್ನುವಷ್ಟರೊಳಗಾಗಿ ಶಾಸ್ತ್ರಿಗಳ ಬಾಯಿಂದ

“ಸಾರ್...”

ಎಂಬ ಧ್ವನಿ ಹೊರಟದ್ದು ನನ್ನ ಕಿವಿಗೆ ಬಿತ್ತು. ನಾನು ಆ ಕೂಡಲೆ ಕಿವಿಯನ್ನು ಅವರ ಬಾಯ ಹತ್ತಿರ ಹಿಡಿದೆ.

“Once more Sir” ಎಂದರು. ಅನಸೂಯಮ್ಮನವರು ಮತ್ತೆ ಆ ರೆಕಾರ್ಡನ್ನು ಹಾಕಿದರು. ಮತ್ತೊಂದು ಸಾರಿ ಹಾಗೆಯೇ ಆಯಿತು. ಹೀಗೆ ಮೂರು ಸಲ ಆದ ಬಳಿಕ ಶಾಸ್ತ್ರಿಗಳು ನನ್ನ ಕಿವಿಯಲ್ಲಿ ಉಸುರಿದರು:

“ನನ್ನ ಅವಸಾನಕಾಲದಲ್ಲಿ ಈ ಹಾಡು ನನಗೆ ಕೇಳುವ ಹಾಗಾದರೆ-”

ಅವರ ಅಂತರಂಗದ ಭಾವ ಆಗ ಹೊರಕ್ಕೆ ಬಂತು. ಅವರ ಕಣ್ಣುಗಳಲ್ಲಿ ಕಂಬನಿ ತುಂಬಿತ್ತು. ಶ್ರೀರಾಮಚಂದ್ರಮೂರ್ತಿಯ ಸ್ಮರಣೆ ತಮಗೆ ಸರ್ವದಾ ಶ್ರುತಿಗೋಚರವಾಗಿರಬೇಕೆಂದು ಅವರ ಹಂಬಲ.

***

ವಾಸ್ತವವಾಗಿ ಶಾಸ್ತ್ರಿಗಳು ಮೃತರಾದ ದಿನ (ಏಪ್ರಿಲ್ ೧೯೪೬) ಆ ವಾರ್ತೆಯನ್ನು ಮಹಾಜನಕ್ಕಾಗಿ ಪ್ರಸಾರ ಮಾಡುವುದರಲ್ಲಿ ಮದರಾಸಿನ ಎ. ಐ. ಆರ್. ಅಧಿಕಾರಿಗಳು ಮೇಲೆ ಹೇಳಿದ ಕೀರ್ತನೆಯಷ್ಟೇ ಸೊಗಸಿನದೂ ಉಚಿತವೂ ಆದ ಒಂದು ತ್ಯಾಗರಾಜ ಕೀರ್ತನೆಯನ್ನು ತಮ್ಮ ಪ್ರಸಾರದ ಸಮಾಪ್ತಿಯಲ್ಲಿ ಸೇರಿಸಿದರು. ಅದು

ರಾ ರಾ ಮಾಯಿಂಟಿದಾಕಾ

ಎಂಬ ಅಸಾವೇರಿ ರಾಗದ ಕೀರ್ತನೆ. ಇದನ್ನು ಕೇಳಿದಾಗ ನನ್ನ ಕಣ್ಣಲ್ಲಿ ತಡೆಯಲಾರದಷ್ಟು ಕಂಬನಿ ಉಕ್ಕಿ ಬಂತು.

# ಒಂದು ಬೇಡಿಕೆ

ಶ್ರೀನಿವಾಸ ಶಾಸ್ತ್ರಿಗಳವರು ಅಣ್ಣಾಮಲೈ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾಗಿದ್ದಾಗ ಒಮ್ಮೆ ಬೆಂಗಳೂರಿಗೆ ಬೇಸಗೆಗಾಗಿ ಬಂದರು. ಆಗ ಡಾ ॥ ಸಿ. ಬಿ. ರಾಮರಾಯರ ಮನೆ ಬಿಡುವಾಗಿದ್ದದ್ದರಿಂದ ಒಂದೆರಡು ತಿಂಗಳ ಕಾಲ ಅಲ್ಲಿ ವಾಸವಾಗಿದ್ದರು. ಆಗ ಒಂದು ದಿನ ಮಧ್ಯಾಹ್ನ ಅವರು ನನ್ನೊಡನೆ ಯಾವುದೋ ರಾಜಕೀಯವನ್ನು ಚರ್ಚೆಮಾಡುತ್ತಿದ್ದರು. ಅದು ಬಹುಶಃ ೧೯೩೫ನೆಯ ಇಸವಿಯ ಇಂಡಿಯದ ರಾಜ್ಯ ನಿಬಂಧನೆಯ ಕೆಲವು ಪ್ರಕರಣಗಳನ್ನು ಕುರಿತು. ಸುಮಾರು ಎರಡು ಘಂಟೆಯ ಕಾಲ ಆ ಪ್ರಕರಣಗಳ ಅರ್ಥವ್ಯಾಪನೆಯನ್ನು ಕುರಿತು ಮಾತನಾಡಿದೆವು. ಆ ಹೊತ್ತಿಗೆ ಅಷ್ಟು ಸಾಕೆಂದು ಮುಗಿಸಿ ಸ್ವಲ್ಪ ಹೊರಗೆ ಸುತ್ತಾಡಿಕೊಂಡು ಬರೋಣವೆಂದು ಹೊರಟೆವು. ಹೊರಡುವ ಸಮಯದಲ್ಲಿ ಶಾಸ್ತ್ರಿಗಳು ಹೇಳಿದರು:

ಶಾ: "ಸಾರ್, ನಿಮಗೆ ಒಂದು ಪುಸ್ತಕ ಕೊಡುತ್ತೇನೆ. ಅದರಲ್ಲಿ ಒಂದು ಭಾಗವನ್ನು ನೀವು ನೋಡಿ ಅದರ ಸಾರಾಂಶವನ್ನು ನನಗೆ ಹೇಳಬೇಕಾಗಿದೆ."

ನಾನು: "ಸಂತೋಷದಿಂದ ಆ ಕೆಲಸ ಮಾಡುತ್ತೇನೆ."

ನಾನು ಆಗ ಏನು ತಿಳಿದುಕೊಂಡೆ? ನಾವು ಮಾತನಾಡತ್ತಿದ್ದದ್ದು ರಾಜಕೀಯ; ಆದದ್ದರಿಂದ ಯಾವುದೋ ರಾಜ್ಯಶಾಸ್ತ್ರ ಗ್ರಂಥವನ್ನೋ ರಾಜಕೀಯ ಪ್ರಬಂಧವನ್ನೋ ಶಾಸ್ತ್ರಿಗಳು ನನಗೆ ಕೊಟ್ಟಾರು-ಹೀಗೆ ಮನಸ್ಸಿನಲ್ಲಿ ನಿರೀಕ್ಷಿಸಿದ್ದೆ. ನಾವು ಗಾಳಿಸೇವನೆಗಾಗಿ ಹೊರಗೆ ಹೋಗಿ ಸುಮಾರು ೭ ಘಂಟೆಗೆ ಹಿಂತಿರುಗಿ ಬಂದು ಮೋಟಾರಿನಿಂದ ಇಳಿದಾಗ ಶಾಸ್ತ್ರಿಗಳು, "ಸಾರ್, ನಾನು ಹೇಳಿದ್ದನ್ನು ಮರೆಯಬೇಡಿ. ಪುಸ್ತಕ ಕೊಡುತ್ತೇನೆ" -ಎಂದು ತಮ್ಮ ಕೋಣೆಯೊಳಕ್ಕೆ ಹೋಗಿ ಒಂದು ಪುಸ್ತಕವನ್ನು ತಂದು ನನ್ನ ಕೈಗೆ ಕೊಟ್ಟು "ನನಗೆ ಬೇಕಾದ ಭಾಗಕ್ಕೆ ಗುರುತುಚೀಟಿ ಇಟ್ಟಿದ್ದೇನೆ" ಎಂದು ಹೇಳಿದರು. ಆ ಜಾಗ ಮಬ್ಬಾಗಿತ್ತು: ಮತ್ತು ಶಾಸ್ತ್ರಿಗಳಿಗೆ ರಾತ್ರಿಭೋಜನದ ವೇಳೆಯಾಗಿತ್ತು. ಆದದ್ದರಿಂದ ನಾನು ಪುಸ್ತಕವೇನೆಂಬುದನ್ನು ಅಲ್ಲಿ ನೋಡದೆ ಅದನ್ನು ಹಿಡಿದು ಮನೆಗೆ ಬಂದೆ.

# ನನ್ನ ಅಚ್ಚರಿ

ಭೋಜನಾನಂತರ ವಿರಾಮವಾಗಿ ನೋಡೋಣವೆಂದು ಆಗ ಪುಸ್ತಕವನ್ನು ತೆಗೆದೆ. ಅದು ಜಾರ್ಜ್ ಸಾಂತಾಯನ (George Santayana) ಎಂಬ ಪ್ರಸಿದ್ಧ ತಾತ್ತ್ವಿಕನು ಬರೆದ ಗ್ರಂಥ. ಅದರ ಒಂದು ಅಧ್ಯಾಯದ ಹೆಸರು "Some meanings of the word *Is*" ('ಈಸ್' -ಇದೆ ಎಂಬ ಮಾತಿನ ಕೆಲವು ಅರ್ಥಗಳು). ಈ ಪ್ರಕರಣವಿದ್ದದ್ದು ಸುಮಾರು ೭ ಪುಟ. ಗ್ರಂಥವನ್ನೋದಲು ಪ್ರಾರಂಭಮಾಡಿದಾಗ ಸುಮಾರು ೧೦ ಘಂಟೆ. ಘಂಟೆ ೧೨ ಆಯಿತು. ಮೂರು ಪುಟ ಮುಗಿದಿರಲಿಲ್ಲ. ಕಣ್ಣಿಗೆ ತುಂಬ ಆಯಾಸವಾಗಿದ್ದರಿಂದ ದೀಪವನ್ನಾರಿಸಿದ್ದಾಯಿತು. ಪುಸ್ತಕವನ್ನು ಪಕ್ಕಕ್ಕಿಟ್ಟದ್ದಾಯಿತು. ನಿದ್ದೆ ಬರಲಿಲ್ಲ. ಗ್ರಂಥದ ತರ್ಕ ಅಷ್ಟು ಜಟಿಲವಾಗಿತ್ತು.

ಮಾರನೆಯ ದಿನ ನಾನು ಹೋಗುತ್ತಲೇ ಶಾಸ್ತ್ರಿಗಳು ಕೇಳಿದರು:

"ಏನು ಸಾರ್? ತಂದಿದ್ದೀರಾ ನಿಮ್ಮ ಸಾರಾಂಶವನ್ನ (Abstract)?"

ನಾನು: "ನಾನು ಮೂರು ಪುಟ ಓದಿದೆ. ಅಷ್ಟಕ್ಕೆ ಎರಡು ಮೂರು ಘಂಟೆ ಹಿಡಿಯಿತು. ಇದು ಕಬ್ಬಿಣದ ಕಡಲೆ. ಈ ಹೊತ್ತು ಮತ್ತೆ ನೋಡುತ್ತೇನೆ."

ಹೀಗೆ ಮೂರು ದಿನ ಕಳೆಯಿತು. ನಾಲ್ಕನೆಯ ದಿನ ನಾನು ಹೇಳಿದೆ: "ನಾನು ಪ್ರಬಂಧವನ್ನು ಓದಿ ಮುಗಿಸಿದ್ದೇನೋ ಆಯಿತು. ಆತ Is ಎಂಬ ಮಾತಿಗೆ ಏಳು ಅರ್ಥಗಳಿವೆಯೆಂದು ಹೇಳಿ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಆದರೆ ನನ್ನ ಮನಸ್ಸಿಗೆ ಹಿಡಿದಿರುವುದು ಮೂರು ಅಥವಾ ನಾಲ್ಕು ಅರ್ಥ ಮಾತ್ರ. ಇನ್ನು ಮೂರು ಅರ್ಥವನ್ನು ನನ್ನ ಮನಸ್ಸು ಹಿಡಿಯಲಾರದೆ ಸೋತಿದೆ."

ಶಾ: "ಇನ್ನೂ ನೋಡಿ."

ನಾನು: "ಇನ್ನು ಹದಿನೈದು ದಿನ ಅದರ ಮುಖವನ್ನು ನೋಡುವುದಿಲ್ಲ. ಸದ್ಯಕ್ಕೆ ಇದು ಸಾಕೆನಿಸಿದೆ."

ಶಾ: (ನಕ್ಕು) "ನನಗೊಬ್ಬನಿಗೇ ಈ ಕಷ್ಟವೇನೋ ಎಂದು ತಿಳಿದುಕೊಂಡಿದ್ದೆ."

# ವಿಚಾರಪ್ರವೃತ್ತಿ

ಇದನ್ನು ಉದಾಹರಣೆಯಾಗಿ ಹೇಳಿದ್ದೇನೆ, ಶಾಸ್ತ್ರಿಗಳ ಬುದ್ಧಿ ಹೇಗೆಹೇಗೆ ಕೆಲಸ ಮಾಡುತ್ತಿತ್ತೆಂಬುದಕ್ಕೆ ನಿದರ್ಶನವಾಗಿ.

ಅಧ್ಯಾತ್ಮವಿಚಾರದಲ್ಲಿ ಶಾಸ್ತ್ರಿಗಳವರು ಒಂದು ದೃಢವಾದ ನಿರ್ಧಾರಕ್ಕೆ ಬಂದಿದ್ದರೆಂದು ನಾನು ಹೇಳಲಾರೆ. ಅವರು ೨೫-೩೦ನೆಯ ವಯಸ್ಸಿನಲ್ಲಿದ್ದಾಗ ಅವರು ಹಕ್ಸ್ಲಿ (Huxley) ಎಂಬ ವಿಜ್ಞಾನಿಯ ಪ್ರಭಾವಕ್ಕೊಳಗಾದರು. ಅವರು ನನಗೆ ಒಂದು ದಿನ ಹೇಳಿದರು:

"ನನ್ನ ವಿಚಾರಪ್ರವೃತ್ತಿಯನ್ನು ತಿದ್ದಿದವನು ಹಕ್ಸ್ಲಿ. ಆತ ಹ್ಯೂಮ್ (Hume) ಎಂಬ ಇಂಗ್ಲಿಷ್ ತಾತ್ತ್ವಿಕನನ್ನು ಕುರಿತು 'ಇಂಗ್ಲಿಷ್ ಮೆನ್ ಆಫ್ ಲೆಟರ್ಸ್' ಗ್ರಂಥಮಾಲೆಯಲ್ಲಿ ಗ್ರಂಥವನ್ನು ಬರೆದಿದ್ದಾನಲ್ಲವೆ. ನಾನು ಅದನ್ನು ಓದಿದ ಮೇಲೆ ನನ್ನ ಬುದ್ಧಿ ಪ್ರವೃತ್ತಿ ಆ ಮಾರ್ಗಕ್ಕೆ ತಿರುಗಿತು."

# ಮಹಾಕವಿ ಪ್ರಭಾವ

ಅವರು ಹೀಗೆ ಹೇಳಿದ್ದರೂ ಅವರ ಬುದ್ಧಿಯ ಮೇಲೆ ಇನ್ನೆರಡು ಶಕ್ತಿಗಳು ಪ್ರಭಾವ ನಡಸಿದವೆಂದು ನಾನು ತಿಳಿದುಕೊಂಡಿದ್ದೇನೆ. ಮೊದಲನೆಯದು ಮಹಾಕಾವ್ಯ, ಎರಡನೆಯದು ಲೋಕಸಂಪರ್ಕ. ಅವರ ಮನಸ್ಸು ನೈಜವಾಗಿ ಕಾವ್ಯಧರ್ಮದ್ದು. ಅವರು ರಾಮಾಯಣ, ಭಾರತ, ಕಾಳಿದಾಸ, ಭರ್ತೃಹರಿ ಮೊದಲಾದ ಸ್ವದೇಶದ ಪುರಾತನರಿಗೆ ಸಂಪೂರ್ಣವಾಗಿ ಮನಸೋತಿದ್ದರು. ಅವರ ಅಂತರಂಗವೃತ್ತಿ ಸಂಪೂರ್ಣವಾಗಿ ಮಹಾಕವಿ ಪ್ರಭಾವಕ್ಕೆ ವಶವಾಗಿದ್ದದ್ದು. ಯಾವ ದೊಡ್ಡ ರಾಜಕೀಯ ಪ್ರಸಂಗವೇ ಆಗಲಿ, ಸಾಮಾಜಿಕ ಪ್ರಶ್ನೆಯೇ ಆಗಲಿ ಚರ್ಚೆಗೆ ಬಂದಾಗ, ಶಾಸ್ತ್ರಿಗಳು ಪ್ರೌಢ ಶೈಲಿಯಲ್ಲಿ ವಾದಾವೇಶದಲ್ಲಿದ್ದಾಗ, ಅದರ ನಡುವೆ ಯಾರಾದರೂ ಒಂದು ಕವಿವಾಕ್ಯವನ್ನು ಜ್ಞಾಪಕಕ್ಕೆ ತಂದರೆ ಆ ಕೂಡಲೆ ಶಾಸ್ತ್ರಿಗಳಿಗೆ ವಾದದ ರಭಸ ಮರೆತುಹೋಗಿ “ಆಹಾ!” ಎನ್ನುವರು. ಮನಸ್ಸು ಗಂಭೀರವಾಗುವುದು. ಆಗ ತಾವು ಹೇಳಿದ್ದದ್ದನ್ನು ತಾವೇ ಪುನರ್ವಿಮರ್ಶೆಗೆ ತಂದುಕೊಳ್ಳುವರು.

ಎರಡನೆಯದಾಗಿ ಅವರು ನಾನಾ ದೇಶಗಳ ರಾಜಕೀಯ ಕಷ್ಟಗಳನ್ನೂ ಸಾಮಾಜಿಕ ವಿದ್ಯಮಾನಗಳನ್ನೂ ಕಣ್ಣಾರ ಕಂಡು ಅಲ್ಲಲ್ಲಿಯ ಪ್ರಮುಖ ಜನರೊಡನೆ ಮುಖತಃ ವಿಚಾರ ನಡಸಿದ್ದವರು. ಆದದ್ದರಿಂದ ಇತರರ ಮನಸ್ಸಿಗೆ ಹೊಳೆಯದ ವಿಚಾರಮುಖಗಳು ಶಾಸ್ತ್ರಿಗಳಿಗೆ ಮೇಲಕ್ಕೆದ್ದು ಕಾಣಿಸುತ್ತಿದ್ದವು. ಮನುಷ್ಯಸ್ವಭಾವದಲ್ಲಿರುವ ನಾನಾ ಗುಣಗಳೂ ನಾನಾ ಶಕ್ತಿಗಳೂ ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಹೇಗೆ ಪ್ರತಿಕ್ರಿಯೆ ನಡಸಿಯಾವೆಂಬುದನ್ನು ಅವರ ಅನುಭವ ಅವರಿಗೆ ಗೋಚರಪಡಿಸಿತ್ತು.

ಹೀಗೆ ಅವರ ಮನೋಬುದ್ಧಿಗಳು ಸಾಂಪ್ರತ ಲೋಕದಿಂದ ಪ್ರಭಾವಿತವಾಗಿದ್ದವು. ಒಂದು ಉದಾಹರಣೆ.

# ನಿಸರ್ಗ ಸೌಂದರ್ಯ

ಒಂದು ಸಂಜೆ ಅವರೂ ನಾವು ಮೂವರು ನಾಲ್ವರು ಸ್ನೇಹಿತರೂ ಮಿಂಟೋ ಕಣ್ಣಾಸ್ಪತ್ರೆಯ ಬಳಿ ಬಂದೆವು, ಅಲ್ಲಿ ಡಾ ॥ ಬಿ. ಕೆ. ನಾರಾಯಣರಾಯರನ್ನು ನೋಡಬೇಕೆಂದು. ಆಗ ಅಕಸ್ಮಾತ್ತಾಗಿ ಶಾಸ್ತ್ರಿಗಳ ಕಣ್ಣು ಆಕಾಶದ ಕಡೆ ತಿರುಗಿತು. ಅವರು ಕಂಡದ್ದೇನು? ಪೂರ್ವದಿಕ್ಕಿನಲ್ಲಿ ಚಂದ್ರೋದಯವನ್ನ, ಪಶ್ಚಿಮದಲ್ಲಿ ಸೂರ್ಯಾಸ್ತಮವನ್ನ. ಎರಡನ್ನೂ ಏಕಕಾಲದಲ್ಲಿ ಕಂಡ ಕ್ಷಣವೇ ಅವರ ಕಾಲ ನಡಿಗೆ ನಿಂತಿತು. ಅವರ ಬಾಯಿಂದ "ಆಹಾ! ಏನು ವಿಶೇಷ ಸಾರ್! ಇದನ್ನು ಇನ್ನೂ ನೋಡಬೇಕೆನಿಸುತ್ತದೆ" ಎಂಬ ಉದ್ಗಾರ ಹೊರಟಿತು. ಆ ವೇಳೆಗೆ ಡಾ ॥ ನಾರಾಯಣರಾಯರು ಆಸ್ಪತ್ರೆಯೊಳಗಿನಿಂದ ಬಂದರು. ಅವರು ಶಾಸ್ತ್ರಿಗಳವರನ್ನು ಆಸ್ಪತ್ರೆಯೊಳಕ್ಕೆ ಕರೆದುಕೊಂಡು ಹೋಗಿ ಅವರನ್ನು ಮೆಲ್ಲನೆ ಮಹಡಿಯ ಮೇಲಕ್ಕೆ ಒಯ್ದು ಅಲ್ಲಿಂದ ಆ ಸಂಧ್ಯಾಸೌಂದರ್ಯವನ್ನು ಇನ್ನೂ ಚೆನ್ನಾಗಿ ನೋಡಬಹುದೆಂದರು. ಶಾಸ್ತ್ರಿಗಳಿಗೆ ತುಂಬಾ ಆನಂದವಾಯಿತು.

ಆಗ ಅವರು ಹೇಳಿದ ಸಂಗತಿ ಇದು:

"ದಕ್ಷಿಣ ಆಫ್ರಿಕದಲ್ಲಿ-ಬಹುಶಃ ಪ್ರಿಟೋರಿಯದಲ್ಲಿ ಆ ಜನ 'ನಿಮ್ಮ ದೇಶವನ್ನು ಕುರಿತು ಒಂದು ಉಪನ್ಯಾಸವನ್ನು ಕೊಡಿ' ಎಂದು ಕೇಳಿದರು. ನಾನು ಒಪ್ಪಿ ಒಂದರ್ಧ ಘಂಟೆ ಮಾತನಾಡಿದೆ. ಆ ಉಪನ್ಯಾಸದಲ್ಲಿ ಒಂದು ಶ್ಲೋಕವನ್ನು ಹೇಳಿದೆ.

'ಸೂರ್ಯಚಂದ್ರರು ಏಕಕಾಲದಲ್ಲಿ ಲೋಕವನ್ನು ಬೆಳಗುವಂತೆ ಬುದ್ಧಿ ಚಮತ್ಕಾರವೂ ಮಾನವಸ್ನೇಹವೂ ಪ್ರಪಂಚದಲ್ಲಿ ಏಕಕಾಲದಲ್ಲಿದ್ದು ಸಹಕರಿಸಬೇಕು. ಆಗ ನಮ್ಮ ಜೀವನಕ್ಕೆ ಶಾಂತಿ ಸಂತೋಷಗಳು,'"

ಶಾಸ್ತ್ರಿಗಳು ಮುಂದುವರಿಸಿದರು: "ಸಾರ್, ಈ ಭಾವವನ್ನು ಆ ಜನ ಕೇಳಿ ಬೆರಗಾದರು. ಅವರು ಮಾಡಿದ ಚಪ್ಪಾಳೆಯ ಧ್ವನಿ ಹತ್ತು ನಿಮಿಷಗಳಾದರೂ ಮೌನವಾಗಲಿಲ್ಲ. ಆ ಜನಕ್ಕೆ ಇಂಥ ದೃಶ್ಯವೇ ದುರ್ಲಭ. ಇದು ನಮ್ಮ ದೇಶದ ಪುಣ್ಯ."

ಇದು ಶಾಸ್ತ್ರಿಗಳ ಅಂತರಂಗ.

# ಸಂಪ್ರದಾಯ-ಸಾಂಪ್ರತ ವಿಜ್ಞಾನ

ಶಾಸ್ತ್ರಿಗಳಿಗೆ ನಮ್ಮ ಶಾಸ್ತ್ರ ಸಂಪ್ರದಾಯಗಳ ವಿಷಯದಲ್ಲಿ ನೈಜವಾದ ಗೌರವವಿತ್ತಾದರೂ ನಮ್ಮ ಸಾಮಾನ್ಯ ಪಂಡಿತರುಗಳು ವಿಷಯದಲ್ಲಿ ಕೊಂಚ ಆಕ್ಷೇಪಣೆಯ ಮನೋವೃತ್ತಿ ಇತ್ತೆಂದು ನೋಡಿದವರಿಗೆ ಅನ್ನಿಸುತ್ತಿತ್ತು. ಬೆಂಗಳೂರಿನಲ್ಲಿ ಒಂದು ಸಾರಿ ಪಂಡಿತಮಂಡಲದ ಸಭೆ ಸೇರಿದಾಗ ಶಾಸ್ತ್ರಿಗಳ ಭಾಷಣ ಕಟುವಾಗಿತ್ತು. ಆ ಭಾಷಣ ನಡೆದದ್ದು ಪಂಡಿತ ಸಮ್ಮೇಳನದಲ್ಲಿ, ಸಾಹಿತ್ಯ ಪರಿಷತ್ತಿನ ಸಭಾಮಂದಿರದಲ್ಲಿ. ಆ ಭಾಷಣವನ್ನು ಏರ್ಪಡಿಸಿದ್ದವರು ಶಾಸ್ತ್ರಿಗಳ ಸ್ನೇಹಿತರಾದ ಡಿ. ವೆಂಕಟರಾಮಯ್ಯನವರು.

ಆ ಹೊತ್ತು ಶಾಸ್ತ್ರಿಗಳಿಗೆ ಏಕೋ ಪೂರ್ವಪದ್ಧತಿಯ ಪಂಡಿತರುಗಳ ಮೇಲೆ ಕೊಂಚ ಅಸಮಾಧಾನ ಬಂದಿತ್ತು. ಈ ಪಂಡಿತರುಗಳು ಶಾಸ್ತ್ರಗಳನ್ನು ತಲಸ್ಪರ್ಶಿಯಾಗಿ, ವಿಚಾರ ಪೂರ್ವಕವಾಗಿ ಪರಿಶೀಲಿಸಿದ್ದಾರೆಯೆ? ಅವರದು ಬಹುಮಟ್ಟಿಗೆ ಶುಕಪಾಠ. ಹಿಂದಿನಿಂದ ಬಂದಿದ್ದದ್ದನ್ನೇ ಪುನಃಪುನಃ ಚರ್ವಿತಚರ್ವಣ ಮಾಡುತ್ತಾರೆ. ನಮ್ಮ ಕಾಲದ ಸಂದರ್ಭಗಳನ್ನು ಅವರು ಗಮನಕ್ಕೆ ತಂದುಕೊಳ್ಳುವುದಿಲ್ಲ. ನಮ್ಮ ಕಾಲದಲ್ಲಿ ಏನೇನೋ ಹೊಸ ಹೊಸ ಅಭಿಪ್ರಾಯಗಳೂ ಹೊಸ ಹೊಸ ಭಾವನೆಗಳೂ ಜನದಲ್ಲಿ ಹರಡುತ್ತಿವೆ. ವಿಜ್ಞಾನದ ನಾನಾ ಶಾಖೆಗಳು ಹೊಸ ಹೊಸ ತಿಳಿವಳಿಕೆಗಳನ್ನು ತಂದುಕೊಡುತ್ತಿವೆ. ಅದರಿಂದ ಮನುಷ್ಯಬುದ್ಧಿ ಹೊಸಹೊಸ ದಾರಿಗಳಲ್ಲಿ ತಿರುಗುತ್ತಿದೆ. ಈ ಹೊಸ ಜ್ಞಾನವನ್ನೂ ಹೊಸ ವಿಚಾರಸರಣಿಯನ್ನೂ ಅಯುಕ್ತವೆಂದೂ ದೋಷವೆಂದೂ ಯಾರೂ ತಳ್ಳಿಹಾಕಲಾರರು. ಈ ಹೊಸ ಜ್ಞಾನಪ್ರವಾಹದಲ್ಲಿ ಅಮೂಲ್ಯವಾದ ಅಂಶಗಳು ಎಷ್ಟೋ ಇವೆ. ಈ ಹೊಸ ಜ್ಞಾನದಿಂದ ಲೌಕಿಕ ವಿಷಯಗಳಲ್ಲಿ ಜನದ ದೃಷ್ಟಿ ಬದಲಾಯಿಸುತ್ತಿದೆ. ಈ ಬದಲಾವಣೆಗಳು ಕೃತ್ರಿಮವಾದವಲ್ಲ; ಸತ್ಯಕ್ಕೂ ಧರ್ಮಕ್ಕೂ ವಿರೋಧವಾದವಲ್ಲ. ಆದದ್ದರಿಂದ ನಮ್ಮ ಕಾಲದ ನೂತನ ಸಂದರ್ಭಗಳನ್ನೂ ಅವುಗಳ ಮರ್ಮಗಳನ್ನೂ ಮನದಟ್ಟು ಮಾಡಿಕೊಂಡು ನಮ್ಮ ಪುರಾತನ ಸಂಪ್ರದಾಯಗಳನ್ನೂ ಮನೋವೃತ್ತಿಗಳನ್ನೂ ಈ ಕಾಲಕ್ಕೆ ಹೊಂದಿಸಿಕೊಳ್ಳಬೇಕಾಗಿದೆ. ಈ ಪರೀಕ್ಷೆಯಲ್ಲಿ ನಮಗೆ ಸಂಸ್ಕೃತ ವಿದ್ವಾಂಸರಿಂದ ಸಹಾಯ ಬೇಕಾಗಿದೆ. ಇಂದಿನ ಲೋಕದ ಕಷ್ಟಗಳೇನು? ಇಂದಿನ ಜನಸ್ವಸ್ಥತೆಯ ಆವಶ್ಯಕತೆಗಳೇನು? ಇಂದಿನವರ ಆಲೋಚನೆಯ ಗುರಿಯೇನು?- ಎಂಬುದನ್ನು ನಮ್ಮ ವಿದ್ವಾಂಸರು ತಾವು ತಿಳಿದುಕೊಂಡರಲ್ಲವೆ ಅವರಿಂದ ನಮಗೆ

ಸಹಾಯವಾಗತಕ್ಕದ್ದು? ಆದದ್ದರಿಂದ ಅವರು ಇಂದಿನ ಪ್ರಪಂಚವನ್ನು ನೋಡುವ ದೃಷ್ಟಿ ಉದಾರವಾದದ್ದಾಗಬೇಕು.

ಇದು ಉಪನ್ಯಾಸದ ಸಾರಭಾಗ. ಆದರೆ ಇದನ್ನು ಹೇಳುವ ಧೋರಣೆಯಲ್ಲಿ ಒಂದು ಆವೇಶ ತೋರುತ್ತಿತ್ತು. ವಿದ್ವಾಂಸರು ತಲೆಗೆ ಸುತ್ತುವ ಶಾಲುಗಳ ಪ್ರಸಕ್ತಿ, ಶಾಲುಗಳ ಬಣ್ಣದ ಪ್ರಸಕ್ತಿ, ಸರಿಗೆಯ ಪ್ರಸಕ್ತಿ, ಅವರು ಪ್ರದರ್ಶನ ಮಾಡುವ ಕೈಕಡಗಗಳ ಪ್ರಸಕ್ತಿ, ಅವರ ವಾಗ್ಧೋರಣೆಯ ಪ್ರಸಕ್ತಿ-ಇವೆಲ್ಲ ಪ್ರಾಸ್ತಾವಿಕವಾಗಿ ಬಂದು ಕೆಲಮಂದಿಗೆ ಅಸಮಾಧಾನವನ್ನುಂಟುಮಾಡಿತು.

ಉಪನ್ಯಾಸ ಮುಗಿದ ಮೇಲೆ ನಾವಿಬ್ಬರೇ ಇದ್ದಾಗ, ನಾನು ಅವರಲ್ಲಿ ಸೂಕ್ಷ್ಮವಾಗಿ ಪ್ರಸ್ತಾವಮಾಡಿದೆ, ಕೆಲಮಂದಿಯ ಮನಸ್ಸಿಗೆ ನೋವಾದದ್ದನ್ನು ತಿಳಿಸಿದೆ. ಶಾಸ್ತ್ರಿಗಳ ಉತ್ತರದಲ್ಲಿ ಕೊಂಚ ಭಾಗ ಭಾಷಣದ ಸಮರ್ಥನೆ, ಕೊಂಚ ಭಾಗ ಪಶ್ಚಾತ್ತಾಪ-ಎರಡೂ ಸೇರಿದ್ದವು. ಅವರು ಹೇಳಿದ ಮುಖ್ಯಾಂಶಗಳನ್ನು ನಿರಾಕರಿಸುವ ಹಾಗಿರಲಿಲ್ಲ. “ನಮ್ಮ ಕಣ್ಣಿಗೆ ಕಾಣುವ ನ್ಯೂನತೆಗಳನ್ನು ನಾವು ತೋರಿಸಬೇಡವೆ? ಎಲ್ಲ ಚೆನ್ನಾಗಿದೆ, ಎಲ್ಲ ಸರಿಯಾಗಿದೆ-ಎಂದು ಮುಖೋಲ್ಲಾಸ ಮಾಡುವುದೆ ನನ್ನ ಕರ್ತವ್ಯ? ನನ್ನ ಮನಸ್ಸನ್ನು ಹೇಳುವ ರಭಸದಲ್ಲಿ ಇತರರಿಗೆ ಮನನೋಯಿಸುವ ಅಂಶವಿದ್ದೀತೆಂದು ನನಗನ್ನಿಸಲಿಲ್ಲ. ಮನಸ್ಸನ್ನು ಬಿಚ್ಚುವ ಭರದಲ್ಲಿ ಪ್ರಮಾದವೇನಾದರೂ ನಡೆದಿದ್ದರೆ ಅದಕ್ಕಾಗಿ ನನ್ನ ಪಶ್ಚಾತ್ತಾಪ ಯುಕ್ತವಾಗಿದೆ. ನೊಂದವರ ಕ್ಷಮೆಯನ್ನು ನಾನು ಬೇಡತಕ್ಕದ್ದು ಸರಿ.” ಹೀಗೆ ಹೇಳಿ ಡಿ. ವೆಂಕಟರಾಮಯ್ಯನವರಿಗೆ ತಮ್ಮ ಪಶ್ಚಾತ್ತಾಪವನ್ನು ಸ್ಪಷ್ಟ ವಚನಗಳಲ್ಲಿ ತಿಳಿಯಪಡಿಸಿದರು.

# ಉದಾರ ಮನೋಭಾವ

ಇದಾದ ಕೆಲವು ದಿವಸಗಳ ತರುವಾಯ ನಡೆದದ್ದು ನಾನು ಬೇರೆ ಕಡೆ ತಿಳಿಸಿರುವ ಸಂಗತಿ. ಡಿ. ವೆಂಕಟರಾಮಯ್ಯನವರ ಮನೆಯಲ್ಲಿ ಮದುವೆಯ ಊಟಕ್ಕಾಗಿ ಕೆಲಮಂದಿ ಸೇರಿದ್ದೆವು. ಆ ಸ್ನೇಹಿತರಲ್ಲೊಬ್ಬರು ತಾಂಬೂಲ ಕಾಲದಲ್ಲಿ ಮಿತ್ರ ಸಂಭಾಷಣೆ ನಡೆಯುತ್ತಿದ್ದಾಗ, ಅಲ್ಲಿ ಮುಖ್ಯ ಅತಿಥಿಗಳಾಗಿದ್ದ ಶ್ರೀನಿವಾಸ ಶಾಸ್ತ್ರಿಗಳಿಗೆ ಉಲ್ಲಾಸ ಮಾಡಿಸಬೇಕೆಂಬ ಆಶಯದಿಂದಲೋ ಏನೋ, ಪುರೋಹಿತರನ್ನೂ ಪಂಡಿತರನ್ನೂ ಹೀಯಾಳಿಸಿದರು; ಪುರೋಹಿತರಿಗೆ ತಾವು ಹೇಳುವ ಮಂತ್ರದ ಅರ್ಥವೇ ಗೊತ್ತಿಲ್ಲ ಎಂದು ಮುಂತಾಗಿ ಮಾತನಾಡಿದರು. ಅದು ಶಾಸ್ತ್ರಿಗಳಿಗೆ ಸಹ್ಯವಾಗಲಿಲ್ಲ. ಅವರು ಆ ಸ್ನೇಹಿತರ ಮೇಲೆ ತಿರುಗಿ ಬಿದ್ದು ಹೇಳಿದರು: “ಆಯ್ಯ, ನೀವು ನಿಮ್ಮ ಹಜಾಮನಿಗೆ ಒಂದು ಸಾರಿಯ ಚಾಕರಿಗೆ ಏನು ಕೊಡುತ್ತೀರಿ? ಒಂದು ಪಾವಲಿಯನ್ನೆ? ನೀವು ನಿಮ್ಮ ಪುರೋಹಿತರಿಗೆ ದಕ್ಷಿಣೆ ಎಷ್ಟು ಕೊಡುತ್ತೀರಿ? ಅದೂ ಒಂದು ಪಾವಲಿ ತಾನೆ? ಒಂದು ಪಾವಲಿಯಿಂದ ಯಾವ ವಿದ್ವತ್ತನ್ನೂ ನಿರೀಕ್ಷಿಸದ ನೀವು ಈ ಬಡ ಪುರೋಹಿತನಿಗೆ ದಕ್ಷಿಣೆ ಕೊಟ್ಟಾಗ ಮಹತ್ತರವಾದ ವಿದ್ವತ್ತನ್ನು ನಿರೀಕ್ಷಿಸುತ್ತೀರಲ್ಲ? ನೀವು ಅಷ್ಟು ಆಚಾರಶ್ರದ್ಧೆಯುಳ್ಳವರಾದರೆ ಒಂದು ವಾರದಲ್ಲಿ ಮತವಿಷಯವನ್ನಾಗಲಿ ಶಾಸ್ತ್ರವಿಷಯವನ್ನಾಗಲಿ ಆಲೋಚಿಸುವುದಕ್ಕೆ ಎಷ್ಟು ಘಂಟೆಯ ಹೊತ್ತು ಕೊಡುತ್ತೀರಿ?”

ಆ ಅಧಿಕಪ್ರಸಂಗಿ ಸ್ನೇಹಿತರಿಗೆ ಮುಖಭಂಗವಾಯಿತು.

# ಸಹೃದಯತೆ

ಶ್ರೀನಿವಾಸ ಶಾಸ್ತ್ರಿಗಳ ವ್ಯಕ್ತಿಮಹತ್ತ್ವವನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಸಹೃದಯತೆ ಎನ್ನಬಹುದು. 'ಸಹೃದಯ' ಎಂಬುದು ಸಾಹಿತ್ಯದಲ್ಲಿ ರಸಸೂಕ್ಷ್ಮಗ್ರಾಹಿಗಳಿಗೆ ಹೆಸರು. ಒಂದಾನೊಂದು ಸನ್ನಿವೇಶದಲ್ಲಿ ಮಾನವಗುಣಕ್ಕೆ ಸಂಬಂಧಪಟ್ಟದ್ದಾಗಿ ಜೀವಕ್ಕೆ ಉತ್ಕರ್ಷಕವಾಗಿರುವ ಸೂಕ್ಷ್ಮವನ್ನು ಯಾರು ಗ್ರಹಿಸಿ ಸ್ವಾನುಭವಕ್ಕೆ ತಂದುಕೊಳ್ಳುತ್ತಾರೋ ಅವರೇ ಸಹೃದಯರು ಅಥವಾ ಹೃದಯವಂತರು.

ಲೋಕದ ಮನ್ನಣೆಯನ್ನು ಸಂಪಾದಿಸಿರುವ ಜನವನ್ನು ಎರಡು ಜಾತಿಯಾಗಿ ವಿಂಗಡಿಸಬಹುದು. ಬುದ್ಧಿವಂತರು ಒಂದು ಜಾತಿ: ಹೃದಯವಂತರದು ಇನ್ನೊಂದು ಜಾತಿ. ಹಾಗೆಂದರೆ ಬುದ್ಧಿವಂತರಿಗೆ ಹೃದಯವಿಲ್ಲವೆಂದಾಗಲಿ, ಹೃದಯವಂತರಿಗೆ ಬುದ್ಧಿಯಿಲ್ಲವೆಂದಾಗಲಿ ಅರ್ಥ ಮಾಡತಕ್ಕದ್ದಲ್ಲ. ಎರಡು ಜಾತಿಗಳಲ್ಲಿಯೂ ಬುದ್ಧಿಶಕ್ತಿಯೂ ಹೃದಯಶಕ್ತಿಯೂ ಇತರ ಜನರಲ್ಲಿರುವುದಕ್ಕಿಂತ ಹೆಚ್ಚಾಗಿಯೇ ಇರುತ್ತದೆ. ಹಾಗಿದ್ದರೂ ಕೆಲಮಂದಿಯಲ್ಲಿ ಹೃದಯ ಕಾರ್ಯಕ್ಕಿಂತ ಬುದ್ಧಿಕಾರ್ಯ ಪ್ರಬಲವಾಗಿರುತ್ತದೆ. ಇನ್ನು ಕೆಲವರಲ್ಲಿ ಬುದ್ಧಿಕಾರ್ಯ ಮೇಲ್ಮಟ್ಟದ್ದಾಗಿದ್ದರೂ ಪರಿಣಾಮದಲ್ಲಿ ನಿರ್ಣಾಯಕವಾಗತಕ್ಕದ್ದು ಹೃದಯಕಾರ್ಯ.

ಹೀಗೆ ನೋಡಿದರೆ ಶಾಸ್ತ್ರಿಗಳು ಹೃದಯಪ್ರಧಾನ ಜಾತಿಗೆ ಸೇರತಕ್ಕವರೆಂದು ನನ್ನ ತಿಳಿವಳಿಕೆ.

# ಒಂದು ಪತ್ರಪ್ರಸಂಗ

ಶಾಸ್ತ್ರಿಗಳು ಒಂದು ಸಾರಿ ಬೆಂಗಳೂರಿಗೆ ಬರಲು ಉದ್ದೇಶಿಸಿ, ಅವರ ವಸತಿಗಾಗಿ ಒಂದು ಮನೆಯನ್ನು ಗೊತ್ತುಮಾಡ ಹೇಳಿ ನನಗೆ ಬರೆದರು. ನಾನು ಅದರಂತೆ ಹುಡುಕಿ ಮೂರು ನಾಲ್ಕು ಮನೆಗಳ ತಪಶೀಲುಗಳನ್ನು ಹೇಳಿ ಉತ್ತರ ಬರೆದೆ. ಆ ಮನೆಗಳಲ್ಲಿ ಒಂದು ಮನೆಯ ಸಂದರ್ಭ ಹೀಗಿತ್ತು: "ಈ ಮನೆ ಲಾಲ್‌ಬಾಗಿಗೆ ಸಮೀಪದಲ್ಲಿದೆ. ನಿಮ್ಮ ಸ್ನೇಹಿತರಲ್ಲಿ ಕೆಲವರು ಡಾ ॥ ಬಿ. ಕೆ. ನಾರಾಯಣರಾಯರು, ಎಸ್. ಜಿ. ಶಾಸ್ತ್ರಿಗಳು ಇಂಥವರ ಮನೆಗಳಿಗೆ ಹತ್ತಿರವಾಗಿದೆ. ಮನೆಯಲ್ಲಿ ವಿಸ್ತಾರವಾದ ಕೋಣೆಗಳಿವೆ. ನೀವು ಕುಳಿತು ಕೆಲಸ ಮಾಡಲು ಒಂದು ದೊಡ್ಡ ನಡುಮನೆ ಇದೆ. ಅಡಿಗೆಮನೆ ಮೊದಲಾದ ಅನುಕೂಲತೆಗಳು ಚೆನ್ನಾಗಿವೆ. ಕಾಂಪೌಂಡಿನೊಳಗೆ ಒಂದು ಸೊಗಸಾದ ಸೇದುವಬಾವಿ ಇದೆ. ಅದರಲ್ಲಿಯ ನೀರು ತಿಳಿಯಾಗಿ ಸಿಹಿಯಾಗಿದೆ. ಮುಖ್ಯ ಕಟ್ಟಡದಿಂದ ನಾಲ್ಕೆಂಟು ಗಜದ ಆಚೆಗೆ ಒಂದು (ಔಟ್‌ಹೌಸ್) ಸಣ್ಣ ಹೊರಮನೆ ಇದೆ. ಮನೆಯ ಕಟ್ಟಡ ಮಜಬೂತಾಗಿ ಚೊಕ್ಕಟವಾಗಿದೆ. ಮುಂದುಗಡೆ ಕೈಸಾಲೆ ಇದೆ. ಕೊಂಚ ಖಾಲಿ ಜಾಗವೂ ಇದೆ. ಮನೆ ಪೂರ್ವಾಭಿಮುಖವಾದದ್ದರಿಂದ ಕೈಸಾಲೆಯಲ್ಲಿಯೂ ಖಾಲಿ ಜಾಗದಲ್ಲಿಯೂ ಸಂಜೆ ಹೊತ್ತು ಸ್ನೇಹಗೋಷ್ಠಿ ಸೇರುವುದಕ್ಕೆ ಅನುಕೂಲವಾಗಿದೆ.

"ಆದರೆ ಕೆಲವು ಸಂದರ್ಭಗಳನ್ನು ತಾವು ಯೋಚಿಸಬೇಕು. ಈ ಮನೆಯನ್ನು ಕಟ್ಟಿಸಿದಾತ ನನ್ನ ಸ್ನೇಹಿತ. ಗೃಹಪ್ರವೇಶ ಮಾಡಿದ ಒಂದೆರಡು ವಾರದೊಳಗಾಗಿ ಆತ ಆ ಬಾವಿಯಲ್ಲಿ ತಾನೇ ನೀರು ಸೇದಬೇಕೆಂದು ಹೊರಟು ಬಿಂದಿಗೆಯನ್ನು ಇಳಿಬಿಟ್ಟು, ಅದನ್ನು ಮೇಲಕ್ಕೆ ರಾಟಣೆಯ ಮೇಲೆ ಹಗ್ಗದಿಂದ ಸೇದಿಕೊಳ್ಳುವಾಗ ಆ ಹೊಸ ಹಗ್ಗದ ಸುರುಳಿ ನೆಲದ ಮೇಲಿದ್ದದ್ದು ಆತನ ಕಾಲಿಗೆ ಸುತ್ತಿಕೊಂಡು, ಆ ಬಿಂದಿಗೆಯ ಭಾರವೇ ಆತನನ್ನು ಒಳಕ್ಕೆ ಎಳೆಯಿತು. ಹಾಗೆ ಆ ನನ್ನ ಸ್ನೇಹಿತ ಬಾವಿಯಲ್ಲಿ ಬಿದ್ದು ಮೃತನಾದ. ಅದರಿಂದ ಆ ಮನೆಗೆ ದುರದೃಷ್ಟದ ಮನೆ ಎಂದು ಹೆಸರು ಬಂದಿದೆ. ಅಲ್ಲಿಗೆ ಸಂಸಾರ ಬರಲು ಜನ ಹೆದರುತ್ತಾರೆ".

"ಇನ್ನೊಂದು ಸಂಗತಿ. ನನ್ನ ಸ್ನೇಹಿತ ಎಂಜಿನಿಯರು. ಒಳ್ಳೆಯ ವಂಶದಲ್ಲಿ ಹುಟ್ಟಿದವನು; ಅವನ ತಂದೆ ಮಹಾಪ್ರಸಿದ್ಧರಾದ ಸಂಸ್ಕೃತ ವಿದ್ವಾಂಸರು. ನನ್ನ ಸ್ನೇಹಿತ ಸತ್ತ ನಂತರ ಸಂಸಾರಕ್ಕೆ ಕಷ್ಟ ಬಂದದ್ದಲ್ಲದೆ ಮನೆ ಕಟ್ಟಿಸುವುದಕ್ಕಾಗಿ ಆತ ಮಾಡಿಕೊಂಡಿದ್ದ ಸಾಲದ ಶೇಷದ ಹೊರೆಯೂ ನಿಂತಿದೆ. ಮನೆ ಕೋಆಪರೇಟಿವ್ ಬ್ಯಾಂಕಿಗೆ ಅಡಮಾನವಾಗಿದೆ.

ನಾನು ಆ ಬ್ಯಾಂಕಿನಲ್ಲಿ ಹೋಗಿ ವಿಚಾರಿಸಿದೆ. ಅಲ್ಲಿ ನನಗೊಬ್ಬ ಸ್ನೇಹಿತರು ಹೇಳಿದರು: 'ಈ ಮನೆಯಿಂದ ಬರುವ ಬಾಡಿಗೆಯಿಂದಲೇ ಆ ಸಂಸಾರಕ್ಕೆ ಜೀವನ ಸಾಗಬೇಕಾಗಿದೆ. ಅವರಿಗೆ ಬೇರೆ ಏನೂ ಗತಿಯಿಲ್ಲ. ಬಾಡಿಗೆ ಅರವತ್ತು ರೂಪಾಯಿ. ಅದರಲ್ಲಿ ಅರ್ಧವನ್ನು ಸಾಲಕ್ಕೆ ಕಟ್ಟಿಕೊಳ್ಳುತ್ತೇವೆ. ಇನ್ನರ್ಧವನ್ನು ಆ ಸಂಸಾರಕ್ಕೆ ಕೊಡುತ್ತೇವೆ. ನೀವು ನಮ್ಮ ಡೈರೆಕ್ಟರುಗಳಲ್ಲಿ ಇಂಥಿಂಥವರನ್ನು ನೋಡಿ ಮಾತನಾಡಿದರೆ ಬಾಡಿಗೆ ಕೊಂಚ ಇಳಿಸಬಹುದು"' -ಎಂದು.

# ಶಾಸ್ತ್ರಿಗಳ ಪ್ರತಿಕ್ರಿಯೆ

ಈ ಕಾಗದ ಶಾಸ್ತ್ರಿಗಳಿಗೆ ತಲುಪಿದ ದಿವಸವೇ ಅವರು ನನಗೆ ಪ್ರತ್ಯುತ್ತರ ಬರೆದರು, ಹೀಗೆ: "ಅಯ್ಯ, ನಿನ್ನ ಕಾಗದದಿಂದ ನನಗೆ ಸೋಜಿಗವಾಗಿದೆ. ನನ್ನ ಅಭಿಪ್ರಾಯವೇನೆಂದು ಕೇಳುತ್ತೀಯಲ್ಲ! ನನ್ನ ಮನಸ್ಸನ್ನು ನೀನು ಕಾಣೆಯಾ? ಆ ಕುಟುಂಬ ಕಷ್ಟದಶೆಯಲ್ಲಿದೆ ಎನ್ನುತ್ತೀ. ಒಳ್ಳೆಯ ಜನ ಎನ್ನುತ್ತೀ. ಅಂಥವರಿಗೆ ನಮ್ಮ ಕೈಯಿಂದಾದಷ್ಟು ಸಹಾಯ ಮಾಡುವುದು ನಮ್ಮ ಕರ್ತವ್ಯವಲ್ಲವೆ? ಮನೆಗೆ ಕೆಟ್ಟ ಹೆಸರು ಬಂದಿದೆ ಎನ್ನುತ್ತಿ. ನಾನು ರೋಗಿಷ್ಠ. ನಾನು ಆ ಮನೆಯಲ್ಲಿದ್ದು ಬದುಕಿದರೆ ಆ ಕೆಟ್ಟ ಹೆಸರು ತೊಡೆದುಹೋಗುತ್ತದೆ. ನಾನು ಅಲ್ಲಿ ಸತ್ತರೆ ಮನೆಗೆ ಹೊಸ ಕೆಟ್ಟತನವೇನೂ ನನ್ನಿಂದ ಬಂದ ಹಾಗಾಗುವುದಿಲ್ಲ. ಆದದ್ದರಿಂದ ಆ ಮನೆಯನ್ನೇ ನಿಷ್ಕರ್ಷೆ ಮಾಡು. ನೀನು ಯಾವ ಡೈರೆಕ್ಟರನ್ನೂ ನೋಡುವುದಕ್ಕೆ ಹೋಗಬೇಡ, ಬಾಡಿಗೆ ಕಡಮೆ ಮಾಡಿಸೆಂದು ಕೇಳಬೇಡ. ಬಾಡಿಗೆ ಕಡಮೆ ಮಾಡಿದರೆ ಆ ಕುಟುಂಬಕ್ಕೆ ಸಲ್ಲುವ ಭಾಗ ಕಡಮೆಯಾಗುತ್ತದಲ್ಲವೆ? ಬಾಡಿಗೆ ಕಡಮೆ ಮಾಡಿಸಿದರೆ ಇನ್ನು ಮುಂದಕ್ಕೆ ಆ ಮನೆಗೆ ಬರುವವರೂ ಅದನ್ನು ಅಗ್ಗಕ್ಕೆ ಕೇಳಿಯಾರು. ನನ್ನ ಕಾರಣದಿಂದ ಮನೆಯ ಬೆಲೆಯನ್ನು ಇಳಿಸಬಾರದು. ಆ ಮನೆಯವರು ಬೇಕಾದರೆ ಅಲ್ಲಿಯೇ ಒಂದು ಭಾಗದಲ್ಲಿದ್ದುಕೊಳ್ಳಲಿ. ಅವರು ವೈದಿಕರು, ದೊಡ್ಡ ವಿದ್ವಾಂಸರ ಮನೆಯವರು ಎಂದು ಹೇಳಿದೆ. ಅದು ಒಳ್ಳೆಯ ಸಹವಾಸ. ಅದನ್ನು ನಾವಾಗಿ ಸಂಪಾದಿಸಿಕೊಳ್ಳಬೇಕು..."

ಅದೇ ಮನೆಯನ್ನು ಗೊತ್ತುಮಾಡಿದ್ದಾಯಿತು. ಶಾಸ್ತ್ರಿಗಳೂ ಅವರ ಮನೆಯವರೂ ಅಲ್ಲಿ ಸಂತೋಷದಿಂದಿದ್ದರು. ಹಾಗೆ ಮೂರು ನಾಲ್ಕು ಬೇಸಗೆ ಆಯಿತೆಂದು ನನ್ನ ಜ್ಞಾಪಕ.

# ಗೋಷ್ಠಿ-ಸತ್ಕಾರಗಳು

ಅಲ್ಲಿ ದಿನದಿನವೂ ಸಂಜೆ ನಾವು ಏಳೆಂಟು ಮಂದಿ ಸೇರುತ್ತಿದ್ದೆವು. ಡಾ ॥ ಬಿ. ಕೆ. ನಾರಾಯಣರಾಯರು, ಎಂ. ಎಸ್. ರಾಮಚಂದ್ರರಾಯರು, ಎನ್. ಎನ್. ಅಯ್ಯಂಗಾರ್ಯರು, ಎಸ್. ಜಿ. ಶಾಸ್ತ್ರಿಗಳು, ಪ್ರೊ ॥ ಸಂಪತ್ಕುಮಾರನ್ ಮುಂತಾದವರು. ನಮ್ಮ ಜೊತೆಗೆ ಜಡ್ಜಿ ಶ್ರೀನಿವಾಸಯ್ಯರ್ ಅವರು, ಡಿ. ವೆಂಕಟರಾಮಯ್ಯನವರು-ಈ ವರ್ಗದ ಜನರು. ಒಂದೆರಡು ಘಂಟೆಕಾಲ ನಾನಾ ವಿಷಯಗಳನ್ನು ಕುರಿತು ಮಿತ್ರಸಂಭಾಷಣೆ ನಡೆಯುತ್ತಿತ್ತು. ದಿವಾನ್ ಸರ್ ಮಿರ್ಜಾರವರೂ, ಸರ್ ಎಸ್. ಪಿ. ರಾಜಗೋಪಾಲಾಚಾರ್ಯರೂ ಆಗಾಗ ಅಲ್ಲಿಗೆ ಬರುವರು.

# ಅನಸೂಯತೆ

ಸರ್ ಎಸ್. ರಾಧಾಕೃಷ್ಣನ್ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಆಕ್ಸ್ ಫರ್ಡ್ ವಿದ್ಯಾಪೀಠದಿಂದ ಬಹುಮಾನಿತರಾಗಿ ಹಿಂತಿರುಗಿದ ಮೇಲೆ ಅವರನ್ನು ಶಾಸ್ತ್ರಿಗಳು ಬರಮಾಡಿಕೊಂಡು ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದು ಅದೇ ಮನೆಯಲ್ಲಿ. ಅಂದು ಸೇರಿದ್ದವರು ಐವತ್ತರವತ್ತು ಮಂದಿ. ನಮ್ಮ ದೇಶದ ಒಬ್ಬ ವಿದ್ವಾಂಸರಿಗೆ ಅಂಥ ದೊಡ್ಡ ಪ್ರಶಸ್ತಿ ದೊರೆಯಿತಲ್ಲ ಎಂದು ಶಾಸ್ತ್ರಿಗಳಿಗೆ ಹಿಗ್ಗು. ಅದನ್ನು ಎಲ್ಲರೊಡನೆಯೂ ಹೇಳಿ ಸಂತೋಷಪಡುತ್ತಿದ್ದರು.

ಇಂಥ ಅನಸೂಯತೆಯ ನಿದರ್ಶನ ಇನ್ನೊಂದು ಜ್ಞಾಪಕಕ್ಕೆ ಬರುತ್ತದೆ.

೧೯೩೧ರಲ್ಲಿ ಲಂಡನ್ ಪಟ್ಟಣದಲ್ಲಿ ರೌಂಡ್ ಟೇಬಲ್ ಕಾನ್ಫೆರೆನ್ಸ್ ಎಂಬ ಸರ್ವಪಕ್ಷೀಯ ಸಮಾಲೋಚನ ಸಭೆ ನಡೆಯಿತಷ್ಟೆ. ಆಗ ಇಂಡಿಯದಿಂದ ಹೋಗಲಿದ್ದ ಜನ ಪ್ರಮುಖರ ತಂಡಕ್ಕೆ ಯಾರು ನಾಯಕರಾಗಿರತಕ್ಕದ್ದೆಂಬ ಪ್ರಶ್ನೆ ಬಂದಿತು. ಇಂಡಿಯದ ಪ್ರತಿನಿಧಿಗಳಲ್ಲಿ ಬಹುಮಂದಿ ಶ್ರೀನಿವಾಸಶಾಸ್ತ್ರಿಗಳವರೇ ನಾಯಕರಾಗಿರಬೇಕೆಂದು ಅಭಿಪ್ರಾಯಪಟ್ಟರು. ಅವರು ಶಾಸ್ತ್ರಿಗಳಲ್ಲಿ ಹೋಗಿ ತಮ್ಮ ಅಪೇಕ್ಷೆಯನ್ನು ಹೇಳಿಕೊಂಡರು. ಶಾಸ್ತ್ರಿಗಳಾದರೋ ಹೀಗೆ ಹೇಳಿದರು:

ಶಾ: "ಅಯ್ಯಾ, ನೀವು ಮಾಡಬೇಕೆಂದಿರುವ ಗೌರವಕ್ಕೆ ಅರ್ಹನಾದವನು ನಾನಲ್ಲ. ನಮಗೆಲ್ಲ ಸರ್ ತೇಜಬಹದ್ದೂರ್ ಸಪ್ರು ಅವರೇ ನಾಯಕರಾಗಿರಬೇಕಾದವರು. ನಾವೆಲ್ಲ ಹೋಗಿ ಅವರನ್ನು ಕೇಳೋಣ."

ಪ್ರತಿನಿಧಿಗಳು: "ಅವರಿಗಿಂತ ತಾವು ಸರಿಯೆಂದು ನಮ್ಮ ಅಭಿಪ್ರಾಯ. ಅವರು ಮಹಾಕೋಪಿಷ್ಠರು, ಸ್ವಪ್ರತಿಷ್ಠೆಯವರು."

ಶಾ: "ಈಗ ನಿಮಗೆ ನಮ್ಮ ಕಾರ್ಯಸಾಧನೆ ಮುಖ್ಯವೋ, ಅಥವಾ ನಮ್ಮ ನಮ್ಮ ವೈಯಕ್ತಿಕ ಪೂರ್ವವಿಶ್ವಾಸಗಳು ಮುಖ್ಯವೊ? ನಾನು ಹೇಳುವುದನ್ನು ಕೊಂಚ ಆಲೋಚಿಸಿ. ಈಗ, ಬ್ರಿಟಿಷ್ ಸರಕಾರದ ಕಡೆ ಬಹು ಮುಖ್ಯನಾದ ಸದಸ್ಯ ಲಾರ್ಡ್ ರೀಡಿಂಗ್ (Lord Reading). ಈತನ ಮಾತಿಗೆ ಬ್ರಿಟಿಷ್ ಮಂತ್ರಿಗಳು ಹೆಚ್ಚು ಬೆಲೆ ಕೊಡುತ್ತಾರೆ. ಲಾರ್ಡ್ ರೀಡಿಂಗ್ ಆದರೋ ಇಂಡಿಯದ ವೈಸರಾಯ್ ಆಗಿದ್ದಾತ. ಆತ ಮಹಾ ಪ್ರಸಿದ್ಧನಾದ

ಲಾಯರು ಮತ್ತು ಇಂಗ್ಲೆಂಡಿನ ಲಾರ್ಡ್ ಚೀಫ್ ಜಸ್ಟಿಸ್ ಆಗಿದ್ದಾತ. ಆತನು ನಮ್ಮ ವೈಸರಾಯ್ ಆಗಿದ್ದಾಗ ನಮ್ಮ ಸಪ್ರುರವರು ಆತನ ಮಂತ್ರಿಮಂಡಲದಲ್ಲಿ ಲಾ ಮಂತ್ರಿಯಾಗಿದ್ದರು. ಹೀಗೆ ಸಪ್ರು ಅವರ ಪಾಂಡಿತ್ಯವನ್ನೂ ಲಾ ಪ್ರಾವೀಣ್ಯವನ್ನೂ ರೀಡಿಂಗ್ ಕಂಡುಕೊಂಡಿದ್ದಾತ. ಆತನಿಗೆ ಸಪ್ರುರವರಲ್ಲಿ ಅಪಾರ ಗೌರವವಿದೆ; ಆದದ್ದರಿಂದ ಸಪ್ರುರವರ ಮಾತಿಗೆ ಬ್ರಿಟಿಷ್ ಸರಕಾರದಲ್ಲಿ ಹೆಚ್ಚು ಮನ್ನಣೆ ದೊರೆಯುವ ಸಂಭವವಿದೆ. ಸಪ್ರು ಅವರಾದರೋ ವೈಸ್‌ರಾಯ್ ಕೌನ್ಸಿಲಿನಲ್ಲಿದ್ದವರು; ನಮ್ಮ ರಾಜ್ಯಭಾರದ ನಾನಾ ಇಲಾಖೆಗಳ ಕಾರ್ಯಮರ್ಮಗಳನ್ನೂ ಕಾರ್ಯವಿಧಾನಗಳನ್ನೂ ಖುದ್ದಾಗಿ ನೋಡಿ ಅನುಭವ ಪಡೆದಿರುವವರು. ನಾನು ಅವರ ಹಾಗೆ ಸರಕಾರದ ಅನುಭವವನ್ನು ಪಡೆದಿದ್ದೇನೆಯೇ? ಇಲ್ಲ. ಈಗ ನಮಗೆ ಬೇಕಾದದ್ದು ಅನುಭವದಿಂದ ಬಂದ ಹಿತಸೂಚನೆ. ನಮಗೆ ರಾಜ್ಯಾಧಿಕಾರ ಎಲ್ಲೆಲ್ಲಿ ಕೈಸೇರಬೇಕು? ಅದನ್ನು ಹೇಗೆ ಹೇಗೆ ನಾವು ಕೈಗೆ ತೆಗೆದುಕೊಳ್ಳಬೇಕು? ಈ ಒಳಮರ್ಮಗಳನ್ನೆಲ್ಲ ಕಂಡು ಮಾತನಾಡುವವರು ಸಪ್ರು. ಈಗ ಬ್ರಿಟಿಷ್ ಜನದಲ್ಲಿ ಬೆಲೆ ಬರುವುದು ಅವರ ಮಾತಿಗೆ. ಅಂಥವರನ್ನು ಬಿಟ್ಟು ನೀವು ನನ್ನನ್ನು ಮುಂದಾಳಾಗಬೇಕೆಂದು ಹೇಳುತ್ತೀರಲ್ಲ? ಇದು ಕಾರ್ಯವಂತಿಕೆಯ ದಾರಿಯೆ? ಸಪ್ರು ಅವರು ಕೊಂಚ ಮುಂಗೋಪಿಗಳಿರಬಹುದು. ಅವರು ಧೋರಣೆಯಿಂದ ಮಾತನಾಡುವುದುಂಟು. ಈ ಸಣ್ಣ ವಿಚಾರಗಳನ್ನು ನೀವು ದೊಡ್ಡದು ಮಾಡಿಕೊಳ್ಳಬಾರದು. ಆತನೇ ನಮ್ಮ ಪಕ್ಷಕ್ಕೆ ಮುಂದಾಳು. ನಾನೂ ನಿಮ್ಮೊಡನೆ ಬರುತ್ತೇನೆ. ಆತನನ್ನು ಒಡಂಬಡಿಸೋಣ.”

# ಒಂದು ಅನುಭವ

ಶಾಸ್ತ್ರಿಗಳಿಗೆ ತಾವು ಒಳ್ಳೆಯ ಕೆಲಸವೆಂದು ಭಾವಿಸಿದ್ದನ್ನು ಮಾಡಿಸಿದವರು ಯಾರಾದರೂ, ಎಷ್ಟು ಸಣ್ಣವರಾದರೂ, ಅವರ ವಿಷಯದಲ್ಲಿ ನೈಜವಾದ ಉತ್ಸಾಹ. ಒಂದು ಸಾರಿ ನಾನು A dubious experiment ಶೀರ್ಷಿಕೆ ಕೊಟ್ಟು ಒಂದು ಲೇಖನ ಬರೆದಿದ್ದೆ. ಅದು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾಗಿದ್ದ ಡಾ ॥ ವ್ರಜೇಂದ್ರನಾಥ ಸೀಲ್ ಅವರನ್ನು ಸರಕಾರದ ಮಂತ್ರಿ ಸಂಪುಟದಲ್ಲಿ 'ಎಕ್ಸ್ಟ್ರಾರ್ಡಿನರಿ ಮೆಂಬರ್' ಆಗಿ ನಿಯಾಮಕ ಮಾಡಿದ್ದನ್ನು ಕುರಿತದ್ದು. ಆ ಏರ್ಪಾಟು ಅಸಂಗತವಾದದ್ದೆಂದು ನಾನು ಆಕ್ಷೇಪಿಸಿದ್ದೆ. ಆ ಲೇಖನ ಮದರಾಸಿನ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದು ಪ್ರಕಟವಾದ ದಿನ ಶಾಸ್ತ್ರಿಗಳು ಮೈಸೂರಿನಲ್ಲಿದ್ದರು. ಮಾರನೆಯ ದಿನವೋ ಮೂರನೆಯ ದಿನವೋ ಬೆಂಗಳೂರಿಗೆ ಬರಬೇಕೆಂದು ಅವರು ಉದ್ದೇಶಿಸಿದ್ದರು. ನಾನು ಲೇಖನ ಬರೆದಿದ್ದ ಸಂಗತಿ ಅವರಿಗೆ ತಿಳಿದಿರಲಿಲ್ಲ. ನಾನು ಯಾರಿಗೂ ಅದರ ಸುಳಿವು ಕೊಟ್ಟಿರಲಿಲ್ಲ. ಆ ಲೇಖನ ಶಾಸ್ತ್ರಿಗಳ ಕಣ್ಣಿಗೆ ಬಿತ್ತು-ಮಧ್ಯಾಹ್ನ ೨ ಘಂಟೆಯ ಸುಮಾರಿಗೆ. ಆ ತತ್ ಕ್ಷಣವೇ ಅವರು ಬೆಂಗಳೂರಿಗೆ ಪ್ರಯಾಣ ಮಾಡಲು ಸಿದ್ಧರಾದರು. ಸ್ನೇಹಿತರು ಕೇಳಿದರು:

ಸ್ನೇ: "ಏನು ಅವಸರ?"

ಶಾ: "ನಾನು ಈ ಸಂಜೆಯೇ ಆ Feller ನ ಕಾಣಬೇಕು, ಅವನನ್ನು ಅಭಿನಂದಿಸಬೇಕು."

ಅವರು ಹೊರಟ ವರ್ತಮಾನವನ್ನು ನನಗೆ ತಂತಿಯ ಮೂಲಕ ತಿಳಿಸಿ ರೈಲ್ವೆ ಸ್ಟೇಷನ್ನಿಗೆ ಬರಬೇಕೆಂದು ಹೇಳಿದರು. ನಾನೂ ಕೆಲಮಂದಿ ಸ್ನೇಹಿತರೂ ಸ್ಟೇಷನ್ನಿಗೆ ಹೋದೆವು. ನನ್ನ ಮುಖ ಕಾಣುತ್ತಲೇ ಶಾಸ್ತ್ರಿಗಳು ಆಪಾದಮಸ್ತಕವೂ ಉತ್ಸಾಹದ ಮೂರ್ತಿಯಾಗಿ ನಿಂತರು. ಅದೇನು ಬಾಯಿ ತುಂಬ ಹೊಗಳಿಕೆ! ಅಂಥ ಒಂದು ಕ್ಷಣದ ಅನುಭವ ಜೀವನಕ್ಕೆ ಅಮೃತಪ್ರಾಯವಾಗುತ್ತದೆ.

# ವಿದ್ವತ್ಪ್ರೇಮ

ನಾವು ಮೈಸೂರಿನಲ್ಲಿದ್ದಾಗ ಶಾಸ್ತ್ರಿಗಳು ಒಂದು ದಿನ ನನಗೆ ಹೇಳಿದರು:

“ಮೈಸೂರು ಪಟ್ಟಣ ಒಳ್ಳೊಳ್ಳೆಯ ವಿದ್ವಾಂಸರಿದ್ದ ಸ್ಥಳ. ಈಗಲೂ ಕೆಲ ಮಂದಿ ಮಹಾ ವಿದ್ವಾಂಸರು ಇಲ್ಲಿದ್ದಾರೆಂದು ಕೇಳಿದ್ದೇನೆ. ಅವರಲ್ಲಿ ಸಾಹಿತ್ಯ ವಿದ್ವಾಂಸರು ನಿನಗೆ ತಿಳಿದವರು ಯಾರು? ನಾನು ಧ್ವನ್ಯಾಲೋಕದ ಕೆಲವು ಪ್ರಕರಣಗಳನ್ನು ಕುರಿತು ಅವರಿಂದ ತಿಳಿದುಕೊಳ್ಳಬೇಕೆಂದಿದ್ದೇನೆ.”

ನಾನು ವಿಚಾರಿಸಿ ಹೇಳಿದೆ: “ಈಗಿರುವ ವಿದ್ವಾಂಸರಲ್ಲಿ ಹಾಸನದ ನರಸಿಂಹಶಾಸ್ತ್ರಿಗಳು ಪ್ರಸಿದ್ಧರಾಗಿದ್ದಾರೆ. ಯೂನಿವರ್ಸಿಟಿಯ ಆಶ್ರಯದಲ್ಲಿ ಅವರು ಕೊಟ್ಟ ಒಂದು ಭಾಷಣವನ್ನು ನಾನು ನೋಡಿದ್ದೇನೆ. ಸಾಂಪ್ರದಾಯಿಕವಾದ ಕಾವ್ಯಮೀಮಾಂಸೆ ಅವರಲ್ಲುಂಟೆಂದು ನನಗೆ ತೋರುತ್ತದೆ. ತಾವು ಇಷ್ಟಪಟ್ಟರೆ ಅವರನ್ನು ಕರೆತಂದೇನು.”

ಶಾ: “ನೀನು ಹೋಗಿ ಕರೆತರುವುದೇಕೆ? ನಾವೇ ಅಲ್ಲಿಗೆ ಹೋಗೋಣ.”

ಅದರಂತೆ ನಾವು ನರಸಿಂಹಶಾಸ್ತ್ರಿಗಳ ಮನೆಗೆ ಹೋದಾಗ ಅವರು ತುಂಬ ಕಾಯಿಲೆಯಲ್ಲಿದ್ದರು. ಇಂಥ ಸಮಯದಲ್ಲಿ ಅವರನ್ನು ಜಿಜ್ಞಾಸೆಗೆ ಕರೆಯತಕ್ಕದ್ದಲ್ಲವೆಂದೂ ಅವರು ಸ್ವಸ್ಥರಾದ ಮೇಲೆ ನೋಡಬಹುದೆಂದೂ ಯೋಚಿಸಿ ನಾವು ಹಿಂತಿರುಗಿದೆವು.

# ಹಿರಿಯಣ್ಣನವರ ಅಭಿಮಾನ

ಮೈಸೂರಿನಲ್ಲಿ ಶಾಸ್ತ್ರಿಗಳು ಬಹು ಕುತೂಹಲದಿಂದ ನೋಡಿದ ಇನ್ನೊಬ್ಬ ವಿದ್ವಾಂಸರು ಪ್ರೊ ॥ ಎಂ. ಹಿರಿಯಣ್ಣನವರು. ಸಾಮಾನ್ಯವಾಗಿ ಮೈಸೂರಿಗೆ ಹೋದಾಗಲೆಲ್ಲ ಶಾಸ್ತ್ರಿಗಳು ತಪ್ಪದೆ ಭೇಟಿಕೊಡುತ್ತಿದ್ದ ಜಾಗ ಪ್ರೊ ॥ ಹಿರಿಯಣ್ಣನವರ ಮನೆ. ಶಾಸ್ತ್ರಿಗಳಿಗೆ ಹಿರಿಯಣ್ಣನವರ ಪಾಂಡಿತ್ಯದ ವಿಷಯದಲ್ಲಿಯೂ ನೀತಿಯೋಗ್ಯತೆಯ ವಿಷಯದಲ್ಲಿಯೂ ಅತ್ಯಂತ ಗೌರವ. ಹಿರಿಯಣ್ಣನವರು ಮಹಾಪ್ರಾಮಾಣಿಕರೆಂದು ಶಾಸ್ತ್ರಿಗಳು ಪದೇ ಪದೇ ಹೇಳುತ್ತಿದ್ದರು. ಅವರಿಬ್ಬರಿಗೂ ತುಂಬ ಸ್ನೇಹ. ಇಬ್ಬರೂ ಕಲೆತಾಗ ತುಂಬ ಅಭಿಮಾನದಿಂದ ನಡೆದುಕೊಳ್ಳುತ್ತಿದ್ದರು. ನಾನು ಶಾಸ್ತ್ರಿಗಳೊಡನೆ ಹಿರಿಯಣ್ಣನವರ ಮನೆಗೆ ಹೋಗಿದ್ದಾಗ ಅವರು ಶಾಸ್ತ್ರಿಗಳನ್ನು ಅಲ್ಲಿದ್ದ ಒಂದೇ ಒಂದು ಕುರ್ಚಿಯಲ್ಲಿ ಕುಳ್ಳಿರಿಸಿ, ತಾವು ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಕುಳಿತರು. ಶಾಸ್ತ್ರಿಗಳು ಎದ್ದುನಿಂತು ಗೋಡೆಯ ಪಕ್ಕವನ್ನು ಆಧಾರಮಾಡಿಕೊಂಡು ನಿಂತು, “ನಾನು ನಿಂತೇ ಇರುತ್ತೇನೆ. ನನಗೆ ನೆಲದ ಮೇಲೆ ಕೂಡಲು ಕಷ್ಟ” ಎಂದರು. ಹಿರಿಯಣ್ಣನವರು ನಕ್ಕು ಅಲ್ಲಿದ್ದ ಬೆಂಚಿನ ಮೇಲೆ ಕುಳಿತರು. ಅನಂತರ ಇಬ್ಬರಿಗೂ ಮಾತುಕಥೆ. ಶಾಸ್ತ್ರಿಗಳು ಕೇಳಿದ ಒಂದು ಪ್ರಶ್ನೆ ನನಗೆ ಜ್ಞಾಪಕವಿದೆ.

“ನಿಮ್ಮಂಥ ವಿದ್ವಾಂಸರಿರುವಾಗ ಹಳೆಯ ಕಾಲದ ಪಂಡಿತರುಗಳನ್ನು ತಯಾರು ಮಾಡುವುದು ಆವಶ್ಯಕವೆ? ಯೂನಿವರ್ಸಿಟಿಗಳಲ್ಲಿ ಇಂಗ್ಲಿಷಿನ ಜೊತೆಗೆ ಸಂಸ್ಕೃತವನ್ನು ಕಲಿತ ವಿದ್ವಾಂಸರಿಗೆ ನಮ್ಮ ಇಂದಿನ ಸಮಾಜದಲ್ಲಿ ಸ್ಥಾನವುಂಟೆ?”

ಹಿರಿಯಣ್ಣನವರು ಸೌಮ್ಯವಾಗಿ ಮಂದಸ್ಮಿತದಿಂದ ಜವಾಬು ಹೇಳಿದರು: “ಯೂನಿವರ್ಸಿಟಿಯಲ್ಲಿ ತಯಾರಾಗುವ ಪಾಂಡಿತ್ಯ ತುಂಬಾ ಬಡಕಲು. ಅವರ ಜೊತೆಗೆ ಸಾಂಪ್ರದಾಯಿಕ ಕ್ರಮದಲ್ಲಿ ಶಾಸ್ತ್ರಾಭ್ಯಾಸ ಮಾಡಿದರೆ ಅಂಥ ಪಾಂಡಿತ್ಯದಿಂದ ಸಮಾಜಕ್ಕೆ ಪ್ರಯೋಜನವಾಗುತ್ತದೆ. ಪೂರ್ವದ ರೀತಿಯ ಪಾಂಡಿತ್ಯವಿಲ್ಲದೆ ಕಾಲೇಜಿನಲ್ಲಿ ಅಷ್ಟಿಷ್ಟು ಓದಿಕೊಂಡದ್ದರಿಂದ ಪ್ರಮಾಣವತ್ತಾದ ಪಾಂಡಿತ್ಯ ದುರ್ಲಭ. ನಮ್ಮ ಪೂರ್ವ ಪಂಡಿತರುಗಳ ಜ್ಞಾನ ನಿಷ್ಕೃಷ್ಟವಾದದ್ದು. ಅದನ್ನು ಹೇಗಾದರೂ ಮಾಡಿ ಕಾಪಾಡಿಕೊಳ್ಳಬೇಕು.”

ನನಗೆ ತಿಳಿದಮಟ್ಟಿಗೆ ಶಾಸ್ತ್ರಿಗಳೂ ಇದೇ ಅಭಿಪ್ರಾಯವನ್ನಿಟ್ಟುಕೊಂಡಿದ್ದರು. ತರ್ಕ ವ್ಯಾಕರಣ ಮೀಮಾಂಸಾದಿಗಳು ಮಾತ್ರವಲ್ಲದೆ ಕಾವ್ಯ ಅಲಂಕಾರಗಳೂ ತದೇಕ ನಿಷ್ಠೆಯನ್ನಪೇಕ್ಷಿಸುತ್ತವೆ. ಹಾಗೆ ತನ್ನಿಷ್ಠರಾದವರೇ ನಿಜವಾದ ಪಂಡಿತರು. ಆದರೆ ಆ ಪಾಂಡಿತ್ಯದ ಜೊತೆಗೆ ಪಂಡಿತರಲ್ಲಿ ಪ್ರಕೃತಕಾಲದ ವಿಮರ್ಶನೆಯೂ ವಿಚಾರಪದ್ಧತಿಯೂ ಸೇರಿರಬೇಕು. ಈ ದೃಷ್ಟಿಯಿಂದ ಅವರು ಕೊಂಚ ಇಂಗ್ಲಿಷ್ ತಿಳಿದವರಾಗಿ ಸಾಂಪ್ರತಲೋಕದ ಸಾಮಾಜಿಕ ಪ್ರವೃತ್ತಿಗಳನ್ನೂ ವಿಜ್ಞಾನಪ್ರಗತಿಯನ್ನೂ ಕಂಡುಕೊಳ್ಳಲಾಗುವಂತಿರಬೇಕು. ಪೂರ್ವಪಾಂಡಿತ್ಯದ ಹೆಸರಿನಲ್ಲಿ ಪ್ರಕೃತಲೋಕವನ್ನು ತಿಳಿದುಕೊಳ್ಳದೆಹೋದರೆ ಆ ಪಾಂಡಿತ್ಯವು ಲೋಕಪ್ರಯೋಜನಕ್ಕೆ ಒದಗಿಬಾರದು. ಈ ಅಭಿಪ್ರಾಯವನ್ನು ಶಾಸ್ತ್ರಿಗಳು ಎಷ್ಟೋ ಸಾರಿ ಹೇಳಿದ್ದರು.

# ವೆಂಕಟಕೃಷ್ಣಯ್ಯನವರ ದರ್ಶನ

ಮೈಸೂರಿಗೆ ಹೋದಾಗಲೆಲ್ಲ ಶಾಸ್ತ್ರಿಗಳವರ ಮೊಟ್ಟಮೊದಲನೆಯ ಭೇಟಿ ಎಂ. ವೆಂಕಟಕೃಷ್ಣಯ್ಯನವರಲ್ಲಿಗೆ. ತಾವು ಮೈಸೂರನ್ನು ತಲಪುವ ದಿವಸವನ್ನು ವೆಂಕಟಕೃಷ್ಣಯ್ಯನವರಿಗೆ, ಪೂರ್ವಭಾವಿಯಾಗಿ ಬರೆದು ತಿಳಿಸಿರುತ್ತಿದ್ದರು. ವೆಂಕಟಕೃಷ್ಣಯ್ಯನವರನ್ನು ನೋಡಲು ಅವರ ಲಕ್ಷ್ಮೀಪುರದ ಮನೆಗೆ ಶಾಸ್ತ್ರಿಗಳು ಹೋದಾಗ ಒಂದೆರಡು ಸಾರಿ ನಾನೂ ಜೊತೆಯಲ್ಲಿದ್ದೆ. ವೆಂಕಟಕೃಷ್ಣಯ್ಯನವರಿಗೆ ತುಂಬ ಸಂತೋಷ, ತುಂಬ ಆದರಣೆ. ಒಂದು ಸಾರಿ ಒಂದು ದೊಡ್ಡ ತಟ್ಟೆಯಲ್ಲಿ ಹಣ್ಣುಗಳನ್ನೂ ಕಾಯನ್ನೂ ತರಿಸಿಟ್ಟಿದ್ದರು. ಶಾಸ್ತ್ರಿಗಳು ತಮಗೆ ಆ ವೇಳೆಯಲ್ಲಿ-ಸುಮಾರು ನಾಲ್ಕೂವರೆ ಘಂಟೆ-ಎಲ್ಲ ಆಹಾರವೂ ನಿಷಿದ್ಧವೆಂದೂ ಕ್ಷಮಿಸಬೇಕೆಂದೂ ಹೇಳಿದರು. ವೆಂಕಟಕೃಷ್ಣಯ್ಯನವರು ಹೇಳಿದರು: “ನಿಮಗೆ ನಾನು ಯಾವ ಉಪಚಾರವನ್ನೂ ಮಾಡಲು ಶಕ್ತಿ ಹೋದವನಾಗಿದ್ದೇನಲ್ಲ! ನನಗೆ ಏನು ಕೆಲಸವಾಗಬೇಕಾದರೂ ಈ (ವಿದ್ಯಾರ್ಥಿ) ಹುಡುಗರಿಂದ ಆಗಬೇಕಾಗಿದೆ. ಅವರು ತಂದುಕೊಟ್ಟದ್ದನ್ನು ನಾನು ಕೊಡುತ್ತಿದ್ದೇನೆ. ನೀವು ಏನೂ ಸ್ವೀಕರಿಸದೆ ಬಿಟ್ಟರೆ…”

ವಾಕ್ಯವನ್ನು ಪೂರ್ತಿಮಾಡಲಿಲ್ಲ. ಕಣ್ಣಿನಲ್ಲಿ ನೀರು ತುಂಬಿಬಂದಿತು. ಶಾಸ್ತ್ರಿಗಳು ಅದನ್ನು ಕಂಡು ಒಂದು ಬಾಳೆಯ ಹಣ್ಣಿನ ಒಂದು ಚೂರನ್ನು ಬಾಯಿಗೆ ಹಾಕಿಕೊಂಡು ಕಾಫಿಯನ್ನು ಒಂದು ಗುಟುಕು ತೆಗೆದುಕೊಂಡರು. ವೆಂಕಟಕೃಷ್ಣಯ್ಯನವರ ಮುಖದ ಮೇಲೆ ಆಗ ಸಂತೋಷದ ಸೂಚನೆ ತೋರಿತು. ಇದಾದನಂತರ ಕೊಂಚಕಾಲ ಇಬ್ಬರೂ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಆಗಿನ ಮುಖ್ಯವಿಷಯ ವಿದ್ಯಾಭ್ಯಾಸಕ್ರಮ ಮತ್ತು ವಿದ್ಯಾರ್ಥಿಗಳ ಸಭ್ಯತೆ.

***

# ಪಾರ್ಸಿಯಾತನ ಔದಾರ್ಯ

ಶ್ರೀನಿವಾಸ ಶಾಸ್ತ್ರಿಗಳು ಕಾಯಿಲೆಯಿಂದ ಮೊದಲ ಸಾರಿ ಬೆಂಗಳೂರಿಗೆ ಬಂದಾಗ ಒಂದು ಸಂಗತಿಯನ್ನು ಹೇಳಿದರು, ಸುಮಾರು ಹೀಗೆ:

"ನಾನು ಪೂನಾ ರೈಲ್ವೆ ಸ್ಟೇಷನ್ನಿನಲ್ಲಿ ಪ್ಲಾಟ್‌ಫಾರ್ಮ್ ಮೇಲೆ ನಿಂತಿದ್ದೆ, ಬೆಂಗಳೂರಿನ ಗಾಡಿಗಾಗಿ. ಆಗ ಒಬ್ಬ ದೊಡ್ಡ ಮನುಷ್ಯ ನನ್ನ ಬಳಿಗೆ ಬಂದು ನನ್ನನ್ನು ಮಾತನಾಡಿಸಿದ. ಆತ ಯಾರೆಂದು ನನಗೆ ಗೊತ್ತಿರಲಿಲ್ಲ. ಆತ ಹೇಳಿದ್ದು ಹೀಗೆ: 'ನೀವು ಅನಾರೋಗ್ಯದಲ್ಲಿದ್ದೀರೆಂದು ಪತ್ರಿಕೆಗಳಲ್ಲಿ ನಾನು ಓದಿದೆ. ಬೆಂಗಳೂರಿನಲ್ಲಿ ನೀವು ವಿಶ್ರಾಂತಿ ಪಡೆಯತಕ್ಕದ್ದೆಂದು ಡಾಕ್ಟರುಗಳು ಸೂಚನೆ ಕೊಟ್ಟಿದ್ದಾರಂತೆ. ನೀವು ಅದಕ್ಕಾಗಿ ಬೆಂಗಳೂರಿಗೆ ಹೋಗಿ ಅಲ್ಲಿ ವಿಶ್ರಾಂತಿಯಲ್ಲಿರಬೇಕಾದದ್ದು ದೇಶದ ದೃಷ್ಟಿಯಿಂದ ನಿಮ್ಮ ಕರ್ತವ್ಯ. ಆ ಬಗೆಗೆ ನಿಮಗೆ ಬೇಕಾದ ಅನುಕೂಲತೆಗಳನ್ನು ಒದಗಿಸುವುದು ನಮ್ಮ ದೇಶದಲ್ಲಿ ಅನುಕೂಲವಂತರಾಗಿರುವವರ ಕರ್ತವ್ಯ. ನಾನು ನಿಮ್ಮ ಅಪ್ಪಣೆಯನ್ನು ನಿರೀಕ್ಷಿಸಿ ಐದು ಸಾವಿರ ರೂಪಾಯಿಗಳನ್ನು ನಿಮ್ಮ ಹೆಸರಿಗೆ ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟಿದ್ದೇನೆ. ನೀವು ದಯಮಾಡಿ ಅದನ್ನು ಸ್ವೀಕರಿಸಿ ಧಾರಾಳವಾಗಿ ಖರ್ಚುಮಾಡಬೇಕು. ಅದು ಖರ್ಚಾದಂತೆ ನನಗೆ ತಿಳಿಯಪಡಿಸಬೇಕೆಂದು ನನ್ನ ಬ್ಯಾಂಕಿನವರಿಗೆ ಹೇಳಿದ್ದೇನೆ. ಅವರಿಂದ ತಿಳಿವಳಿಕೆ ಬಂದ ಮೇಲೆ ಪುನಃ ಹಣ ಅಲ್ಲಿಗೆ ತಲಪಿಸುತ್ತೇನೆ. ನೀವು ನಿಶ್ಚಿಂತರಾಗಿದ್ದು ಬೇಗನೆ ಪೂರ್ಣಾರೋಗ್ಯ ಪಡೆಯಬೇಕೆಂಬುದೊಂದೇ ನನ್ನ ಆಶೆ. ತಾವು ನನಗೆ ಕಾಗದ ಪತ್ರ ಯಾವುದನ್ನೂ ಬರೆಯಬೇಕಾಗಿಲ್ಲ.' ಇಷ್ಟು ಹೇಳಿ ಆ ದೊಡ್ಡ ಮನುಷ್ಯ ಅವಸರವಸರವಾಗಿ ಹೊರಟುಹೋದ. ಆತನ ಹೆಸರೇನೆಂದು ಆತನನ್ನು ನಾನು ಕೂಗಿ ಕೇಳಿದಾಗ ಆತ...ಎಂಬ ಹೆಸರು ಹೇಳಿ 'ಇದೇನು ಮಹಾ ದೊಡ್ಡ ವಿಷಯ!' ಎಂದುಬಿಟ್ಟ."

ಇದು ಶಾಸ್ತ್ರಿಗಳು ನನಗೆ ಹೇಳಿದ ಸಂಗತಿ. ಆ ದೊಡ್ಡ ಮನುಷ್ಯ ಒಬ್ಬ ಪಾರ್ಸಿಯಾತನಂತೆ, ವ್ಯಾಪಾರಸ್ಥನಂತೆ. ಮಿಕ್ಕ ವಿವರ ಏನೂ ತಿಳಿಯದು.

ಶಾಸ್ತ್ರಿಗಳಿಗೆ ಆರೋಗ್ಯಕ್ಕಾಗಿ ತುಂಬ ಹಣ ವೆಚ್ಚಮಾಡಬೇಕಾಗಿ ಬಂತು. ಔಷಧದ ಖರ್ಚು, ಪ್ರಯಾಣದ ಖರ್ಚು, ಹಣ್ಣು ಹಂಪಲು ಮೊದಲಾದ ಆಹಾರ ಪಥ್ಯಗಳ ಖರ್ಚು ಇದೆಲ್ಲ ಬೇಕಾಗಿತ್ತು. ಈ ಖರ್ಚು ವೆಚ್ಚದ ವಿಚಾರದ ಯಾವುದೋ ಮಾತಿಗೆ ಬಂದಾಗ ಅವರು ಮೇಲಣ ಸಂಗತಿಯನ್ನು ನನಗೆ ಹೇಳಿದರು.

# ಮಿತವ್ಯಯ

ಆದರೆ ನಾನು ಒಂದು ಮಾತು ಸೇರಿಸಬೇಕಾಗಿದೆ. ಶಾಸ್ತ್ರಿಗಳು ಆ ಪಾರ್ಸಿ ಉದಾರಿಕೊಟ್ಟಿದ್ದ ಹಣವಷ್ಟನ್ನೂ ಉಪಯೋಗಪಡಿಸಿಕೊಂಡರೆಂದು ನಾನು ಹೇಳಲಾರೆ. ಅವರು ಆ ಹಣವನ್ನು ಅಥವಾ ಅದರಲ್ಲಿ ಬಹು ಭಾಗವನ್ನು ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ನಿಧಿಗೆ ಕೊಟ್ಟರೆಂದು ನನ್ನ ಊಹೆ. ಹಾಗೆ ಮಾಡುತ್ತಿದ್ದದ್ದು ಅವರ ಪದ್ಧತಿ. ದಕ್ಷಿಣ ಆಫ್ರಿಕದಲ್ಲಿ ಅವರು ಇಂಡಿಯ ಸರಕಾರದ ಏಜಂಟರಾಗಿದ್ದಾಗ ಅವರಿಗೆ ದೊರೆತ ಸಂಬಳದಲ್ಲಿ ಬಹುಭಾಗವನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳದೆ ಉಳಿಸಿ (ಬಹುಶಃ ೩೫, ೦೦೦ ರೂಪಾಯಿಗಳಷ್ಟು) ತಮ್ಮ ಸೊಸೈಟಿಗೆ ಕೊಟ್ಟದ್ದು ನನಗೆ ತಿಳಿದಿದೆ.

ಇಂಥ ಸಂದರ್ಭಗಳು ಇನ್ನೂ ಕೆಲವು ನನಗೆ ತಿಳಿದಿವೆ. ಶಾಸ್ತ್ರಿಗಳು ಒಂದು ಸಾರಿ ಇಂಡಿಯ ಸರಕಾರದ ಪ್ರತಿನಿಧಿಯಾಗಿ ಕೆನಡಾ, ಆಸ್ಟ್ರೇಲಿಯ ಮೊದಲಾದ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ಆಯಾ ದೇಶಗಳಲ್ಲಿದ್ದ ಭಾರತೀಯ ಜನರ ಸ್ಥಿತಿಗತಿಗಳನ್ನು ಪರಿಶೀಲಿಸಿ ಬಂದರಷ್ಟೆ. ಆಗ ಆ ಕಾರ್ಯದಲ್ಲಿ ಅವರಿಗೆ ಆಪ್ತ ಕಾರ್ಯದರ್ಶಿ (Private Secretary) ಆಗಿದ್ದಾತ ಸರ್ ಗಿರಿಜಾಶಂಕರ ವಾಜಪೇಯಿ ಎಂಬ ಐ.ಸಿ.ಎಸ್. ಹುದ್ದೆದಾರ. ಆತನು ಬಹುಭಾಷಾ ವಿಶಾರದ. ಒಳ್ಳೆಯ ವಿದ್ವಾಂಸ. ಮಹಾಬುದ್ಧಿವಂತ. ಆತನ ತಂದೆ ರಾಜಾಸ್ಥಾನದ ಒಂದು ಸಂಸ್ಥಾನದಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದರು. ಗಿರಿಜಾಶಂಕರ ಅಣ್ಣತಮ್ಮಂದಿರೂ ಬುದ್ಧಿಶಾಲಿಗಳಾಗಿ ದೊಡ್ಡ ದೊಡ್ಡ ಪದವಿಗಳಲ್ಲಿ ಇದ್ದರು. ಒಬ್ಬ ತಮ್ಮ ಐ. ಸಿ. ಎಸ್. ಹುದ್ದೆಯಲ್ಲಿದ್ದ. ಕಾಲಕ್ರಮದಲ್ಲಿ ಗಿರಿಜಾಶಂಕರರು ಬೊಂಬಾಯಿ ಆಧಿಪತ್ಯದ ಗವರ್ನರ್ ಆದರು.

ಈ ಗಿರಿಜಾಶಂಕರರು ಶ್ರೀನಿವಾಸ ಶಾಸ್ತ್ರಿಗಳೊಡನೆ ಕೆನಡಾ ದೇಶಕ್ಕೆ ಹೋಗಿದ್ದಾಗ ತಾವೇ ಪೇಟೆಗೆ ಹೋಗಿ ಸ್ವತಂತ್ರಿಸಿ ಮೂರು ಪದಾರ್ಥಗಳನ್ನು ಕೊಂಡುಕೊಂಡು ಬಂದರು: (೧) ಜೇಬು ಗಡಿಯಾರ ಮತ್ತು ಸರಪಣಿ, (೨) ಅಲಂಕಾರ ಮಾಡಿದ ಕೈಬೆತ್ತ (Walking stick), (೩) ವಿಸಿಟಿಂಗ್ ಕಾರ್ಡುಗಳನ್ನಿಡುವ ಒಂದು ಪಾಕೆಟ್ ಡಬ್ಬಿ. ಶಾಸ್ತ್ರಿಗಳವರು ಈ ಮೂರು ಸಾಮಾನುಗಳನ್ನು ನೋಡಿ ತಮ್ಮೊಳಗೇ ಮುನಿದುಕೊಂಡರು. ಮುನಿಸನ್ನು ಹೊರಕ್ಕೆ ಬಿಡದೆ, ಆ ಮೂರು ಸಾಮಾನುಗಳಲ್ಲಿ ಒಂದು ಮಾತ್ರ ತಮಗೆ ಸಾಕೆಂದು ಹೇಳಿ, ಮಿಕ್ಕ ಎರಡನ್ನು ವಾಪಸು ಕೊಡ ಹೇಳಿದರು. ಅವರು ಇರಿಸಿಕೊಂಡ ಸಾಮಾನು ವಿಸಿಟಿಂಗ್‌ಕಾರ್ಡಿನ ಕೇಸು. ಅದು ಉಪಯೋಗದಲ್ಲಿದ್ದದ್ದನ್ನು ನಾನು ನೋಡಿದ್ದೇನೆ.

ಗಡಿಯಾರ, ಬೆತ್ತ, ಇವೆರಡೂ ೩೦೦-೪೦೦ ಡಾಲರ್ ಬೆಲೆ ಹಾಕಿದದ್ದು. “ನನಗೆ ಯಾಕೆ ಅದು? ಅದಕ್ಕೆ ಹಾಕುವ ಹಣಕ್ಕೆ ಬೇರೆ ಉಪಯೋಗವಿದೆ. ಇದು ಇಂಡಿಯ ದೇಶದ ಹಣ. ನಮ್ಮ ದೇಶಕ್ಕಾಗಿ ಅದನ್ನು ಇಟ್ಟುಕೊಳ್ಳೋಣ.” ಎಂದರಂತೆ

ಇದೊಂದು ಸ್ವಭಾವನಿದರ್ಶನ.

# ಜಿಪುಣಿಯೆ?

ಎಷ್ಟೋ ಸಮಯಗಳಲ್ಲಿ ಶಾಸ್ತ್ರಿಗಳ ನಡವಳಿಕೆಯನ್ನು ನೋಡಿದರೆ ಅವರನ್ನು ಯಾರಾದರೂ ಜಿಪುಣಿ ಎನ್ನಬಹುದಾಗಿತ್ತು. ಅವರು ಜಿಪುಣಿಯೊ? ಈ ಪ್ರಕರಣವನ್ನು ನೋಡುವುದಾಗಲಿ.

ಅವರು ಬೆಂಗಳೂರಿನಲ್ಲಿದ್ದಾಗ ಒಂದು ಸಾರಿ ಅವರನ್ನು ನೋಡಲು ಯಾರೋ ಒಬ್ಬರು ಬಂದರು. ಬಂದವರು ಯಾವುದೋ ಶಾಲೆಯಲ್ಲಿ ಸಂಸ್ಕೃತ ಪಾಠ ಹೇಳುತ್ತಿದ್ದವರಂತೆ. ಅವರು ಶಾಸ್ತ್ರಿಗಳೊಡನೆ ಮಾತನಾಡುತ್ತಾ ತಾವು ಹರಿಕಥೆ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದಂತೆ ತಿಳಿಯಪಡಿಸಿದರು. ಶಾಸ್ತ್ರಿಗಳು ತಮ್ಮ ಸಂತೋಷವನ್ನು ಹೇಳಿ ತಮಗೆ ಆ ಪಂಡಿತರು ಒಂದು ದಿನ ಹರಿಕಥಾಶ್ರವಣ ಮಾಡಿಸಬೇಕೆಂದು ಕೋರಿದರು. ಪಂಡಿತರಿಗೆ ಬೇಕಾಗಿದ್ದದ್ದೂ ಅದೇ.

ಪಂಡಿತರು ಶ್ರೀವೈಷ್ಣವರು. ಅವರ ಉಡಿಗೆ ತೊಡಿಗೆಗಳಲ್ಲಿ ಸ್ವಲ್ಪವೂ ಆಡಂಬರವಿರಲಿಲ್ಲ. ಶಾಸ್ತ್ರಿಗಳು ನನ್ನ ಸಂಗಡ ಹೇಳಿದ ಮೇಲೆ ನಾನು ಆ ವಿದ್ವಾಂಸರ ಕಾಲಾನುಕೂಲವನ್ನು ತಿಳಿದುಕೊಂಡು, ಒಂದು ಹರಿಕಥಾ ಪ್ರಸಂಗಕ್ಕೆ ಏರ್ಪಾಟು ಮಾಡಿದ್ದಾಯಿತು. ಸ್ಥಳ ನ್ಯಾಷನಲ್ ಹೈಸ್ಕೂಲು. ಶಾಸ್ತ್ರಿಗಳ ಸ್ನೇಹಿತರೂ ಅಭಿಮಾನಿಗಳೂ ಬಹು ಮಂದಿ ಸೇರಿದ್ದರು. ಹರಿಕಥೆ ನಡೆದದ್ದು ಸಂಸ್ಕೃತ ಭಾಷೆಯಲ್ಲಿ. ಹರಿಕಥೆಯ ಜೊತೆಗೆ ತಂಬೂರಿ, ಮೃದಂಗ ಮೊದಲಾದ ಹಿಮ್ಮೇಳವೇನೂ ಇರಲಿಲ್ಲ. ಆ ವಿದ್ವಾಂಸರು ಸುಮಾರು ಒಂದೂವರೆ ಘಂಟೆ-೪ ರಿಂದ ೬ರ ವರೆಗೋ ಏನೋ-ಕುಚೇಲೋಪಾಖ್ಯಾನವನ್ನು ಸಂಸ್ಕೃತ ಭಾಷೆಯಲ್ಲಿ ಕಥಾರೂಪದಲ್ಲಿ ಹೇಳಿದರು. ಕಥೆ ಮುಗಿಯುತ್ತಿದ್ದಾಗ ಶಾಸ್ತ್ರಿಗಳು ಸಭೆಯಿಂದ ಕೊಂಚ ಹೊರಕ್ಕೆ ಬಂದು ನನ್ನನ್ನು ಕರೆದರು. ಇನ್ನಿಬ್ಬರು ಮೂವರು ಸ್ನೇಹಿತರೂ ಅಲ್ಲಿಗೆ ಬಂದರು. ಅವರ ಪೈಕಿ ಎಸ್. ಜಿ. ಶಾಸ್ತ್ರಿಗಳೂ, ಡಾ ॥ ಬಿ.ಕೆ. ನಾರಾಯಣರಾಯರೂ ಇದ್ದರೆಂದು ನನ್ನ ಜ್ಞಾಪಕ. ಶ್ರೀನಿವಾಸಶಾಸ್ತ್ರಿಗಳು ನನ್ನನ್ನು ಕುರಿತು ಕೇಳಿದರು:

ಶಾ: “ಸಂಭಾವನೆಗೆ ಏನು ಏರ್ಪಾಟು ಮಾಡಿದ್ದೀ?”

ನಾನು: “ಎಲ್ಲ ಸಿದ್ಧವಾಗಿದೆ. ಹೂವು, ತಾಂಬೂಲ, ತೆಂಗಿನಕಾಯಿ.”

ಶಾ: “ಅದೆಲ್ಲ ಇರಲಿ. ನಗದು ಸಂಭಾವನೆ ಏನು?”

ನಾನು: “೨೦ ರೂಪಾಯಿ, ಅಥವಾ ೨೫.”

ಶಾ: (ಇತರರ ಕಡೆಗೆ ತಿರುಗಿ) “ಎಷ್ಟು ಧಾರಾಳಿ! ೨೦ ರಿಂದ ೨೫ಕ್ಕೆ ಪ್ರೊಮೋಷನ್ ಬೇರೆ ಮಾಡಿದ್ದಾನೆ!”

ಹೀಗೆ ಹಾಸ್ಯ ಮಾಡಿದರು. ನಾನು ಅವರ ಇಂಗಿತವನ್ನು ಕಂಡುಕೊಂಡು ಹೇಳಿದೆ:

ನಾನು: “೩೦ ಮಾಡೋಣ ಸಾರ್.”

ಶಾ: (ಕೊಂಚ ಕೋಪವನ್ನು ಸೂಚಿಸಿ) “ಏನಯ್ಯಾ, ಬ್ಯಾರ (ವ್ಯಾಪಾರ) ಮಾಡುತ್ತೀಯಾ ವಿದ್ವಾಂಸರೊಡನೆ?”

ನಾನು: “ಅವರು ಎಷ್ಟು ತಪ್ಪು ಪ್ರಯೋಗಗಳನ್ನು ಮಾಡಿದರು!”

ಶಾ: “ಎರಡು ಘಂಟೆಯ ಹೊತ್ತು ಮಾತನಾಡಿದ್ದಾನೆ ಪಾಪ. ಎಲ್ಲೋ ಒಂದೆರಡು ತಪ್ಪು ಇರಬಹುದು. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆ?”

ಹೀಗೆ ವಾಗ್ವಾದ ಕೊಂಚ ಬೆಳೆಯಿತು. ಕಡೆಗೆ ಸ್ನೇಹಿತರು ನಮ್ಮ ನಡುವೆ ಪ್ರವೇಶಿಸಿ ಸಂಭಾವನೆ ೫೦ಕ್ಕೆ ಕಡಮೆ ಇರಬಾರದೆಂದು ಸೂಚಿಸಿದರು. ನಾನು ಒಪ್ಪಿಕೊಂಡೆ. ಶಾಸ್ತ್ರಿಗಳು ಅದೂ ಸಾಲದೆಂದು ಗೊಣುಗುತ್ತ ಅರೆಮನಸ್ಸಿನಿಂದ ಒಪ್ಪಿಕೊಂಡರು.

ಶಾಸ್ತ್ರಿಗಳು ಜಿಪುಣಿಯೊ, ನಾನೊ? ಸಂಭಾವನೆಯ ಹಣ ಬಂದದ್ದು ಶಾಸ್ತ್ರಿಗಳ ಬಡ ಜೇಬಿನಿಂದ.

# ನನ್ನ ಒಂದು ಸಲಹೆ

ಒಂದಾನೊಂದು ಸಾರಿ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಒಂದಾನೊಂದು ಕಾರ್ಯಭಾಗದಲ್ಲಿ ನ್ಯೂನತೆ ಉಂಟಾಗಬೇಕಾಯಿತು. ಶಾಸ್ತ್ರಿಗಳು ಆ ಸಂಸ್ಥೆಯ ಅಧ್ಯಕ್ಷರಾಗಿದ್ದರಷ್ಟೆ. ಸಂಸ್ಥೆ ನಡಸುತ್ತಿದ್ದ 'ಸೆರ್ವೆಂಟ್ಸ್ ಆಫ್ ಇಂಡಿಯ' ಎಂಬ ಇಂಗ್ಲಿಷ್ ವಾರಪತ್ರಿಕೆಯ ಹಣಕಾಸಿನ ಸ್ಥಿತಿ ಚಿಂತಾಕರವಾಗಿತ್ತು. ಏನಾದರೂ ಪ್ರಯತ್ನ ಮಾಡಿ ಪತ್ರಿಕೆಯನ್ನು ಉಳಿಸಬೇಕೆಂದು ನನ್ನ ಆಶೆ. ಅದಕ್ಕಾಗಿ ನಾನು ಕೆಲವು ಸಲಹೆಗಳನ್ನು ನಮೂದಿಸಿ ಶಾಸ್ತ್ರಿಗಳಿಗೆ ಒಂದು ಕಾಗದ ಬರೆದೆ: (೧) ಜಾಹೀರಾತುಗಳನ್ನು ಸಂಪಾದಿಸತಕ್ಕದ್ದು. (೨) ಜಾಹೀರಾತನ್ನು ಸಂಪಾದಿಸಿಕೊಡುವವರಿಗೆ ಧಾರಾಳವಾಗಿ ಕಮಿಷನ್ ಕೊಡತಕ್ಕದ್ದು. (೩) ಪತ್ರಿಕೆಯ ಮಾರಾಟಕ್ಕಾಗಿ ದೊಡ್ಡ ದೊಡ್ಡ ಊರುಗಳಲ್ಲಿ ಏಜಂಟರನ್ನು ಗೊತ್ತುಮಾಡತಕ್ಕದ್ದು. (೪) ಬೊಂಬಾಯಿ, ಮದರಾಸು, ಕಲ್ಕತ್ತ, ಬೆಂಗಳೂರು-ಇಂಥ ಪಟ್ಟಣಗಳಲ್ಲಿ ಬಸ್ ನಿಲ್ದಾಣಗಳಲ್ಲಿಯೂ ರೈಲ್ವೆ ಸ್ಟೇಷನ್ನುಗಳಲ್ಲಿಯೂ ಮಾರ್ಕೆಟ್ ಮೊದಲಾದ ಜನಸ್ತೋಮ ಇರುವ ಕಡೆಯೂ ಕೂಗಿ ಮಾರಾಟ ನಡೆಸಲು 'ಹಾಕರು' ಗಳನ್ನು (Hawkers) ಗೊತ್ತುಮಾಡತಕ್ಕದ್ದು. (೫) ಚಿತ್ರಪಟಗಳನ್ನು ಹಾಕತಕ್ಕದ್ದು. (೬) ದಪ್ಪ ಅಕ್ಷರದಲ್ಲಿ ಪೋಷ್ಟರುಗಳನ್ನು (ಗೋಡೆ ಜಾಹೀರಾತು) ಅಚ್ಚು ಮಾಡಿಸಿ ಗೋಡೆಗಳ ಮೇಲೆ ಅಂಟಿಸತಕ್ಕದ್ದು. ಇತ್ಯಾದಿ, ಇತ್ಯಾದಿ.

ಶಾಸ್ತ್ರಿಗಳು ನನ್ನನ್ನು ಪರಿಹಾಸ ಮಾಡಿ ಹೀಗೆ ಬರೆದರು: "ನೀನು ವ್ಯಾಪಾರ ವಿಚಾರವನ್ನು ಮನಸ್ಸಿಗೆ ಹಚ್ಚಿಕೊಂಡು ತಲೆ ಕೆಡಿಸಿಕೊಂಡಿದ್ದೀ. ವ್ಯಾಪಾರವಿಚಾರ ನಮಗೇಕಯ್ಯ? ಅದು ನಮ್ಮ ಕರ್ತವ್ಯವಲ್ಲ. ನಮ್ಮದೇನಿದ್ದರೂ ಬರೆಯುವುದು; ಆದಷ್ಟು ಚೆನ್ನಾಗಿ ಬರೆಯುವುದು. ಬೇಕೂಫರು ಕೊಂಡುಕೊಳ್ಳದಿದ್ದರೆ ಅವರು ಇನ್ನೂ ದೊಡ್ಡ ಬೇಕೂಫರಾಗುತ್ತಾರೆ. (If the fools don't buy, the greater fools they.)"

# ನಟೇಶನ್‌ರವರ ಪಾಠ

ಇಂಥ ಸಂದರ್ಭ ಇನ್ನೊಂದು ಜ್ಞಾಪಕಕ್ಕೆ ಬರುತ್ತದೆ. ೧೯೨೩-೨೪ರಲ್ಲಿ ನಾನು ‘Indian Review of Reviews’ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಬಹುಶಃ ಮೂರೋ ನಾಲ್ಕೋ ಸಂಚಿಕೆಗಳನ್ನು ಹೊರಡಿಸಿದ್ದೆ. ಆ ಸುಮಾರಿನಲ್ಲಿ ಮದರಾಸಿನ ‘ಇಂಡಿಯನ್ ರೆವ್ಯು’ ಪತ್ರಿಕೆಯ ಸಂಪಾದಕರಾಗಿ ಮಹಾ ಪ್ರಸಿದ್ಧರಾದ ಜಿ.ಎ. ನಟೇಶನ್ ಅವರು ಬೆಂಗಳೂರಿಗೆ ಬಂದು ಶಾಸ್ತ್ರಿಗಳ ಅತಿಥಿಯಾಗಿ ಅವರ ಮನೆಯಲ್ಲಿ ಇಳಿದುಕೊಂಡಿದ್ದರು. ಅವರಿಬ್ಬರೂ ತುಂಬ ಸ್ನೇಹಿತರು, ಸಲಿಗೆಯಿಂದ ಮಾತನಾಡುವರು.

ಒಂದು ದಿನ ಬೆಳಿಗ್ಗೆ ನಾನು ಶಾಸ್ತ್ರಿಗಳ ಮನೆಯಲ್ಲಿ ನಡುಮನೆಯಲ್ಲಿ ಕುಳಿತು ಶಾಸ್ತ್ರಿಗಳ ಕಮಲಾ ಲೆಕ್ಚರ್ಸ್ ಲೇಖನದ ಕರಡಚ್ಚನ್ನು ತಿದ್ದುತ್ತಿದ್ದೆ. ನಾನು ಕುಳಿತಿದ್ದ ಜಾಗದ ಪಕ್ಕದಲ್ಲಿಯೇ ನಟೇಶನ್‌ರವರ ಬಿಡದಿಯ ಕೊಠಡಿ. ಹಾಲಿನ ಎದುರುಗಡೆಯ ಕೊನೆಯಲ್ಲಿ ಶಾಸ್ತ್ರಿಗಳು ಜಮಖಾನದ ಮೇಲೆ ಕುಳಿತು ಓದಿಕೊಳ್ಳುತ್ತಿದ್ದರು. ನಟೇಶನ್‌ರವರು ನನ್ನ ಬಳಿಗೆ ಬಂದು ನನ್ನ ಪತ್ರಿಕೋದ್ಯಮವನ್ನು ಕುರಿತು ಮೆಚ್ಚಿಕೆಯ ಮಾತುಗಳನ್ನಾಡಿ,

“ನೀನು ಇಷ್ಟು ಬುದ್ಧಿವಂತ. ಇಷ್ಟೆಲ್ಲ ಕಷ್ಟಪಟ್ಟು ಕೆಲಸ ಮಾಡುತ್ತಿದ್ದೀ. ಆದರೆ ಕಾಸಿನ ವಿಚಾರದಲ್ಲಿ ನಿನ್ನ ವ್ಯಾಪಾರ ಬಹು ಹೀನವಾಗಿದೆ. ನೀನು ಜಾಹೀರಾತುಗಳನ್ನು ಸಂಪಾದಿಸದೆ ಹೀಗೆ ಮಾಡಿದರೆ ಮುಳುಗಿ ಹೋಗುತ್ತೀ.” -ಹೀಗೆ ಹೇಳಿ ಜಾಹೀರಾತುಗಳನ್ನು ಸಂಪಾದಿಸುವ ವಿಧಾನ, ಜಾಹೀರಾತುಗಳನ್ನು ಆಕರ್ಷಕವಾಗಿ ಮಾಡುವ ವಿಧಾನ, ಪತ್ರಿಕೆಯ ಯಾವ ಯಾವ ಭಾಗಕ್ಕೆ ಎಂಥೆಂಥ ಕಾಗದವನ್ನು ಉಪಯೋಗಿಸಬೇಕು -ಇದೇ ಮೊದಲಾದ ವ್ಯಾಪಾರದ ವಿಷಯಗಳನ್ನು ಕುರಿತು ನನಗೆ ಉಪದೇಶ ಮಾಡಿದರು. ಇದನ್ನು ಎದುರುಗಡೆ ದೂರದಲ್ಲಿ ಕುಳಿತಿದ್ದ ಶಾಸ್ತ್ರಿಗಳು ಎಂಟು ಹತ್ತು ನಿಮಿಷ ಕೇಳಿ ಮುಖದ ಮೇಲೆ ಬೇಸರ ಕಾಣಬಂದು ಹೇಳಿದರು:

“ಎಲಾ ನಟೇಶ! ಅವನಿಗೆ ಯಾಕೆ ಇದನ್ನೆಲ್ಲ ಹೇಳುತ್ತಿ? ಇದು ನಿನಗೆ ಮರೆಯುವುದಿಲ್ಲ, ಅವನಿಗೆ ಬರುವುದಿಲ್ಲ. ಅವನು ನಮ್ಮ ವೆಂಕಟರಂಗರಾಯರ ಹಾಗೆ: ‘ಜಯ ಸಂಪಾದನೆ ಪಾಪ’ ಎಂದುಕೊಂಡಿದ್ದಾನೆ. (He believes that success in business is a sin). ಅವನ ಹಣೆಬರಹ-ಅವನು ಪಟ್ಟುಕೊಳ್ಳಲಿ.”

ಅವರ ಈ ಮಾತು ವ್ಯಾಪಾರವಿಷಯದಲ್ಲಿ ಅವರಿಗಿದ್ದ ಬೇಸರವನ್ನೂ ನಿರಾಶೆಯನ್ನೂ ತೋರಿಸುತ್ತದೆ. ಆ ವಿಷಯದಲ್ಲಿ ಅವರು ಎಷ್ಟು ಮಾತ್ರವೂ ನನಗಿಂತ ಸಮರ್ಥರಾಗಿರಲಿಲ್ಲ. ನನ್ನಂತೆಯೇ ಪ್ರಯತ್ನ ಮಾಡಿ ಕೈ ಸುಟ್ಟುಕೊಂಡಿದ್ದವರು ಅವರು.

# ಹಾಸನ ಪ್ರವಾಸ

ಶ್ರೀನಿವಾಸಶಾಸ್ತ್ರಿಗಳ ಜೊತೆಯಲ್ಲಿ ಹಾಸನಕ್ಕೆ ಪ್ರವಾಸ ಹೊರಟಿದ್ದ ಪಾರ್ಟಿಯ ಪೈಕಿ ನಾನೂ ಒಬ್ಬ. ನಾವು ಹಾಸನಕ್ಕೆ ಹೋಗಿ ಟ್ರಾವೆಲರ್ಸ್ ಬಂಗಲೆಯಲ್ಲಿ ಬಿಡಾರ ಮಾಡಿದ್ದೆವು. ಆಗ ಕೆ. ಮೈಲಾರರಾಯರು ಹಾಸನದ ಡೆಪ್ಯುಟಿ ಕಮಿಷನರಾಗಿದ್ದರು. ಶಾಸ್ತ್ರಿಗಳಿಗೂ ಅವರ ಮಿತ್ರಪರಿವಾರಕ್ಕೂ ಅನುಕೂಲ ವ್ಯವಸ್ಥೆ ಮಾಡಬೇಕೆಂದು ಮೈಲಾರರಾಯರಿಗೆ ಸರಕಾರದ ಕಡೆಯಿಂದ ಬೇಡಿಕೆ ಬಂದಿತ್ತು. ಆದರೆ ಆ ದಿನ ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಶ್ರೀಮನ್ಮಹಾರಾಜರಿಂದ 'ಬಾರಾ ಹಜಾರ್' ಸಂತರ್ಪಣೆ ಗೊತ್ತಾಗಿದ್ದ ಕಾರಣ ಆ ದೇವತಾಕಾರ್ಯದ ಮೇಲ್ವಿಚಾರಣೆಗಾಗಿ ಮೈಲಾರರಾಯರು ಆ ಸ್ಥಳಕ್ಕೆ ಹೋಗುವುದು ಅನಿವಾರ್ಯ ಕರ್ತವ್ಯವಾಗಿತ್ತು. ಈ ಸಂದರ್ಭದಲ್ಲಿ ಅತಿಥಿಸತ್ಕಾರ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಮೈಲಾರರಾಯರು ತಮ್ಮ ಸಹೋದ್ಯೋಗಿ ಅಸಿಸ್ಟೆಂಟ್ ಕಮಿಷನರ್ ವಿ. ಎಸ್. ವಾಸುದೇವರಾಯರನ್ನು ಕೋರಿದ್ದರು. ಅದರಂತೆ ಆ ಸಂಜೆ ವಾಸುದೇವರಾಯರು ಶಾಸ್ತ್ರಿಗಳನ್ನು ಕಾಣಲು ಬಂಗಲೆಗೆ ಬಂದರು. ಅದೇ ಹೊತ್ತಿಗೆ ಸರಿಯಾಗಿ ನಾವು ಮುಖ್ಯ ಕಟ್ಟಡದಿಂದ ಊಟದ ಮನೆಯ ಕಡೆಗೆ ನಡೆದು ಹೋಗುತ್ತಿದ್ದೆವು. ಮುಂದೆ ಒಬ್ಬ ಆಳು ಕೈಯಲ್ಲಿ ಲಾಂದರ ಹಿಡಿದು ನಡೆಯುತ್ತಿದ್ದ. ಆತನ ಹಿಂದೆ ಶ್ರೀನಿವಾಸಶಾಸ್ತ್ರಿಗಳು, ಡಾ ॥ ಸಿ. ಬಿ. ರಾಮರಾಯರು, ವಾಜಪೇಯಂ ವೆಂಕಟಸುಬ್ಬಯ್ಯ ಮತ್ತು ಇತರರು. ಈ ಮಸಕು ಮಬ್ಬಿನ ಹೊತ್ತಿನಲ್ಲಿ ನಾವು ಹೋಗುತ್ತಿದ್ದಾಗ ನಮ್ಮ ಹಿಂದುಗಡೆಯಿದ್ದ ಒಬ್ಬಾತ ಅವಸರವಸರವಾಗಿ ಬಂದು ಶಾಸ್ತ್ರಿಗಳ ಬಳಿ ಹೋಗಿ ನಮಸ್ಕಾರ ಹೇಳಿದ. ಆತ ಯಾರೆಂಬುದು ಶಾಸ್ತ್ರಿಗಳಿಗೆ ಆ ಕೂಡಲೆ ನಿಷ್ಕರ್ಷೆಯಾಗಿ ತಿಳಿಯಲಿಲ್ಲ; ದಿಟ್ಟಿಸಿ ನೋಡಿದರು. ಎರಡು ಕಣ್ಣುಗಳ ಮೇಲೂ ಕೈಯನ್ನು ಓರೆಯಾಗಿಟ್ಟುಕೊಂಡು ದೃಷ್ಟಿಯನ್ನು ಕೇಂದ್ರೀಕರಿಸಿ ನೋಡಿದರು. ಹಾಗೆ ನೋಡುತ್ತ

"ವಾಸುದೇವನೇಡಾ?" (ವಾಸುದೇವನೇನೊ?)-ಎಂದು ಕೇಳಿದರು. ಆತ ವಿನಯದಿಂದ "ಆಮ" (ಹೌದು) ಎಂದು ಉತ್ತರ ಕೊಟ್ಟ.

# ವಾಸುದೇವರಾಯರು

ಶಾಸ್ತ್ರಿಗಳು ಆ ಕ್ಷಣವೇ ನನ್ನ ಕಡೆಗೆ ತಿರುಗಿ, "ಸಾರ್, ರೆಂಡು ಲಕ್ಷ ರುಪಾ ವಾಯಾಲೆ ಪೋಟ್ಟುಂಡು ತಿನ್ನವುಟ್ಟುವಾಳ ಪಾತ್ತಿರುಕ್ಕಿರುಂಗಳಾ?" (ಎರಡು ಲಕ್ಷ ರೂಪಾಯನ್ನು ಬಾಯಲ್ಲಿ ಹಾಕಿಕೊಂಡು ನುಂಗಿರುವವರನ್ನು ನೀವು ನೋಡಿದ್ದೀರಾ?)

ನಾನು: "ವಿಷಯ ಚೆನ್ನಾಗಿ ತಿಳಿಯಲಿಲ್ಲ."

ಶಾ: "ಎರಡು ಲಕ್ಷರೂಪಾಯಿ ಸ್ವತ್ತು ಸಾರ್. ಲಡ್ಡು, ಚಿರೋಟಿ, ಫೀವರ್, ಜಿಲೇಬಿ-ಇದನ್ನೆಲ್ಲ ದಿನಾಗಲೂ ಮಾಡಿಸಿ ತಿಂದು ತಿಂದು ತಿಂದು ಸ್ವತ್ತು ಧ್ವಂಸಮಾಡಿದರು ಇವರು. ಏನು ವಾಸುದೇವ?"

ವಾ: (ನಗುತ್ತ) "ಹೌದು ಹೌದು."

ಶಾ: "ನಾನೂ ತಿಂದಿದ್ದೇನೆ ಸಾರ್ ಇವರ ಮನೆಯ ತಿಂಡಿಯನ್ನು. ನನ್ನ ಹಳ್ಳಿ ವಳಂಗಿಮಾನ್‌ಗೂ ಇವರ ಊರಾದ ಕುಂಭಕೋಣಕ್ಕೂ ನಾಲ್ಕೈದು ಮೈಲಿ. ನಾನು ಬೆಳಗ್ಗೆ ಊಟವನ್ನು ಮನೆಯಲ್ಲಿ ಮುಗಿಸಿಕೊಂಡು ಕಾಲೇಜಿಗೆ ಬರುತ್ತಿದ್ದೆ. ಮಧ್ಯಾಹ್ನದ ಫಲಾಹಾರ ಇವರ ಮನೆಯಲ್ಲಿ. ಒಂದು ದಿನ ತಪ್ಪದೆ ಇಡ್ಲಿ, ಕಡಬು, ಭಕ್ಷ್ಯಗಳು-ಇಪ್ಪತ್ತುಮೂವತ್ತು ಮಂದಿಗೆ. ಹೀಗೆ ತಿಂದೂ ತಿಂದೂ ತಿಂದೂ ಆ ಮನೆ ಸವೆಯಿತು. ಏನು ವಾಸುದೇವ? ಮನೆ ಇದೆಯೊ?"

ವಾ: "(ನಗುತ್ತ) "ಇಲ್ಲ-ಹೋಯಿತು."

ಶಾ: "ಹಾಗೆ ತಿಂದು ತಿನ್ನಿಸಿದರೆ ಎಷ್ಟು ಮನೆ ಇದ್ದರೆ ಉಳಿದೀತು?"

ಇಲ್ಲಿ ಪ್ರಸ್ತಾವಿಸಿರುವ ವಾಸುದೇವರಾಯರು ವೃತ್ತಪತ್ರಿಕಾ ಪ್ರಪಂಚದಲ್ಲಿ ಪ್ರಸಿದ್ಧರಾದ ವಿ. ಎಸ್. ಸಂಜೀವರಾಯರ ತಮ್ಮಂದಿರು.

# ನನ್ನ ಬುದ್ಧಿವಂತಿಕೆ

ಮೇಲಣ ಪ್ರಸಂಗ ನಡೆದ ಮಾರನೆಯ ದಿನ ಸಂಜೆ ಹಾಸನದ ಪ್ರಮುಖ ಮಹಾಜನ ಶಾಸ್ತ್ರಿಗಳನ್ನು ನೋಡಲು ಬಂಗಲೆಗೆ ಬಂದರು. ಎಸ್. ವೆಂಕಟೇಶಯ್ಯನವರೇ ಮೊದಲಾದ ಜನನಾಯಕರು ಅವರಲ್ಲಿದ್ದರು. ಇಷ್ಟು ಮಂದಿ ಮಹನೀಯರು-ಹದಿನೈದಿಪ್ಪತ್ತು ಮಂದಿ-ಶಾಸ್ತ್ರಿಗಳೊಡನೆ ಮಾತುಕಥೆಯಾಡಲು ಬಂದಿದ್ದಾಗ ಅವರ ಉದ್ದೇಶಕ್ಕೆ ನಮ್ಮಿಂದ ಕೊಂಚವೂ ಭಂಗಬರಬಾರದೆಂದು ಯೋಚಿಸಿ ವೆಂಕಟಸುಬ್ಬಯ್ಯನೂ ನಾನೂ ಕಟ್ಟಡದ ಒಳಗಡೆ ಬೇರೆಯವರೊಡನೆ ಮಾತನಾಡಿಕೊಂಡಿದ್ದೆವು. ಹೊರಗಡೆ ನಡೆಯುತ್ತಿದ್ದ ಮಾತು ನಮಗೂ ಅಷ್ಟಿಷ್ಟು ಕೇಳಬರುತ್ತಿತ್ತು. ಬಂದಿದ್ದ ಮಹನೀಯರಲ್ಲಿ ಒಬ್ಬರು ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಜೀವನಕ್ಕೆ (ಪಬ್ಲಿಕ್ ಲೈಫ್) ಇರುವ ಪ್ರತಿಬಂಧಕಗಳನ್ನು ಕುರಿತು ಹೇಳುತ್ತಿದ್ದರು.

"ಪತ್ರಿಕಾನಿರ್ಬಂಧದ ಕಾನೂನಿನ ಕಾರಣದಿಂದ ಜನಕ್ಕೆ ಸ್ವಾತಂತ್ರ್ಯವೇ ಇಲ್ಲ. ಜನ ಜೀವನ ಕುಗ್ಗಿಹೋಗಿದೆ. ಆ ಪೀಡೆಯ ಕಾರಣದಿಂದ ಇಲ್ಲಿ ಸಾರ್ವಜನಿಕವೆಂಬುದೇ ಇಲ್ಲ..."

ಎಂದು ಮುಂತಾಗಿ ಪ್ರಲಾಪ ಮಾಡಿದರು. ಮಿಕ್ಕವರು ಇದಕ್ಕೆ ಕೊಂಚ ಕೊಂಚ ಊಂಗುಟ್ಟುತ್ತಿದ್ದರು. ಕಡೆಗೆ ಶಾಸ್ತ್ರಿಗಳು ಹೇಳಿದರು:

"ಏನಯ್ಯಾ-ಆ ಪತ್ರಿಕಾವಾಗ್ಬಂಧ ಕಾನೂನನ್ನು ಉಪಯೋಗಿಸಿದವರೇ ಇಲ್ಲ. ಮಹನೀಯರಾದವರು ವಿಶ್ವೇಶ್ವರಯ್ಯನವರು, ಅಂಥವರ ಕಾಲದಲ್ಲಿ ಆ ಕಾನೂನು ಸತ್ತುಹೋಗುತ್ತದೆ. ಅನಂತರ ಬಂದ ದಿವಾನರುಗಳು ಯಾರೂ ಆ ಕಾನೂನನ್ನು ಪ್ರಯೋಗಿಸಲಿಲ್ಲ. ಅದು ಸತ್ತ ಕಾನೂನು. ಒಂದು ವೇಳೆ ಅದು ಪುಸ್ತಕದಲ್ಲಿದ್ದರೆ ಅದರ ಭಯ ಪತ್ರಿಕಾಕರ್ತರಿಗೆ. ಸಾರ್ವಜನಿಕರಾದ ನೀವು ನಿಮ್ಮ ಕರ್ತವ್ಯ ನಡಸುವುದಕ್ಕೆ ಆ ಕಾನೂನು ಅಡ್ಡ ಬರುತ್ತದೆಯೆ? ಚೋದ್ಯವಾಗಿದೆ ನೀವು ಹೇಳುವುದು."

ಹೀಗೆ ಶಾಸ್ತ್ರಿಗಳು ಪ್ರತಿವಾದವೆತ್ತಿದಾಗ ಎಲ್ಲರೂ ಸುಮ್ಮನಾದರು. ಒಂದೆರಡು ನಿಮಿಷ ಮೌನ. ಆಮೇಲೆ ನಾನೂ ವೆಂಕಟಸುಬ್ಬಯ್ಯನೂ ಹೊರಕ್ಕೆ ಬಂದು ಅವರೊಡನೆ ಕಲೆತೆವು. ಎರಡು ನಿಮಿಷ ಉಪಚಾರೋಕ್ತಿಗಳಾದ ಮೇಲೆ ಬಂದಿದ್ದ ವಿಸಿಟರುಗಳು

ಮೇಲಕ್ಕೇಳುವುದರಲ್ಲಿದ್ದರು. ಅವರಲ್ಲೊಬ್ಬರು ನನ್ನನ್ನು ಕರೆದು ಎರಡುಮೂರು ಹೆಜ್ಜೆ ಬೇರೆಯಾಗಿ ಕರೆದುಕೊಂಡುಹೋಗಿ ಹೇಳಿದರು:

“ನಾನು ಪತ್ರಿಕೆಯ ಚಂದಾ ಮೂರುನಾಲ್ಕು ವರ್ಷದ್ದೋ ಏನೋ ನಿಮಗೆ ಬಾಕಿ ಕೊಡಬೇಕಾಗಿತ್ತು. ಕಳಿಸಬೇಕೆಂದು ಆಗಾಗ ಅಂದುಕೊಂಡೆ. ಮರೆತುಹೋಯಿತು. ಈಗ ನಿಮ್ಮನ್ನು ನೋಡಿದ ಮೇಲೆ ಜ್ಞಾಪಕಕ್ಕೆ ಬಂತು. ಈಗ ಇದನ್ನು ತೆಗೆದುಕೊಳ್ಳಿ. ಈ ಕಟ್ಟಿನಲ್ಲಿ ಎರಡೋ ಮೂರೋ ನೋಟುಗಳು ಖರ್ಚಾಗಿದೆ. ಇಪ್ಪತ್ತೆರಡೋ ಇಪ್ಪತ್ತಮೂರೋ ರೂಪಾಯಿ ಇರಬಹುದು. ಬಾಕಿ ಏನಾದರೂ ಇದ್ದರೆ ತಿಳಿಸಿ; ಕಳಿಸುತ್ತೇನೆ.”

ನಾನು: “ಇದಕ್ಕೇನು ಅವಸರವಾಗಿತ್ತು? ಇದು ನಿಮ್ಮಲ್ಲೇ ಇರಲಿ. ಬೆಂಗಳೂರಿಗೆ ಹೋಗಿ ಲೆಕ್ಕ ನೋಡಿ ನಿಮಗೆ ಬರೆಯುತ್ತೇನೆ. ಆಗ ಕಳಸಿದರೆ ಸರಿ. ಎಲ್ಲಿ ಹೋಗ್ತದೆ ನಿಮ್ಮಲ್ಲಿದ್ದರೆ?”

ಹೀಗೆ ಹೇಳಿ ಆ ನೋಟಿನ ಪುಸ್ತಕವನ್ನು ಹಿಂತಿರುಗಿಸಿದೆ.

ಇದನ್ನು ನೋಡುತ್ತಿದ್ದ ವೆಂಕಟಸುಬ್ಬಯ್ಯನಿಗೆ ಮೈಯೆಲ್ಲ ಉರಿ ಬಂದಂತಾಗಿರಬೇಕು. ಆ ವಿಸಿಟರು ಬೆನ್ನು ತಿರುಗಿಸಿದ ಕೂಡಲೆ ನನ್ನನ್ನು ಕುರಿತು

“ಬೇಕೂಫ ಮುಂಡೇದು. ಶುದ್ಧ ಮುಠ್ಠಾಳ. ಬರಬೇಕಾಗಿದ್ದ ಹಣವನ್ನು ಹಿಂದಕ್ಕೆ ಕೊಟ್ಟೆಯಲ್ಲಾ!”

-ಎನ್ನುತ್ತ ಶಾಸ್ತ್ರಿಗಳವರಲ್ಲಿ ಇದನ್ನು ಹೇಳಿದ. ಶಾಸ್ತ್ರಿಗಳು

ಶಾ: “ಅಶಡು ಸಾರ್, ಅಶಡು. ಇದಕ್ಕೆ ಕಾಸು ಕೈಗಂಟುವುದಿಲ್ಲ, ಇಂಥ ಅವಿವೇಕ ಉಂಟೆ? ಎಷ್ಟು ಬರಬೇಕಾಗಿತ್ತು?”

ನಾನು: “ನಾಲ್ಕೆಂಟಲ ಮೂವತ್ತೆರಡು-ನಾಲ್ಕು ವರ್ಷದ ಚಂದಾ.”

ವೆಂಕಟಸುಬ್ಬಯ್ಯ ಎಡಗೈಯ ಮೂರು ಬೆಟ್ಟುಗಳನ್ನು ಮೇಲೆ ಮಾಡಿ ಹೇಳಿದ: “ಪಂಗನಾಮ ಹಾಕಿಕೊ.”

ಶಾ: “ನಿನ್ನ ಕೈಗೆ ಏನಾದರೂ ಹಣ ಒಪ್ಪಿಸಿದರೆ ಒಪ್ಪಿಸಿದವನು ಕೆಟ್ಟ. ಬಂದಷ್ಟನ್ನು ತೆಗೆದುಕೊಳ್ಳುವುದನ್ನು ಬಿಟ್ಟು ‘ಎಲ್ಲ ಒಟ್ಟಿಗೆ ತೆಗೆದುಕೊಳ್ಳೋಣ’ ಎಂದೆಯಲ್ಲ

ಮಹಾಸಾಹುಕಾರ!" ಹೀಗೆ ಚೀಮಾರಿಯಾಯಿತು.

ಈ ಸಂದರ್ಭದಲ್ಲಿ ಇನ್ನೊಂದು ಸ್ವಂತ ಸಂಗತಿಯನ್ನು ಹೇಳುತ್ತೇನೆ.

# ರಾಜಾಜಿಯವರ ಹಿತವಾದ

ಎರಡನೆಯ ಪ್ರಪಂಚಯುದ್ಧ ಮುಗಿದ ತರುವಾಯ ಆ ಯುದ್ಧದ ಅತಿರಥ ಮಹಾರಥರುಗಳಾದ ಚರ್ಚಿಲ್, ರೂಸ್‌ವೆಲ್ಟ್, ಕ್ಲೆಮೆನ್ಸೊ ಮೊದಲಾದವರು ಪ್ರಪಂಚದಲ್ಲಿ ಇನ್ನು ಮುಂದೆ ಯುದ್ಧ ಎಂದೆಂದಿಗೂ ನಡೆಯದಂತೆ ಮಾಡಲು ಅಟ್ಲಾಂಟಿಕ್ ಚಾರ್ಟರ್ ಘೋಷಣೆ, ಯುನೈಟೆಡ್ ನೇಷನ್‌ಸ್ ಎಂಬ ಜಾನಪದ ಸಂಘದ ಸ್ಥಾಪನೆ ಮೊದಲಾದ ಜಗದ್ವಿಸ್ತಾರವಾದ ಪ್ರಯತ್ನಗಳನ್ನು ಕೈಕೊಂಡರಷ್ಟೆ. ಅದರಿಂದ ನನ್ನ ಉತ್ಸಾಹ ಕೆರಳಿತು. ವಿಶ್ವಶಾಂತಿಗಾಗಿ ನಾವು ಏನೂ ಮಾಡಬೇಡವೆ? ಈ ಹೊಸ ವ್ಯವಸ್ಥೆಗಳಲ್ಲಿ ಸಾವಿರ ಸಾವಿರ ಪ್ರಶ್ನೆಗಳು ಹುಟ್ಟುತ್ತವೆ. ಅವುಗಳನ್ನು ವಿಮರ್ಶಿಸಬೇಡವೆ? ಒಳ್ಳೆಯ ಪ್ರಪಂಚದ ರೂಪರೇಖೆಗಳನ್ನು ಪ್ರತ್ಯಕ್ಷವಾಗಿ ನಕಾಶೆ ಮಾಡಿ ತೋರಿಸಬೇಡವೆ? ಈ ಮಹಾಪ್ರಯತ್ನಕ್ಕೆ ಮೀಸಲಾಗಿ ಒಂದು ಪತ್ರಿಕೆ ಆವಶ್ಯಕ.

ಹೀಗೆಂಬ ಉದ್ದೇಶವನ್ನು ವಿವರಿಸಿ ಸಲಹೆ ಬೇಕೆಂದು ಕೇಳಿ ಶ್ರೀಮಾನ್ ಸಿ. ರಾಜಗೋಪಾಲಾಚಾರಿಯವರಿಗೆ ಪತ್ರ ಬರೆದೆ. ಅವರು ಎರಡೇ ಪಂಕ್ತಿ ಉತ್ತರ ಬರೆದರು.

“ಬೇಡ, ಈಗಾಗಲೇ ಬೇಕಾದಷ್ಟು ಕೈ ಸುಟ್ಟುಕೊಂಡಿದ್ದೀ” (Don't. You have burnt your fingers enough!)

ಯಾವ ದೈವದ ಪ್ರೇರಣೆಯಿಂದಲೋ ನಾನು ಈ ಉಪದೇಶವನ್ನು ಅಂಗೀಕರಿಸಿದೆ. ಆದದ್ದರಿಂದ ಈಗ ಈ ಲೇಖನ ಬರೆಯಲು ಬದುಕಿರುವುದು ಸಾಧ್ಯವಾಗಿದೆ.

# ಕೇರಳ ಪ್ರವಾಸ

೧೯೨೬ ರ ಸುಮಾರಿನಲ್ಲಿ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳಿಗೆ ಕೊಚ್ಚಿನ್ ಸಂಸ್ಥಾನದ ಎರ್ನಾಕುಲಂ ಪಟ್ಟಣದ ಮಹಾರಾಜಾ ಕಾಲೇಜಿನಿಂದ ಒಂದು ಆಹ್ವಾನ ಬಂತು. ಅದು ಕೊಚ್ಚಿಯ ಮಹಾಜನದ ಪರವಾದ ಆಹ್ವಾನ. ಆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎಸ್.ಕೆ. ಸುಬ್ರಹ್ಮಣ್ಯ ಅಯ್ಯರ್ ಎಂಬವರು ಶಾಸ್ತ್ರಿಗಳ ಸ್ನೇಹಿತರು. ಅವರು ಶಾಸ್ತ್ರಿಗಳನ್ನು ಎರ್ನಾಕುಲಂಗೆ ದಯಮಾಡಿಸಬೇಕೆಂದೂ, ಅಲ್ಲಿಯ ಕಾಲೇಜಿನಲ್ಲಿ ಮೂರು ನಾಲ್ಕು ಉಪನ್ಯಾಸ ಕೊಡಬೇಕೆಂದೂ, ಉಪನ್ಯಾಸಗಳ ವಿಷಯ ಪ್ರಕೃತೋಪಯೋಗಿಯಾದ ಯಾವ ಸಾರ್ವಜನಿಕ ಪ್ರಶ್ನೆಯಾದರೂ ಆಗಬಹುದೆಂದೂ ವಿಜ್ಞಾಪಿಸಿದರು. ಮತ್ತು ತಾವು ಶಾಸ್ತ್ರಿಗಳಿಗೆ ಕೊಚ್ಚಿಯ ಮಹಾಜನದ ಅಭಿಲಾಷೆಯನ್ನು ಸೂಚಿಸಿರುವಂತೆ ಬರೆದರು:

ಶಾಸ್ತ್ರಿಗಳು ಆ ಆಹ್ವಾನವನ್ನು ನನಗೆ ತೋರಿಸಿ ಕೇಳಿದರು:

"ಇದಕ್ಕೆ ನಿನ್ನ ಉತ್ತರವೇನು?"

"ಇದು ಅವಶ್ಯವಾಗಿ ತಾವು ಒಪ್ಪಿಕೊಳ್ಳಬೇಕಾದ ಆಹ್ವಾನ. ದೇಶೀಯ ಸಂಸ್ಥಾನಗಳ ಪ್ರಶ್ನೆಯನ್ನು ಮಹಾಜನದ ಗಮನಕ್ಕೆ ತರಲು ಇದು ಒಳ್ಳೆಯ ಅವಕಾಶವಾಗಬಹುದು."

# ಚರ್ಚೆ

ಕೊಂಚ ಚರ್ಚೆ ನಡೆದ ಮೇಲೆ ಶಾಸ್ತ್ರಿಗಳು ಆಹ್ವಾನವನ್ನು ಅಂಗೀಕರಿಸಿದರು. ಕೊಂಚ ಚರ್ಚೆ ಎಂದು ಹೇಳಿದೆ. ಅದಕ್ಕೆ ಕಾರಣ ಒಂದಿತ್ತು. ಅದುವರೆಗೆ ಬ್ರಿಟಿಷ್ ಇಂಡಿಯದ ರಾಜಕಾರಣಿಗಳು ದೇಶೀಯ ಸಂಸ್ಥಾನಗಳ ವಿಚಾರಕ್ಕೆ ಕೈ ಹಾಕುವ ವಾಡಿಕೆಯಿರಲಿಲ್ಲ. ಬ್ರಿಟಿಷ್ ಇಂಡಿಯದ ನಾಯಕರು ದೇಶೀಯ ಸಂಸ್ಥಾನಗಳ ರಾಜಕೀಯವನ್ನು ತಮಗೆ ನಿಷಿದ್ಧವೆಂದೇ ಭಾವಿಸಿದ್ದರು. ಶಾಸ್ತ್ರಿಗಳು ಗೋಖಲೆಯವರ ದೇಶೀಯ ಸಂಸ್ಥಾನಗಳ ರಾಜಕೀಯಕ್ಕೆ ತಮ್ಮ ಸಂಘದ ಸದಸ್ಯರುಗಳು ಬಾಯಿ ಹಾಕತಕ್ಕದ್ದಲ್ಲವೆಂದೇ ಮನಸ್ಸಿನಲ್ಲಿ ನಿಷ್ಕರ್ಷೆ ಮಾಡಿಕೊಂಡಿದ್ದರು. ಮೈಸೂರಿನಲ್ಲಿ ಆನಂದರಾಯರು ದಿವಾನರಾಗಿದ್ದಾಗ ಶಾಸ್ತ್ರಿಗಳು ಬೆಂಗಳೂರಿಗೆ ಬಂದು ಇಲ್ಲಿ ಅವರು ಕೊಡಲೊಪ್ಪಿದ್ದ ಭಾಷಣದ ಸಭೆಗೆ ಮೈಸೂರು ಸರಕಾರ ತಡೆಹಾಕಿತ್ತಷ್ಟೆ? ಆ ಸಂದರ್ಭದಲ್ಲಿ ಗೋಖಲೆಯವರು ತಮ್ಮ ಸಂಘದವರಿಗೆ ಕೊಟ್ಟಿದ್ದ ಪ್ರತಿಷೇಧಾಜ್ಞೆ ಸ್ಪಷ್ಟವಾಗಿ ತಿಳಿಯಿತು. ಹೀಗೆ ಗೋಖಲೆಯವರು ನಿಷೇಧ ಮಾಡಿದ್ದ ವಿಷಯಕ್ಕೆ ಶಾಸ್ತ್ರಿಗಳು ಕೈ ಹಾಕತಕ್ಕದ್ದೆ? ಇದು ಚರ್ಚೆಗೆ ಕಾರಣ.

ಇದರಲ್ಲಿ ನನ್ನ ವಾದ ಹೀಗಿತ್ತು: “ಬ್ರಿಟಿಷ್ ಇಂಡಿಯದ ಪ್ರಶ್ನೆಯು ಬಗೆಹರಿಯಬೇಕಾದರೆ ಸಮಸ್ತ ಇಂಡಿಯದ ಪ್ರಶ್ನೆ ತೊಡಕಿಲ್ಲದ್ದಾಗಬೇಕು. ಆ ತೊಡಕು ಉಳಿದುಕೊಂಡಿರುವವರೆಗೂ ಬ್ರಿಟಿಷ್ ಇಂಡಿಯಕ್ಕೆ ಉದ್ದೇಶ ಸಾಧನೆಯಾಗದು. ಸಮಗ್ರ ಇಂಡಿಯದ ಪ್ರಶ್ನೆಯಾದರೋ ದೇಶೀಯ ಸಂಸ್ಥಾನಗಳ ಕಾರಣದಿಂದ ತೊಡಕಾಗಿದೆ. ಹೀಗೆ ನೀವು ಬ್ರಿಟಿಷ್ ಇಂಡಿಯದ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾದರೆ ಮೊದಲು ಸಂಸ್ಥಾನಗಳ ತೊಡಕನ್ನು ಬಿಡಿಸಿ ನಿಮ್ಮ ಪ್ರಶ್ನೆಯನ್ನು ಸರಳ ಮಾಡಿಕೊಳ್ಳಬೇಕು. ಈ ಕಾರ್ಯಕ್ಕೆ ನೀವು ಕೈ ಹಚ್ಚದಿದ್ದರೆ ಮತ್ತಾರೂ ಅದನ್ನು ಎತ್ತಿಕೊಳ್ಳಲಾರರು. ಮತ್ತು ನೀವು ಈ ಪ್ರಶ್ನೆಯನ್ನೆತ್ತಿಕೊಂಡಾಗ ಅದಕ್ಕುಂಟಾಗುವ ಪ್ರಾಧಾನ್ಯ ಮತ್ತೊಬ್ಬರಿಂದ ಅದಕ್ಕೆ ಬರಲಾರದು. ಹೀಗೆ ಬ್ರಿಟಿಷ್ ಇಂಡಿಯದ ದೃಷ್ಟಿಯಿಂದಲೇ ಸಂಸ್ಥಾನ ವಿಚಾರವು ನಿಮಗೆ ಅವಶ್ಯ ಕರ್ತವ್ಯವಾಗಿದೆ.”

ಶಾಸ್ತ್ರಿಗಳು ತರ್ಕವನ್ನು ಅಂಗೀಕರಿಸಿದರೆಂಬುದು ನನಗೆ ಒಂದು ಹೆಮ್ಮೆಯ ಮಾತು. ನಾನು ೧೯೧೬ ರಿಂದಲೇ ಭಾರತದ ಭವಿಷ್ಯದಲ್ಲಿ ದೇಶೀಯ ಸಂಸ್ಥಾನಗಳ ಸ್ಥಾನವೇನು? ಅವು ಹೇಗೆ ಹೇಗೆ ರೂಪಾಂತರ ಪಡೆಯಬೇಕು? -ಎಂಬ ಪ್ರಶ್ನೆಗಳನ್ನು ವಿಚಾರಕ್ಕೆ

ತೆಗೆದುಕೊಂಡಿದ್ದವನಾದದ್ದರಿಂದ ಆ ಪ್ರಶ್ನೆಗೆ ಶಾಸ್ತ್ರಿಗಳ ಆಸಕ್ತಿಯನ್ನು ಸಂಪಾದಿಸಿಕೊಳ್ಳಬೇಕೆಂಬುದು ನನ್ನ ಅಭೀಷ್ಟವಾಗಿತ್ತು.

# ಉಪನ್ಯಾಸಗಳು

ಶಾಸ್ತ್ರಿಗಳು ಎರ್ನಾಕುಲಂನಲ್ಲಿ ಮೂರು ನಾಲ್ಕು ಉಪನ್ಯಾಸಗಳನ್ನು ಕೊಟ್ಟರೆಂದು ನನ್ನ ಜ್ಞಾಪಕ. ನಾನು ಹಾಜರಿದ್ದು ಕೇಳಿದವನು. ಆ ಉಪನ್ಯಾಸಗಳಲ್ಲಿ ಸಂಸ್ಥಾನಗಳ ವಿದ್ಯಮಾನಗಳನ್ನು ಶಾಸ್ತ್ರಿಗಳು ಸಮಗ್ರವಾಗಿ ವಿಚಾರ ಮಾಡಿದರು. ಸಂಸ್ಥಾನಗಳ ಭೂಮ್ಯಾಕಾರಗಳು, ಅವುಗಳ ರಾಜವಂಶಗಳ ವಿವಿಧ ಚರಿತ್ರೆಗಳು, ಆ ಸಂಸ್ಥಾನಗಳ ಉತ್ಪತ್ತಿಯ ಕಥೆ, ಸಂಸ್ಥಾನಗಳಿಗೂ ಬ್ರಿಟಿಷ್ ಸರಕಾರಕ್ಕೂ ಆಗಿದ್ದ ಕೌಲು ಕರಾರುಗಳು, ಅವರವರ ಸಂಬಂಧಗಳಲ್ಲಿ ಅವರ ಖುದ್ದು ರಾಜಿಯಿಂದ ಮಾಮೂಲಾಗಿ ಬೆಳೆದುಬಂದಿದ್ದ ಪದ್ಧತಿಗಳು, ರೆಸಿಡೆಂಟರುಗಳ ಗುಪ್ತವಾದ ಕೈವಾಡ, ಅವರು ಮುಸುಕುಮರೆಯಲ್ಲಿ ನಡೆಸುತ್ತಿದ್ದ ವ್ಯಾಪಾರಗಳು, ಇವುಗಳ ಜೊತೆಗೆ ಪ್ರಜಾಜನರು ಪಡುತ್ತಿದ್ದ ಹಿಂಸೆಗಳು ಮತ್ತು ಅನ್ಯಾಯಗಳು-ಈ ಸಂಗತಿಗಳನ್ನೆಲ್ಲ ಒಂದೊಂದನ್ನಾಗಿ ಎತ್ತಿಕೊಂಡು ವಿಪುಲವಾಗಿ ವಿಮರ್ಶೆ ಮಾಡಿದರು. ಆ ಭಾಷಣದ ಶೈಲಿ ವಿಷಯಕ್ಕೆ ತಕ್ಕಂತೆ ಗಂಭೀರವಾಗಿ ಆಕರ್ಷಕವಾಗಿ ವಿಚಾರಪ್ರಚೋದಕವಾಗಿತ್ತು. ಆ ಭಾಷಣಗಳ ಸಾರಾಂಶವನ್ನು ಎಲ್ಲ ಮುಖ್ಯ ಪತ್ರಿಕೆಗಳವರೂ ವರದಿ ಮಾಡಿದರು. 'ಸರ್ವೆಂಟ್ಸ್ ಆಫ್ ಇಂಡಿಯ' ಪತ್ರಿಕೆಯಲ್ಲಿ ಭಾಷಣಗಳು ಮೊದಲು ವಿಸ್ತಾರ ರೂಪದಲ್ಲಿ ಅಚ್ಚಾಗಿ ಅನಂತರ ಪುಸ್ತಕರೂಪದಲ್ಲಿ ಪ್ರಕಟವಾಯಿತು. ಈ ಪ್ರಕಟನೆ ಮಹಾಜನದ ಗಮನವನ್ನು ವಿಚಾರದ ಕಡೆಗೆ ಸೆಳೆದು ಬ್ರಿಟಿಷ್ ಇಂಡಿಯ ರಾಜಕೀಯಸ್ಥನ ಮನಸ್ಸಿಗೆ ಈ ಪ್ರಶ್ನೆಯ ಅನಿವಾರ್ಯತೆಯನ್ನು ಮನದಟ್ಟು ಮಾಡಿಸಿತು. ಬ್ರಿಟಿಷ್ ಇಂಡಿಯದ ರಾಜಕೀಯಸ್ಥರಲ್ಲಿ ದೇಶೀಯ ಸಂಸ್ಥಾನಗಳ ವಿಚಾರಕ್ಕೆ ತೀವ್ರ ಗಮನ ಕೊಟ್ಟವರಲ್ಲಿ ಶ್ರೀನಿವಾಸ ಶಾಸ್ತ್ರಿಗಳೇ ಮೊದಲಿಗರೆಂದು ಹೇಳಬಹುದು.

ಕೊಚ್ಚಿಯ ಮಹಾರಾಜರು ಸ್ವತಃ ಸಂಸ್ಕೃತ ವಿದ್ವಾಂಸರು. ಅವರಿಗೆ ಶಾಸ್ತ್ರಿಗಳ ಸಂಸ್ಕೃತ ಪಾಂಡಿತ್ಯದ ಬಗೆಗೆ ಮೆಚ್ಚಿಕೆಯಿತ್ತು.

ಕೊಚ್ಚಿಯಲ್ಲಿ ಶಾಸ್ತ್ರಿಗಳವರಿಗೆ ಮನ್ನಣೆ, ಆದರಣೆಗಳು ಎಲ್ಲೆಡೆಯೂ ದೊರೆತವು. ಆಗ ದಿವಾನ್ ಬಹದ್ದೂರ್ ನಾರಾಯಣ ಅಯ್ಯರ್ ಎಂಬವರು ದಿವಾನರಾಗಿದ್ದರು. ಕೊಚ್ಚಿಯ ಮಹಾರಾಜರವರು ಶಾಸ್ತ್ರಿಗಳನ್ನು ತಮ್ಮ ಅರಮನೆಗೆ ಬರಮಾಡಿಕೊಂಡು ಕೊಂಚ ಹೊತ್ತು ಮಾತನಾಡಿ ಗೌರವಿಸಿದರು. ಮಹಾರಾಣಿಯವರೂ ಶಾಸ್ತ್ರಿಗಳು ಉಪನ್ಯಾಸ ಮಾಡಿದ

ಬಹಿರಂಗ ಸಭೆಗೆ ದಯಮಾಡಿಸಿದ್ದರು. ಅನೇಕ ವಿದ್ಯಾಸಂಸ್ಥೆಗಳು ಶಾಸ್ತ್ರಿಗಳವರನ್ನು ಕರೆದು ಬಹುಮಾನ ಮಾಡಿದವು.

# ‘ಕಮಲಾ ಲೆಕ್ಚರ್ಸ್’

೧೯೨೬ರಲ್ಲಿ ಕಲ್ಕತ್ತದ ವಿಶ್ವವಿದ್ಯಾನಿಲಯದಿಂದ ಕಮಲಾ ಲೆಕ್ಚರ್ಸ್ (Kamala Lectures) ಉಪನ್ಯಾಸಕೊಡುವುದಕ್ಕಾಗಿ ಶಾಸ್ತ್ರಿಗಳಿಗೆ ಕರೆ ಬಂದಿತು. ಕಮಲಾ ಲೆಕ್ಚರ್ಸ್ ಎಂಬ ದತ್ತಿಯಲ್ಲಿರುವ ಕಮಲಾ ಎಂಬ ಹೆಸರು ಆ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾಗಿದ್ದ ಆಶುತೋಷ ಮುಖರ್ಜಿಯವರ ಮಗಳ ಹೆಸರು. ದಿವಂಗತಳಾಗಿದ್ದ ಆಕೆಯ ಹೆಸರನ್ನು ಶಾಶ್ವತಪಡಿಸಬೇಕೆಂದು ಮುಖರ್ಜಿಯವರು ಆ ದತ್ತಿಯನ್ನು ಸ್ಥಾಪಿಸಿದ್ದರು. ಆ ದತ್ತಿಯ ನಿಯಮಗಳಲ್ಲಿ ಒಂದು-ಗೊತ್ತಾದ ಉಪನ್ಯಾಸಕರು ಕಲ್ಕತ್ತದ ವಿಶ್ವವಿದ್ಯಾನಿಲಯದಲ್ಲಿ ಮಾತನಾಡುವುದರ ಜೊತೆಗೆ ಇಂಡಿಯದ ಇನ್ನೊಂದು ಯಾವುದಾದರೂ ಸ್ಥಳದ ವಿಶ್ವವಿದ್ಯಾನಿಲಯದಲ್ಲಿ ಅದೇ ವಿಷಯವನ್ನು ಕುರಿತು ಭಾಷಣ ಮಾಡಬೇಕೆಂಬುದು. ಶಾಸ್ತ್ರಿಗಳವರು ‘ಇಂಡಿಯ ದೇಶದ ರಾಷ್ಟ್ರಕ-ಅವನ ಹಕ್ಕುಗಳು ಮತ್ತು ಕರ್ತವ್ಯಗಳು’ (Rights and Duites of the Indian Citizen) ಉಪನ್ಯಾಸ ಮಾಲೆಯನ್ನು ಕಲ್ಕತ್ತದಲ್ಲಿ ಕೊಟ್ಟದ್ದು ೧೯೨೬ ರ ಫೆಬ್ರವರಿ ತಿಂಗಳಲ್ಲಿ. ಅದನ್ನು ದತ್ತಿಯ ನಿಯಮದಂತೆ ಮದರಾಸಿನಲ್ಲಿ ಪುನರಾವರ್ತನ ಮಾಡಿದ್ದಾಯಿತು, ಅದು ಅದೇ ವರ್ಷದ ಮಾರ್ಚಿ ತಿಂಗಳಲ್ಲಿ. ಇದನ್ನು ಕುರಿತು ಶಾಸ್ತ್ರಿಗಳ ಸ್ವಭಾವದ್ಯೋತಕವಾದ ಒಂದು ಸಂಗತಿಯನ್ನು ಅರಿಕೆ ಮಾಡಬಹುದು.

# ಎಸ್. ಕೃಷ್ಣಸ್ವಾಮಿ ಅಯ್ಯರ್

ಶಾಸ್ತ್ರಿಗಳ ಉಪನ್ಯಾಸಕ್ಕಾಗಿ ಅನೇಕ ಪರಸ್ಥಳಗಳಿಂದ ಮದರಾಸಿಗೆ ಜನ ಬಂದಿದ್ದರು ಉಪನ್ಯಾಸದ ಸ್ಥಳ ಹಿಂದಿನ ಕ್ರಿಶ್ಚಿಯನ್ ಕಾಲೇಜಿನ ಒಂದು ಸಭಾಮಂದಿರ. ಉಪನ್ಯಾಸಕ್ಕಾಗಿ ಗೊತ್ತಾಗಿದ್ದ ದಿವಸಕ್ಕೆ ಹಿಂದೆ ಎರಡು ಮೂರು ದಿನಗಳಿಂದ ಶಾಸ್ತ್ರಿಗಳಿಗೆ ಜ್ವರ ಬರುತ್ತಿತ್ತು. ತುಂಬ ಜ್ವರ. ಅದನ್ನು ತಿಳಿದು ಬಂಧುಗಳೂ ಸ್ನೇಹಿತರೂ ಆ ಉಪನ್ಯಾಸದ ದಿನವನ್ನು ಮುಂದಕ್ಕೆ ತಳ್ಳಬೇಕೆಂದು ಒತ್ತಾಯ ಮಾಡಿದೆವು. ಬಹು ಮಂದಿ ದೊಡ್ಡ ಮನುಷ್ಯರು ಶಾಸ್ತ್ರಿಗಳಿಗೆ ಒಡಂಬಡಿಕೆ ಹೇಳಿ ಉಪನ್ಯಾಸದ ತಾರೀಖನ್ನು ಮುಂದಕ್ಕೆ ತಳ್ಳಲು ಅಪ್ಪಣೆ ಬೇಡಿದರು. ಶಾಸ್ತ್ರಿಗಳು ಒಪ್ಪಲಿಲ್ಲ. ಮದರಾಸು ವಿಶ್ವವಿದ್ಯಾನಿಲಯದ ಆಗಿನ ವೈಸ್ ಚಾನ್ಸಲರು ಶಾಸ್ತ್ರಿಗಳ ಮನೆಗೆ ಬಂದು ಬಹುವಾಗಿ ಹೇಳಿದರು. ಶಾಸ್ತ್ರಿಗಳು ನಿರಾಕರಿಸಿದರು. ಕಡೆಗೆ ಎಸ್. ಕೃಷ್ಣಸ್ವಾಮಿ ಅಯ್ಯರ್ ಎಂಬ ವೃದ್ಧರೊಬ್ಬರು ಶಾಸ್ತ್ರಿಗಳ ಬಳಿಗೆ ಬಂದರು. ಆಗ ನಾನು ಕಂಡದ್ದನ್ನು ಇಲ್ಲಿ ಹೇಳುತ್ತೇನೆ.

ಎಸ್. ಕೃಷ್ಣಸ್ವಾಮಿ ಅಯ್ಯರ್ ಅವರು ಮಹಾ ಪ್ರಸಿದ್ಧರಾದ ವಿ. ಕೃಷ್ಣಸ್ವಾಮಿ ಅಯ್ಯರ್ ಅವರ ಸ್ನೇಹಿತರು, ಮತ್ತು ಅವರಿಗಿಂತ ಸ್ವಲ್ಪ ಹಿರಿಯರು. ನಾನು ಇವರನ್ನು ಎಸ್. ಕೃಷ್ಣಸ್ವಾಮಿ ಅಯ್ಯರ್ ಎಂದು ಕರೆಯುತ್ತೇನೆ. ಎಸ್. ಕೃಷ್ಣಸ್ವಾಮಿ ಅಯ್ಯರ್ ಪೊಲೀಸ್ ಇಲಾಖೆಯಲ್ಲಿ ಚಾಕರಿಮಾಡಿ ಸೂಪರಿಂಟೆಂಡೆಂಟ್ ಹುದ್ದೆಯಿಂದ ನಿವೃತ್ತರಾಗಿದ್ದವರು. ವಿ. ಕೃಷ್ಣಸ್ವಾಮಿ ಅಯ್ಯರ್ ಅವರು ತಮ್ಮ ದಾನಧರ್ಮ ಕಾರ್ಯಗಳ ಭವಿಷ್ಯವನ್ನೆಲ್ಲ ಎಸ್. ಕೃಷ್ಣಸ್ವಾಮಿ ಅಯ್ಯರವರಿಗೆ ಒಪ್ಪಿಸಿದ್ದರು. ಎಸ್. ಕೃಷ್ಣಸ್ವಾಮಿ ಅಯ್ಯರ್ ಮೈಲಾಪುರದಲ್ಲಿ ಮನೆಮನೆಗೂ ತಿಳಿದವರು. ಪ್ರತಿ ದಿನವೂ ಬೆಳಗ್ಗೆ ಎದ್ದು ವಿಭೂತಿ ಧರಿಸಿ ತಮ್ಮ ಧರ್ಮಕಾರ್ಯಗಳ ಸ್ಥಳಕ್ಕೆ ಹೊರಡುವರು. ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಯಾರೋ ಒಬ್ಬರು ಸಿಕ್ಕಿ ನಮಸ್ಕಾರ ಹೇಳುವರು. ಎಸ್. ಕೃಷ್ಣಸ್ವಾಮಿ ಅಯ್ಯರ್.

'ಶ್ರೀರಾಮಶ್ಶರಣಂ'

ಎಂದು ಉತ್ತರ ಹೇಳುವರು. ಒಂದು ದಿನ ಒಬ್ಬ ಸ್ನೇಹಿತರು-ಬಹುಶಃ ಶ್ರೀನಿವಾಸ ಶಾಸ್ತ್ರಿಗಳೇ ಎಂದು ನನ್ನ ಜ್ಞಾಪಕ-ಕೃಷ್ಣಸ್ವಾಮಿ ಅಯ್ಯರ್ ಅವರನ್ನು ಕುರಿತು ಕೇಳಿದರು:

ಶಾ: “ನೀವು ‘ಶ್ರೀರಾಮಶ್ಶರಣಂ’ ಎಂದು ಹೇಳುತ್ತೀರಿ. ಆ ವಾಕ್ಯವನ್ನು ಪೂರ್ತಿ ಯಾಕೆ ಹೇಳುವುದಿಲ್ಲ? ‘ಶ್ರೀರಾಮಶ್ಶರಣಂ ಮಮ’ ಎಂದಲ್ಲವೆ ವಾಕ್ಯ?”

ಕೃ: “ಅಯ್ಯ, ‘ಮಮ’ ಬಿಡಬೇಕೆಂಬುದು ನಮಗಾಗಿರುವ ಉಪದೇಶ. ಅದನ್ನು ಬಿಡಲು ಪ್ರಯತ್ನ ಮಾಡುತ್ತಿರುವವನು ನಾನು. ಮಮ ಎಂಬುದನ್ನೇ ನೀನು ಜ್ಞಾಪಕಕ್ಕೆ ತರುತ್ತೀಯಲ್ಲ!”

ಇದು ಎಸ್. ಕೃಷ್ಣಸ್ವಾಮಿ ಅಯ್ಯರವರ ಸ್ವಭಾವ. ಶಾಸ್ತ್ರಿಗಳಿಗೆ ಅವರಲ್ಲಿ ಪೂಜ್ಯಭಾವ.

ಎಸ್. ಕೃಷ್ಣಸ್ವಾಮಿ ಅಯ್ಯರವರು ಶಾಸ್ತ್ರಿಗಳು ಮಲಗಿದ್ದ ಮಂಚದ ಮೇಲೆ ಕುಳಿತು ಶಾಸ್ತ್ರಿಗಳ ಮೈಮೇಲೆ ಕೈಯಿಟ್ಟು “ಶ್ರೀನಿವಾಸ” ಎಂದು ಕೂಗಿದರು. ಶಾಸ್ತ್ರಿಗಳು ಕಣ್ಣು ಬಿಟ್ಟು ನೋಡಿ, “ಐಯ್ಯರ್ ವಾಳ್” ಎನ್ನುತ್ತ ಮೇಲಕ್ಕೇಳಲು ಪ್ರಯತ್ನಿಸಿದರು. ಕೃಷ್ಣಸ್ವಾಮಿ ಅಯ್ಯರ್ ಅದನ್ನು ತಡೆದು “ಮಲಗಿರು” ಎಂದು ಹೇಳಿ ಹೀಗೆಂದರು:

ಕೃ: “ಶ್ರೀನಿವಾಸ, ನಿನ್ನನ್ನು ಏಕವಚನದಲ್ಲಿ ಮಾತನಾಡಿಸುವ ಜನ ಈಗ ಯಾರು ಯಾರಿದ್ದಾರೆ?”

ಶಾ: “ನನ್ನ ಅಕ್ಕ ಇದ್ದರು. ನೀವು ಒಬ್ಬರು. ಆಕೆ ಹೋದಮೇಲೆ ನಿಮ್ಮನ್ನು ಬಿಟ್ಟು ನನಗೆ ಯಾರಿದ್ದಾರೆ ಹಿರಿಯರು?”

ಕೃ: “ಹಾಗಾದರೆ ಹಿರಿಯರ ಮಾತನ್ನು ನೀನು ಕೇಳಬೇಕಲ್ಲ?”

ಶಾ: “ಉಪನ್ಯಾಸದ ತಾರೀಖಿನ ವಿಷಯವೊಂದನ್ನು ಹೊರತು ಬೇರೆ ಏನು ಹೇಳಿದರೂ ಕೇಳುತ್ತೇನೆ.”

ಕೃಷ್ಣಸ್ವಾಮಿ ಅಯ್ಯರ್ ನಕ್ಕು ಹೇಳಿದರು: “ಬಹು ನಿಶ್ಶಕ್ತಿಯಾಗಿದ್ದೀಯಲ್ಲೋ ಮಗು?”

ಶಾ: “ನನಗೆ ಉಪನ್ಯಾಸ ಎದೆಯ ಮೇಲೆ ಒತ್ತುತ್ತಿದೆ. ಆ ಭಾರವನ್ನು ಇಳಿಸಿದರೆ ನನ್ನ ಜ್ವರವೂ ಇಳಿದೀತು. ಹಾಗಲ್ಲದೆ ಉಪನ್ಯಾಸದ ದಿನವನ್ನು ಮುಂದಕ್ಕೆ ತಳ್ಳಿದರೆ ನಾನು ಹೊರುವ ಭಾರ ಇನ್ನೂ ಹೆಚ್ಚಾಗುತ್ತದೆ. ಪರಸ್ಥಳಗಳಿಂದ ನೂರಾರು ಮಂದಿ ಈ ಉಪನ್ಯಾಸಕ್ಕಾಗಿ ಬಂದಿದ್ದಾರೆ. ಮದರಾಸು ಪಟ್ಟಣದಲ್ಲಿ ಅವರು ಮೂರು ನಾಲ್ಕು ದಿನ ನಿಲ್ಲುವುದೆಂದರೆ ಎಷ್ಟು ವೆಚ್ಚ, ಎಷ್ಟು ಅನಾನುಕೂಲ ಅವರಿಗೆ! ಅದರ ಚಿಂತೆಯೇ ನನಗೆ

ಅತಿಯಾಗಿದೆ. ನೀವು ಆರ್ಶೀವಾದ ಕೊಡಿ. ಉಪನ್ಯಾಸ ಸರಿಯಾಗಿ ನಡೆಯುತ್ತದೆ. ಇಂಥ ಪ್ರೀತಿಗೆ ದೇವರು ಒಲಿಯುತ್ತಾನೆ."

ಕೃ: "ಹಾಗಾದರೆ ಆಗಲಿ. ಇನ್ನೊಂದು ಮಾತನ್ನು ಹೇಳುತ್ತೇನೆ. ಉಪನ್ಯಾಸ ಕಾಲದಲ್ಲಿ ನಾನು ನಿನ್ನ ಪಕ್ಕದಲ್ಲಿದ್ದು ಅರ್ಧರ್ಧ ಘಂಟೆಗೆ ಒಂದು ಮಾತ್ರೆ, ಒಂದು ಕಷಾಯ ಕೊಡಿಸುತ್ತೇನೆ. ನೀನು ಅದನ್ನು ತೆಗೆದುಕೊ. ಎಲ್ಲ ಒಳ್ಳೆಯದಾದೀತು."

ಹೀಗೆ ಹೇಳುತ್ತ ಶಾಸ್ತ್ರಿಗಳ ಹಣೆಗೆ ತಾವು ಮಂತ್ರಿಸಿ ತಂದಿದ್ದ ವಿಭೂತಿಯನ್ನು ಹಚ್ಚಿದರು.

ಆ ಏರ್ಪಾಟಿನಂತೆ ಅಂದು ಸಂಜೆಯೂ ದಿನವೂ ಮಾರನೆಯ ದಿನವೂ ಮೂರನೆಯ ದಿನವೂ ಕೃಷ್ಣಸ್ವಾಮಿ ಅಯ್ಯರವರು ಉಪನ್ಯಾಸ ಸ್ಥಳಕ್ಕೆ ಒಬ್ಬ ಆಯುರ್ವೇದ ವೈದ್ಯರನ್ನು ಕರೆತಂದು ಕಾಲಕಾಲಕ್ಕೆ ಶಾಸ್ತ್ರಿಗಳಿಗೆ ಔಷಧ ಕುಡಿಸಿದರು. ನಾನು ಆ ಉಪನ್ಯಾಸಗಳನ್ನು ಕೇಳಿದವನು. ಉಪನ್ಯಾಸಗಳು ನಾವು ನಿರೀಕ್ಷಿಸಿಕೊಂಡಿದ್ದಂತೆ ಸೊಗಸಾಗಿ, ಬೋಧಪ್ರದವಾಗಿ, ಪ್ರೌಢ ವಾಕ್ಸರಣಿಯಿಂದ ಹರಿದುಬಂದವು. ಎಲ್ಲರಿಗೂ ಸಂತೃಪ್ತಿಯಾಯಿತು.

# ಗೋಖಲೆ ಜೀವನ ಚರಿತ್ರೆ

೧೯೨೪–೨೫ರ ಸುಮಾರಿನಲ್ಲಿ ಶಾಸ್ತ್ರಿಗಳ ಮನಸ್ಸಿನಲ್ಲಿ ಒಂದು ದೊಡ್ಡ ಸಂಕಲ್ಪ ಉದಿಸಿತ್ತು-ತಮ್ಮ ಗುರುಗಳಾದ ಗೋಪಾಲಕೃಷ್ಣ ಗೋಖಲೆಯವರ ಜೀವನ ಚರಿತ್ರೆಯನ್ನೂ ಸಾರ್ವಜನಿಕ ಕಾರ್ಯತತ್ತ್ವಗಳನ್ನೂ ಸಮಗ್ರವಾಗಿ ಬರೆಯಬೇಕೆಂದು. ಈ ಗ್ರಂಥವನ್ನು ಬರೆದಿದ್ದಿದ್ದರೆ ಅದು ಶಾಸ್ತ್ರಿಗಳ ಮಹಾಕೃತಿಯಾಗಿ ನಿಲ್ಲುತ್ತಿತ್ತು.

ಆ ಕಾರ್ಯಕ್ಕೆ ಅವಶ್ಯವಾದ ಪೂರ್ವಸಿದ್ಧತೆಯನ್ನು ಮಾಡಿಕೊಂಡರು. ಗೋಖಲೆಯವರು ಬರೆದಿದ್ದ ಹತ್ತಾರು ಕಾಗದಗಳ ಅಸಲುಗಳು, ಗೋಖಲೆಯವರಿಗೆ ಹತ್ತಾರು ಕಡೆಯಿಂದ ಬಂದಿದ್ದ ಪತ್ರಗಳು, ಆ ಕಾಲದ ರಾಜಕೀಯ ಪ್ರಶ್ನೆಗಳ ವಿಷಯದಲ್ಲಿ ಪತ್ರಿಕೆಗಳಲ್ಲಿ ನಡೆದಿದ್ದ ಪತ್ರಿಕಾ ಪ್ರಸಂಗ, ಗೋಖಲೆಯವರ ಹಿರಿಯರ ಮತ್ತು ಗುರುಗಳ, ಮಿತ್ರರ ಮತ್ತು ವಿರೋಧಿ ವರ್ಗದವರ ವಿಷಯಕ್ಕೆ ಸಂಬಂಧಪಟ್ಟ ಕಾಗದಪತ್ರಗಳು-ಇವುಗಳನ್ನೆಲ್ಲ ಸಂಗ್ರಹ ಮಾಡಿ ಬೆಂಗಳೂರಿಗೆ ತಂದರು. ಈ ಸಾವಿರಾರು ಕಾಗದ ಪತ್ರಗಳನ್ನು ಗಮನವಿರಿಸಿ ಓದಿ ಟಿಪ್ಪಣಿ ಬರೆಯುವ ಕೆಲಸಕ್ಕೆ ನಾನು ಸಿದ್ಧನೆಂದು ಮೊದಲೇ ಒಪ್ಪಿಗೆ ಕೊಟ್ಟಿದ್ದೆ. ಕಾಗದದ ಕಟ್ಟುಗಳ ಪೆಟ್ಟಿಗೆ ಬಂದಾಗ ಕಾಗದಪತ್ರಗಳನ್ನು ಮೇಲಂದಾಜಿಗಾಗಿ ನೋಡಿದೆವು. ಆ ಕಾಗದಗಳನ್ನು ತಾರೀಖಿಗನುಸಾರವಾಗಿ, ವ್ಯಕ್ತಿಗೆ ಅನುಸಾರವಾಗಿ, ಪ್ರಸಂಗಕ್ಕನುಸಾರವಾಗಿ ವರ್ಗೀಕರಿಸಿ ಒಂದೊಂದು ಕಾಗದದ ಮೇಲೂ ಅದರ ಸಾರಾಂಶವನ್ನು ಒಂದೆರಡು ಮಾತುಗಳಲ್ಲಿ ಸೂಚಿಸಿ (ಡಾಕೆಟ್) ಸಂಗ್ರಹ ಚೀಟಿ ಬರೆದಿಡತಕ್ಕದ್ದೆಂದು ಗೊತ್ತುಮಾಡಿಕೊಂಡೆವು.

ಈ ಸಾರಿ ಶಾಸ್ತ್ರಿಗಳವರು ಶಂಕರಪುರದಲ್ಲಿ ನನಗೆ ತೀರ ಸಮೀಪವಾದ ಮನೆಯಲ್ಲಿ ತಂಗಿದ್ದರು. ಆದದ್ದರಿಂದ ಕೆಲಸ ಬೇಗ ಬೇಗ ನಡೆಯಲು ಅನುಕೂಲವಾಯಿತು. ನನ್ನ ಜೊತೆಗೆ ಒಬ್ಬರಿಬ್ಬರು ಯುವಕರೂ ಕೆಲಸಕ್ಕೆ ಬಂದರು. ಕೆಲಸ ನನಗೆ ತುಂಬ ಕುತೂಹಲಕರವಾಗಿತ್ತು. ನಮ್ಮ ದೇಶದ ಚರಿತ್ರೆಗೆ ಅತ್ಯಂತವಾಗಿ ಸಂಬಂಧಪಟ್ಟ ಬಹುಮಂದಿ ಮಹನೀಯರ ಪತ್ರ ವ್ಯವಹಾರ ಅದರಲ್ಲಿತ್ತು. ವಿಶ್ವೇಶ್ವರಯ್ಯನವರು ಗೋಖಲೆಯವರಿಗೆ ಬರೆದದ್ದು, ವಾಚಾ ಅವರೊಡನೆ ವ್ಯವಹಾರ, ಬಂಗಾಳದ ಸರ್ ಕೆ. ಜಿ. ಗುಪ್ತ, ಬಸು ಮೊದಲಾದವರೊಡನೆ ವ್ಯವಹಾರ, ಇಂಡಿಯದ ಎಲ್ಲ ಪ್ರಾಂತಗಳ ಜನನಾಯಕರ ಸಂಗಡವೂ ನಡೆದಿದ್ದ ಪತ್ರವ್ಯವಹಾರ, ಹಾಗೆಯೇ ಭಾರತದ ವಿದೇಶೀಯ ಸ್ನೇಹಿತರಾದ ವೆಡರ್ಬರ್ನ್, ಸರ್ ಹೆನ್ರಿ ಕಾಟನ್ ಮುಂತಾದವರ ಕಾಗದಪತ್ರಗಳು-ಹೀಗೆ ಅತ್ಯಂತ ಸ್ವಾರಸ್ಯಕರವಾದ ಕಾಗದಪತ್ರಗಳು ನೂರುನೂರಾಗಿದ್ದವು. ಆ ರಾಶಿಯಲ್ಲಿ

ಸುಮಾರು ಅರ್ಧದಷ್ಟನ್ನು ಪರಿಶೀಲನೆ ಮಾಡಿದ್ದಾಯಿತು. ಅವುಗಳನ್ನು ತಾವು ಮತ್ತೊಮ್ಮೆ ಪರಿಶೀಲಿಸುವುದಾಗಿ ಶಾಸ್ತ್ರಿಗಳು ಹೇಳಿ ಪೂನಾಕ್ಕೆ ಪ್ರಯಾಣ ಮಾಡಿದರು.

ಪೂನಾದಲ್ಲಿ ಸರ್ವೆಂಟ್ಸ್ ಅಫ್ ಇಂಡಿಯ ಸೊಸೈಟಿಗೆ ಸೇರಿದ ಆರ್ಯಭೂಷಣ ಮುದ್ರಣಾಲಯದ ಕಟ್ಟಡದಲ್ಲಿ ಈ ಕಾಗದದ ಕಟ್ಟುಗಳನ್ನು ಇಟ್ಟಿದ್ದರು. ಆ ಕಟ್ಟಡಕ್ಕೆ ಹೇಗೋ ಬೆಂಕಿ ಬಿತ್ತು. ಕಟ್ಟಡದ ಜೊತೆಗೆ ಅದರಲ್ಲಿದ್ದ ಎಷ್ಟೋ ವಸ್ತುಗಳು ಬೆಂಕಿಯ ಪಾಲಾದವು. ಗೋಖಲೆ ಪತ್ರಗಳ ರಾಶಿಯೂ ಹಾಗೆ ಭಸ್ಮವಾಯಿತು. ಶಾಸ್ತ್ರಿಗಳ ಸಂಕಲ್ಪ ರೂಪುಗೊಳ್ಳದೆ ನಿಂತುಹೋಯಿತು.

# ‘ದೇಹಪೋಷಣೆ’

ಗೋಖಲೆಕಾರ್ಯ ನಡೆಯುತ್ತಿದ್ದ ಕಾಲದಲ್ಲಿ ನಾವು ಪ್ರತಿದಿನವೂ ವಾಕಿಂಗ್ ಹೋಗುವುದು, ಹಿಂದಕ್ಕೆ ಬಂದ ಬಳಿಕ ಕೊಂಚಹೊತ್ತು ಕೆಲಸಕ್ಕೆ ಕೂಡುವುದು-ಹೀಗೆ ನಡೆಯುತ್ತಿತ್ತು. ಒಂದು ದಿನ ಶಾಸ್ತ್ರಿಗಳು ತುಂಬ ನೊಂದುಕೊಂಡು ಹೇಳಿದರು: “ಏನು ಸಾರ್! ಈ ಹಾಳು ದೇಹದ ಪೋಷಣೆಯಲ್ಲಿಯೇ ಆಯುಸ್ಸು ಮುಗಿಯುತ್ತಿದೆ. ಬೆಳಗಾದರೆ ತಿಂಬೋಣ, ಅದು ಜೀರ್ಣವಾಗಲಿಕ್ಕಾಗಿ ತಿರುಗಾಡೋಣ. ತಿರುಗಾಡೋಣ, ತಿರುಗಾಟದ ಆಯಾಸದ ಪರಿಹಾರಕ್ಕೋಸ್ಕರ ವಿಶ್ರಾಂತಿ. ವೆಚ್ಚವಾಗಿ ಹೋದ ಶಕ್ತಿಯನ್ನು ಭರ್ತಿ ಮಾಡಲು ಮತ್ತೆ ತಿಂಬೋಣ, ಮತ್ತೆ ವ್ಯಾಯಾಮ, ಮತ್ತೆ ವಿಶ್ರಾಂತಿ-ಹೀಗೆಯೇ ಕಳೆಯುತ್ತಿದೆಯಲ್ಲ ಕಾಲ! ನಾನು ಗೋಖಲೆ ಜೀವನಚರಿತ್ರೆ ಬರೆದು ಕೃತಾರ್ಥನಾಗುವುದು ಎಂದಿಗೆ?”

ಇಂಥ ಮಾತು ಅವರ ಬಾಯಿಂದ ನಾಲ್ಕಾರು ಸಲ ಬಂದದ್ದನ್ನು ನಾನು ಕೇಳಿದ್ದೇನೆ. ಅವರ ದೇಹವೇನೂ ದೃಢವಾಗಿರಲಿಲ್ಲ. ನೋವು ಹೊರಕ್ಕೆ ಕಾಣಿಸಿಕೊಳ್ಳದಿದ್ದರೂ ಒಳಗೆ ದೌರ್ಬಲ್ಯದ ಲಕ್ಷಣ ಇದ್ದೇ ಇತ್ತು. ಅವರು ಬೇಸರದ ಮಾತನ್ನಾಡಿದಾಗ ನಾನು “ಮನಸ್ಸನ್ನು ಸಂತೋಷದಲ್ಲಿಟ್ಟುಕೊಂಡಿರಿ. ಈಗ ಆತುರಕ್ಕೆ ಏನೂ ಕಾರಣವಿಲ್ಲ, ಮುಂದಿನ ಬೇಸಗೆಯಲ್ಲಿ ಬರವಣಿಗೆಗೆ ಕುಳಿತುಕೊಂಡರೆ ಗ್ರಂಥ ಒಂದೇ ಧಾರೆಯಾಗಿ ಹರಿದು ಸಮಾಪ್ತಿಗೆ ಬರುತ್ತದೆ” -ಎಂದು ಭರವಸೆ ಹೇಳುತ್ತಿದ್ದೆ.

ನಾವು ವಾಕಿಂಗ್ ಹೋಗುವಾಗ ಗೋಖಲೆ ಗ್ರಂಥದ ಅಧ್ಯಾಯಗಳೆಷ್ಟಿರಬೇಕು, ಯಾವ ಯಾವ ಅಧ್ಯಾಯದ ಶೀರ್ಷಿಕೆ (ಹೆಡಿಂಗ್) ಏನೇನಾಗಿರಬೇಕು, ಯಾವ ಯಾವ ವಿಷಯ ಎಷ್ಟೆಷ್ಟು ಪುಟ ಇರಬೇಕು-ಈ ವಿವರಗಳನ್ನೆಲ್ಲ ಪುನಃ ಪುನಃ ಆಲೋಚಿಸಿ ಒಂದು ಹಂಗಾಮಿ ನಿಷ್ಕರ್ಷೆಗೂ ಬಂದಿದ್ದೆವು.

ಗ್ರಂಥಕಾರ್ಯಕ್ಕೆ ಮಹಾವಿಘ್ನ ಬಂದ ಮೇಲೆ ಶಾಸ್ತ್ರಿಗಳು ತಮ್ಮ ಮನಸ್ಸಿನಲ್ಲಿ ಸಂಗ್ರಹ ಮಾಡಿದ್ದ ವಿಷಯಗಳನ್ನು ೧೯೩೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಉಪನ್ಯಾಸ ರೂಪದಲ್ಲಿ ನಿರೂಪಿಸಿದರು. ಆ ಉಪನ್ಯಾಸಗಳ ಮುಖ್ಯಾಂಶಗಳನ್ನು ಬೆಂಗಳೂರಿನಲ್ಲಿ ಇಂಟರ್ಮೀಡಿಯೇಟ್ ಕಾಲೇಜ್ ಅಂಗಳದಲ್ಲಿ ಉಪನ್ಯಾಸ ಮಾಡಿದ್ದರೆಂದು ನನ್ನ ಜ್ಞಾಪಕ.

# ಮಿತಭಾಷಿ

ಶ್ರೀನಿವಾಸ ಶಾಸ್ತ್ರಿಗಳ ಪ್ರಸಿದ್ಧಿ ಬಹುಮುಖವಾದದ್ದು-ಉಪಾಧ್ಯಾಯರೆಂದು, ವಿದ್ಯಾಪ್ರವರ್ತಕರೆಂದು, ವಿದ್ವಾಂಸರೆಂದು, ರಾಜನೀತಿಜ್ಞರೆಂದು. ಹೀಗೆ ಬಹುಮುಖ ಪ್ರಸಿದ್ಧಿಯಿದ್ದರೂ ಅವರ ಕೀರ್ತಿಯ ಶಿಖರ ಅವರ ವಾಗ್ಮಿತೆಗೆ ಸೇರಿದ್ದು.

ಶಾಸ್ತ್ರಿಗಳು ಮಿತಭಾಷಿ; ಬಹುಮಾತಿನವರಲ್ಲ. ಮಿತ್ರಗೋಷ್ಠಿಯಲ್ಲೂ ಅವರು ಮಿತಭಾಷಿಗಳು. ಗೋಷ್ಠಿಯ ಗಮನವನ್ನೆಲ್ಲ ತಮ್ಮ ಕಡೆಗೆ ಸೆಳೆದುಕೊಂಡು ಇನ್ನೊಬ್ಬರ ಮಾತಿಗೆ ಅವಕಾಶ ಕೊಡದೆ ಭಾಷಣಾವಕಾಶವನ್ನೆಲ್ಲ ತಮ್ಮ ಪಾಲಿನ ಸ್ವತ್ತನ್ನಾಗಿ (Monopolize) ಮಾಡಿಕೊಂಡವರಲ್ಲ. ಪ್ರತಿಯಾಗಿ, ಶಾಸ್ತ್ರಿಗಳ ಬಾಯಿಂದ ಮಾತು ಹೊರಡುತ್ತಿದ್ದದ್ದು ಮತ್ತೊಬ್ಬರಿಗೆ ಪ್ರತ್ಯುತ್ತರವಾಗಿ. ಇನ್ನೊಬ್ಬರು ಆಡಿದ ಮಾತಿನಲ್ಲಿ ಸಂದೇಹವೋ ಅಸಂಗತವೋ ಉದಾಸೀನತೆಯೋ ತೋರಿಬಂದಾಗ ಶಾಸ್ತ್ರಿಗಳು ಮಾತನಾಡುವರು. ಆಗಲೂ ಎಷ್ಟು ಪ್ರಕೃತವೋ ಅಷ್ಟೇ ಮಾತು, ಈ ಸ್ನೇಹ ಸಂಭಾಷಣೆ ಮರ್ಯಾದೆಯದು.

# ವಾಕ್ತೇಜಸ್ಸು

ನಾನು ಹೇಳಹೊರಟಿರುವ ವಿಷಯ ಅವರ ವಾಗ್ಮಿತೆಯದು, ಎಂದರೆ ಸಭೆಯಲ್ಲಿ ಅವರಿಂದ ಬರುತ್ತಿದ್ದ ವಾಕ್ಕಿನ ಪ್ರಭಾವವನ್ನು ಕುರಿತದ್ದು. ಈ ಸಭಾವಾಗ್ಮಿತೆಯ ವಿಶೇಷಗುಣವನ್ನು ತಿಳಿಸಲು ಇಂಗ್ಲಿಷಿನಲ್ಲಿ ಎರಡು ಮಾತುಗಳಿವೆ: (೧) ಎಲೊಕ್ವೆನ್ಸ್ (Eloquence) (೨) ಆರೇಟರಿ (Oratory). ಎಲೊಕ್ವೆನ್ಸ್ ಎಂಬುದು ಶ್ರೋತನ ಮನಸ್ಸಿನ ಮೇಲೆ ಪರಿಣಾಮಮಾಡುವ ವಾಕ್ಪ್ರವಾಹ, ವಾಕ್ಪ್ರಭಾವದ ರಭಸ. ಇದು ಸಣ್ಣ ಸಭೆಯಲ್ಲಾದರೂ ಆಗಬಹುದು. ಆರೇಟರಿ ಎಂಬುದು ಒಂದು ಮಹಾಸಭೆಯಲ್ಲಿ ಆವೇಶಪೂರಿತವಾಗಿ ಆವೇಶೋತ್ಪಾದಕವಾಗಿ ಮಾಡಿದ ಭಾಷಣ. ಈ ಎರಡಕ್ಕೂ ಇರುವ ವ್ಯತ್ಯಾಸವನ್ನು ನೋಡಿ ತಿಳಿಯಬೇಕು. ಎಲೊಕ್ವೆನ್ಸ್ ಎಂಬ ವಕ್ತೇಜಸ್ಸನ್ನು ಒಳ್ಳೆಯ ಗದ್ಯ ಲೇಖನದಲ್ಲಿಯೂ ಕಾಣಬಹುದು. ಇಂಗ್ಲಿಷ್ ಆರೇಟರುಗಳಲ್ಲಿ ಪ್ರಸಿದ್ಧನಾದವನು ಎಡ್ಮಂಡ್ ಬರ್ಕ್ (Edmund Burke). ಆತನು ಇಂಗ್ಲೆಂಡಿನ ಪಾರ್ಲಿಮೆಂಟ್ ಸಭೆಯಲ್ಲಿ ಇಂಡಿಯದ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸನ ಅಕ್ರಮಗಳನ್ನೂ ಅಪನೀತಿಗಳನ್ನೂ ಖಂಡಿಸಿ ಮಾತನಾಡುತ್ತಿದ್ದಾಗ ಆ ಮಾತಿನ ಓಜಸ್ಸೂ ವೀರ್ಯವೂ ಎಷ್ಟು ಮಾತ್ರದಾಗಿತ್ತೆಂದರೆ ಅದರ ಉಗ್ರತೆಯಿಂದ ಶ್ರೋತರು ಭಯಗ್ರಸ್ತರಾಗಿ ವಾರನ್ ಹೇಸ್ಟಿಂಗ್ಸನ ಕಡೆ ಮುಖ ತಿರುಗಿಸುವುದಕ್ಕೆ ಹೆದರಿ ತಲೆ ಬಾಗಿಸಿಕೊಂಡಿದ್ದರಂತೆ. ಇದು ಬರ್ಕ್‌ನ ವಾಕ್‌ಪ್ರೌಢಿಮೆ.

ಈಗ ಇಂಗ್ಲೆಂಡಿನಲ್ಲಿ ಆರೇಟರಿ ಕಲೆ ಬೆಳೆಯುತ್ತಿಲ್ಲವೆಂದೂ ಅದಕ್ಕೆ ಈ ಹೊತ್ತಿನ ಸ್ಥಿತಿಯಲ್ಲಿ ಪ್ರಯೋಜನವಿಲ್ಲವೆಂದೂ ಆ ವಿಷಯವನ್ನು ಪರಿಶೀಲಿಸಿರುವವರು ಹೇಳುತ್ತಾರೆ.

ನಮ್ಮ ದೇಶದಲ್ಲಿ ಆರೇಟರಿಗೆ ಈಗಲೂ ಅವಕಾಶವಿದೆ. ಆದರೆ ಇಂಗ್ಲಿಷಿನಲ್ಲಿ ಮಾತನಾಡುವವರಿಗೆ ಆ ಅವಕಾಶವಿಲ್ಲ. ಈಗ ಇಂಡಿಯದಲ್ಲಿ ಆರೇಟರಿ ದೇಶಭಾಷೆಗಳಲ್ಲಿ ಬೆಳೆಯಬಹುದಾಗಿದೆ. ಆರೇಟರಿಯ ಮುಖ್ಯ ಲಕ್ಷಣ ಕೇಳುವವರನ್ನು ಚುಚ್ಚಿ ಎಬ್ಬಿಸಿ ಹುರಿದುಂಬಿಸುವುದು. ಬಾಲ ಗಂಗಾಧರ ತಿಲಕರ ಮರಾಠಿ ವಾಗ್ಮಿತೆಯ ವಿಷಯದಲ್ಲಿ ನಾನು ಒಂದು ಕಥೆ ಕೇಳಿದ್ದೇನೆ. ಆ ಭಾಷಣವನ್ನು ಕೇಳಿದ ಮನುಷ್ಯನೊಬ್ಬ ಉದ್ರಿಕ್ತನಾಗಿ ಆ ಉದ್ರೇಕವನ್ನು ಇಳಿಸಿಕೊಳ್ಳುವುದಕ್ಕಾಗಿ ಒಂದು ಕಲ್ಲನ್ನಾದರೂ ಕೈಯಿಂದೆತ್ತಿ ಒಂದು ಕಡೆಗೆ ಜೋರಾಗಿ ಬೀಸಿ ಹಾಕುತ್ತಿದ್ದನಂತೆ. ಹೀಗೆ ಉದ್ರೇಕಕಾರಿಯನ್ನಾಗಿ ಮಾಡುವುದು ಆರೇಟರಿಯ ಕೆಲಸ.

# ಮೂವರು ವಾಗ್ಮಿಗಳು

ಇಂಡಿಯದಲ್ಲಿ ಇಂಗ್ಲಿಷ್ ಆರೇಟರಿಯ ಮೂವರು ಪ್ರಸಿದ್ಧರು: (೧) ಬಂಗಾಳದ ಸುರೇಂದ್ರನಾಥ ಬ್ಯಾನರ್ಜಿ, (೨) ತಿಯೋಸಾಫಿಕಲ್ ಸೊಸೈಟಿಯ ಆನಿ ಬೆಸಂಟ್ ಅಮ್ಮನವರು, (೩) ಶ್ರೀನಿವಾಸಶಾಸ್ತ್ರಿಗಳು. ಈ ಮೂವರದೂ ಮೂರು ಬೇರೆ ಬೇರೆ ಶೈಲಿ. ಬ್ಯಾನರ್ಜಿಯವರದು ಉಚ್ಚವಾದ ಧ್ವನಿ, ಶಬ್ದಪ್ರವಾಹ, ವಾಕ್ಕಿನ ರಭಸ. ಆನಿ ಬೆಸಂಟರದು ನದೀಪ್ರವಾಹದಲ್ಲಿ ತೆರೆ ಎದ್ದು ಬೀಳುವಂತೆ ಧ್ವನಿಯ ತರಂಗ ಗತಿ. ವಾಕ್ಯದ ರಚನೆ ಗಂಭೀರವಾದದ್ದು. ಶಾಸ್ತ್ರಿಗಳವರ ಆರೇಟರಿಯಲ್ಲಿ ಶಬ್ದಪ್ರವಾಹದ ಜೊತೆಗೆ ಒಂದು ಸೌಂದರ್ಯ ಸೇರಿರುತ್ತಿತ್ತು. ಅದನ್ನು ನನಗೆ ತಿಳಿದ ಮಟ್ಟಿಗೆ ವಿವರಿಸುತ್ತೇನೆ.

ಶಾಸ್ತ್ರಿಗಳ ಭಾಷಣದ ಪ್ರಭಾವವೇನಿದ್ದರೂ ಇಂಗ್ಲಿಷಿನದು ಎಂದು ಬೇರೆ ಹೇಳಬೇಕಾಗಿಲ್ಲ. ಅವರು ತಮಿಳಿನಲ್ಲೂ ಉಪನ್ಯಾಸ ಕೊಟ್ಟದ್ದುಂಟು. ಅವರ ತಮಿಳು ವಾಕ್ಕೂ ಸೊಗಸಾಗಿರುತ್ತಿತ್ತೆಂದು ನಾನು ಕೇಳಿದ್ದೇನೆ. ಆದರೆ ನನಗೆ ಅನುಭವ ಇರುವುದು ಅವರ ಇಂಗ್ಲಿಷ್ ವಾಗ್ಮಿತೆ.

# ಮನಸ್ಸಿದ್ಧತೆ

ಶಾಸ್ತ್ರಿಗಳು ಉಪನ್ಯಾಸ ಕೊಡಲು ಪೂರ್ವಭಾವಿಯಾಗಿ ಮಾಡಿಕೊಳ್ಳುತ್ತಿದ್ದ ಸಿದ್ಧತೆ ಅವರ ಮನಸ್ಸಿನದು; ಮಾತಿಗೆ ಸಂಬಂಧಪಟ್ಟದ್ದಲ್ಲ. ಅತ್ಯಂತ ಮುಖ್ಯವಾದ ರಾಜಕೀಯ ಸಂದರ್ಭಗಳನ್ನು ವಿನಾಯಿಸಿ, ಅವರು ಮಾತನಾಡಿದ್ದೆಲ್ಲ ಸಮಯಸ್ಫೂರ್ತಿಯಿಂದ. ಎರ್ನಾಕುಲದಲ್ಲಿ ಉಪನ್ಯಾಸ ಮಾಡಿದಾಗ ಅವರ ಕೈಯಲ್ಲಿ ಒಂದು ಚೂರು ಕಾಗದವೂ ಇರಲಿಲ್ಲ. ಅವರು ನೋಟ್ಸ್ ಮಾಡಿ, ವಿಷಯವನ್ನು ಮಥನಮಾಡಿಕೊಂಡು ಸಿದ್ಧರಾದದ್ದು ಕಮಲಾ ಲೆಕ್ಚರ್ಸ್ ಸಂದರ್ಭಕ್ಕೆ. ಅದು ಶಾಸ್ತ್ರ ವಿಷಯವಾದದ್ದರಿಂದ, ಅದರಲ್ಲಿ ನ್ಯೂನಾತಿರೇಕಗಳು ಇರಬಾರದಾದ್ದರಿಂದ, ಹೇಳಿದ ವಿಷಯ ನಿಷ್ಕರ್ಷೆಯಾಗಿರಬೇಕಾದದ್ದರಿಂದ, ಶಾಸ್ತ್ರಿಗಳು ಕಷ್ಟಪಟ್ಟು ನೋಟ್ಸ್ ಮಾಡಿಕೊಂಡರು.

ಈ ಸಂದರ್ಭದಲ್ಲಿ ಅವರು ಮಾಡಿಕೊಂಡಿದ್ದ ಸಿದ್ಧತೆಯನ್ನು ಕುರಿತು ಒಂದು ಹೆಚ್ಚು ಮಾತನ್ನು ಹೇಳಬಹುದು. ಈ ಉಪನ್ಯಾಸಗಳಿಗಾಗಿ ಅವರು ಅನೇಕ ರಾಜ್ಯಶಾಸ್ತ್ರ ಗ್ರಂಥಗಳನ್ನೂ ದೇಶಚರಿತ್ರೆಗಳನ್ನೂ ಲಾ, ಜ್ಯೂರಿಸ್‌ಪ್ರೂಡೆನ್ಸ್ ಗ್ರಂಥಗಳನ್ನೂ ಸೂಕ್ಷ್ಮಪರಿಶೀಲನೆಯಿಂದ ವ್ಯಾಸಂಗ ಮಾಡಿದರು. ಅವರು ವಿದ್ಯಾರ್ಥಿಯಾಗಿದ್ದಾಗ ಕೊಂಚಕಾಲ ಲಾ ವ್ಯಾಸಂಗ ಮಾಡಿದ್ದವರು. ಆದರೂ ತಾವು ಆಡುವ ಮಾತು ಪರಿಷ್ಕೃತವಾಗಿ, ಶಾಸ್ತ್ರಸಂಮತವಾಗಿ ಇರಬೇಕೆಂಬ ಅಭಿಪ್ರಾಯದಿಂದ ತಮ್ಮ ವಿಷಯಕ್ಕೆ ಸಂಬಂಧಪಟ್ಟ ಲಾ ಪ್ರಕರಣಗಳನ್ನು ಸಮ್ಯಕ್ಕಾಗಿ ವ್ಯಾಸಂಗ ಮಾಡಲು ಒಬ್ಬ ಸಮರ್ಥನಾದ ಲಾಯರ ಸಹಾಯವನ್ನು ಪಡೆದುಕೊಂಡರು. ಶಾಸ್ತ್ರಿಗಳ ಪರಮ ಸ್ನೇಹಿತರಾದ ಅಡ್ವೋಕೇಟ್ ಜನರಲ್ ಟಿ. ಆರ್. ವೆಂಕಟರಾಮ ಶಾಸ್ತ್ರಿಗಳು ತಮ್ಮ ಆಫೀಸಿನಲ್ಲಿದ್ದ ಒಬ್ಬ ಲಾ ಪಾರಂಗತರನ್ನು ಆರಿಸಿ ಶಾಸ್ತ್ರಿಗಳಿಗೆ ಸಹಾಯಕರಾಗಿ ಕೊಟ್ಟಿದ್ದರು. ಶಾಸ್ತ್ರಿಗಳ ಈ ವ್ಯಾಸಂಗ ಸುಮಾರು ಒಂದು ವರ್ಷ ನಡೆಯಿತು.

ಆದರೆ ಶಾಸ್ತ್ರಿಗಳ ವಾಕ್ಪ್ರಭಾವಕ್ಕೆ ಈ ಉಪನ್ಯಾಸಗಳಲ್ಲಿ ಹೆಚ್ಚು ಅವಕಾಶವಿರಲಿಲ್ಲ. ಯಾವುದನ್ನು ಇಂಗ್ಲಿಷಿನಲ್ಲಿ ಆರೇಟರಿ ಎಂದು ಕರೆಯುತ್ತಾರೆಯೋ ಆ ಜಾತಿಯ ಭಾಷಣ ಸಮಯಸ್ಫೂರ್ತಿಯಿಂದ ಬರತಕ್ಕದ್ದು. ಅದು ಪೂರ್ವಪ್ರಯತ್ನದಿಂದ ಸಿದ್ಧಪಟ್ಟದ್ದಲ್ಲ. ಶಾಸ್ತ್ರಿಗಳ ಭಾಷಣದ ತೇಜಸ್ಸೂ ಸೌಂದರ್ಯವೂ ತೋರಿಬರುತ್ತಿದ್ದದ್ದು ಅವರ ಆಶು ಭಾಷಣಗಳಲ್ಲಿ.

# ಎಡ್ವಿನ್ ಮಾಂಟೆಗು

ರಾಜಕೀಯದಲ್ಲಿಯೂ ಜನಜನಾಂಗಗಳ ಸಂಬಂಧಗಳ ವಿಷಯದಲ್ಲಿಯೂ ತಾವು ಆಡುವ ಮಾತು ಸಂದಿಗ್ಧವಾಗದೆ, ವಾದ ವಿವಾದಗಳಿಗೆ ಎಡೆಬಿಡದಂತೆ ಸ್ಪಷ್ಟವಾಗಿ, ನಿಷ್ಕೃಷ್ಟವಾಗಿರಬೇಕೆಂದು ತೋರಿದ ಅಪರೂಪ ಸಂದರ್ಭಗಳಲ್ಲಿ ಶಾಸ್ತ್ರಿಗಳು ಪೂರ್ವಾಲೋಚನೆಯಿಂದ ಸಿದ್ಧಪಡಿಸಿಕೊಳ್ಳುತ್ತಿದ್ದದ್ದುಂಟು. ೧೯೩೩ರ ಸುಮಾರಿನಲ್ಲಿ ಬೊಂಬಾಯಿ ಪಟ್ಟಣದಲ್ಲಿ ಎಡ್ವಿನ್ ಮಾಂಟೆಗು ಎಂಬಾತನ ಪ್ರತಿಮೆಯನ್ನು ಸ್ಥಾಪನೆ ಮಾಡಿದರು. ಮಾಂಟೆಗು ಎಂಬಾತ ಇಂಡಿಯ ವಿಷಯಕ್ಕೆ ಸೆಕ್ರೆಟರಿಯಾಗಿದ್ದ ಬ್ರಿಟಿಷ್ ಮಂತ್ರಿ. ಆತನ ಕಾಲಕ್ಕೆ ಆಗಿನ ಸಂದರ್ಭದಲ್ಲಿ ಒಬ್ಬ ಇಂಗ್ಲಿಷ್ ರಾಜಕೀಯಸ್ಥನು ಇಂಡಿಯಕ್ಕೆ ಎಷ್ಟು ದೂರ ಸಹಾಯ ಮಾಡಬಹುದಾಗಿತ್ತೋ ಅಷ್ಟು ಹೆಚ್ಚಿನ ಸಹಾಯ ಕೊಟ್ಟವನು ಆತ. 'ಮಾಂಟೆಗು-ಚೆಮ್ಸ್‌ಫರ್ಡ್ ಸುಧಾರಣೆ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ರಾಜಕೀಯ ಸುಧಾರಣೆಯಲ್ಲಿ ಆತನ ಹೆಸರು ಕಾಣಬರುತ್ತದೆ. ಇಂಡಿಯ ದೇಶಕ್ಕೆ ರೆಸ್ಪಾನ್ಸಿಬಲ್ ಗವರ್ನ್‌ಮೆಂಟ್ ಅಥವಾ ಜವಾಬ್ದಾರಿ ಸರಕಾರ ಪದ್ಧತಿಯು ಉದ್ದಿಷ್ಟವಾದದ್ದೆಂಬ ಬ್ರಿಟನ್ನಿನ ಉದ್ದೇಶ ಘೋಷಣೆಯನ್ನು ಹೊರಡಿಸಿದಾತ ಎಡ್ವಿನ್ ಮಾಂಟೆಗು.

ಇಂಥ ಉಪಕಾರಿಯನ್ನು ಕೃತಜ್ಞತೆಯಿಂದ ಸ್ಮರಿಸಬೇಕೆಂದು ಬೊಂಬಾಯಿ ಪ್ರಾಂತದ ಮಹಾಜನ ಉದ್ದೇಶಪಟ್ಟು ಮೇಲೆ ಹೇಳಿದ ಪ್ರತಿಮೆಯನ್ನು ಸ್ಥಾಪಿಸುವ ಆಲೋಚನೆ ಮಾಡಿದ್ದರು. ಶ್ರೀನಿವಾಸಶಾಸ್ತ್ರಿಗಳು ಮಾಂಟೆಗು ಮಹಾಶಯನನ್ನು ಖುದ್ದಾಗಿ ಬಲ್ಲವರು. ಆತನ ಮನೋಭಾವವನ್ನು ಚೆನ್ನಾಗಿ ಅರಿತಿದ್ದವರು. ಆತನ ಕಾರ್ಯದ ವಿಷಯದಲ್ಲಿ ಸಹಾನುಭೂತಿ ಇದ್ದವರು. ಆದದ್ದರಿಂದ ಆ ಪ್ರತಿಮೆಯನ್ನು ಅನಾವರಣ ಮಾಡಲು ಶಾಸ್ತ್ರಿಗಳೇ ತಕ್ಕವರೆಂದು ಆ ಸ್ಟಾಚ್ಯು ಕಮಿಟಿಯವರು ಶಾಸ್ತ್ರಿಗಳಿಗೆ ಆಹ್ವಾನ ಕಳುಹಿಸಿದರು. ಶಾಸ್ತ್ರಿಗಳು ಅದನ್ನು ಅಂಗೀಕರಿಸಿದ ಬಳಿಕ ತಮ್ಮ ಸ್ನೇಹಿತರಾದ ಕೆಲಮಂದಿಗೆ ಒಂದು ಕೋರಿಕೆಯ ಪತ್ರವನ್ನು ಕಳುಹಿಸಿದರು.

"ನಾನು ಮಾಂಟೆಗು ಪ್ರತಿಮೆಯನ್ನು ಅನಾವರಣ ಮಾಡಲು ಒಪ್ಪಿಕೊಂಡಿದ್ದೇನೆ. ಆ ಸಂದರ್ಭದಲ್ಲಿ ಭಾಷಣ ಮಾಡುವುದು ಅವಶ್ಯವಾಗುತ್ತದೆ. ಆಗ ಏನೇನು ಹೇಳಬಹುದು, ಏನೇನು ಹೇಳಬಾರದು-ಈ ವಿಷಯದಲ್ಲಿ ನಿಮ್ಮ ಸಲಹೆ ನನಗೆ ಬೇಕಾಗಿದೆ."

ಇದು ಆ ಪತ್ರದ ಸಾರಾಂಶ. ಹಾಗೆ ಪತ್ರ ಪಡೆದವರಲ್ಲಿ ನಾನೂ ಒಬ್ಬ. ನಾನು ಉತ್ತರ ಬರೆಯುವಾಗ ಆಶ್ಚರ್ಯ ಸೂಚಿಸಿದೆ. “ನಿಮಗೆ ನಾನು ಸಲಹೆ ಕೊಡುವುದೆ?” -ಎಂದು. ಅದನ್ನು ಅವರು ಅಲ್ಲಿಗೆ ಬಿಡಲ್ಲಿಲ್ಲ. ಮರುಪತ್ರ ಬರೆದು “ನಾನು ಉಪಚಾರಕ್ಕಾಗಿ ಆ ಕಾಗದ ಬರೆದವನಲ್ಲ. ವಾಸ್ತವವಾಗಿ ನಾನು ವಿಷಯವನ್ನು ತಿಳಿದುಕೊಂಡು ಆಲೋಚನೆ ಮಾಡಬೇಕೆಂದು ಬರೆದೆ” ಎಂದರು. ನನಗೆ ತೋರಿದ ಕೆಲವು ಪಾಯಿಂಟುಗಳನ್ನು ಗುರುತು ಮಾಡಿ ಜವಾಬು ಬರೆದೆ.

ಆಮೇಲೆ ಎರಡು ಮೂರು ವಾರ ಕಳೆದ ಬಳಿಕ ಶಾಸ್ತ್ರಿಗಳು ಬೊಂಬಾಯಿಗೆ ಹೊರಡಬೇಕಾದ ದಿನ ಬಂತು. ಅದೇ ವೇಳೆಗೆ ನಾನು ಬೆಳಗಾವಿಗೆ ಬಹುಶಃ ಸಾಹಿತ್ಯಸಮ್ಮೇಳನಕ್ಕಾಗಿ ಹೋಗಬೇಕಾದ ಸಂದರ್ಭ ಒದಗಿತು. ನಾವಿಬ್ಬರೂ ಬೆಂಗಳೂರಿನಿಂದ ಬೆಳಗಾವಿಯವರೆಗೂ ಒಟ್ಟಿಗೆ ಪ್ರಯಾಣ ಮಾಡಿದೆವು, ಎರಡನೆ ಕ್ಲಾಸ್ ರೈಲುಗಾಡಿಯಲ್ಲಿ. ಆ ದಿನ ಬೆಳಗ್ಗೆ ಹಿಂದೂಪುರ ಸ್ಟೇಷನ್ನಿನವರೆಗೂ ನಮ್ಮ ಗಾಡಿಯಲ್ಲಿ ಬೇರೆ ಯಾರೋ ಒಬ್ಬರಿಬ್ಬರು ಇದ್ದರು. ಹಿಂದೂಪುರದಲ್ಲಿ ಅವರು ಇಳಿದರು. ನಾವಿಬ್ಬರೇ ಗಾಡಿಯಲ್ಲುಳಿದೆವು. ಅಲ್ಲಿಂದ ಮುಂದಕ್ಕೆ ಗಾಡಿಯೆಲ್ಲ ನಮ್ಮದೇ ಆಗಿತ್ತು. ಶಾಸ್ತ್ರಿಗಳು ಆಗ ಹೇಳಿದರು:

“ಮಾಂಟೆಗು ವಿಷಯ ಈಗ ಮಾತನಾಡೋಣಯ್ಯ. ನನಗೆ ಸ್ನೇಹಿತರು ಕಳುಹಿಸಿರುವ ಸಲಹೆಗಳನ್ನೆಲ್ಲ ನಾನು ಪರಾಮರ್ಶೆ ಮಾಡಿ ನನ್ನ ಭಾಷಣದಲ್ಲಿ ಏನೇನು ಹೇಳಬೇಕೆಂಬುದನ್ನು ಗೊತ್ತುಮಾಡಿಕೊಂಡಿದ್ದೇನೆ. ಅದನ್ನು ಈಗ ಯಥಾವತ್ತಾಗಿ (ರಿಹರ್ಸ್) ಉಪನ್ಯಾಸದ ಕರಡುಪ್ರತಿಯಾಗಿ ನಿನಗೆ ಹೇಳುತ್ತೇನೆ. ಕೇಳು.” ಹೀಗೆ ಪ್ರಾರಂಭಿಸಿ ತಮ್ಮೆದುರಿಗೆ ಯಾವ ಕಾಗದ ಪತ್ರವನ್ನೂ ಇಟ್ಟುಕೊಳ್ಳದೆ ಧಾರಾಕಾರವಾಗಿ ಉಪನ್ಯಾಸ ಮಾಡಿದರು. ನಾವು ಬೆಳಗಾವಿಯ ಹಿಂದಿನ ಸ್ಟೇಷನ್ನನ್ನು ಮುಟ್ಟುವ ವೇಳೆಗೆ ಆ ಪರೀಕ್ಷೋಪನ್ಯಾಸ ಮುಗಿದಿತ್ತು.

ಅಲ್ಲಿಂದ ನಾಲ್ಕು ದಿವಸ ಕಳೆದ ಮೇಲೆ ಬೊಂಬಾಯಲ್ಲಿ ಅನಾವರಣವಾಯಿತು. ಆಗಿನ ಭಾಷಣ ಬೊಂಬಾಯಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಶಾಸ್ತ್ರಿಗಳು ಅಲ್ಲಿ ಹೇಳಿದ್ದಕ್ಕೂ ಪೂರ್ವಭಾವಿಯಾಗಿ ನಾನು ಅವರಿಂದ ಕೇಳಿದ್ದದ್ದಕ್ಕೂ ಏನೂ ವ್ಯತ್ಯಾಸ ಕಾಣಲಿಲ್ಲ. ನೂರರಲ್ಲಿ ತೊಂಭತ್ತೊಂಭತ್ತರಷ್ಟು ಎರಡೂ ಒಂದೇ. ಅವರ ಧಾರಣಾಶಕ್ತಿ ಅಷ್ಟು ಪಟುವಾದದ್ದು.

# ಜ್ಞಾಪಕಶಕ್ತಿ

ಅವರು ಬರವಣಿಗೆ ಬರಸುವಾಗಲೂ ಹಾಗೆಯೇ. ಪ್ರಾರಂಭ ಮಾಡಿ ಇಪ್ಪತ್ತು ಮೂವತ್ತು ವಾಕ್ಯಗಳನ್ನು ಹೇಳಿ ಬರೆಯಿಸಿರುವರು. ಸಾವಕಾಶವಾಗಿ ಆಲೋಚನೆ ಮಾಡಿ ಆತುರವಿಲ್ಲದೆ ಹೇಳುವರು. ಹೀಗೆ ಕಾಲು ಘಂಟೆಯೋ ಅರ್ಧ ಘಂಟೆಯೋ ಆದಾಗ ಒಂದು ವಿಘ್ನ ಬರುವುದು. ಯಾರೋ ಸ್ನೇಹಿತರು, ಯಾವುದೋ ಕಾಗದ, ಏನೋ ಪ್ರಸಂಗ. ಇದಕ್ಕೆ ಹದಿನೈದೋ ಮೂವತ್ತೋ ನಿಮಿಷಗಳು ಹಿಡಿಯುವುದು. ಆಗ ಶಾಸ್ತ್ರಿಗಳು ಮತ್ತೆ ಆರಂಭಿಸುವರು. ಇದರಲ್ಲಿ ವಿಶೇಷವೇನೆಂದರೆ ಅವರು ಮೊದಲನೆಯ ಸಲ ಹೇಳುತ್ತಿದ್ದಾಗ ವಿಘ್ನದ ಕಾರಣದಿಂದ ವಾಕ್ಯವೋ ಪದವೋ ಪೂರ್ತಿಯಾಗದೆ ಅರ್ಧಕ್ಕೆ ನಿಂತಿರುತ್ತಿತ್ತೆಂದರೆ, ಅವರು ಪುನಃ ಪ್ರಾರಂಭಮಾಡುವಾಗ ಆ ವಾಕ್ಯಾರ್ಥ ಅಥವಾ ಅರ್ಧ ಪದದಿಂದ ಪ್ರಾರಂಭಿಸುವರು; ನಡುವೆ ವಿಘ್ನ ಬರಲಿಲ್ಲವೋ ಎಂಬಂತೆ ವಾಕ್ಯ ಹಿಂದಿನದೂ ಮುಂದಿನದೂ ಅಖಂಡವಾಗಿ ಹೊಂದಿಕೊಳ್ಳುತ್ತಿತ್ತು. ಅವರ ಜ್ಞಾಪಕಶಕ್ತಿ ಇಷ್ಟು ಪ್ರಬಲವಾಗಿದ್ದದ್ದರಿಂದ ಅವರು ಹೆಚ್ಚಾದ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗಿರಲಿಲ್ಲ.

ಅವರಿಗಿದ್ದ ಮತ್ತೊಂದು ಸಂಪತ್ತು ಶಬ್ದಸಂಪತ್ತು. ಅವರ ಶಬ್ದಕೋಶ ವಿಸ್ತಾರವಾಗಿತ್ತು. ಆದರೆ ಅದು ಆಡಂಬರಕ್ಕಾಗಿ ಇದ್ದದ್ದಲ್ಲ. ಶಾಸ್ತ್ರಿಗಳು ಅಪೂರ್ವಪದಗಳನ್ನೂ ಅಪೂರ್ವ ಪ್ರಯೋಗಗಳನ್ನೂ ಮಾಡುತ್ತಿದ್ದವರಲ್ಲ. ಯಾವುದು ಜನಕ್ಕೆ ಸುಲಭವೋ, ಯಾವುದು ಲೋಕರೂಢಿಯಲ್ಲಿ ಅಂಗೀಕೃತವಾದದ್ದೋ ಅಂಥ ಪದಗಳನ್ನೇ ಅವರು ಬಳಸುತ್ತಿದ್ದದ್ದು. ಆದರೆ ಅದರಲ್ಲಿ ಒಂದು ವಿವೇಚನೆ.

ಈ ಮಾತನ್ನು ಅವರು ನನಗೆ ನಾಲ್ಕಾರು ಸಲ ಹೇಳಿದ್ದಾರೆ. ಶಬ್ದಸಂಪತ್ತಿನಲ್ಲಿ ಯಾವುದು ನಿಜವಾದ ಅಲಂಕಾರ (Truly ornamental), ಯಾವುದು ಕೃತಕ (Meretricious)-ಇದನ್ನು ನಾವು ಸರ್ವದಾ ವಿವೇಕಮಾಡುತ್ತಿರಬೇಕು. ಭಾಷೆಯಲ್ಲಿ ಅಲಂಕಾರ ಬೇಡವೆನ್ನಲಾಗದು. ಅರ್ಥಸ್ಪಷ್ಟತೆಗೋಸ್ಕರ ಅಲಂಕಾರಗಳನ್ನು ಉಪಯೋಗಿಸಬೇಕಾಗುತ್ತದೆ. ಶ್ರೋತನ ಮನಸ್ಸಿನ ಮೇಲೆ ಪರಿಣಾಮವುಂಟುಮಾಡಬೇಕಾದರೆ ಕೆಲವು ಪದಪ್ರಯೋಗಗಳು ಅವಶ್ಯವಾಗುತ್ತವೆ. ಆದರೆ ನಾವು ಮಾಡುವ ಪ್ರಯೋಗ ನಿಜವಾಗಿಯೂ ಉದ್ದೇಶಕ್ಕೆ ಸಹಕಾರಿಯೇ ಅಥವಾ ಆಡಂಬರ ಮಾತ್ರದ್ದೆ? ಸಹಜವೆ, ಕೃತಕವೆ? ಇದನ್ನು ಗಮನವಿರಿಸಿ ನೋಡುತ್ತಿರಬೇಕು.

ಶಾಸ್ತ್ರಿಗಳ ವಾಕ್ಪ್ರಭಾವದ ಗುಣಗಳನ್ನು ಕೆಲವು ಮಾತುಗಳಿಂದ ವಿಶದಪಡಿಸಲು ಪ್ರಯತ್ನಿಸುತ್ತೇನೆ. ಆದರೆ ಅದು ಕಾರ್ಯಕಾರಿಯಾಗುವ ಪ್ರಯತ್ನವಲ್ಲ. ಆಕಾಶದಲ್ಲಿ ಕಾಣುವ ಕಾಮನಬಿಲ್ಲಿನ ಬಣ್ಣಗಳನ್ನು ವರ್ಣಿಸುವುದು ಸಾಧ್ಯವೊ? ಅದಕ್ಕಿಂತ ನಮಗೆ ಸಮೀಪವಾದ ತೋಟದಲ್ಲಿಯ ಚಿಗುರೆಲೆಯ ಬಣ್ಣಗಳನ್ನು, ಗುಲಾಬಿಯಂಥ ಹೂವಿನ ಬಣ್ಣಗಳನ್ನು ಮಾತಿನಿಂದ ವರ್ಣಿಸಲಾದೀತೊ? ಒಳ್ಳೆಯ ಸಂಗೀತವನ್ನು ವರ್ಣಿಸಲಾದೀತೊ? ಒಳ್ಳೆಯ ವಾಗ್ಮಿಯ ವಿಷಯವೂ ಅಷ್ಟೆ. ಅದು ಆತನ ಬಾಯಿಂದ ಹೊರಟು ಬರುತ್ತದೆ. ಕೇಳುವವರ ಮನಸ್ಸಿನಲ್ಲಿ ವಿಧವಿಧವಾದ ಸಂತೋಷಾನುಭವಗಳಾಗುತ್ತವೆ. ವಾಗ್ಮಿಯ ಪ್ರಭಾವ ಅಂತರಂಗಕ್ಕೆ ಸೇರಿದ್ದು. ಬಹಿರಂಗದಲ್ಲಿ ಅದನ್ನು ಪುನರುತ್ಪತ್ತಿ ಮಾಡುವುದು ನನ್ನಂಥವನ ಪಾಲಿಗೆ ಅಸಾಧ್ಯ.

ಆದರೂ ಯುವಕರು ಯಾರಾದರೂ ಕುತೂಹಲಿಗಳಾಗಿದ್ದಲ್ಲಿ ಅಂಥವರಿಗಾಗಿ ಒಂದೆರಡು ಸ್ಥೂಲರೇಖೆಗಳನ್ನು ಗುರುತಿಸಲು ಪ್ರಯತ್ನಿಸುತ್ತೇನೆ.

# ಚತುಸ್ಸೂತ್ರಿ

1. **ಮನಃಪ್ರಸನ್ನತೆ :** ಶಾಸ್ತ್ರಿಗಳು ತಾವು ಹೇಳಬೇಕಾದದ್ದನ್ನು ಮನಸ್ಸಿನಲ್ಲಿ ಪುನಃ ಪುನಃ ಆಲೋಚಿಸಿ ನಿಷ್ಕರ್ಷೆ ಮಾಡಿ ಒಂದು ಕ್ರಮದಲ್ಲಿ ಏರ್ಪಡಿಸಿಕೊಳ್ಳುತ್ತಿದ್ದರು. ಈ ಮನಃಪ್ರಸನ್ನತೆ ಮೊದಲನೆಯ ಗುಣ. ಎದ್ದು ನಿಂತ ಮೇಲೆ ವಿಷಯಕ್ಕಾಗಿ ತಾರಾಡುವುದು, ಹಾ ಎನ್ನುವುದು, ಹೂ ಎನ್ನುವುದು, ಮಾತಿಗಾಗಿ ಹುಡುಕಾಡುವುದು-ಈ ವಿಕಾರಗಳು ಶಾಸ್ತ್ರಿಗಳಲ್ಲಿರಲಿಲ್ಲ. ಅವರ ಮನಸ್ಸು ತಿಳಿಯಾಗಿ ಇಷ್ಟನ್ನೇ ಹೇಳಬೇಕೆಂದು ಖಚಿತವಾಗಿರುತ್ತಿತ್ತು. ಮನೋನಿಷ್ಕರ್ಷೆ ಬಹಳ ದೊಡ್ಡದು.
2. **ಶಬ್ದಸೌಷ್ಠವ :** ಅವರಿಗಿದ್ದ ವಿಸ್ತಾರವಾದ ಶಬ್ದರಾಶಿಯಲ್ಲಿ ಪ್ರಕೃತಕ್ಕೆ ಯಾವುದು ಉಚಿತವೆಂಬುದನ್ನು ಆರಿಸಿ ಆರಿಸಿ ಮೇಲಕ್ಕೆತ್ತುತ್ತಿದ್ದರು.
3. **ವಾಕ್ಯಧೋರಣೆ :** ಉಪನ್ಯಾಸವು ಸಲಿಗೆಯುಳ್ಳ ಸುಸಂಸ್ಕೃತ ಸ್ನೇಹಿತರ ಜೊತೆಯಲ್ಲಿ ಆಡಿದ ಮಾತಿನಂತೆ, ತತ್‌ಕ್ಷಣ ಶ್ರೋತನ ಮನಸ್ಸನ್ನು ಅರಳಿಸಬಲ್ಲದ್ದಾಗಿರಬೇಕು. ಅದರಲ್ಲಿ ಹಾಸ್ಯ, ಅನುನಯ, ಉದ್ಬೋಧನೆ, ಪ್ರಚೋದನೆ-ಈ ನಾಲ್ಕಾರು ಗುಣಗಳಿರಬೇಕು. ಈ ಕಾರ್ಯಕ್ಕಾಗಿ ತಕ್ಕಂತೆ ವಾಕ್ಯರಚನೆ, ವಾಕ್ಯದ ನಾನಾ ಭಾಗಗಳ ಸಂಯೋಜನೆಯಲ್ಲಿಯೇ ಒಂದು ಕುತೂಹಲಕಾರಿಯಾದ ಗುಣ.
4. **ಕಂಠಧ್ವನಿ :** ಶಾಸ್ತ್ರಿಗಳವರಿಗೆ ಭಗವಂತನು ಕೊಟ್ಟಿದ್ದ ವರಗಳಲ್ಲಿ ಧ್ವನಿ ಸಂಪತ್ತು ಒಂದು. ಅವರ ಧ್ವನಿಯೇ ಶ್ರಾವ್ಯವಾದದ್ದು. ಇಂಗ್ಲಿಷೇ ಆಗಲಿ, ಸಂಸ್ಕೃತವೇ ಆಗಲಿ, ತಮಿಳೇ ಆಗಲಿ, ಅವರ ಕಂಠದಿಂದ ಮಾತಿನ ಪ್ರವಾಹ ಬರುತ್ತಿದ್ದರೆ ಕಿವಿಗೆ ಒಂದು ಇಂಪು: ನಿದ್ದೆ ತರುವ ಇಂಪಲ್ಲ, ನಿದ್ದೆಯಿಂದ ಎಚ್ಚರಿಸುವ ಇಂಪು. ಬುದ್ಧಿ ತೂಕಡಿಸುತ್ತಿರುವಾಗ ಶಾಸ್ತ್ರಿಗಳ ಧ್ವನಿ ಅದಕ್ಕೆ ತಗುಲಿದರೆ ಬುದ್ಧಿಯು ಎಚ್ಚತ್ತು ಆಲಿಸುವುದು.

# ಒಂದು ಆಶುಭಾಷಣ

ಒಂದು ದಿನ ಬೆಂಗಳೂರು ಕೋಟೆಯ ಟಿಪ್ಪು ಸುಲ್ತಾನ್ ಅರಮನೆಯ ಪಶ್ಚಿಮದ ಕಡೆಯ ಮಹಡಿಯಲ್ಲಿ ಒಂದು ಸಂತೋಷಕೂಟ, ಸ್ಕೌಟ್ ಸಂಸ್ಥೆಯದು. ಒಳ್ಳೊಳ್ಳೆಯ ತಿಂಡಿಗಳು, ಹೂ, ಹಣ್ಣು, ಆ ಹೊತ್ತು ಭಾಷಣದ ಏರ್ಪಾಟಿರಲಿಲ್ಲ. ಶಾಸ್ತ್ರಿಗಳಿಗೆ ಹಾರತುರಾಯಿ ಸಮರ್ಪಿಸುವುದಷ್ಟೇ ಕಾರ್ಯಕ್ರಮವಿದ್ದದ್ದು. ಆದರೆ ನಮ್ಮ ಕೆ. ಎಚ್. ರಾಮಯ್ಯನವರು ಅಲ್ಲಿದ್ದರಲ್ಲ! ಆ ಹೊತ್ತಿನ ಸಮಾರಂಭಕ್ಕೆ ಮುಖ್ಯ ಯಜಮಾನರು ರಾಮಯ್ಯನವರು. ಅವರು ಕಡೆಯಲ್ಲಿ ಎದ್ದು ನಿಂತು ತಮಾಷೆಯ ರೀತಿಯಲ್ಲಿ ಒಂದು ವಾಕ್ಯ ನುಡಿದರು: "ನಾವು ಇಷ್ಟೊಂದು ಸಂತೋಷದಿಂದ ಏನಾದರೂ ಒಳ್ಳೆಯದನ್ನು ಕೇಳಬೇಕೆಂದಿರುವಾಗ, ನಮ್ಮ ಅತಿಥಿಗಳು ನಮ್ಮ ಮನಸ್ಸನ್ನು ತಿಳಿಯದಿರುವಷ್ಟು ನಿಷ್ಕರುಣಿಗಳೆ?" ಶಾಸ್ತ್ರಿಗಳು ಕೊಂಚ ನಕ್ಕು ಆಗ ಒಂದು ಭಾಷಣ ಮಾಡಿದರು. ಅದು ಬಹುಶಃ ೧೦-೧೨ ನಿಮಿಷಗಳ ಭಾಷಣ. ನಾನು ಕೇಳಿರುವ ನೂರಾರು ಭಾಷಣಗಳಲ್ಲಿ ಶಾಸ್ತ್ರಿಗಳದೇ ಒಂದು ರೀತಿ. ಶಾಸ್ತ್ರಿಗಳು ಮಾಡಿದ ಹತ್ತಾರು ಭಾಷಣಗಳಲ್ಲಿ ಅಂದಿನದು ಸೊಗಸಿನಲ್ಲಿ ಎಂದೂ ಮೀರಲಾಗದ್ದು. ಮಾತಿನಲ್ಲಿ ವಿನಯ, ಹಾಸ್ಯ, ಉಪದೇಶ -ಮೂರೂ ಅಡಗಿತ್ತು. ಮತ್ತು ವಾಕ್ಯವಾಕ್ಯವೂ, ಮಾತುಮಾತೂ ಕಾಂತಿಯುತವಾಗಿ ಸುಂದರವಾಗಿತ್ತು. ಆ ಭಾಷಣವನ್ನು ಕೇಳಿದಾಗ ಒಂದು ಹೂದೋಟದ ನಡುವೆ ನಿಂತಂತೆ, ಒಬ್ಬ ಮಹಾಗಾಯಕಿಯ ಹಾಡಿಕೆಯನ್ನು ಕೇಳಿದಂತೆ ಎಲ್ಲರಿಗೂ ಅನುಭವವಾಯಿತು. ಮಹಾವಾಗ್ಮಿಯ ಮಾತಿನಲ್ಲಿ ಇರುವ ವಿಶೇಷ ಲಕ್ಷಣ ಶಬ್ದಬಾಹುಳ್ಯವಲ್ಲ. ಶಬ್ದದ ರಭಸವಲ್ಲ. ಶಬ್ದಗಳ ಪ್ರೌಢಿಮೆಯೂ ಅಲ್ಲ. ಅಲಂಕಾರಗಳ ಹೊಡೆತವಲ್ಲ. ಅಂಗಚೇಷ್ಟೆಯೂ ಅಲ್ಲ. ಅದರ ಮುಖ್ಯ ಗುಣವು ಕಾಂತಿ ಮತ್ತು ಸೌಂದರ್ಯ. ಕಾಂತಿಯೆಂದರೆ ಹೊಸ ಬೆಳಕು. ಶ್ರೋತನ ಮನಸ್ಸಿಗೆ ಹೊಸಹೊಸ ವಿಷಯಗಳು ಹೊಳೆಯಬೇಕು. ಸೌಂದರ್ಯವೆಂದರೆ ಅವನ ಹೃದಯದಲ್ಲಿ ಹೊಸ ಹೊಸ ಭಾವನೆಗಳು ಉತ್ಪನ್ನವಾಗಬೇಕು. ಶಾಸ್ತ್ರಿಗಳ ಭಾಷಣದಲ್ಲಿ ಭಾವಪುಷ್ಟಿ, ಭಾವಪ್ರಚೋದನೆ-ಈ ಎರಡು ಗುಣಗಳೂ ಸಮ್ಮಿಳಿತವಾಗಿರುತ್ತಿತ್ತು.

# ವ್ಯಂಗ್ಯ ರೀತಿ

ಶಾಸ್ತ್ರಿಗಳ ವಾಕ್ಯಶೈಲಿ ವಾಚ್ಯಕ್ಕಿಂತ ಹೆಚ್ಚಾಗಿ ವ್ಯಂಗ್ಯ ರೀತಿಯದು. ತಮ್ಮ ಅಂತರಂಗದ ಧ್ವನಿಯನ್ನು ಹೊರಕ್ಕೆ ಬಿಡುತ್ತಿದ್ದರು. ಹೆಚ್ಚು ಮಾತು ವ್ಯರ್ಥ. ಒಂದು ಉದಾಹರಣೆ ಜ್ಞಾಪಕಕ್ಕೆ ಬರುತ್ತದೆ.

ಪಂಜಾಬಿನಲ್ಲಿ ಓಡ್ವಯರ್ ಸೈನ್ಯಾಧಿಕಾರಿ ನಡಸಿದ ಅತ್ಯಾಚಾರಗಳನ್ನು ಕುರಿತು ಮಾತನಾಡುವಾಗ ಹೀಗೆಂದರು:

As for the part of Lord Chelmsford, not many words seem needed. He must have been sufficiently punished by his own thoughts.

“ಮಾನಿಷ್ಠನಿಗೆ ಅವನ ಮನಸ್ಸು ಕೊಡುವ ದಂಡನೆಯೇ ಸಾಕು.”

ಕಾವ್ಯದಲ್ಲಿ ಈ ವ್ಯಂಗ್ಯ ಮರ್ಯಾದೆಯನ್ನು ಸರ್ವಶ್ರೇಷ್ಠ ಲಕ್ಷಣವೆಂದು ಹೇಳುತ್ತಾರೆ.

***

# ನನ್ನ ಮನವಿ

೧೯೨೯ ರ ಸುಮಾರಿನಲ್ಲಿ ಮಿರ್ಜಾ ಸರಕಾರವು ರಾಜಕೀಯ ಸುಧಾರಣೆಗಳ ಬಗೆಗೆ ವಿಚಾರಮಾಡಿ ಸಲಹೆ ಕೊಡಲು ಒಂದು ಸಮಿತಿಯನ್ನು ನಿಯಮಿಸಿತ್ತಷ್ಟೆ. ಮಾಜಿ ಕೌನ್ಸಿಲರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಆ ಸಮಿತಿಯ ಅಧ್ಯಕ್ಷರು. ಆ ಸಮಿತಿಯ ವರದಿಗೆ ನಾನು ಒಂದು ಭಿನ್ನಾಭಿಪ್ರಾಯದ ಮನವಿಯನ್ನು ಲಗತ್ತು ಮಾಡಿದ್ದೆ. ಮನವಿಯಲ್ಲಿ ಸರಕಾರವು ಆ ಕೂಡಲೆ ಜವಾಬ್ದಾರಿ ಸರಕಾರ ಪದ್ಧತಿಯನ್ನು ತನ್ನ ಮುಖ್ಯಗುರಿಯನ್ನಾಗಿ ಅಂಗೀಕರಿಸಿ ಹೇಳಿಕೆ ಕೊಡಬೇಕು.; ಮತ್ತು ಅಲ್ಲಿಂದ ಇಪ್ಪತ್ತು ವರ್ಷಗಳೊಳಗಾಗಿ ಕ್ರಮಕ್ರಮವಾಗಿ ಸುಧಾರಣೆಗಳನ್ನು ನಡಸಿ ಅದರ ಪರಿಣಾಮವಾಗಿ ಸಂಪೂರ್ಣ ಜವಾಬ್ದಾರಿ ಸರಕಾರ ರೂಪಗೊಳ್ಳುವಂತೆ ಮಾಡಬೇಕು- ಎಂದು ಸೂಚನೆ ಮಾಡಿದ್ದೆ. ಸಮಿತಿಯ ಮುಖ್ಯ ವರದಿಯಾದರೋ ಜವಾಬ್ದಾರಿ ಸರಕಾರದ ಯೋಚನೆಯನ್ನು ಕೈಬಿಟ್ಟಿತ್ತು. ಮಿರ್ಜಾ ಸಾಹೇಬರಿಗೆ ಜವಾಬ್ದಾರಿ ಸರಕಾರದ ವಿಷಯದಲ್ಲಿ ವಿಶ್ವಾಸವಿರಲಿಲ್ಲ. ಆದ್ದರಿಂದ ನನ್ನ ಮನವಿಗೆ ಮನ್ನಣೆ ದೊರೆತೀತೆಂದು ಯಾರೂ ಅಂದುಕೊಂಡಿರಲಿಲ್ಲ.

ಆದರೆ ನನ್ನ ಸ್ನೇಹಿತರಲ್ಲಿ ಕೆಲಮಂದಿ ವಿಷಯವನ್ನು ಅಲ್ಲಿಗೇ ಕೈಬಿಡಬಾರದೆಂದು ಪ್ರತಿಜ್ಞೆ ಮಾಡಿದ್ದರು. ಅವರಲ್ಲಿ ಮುಖ್ಯರು ದಿವಂಗತ ಸಂಪಿಗೆ ವೆಂಕಟಪತಯ್ಯನವರು.

# ಒಂದು ಉಪಾಯ

ಈ ತರುಣದಲ್ಲಿ ಒಂದು ಸಂದರ್ಭ ಒದಗಿತು. ಮಹಾತ್ಮ ಗಾಂಧಿಯವರು ದೆಹಲಿಗೆ ಹೋಗುವ ಸಂಭವ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದೇ ವೇಳೆಗೆ, ಮಿರ್ಜಾ ಸಾಹೇಬರು ದೆಹಲಿಗೆ ಹೋಗಬೇಕಾದ ಕಾರವಿತ್ತು. ಈ ಎರಡು ದೆಹಲಿ ಪ್ರಯಾಣಗಳ ಸಂಯೋಗವು ಜವಾಬ್ದಾರಿ ಸರಕಾರವಾದಿಗಳಿಗೆ ಅನುಕೂಲವೆಂದು ನನ್ನ ಮಿತ್ರರಿಗೆ ತೋರಿತು. ಸಂಪಿಗೆ ವೆಂಕಟಪತಯ್ಯನವರು ಆಗ್ಗೆ ಪಟೇಲ್‌ರವರ ಆಪ್ತರಾಗಿದ್ದ ಎಬಿಸಿಯವರ ಸಲಹೆಯನ್ನು ಒಪ್ಪಿದರು. ಆ ಸಲಹೆಯ ಮುಖ್ಯಾಂಶ ಇದು: ನನ್ನ ಭಿನ್ನಾಭಿಪ್ರಾಯದ ಮನವಿಯನ್ನು ನಾನು ಎರಡು ಪುಟಗಳೊಳಗಾಗಿ ಸಂಗ್ರಹ ಮಾಡಿಕೊಡತಕ್ಕದ್ದು. ಆ ಸಂಗ್ರಹ ಪತ್ರಿಕೆಯನ್ನು ಎಬಿಸಿಯವರು ಗಾಂಧಿಯವರ ಸೆಕ್ರೆಟರಿ ಮಹಾದೇವ ದೇಶಾಯರ ಕೈಗೆ ತಲಪಿಸತಕ್ಕದ್ದು. ದೇಶಾಯರು ಅದನ್ನು ತಾವು ಓದಿಕೊಂಡು ಅದನ್ನು ತಕ್ಕ ರೀತಿಯಲ್ಲಿ ಗಾಂಧಿಯವರ ಗಮನಕ್ಕೆ ತರತಕ್ಕದ್ದು. ಮಹಾತ್ಮರು ಮಿರ್ಜಾರವರನ್ನು ಕಂಡಾಗ ಮಿರ್ಜಾರವರನ್ನು ಜವಾಬ್ದಾರಿ ಸರಕಾರಕ್ಕೆ ಒಡಂಬಡಿಸತಕ್ಕದ್ದು. ದೆಹಲಿಯಲ್ಲಿ ಗಾಂಧಿಯವರಿರುವಾಗ, ಅಲ್ಲಿಗೆ ಹೋದ ಮಿರ್ಜಾರವರು ಮಹಾತ್ಮರನ್ನು ಕಾಣದಿರುತ್ತಾರೆಯೆ? ಅವರನ್ನು ಭೇಟಿ ಮಾಡುವುದು ಖಂಡಿತ. ಮಹಾತ್ಮರನ್ನು ಕಂಡಾಗ ಅವರು ನಮ್ಮ ತೀರ್ಮಾನವನ್ನು ಮಿರ್ಜಾರವರಿಗೆ ಹೇಳಿಯೇ ಹೇಳುತ್ತಾರೆ. ಇದು ಖಂಡಿತ. ಮಹಾತ್ಮರು ಹೇಳಿದ ಮಾತನ್ನು ಮಿರ್ಜಾರವರು ಕೇಳಿಯೇ ಕೇಳುತ್ತಾರೆ. ಇದೂ ಖಂಡಿತ. ಹೀಗೆ ಯೋಚನೆ.

ಕೆರೆಯ ನೀರಿನ ನಡುವೆ ಬಕಪಕ್ಷಿ ನಿಂತೇ ಇರುತ್ತದೆ. ನಾವು ಬೆಣ್ಣೆಯ ಉಂಡೆಯನ್ನು ಹಿಡಿದು ನಡೆದುಹೋದರೆ ಅದು ನಮಗೆ ಸಿಕ್ಕುವುದು ಖಂಡಿತ. ನಾವು ಬಕದ ತಲೆಯ ಮೇಲೆ ಬೆಣ್ಣೆಯನ್ನಿಟ್ಟ ಮೇಲೆ ಬಿಸಿಲಿನಿಂದ ಅದು ಕರಗುವುದೂ ಖಂಡಿತ. ಬೆಣ್ಣೆ ಕರಗಿದ ಮೇಲೆ ಅದು ಬಕದ ಕಣ್ಣಿನೊಳಕ್ಕೆ ಇಳಿಯುವುದೂ ಖಂಡಿತ. ಕಣ್ಣಿನೊಳಕ್ಕೆ ಬೆಣ್ಣೆ ಇಳಿದ ಮೇಲೆ ಬಕವು ತಬ್ಬಿಬ್ಬಾಗಿ ನಿಲ್ಲುವುದು ಖಂಡಿತ. ಆಗ ಅದರ ಕೊರಳು ನಮ್ಮ ಕೈಗೆ ಸಿಕ್ಕುವುದೂ ಖಂಡಿತ.

ಮಹಾತ್ಮರು ದೆಹಲಿಗೆ ಹೋದರು. ಮಹಾತ್ಮರು ದೆಹಲಿ ತಲಪುವ ಹಿಂದಿನ ದಿನ ಮಿರ್ಜಾರವರು ದೆಹಲಿಯನ್ನು ಬಿಟ್ಟರು. ಮಿರ್ಜಾರವರು ಬೊಂಬಾಯಿಗೆ ಬರುವರು, ಅಲ್ಲಿ ಖಂಡಿತವಾಗಿ ಮಹಾತ್ಮರ ಭೇಟಿಯಾಗುವುದು-ಎಂದಿತ್ತು ನಮ್ಮ ಆಲೋಚನೆ.

ಮಿರ್ಜಾರವರು ಬೊಂಬಾಯಿ ಮಾರ್ಗವನ್ನು ಹಿಡಿಯದೆ ವಾಲ್ಟೇರ್ ಮಾರ್ಗದಿಂದ ಬೆಂಗಳೂರನ್ನು ಸೇರಿದರು.

# ಉಪನಾಟಕ

ಈ ಭ್ರಾಂತಿವಿಲಾಸದಲ್ಲಿ ಒಂದು ಉಪನಾಟಕ ನಡೆಯಿತು. ಮಿರ್ಜಾಸಾಹೇಬರು ಮದರಾಸಿಗೆ ಬಂದು ಅಲ್ಲಿ ತಮ್ಮ ಸ್ನೇಹಿತರಾದ ಹಲವರನ್ನು ಕಂಡರು. ಅವರಲ್ಲಿ ಮೂವರೊಡನೆ ನನ್ನ ಪ್ರಯತ್ನದ ಪ್ರಸಕ್ತಿಯೆತ್ತಿದ ಹಾಗೆ ಕಾಣುತ್ತದೆ. ಆ ಮೂವರು (೧) ಪಿ. ಎಸ್. ಶಿವಸ್ವಾಮಿ ಅಯ್ಯರ್ (೨) ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು, (೩) ಟಿ. ಆರ್. ವೆಂಕಟರಾಮ ಶಾಸ್ತ್ರಿಗಳು. ಈ ಮೂವರೂ ನನಗೆ ಬೇರೆಬೇರೆಯಾಗಿ ಪತ್ರಗಳನ್ನು ಬರೆದರು. (೧) ಶಿವಸ್ವಾಮಿ ಅಯ್ಯರ್ ಅವರು ಹೀಗೆ ಕೇಳಿದರು: “ನಿನಗೂ ಮಿರ್ಜಾರವರಿಗೂ ಜಗಳ ಬಂದಿದೆ. ಅವರು ಒಳ್ಳೆಯ ಮನುಷ್ಯರು. ನಿನಗೆ ಅವರೊಡನೆ ಏಕೆ ಜಗಳ?” (೨) ಶ್ರೀನಿವಾಸ ಶಾಸ್ತ್ರಿಗಳು: “ನೀನು ಲಿಬರಲ್ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದೀ ಎಂದು ಆಪಾದನೆ. ಇದು ನಿಜವೆ? ಸ್ನೇಹವರ್ಗವನ್ನು ಬಿಟ್ಟು ಪ್ರತಿವರ್ಗಕ್ಕೆ ಸೇರಿಕೊಂಡಿದ್ದೀಯಂತೆ. ಹೌದೋ?” (೩) ವೆಂಕಟರಾಮಶಾಸ್ತ್ರಿಗಳು: “ರಾಜಕೀಯದಲ್ಲಿ ಅಭಿಪ್ರಾಯಭೇದ ಬಂದರೆ ನಮ್ಮ ವೈಯಕ್ತಿಕ ಸಂಬಂಧಗಳಲ್ಲಿ ಹಳೆಯ ಸ್ನೇಹಗಳನ್ನು ಮುರಿದೇ ಹಾಕುವುದು ಅವಶ್ಯವೆ?”

ಈ ಮೂರು ಮಂದಿ ಮಹನೀಯರಿಗೂ ನಾನು ಬೇರೆ ಬೇರೆಯಾಗಿ ಉತ್ತರಗಳನ್ನು ಬರೆದೆ. ಮೂರು ಉತ್ತರಗಳಲ್ಲಿಯೂ ಇದ್ದ ಮಾತು ಸ್ನೇಹವನ್ನು ಕುರಿತದ್ದು. ಮಿರ್ಜಾರವರಿಗೂ ನನಗೂ ಇದ್ದದ್ದು ಎಂಥ ಸ್ನೇಹ? ನಾವಿಬ್ಬರೂ ಒಂದು ಊರಿನವರಲ್ಲ, ಒಂದು ಕುಲದವರಲ್ಲ, ಒಂದೇ ಕಡೆ ಓದಿದವರಲ್ಲ, ಒಂದು ಕಸಬಿನವರಲ್ಲ. ಅವರ ಜಾಗ ಆನೆಯ ಮೇಲಿನ ಅಂಬಾರಿಯಲ್ಲಿ; ನನ್ನ ಜಾಗ ಕಾಲಿಗೆ ಕೆರವಿಲ್ಲದೆ ನಡೆಯುವ ನೆಲದ ಮೇಲೆ. ಇಂಥವರಲ್ಲಿ ಎಷ್ಟು ಮಾತ್ರ ಸ್ನೇಹ ಇದ್ದೀತು? ನನ್ನ ರಾಜಕೀಯ ಉದ್ದೇಶಕ್ಕೆ ಮಿರ್ಜಾರವರು ಅನುಕೂಲರಾದಾರೆಂದು ನಾನು ಭ್ರಮಿಸಿದ್ದೆ. ತಮ್ಮ ರಾಜಕೀಯಕ್ಕೆ ನಾನು ಅನುಕೂಲನಾದೇನೆಂದು ಅವರು ಭ್ರಮಿಸಿದ್ದಿರಬಹುದು. ಒಬ್ಬ ಗಂಡೂ ಒಬ್ಬ ಹೆಣ್ಣೂ ಅನ್ಯೋನ್ಯ ಆಕರ್ಷಿತರಾಗಿ ಇಬ್ಬರೂ ಸೇರಿದ ಮೇಲೆ ಅವನ ಬೆನ್ನು ಉಬ್ಬೆಂದು ಆಕೆಯೂ, ಆಕೆಯ ಬೆನ್ನು ಕಪ್ಪೆಂದು ಆತನೂ ಕಂಡುಕೊಳ್ಳುತ್ತಾರೆ. ಆಮೇಲೆ ಅವನ ಪಾಡು ಅವನದು. ಆಕೆಯ ಪಾಡು ಆಕೆಯದು.

ನನ್ನ ಕಾಗದವನ್ನು ನೋಡಿ ಶಿವಸ್ವಾಮಿ ಅಯ್ಯರು ಕೊಂಚ ಬೇಸರಪಟ್ಟಿರಬಹುದು. ಅವರು ಈ ವಿಚಾರವನ್ನು ಮತ್ತೊಮ್ಮೆ ನನ್ನಲ್ಲಿ ಎತ್ತಲಿಲ್ಲ. ವೆಂಕಟರಾಮಶಾಸ್ತ್ರಿಗಳಿಗೆ

ಸಮಾಧಾನವಾಗಲಿಲ್ಲ. ಅವರು ನನ್ನನ್ನು ಆಕ್ಷೇಪಣೆಮಾಡಿ ಬರೆದರು. ಈಗ ಶ್ರೀನಿವಾಸ ಶಾಸ್ತ್ರಿಗಳ ಪ್ರತಿಕ್ರಿಯೆಯನ್ನು ಹೇಳುತ್ತೇನೆ, ಅದೇ ಇಲ್ಲಿ ಸಂಗತವಾದದ್ದು.

# ಸ್ನೇಹ ದೊಡ್ಡದು

ಶ್ರೀನಿವಾಸಶಾಸ್ತ್ರಿಗಳು ನಾನು ಹೇಳಿದ್ದರ ಒಂದು ಭಾಗವನ್ನು ಒಪ್ಪಿಕೊಂಡರು. “ಇಂಥ ಅನುಭವ ನನಗೂ ಆಗಿದೆ. ಪಂಜಾಬ್ ಗಲಾಟೆಗಳ ಕಾಲದಲ್ಲಿ ನನ್ನ ಮೇಲೆ ವೈಸರಾಯರಲ್ಲಿಯೂ ಅವರ ಮಂತ್ರಿಗಳಲ್ಲಿಯೂ ಚಾಡಿ ಹೇಳಿದವರಿದ್ದಾರೆ. (ಒಂದೆರಡು ಹೆಸರುಗಳನ್ನು ಹೇಳಿ) ಇವರು ಆ ಪುಣ್ಯ ಕಟ್ಟಿಕೊಂಡರು. ಅದಕ್ಕೆ ನಾವು ಏನು ಮಾಡಲಿಕ್ಕಾಗುತ್ತದೆ? ನಮನಮಗೆ ರಾಜನಾದವನು ನಮ್ಮ ನಮ್ಮ ಅಂತಸ್ಸಾಕ್ಷಿ. ಆ ಸ್ವಾಮಿಗೆ ದ್ರೋಹ ಮಾಡದೆ ಇರಬೇಕು ಅದರಿಂದ ನಮಗೇನಾದರೂ ಹಾನಿ ಬಂದರೆ ಅದನ್ನು ಅನುಭವಿಸಬೇಕು.”

“ಆದರೆ ನೀನು ಯಾವ ಸ್ನೇಹಿತರನ್ನೂ ತೊರೆಯಬಾರದು. ರಾಜಕೀಯ ಬಿಟ್ಟು ಜೀವನ ಕ್ಷೇತ್ರಗಳೆಷ್ಟೋ ಇದೆ. ಸ್ನೇಹವು ಸಮಾಜ ಕ್ಷೇತ್ರಗಳಲ್ಲಿ ತಂಪನ್ನೂ ನೆಮ್ಮದಿಯನ್ನೂ ಉಂಟುಮಾಡಬೇಕಾದದ್ದು. ಆದದ್ದರಿಂದ ವೈಯಕ್ತಿಕ ಸಂಬಂಧಗಳಲ್ಲಿ ಹಳೆಯ ಸ್ನೇಹವನ್ನು ಮರೆಯಬಾರದು. ಅದನ್ನು ಮತ್ತಷ್ಟು ಪೋಷಿಸಿ ಬಲಪಡಿಸಿಕೊಳ್ಳಬೇಕು.”

ಈ ಉಪದೇಶಕ್ಕೆ ಅನುಸಾರವಾದ ಒಂದು ಸಂಗತಿ ನನಗೆ ಜ್ಞಾಪಕಕ್ಕೆ ಬರುತ್ತದೆ.

# ನನ್ನ ಹಟ

೧೯೨೮ರಲ್ಲಿ ಸುಲ್ತಾನ್ ಪೇಟೆಯ ಹಿಂದೂ-ಮುಸ್ಲಿಂ ಗಲಭೆಗಳು ನಡೆದವಷ್ಟೆ. ಈ ಸಂದರ್ಭದಲ್ಲಿ ಎರಡು ಕಕ್ಷಿಗಳು ಹುಟ್ಟಿಕೊಂಡವು. ಒಂದು ಹಿಂದೂಗಳದು, ಇನ್ನೊಂದು ಮುಸಲ್ಮಾನರದು. ಕಾಲಕ್ರಮದಲ್ಲಿ ಈ ಎರಡೇ ಪ್ರಜಾಪಕ್ಷ, ಸರಕಾರದ ಪಕ್ಷ ಎಂದು ಮಾರ್ಪಾಟು ಹೊಂದಿದವು. ನಾನು ಪ್ರಜಾಪಕ್ಷಕ್ಕೆ ಅಥವಾ ಹಿಂದೂ ಪಕ್ಷಕ್ಕೆ ಸೇರಿದವನೆಂದು ಮಿರ್ಜಾರವರಿಗನ್ನಿಸಿತು. ಹೀಗೆ ಪ್ರಾರಂಭವಾದದ್ದು ಬಲಿತು ಮನಸ್ತಾಪವಾಯಿತು. ನಾನು ಮಿರ್ಜಾರವರಲ್ಲಿಗೆ ಹೋಗುವುದನ್ನು ನಿಲ್ಲಿಸಿದೆ. ಒಂದೆರಡು ಸಾರಿ ಮಿರ್ಜಾರವರು ಸ್ನೇಹಿತರ ಮೂಲಕ ನನಗೆ ಹೇಳಿಕಳಿಸಿದರು. ನಾನು ಹೋಗಲಿಲ್ಲ. ಒಂದು ಸಾರಿ ನವರತ್ನ ರಾಮರಾಯರು ನನಗೆ ಹೇಳಿದರು: “ಅಯ್ಯಾ, ನಿನ್ನ ರಾಜಕೀಯ ಹೇಗಾದರಿರಲಿ. ಅದರ ತಂಟೆಗೆ ನಾನು ಬರುವುದಿಲ್ಲ. ಆದರೆ ಸಾಹೇಬರು ನಿನ್ನಲ್ಲಿ ಪ್ರೀತಿ ಇಟ್ಟಿದ್ದಾರೆ. ನಿನ್ನ ಮಕ್ಕಳಿಗೋಸ್ಕರ ಎಂದು ಬೊಂಬಾಯಿಂದ ಗೊಂಬೆಗಳನ್ನು ತಂದಿದ್ದಾರೆ. ನೀನು ಹೋಗಿ ಆ ಸಾಮಾನುಗಳನ್ನು ತೆಗೆದುಕೊಂಡು ಬರಬಹುದಲ್ಲ?” ಎಂದರು. ನಾನು ಒಲ್ಲೆನೆಂದೆ.

“ಹಾಗಾದರೆ ನಾನು ಆ ಸಾಮಾನುಗಳನ್ನು ತಂದುಕೊಡುತ್ತೇನೆ. ತೆಗೆದುಕೊ” ಎಂದರು.

ನಾನು “ಬಿಲ್‌ಕುಲ್ ಆಗದು. ಮಾಫ್ ಮಾಡಬೇಕು” ಎಂದೆ.

ಈ ವೈಷಮ್ಯದ ಕಥೆಯನ್ನು ನನ್ನ ಸ್ನೇಹಿತರು ಶ್ರೀನಿವಾಸಶಾಸ್ತ್ರಿಗಳ ಕಿವಿಗೆ ಹಾಕಿದ್ದರೆಂದು ತೋರುತ್ತದೆ.

# ಪುನಸ್ಸಮಾಗಮ

ಆ ವರ್ಷ ಬೇಸಗೆಯಲ್ಲಿ ಶ್ರೀನಿವಾಸಶಾಸ್ತ್ರಿಗಳು ಬಸವನಗುಡಿಯ ಬಿ. ಪಿ. ವಾಡಿಯ ರಸ್ತೆಯಲ್ಲಿರುವ ಸೀತಾಲಯ ಎಂಬ ಮನೆಯಲ್ಲಿ ಬಿಡಾರ ಮಾಡಿದ್ದರು. ಆಗ ಶಾಸ್ತ್ರಿಗಳ ಅರವತ್ತೊಂದನೆಯ ಹುಟ್ಟುಹಬ್ಬ ಬಂತು. ಮದರಾಸು ಮೊದಲಾದೆಡೆಗಳಿಂದ ಶಾಸ್ತ್ರಿಗಳ ಬಂಧುಗಳೂ ಸ್ನೇಹಿತರೂ ಬಹುಮಂದಿ ಬಂದಿದ್ದರು. ಅವರ ಗೌರವಕ್ಕಾಗಿ ಶಾಸ್ತ್ರಿಗಳ ಬೆಂಗಳೂರು ಸ್ನೇಹಿತರು ಒಂದು ಸಂತೋಷಕೂಟವನ್ನೇರ್ಪಡಿಸಿದ್ದರು. ಅದಕ್ಕಾಗಿ ಮಿರ್ಜಾರವರಿಗೂ ಕರೆಹೋಗಿತ್ತು. ಮಿರ್ಜಾರವರು ಸಂಜೆ ೫ ಘಂಟೆಯ ಸುಮಾರಿಗೆ ಬರುವುದಾಗಿ ಹೇಳಿ ಕಳುಹಿಸಿದ್ದರು. ಇದು ನನಗೆ ತಿಳಿದ ಮೇಲೆ, ನಾನು ಮನೆಯ ಹೊರಗೆ ಚಪ್ಪರದಲ್ಲಿದ್ದರೆ ಭೇಟಿಯಾಗುವುದು ಅನಿವಾರ್ಯ, ಆದಕಾರಣ ಮನೆಯ ಒಳಗಡೆಯ ಒಳಗಡೆ, ಅಡಿಗೆ ಮನೆಯ ಪ್ರಾಂತದಲ್ಲಿದ್ದರೆ ನಿಶ್ಚಿಂತೆಯಾಗುತ್ತದೆಂದು ಯೋಚಿಸಿ ಅಲ್ಲಿ ಶಾಸ್ತ್ರಿಗಳ ಭಾರ್ಯೆಯೊಡನೆಯೂ ಮಕ್ಕಳೊಡನೆಯೂ ಮಾತನಾಡಿಕೊಂಡು ಕುಳಿತಿದ್ದೆ. ನಾನು ಹೀಗಿದ್ದಾಗ ಹೊರಗಡೆ ಮಿರ್ಜಾರವರು ಬಂದರು. ಅಲ್ಲಿದ್ದವರು ಸಾಹೇಬರನ್ನು ಸ್ವಾಗತಿಸಿದರು. ಅವರೂ ಶಾಸ್ತ್ರಿಗಳವರೂ ಷಾಮಿಯಾನ ಚಪ್ಪರದಲ್ಲಿ ಕುಳಿತು ಮಾತುಕಥೆಯಾಡುತ್ತಿದ್ದರು. ಆ ಮಾತಿನ ನಡುವೆ ಶಾಸ್ತ್ರಿಗಳವರು “ಅಯ್ಯಾ ಗುಂಡಪ್ಪಾ, ಇಲ್ಲಿ ಬಾ, ಬೇಗ ಬಾ, ಬಾರಯ್ಯ ಬೇಗ” -ಎಂದು ಕೂಗಿದರು. ಅಲ್ಲಿದ್ದ ಇತರ ಸ್ನೇಹಿತರು ನನ್ನ ಎರಡು ರಟ್ಟೆಗಳನ್ನೂ ಹಿಡಿದು ದರದರ ಸೆಳೆದುಕೊಂಡು ಹೋದರು. ಮಿರ್ಜಾ ಸಾಹೇಬರು ನಗುತ್ತಿದ್ದರು. ಶಾಸ್ತ್ರಿಗಳು ಇನ್ನೂ ನಗುತ್ತಿದ್ದರು. ಎದುರೆದುರಿಗೇ ಕಂಡ ಮೇಲೆ ಹಳೆಯ ಕೋಪತಾಪಗಳು ಉಳಿದಿರುತ್ತವೆಯೆ? ಆಗ ನಾವಿಬ್ಬರೂ ಕೈಕುಲುಕಿದೆವು. ಅಲ್ಲಿಂದ ನಮಗಿಬ್ಬರಿಗೂ ಎಂದೂ ಯಾವ ಮನಸ್ತಾಪವೂ ಬಂದಿರಲಿಲ್ಲವೇನೋ- ಎಂಬಂತೆ ನಡೆದುಕೊಂಡೆವು.

ಶಾಸ್ತ್ರಿಗಳಿಗೆ ಮನಸ್ಸಿನಲ್ಲಿದ್ದ ಶಂಕೆ ಪೂರ್ತಿ ಪರಿಹಾರವಾಗಲಿಲ್ಲವೆಂದು ತೋರುತ್ತದೆ. ಆ ರಾತ್ರಿ ಭೋಜನಕಾಲದಲ್ಲಿ ನನ್ನನ್ನು ತರಾಟೆಗೆ ತೆಗೆದುಕೊಂಡರು. ಬಾಯಿಗೆ ಬಂದಂತೆಲ್ಲ ನನಗೆ ಮುಖಪ್ರಕ್ಷಾಳನವಾಯಿತು. ಆಗ ಅಲ್ಲಿದ್ದವರಲ್ಲಿ ಇಬ್ಬರು ಮೂವರ ಹೆಸರುಗಳನ್ನು ಹೇಳುತ್ತೇನೆ. ಮದರಾಸಿನ ಪ್ರಸಿದ್ಧ ವಕೀಲರು ಧರ್ಮರಕ್ಷಾಮಣಿ ಬಾಲಸುಬ್ರಹ್ಮಣ್ಯ ಅಯ್ಯರ್ ಅವರು, ಲೈಬ್ರರಿ ಸಯನ್ಸಿನ ಪ್ರವರ್ತಕರಾದ ವಕೀಲ್ ದಿವಾನ್ ಬಹದ್ದೂರ್ ಕೆ.

ವಿ. ಕೃಷ್ಣಸ್ವಾಮಿ ಅಯ್ಯರ್, ಪೂಜ್ಯರಾದ ಎಲ್. ಎ. ಗೋವಿಂದರಾಘವಯ್ಯರ್. ಇಂಥವರೆದುರಿಗೆ ಛೀಮಾರಿ ಹಾಕಿಸಿಕೊಂಡ ಭಂಡ ನಾನು!

# ಸ್ನೇಹರಸ

ಅಲ್ಲಿಗೆ ಮುಗಿಯಲಿಲ್ಲ. ಮಾರನೆಯ ದಿನ ಸಂಜೆ ಸೆಂಚುರಿ ಕ್ಲಬ್ಬಿನಲ್ಲಿ ಶಾಸ್ತ್ರಿಗಳಿಗೆ ಔತಣ. ಭಾರಿ ಸಭೆ. ಆಗ ಶಾಸ್ತ್ರಿಗಳು ಮಾಡಿದ ಭಾಷಣದಲ್ಲಿ ಅವರು ನನ್ನ ಹೆಸರನ್ನಾಗಲಿ ಮಿರ್ಜಾರವರ ಹೆಸರನ್ನಾಗಲಿ ಎತ್ತದೆ ಇದ್ದರೂ ಅವರ ಮಾತುಮಾತೂ ನನ್ನನ್ನು ಉದ್ದೇಶಿಸಿ ಆಡಿದ್ದಂತೆ ನನಗೆ ಭಾಸವಾಗುತ್ತಿತ್ತು. “ಸ್ನೇಹ ದೊಡ್ಡದು. ನಮ್ಮ ನಮ್ಮ ಅಭಿಪ್ರಾಯಗಳಿಗಿಂತ ದೊಡ್ಡದು. ನಮ್ಮ ಅಭಿಪ್ರಾಯಗಳನ್ನು ನಾವು ಬದಲಾಯಿಸಿಕೊಳ್ಳುವುದು ಎಷ್ಟೋ ಸಾರಿ ಕರ್ತವ್ಯವಾಗುತ್ತದೆ. ಅಭಿಪ್ರಾಯವೆಂಬುದು ಬುದ್ಧಿಕ್ರಿಯೆ. ಬುದ್ಧಿಗೆ ಸಾಮಗ್ರಿ ಹೊಸಹೊಸದಾಗಿ ದೊರೆತಂತೆಲ್ಲ ಬುದ್ಧಿಯು ಅಭಿಪ್ರಾಯವನ್ನು ತಿದ್ದುತ್ತದೆ. ಸ್ನೇಹವಾದರೋ ಹೃದಯಕ್ರಿಯೆ. ಅದು ಸರ್ವದಾ ನಮ್ಮ ಆತ್ಮ ವಿಕಾಸಕ್ಕೆ ಸಾಧನವಾಗುತ್ತದೆ. ಸ್ನೇಹವಿಲ್ಲದ ಜೀವನ ಬಡಜೀವನ. ನಮ್ಮ ದೇಶದಲ್ಲಿ ನಾವು ಈಗ ರಾಜಕೀಯವನ್ನು ಅತಿ ಮಾಡಿಕೊಂಡಿದ್ದೇವೆ. ಈ ಅತಿಯಲ್ಲಿ ಕ್ರೋಧಾವೇಶಗಳು ಪ್ರಬಲಿಸಿ ಜೀವನದ ಮಿಕ್ಕೆಲ್ಲ ಕ್ಷೇತ್ರಗಳನ್ನೂ ಹಾಳುಮಾಡುತ್ತವೆ. ನಮ್ಮ ರಾಜಕೀಯ ಭೇದಗಳಲ್ಲಿ ನಾವು ನಮ್ಮ ಮಾನವತ್ವವನ್ನು ಮರೆಯಬಾರದು. ಮಾನವತ್ವಕ್ಕೆ ಸಲ್ಲುವ ಗೌರವವನ್ನೂ ಪ್ರೀತಿಯನ್ನೂ ಮರೆಯಬಾರದು. ಅಭಿಪ್ರಾಯ ಭೇದವಿದ್ದರೆ ಇದ್ದುಕೊಳ್ಳಲಿ. ಅದರಿಂದ ಆದ ಗಾಯವನ್ನು ಮಾಯಿಸಬಲ್ಲ ಔಷಧ ಸ್ನೇಹ ರಸ.”

# ನನ್ನ ಅತ್ಯುತ್ಸಾಹ

ಶಾಸ್ತ್ರಿಗಳು ನನ್ನ ವೈಲಕ್ಷಣ್ಯಗಳನ್ನು ಆಗಾಗ ಪ್ರಸ್ತಾವಿಸಿ ಹಾಸ್ಯಮಾಡುತ್ತಿದ್ದದ್ದುಂಟು. ನನಗೆ ಮಾರ್ಲೆ (John Morley) ಲೇಖಕನ ಕೃತಿಗಳ ವಿಷಯದಲ್ಲಿ ಹೆಚ್ಚು ಅಭಿಮಾನ. ಆತನು ಮುಖ್ಯವಾಗಿ ಚಾರಿತ್ರಿಕ ಪ್ರಬಂಧಕರ್ತ. ಗ್ಲ್ಯಾಡ್‌ಸ್ಟನ್, ಕಾಬ್ಡನ್ ಮೊದಲಾದ ರಾಜ್ಯಕುಶಲಿಗಳ ಚರಿತ್ರೆಗಳನ್ನು ಬರೆದಿದ್ದಾನೆ. ಫ್ರಾನ್ಸಿನ ರೂಸೊ, ವಾಲ್ಟೇರ್ ಮೊದಲಾದವರನ್ನು ಕುರಿತು ಬರೆದಿದ್ದಾನೆ. ಹಾಗೆಯೇ ಇಟಲಿಯ ಮೆಕೆವೆಲ್ಲಿ, ಜಿಚಿಯಾರ್ಡಿನಿ ಮೊದಲಾದ ರಾಜ್ಯನೀತಿ ನಿಪುಣರನ್ನೂ ಕುರಿತು ಬರೆದಿದ್ದಾನೆ. ಆತ ಮಹಾ ವಿದ್ವಾಂಸ ಮತ್ತು ಸ್ವತಂತ್ರ ತತ್ತ್ವವಿಚಾರಿ. ಆತನ ಶೈಲಿ ಗಂಭೀರವಾಗಿ, ಭಾವಪೂರಿತವಾಗಿ, ವಿಚಾರಪ್ರಚೋದಕವಾಗಿರುತ್ತದೆ. ಆ ವಾಕ್ಯಗಳನ್ನು ಓದುವಾಗ ನಮ್ಮ ಮನಸ್ಸಿನ ಒಳಗಡೆಯೇ ಯಾವುದೋ ಒಂದು ತೇಜಸ್ಸು ಹರಿಯುತ್ತಿರುವಂತೆ ನಮಗೆ ಭಾಸವಾಗುತ್ತದೆ. ಈ ಮಾರ್ಲೆ ಲೇಖಕನ ವಾಕ್ಯಗಳನ್ನು ನಾನು ಆಗಾಗ ಉದಾಹರಿಸುತ್ತಿದ್ದದ್ದುಂಟು.

ಯಾವುದೋ ಒಂದು ಸಂದರ್ಭದಲ್ಲಿ ನಾನು ಮಾರ್ಲೆಯನ್ನು ಅತಿ ಮಾಡುತ್ತಿದ್ದೇನೆಂದು ಶಾಸ್ತ್ರಿಗಳಿಗೆ ರೇಗಿತು. ಅವರೂ ಮಾರ್ಲೆಯನ್ನು ಮೆಚ್ಚಿಕೊಂಡಿದ್ದವರೇ. ಆದರೆ ನನ್ನ ಮೆಚ್ಚಿಕೆ ಅತಿಯೆಂದು ಅವರಿಗನ್ನಿಸಿತು. ನನ್ನನ್ನು ಕೊಂಚ ಹಾಸ್ಯಮಾಡಿದರು. (ತಮಿಳಿನಲ್ಲಿ) “ಕೆಲವು ಜನ ಕೋತಿಯನ್ನು ನೋಡಿದಾಗಲೆಲ್ಲ ‘ನೀನೇ ಆಂಜನೇಯ’ ಎಂದು ತಮ್ಮ ಕಪಾಳಕ್ಕೆ ಹೊಡೆದುಕೊಳ್ಳುತ್ತಾರೆ. ನೀನು ಅಂಥ ಭಕ್ತರಂತೆ ಆಗಿದ್ದಿ” (ಕೆನ್ನೆ ಬಡಿದುಕೊಳ್ಳುವುದನ್ನು ಅನುಕರಣ ಮಾಡಿದರು.) ಅಲ್ಲಿದ್ದವರಿಗೆಲ್ಲ ನಗು ಬಂದಿತು. ನಾನೂ ನಕ್ಕೆ.

# ಗ್ರಂಥಾಭಿಮಾನ

ಮಾತು ಮುಂದುವರಿದಾಗ ಶಾಸ್ತ್ರಿಗಳು ಹೇಳಿದರು: “ನಾನು ಮಾರ್ಲೆಯನ್ನು ಹೀನಾಯ ಮಾಡುತ್ತಿಲ್ಲ. ಮಾರ್ಲೆಯ ಗ್ರಂಥಗಳನ್ನು ‘ಡಿ ಲೂಷ್’ (De-luxe) ಎಂಬ ಸೊಗಸಾದ ರಟ್ಟು ಹಾಕಿದ ಒಂದು ಸಮಗ್ರ ಗ್ರಂಥ ಸಮುಚ್ಚಯವನ್ನು ಕೊಂಡುಕೊಳ್ಳಬೇಕೆಂದಿದ್ದೆ. ಆದರೆ ಹಣ? ಆ ಸಮುಚ್ಚಯದಲ್ಲಿದ್ದದ್ದು ಸುಮಾರು ಇಪ್ಪತ್ತೋ ಇಪ್ಪತ್ತೆರಡೋ ಸಂಪುಟಗಳು. ಒಂದೊಂದು ಸಂಪುಟದ ಬೆಲೆ ೨೧ ಗಿನಿ. ಅಷ್ಟು ಹಣ ನನಗೆಲ್ಲಿ ಬಂದೀತು?...”

ಯಾರೋ ಕೇಳಿದರು: “ಅದೇಕೆ ಅಷ್ಟು ಬೆಲೆ?”

ಶಾಸ್ತ್ರಿಗಳು ಹೇಳಿದರು: “ಈ ‘ಡಿ ಲೂಷ್’ ಆವೃತ್ತಿಯಲ್ಲಿ ತಯಾರಾಗಿರುವುದು ಐನೂರೇ ಪ್ರತಿಗಳಂತೆ. ಸೊಗಸಾದ ಕಾಗದ. ಬಹು ಸೊಗಸಾದ ದಪ್ಪದಪ್ಪನೆಯ ಅಕ್ಷರ. ಸೊಗಸಾದ ಗಿಲ್ಟಿನ ರಟ್ಟು. ಒಂದೊಂದು ಪ್ರತಿಯಲ್ಲೂ ಮಾರ್ಲೆಯ ಕೈಬರಹದ ರುಜು. ಆ ಪ್ರತಿಗಳಿಗೆ ಪ್ರಕಟವಾಗುವುದಕ್ಕೆ ಮೊದಲೇ ಗಿರಾಕಿಗಳು ಹೆಸರನ್ನು ದಾಖಲು ಮಾಡಿದ್ದರು. ತಡಮಾಡಿ ಕೇಳಿದವರಿಗೆ ಪ್ರತಿಗಳೇ ದೊರಕಲಿಲ್ಲ.

“ಒಂದು ವಿಶೇಷ ಹೇಳುತ್ತೇನೆ. ಮೊದಲೇ ಹೆಸರು ಕೊಟ್ಟು ಗ್ರಂಥ ಸಮುಚ್ಚಯವನ್ನು ಕೊಂಡುಕೊಂಡವರಲ್ಲಿ ಮಹಾರಾಜಾ ರಣಜಿತ್ ಸಿಂಹರವರೂ ಒಬ್ಬರು. ಇವರು ಜಾಂನಗರ್ ಸಂಸ್ಥಾನದ ಮಹಾರಾಜರು. ಕ್ರಿಕೆಟ್ ಆಟದಲ್ಲಿ ಮಹಾಪ್ರಖ್ಯಾತರಾದವರು. ಅವರು ಬಹುಮಟ್ಟಿಗೆ ಇಂಗ್ಲೆಂಡಿನಲ್ಲಿಯೇ ಇರುತ್ತಿದ್ದರು. ಅವರು ಮಾರ್ಲೆ ಗ್ರಂಥಸಮುಚ್ಚಯದ ‘ಡಿ ಲೂಷ್’ ಆವೃತ್ತಿಯನ್ನು ಕೊಂಡುಕೊಂಡದ್ದು ಮಾತ್ರವಲ್ಲ. ಆ ಪುಸ್ತಕಗಳನ್ನು ಒಬ್ಬ ಸ್ಪೆಷಲ್ ಬೈಂಡರಿಗೆ ಕೊಟ್ಟು ಅದಕ್ಕಿದ್ದ ರಟ್ಟುಗಳನ್ನು ಕಿತ್ತುಹಾಕಿಸಿ ಹೊಸ ರಟ್ಟುಗಳನ್ನು ಕಟ್ಟಿಸಿದರು. ಆ ಹೊಸ ರಟ್ಟಿನಲ್ಲಿ ಚಿನ್ನದಲ್ಲಿ ಕೆತ್ತಿದ ಚಿತ್ರಗಳು. ಕೆಂಪು ಪಚ್ಚೆ ಮುಂತಾದ ರತ್ನಗಳು. ಅಲ್ಲಲ್ಲಿ ವಜ್ರದ ಹರಳುಗಳು. ಈ ಚಿನ್ನ ರನ್ನಗಳಿಂದ ಹೆಸರುಗಳನ್ನೂ ಅಲಂಕಾರಗಳನ್ನೂ ಮಾಡಿಸಿದರು. ನೋಡುವವರ ಕಣ್ಣಿಗೆ ಥಳಥಳನೆ ರಂಗುರಂಗಾಗಿ ಹೊಳೆಯುತ್ತಿತ್ತು.”

ನಾನು: "ಹಾಗಾದರೆ ರಣಜಿತ್‌ಸಿಂಗರು ಮಹಾ ವಿದ್ವಾಂಸರಾಗಿರಬೇಕು. ಮಾರ್ಲೆಯ ಮೇಲೆ ಇಷ್ಟು ಅಭಿಮಾನವಿರಬೇಕಾದರೆ ಚರಿತ್ರೆಯಲ್ಲೂ ರಾಜ್ಯಶಾಸ್ತ್ರದಲ್ಲೂ ಆತ ವ್ಯಾಸಂಗ ಮಾಡಿರಬೇಕು."

ಶಾಸ್ತ್ರಿಗಳು: "ನೀನು ಹುಚ್ಚ. ಓದುವುದಕ್ಕೆಂದು ಯಾರಾದರೂ ಪುಸ್ತಕ ಕೊಳ್ಳುತ್ತಾರೆಯೆ? ಪುಸ್ತಕ ಕೊಂಡುಕೊಳ್ಳುವುದು ಬೀರುವಿನಲ್ಲಿಟ್ಟು, ಬಂದವರು ಅದನ್ನು ನೋಡಲೆಂಬ ಅಭಿಪ್ರಾಯದಿಂದ. ಪರಂಗಿಯವರಲ್ಲಿ ಇಂಥ ಥಳಥಳಿಸುವ ಪದಾರ್ಥಗಳ ಮೇಲೆ ತುಂಬಾ ವ್ಯಾಮೋಹ. ಅದನ್ನು ನೋಡಿ ಹೆಂಗಸರು ಬೆರಗು ಬೀಳುತ್ತಾರೆ."

ಇನ್ನೊಬ್ಬರು: "ಹಾಗಾದರೆ ಬರಿಯ ಪ್ರದರ್ಶನ ಪದಾರ್ಥವೋ ಅದು?"

ಶಾಸ್ತ್ರಿಗಳು: "ಮಾರ್ಲೆಯವರು ಇಂಡಿಯದ ಸೆಕ್ರೆಟರಿ ಆಫ್ ಸ್ಟೇಟ್. ಇಂಗ್ಲೆಂಡಿನ ಮಂತ್ರಿಗಳಲ್ಲಿ ಪ್ರಭಾವಶಾಲಿಯಾದವನು. ಈ ಸಂಗತಿಯನ್ನೂ ಮರೆಯಬೇಡಿ. ನಮ್ಮ ರಾಜಮಹಾರಾಜರುಗಳಲ್ಲಿ ಬ್ರಿಟಿಷ್ ಮಂತ್ರಿಗಳ ಮುಖೋಲ್ಲಾಸ ಮಾಡಬೇಕೆಂಬ ತಾತ್ಪರ್ಯವುಳ್ಳವರು ಅಪರೂಪವೇನಲ್ಲ."

# ಮಾನವೀಯತೆ

ಶ್ರೀನಿವಾಸಶಾಸ್ತ್ರಿಗಳಲ್ಲಿ ಲೋಕದ ಮೆಚ್ಚಿಕೆಗೆ ತಕ್ಕ ಗುಣಸಂಪತ್ತು ಬಹು ವಿಧವಾಗಿತ್ತು. ಅವರ ವಿದ್ವತ್ತು, ಅವರ ವಾಗ್ಮಿತೆ, ಅವರ ಮನಸ್ಸಿನ ವಿಶಾಲತೆ, ಅವರ ಔದಾರ್ಯ, ಅವರ ಗಾಂಭೀರ್ಯ, ಅವರ ನೀತಿ ಸೂಕ್ಷ್ಮ ಚತುರತೆ, ಅವರ ರಾಜಕೀಯ ಸಂಧಾನ ಹೀಗೆ ಅವರ ಗುಣಾತಿಶಯಗಳೂ ಪ್ರಭಾವಗಳೂ ನಾಲ್ಕಾರು ಬಗೆಯಾಗಿದ್ದವು. ಅವೆಲ್ಲ ಅಸಾಮಾನ್ಯವಾದ ಗುಣಶಕ್ತಿಗಳೆಂಬುದರಲ್ಲಿ ಸಂದೇಹವಿಲ್ಲ.

ಆದರೆ ನನಗೆ ವೈಯಕ್ತಿಕವಾಗಿ ಇದ್ದ ಆಕರ್ಷಣೆ ಅವರ ಮಾನವೀಯತೆ. ಮಾನವೀಯತೆಯೆಂದರೆ ಮಾನವಜಾತಿಗೆ ಸಹಜವಾದ ಸಹಾನುಭೂತಿ, ಮನುಷ್ಯಮಾತ್ರನಲ್ಲಿ ಎಷ್ಟೋ ದುರ್ಬಲತೆಗಳೂ, ಚಪಲಗಳೂ, ಮುಚ್ಚುಮರೆಗಳೂ, ಅಸಹನೆಗಳೂ ಸ್ವಾಭಾವಿಕವಾಗಿರುತ್ತವೆ. ಈ ನಾನಾ ಗುಣ ನ್ಯೂನತೆಗಳಲ್ಲಿ ಬಹುಭಾಗ ಸಾಮಾನ್ಯವಾಗಿ ಗುಪ್ತವಾಗಿರುತ್ತವೆ. ಅವು ಮನುಷ್ಯನಲ್ಲಿ ಉಂಟೆಂಬುದರ ಸುಳಿವೇ ತೋರಿಬಾರದಿರುತ್ತವೆ. ಅಂಥ ಗೂಢ ದೌರ್ಬಲ್ಯಗಳು ವ್ಯಕ್ತವಾದಾಗ ಅದರ ವಿಷಯದಲ್ಲಿ ಅತ್ಯಾಗ್ರಹ ತೋರದೆ ಒಂದು ನಯದಿಂದ ಅದನ್ನು ಸಹಿಸಿ ಆ ದೌರ್ಬಲ್ಯವಿಲ್ಲವೆನಿಸುವಂತೆ ಮಾಡುವುದು ಮಾನವೀಯತೆ. ಇನ್ನೊಬ್ಬರಲ್ಲಿ ನಾವು ಯಾವ ಲೋಪವನ್ನೋ ಅತಿರೇಕವನ್ನೋ ಆಕ್ಷೇಪಿಸಬೇಕೆಂದೆನಿಸುತ್ತದೆಯೋ ಆ ಲೋಪ ಅಥವಾ ಆ ಅತಿರೇಕ ನಮ್ಮೊಳಗೂ ಗೂಢವಾಗಿ ಇರಲಾರದೇಕೆ? ಅದನ್ನು ಕೆರಳಿಸುವ ಸಂದರ್ಭವೊದಗಿದರೆ ನಮ್ಮಲ್ಲೂ ಅದು ರೂಪಗೊಳ್ಳಲಾರದೇನು? ಹೀಗೆಂದು ಮನುಷ್ಯನು ತನ್ನ ಅಂತರಂಗದೊಳಗೇ ವಿಚಾರ ಮಾಡಿಕೊಂಡು ಇತರರ ಲೋಪದೋಷಗಳ ವಿಷಯದಲ್ಲಿ ಕ್ಷಮೆಯಿಂದಲೂ ಅನುಕಂಪೆಯಿಂದಲೂ ನಡೆದುಕೊಳ್ಳುವ ಗುಣವೇ ಮಾನವೀಯತೆ.

# ನಯಮಾರ್ಗ

ಶಾಸ್ತ್ರಿಗಳವರಲ್ಲಿ ಈ ಗುಣ ಸಂಪೂರ್ಣವಾಗಿದ್ದದ್ದರಿಂದ ಅವರಿಗೆ ಶತ್ರು ಎಲ್ಲಿಯೂ ಇರಲಿಲ್ಲ. ಮತ್ತೊಬ್ಬರು ಮಾಡಿದ ತಪ್ಪನ್ನು ನಾನು ಮಾಡಲಾರೆನೆಂದು ಹೇಗೆ ಖಾತರಿ? ತಪ್ಪು ಮಾಡಿದರೆ ಅದನ್ನು ತಿದ್ದುವ ನಯ ಒಂದುಂಟು. ಆ ನಯವನ್ನು ಕಂಡುಕೊಂಡು ನಯಮಾರ್ಗದಲ್ಲಿ ನಡೆಯುವುದು ಮಾನವ ಸಹಾನುಭೂತಿ.

ಒಂದಾನೊಂದು ದಿನ ನಾವು ನಾಲ್ವರೈವರು ಶಾಸ್ತ್ರಿಗಳೊಡನೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಯಾವುದೋ ಒಂದು ಸ್ಟೇಷನ್ನಿನಲ್ಲಿ ರೈಲು ನಿಂತಿತು. ನಾಲ್ಕೈದು ನಿಮಿಷಗಳಿರಬಹುದು. ಆಗ ನಮ್ಮ ಪೈಕಿ ಒಬ್ಬಾತನ ಕಣ್ಣ ದೃಷ್ಟಿ ಒಬ್ಬಾಕೆಯ ತಲೆ ತುರುಬಿನ ಕಡೆ ನೆಟ್ಟು ನಿಂತಿತು. ಆಕೆಯ ಮುಖ ರೈಲಿನ ಎದುರುಗಡೆ ತಿರುಗಿತ್ತು. ಆಕೆಯ ಬೆನ್ನು ನಮ್ಮ ಕಡೆಗಿತ್ತು. ಯಾರೊಡನೆಯೋ ಮಾತನಾಡುತ್ತಿದ್ದರು. ಈ ನಮ್ಮ ಸ್ನೇಹಿತನ ವೀಕ್ಷೆ ಆ ತುರುಬಿನಲ್ಲಿ ನಿಂತಿದ್ದದ್ದನ್ನು ಶಾಸ್ತ್ರಿಗಳು ಗಮನಿಸಿರಬೇಕು.

ರೈಲು ಕದಲಿತು. ನಮ್ಮ ಸ್ನೇಹಿತನ ಮುಖ ಕೊಂಚ ಕಂಗೆಟ್ಟಿತು. ಶಾಸ್ತ್ರಿಗಳು ಲೋಕಾಭಿರಾಮವಾಗಿ ಎಲ್ಲರಿಗೂ ಹೇಳುವಂತೆ ಒಂದು ಮಾತನ್ನಾಡಿದರು: “ಈ ಊರಿನಲ್ಲಿ ಹೂವಿನ ತೋಟಗಳು ಹೆಚ್ಚಾಗಿರಬೇಕೆಂದು ತೋರುತ್ತದೆ. ಒಳ್ಳೆ ಕೋಲುಮಲ್ಲಿಗೆಯ ಹೂ. ಮೊಗ್ಗು ಚೆನ್ನಾಗಿರುವುದು ಮಾತ್ರವಲ್ಲ; ಅದನ್ನು ಪೋಣಿಸಿ ಸಿಂಗರಿಸಿಕೊಳ್ಳುವುದರಲ್ಲಿ ಒಂದು ಜಾಣತನವಿರಬೇಕಲ್ಲ! ಆ ಸೊಗಸನ್ನಲ್ಲವೆ ನೀವು ನೋಡಿದ್ದು?...” ಹೀಗೆ ಲಘುವಾಗಿ ಉಪಹಾಸ್ಯ ಮಾಡಿದರು.

# ನವುರು

ಇನ್ನೊಂದು ಸಾರಿ ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ಒಬ್ಬ ಮಹಿಳೆ ಶಾಸ್ತ್ರಿಗಳ ಉಪನ್ಯಾಸಕ್ಕೆ ಬಂದಿದ್ದಳು. ಶಾಸ್ತ್ರಿಗಳು ಮಂಗಳೂರಿನಲ್ಲಿ ನಾಲ್ಕೈದು ಕಡೆ ಮಾಡಿದ ಉಪನ್ಯಾಸಗಳಿಗೂ ಆಕೆ ಬಂದಿದ್ದದ್ದಲ್ಲದೆ ಶಾಸ್ತ್ರಿಗಳು ಬಿಡಾರಮಾಡಿದ್ದ ಮನೆಗೂ ಬಂದು ಮರ್ಯಾದೆ ತೋರಿಸಿದಳು. ಶಾಸ್ತ್ರಿಗಳ ಪರಿವಾರದಲ್ಲಿದ್ದ ಒಬ್ಬಾತ ಆ ವಿತಂತು ಮಹಿಳೆಯನ್ನು ನೋಡುತ್ತಿದ್ದದ್ದು ಶಾಸ್ತ್ರಿಗಳ ದೃಷ್ಟಿಗೆ ಬಿದ್ದಿರಬೇಕು.

ಮಂಗಳೂರಿನಿಂದ ಹಿಂದಿರುಗಿದ ಮೇಲೆ ಎಷ್ಟೋ ಕಾಲ ಕಳೆದ ಬಳಿಕ ಯಾವುದೋ ಸಂದರ್ಭದಲ್ಲಿ ಯಾರೋ ಆ ವಿತಂತುವಿನ ಮಾತನ್ನೆತ್ತಿದರು. ಆ ಮಾತಿನ ಸಮಯದಲ್ಲಿ ಆಕೆ ದೆಹಲಿಯಲ್ಲಿದ್ದರು. ಶಾಸ್ತ್ರಿಗಳು ತಮ್ಮ ಪರಿವಾರದಲ್ಲಿದ್ದ ಸ್ನೇಹಿತನ ಕಡೆ ತಿರುಗಿ, “ಈಗ ಆಕೆ ಬಹಳ ದೊಣ್ಣೆಯಾಗಿದ್ದಾಳೆ. ಹಿಂದೆ ನೀವು ಮಂಗಳೂರಿನಲ್ಲಿ ನೋಡಿದಾಗ ಇದ್ದಂತೆ ತೆಳ್ಳಗಿಲ್ಲ, ಮುದುಕಿಯಂತೆ ಕಾಣುತ್ತಾಳೆ” -ಎಂದರು. ಸಂದರ್ಭ ತಿಳಿದಿದ್ದವರು ಮುಸಿ ಮುಸಿ ನಗುವಿನಲ್ಲಿ ಒಬ್ಬರೊಬ್ಬರ ಮುಖ ನೋಡಿಕೊಂಡರು.

# ಒಂದು ಹಿತಬೋಧೆ

ಶಾಸ್ತ್ರಿಗಳು ಶಂಕರಪುರದಲ್ಲಿ ನಾನಿದ್ದಾಗ ಆಗಾಗ ನನ್ನ ಮನೆಗೆ ಬರುತ್ತಿದ್ದದ್ದುಂಟು. ನನ್ನ ತಂದೆಗೆ ನನ್ನ ಮೇಲೆ ಕೋಪವೇನಾದರೂ ಬಂದಿದ್ದರೆ ಶಾಸ್ತ್ರಿಗಳಿಗೆ ಹೇಳುತ್ತಿದ್ದರು. ಶಾಸ್ತ್ರಿಗಳು ನನಗೆ ಛೀಮಾರಿ ಹಾಕುತ್ತಿದ್ದರು. "ಈ ಅಕ್ರಮದ ಮೂಲ ನಿನ್ನ ಸ್ವಭಾವದಲ್ಲಿದೆ" ಎಂದು ನನಗೆ ಹೇಳುವರು.

ನಾನು ದೆಹಲಿಯ ಪ್ರಯಾಣವನ್ನು ಚಿಂತಿಸುತ್ತಿದ್ದಾಗ ಶಾಸ್ತ್ರಿಗಳು ಹೀಗೆ ಹೇಳಿದರು: "ಅಯ್ಯಾ, ನೀನು ದೆಹಲಿಗೆ ಹೋಗುತ್ತಿ. ಅಲ್ಲಿ ಮದನಮೋಹನ ಮಾಳವೀಯರನ್ನು ಕಂಡು ನಮಸ್ಕಾರ ಹಾಕಬೇಕೆಂದು ನಿನಗೆ ಅಪೇಕ್ಷೆಯಾಗುತ್ತದೆ. ಅದು ಸ್ವಾಭಾವಿಕ ಮತ್ತು ಯುಕ್ತವಾದದ್ದು. ಆದರೆ ಅದಕ್ಕಾಗಿ ಬಹಳ ಹೊತ್ತು ಕಳೆಯಬೇಡ. ಮಾಳವೀಯರು ನಿನಗೆ ಸಿಕ್ಕುವುದಕ್ಕೆ ಒಂದೆರಡು ದಿನ ಬೇಕಾದೀತು. ಅವರ ಕೈಗೆ ಸಿಕ್ಕಿದರೆ ನೀನು ಬೇಗ ಹಿಂದಕ್ಕೆ ಬರುವವನೂ ಅಲ್ಲ. ನಿನಗಿರುವ ಕಾಲ ಕೊಂಚ. ಅದನ್ನು ವ್ಯರ್ಥವಾಗಿ ಕಳೆಯಬೇಡ."

ನಾನು: "ಹಾಗೆ ಆಗುವುದೇ ಇಲ್ಲ" ಎಂದು ಒತ್ತೊತ್ತಿ ಹೇಳಿದೆ.

ಶಾಸ್ತ್ರಿಗಳು: "ಹಾಗೆಲ್ಲ ಹೇಳಬೇಡ. ಮಾಳವೀಯರು ಪೂಜ್ಯರು. ಅವರ ಚಾರಿತ್ರ ನಿನ್ನ ಮನಸ್ಸಿಗೆ ಒಪ್ಪುತ್ತದೆ. ನೀನು ಮೈ ಮರೆತು ಮಂಕಾಗಿ ಕುಳಿತುಬಿಡುತ್ತಿ."

ನಾನು: "ಇಲ್ಲ, ಹಾಗಾಗುವುದಿಲ್ಲ."

ವಾಸ್ತವವಾಗಿ ಆದದ್ದೇನು? ಮಾಳವೀಯರನ್ನು ಅನ್ವೇಷಿಸುವುದರಲ್ಲಿಯೂ ಆಶ್ರಯಿಸುವುದರಲ್ಲಿಯೂ ಒಂದು ವಾರ ಕಳೆದುಹೋಯಿತು. ಹೀಗಾಗುತ್ತದೆಂದೇ ಶಾಸ್ತ್ರಿಗಳು ಹೇಳಿದ್ದದ್ದು.

# ಇಂಗಿತಜ್ಞತೆ

ನನ್ನ ತಂದೆ ಶಾಸ್ತ್ರಿಗಳೊಡನೆ ಒಂದು ಅಪೇಕ್ಷೆಯನ್ನು ಹೇಳಿಕೊಂಡಿದ್ದಂತೆ ತೋರುತ್ತದೆ. ಅದಿಲ್ಲದಿದ್ದರೆ ಶಾಸ್ತ್ರಿಗಳು ನನಗೆ ಪ್ರಯಾಗ, ಕಾಶಿಗಳಿಗೆ ಹೋಗಿ ಒಂದು ತಂಬಿಗೆ ಗಂಗೋದಕವನ್ನು ತೆಗೆದುಕೊಂಡು ಬಾರೆಂದು ಒತ್ತಿ ಹೇಳಬೇಕಾದ ಕಾರಣ ಇರಲಿಲ್ಲ. ನನ್ನ ಅಂತರಂಗ ಎಂಥೆಂಥ ಸಂದರ್ಭದಲ್ಲಿ ಹೇಗೆ ಹೇಗೆ ಪ್ರತಿಕ್ರಿಯೆ ತೋರಿಸೀತೆಂಬುದನ್ನು ಶಾಸ್ತ್ರಿಗಳು ನನ್ನ ತಂದೆಗೆ ಸಮಾನವಾಗಿ ಕಂಡುಕೊಂಡಿದ್ದರು. ಇದು ಮಾನವೀಯತೆಯ ದೊಡ್ಡ ಲಕ್ಷಣವೆಂದು ನಾನು ಭಾವಿಸಿದ್ದೇನೆ. ಮನುಷ್ಯನು ಆಡಿದ ಮಾತಿನ ಅಥವಾ ಮಾಡಿದ ಕೆಲಸದ ಅರ್ಥವನ್ನು ತಿಳಿದುಕೊಳ್ಳುವುದು ದೊಡ್ಡ ಗುಣ. ಅದಕ್ಕಿಂತ ದೊಡ್ಡದು ಇಂಗಿತಗ್ರಹಣ. ಮಾತಿನಿಂದ ಆಡದೆ, ಚೇಷ್ಟೆಯಿಂದ ಹೊರಪಡಿಸದೆ ಮನುಷ್ಯನು ಮನಸ್ಸಿನಲ್ಲಿಟ್ಟುಕೊಂಡಿರುವ ಇಂಗಿತಭಾವವನ್ನು ಕಂಡುಕೊಳ್ಳಬಲ್ಲವರು ವಿರಳ. ಅಂಥ ಇಂಗಿತಜ್ಞತೆಯಿಂದ ಶಾಸ್ತ್ರಿಗಳವರು ಲೋಕಸಂಪರ್ಕವನ್ನು ನಿರ್ವಹಿಸಿದರು.

# ಸಾಧನೆ

ಒಟ್ಟಿನಲ್ಲಿ "ಇದು ಶಾಸ್ತ್ರಿಗಳವರಿಂದಾದ ದೊಡ್ಡ ಸಾಧನೆ", "ಇದು ಶಾಸ್ತ್ರಿಗಳ ವಿಶೇಷಾಕಾರದ ದೇಶಸೇವೆ" -ಎಂದು ಬೆಟ್ಟಿಟ್ಟು ತೋರಿಸಬಹುದಾದ ಕಾರ್ಯ ಯಾವುದು?

ಈ ಪ್ರಶ್ನೆಗೆ ನಿರ್ದಿಷ್ಟವಾದ ವಾಕ್ಯದಲ್ಲಿ ಪ್ರತ್ಯುತ್ತರ ಹೇಳುವುದು ಕಷ್ಟದ ಕೆಲಸ.

ಶಾಸ್ತ್ರಿಗಳ ಜೀವನಪ್ರಭಾವ ಒಂದು ಹೂವಿನ ಸೌರಭದಂತೆ. ಹೂವು ಕಷ್ಟದ ಕೃಷಿಯ ಫಲ. "ತೋಟಗಾರನ ಕಷ್ಟಕ್ಕೆ ಪ್ರತಿಫಲವೇನು?" -ಎಂದರೆ "ಹೂವಿನ ಅಂಗಡಿಯಲ್ಲಿ ಬರುವ ಬೆಲೆ" -ಎಂದು ಹೇಳಬಹುದು. ಆದರ ಉದ್ಯಾನವನದಲ್ಲಿ ಘಮಲು ತುಂಬಿದ ಹೂವು ಮಾಡಿದ ಸಾಧನೆ ಏನು? ವಾತಾವರಣವನ್ನು ರಮಣೀಯವಾಗಿಸಿದ್ದು. ದೀಪ ಸಾಧಿಸುವ ಸಾಧನೆ ಎಂಥಾದ್ದು? ಅದು ಬೆಳಕನ್ನು ಹರಡುತ್ತದೆ. ಆ ಬೆಳಕು ಎಲ್ಲರಿಗೂ ಆಗುತ್ತದೆ.

ಶ್ರೀನಿವಾಸ ಶಾಸ್ತ್ರಿಗಳವರಂಥ ವಿದ್ವದ್ರಸಿಕರು ಸಾಧಿಸಬಹುದಾದ್ದು ಅಷ್ಟು ಮಾತ್ರದ್ದೇ. ಅವರ ವಾಕ್ಯದಿಂದಲೂ ಸೌಜನ್ಯದಿಂದಲೂ ಅವರು ತಮ್ಮ ವಾತಾವರಣದಲ್ಲಿ ಒಂದು ಪರಿಮಳವನ್ನು ತುಂಬುತ್ತಾರೆ. ಪರಿಮಳ ಇರುವುದು ಕೊಂಚ ಹೊತ್ತು ಮಾತ್ರ. ಆದರೆ ಆ ಕೊಂಚ ಹೊತ್ತು ಜನಕ್ಕೆ ನಿರ್ಮಲಕಾರಿಯಾಗಿ ಉಲ್ಲಾಸಕಾರಿಯಾಗಿರುತ್ತದೆ. ಒಳ್ಳೆಯ ದೀಪಸ್ತಂಭ ಏನು ಮಾಡುತ್ತದೆ? ಬೆಳಕನ್ನು ಸುತ್ತ ಹರಡಿ ಮನಸ್ಸನ್ನು ಪ್ರಸನ್ನವಾಗಿಸುತ್ತದೆ. ಕೊಳೆ ಕಲ್ಮಶಗಳು ಕಣ್ಣಿಗೆ ಕಾಣಿಸುವಂತೆ ಮಾಡಿ ನೈರ್ಮಲ್ಯವನ್ನು ಹರಡುತ್ತದೆ.

ಶ್ರೀನಿವಾಸ ಶಾಸ್ತ್ರಿಗಳಿಂದ ದೇಶಕ್ಕೆ ಆದ ಉಪಕಾರ ಅಂಥಾದ್ದು. ಮೊದಲನೆಯದಾಗಿ, ಅವರು ಪ್ರಸಕ್ತಪ್ರಶ್ನೆಯ ನಾನಾ ಭಾಗಗಳನ್ನು ವಿಶ್ಲೇಷಣೆ ಮಾಡಿ ತೋರಿಸುವುದರಲ್ಲಿ ಪರಮ ನಿಪುಣರೆಂದು ಮನ್ನಿಸಲ್ಪಟ್ಟಿದ್ದರು. ಪ್ರಶ್ನೆ ತೊಡಕಿನದಾದಷ್ಟೂ ಅದರ ಸಿಕ್ಕನ್ನು ಬಿಡಿಸುವ ನಿಪುಣರ ಆವಶ್ಯಕತೆ ಅಷ್ಟು ಹೆಚ್ಚಾಗಿರುತ್ತದೆ. ಪ್ರಶ್ನೆಯಲ್ಲಿ ಸೇರಿಕೊಂಡಿರುವ ನೂಲುಗಳೆಷ್ಟು, ಎಳೆಗಳೆಷ್ಟು, ಕೊಂಕು ಡೊಂಕುಗಳೆಷ್ಟು-ಇದನ್ನು ಬಿಡಿಸಿ ಬಿಡಿಸಿ ತೋರಿಸುವ ವಿಶದೀಕರಣಶಕ್ತಿ ಮನುಷ್ಯನಿಗೆ ಬೇಕಾದ ಒಂದು ಮಹಾಶಕ್ತಿ. ಅದು ಶಾಸ್ತ್ರಿಗಳಿಗೆ ದೊರೆತಿತ್ತು. ವಿಶದೀಕರಣವೇ ಪ್ರಶ್ನೆಯ ಪರಿಹಾರ. ಯಾವ ಯಾವ ದಾರ ಹೇಗೆ ಹೇಗೆ ಸುತ್ತಿ ಸುತ್ತಿ ಗಂಟಾಗಿದೆಯೆಂಬುದನ್ನು ಕಂಡುಕೊಳ್ಳುವುದೇ ಆ ಪ್ರಶ್ನೆಯ

ಪರಿಹಾರವಿಧಾನ. ಹೀಗೆ ಪ್ರಸಕ್ತ ಪ್ರಶ್ನೆಯ ನಾನಾ ಅಂಶಗಳನ್ನು ಎತ್ತಿ ತೋರಿಸಿಕೊಟ್ಟದ್ದು ಶಾಸ್ತ್ರಿಗಳ ಸೇವೆ. ಅದು ಬುದ್ಧಿದೀಪದ ಸೇವೆ.

ಎರಡನೆಯದಾಗಿ ಹೇಳಬೇಕಾದದ್ದನ್ನು ನಯಮರ್ಯಾದೆಯಿಂದ ಹೇಳುವ ವಾಕ್ಯ ಕುಶಲತೆ. ಇದೇ ಮನುಮಹರ್ಷಿ ಉಪದೇಶಿಸಿರುವ ವಾಙ್ನಯ.

> ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್ ॥

"ಸತ್ಯವನ್ನು ಹೇಳಬೇಕು. ಮತ್ತು ಅದು ಪ್ರಿಯವಾಗಿರುವ ರೀತಿಯಲ್ಲಿ ಹೇಳಬೇಕು." ಈ ಪ್ರಿಯವೆಂಬುದು ಹೃದಯದ ಗುಣ. ಇದೇ ಗೀತೆಯಲ್ಲಿ ಹೇಳಿರುವ

> ಅನುದ್ವೇಗಕರಂ ವಾಕ್ಯಂ
> ಸತ್ಯಂ ಪ್ರಿಯಹಿತಂ ಚ ಯತ್ ॥

ಈ ಉಪದೇಶದ ಅಭ್ಯಾಸ ಶಾಸ್ತ್ರಿಗಳ ದೇಶಸೇವೆಯ ಇನ್ನೊಂದು ಲಕ್ಷಣ. ಅವರು ಅನುನಯಪಡಿಸಿದವರು. ಎಂದರೆ ಪ್ರತಿಕಕ್ಷಿಗಳನ್ನು ಒಲಿಸಿ ಒಡಂಬಡಿಸಿದವರು. ಇದು ಜಾಜಿ ಮಲ್ಲಿಗೆಗಳ ಗುಣ. ಅವು ಮನಸ್ಸಿಗೆ ಇಂಪುತಂಪುಗಳನ್ನು ತಂದು ಬಿಸಿಯನ್ನೂ ಘಾಟನ್ನೂ ಮರೆಯಿಸುತ್ತವೆ. ಶ್ರುತಿ ಹೇಳುತ್ತದೆ:

> ಯಥಾ ವೃಕ್ಷಸ್ಯ ಸಂಪುಷ್ಪಿತಸ್ಯ ದೂರಾತ್ ಗಂಧೋ ವಾತ್ಯೇವಂ ಪುಣ್ಯಸ್ಯ ಕರ್ಮಣಃ ॥

ಇದು ಸಾಧನೆಯಲ್ಲವೊ?

# ವಸಂತಮಹಲಿನ ಒಂದು ಅನುಭವ

೧೯೨೩ರ ದೀವಳಿಗೆಯ ದಿವಸ ಸಂಜೆ ಶಾಸ್ತ್ರಿಗಳವರೂ ಅವರ ಮಿತ್ರಪರಿವಾರವೂ ಮೈಸೂರನ್ನು ತಲುಪಿದೆವು. ಮಿರ್ಜಾಸಾಹೇಬರ ಶಿಫಾರಸಿನಂತೆ ನಮಗೆ ವಸಂತಮಹಲಿನಲ್ಲಿ ಬಿಡಾರ ಏರ್ಪಾಟಾಗಿತ್ತು. ಗೊತ್ತಾದ ಕಾರ್ಯಕ್ರಮವೇನೂ ಇರಲಿಲ್ಲ. ಶಾಸ್ತ್ರಿಗಳು ಅವರ ಮನಸ್ಸು ಬಂದಂತೆ ಇರಬೇಕಾದದ್ದೆಂದು ಮಿರ್ಜಾರವರು ನೇಮಿಸಿದ್ದರು ("As the spirit moves"). ಆಗಿನ ಒಂದೆರಡು ಅನುಭವಗಳನ್ನು ಹೇಳುತ್ತೇನೆ.

# ಭೋಜನ ವೈಭವ

ಆ ರಾತ್ರಿ ಭೋಜನಶಾಲೆಗೆ ನಾವೆಲ್ಲ ಬಂದಾಗ ಅಲ್ಲಿಯ ನೋಟ ನನ್ನ ಕಣ್ಣಿಗೆ ವಿಜೃಂಭಣೆಯದೆಂದು ತೋರಿತು. ಬೆಳ್ಳಿಯ ಹೂವು ಹಾಕಿದೆ ಮಣೆಗಳು, ಊಟಕ್ಕಾಗಿ ದೊಡ್ಡ ದೊಡ್ಡ ಬಾಳೆಯೆಲೆಗಳು, ಎಲೆಯ ನಡುವೆ ಬೆಳ್ಳಿಯ ತಟ್ಟೆ, ಬೆಳ್ಳಿಯ ದೊನ್ನೆ. ಕುಡಿಯುವ ನೀರಿಗಾಗಿ ದೊಡ್ಡ ದೊಡ್ಡ ಬೆಳ್ಳಿಯ ಲೋಟ. ಭೋಜನಶಾಲೆಯಲ್ಲಿ ಅಲ್ಲಲ್ಲಿ ಹೂವಿನ ತೋರಣ, ಘಮ ಘಮಿಸುವ ಊದುಕಡ್ಡಿ. ಇದನ್ನೆಲ್ಲ ನೋಡಿ ನಾನು ಬೆರಗಾದೆ. ಊಟಕ್ಕೆ ಕೂಡುವ ಮುನ್ನ ಮಣೆಯನ್ನು ಬೇರೆ ತೆಗೆದಿಟ್ಟೆ. ಶಾಸ್ತ್ರಿಗಳು ಕೇಳಿದರು:

ಶಾ! “ಅದೇಕೆ?”

ನಾನು: “ಇಷ್ಟು ಐಶ್ವರ್ಯದ ಲಕ್ಷಣ ನನಗೆ ಒಪ್ಪುವುದಲ್ಲ.”

ಶಾ: “ಈ ಮಾತನ್ನು ಗಟ್ಟಿಯಾಗಿ ಹೇಳಬೇಡ. ಆ ಅಭಿಪ್ರಾಯವನ್ನು ನೀನು ಇಟ್ಟುಕೊಳ್ಳಬಾರದು. ಐಶ್ವರ್ಯ, ಬಡತನ ಈ ಎರಡಕ್ಕೂ ಇರುವ ವ್ಯತ್ಯಾಸವನ್ನು ನಮ್ಮಂಥವರು ಜ್ಞಾಪಕಕ್ಕೇ ತಂದುಕೊಳ್ಳಬಾರದು. ನಮ್ಮನ್ನು ಕರೆಯುವವರು ಪ್ರೀತಿಯಿಂದ ಕರೆಯುತ್ತಾರೆ. ಅವರಿಗೆ ಉಂಟಾದದ್ದರಿಂದ ಅವರು ಆದರಿಸುತ್ತಾರೆ. ಮಹಾರಾಜರ ಮನೆಯಲ್ಲಿ ನಿನ್ನ ನನ್ನ ಮನೆಯ ಉಪಚಾರವಾದೀತೆ? ಮಹಾರಾಜರ ಅಂತಸ್ತು ಎಂಥಾದ್ದು? ನಿನ್ನ ನನ್ನ ಮನೆಯಲ್ಲಿ ನಾವು ಮಹಾರಾಜರನ್ನು ಅನುಕರಿಸಲಾದೀತೆ? ಅವರವರ ದರ್ಜೆಗೆ ತಕ್ಕಂತೆ ಅವರು ನಡೆದುಕೊಳ್ಳುತ್ತಾರೆ. ಅದನ್ನು ನಾವು ನೈಜವಾಗಿ ಗ್ರಹಿಸಬೇಕು.”

ನಾನು ಮನಸ್ಸಿನೊಳಗಡೆಯೇ ಕಪಾಳ ಬಡಿದುಕೊಂಡು ಎಲ್ಲರಂತೆ ಕುಳಿತು ಊಟ ಮಾಡಿದೆ.

ಶಾಸ್ತ್ರಿಗಳನ್ನು ನೋಡಲು ಮಾರನೆಯ ದಿನದಿಂದ ಜನ ತಂಡತಂಡವಾಗಿ ಬರುತ್ತಿದ್ದರು. ಅವರಿಗೆ ವಿಶ್ರಾಂತಿ ದುರ್ಲಭವಾಯಿತು.

# ಗ್ರೀಸ್ ದೇಶಸ್ಥಿತಿ

ಒಂದು ದಿನ ಬೆಳಗ್ಗೆ ಕಾಫಿ ಸೇವನೆಯ ಹೊತ್ತಿನಲ್ಲಿ ಅವರೂ ನಾನೂ ಇಬ್ಬರೇ ಇದ್ದೆವು. ನಾನು ಅವರನ್ನು ಕೇಳಿದೆ:

ನಾನು: "ನೀವು ಯೂರೋಪ್ ಸಂಚಾರದಲ್ಲಿ ಗ್ರೀಸ್ ದೇಶಕ್ಕೆ ಹೋಗಿದ್ದೀರಾ?"

ಶಾ: "ಹೋಗಿದ್ದೆ. ಅಲ್ಲೊಂದು ವಾರ ಕಳೆದು ಬಂದೆ."

ನಾನು: "ಗ್ರೀಸಿನವರು ಹೇಗಿದ್ದಾರೆ? ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್, ಐಸ್ಕುಲಸ್, ಸೋಫೋಕ್ಲೀಸ್, ಯೂರಿಪಿಡೀಸ್ ಮೊದಲಾದವರ ಕಾವ್ಯಗಳಲ್ಲಿ ತೋರುವ ಲಕ್ಷಣಗಳು ಆ ಜನರಲ್ಲಿ ಈಗ ಕೊಂಚವಾದರೂ ಉಂಟೆ?"

ಶಾ: (ನಿಟ್ಟುಸಿರೆಳೆದು) "ನಾವು ನಮ್ಮ ಮಹರ್ಷಿಗಳ ಲಕ್ಷಣಗಳನ್ನು ಎಷ್ಟು ಮಾತ್ರ ಪ್ರತಿಬಿಂಬಿಸುತ್ತಿದ್ದೇವೆಯೋ ಈ ಹೊತ್ತಿನ ಗ್ರೀಕರೂ ಅವರ ಪೂರ್ವಿಕರ ವಿಷಯದಲ್ಲಿ ಹಾಗಿದ್ದಾರೆ. 'ಮಾಡರ್ನ್ ಗ್ರೀಕ್' (Modern Greek) ಎಂಬುದು ಅವಹೇಳನೆಯ ಮಾತಾಗಿದೆ. ನೀನು ಹೇಳುವ ಗ್ರೀಸ್ ದೇಶವು ಪುರಾತನ ಕಥೆಗಳಲ್ಲಿದೆ. ಈ ಹೊತ್ತಿನ ಗ್ರೀಸ್ ದೇಶದ ವಾಸ್ತವಸ್ಥಿತಿ ನಮ್ಮ ದೇಶಕ್ಕಿಂತ ಹೀನವಾಗಿದೆ. ಹೋಯಿತು. ಎಲ್ಲ ಹೋಯಿತು."

ಹೀಗೆ ಮರುಗಿದರು. ಆ ಮರುಕದ ಸಂದರ್ಭ ಶಾಸ್ತ್ರಿಗಳಿಗೆ ಸ್ವದೇಶ ವಿಷಯದಲ್ಲಿದ್ದ ಚಿಂತೆಯೂ ಯಾತನೆಯೂ ಪ್ರಕಟವಾಗಿತ್ತು.

ಒಂದು ಸಾರಿ ಮಿರ್ಜಾ ಸಾಹೇಬರು ಬಂದು ಶಾಸ್ತ್ರಿಗಳ ಗೋಷ್ಠಿಯನ್ನೆಲ್ಲ ಹೆಗ್ಗಡ ದೇವನಕೋಟೆಯ ಬಳಿಯ ಕಾರಾಪುರದ ಕ್ಯಾಂಪಿಗೆ ಕಾರುಗಳಲ್ಲಿ ಕರೆದುಕೊಂಡು ಹೋದರು. ಆಗ ಮಿರ್ಜಾರವರ ಚಾಕಚಕ್ಯವನ್ನು ನಾವೆಲ್ಲ ಕಣ್ಣಾರೆ ಕಂಡೆವು. ಮಿರ್ಜಾರವರು ಆಗ ಇನ್ನೂ ದಿವಾನರಾಗಿರಲಿಲ್ಲ. ಮಹಾರಾಜರ ಪ್ರೈವೇಟ್ ಸೆಕ್ರೆಟರಿಯಾಗಿದ್ದರು. ಕಾರಾಪುರದ ಕ್ಯಾಂಪು ವೈಸರಾಯ್ ಅವರನ್ನು ಬರಮಾಡಿಕೊಳ್ಳಲು ಸಿದ್ಧವಾಗುತ್ತಿತ್ತು. ಆಗಿನ ವೈಸರಾಯ್ ಲಾರ್ಡ್ ರೆಡಿಂಗ್ ಎಂದು ನನ್ನ ಜ್ಞಾಪಕ. ಮಿರ್ಜಾರವರು ಪ್ರತಿಯೊಂದು ಡೇರಾವನ್ನೂ ಹೊಕ್ಕು ಅಲ್ಲಿ ಎಂಥ ಮೇಜುಗಳನ್ನಿಟ್ಟಿದ್ದಾರೆ, ಎಂಥ ಕುರ್ಚಿಗಳನ್ನಿಟ್ಟಿದ್ದಾರೆ, ಯಾವ ಯಾವ ಜಾಗದಲ್ಲಿ ಎಂಥ ಕುರ್ಚಿ ಇರಬೇಕು, ಎಂಥ

ಮೇಜಿರಬೇಕು-ಇದನ್ನೆಲ್ಲ ವಿಚಾರಿಸುತ್ತಿದ್ದದ್ದಲ್ಲದೆ ತಾವೇ ಖುದ್ದಾಗಿ ತಮ್ಮ ಕೈಯಿಂದ ಕುರ್ಚಿಗಳನ್ನೂ ಮೇಜುಗಳನ್ನೂ ಹೊತ್ತು ತಕ್ಕ ಕಡೆ ಇರಿಸುತ್ತಿದ್ದರು. ಶಾಸ್ತ್ರಿಗಳವರನ್ನು ಹೊಳೆಯವರೆಗೆ ಕರೆದುಕೊಂಡು ಹೋಗಿ ಖೆಡ್ಡಾ ಏರ್ಪಾಟುಗಳನ್ನೂ ಸಂಕ್ಷೇಪವಾಗಿ ವಿವರಿಸಿದರು.

ಶಾಸ್ತ್ರಿಗಳವರಿಗೆ ಭೇಟಿ ಕೊಟ್ಟ ಜನ ಬಹುಮಂದಿ ಎಂದು ಹೇಳಿದೆ. ಅವರಲ್ಲೊಬ್ಬರು ಸಾಹುಕಾರ್ ವರ್ಧಮಾನಯ್ಯನವರು. ವರ್ಧಮಾನಯ್ಯನವರು ಶಾಸ್ತ್ರಿಗಳನ್ನು ತಮ್ಮ ಕಾರ್ಖಾನೆಗಳಿಗೆ ಭೇಟಿ ಕೊಡಬೇಕೆಂದು ಪ್ರಾರ್ಥಿಸಿದರು. ಮತ್ತು ಅವರನ್ನು ಕರೆತರುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಆಗ ಕೃಷ್ಣರಾಜೇಂದ್ರ ಮಿಲ್ಲಿನ ಪ್ರಾರಂಭದಶೆ. ಶಾಸ್ತ್ರಿಗಳು ಅಲ್ಲಿಗೂ ಎಸೆನ್ಸಲ್ ಫ್ಲವರ್ ಪ್ರಾಡಕ್ಟ್ಸ್ ಎಂಬಲ್ಲಿಗೂ ಇನ್ನೂ ಒಂದೆರಡು ಕಾರ್ಯಸ್ಥಾನಗಳಿಗೂ ಭೇಟಿ ಕೊಟ್ಟು ಇಂಡಿಯದ ಕಸಬು ಕಾರ್ಖಾನೆಗಳಿಗೆ ಅಂಥ ಪ್ರಗತಿ ಶೀಲರನ್ನು ಸರಕಾರವೂ ಎಲ್ಲವೂ ಪ್ರೋತ್ಸಾಹಿಸಬೇಕೆಂದು ಹರಸಿದರು.

# ರಾಜೋಪಚಾರ

ಶಾಸ್ತ್ರಿಗಳು ವಸಂತಮಹಲಿನಲ್ಲಿದ್ದಾಗ ಅವರ ಪರಿವಾರಕ್ಕೆಲ್ಲ ರಾಜೋಪಚಾರ ನಡೆಯುತ್ತಿತ್ತು. ಆದರೂ ನಾವೆಲ್ಲ ಒಂದು ಶಿಸ್ತಿನಲ್ಲಿರಬೇಕಾಗಿತ್ತು. ವಾಜಪೇಯಂ ವೆಂಕಟಸುಬ್ಬಯ್ಯನಿಗೂ ನನಗೂ ಮನಸ್ಸಿನ ಒಳಗಡೆಯೇ ಒಂದು ಅಸಮಾಧಾನ.

ಆ ಶಿಸ್ತಿನ ಕಾರಣದಿಂದ ನಾವು ಎಲ್ಲೆಂದರಲ್ಲಿ ಬಟ್ಟೆ ಹಾಕಕೂಡದು. ಮೈಮೇಲೆ ಬಟ್ಟೆಯಿಲ್ಲದೆ ತಿರುಗಾಡಬಾರದು. ಗಟ್ಟಿಯಾಗಿ ಕೂಗಬಾರದು. ಹುಚ್ಚು ಹುಚ್ಚಾಗಿ ಹರಟಬಾರದು. ಎಲ್ಲೆಲ್ಲೂ 'ಅದಬ್‌ಸೇ' ಇರಬೇಕು. ಆದರೆ ನಾವಿಬ್ಬರೂ ಹುಟ್ಟಿನಿಂದ ಕೊಂಚ ಹುಚ್ಚಾಟದವರು. ವೆಂಕಟಸುಬ್ಬಯ್ಯನಿಗಿಂತ ನನಗೆ ತುಂಟಾಟದ ಗೀಳು ಹೆಚ್ಚು. ನಾವು ವಸಂತಮಹಲಿನ ನಿರ್ಬಂಧದಿಂದ ತಪ್ಪಿಸಿಕೊಂಡು ಒಂದು ದಿನವಾದರೂ ಇರಬೇಕೆಂದು ಸಂಕಲ್ಪ ಮಾಡಿಕೊಂಡೆವು. ಒಂದು ದಿನ ಬೆಳಗ್ಗೆ ಸುಮಾರು ಏಳೂವರೆ ಘಂಟೆಯ ಹೊತ್ತಿಗೆ ಗೇಟಿನ ಬಳಿಗೆ ಬಂದೆವು. ವಸಂತಮಹಲಿನ ಮೊಖ್ತೇಸರರಾಗಿದ್ದ ಸುಬ್ರಹ್ಮಣ್ಯರಾಜೇ ಅರಸರವರು ಅಲ್ಲಿದ್ದರು.

ಸು: "ಇದೇನು?"

ನಾನು: "ಈ ಹೊತ್ತು ಮಸಾಲೆ ದೋಸೆ ತಿನ್ನಬೇಕೆಂದು ಹೊರಟಿದ್ದೇವೆ."

ಸು: "ಈ ಸಣ್ಣ ವಿಚಾರಕ್ಕೆ ಈ ಪಾದ ಬೆಳಸುವುದೆ! ಇದಕ್ಕೋಸ್ಕರ ಪೇಟೆಗೆ ಹೋಗಬೇಕೆ? ಖಾವಂದರಿಗೆ ತಿಳಿದರೆ ಏನಂದಾರು?"

ಹೀಗೆ ತಡೆಗಟ್ಟಿ ನಮ್ಮನ್ನು ಮಹಲಿನ ಒಳಕ್ಕೆ ಕಳುಹಿಸಿದರು. ನಾವು ಕೂಡುತ್ತಲೇ ನಮ್ಮ ಮುಂದೆ ತಟ್ಟೆಗಳು ಸಿದ್ಧವಾದವು. ಬಿಸಿಬಿಸಿ ಮಸಾಲೆದೋಸೆ ಘಮಘಮಾಯಿಸುತ್ತಿತ್ತು. ದೊಡ್ಡ ಲೋಟಗಳಲ್ಲಿ ಕಾಫಿ. ನಾವು ಎಷ್ಟು ದೋಸೆ ತಿಂದೇವು? ಅಲ್ಲಿಗೆ ನಮ್ಮ ಆಟ ಮುಗಿಯಿತೆಂದು ಮುಖ ಮುಖ ನೋಡಿಕೊಂಡೆವು.

# ವಿಫಲ ಯತ್ನ

ಎರಡು ಮೂರು ದಿನ ಕಳೆದ ಮೇಲೆ ಇನ್ನೊಂದು ಪ್ರಯತ್ನ ಮಾಡಿದೆವು. ಮತ್ತೆ ಸುಬ್ರಹ್ಮಣ್ಯರಾಜೇ ಅರಸ್‌ರವರ ಕೈಗೆ ಸಿಕ್ಕಿಬಿದ್ದೆವು.

ಸು: "ಈ ಹೊತ್ತೇನು?"

ನಾನು: "ನನ್ನ ಚಪ್ಪಲಿಯ ಅಂಗುಷ್ಠ ಕಳಚಿಕೊಂಡಿದೆ. ಹೊಲಿಸಿಕೊಂಡು ಬರಬೇಕು."

ಸು: (ನಾನು ಕೈಯಲ್ಲಿ ಹಿಡಿದಿದ್ದ ಕಾಗದದ ಪೊಟ್ಟಣವನ್ನು ಕಸಿದುಕೊಂಡು ಆಳನ್ನು ಕರೆದು) "ಇದನ್ನು ರಿಪೇರಿ ಮಾಡಿಸಿ ತಾ. (ನನ್ನ ಕಡೆಗೆ ತಿರುಗಿ)-ಅರಮನೆಯ ಲಾಯಕ್ಕೆ ಸೇರಿದ್ದು ಮೋಚಿಖಾನೆ ಇಲ್ಲವೆ? ಜೀನುಗಳನ್ನೂ ಲಗಾಮುಗಳನ್ನೂ ಕೋಚುಗಳ ತೊಗಲಿನ ಸಾಮಾನುಗಳನ್ನೂ ದುರಸ್ತಿಪಡಿಸುವ ಜನಕ್ಕೆ ಈ ಚಪ್ಪಲಿಯ ಅಂಗುಷ್ಠ ದೊಡ್ಡ ಕೆಲಸವೆ?"

ಇನ್ನೊಂದು ಮಾತು ಹೇಳಬೇಕಾದದ್ದಿದೆ. ಸುಬ್ರಹ್ಮಣ್ಯರಾಜೇ ಅರಸರವರು ಸ್ನೇಹಶೀಲರು ಮತ್ತು ಹಾಸ್ಯಪ್ರಿಯರು. ಅವರು ತಮ್ಮ ದೇವರಾಜೇ ಅರಸರವರೂ ನಾನೂ ಸಹಪಾಠಿಗಳಾಗಿ ಗಾಢ ಸ್ನೇಹಿತರಾಗಿದ್ದೆವು. ಇದನ್ನು ಸುಬ್ರಹ್ಮಣ್ಯರಾಜೇ ಅರಸರವರು ಚೆನ್ನಾಗಿ ಬಲ್ಲರು. ಆದದ್ದರಿಂದ ನನಗೂ ಅವರಿಗೂ ತುಂಬ ಸಲಿಗೆ.

ವೆಂಕಟಸುಬ್ಬಯ್ಯನೂ ನಾನೂ ಹೀಗೆ ಎರಡು ಸಾರಿ ಹತಾಶರಾದರೂ ಇನ್ನೂ ಒಂದು ಪ್ರಯತ್ನ ಮಾಡಿಬಿಡೋಣವೆಂದು ಇನ್ನೊಂದು ದಿನ ಬೆಳಗ್ಗೆ ಹೊರಟೆವು. ಪುನಃ ಸುಬ್ರಹ್ಮಣ್ಯರಾಜೇ ಅರಸರು ಎದುರಾದರು, ಗೇಟಿನ ಬಳಿ.

ಸು: "ಎಲ್ಲಿಗೆ?"

ನಾನು: (ತಲೆ ತೋರಿಸಿ) "ತುಂಬ ಬೆಳೆದಿದೆ. ವಪನಕ್ಕಾಗಿ ಹೊರಟಿದ್ದೇವೆ."

ಸು: "ಅಯ್ಯಯ್ಯೊ! ಅದಕ್ಕೆ ಬೀದಿಗೆ ಹೋಗಬೇಕೆ? ನೀವು ಇರುವ ಕಡೇ ಅವನು ಬರುತ್ತಾನೆ. ಅರಮನೆಯ ಲಾಯದಲ್ಲಿ ಕ್ಷೌರಿಕನಿಲ್ಲವೆ?"

ಹೀಗೆ ಮೂರನೆಯ ಸಾರಿಯೂ ನಮ್ಮ ಪ್ರಯತ್ನ ಭಂಗವಾಯಿತು. ಅರಮನೆಯ ಸಿಬ್ಬಂದಿಗೆ ಸೇರಿದ ಒಬ್ಬ ಕ್ಷೌರಿಕ ಬಂದು ನನ್ನ ತಲೆಯನ್ನು ಚೊಕ್ಕಟಮಾಡಿದ.

# ಆಶುಕಾವ್ಯ

ಆ ದಿನ ಮಧ್ಯಾಹ್ನ ವೆಂಕಟಸುಬ್ಬಯ್ಯನೂ ನಾನೂ ಕುಳಿತು ಮಾತನಾಡುತ್ತಿದ್ದಾಗ ನಮಗಾದ ಮೂರು ಪರಾಭವಗಳನ್ನೂ ನೆನಪಿಗೆ ತಂದುಕೊಂಡೆವು. ಆ ಅನುಭವವನ್ನೇ ಕುರಿತು ಪುನಃ ಪುನಃ ಚಿಂತಿಸುತ್ತಿದ್ದಾಗ ಹೊರಟಿತು ಈ ಶ್ಲೋಕ:

> ಆಪಾದಮೌಳಿಪರ್ಯಂತಂ
> ರಾಜಸೇವಕಸೇವಿತಃ
> ಗುಂಡೋ ವಿರಾಜತೇ ಹ್ಯದ್ಯ
> ಶ್ರೀನಿವಾಸಕೃಪಾಬಲಾತ್ ॥

“ಶ್ರೀನಿವಾಸ (ಶಾಸ್ತ್ರಿಗಳ) ಕೃಪೆಯ ಬಲದಿಂದ ಕಾಲು ಮೊದಲು (ಚಪ್ಪಲಿ) ತಲೆಯವರೆಗೂ (ಮುಂಡನ) ರಾಜಸೇವಕರಿಂದ ಸೇವಿಸಲ್ಪಟ್ಟವನು ಈ ಗುಂಡ.”

ಇದನ್ನು ನಾನು ವೆಂಕಟಸುಬ್ಬಯ್ಯನ ಕೈಯಲ್ಲಿಟ್ಟೆ. ಅವನು ಅದನ್ನು ಸುಬ್ರಹ್ಮಣ್ಯ ರಾಜೇ ಅರಸರಿಗೆ ತೋರಿಸಿದ. ಅರಸರು ಅದನ್ನು ನೋಡಿ ಹೊಟ್ಟೆ ಬಿರಿದು ನಕ್ಕು, ಅದನ್ನು ನಮ್ಮಿಬ್ಬರಿಗೂ ಸಮಾನ ಸ್ನೇಹಿತನಾದ ಎಸ್. ಜಿ. ಶಾಸ್ತ್ರಿಯ ಕೈಗೆ ಕೊಟ್ಟರು. ಎಸ್. ಜಿ. ಶಾಸ್ತ್ರಿಯು ಆದನ್ನು ಗೋಪ್ಯವಾಗಿ ತನ್ನ ಜೇಬಿನಲ್ಲಿರಿಸಿಕೊಂಡು ಬಹುಕಾಲ ಕಾದಿದ್ದ. ಅದನ್ನು ಚೇಷ್ಟೆಯಲ್ಲಿ ವಿನಿಯೋಗಿಸಬೇಕೆಂಬುದು ಆತನ ಪ್ರವೃತ್ತಿ.

# ಆಚಾರ್ಯರ ಗಾಯನ

ಕೆಲವು ತಿಂಗಳು ಕಳೆದ ಬಳಿಕ ಬೆಂಗಳೂರು ಕಣ್ಣಾಸ್ಪತ್ರೆಯ ಡಾ ॥ ಬಿ.ಕೆ. ನಾರಾಯಣರಾಯರ ಮನೆಯಲ್ಲಿ ವಿದ್ವಾನ್ ಮೈಸೂರು ವಾಸುದೇವಚಾರ್ಯರಿಂದ ಸಂಗೀತ ಕಚೇರಿ ನಡೆಯುವ ಏರ್ಪಾಟಾಗಿತ್ತು. ಆ ದಿನ ೫೦-೬೦ ಮಂದಿ ಸ್ನೇಹಿತರು ಸೇರಿದ್ದೆವು. ಶ್ರೀನಿವಾಸ ಶಾಸ್ತ್ರಿಗಳು ಮುಖ್ಯ ಅತಿಥಿ. ವರ್ಣ ಹಾಡಿದ್ದಾದ ಮೇಲೆ ಎರಡು ಮೂರು ಕೀರ್ತನೆಗಳು ಮುಗಿದು ಇನ್ನೊಂದು ಪ್ರಾರಂಭವಾಗಿದ್ದ ಕಾಲದಲ್ಲಿ ಒಬ್ಬ ಸ್ನೇಹಿತರು ಹೊರಗೆ ನಿಂತು ನನಗೆ ಸಂಜ್ಞೆ ಮಾಡಿದರು, ಬರುವಂತೆ. ನಾನು ಅದರಂತೆ ಮನೆಯ ಮುಂದುಗಡೆ ನಿಂತು ಸ್ನೇಹಿತರೊಡನೆ ಮಾತಿನಲ್ಲಿದ್ದಾಗ ಒಂದು ಪಿತೂರಿ ನಡೆಯಿತೆಂದು ತೋರುತ್ತದೆ. ಎಸ್. ಜಿ. ಶಾಸ್ತ್ರಿ ನನ್ನ ಶ್ಲೋಕವನ್ನು ವಾಸುದೇವಾಚಾರ್ಯರ ಕೈಗೆ ಕೊಟ್ಟಿರಬೇಕು. ಅದನ್ನು ಹಾಡಬೇಕೆಂದು ಕೇಳಿಕೊಂಡಿರಬೇಕು. ಇದು ಮೂರು ನಾಲ್ಕು ಮಂದಿ ಸ್ನೇಹಿತರ ಒಳಸಂಚು.

ನಾನು ಒಂದೆರಡು ನಿಮಿಷ ಹೊರಗಿದ್ದು ಒಳಕ್ಕೆ ಬಂದು ಕೂಡುವ ವೇಳೆಗೆ ಸರಿಯಾಗಿ ಆಚಾರ್ಯರು "ಆ-ಪಾ-ದ" ಹಾಡುತ್ತಿದ್ದರು. ನನಗೆ ಕೊಂಚ ಬೆಪ್ಪಾಯಿತು. ಆಚಾರ್ಯರ ಕಡೆ ನೋಡಿದೆ. ಅವರು ತಮ್ಮ ಪಾದಗಳ ಕಡೆ ಬೆಟ್ಟು ತೋರಿಸಿ ಹೆಬ್ಬೆಟ್ಟಿಗೆ ಗುಂಡುಹಾಕಿ ಚಪ್ಪಲಿಯನ್ನು ಸೂಚಿಸುತ್ತಲೂ "ಮೌಳಿ" ಎಂದಾಗ ತಲೆಯ ಕಡೆ ಬೆಟ್ಟು ತೋರಿಸಿ, ಬಲಗೈಯಿಂದ ಎಡಗೈಯ ಮೇಲೆ ಕತ್ತಿಯ ನಡೆಯನ್ನು ತೋರಿಸುತ್ತಲೂ ಹಾಡಿದರು. ನಡು ನಡುವೆ ಗಮಕಗಳನ್ನೂ ಸೇರಿಸಿದರು. ಸ್ವರಸಂಯೋಜನೆ ಮಾಡಿದರು. ಅದು ಕಲ್ಯಾಣಿ ರಾಗದಲಿ. ಆಮೇಲೆ ವಿವರಿಸಿದರು:

"ಕಲ್ಯಾಣವೆಂದರೆ ಮಂಗಳ.

> ಕ್ಷೌರಂ ತು ಭದ್ರಾಕರಣಂ
> ಮುಂಡನಂ ವಪನಂ ತಥಾ ॥

ವಪನವು ಮಂಗಲಕರ್ಮ. ಆದದ್ದರಿಂದಲೇ ಕ್ಷೌರಿಕನಿಗೆ 'ಮಂಗಲವಾಡು' ಎಂಬ ಹೆಸರು..." ಹೀಗೆಲ್ಲ ವ್ಯಾಖ್ಯಾನ ಮಾಡಿ ತಾವೂ ನಕ್ಕು ನಮ್ಮನ್ನೂ ನಗಿಸಿದರು.

# ಶಾಸ್ತ್ರಿಗಳ ಆನಂದ

ಶ್ರೀನಿವಾಸ ಶಾಸ್ತ್ರಿಗಳನ್ನು ಆಗ ನೋಡಬೇಕಾಗಿತ್ತು, ಸಂತೋಷದ ಮೂರ್ತಿ ಎಂಥಾದ್ದೆಂದು ಕಾಣಲು. ಶ್ರೀನಿವಾಸಶಾಸ್ತ್ರಿಗಳಿಗೆ ವಾಸುದೇವಾಚಾರ್ಯರ ಹಾಡಿಕೆಯಲ್ಲಿ ಅತ್ಯಂತ ಮೆಚ್ಚಿಕೆ. ಆಚಾರ್ಯರ ಸಂಸ್ಕೃತ ಪದೋಚ್ಚಾರಣೆ ಎಷ್ಟು ಶುದ್ಧವಾಗಿದೆ, ಎಷ್ಟು ಚೆನ್ನಾಗಿದೆ-ಎಂದು ಹೊಗಳುತ್ತಿದ್ದರು. ಆಚಾರ್ಯರ ರಾಗಭಾವವಂತೂ ಶಾಸ್ತ್ರಿಗಳಿಗೆ ಹೃದಯಸ್ಪರ್ಶಿಯೆನಿಸುತ್ತಿತ್ತು. ನಾನು ಎಷ್ಟೋ ಸಾರಿ ಶಾಸ್ತ್ರಿಗಳಿಗೆ ಇಷ್ಟವಾದ ಸಾವೇರಿ ಮೊದಲಾದ ರಾಗಗಳನ್ನು ವಾಸುದೇವಾಚಾರ್ಯರಿಂದ ಹಾಡಿಸಿ ಶಾಸ್ತ್ರಿಗಳಿಗೆ ಕೇಳಿಸಿದ್ದೆ. ಇಂಥ ಆಚಾರ್ಯರು ನನ್ನ ಶ್ಲೋಕವನ್ನು ಹಾಡಿದರೆಂದು ಶಾಸ್ತ್ರಿಗಳಿಗೆ ತುಂಬ ಹೆಮ್ಮೆ.

# ಶೃಂಗೇರಿ ಪ್ರವಾಸ

ಸುಮಾರು ೧೯೪೪೪ರಲ್ಲಿ ಶ್ರೀನಿವಾಸಶಾಸ್ತ್ರಿಗಳು ಪತ್ನೀಸಮೇತರಾಗಿ ಶೃಂಗೇರಿಗೆ ಹೋದರು. ಅವರ ಜೊತೆಯಲ್ಲಿ ನಾವು ನಾಲ್ಕೈದು ಮಂದಿ ಇದ್ದೆವು. ಅವರ ಪೈಕಿ ನನಗೆ ನೆನಪಿರುವ ಮಟ್ಟಿಗೆ ಎಲೆಕ್ಟ್ರಿಕಲ್ ಇಂಜಿನಿಯರ್ ಎನ್. ಎನ್. ಅಯ್ಯಂಗಾರ್ಯರು, ಸಿವಿಲ್ ಸರ್ವಿಸಿನ ಎಂ. ಎಸ್. ರಾಮಚಂದ್ರ ರಾಯರೂ ಇದ್ದರು. ಶಾಸ್ತ್ರಿಗಳ ಉದ್ದೇಶ ಶೃಂಗೇರಿಯ ಕಾಡು, ಬೆಟ್ಟ, ನದಿ ಮೊದಲಾದ ಪ್ರಕೃತಿದೃಶ್ಯವನ್ನು ನೋಡಬೇಕೆಂಬುದು. ಅವರ ಭಾರ್ಯೆಯ ಉದ್ದೇಶ ಗುರುಗಳವರನ್ನು ನೋಡಿ ತಮ್ಮ ಯಜಮಾನರಿಗೆ ದೀರ್ಘಾಯುಸ್ಸಿನ ವರ ಪಡೆದುಕೊಳ್ಳಬೇಕೆಂಬುದು.

ಶಾಸ್ತ್ರಿಗಳಿಗೆ ಜಗದ್ಗುರುಗಳವರ ಆಸ್ಥಾನದಲ್ಲಿ ಆಸಕ್ತಿಯಿತ್ತು-ಅದು ಮಹಾ ವಿದ್ವತ್ಕೇಂದ್ರವೆಂದು.

ಹಿಂದೆ ಶ್ರೀ ಶ್ರೀಮದಭಿನವ ನರಸಿಂಹಭಾರತೀ ಸ್ವಾಮಿಗಳವರು ಪೀಠಾಧೀಶ್ವರರಾಗಿದ್ದಾಗ ಕೊಯಮತ್ತೂರಿನಲ್ಲಿ ಶಾಸ್ತ್ರಿಗಳು ಸ್ವಾಮಿಗಳ ದರ್ಶನ ಮಾಡಿದ್ದರು. ಆಗ ಅವರು ಗೋಖಲೆಯವರ ಮಾತಿನಂತೆ ಅಲ್ಲಿಗೆ ಹೋಗಿದ್ದರು. ಗೋಖಲೆಯವರಿಗೆ ಒಂದು ಹಿಂದೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬ ಆಲೋಚನೆ ಬಹುಕಾಲ ಮನಸ್ಸಿನಲ್ಲಿ ರೂಢವಾಗಿತ್ತು. ಆ ಆಲೋಚನೆಯ ಸಾಧಕ ಬಾಧಕಗಳನ್ನು ಶೃಂಗೇರಿ ಜಗದ್ಗುರುಗಳೊಡನೆ ಪರ್ಯಾಲೋಚಿಸಬೇಕೆಂದು ಶ್ರೀನಿವಾಸ ಶಾಸ್ತ್ರಿಗಳನ್ನು ಅವರು ಕಳುಹಿಸಿದ್ದರು. ಆಗ ಶಾಸ್ತ್ರಿಗಳು ಸ್ವಾಮಿಗಳ ದರ್ಶನ ಮಾಡಿ ಒಂದಷ್ಟು ವಿಚಾರ ನಡಸಿದ್ದರು.

# ಒಂದು ‘ಆಶಡು’

ಕೊಯಮತ್ತೂರಿನಲ್ಲಿದ್ದಾಗ ಯಾರೋ ಒಬ್ಬ ಐರೋಪ್ಯ ಮಹಿಳೆ ಕೊಯಮತ್ತೂರಿಗೆ ಬಂದು ಗುರುಗಳವರ ಬಿಡಾರಕ್ಕೆ ಸೇರಿದರಂತೆ. ಆಕೆ ಶಾಸ್ತ್ರಿಗಳನ್ನು ಕುರಿತು ಕೇಳಿದಳಂತೆ:

“ನಾನು ಈ ಜಗದ್ಗುರುಗಳವರ ಕೀರ್ತಿಯಿಂದ ಆಕರ್ಷಿತಳಾಗಿ ಬಂದಿದ್ದೇನೆ. ಇವರು ಮಹಾಜ್ಞಾನಿಗಳೆಂದೂ ತಪಸ್ವಿಗಳೆಂದೂ ಕೇಳಿದ್ದೇನೆ. ಮನುಷ್ಯಜೀವನದ ವಿಷಯದಲ್ಲಿಯೂ ಜೀವಗತಿಯ ವಿಷಯದಲ್ಲಿಯೂ ಕೇಳುವ ಎಲ್ಲ ಪ್ರಶ್ನೆಗಳಿಗೂ ಇವರು ಸಮಂಜಸವಾದ ಉತ್ತರವನ್ನು ಕೊಡಬಲ್ಲರಂತೆ. ನಾನು ಒಂದೆರಡು ಪ್ರಶ್ನೆಗಳನ್ನು ಕೇಳಬೇಕು. ಆದರೆ ಅವರ ಭಾಷೆ ನನಗೆ ಬಾರದು. ನನ್ನ ಭಾಷೆ ಅವರಿಗೆ ತಿಳಿಯದು. ನೀವು ನಮಗಿಬ್ಬರಿಗೂ ಮಧ್ಯೆ ದ್ವಿಭಾಷಿಯಾಗಿರಬೇಕು.”

ಶಾ: “ನನ್ನಿಂದಾದರೆ ಮಾಡುತ್ತೇನೆ.”

ಆಕೆಯ ಮನೋಗತವನ್ನು ಶಾಸ್ತ್ರಿಗಳು ಗುರುಗಳಿಗೆ ವಿಜ್ಞಾಪಿಸಿದರು. ಗುರುಗಳವರು ಕೇಳಿದರು: “ಈಗ ಆಕೆ ತಾನು ಹುಟ್ಟಿದ ಮತದಲ್ಲಿ ಏನೇನು ತಿಳಿದುಕೊಂಡಿದ್ದಾಳೆ? ಯಾವ ಯಾವ ಗ್ರಂಥವನ್ನೋದಿ ಚಿಂತನೆ ಮಾಡಿದ್ದಾಳೆ?”

ಶಾಸ್ತ್ರಿಗಳು ಇದನ್ನು ಆಕೆಗೆ ಹೇಳಿದರು.

ಆಕೆ: “ನಾನು ಏನನ್ನೂ ಹೆಚ್ಚಾಗಿ ಓದಿಲ್ಲ. ಆದರೆ ಈ ಸ್ವಾಮಿಗಳು ಬಹು ಚೆನ್ನಾಗಿ ಉಪದೇಶ ಮಾಡುತ್ತಾರಂತೆ. ಒಳ್ಳೊಳ್ಳೆಯ ಕಥೆಗಳ ರೂಪದಲ್ಲಿ. ಒಂದೆರಡು ಕಥೆಗಳನ್ನು ಹೇಳಬಾರದೆ?”

ಶಾಸ್ತ್ರಿಗಳು ಇದನ್ನು ತರ್ಜುಮೆಮಾಡಿ ಗುರುಗಳಿಗೆ ತಿಳಿಸಿದರು. ಗುರುಗಳು ನಕ್ಕು ಹೇಳಿದರು:

“ಕಥೆ ಏನಿದ್ದರೂ ಬೇರೊಂದು ತತ್ತ್ವವನ್ನು ವಿಶದಪಡಿಸುವುದಕ್ಕೋಸ್ಕರ ಪ್ರಾಸಂಗಿಕವಾಗಿ ಬರುತ್ತದೆ. ಪ್ರಸಂಗ ಇಲ್ಲದಿದ್ದಾಗ ಏನು ಕಥೆ ಹೇಳಲಾದೀತು? ಈಕೆಗೆ ಕಥೆ ಮಾತ್ರ ಬೇಕಾದರೆ ಅವರ ಭಾಷೆಯಲ್ಲಿಲ್ಲವೆ? ಕಥೆ ಬೇಕಾದರೆ ಈಕೆ ಬೇರೆ ಜಾಗಕ್ಕೆ ಹೋಗಬೇಕು.”

ಶಾಸ್ತ್ರಿಗಳು ಇದನ್ನು ನನಗೆ ಹೇಳಿ ಹೀಗೆಂದರು:

“ಇಂಥ ‘ಅಶಡು’ ಗಳು ಪದೇ ಪದೇ ಬರುತ್ತವೆ ಸಾರ್ ಜಗದ್ಗುರುಗಳವರ ಹತ್ತಿರ. ಅವರಿಗೆ ವೃಥಾ ಆಯಾಸ. ಏನು ಮಾಡಲಾದೀತು? ಆ ದೊಡ್ಡ ಸ್ಥಾನದಲ್ಲಿದ್ದರೆ, ಹಾಗೆ ಖ್ಯಾತಿ ಬಂದರೆ ಇಂಥ ಪೀಡೆ ಅನಿವಾರ್ಯ.”

ಶಾಸ್ತ್ರಿಗಳವರಿಗೆ ಆ ಜಗದ್ಗುರುಗಳ ವಿಷಯದಲ್ಲಿ ಅತ್ಯಂತ ಭಕ್ತಿ. ನೈಜವಾದ ಭಕ್ತಿ. ಶಾಸ್ತ್ರಿಗಳ ತಾತ ಮುತ್ತಾತಂದಿರು ಯತಿಗಳಾಗಿದ್ದವರೆಂಬ ಸಂಗತಿಯನ್ನು ಹಿಂದೆ ಹೇಳಿದ್ದೇನೆ. ಶ್ರೀಮದಭಿನವ ನೃಸಿಂಹ ಭಾರತೀ ಸ್ವಾಮಿಗಳ ಪಾಂಡಿತ್ಯಕ್ಕೂ ಪ್ರತಿಭೆಗೂ ವಾಕ್ಸಾಮರ್ಥ್ಯಕ್ಕೂ ಹಾಗೆಯೇ ಅವರ ತಪೋನಿಷ್ಠೆ ಉಪಶಾಂತತೆ ಸುಲಭತೆಗಳಿಗೂ ಶಾಸ್ತ್ರಿಗಳು ಬೆರಗಾಗಿದ್ದರು. ಸ್ವಾಮಿಗಳ ಮಹನೀಯತೆಯನ್ನು ಪದೇ ಪದೇ ಸ್ಮರಿಸುತ್ತಿದ್ದರು.

ಈಗ ಶೃಂಗೇರಿ ಪ್ರವಾಸದ ಮಾತಿಗೆ ಹೋಗೋಣ.

# ಶೃಂಗೇರಿ ಪ್ರವಾಸ

ಆ ಕಾಲದಲ್ಲಿ ಜಗದ್ಗುರುಪೀಠವನ್ನು ಅಲಂಕರಿಸಿದ್ದವರು ಶ್ರೀ ಚಂದ್ರಶೇಖರ ಭಾರತಿಗಳವರು. ಶಾಸ್ತ್ರಿಗಳು ಅಲ್ಲಿಗೆ ಹೋಗಿದ್ದ ದಿನಕ್ಕೆ ಒಂದೆರಡು ವಾರಗಳ ಹಿಂದಿನಿಂದ ಸ್ವಾಮಿಗಳವರು ಒಂದು ಪ್ರತಿಜ್ಞೆಯನ್ನು ಕೈಕೊಂಡಿದ್ದರು. ಪಾಠ ಪ್ರವಚನಗಳನ್ನೆಲ್ಲ ನಿಲ್ಲಿಸಿದ್ದರು. ಎಲ್ಲ ಪಂಡಿತರೂ ವಿದ್ಯಾರ್ಥಿಗಳೂ ಆ ದಿನಗಳಲ್ಲಿ ಸಂತತವಾಗಿ ಗಾಯತ್ರೀ ಪುರಶ್ಚರಣ ಮಾಡತಕ್ಕದ್ದೆಂದು ವಿಧಿ. ಇದರ ಕಾರಣ ಮುಂದೆ ಸ್ಪಷ್ಟಪಡುತ್ತದೆ. ಶಾಸ್ತ್ರಿಗಳು ಸಕುಟುಂಬರಾಗಿ ಮಠಕ್ಕೆ ಹೋಗಿ ಪೂಜೆಯ ವೇಳೆಯಲ್ಲಿ (ಹಿಂದೆಯೇ ಗೊತ್ತಾಗಿದ್ದ ಮೇರೆಗೆ) ಸ್ವಾಮಿಗಳ ದರ್ಶನ ಮಾಡಿದರು. ಕುಶಲ ಪ್ರಶ್ನೆಯಾದ ಬಳಿಕ ಶ್ರೀಗಳವರು ಅಪ್ಪಣೆ ಕೊಡಿಸಿದ್ದು ಹೀಗೆ:

"ನೀವು ಬಂದದ್ದು ಬಹಳ ಸೊಂತೋಷ. ಶಾರದಾ ಅಮ್ಮನವರೇ ನಿಮ್ಮನ್ನು ಇಲ್ಲಿಗೆ ಕರೆಯಿಸಿಕೊಂಡಿದ್ದಾರೆ–ಅವರ ಕಾರ್ಯಕ್ಕಾಗಿ. ಅದು ನಮ್ಮ ಧರ್ಮದ ಸುಸ್ಥಿತಿಗಾಗಿ ಬಹು ಅವಶ್ಯಕವಾದ ಕಾರ್ಯ. ಈಗ ದೆಹಲಿಯ ಸಾಮ್ರಾಜ್ಯ ಸಭೆಯಲ್ಲಿ ಹಿಂದೂ ವಿವಾಹ ಪದ್ಧತಿಗೆ ಸಂಬಂಧಪಟ್ಟಂತೆ ಒಂದು ಕಾನೂನು ಪರ್ಯಾಲೋಚನೆಯಲ್ಲಿದೆಯಂತೆ. ಅದಕ್ಕೆ 'ಶಾರದಾ ಬಿಲ್' ಎಂದು ಹೆಸರಂತೆ. ಏನು ಕಾಲವೈಪರೀತ್ಯ ಇದು? ಶಾರದಾದೇವಿಗೆ ಅತ್ಯಂತ ಅಸಮ್ಮತವಾದ ಒಂದು ಸಂದರ್ಭಕ್ಕೆ ಆಕೆಯ ಹೆಸರನ್ನೇ ಇಟ್ಟಿದ್ದಾರಲ್ಲ? ಈ ವೈಪರೀತ್ಯವನ್ನು ತಪ್ಪಿಸಬೇಕು. ಅದಕ್ಕೆ ನೀವು ಸಮರ್ಥರು. ನಿಮ್ಮನ್ನು ಚಕ್ರವರ್ತಿಯವರ ಆಪ್ತ ಮಂಡಲಕ್ಕೆ (ಪ್ರಿವಿ ಕೌನ್ಸಿಲ್) ಸೇರಿಸಿಕೊಂಡು ಗೌರವಿಸಿದ್ದಾರೆ. ಆ ಆಪ್ತಮಂಡಲದ ಸದಸ್ಯರಿಗೆ ಇಂಡಿಯದ ವೈಸರಾಯನ್ನು ಮುಖತಃ ಕಂಡು ವಿವರ ಹೇಳುವ ಅವಕಾಶವಿದೆಯಂತೆ. ನೀವು ಆ ಅಧಿಕಾರವನ್ನು ಉಪಯೋಗಿಸಿಕೊಂಡು ವೈಸರಾಯನ್ನು ಕಂಡು, ಆತನಿಗೆ ತಿಳಿವಳಿಕೆ ಕೊಟ್ಟು ಈ ಶಾರದಾ ಮಸೂದೆ ಎಂಬ ಅಪಸ್ಮಾರವನ್ನು ನಿಲ್ಲಿಸಬೇಕು. ಈ ಉದ್ದೇಶಕ್ಕೆ ಸಹಾಯವಾಗಬೇಕೆಂದು ನಾವು ಈಗ ಹದಿನೈದು ದಿನದಿಂದ ಎಲ್ಲ ಪಾಠ ಪ್ರವಚನಗಳನ್ನೂ ನಿಲ್ಲಿಸಿ ನಮ್ಮ ಮಠದ ವಿದ್ವಾಂಸರೂ ವಿದ್ಯಾರ್ಥಿಗಳೂ ಸಂತತವಾಗಿ ಗಾಯತ್ರೀ ಪುರಶ್ಚರಣ ಮಾಡತಕ್ಕದ್ದೆಂದು ನಿಶ್ಚಯ ಮಾಡಿದ್ದೇವೆ. ಆ ಮಸೂದೆ ತೊಡೆದುಹೋಗುವವರೆಗೂ ನಾವು ಈ ವ್ರತವನ್ನು ನಡಸಬೇಕೆಂದು ಸಂಕಲ್ಪಿಸಿದ್ದೇವೆ."

ಈ ಸಣ್ಣ ಭಾಷಣವನ್ನು ಶಾಸ್ತ್ರಿಗಳು ಕೇಳಿ ಹೇಳಿದರು:

“ಈಗ ಪೂಜಾಕಾಲ. ತಾವು ಹೇಳಿದ ವಿಷಯವನ್ನು ಕುರಿತು ಸಾವಧಾನವಾಗಿ ವಿಚಾರ ಮಾಡಬೇಕಾಗಿದೆ. ಅಪ್ಪಣೆಯಾದರೆ ಆ ವಿಚಾರವನ್ನು ಇನ್ನೊಂದು ಸಾರಿ ತೆಗೆದುಕೊಳ್ಳೋಣ.”

# ಪ್ರಸಾದ

ಸ್ವಾಮಿಗಳು ಒಪ್ಪಿ ಪೂಜೆಯನ್ನು ಮುಂದುವರಿಸಿದರು. ಪೂಜೆ ಮುಗಿದ ಬಳಿಕ ಶಾಸ್ತ್ರಿಗಳಿಗೂ ಅವರ ಪತ್ನಿ ಲಕ್ಷ್ಮಮ್ಮನವರಿಗೂ ಫಲ ಮಂತ್ರಾಕ್ಷತೆಗಳನ್ನು ಕೊಟ್ಟು ಆಶೀರ್ವದಿಸಿದರು. ಆ ಸಂದರ್ಭದಲ್ಲಿ ಒಂದು ಸಂಗತಿ ನಡೆಯಿತು. ಸ್ವಾಮಿಗಳವರು ಶಾಸ್ತ್ರಿಗಳ ಕೈಯಲ್ಲಿ ಒಂದು ಚಿನ್ನದ ತಾಳಿ ಬೊಟ್ಟನ್ನೂ ಒಂದು ಲಿಖಿತ ಪತ್ರವನ್ನೂ ಇರಿಸಿ ಹೇಳಿದರು.

"ನೀವು ಈ ತಾಳಿಯನ್ನು ನಿಮ್ಮ ಪತ್ನಿಯವರ ಕಂಠದಲ್ಲಿ ಧಾರಣ ಮಾಡಿಸತಕ್ಕದ್ದು."

ಶಾಸ್ತ್ರಿಗಳು: "ಗುರುಗಳವರ ಅನುಗ್ರಹದಿಂದ ನಾವಿಬ್ಬರೂ ಕೃತಾರ್ಥರಾದೆವು. ಆಜ್ಞೆಯಾದಂತೆ ಈ ತಾಳಿಯನ್ನು ನಾಳೆ ಶ್ರೀ ಶಾರದಾ ಸನ್ನಿಧಿಯಲ್ಲಿ ಈಕೆಗೆ ಧಾರಣ ಮಾಡಿಸುತ್ತೇನೆ. ಈಕೆಗೆ ನನ್ನ ರೋಗವನ್ನು ನೋಡಿ ಅಧೈರ್ಯ ಬಂದಿದೆ. ನನ್ನ ದೀರ್ಘಾಯುಷ್ಯಕ್ಕಾಗಿ ಕಳವಳಪಡುತ್ತಿದ್ದಾಳೆ. ಆಕೆಯ ಮನಸ್ಸಮಾಧಾನಕ್ಕಾಗಿ ನಾನು ಗುರುಗಳ ಆಜ್ಞೆಯನ್ನು ಸಂತೋಷದಿಂದ ನಡಸುತ್ತೇನೆ. ಇನ್ನು ಶ್ಲೋಕವನ್ನಾದರೋ ನಾಮ ಭಕ್ತಿಯಿಂದ ಗುರುತಾಗಿ ಇರಿಸಿಕೊಂಡಿರುತ್ತೇನೆ. ಹೆಚ್ಚು ಹೇಳಲಾರೆ."

ಬಳಿಕ ಗುರುವಂದನ ಮಾಡಿ ಬಿಡಾರಕ್ಕೆ ಬಂದರು. ಆಮೇಲೆ ನಾನು ಶಾಸ್ತ್ರಿಗಳನ್ನು ಕೇಳಿದೆ:

ನಾನು: "ನಿಮ್ಮ ಮಾತಿನ ಭಾವವೇನು? ಶ್ಲೋಕದ ವಿಷಯ ಏನು ನೀವು ಹೇಳಿದು?"

ಶಾ: "ನಾನು ಪ್ರತಿನಿತ್ಯ ಸಂಧ್ಯಾವಂದನೆಯನ್ನೇ ಮಾಡುತ್ತಿಲ್ಲ. ನಾನು ಸಂಧ್ಯಾವಂದನೆಯನ್ನು ಬಿಟ್ಟೇ ಎಷ್ಟೋ ಕಾಲವಾಯಿತು. ಶ್ಲೋಕವನ್ನು ಪಾರಾಯಣ ಮಾಡುತ್ತೇನೆಂದು ಈಗ ಹೇಗೆ ಮಾತು ಕೊಡಲಾದೀತು? ಶ್ಲೋಕವಾದರೋ ಸಾಮಾನ್ಯವಾಗಿದೆ. ಇಂಥ ಸ್ತೋತ್ರ ಶ್ಲೋಕಗಳು ನಮ್ಮಲ್ಲಿ ನೂರಾರಿವೆಯಲ್ಲ? ಇದರಲ್ಲಿ ಏನು ವಿಶೇಷ? ಆದರೆ ಗುರುಪೀಠದಲ್ಲಿರುವವರು ಅಭಿಮಾನವಿಟ್ಟು ಕೊಟ್ಟಿದ್ದಾರೆ. ಅದನ್ನು ಗೌರವಿಸಬೇಕಾದದ್ದು ನಮ್ಮ ಕರ್ತವ್ಯ."

ಮಾರನೆಯ ದಿನ ಮಧ್ಯಾಹ್ನ ಶ್ರೀಮಠದಲ್ಲಿ ವಿವಾಹಶಾಸನವನ್ನು ಕುರಿತು ಮಾತು ನಡೆಯಿತು. ಸ್ವಾಮಿಗಳವರಿಗೂ ಶಾಸ್ತ್ರಿಗಳವರಿಗೂ ಸಂಭಾಷಣೆ ನಡೆದದ್ದು ತಮಿಳು

ಭಾಷೆಯಲ್ಲಿ-ಸಂಸ್ಕೃತ ಮಿಶ್ರಿತವಾದ ತಮಿಳಿನಲ್ಲಿ-ಎಂಬುದನ್ನು ವಾಚಕರು ಊಹಿಸಿದ್ದಾರು. ಶಾಸ್ತ್ರಿಗಳವರ ಪ್ರತಿಪಾದನೆ ಎರಡು ಭಾಗಗಳಲ್ಲಿತ್ತು: ಮೊದಲನೆಯ ಭಾಗ ವ್ಯಕ್ತಿಸಂಬಂಧದ್ದು; ಎರಡನೆಯದು ಶಾಸ್ತ್ರಸಂಬಂಧದ್ದು. ಅವರು ಹೇಳಿದರು:

"ಈಗ ಪ್ರಸಕ್ತವಾಗಿರುವ ಶಾಸನವು ಕನ್ಯೆಯ ವಯಸ್ಸಿನ ಮಿತಿಯನ್ನು ಹೆಚ್ಚಿಸಬೇಕೆಂಬುದು. ಈ ಅಭಿಪ್ರಾಯ ನನಗೂ ಉಂಟು. ನಾನು ಕೆಲವು ವರ್ಷಗಳ ಹಿಂದೆ ಮದರಾಸಿನ ಶಾಸನಸಭೆಯ ಸದಸ್ಯನಾಗಿದ್ದಾಗ ಇಂಥ ಬದಲಾವಣೆ ಯುಕ್ತವೆಂದು ಭಾವಿಸಿದ್ದೆ. ಆ ಬಗ್ಗೆ ಒಂದು ಶಾಸನದ ಕರಡನ್ನು ತಯಾರುಮಾಡಿ ಸಭೆಯ ಚರ್ಚೆಗೆ ತಂದಿದ್ದೆ. ಆದರೆ ಆಗ ಸಭೆಯಲ್ಲಿ ಸರಕಾರದ ಜನ ಹೆಚ್ಚಾಗಿದ್ದ ಕಾರಣದಿಂದಲೂ ಸರಕಾರವು ಮತಾಚಾರಗಳಿಗೆ ಕೈಹಾಕತಕ್ಕದ್ದಲ್ಲವೆಂಬ ನಿಯಮವನ್ನು ಸರಕಾರದ ಜನ ಅಂಗೀಕರಿಸಬೇಕಾಗಿದ್ದ ಕಾರಣದಿಂದಲೂ ನನ್ನ ಸೂಚನೆ ಬಿದ್ದುಹೋಯಿತು. ನನ್ನ ಅಭಿಪ್ರಾಯವೇನೋ ಹಾಗೆಯೇ ಉಳಿದುಕೊಂಡಿದೆ. ಆ ಅಭಿಪ್ರಾಯಕ್ಕಾಗಿ ಈಗ ಮತ್ತೊಬ್ಬರು ಮಸೂದೆ ತಂದಿರುವಾಗ ನಾನು ಅದನ್ನು ವಿರೋಧಿಸಬಹುದೆ? ನನ್ನ ಅಭಿಪ್ರಾಯವನ್ನೇ ಇನ್ನೊಬ್ಬರು ಸಮರ್ಥಿಸುತ್ತಿದ್ದರೆ ನಾನು ಅದನ್ನು ಹೇಗೆ ಖಂಡಿಸಲಾದೀತು? ಇಷ್ಟೇ ಇಲ್ಲದೆ ನನ್ನ ಕುಟುಂಬದಲ್ಲಿ ನಡೆದಿರುವ ಮೂರು ನಾಲ್ಕು ವಿವಾಹಗಳಲ್ಲಿ ಕನ್ಯೆಯು ರೂಢಿಯ ವಯಸ್ಸನ್ನು ಮೀರಿದ್ದವಳು. ನನ್ನ ಅಭಿಪ್ರಾಯ ಮಾತ್ರವಲ್ಲದೆ ನನ್ನ ಆಚರಣೆಯೂ ಸುಧಾರಣೆಗೆ ಅನುಕೂಲವಾಗಿದೆ. ಹೀಗಿರುವುದರಿಂದ ಶಾರದಾ ಕಾನೂನಿಗೆ ತಡೆಗಟ್ಟುವುದು ನನಗೆ ಸಮಂಜಸವಾಗಲಾರದು.

"ಈ ಮಸೂದೆಗೆ 'ಶಾರದಾ ಕಾನೂನು' ಎಂದು ಹೆಸರು ಬಂದಿರುವುದು ಅದನ್ನು ಶ್ರೀ ಶಾರದಾದೇವಿಗೆ ಅಂಕಿತಮಾಡಬೇಕೆಂದಾಗಲಿ, ಅವಹೇಳನ ಮಾಡಬೇಕೆಂದಾಗಲಿ ಅಲ್ಲ. ಆ ಹೆಸರಿಗೆ ಕಾರಣ ಅದರ ಪ್ರತಿಪಾದಕರ ಹೆಸರು. ಆತನ ಹೆಸರು ಹರವಿಲಾಸ ಶಾರದಾ (Har Bilas Sarada) ಎಂದು. ಆತನು ಹಿಂದೂಧರ್ಮದಲ್ಲಿ ಅತ್ಯಂತ ಶ್ರದ್ಧೆಯುಳ್ಳವನು; ಒಳ್ಳೆಯ ಮನುಷ್ಯ. ಆತ ಇಂಗ್ಲಿಷಿನಲ್ಲಿ 'ಹಿಂಡೂ ಸುಪೀರಿಯಾರಿಟಿ' (Hindu Superiority) ಎಂಬ ಗ್ರಂಥ ಬರೆದಿದ್ದಾನೆ. ಅದರಲ್ಲಿ ಹಿಂದೂ ಸಮಾಜ ಸಂಪ್ರದಾಯಗಳನ್ನು ಪ್ರಶಂಸೆಮಾಡಿರುವ ಐರೋಪ್ಯ ವಿದ್ವಾಂಸರ ಮಾತುಗಳನ್ನು ಸಂಗ್ರಹಿಸಿಕೊಟ್ಟಿದ್ದಾನೆ. ಹೀಗೆ ಆ ಕಾನೂನಿನ ಸದ್ಯದ ಪ್ರತಿಪಾದಕನು ಧರ್ಮಾಭಿಮಾನಿ. ಆತನು ಪ್ರತಿಪಾದಿಸುತ್ತಿರುವ ಕಾನೂನಿಗೆ ಜನ ಆತನ ಹೆಸರನ್ನೇ ಇಟ್ಟಿದ್ದಾರೆ."

“ಇನ್ನು ಎರಡನೆಯ ಭಾಗ. ಶಾಸ್ತ್ರಗಳಲ್ಲಿ ವಿಹಿತವಾಗಿರುವುದು ಋತುಮತಿಯಾದಾಕೆಯ ವಿವಾಹವೆಂದೇ ನಾನು ತಿಳಿದುಕೊಂಡಿದ್ದೇನೆ. ಈ ವಿಷಯದಲ್ಲಿ ಒಂದಿಷ್ಟು ಗ್ರಂಥಶೋಧನೆ ಮಾಡಿದ್ದೇನೆ. ಈಗ ರೂಢಿಯಲ್ಲಿರುವ ಕನ್ಯಾತ್ವದ ನಿಯಮಕ್ಕೆ ಶ್ರುತಿ ಸ್ಮೃತಿಗಳಲ್ಲಿ ಆಧಾರ ಕಾಣುವುದಿಲ್ಲ. ೮–೧೦ ವರ್ಷದ ಹೆಣ್ಣುಮಗುವಿಗೆ ವಿವಾಹವಾಗ ತಕ್ಕದ್ದೆಂಬುದು ಜನ ರೂಢಿ. ಈ ರೂಢಿಯು ಬಹು ಪ್ರಾಚೀನವಾದದ್ದಲ್ಲವೆಂದೂ ಯಾವುದೋ ಚಾರಿತ್ರಿಕವಾದ ಕಾರಣಗಳಿಂದ ಜನರು ಪ್ರಾಚೀನ ಸಂಪ್ರದಾಯಗಳನ್ನು ಬಿಟ್ಟು ಬಾಲವಿವಾಹವನ್ನು ರೂಢಿಗೆ ತಂದುಕೊಂಡಿರಬಹುದೆಂದೂ ನಾವು ಊಹಿಸಬೇಕಾಗಿದೆ. ವಿವಾಹದಲ್ಲಿ ತದಂಗವಾಗಿ ನಡೆಯುವ ಕರ್ಮಗಳಲ್ಲಿ ಉಪಯುಕ್ತವಾಗುವ ಮಂತ್ರಗಳನ್ನು ನೋಡೋಣವಾಗಬೇಕು. ‘ಆರೋಹೂರುಂ…’ ಇತ್ಯಾದಿ. ಇಲ್ಲಿ ಅರ್ಥವು ಸ್ಪಷ್ಟವಾಗಿದೆ. ಇದು ೮-೧೦ ವಯಸ್ಸಿನ ಬಾಲಕಿಗೆ ಹೇಳುವ ಮಾತಲ್ಲ. ಇದು ಪ್ರೌಢೆಯಾದವಳಿಗೇ ತಕ್ಕ ಮಾತು. ವಿವಾಹ ಪ್ರಯೋಗವನ್ನು ಕುರಿತು ಆಲೋಚಿಸೋಣವಾಗಬೇಕು. ವಧೂವರರು ಮೂರು ರಾತ್ರಿ ಸಹಶಯ್ಯೆಯಲ್ಲಿರಬೇಕಾದದ್ದು, ಅನಂತರ ‘ತೃತೀಯಾಯಾಮಪರರಾತ್ರೌ’ ಇತ್ಯಾದಿ ಸೂತ್ರದಂತೆ ವರನು ವಿಶ್ವಾವಸು ಗಂಧರ್ವರನ್ನು ವಿಸರ್ಜನಮಾಡಿದ ಬಳಿಕ ಚತುರ್ಥೀಕರ್ಮ ನಡೆಯತಕ್ಕದ್ದು. ಇದರ ಅರ್ಥವೇನು? ಕನ್ಯೆ ಕರ್ಮಾರ್ಹಳಾಗಿರುತ್ತಾಳೆಂದು ತಾತ್ಪರ್ಯ. ಹೀಗೆ ಅಭಿಪ್ರಾಯ ಹೊರಡುತ್ತದೆ- ಗೃಹ್ಯಸೂತ್ರಗಳಿಂದ.”

ಸ್ವಾಮಿಗಳು: “ನಾವು ಗೃಹ್ಯಸೂತ್ರಗಳನ್ನು ನೋಡಿಲ್ಲ.”

ಶಾಸ್ತ್ರಿಗಳು: “ಗೃಹ್ಯಸೂತ್ರಗಳು ಯತ್ಯಾಶ್ರಮಕ್ಕೆ ಅಪ್ರಸಕ್ತ. ಆದರೆ ಪ್ರಸಕ್ತ ವಿಷಯ ಗೃಹಸ್ಥಧರ್ಮಕ್ಕೆ ಸೇರಿದ್ದು. ಈ ವಿಷಯದಲ್ಲಿ ಗೃಹ್ಯಸೂತ್ರವು ಪ್ರಮಾಣವಾಗುತ್ತದೆಂದು ನನ್ನ ತಿಳಿವಳಿಕೆ.”

ಸ್ವಾಮಿಗಳು: “ಆಹಾ! ಅದು ಯುಕ್ತವೇ. ನಾವು ಗೃಹ್ಯಸೂತ್ರಗಳನ್ನು ಪರಿಶೀಲನೆ ಮಾಡಿದ ಬಳಿಕ ಈ ವಿಚಾರದಲ್ಲಿ ನಿರ್ಣಯಕ್ಕೆ ಬರಬಹುದು.”

# ಲೋಕಸಂದರ್ಭ ಪರಿಶೀಲನೆ

ಶಾಸ್ತ್ರಿಗಳು ಗುರುಗಳ ಅಭಿಪ್ರಾಯಕ್ಕಾಗಿ ವಂದನೆ ಸಲ್ಲಿಸಿದರು. “ಎಷ್ಟೋ ಕಾಲದಿಂದ ಬಂದಿರುವ ಒಂದು ರೂಢಿಯನ್ನು ಈಗ ಬಿಡಬೇಕೆಂದರೆ ಮನಸ್ಸು ಸುಲಭವಾಗಿ ಅದಕ್ಕೆ ಒಡಂಬಡಲಾರದು. ಆದರೆ ಈಗಿನ ಲೋಕಪರಿಸ್ಥಿತಿಯನ್ನು ವಿಚಾರ ಮಾಡಿದರೆ ರೂಢಿಯನ್ನು ಬದಲಾಯಿಸುವುದರ ಆವಶ್ಯಕತೆ ಮನಸ್ಸಿಗೆ ತೋರೀತು. ಬದಲಾಯಿಸುವುದೆಂದರೆ ವೇದಶಾಸ್ತ್ರಗಳನ್ನು ತೊರೆಯುವುದೆಂದು ಅರ್ಥವಾಗುವುದಿಲ್ಲ. ಲೋಕರೂಢಿಗೆ ವೇದಶಾಸ್ತ್ರಗಳ ಆಧಾರವಿಲ್ಲದೆಯೂ ಲೋಕರೂಢಿಯು ಪ್ರಕೃತಕ್ಕೆ ಹೊಂದಿಕೊಳ್ಳದೆಯೂ ಇರುವ ಸಂದರ್ಭದಲ್ಲಿ ನಾವು ಲೋಕಾನುಕೂಲದ ದೃಷ್ಟಿಯಿಂದ ಶಾಸ್ತ್ರವನ್ನು ನೋಡಬೇಕಾದದ್ದು ಎಂಬುದು ನನ್ನ ವಾದ. ಈ ತತ್ತ್ವವನ್ನು ಶ್ರೀಗಳವರು ಬಿಚ್ಚು ಮನಸ್ಸಿನಿಂದ, ಪೂರ್ವಾಗ್ರಹವಿಲ್ಲದ ಮನಸ್ಸಿನಿಂದ ನಿಷ್ಪಕ್ಷಪಾತವಾಗಿ ವಿಚಾರ ಮಾಡಲು ಸಮ್ಮತಿಸಿದ್ದಾರೆ. ಇದು ನನಗೆ ತುಂಬ ಸಂತೋಷ. ಸಮಸ್ತ ಆಸ್ತಿಕ ಲೋಕಕ್ಕೂ ಇದು ಸಂತೋಷದ ಸಂಗತಿ. ನನ್ನ ಮನಸ್ಸಿನಲ್ಲಿದ್ದ ವಾದಸರಣಿಯನ್ನು ಸನ್ನಿಧಾನದಲ್ಲಿ ಬಿನ್ನಹ ಮಾಡಲು ನನಗೆ ಈ ಅವಕಾಶ ದೊರೆತದ್ದು ಪರಮ ಲಾಭ. ನಾನು ಇದಕ್ಕಾಗಿ ಪುನಃ ಪುನಃ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.”

ಶ್ರೀಗಳವರು ಪ್ರಸನ್ನರಾಗಿ ಲಾಲಿಸಿ ನಗುಮುಖದಿಂದ ಆಶೀರ್ವದಿಸಿದರು. ನಾವೆಲ್ಲ ಫಲಮಂತ್ರಾಕ್ಷತೆಗಳನ್ನು ಪಡೆದು ಮರಳಿದೆವು.

# ಟಿಪ್ಪಣಿ

ಪುಟ ೪೩೫ ಪಂಕ್ತಿ ೫ರಲ್ಲಿ "ಆ ಉಪನ್ಯಾಸದಲ್ಲಿ ಒಂದು ಶ್ಲೋಕ ಹೇಳಿದೆ" ಎಂದಿದೆ. ಆ ಶ್ಲೋಕ ಯಾವುದೆಂದರೆ:

ಯಾತ್ಯೇಕತೋಽಸ್ತಶಿಖರಂ ಪತಿರೋಷಧೀನಾಂ
ಆವಿಷ್ಕೃತೋಽರುಣಪುರಸ್ಸರ ಏಕತೋಽರ್ಕಃ ।
ತೇಜೋದ್ವಯಸ್ಯ ಯುಗಪದ್ ವ್ಯಸನೋದಯಾಭ್ಯಾಂ
ಲೋಕೋ ನಿಯಮ್ಯತ ಇವಾತ್ಮದಶಾನ್ತರೇಷು ॥

–ಶಾಕುಂತಲ, ೪–೨

# ೩ ಟಿ. ಆರ್. ವೆಂಕಟರಾಮಶಾಸ್ತ್ರಿಗಳು

ಟಿ.ಆರ್. ವೆಂಕಟರಾಮಶಾಸ್ತ್ರಿಗಳು ಶಿವಸ್ವಾಮಿ ಅಯ್ಯರ್ ಅವರ ಶಿಷ್ಯಪ್ರಾಯರು. ಫೆಡರಲ್ ಕೋರ್ಟಿನ ಜಡ್ಜಿಯಾಗಿದ್ದು ನಿವೃತ್ತರಾದ ಸರ್. ಎಸ್. ವರದಾಚಾರಿಯವರೂ, ವೆಂಕಟರಾಮಶಾಸ್ತ್ರಿಗಳೂ ಶಿವಸ್ವಾಮಿ ಅಯ್ಯರ್ ಅವರ ಆಫೀಸಿನಲ್ಲಿ ವಕೀಲಿ ವೃತ್ತಿಯನ್ನು ಕಲಿತು ಅವರಿಗೆ ಸಹಾಯಕರಾಗಿದ್ದರು.

ವೆಂಕಟರಾಮ ಶಾಸ್ತ್ರಿಗಳು ಶಿವಸ್ವಾಮಿ ಅಯ್ಯರ್ ಅವರಲ್ಲಿ ಉಮೇದುವಾರರಾಗಿ ಸೇರಿದ್ದರ ಕತೆ ಹೇಳತಕ್ಕದ್ದಾಗಿದೆ.

## ಯೋಗ್ಯತಾ ಪರೀಕ್ಷೆ

ಶಾಸ್ತ್ರಿಗಳು ಬಿ.ಎಲ್. ಪ್ಯಾಸ್ ಮಾಡುವ ವೇಳೆಗೇ ಶಿವಸ್ವಾಮಿ ಅಯ್ಯರ್ ಅವರ ಪ್ರಸಿದ್ಧಿ ದೊಡ್ಡದಾಗಿತ್ತು. ಅವರ ವಿದ್ವತ್ ಕೀರ್ತಿಯೂ ವಿಸ್ತಾರವಾಗಿತ್ತು. ಇಂಥವರಲ್ಲಿ ತಾವು ಸೇರಬೇಕೆಂದು ಶಾಸ್ತ್ರಿಗಳು ಮನಸ್ಸು ಮಾಡಿ ಶಿವಸ್ವಾಮಿ ಅಯ್ಯರ್ ಅವರಿಗೆ ಬಂಧುಗಳಾಗಿದ್ದು ಸೀತಾರಾಮ ಅಯ್ಯರ್ ಎಂಬವರಿಂದ ಶಿಫಾರಸುಪತ್ರವನ್ನು ಪಡೆದುಕೊಂಡು ಹೋದರು. ಶಾಸ್ತ್ರಿಗಳೂ ಅಯ್ಯರೂ ಇಬ್ಬರೂ ದ್ರಾವಿಡ ಬ್ರಾಹ್ಮಣರೇ ಆದರೂ ಅವರು ಬೇರೆ ಬೇರೆ ಪಂಗಡಗಳವರು. ಹಿಂದಿನ ಕಾಲದಲ್ಲಿ ವಿವಾಹಾದಿ ಸಂಬಂಧಗಳು ಬೇರೆ ಪಂಗಡಗಳ ನಡುವೆ ಬೆಳೆಯುತ್ತಿರಲಿಲ್ಲ. ಶಿವಸ್ವಾಮಿ ಅಯ್ಯರ್ ಅವರು ಬೃಹಚ್ಚರಣದ ಐದಾರು ಒಳಪಂಗಡಗಳಲ್ಲಿ ಯಾವುದೋ ಒಂದಕ್ಕೆ ಸೇರಿದವರು. ವೆಂಕಟರಾಮ ಶಾಸ್ತ್ರಿಗಳು ಚೋಳ ದೇಶದ ವಡಮರು.

ಸೀತಾರಾಮಯ್ಯರ್ರವರ ಕಾಗದವನ್ನು ವೆಂಕಟರಾಮ ಶಾಸ್ತ್ರಿಗಳು ಶಿವಸ್ವಾಮಿ ಅಯ್ಯರ್ರವರ ಕೈಗೆ ಕೊಟ್ಟ ಕೂಡಲೆ ಅವರು ಪ್ರಸನ್ನರಾಗದೆ.

“ಸೀತಾರಾಮನು ಏಕೆ ಕಾಗದ ಬರೆದಿದ್ದಾನೆ? ಶಿಫಾರಸು ಕಾಗದಗಳಿಗೆ ನಾನು ಬೆಲೆ ಕೊಡುವುದಿಲ್ಲವೆಂಬುದು ಅವನಿಗೆ ತಿಳಿದಿದೆಯಲ್ಲ?” ಎಂದು ಹೇಳುತ್ತ ಕಾಗದವನ್ನು ನೋಡಿಕೊಂಡು,

“ಇರಲಿ, ನೀವು ಗುರುವಾರ ಬೆಳಗ್ಗೆ ಬನ್ನಿ-ಎಂಟು ಗಂಟೆಗೆ ಸರಿಯಾಗಿ” ಎಂದರು. ವೆಂಕಟರಾಮಶಾಸ್ತ್ರಿಗಳು ಅದರಂತೆ ಗುರುವಾರ ಹೋಗಿ ಕಾಣಿಸಿಕೊಂಡ ಕೂಡಲೆ ಶಿವಸ್ವಾಮಿ ಅಯ್ಯರ್ ಅವರು ಒಂದು ಪುಸ್ತಕವನ್ನು ಅವರ ಮುಂದೆ ಹಿಡಿದು,

“ಇದನ್ನು ಓದಿ”

–ಎಂದರು, ಶಾಸ್ತ್ರಿಗಳು ಓದಿದರು. ಹೀಗೆ:

ಶಾ: “ಸೆಸೆಮಿ ಅಂಡ್ ಲಿಲೀಸ್” (Sesame and Lilies)

ಶಿ: “ಆ ಮೊದಲನೆಯ ಮಾತು ಮೂರು ಮಾತ್ರೆಯೆ (Syllables) ಎರಡೆ?”

ಶಾ: “ನಿಘಂಟುವಿನಲ್ಲಿ ಮೂರು ಎಂದು ತೋರಿಸಿದೆ.”

ಶಿ: “ಆಹಾ! ಸರಿ. ನಿಘಂಟು ನೋಡುವ ಅಭ್ಯಾಸ ಇದೆ. ಒಳ್ಳೆಯದು. ಸುಬ್ರಹ್ಮಣ್ಯ ಅಯ್ಯರ್, (ಇದು ಅವರ ಗುಮಾಸ್ತರ ಹೆಸರು) ಇವರು ನಾಳೆ ಬೆಳಗಿನಿಂದ ಈ ಆಫೀಸಿಗೆ ಬರುತ್ತಾರೆ. ಅವರಿಗೆ ಕುರ್ಚಿ, ಮೇಜು, ಮೊದಲಾದ ಏರ್ಪಾಟುಗಳನ್ನು ಮಾಡಬೇಕು.”

ಇದು ಶಿವಸ್ವಾಮಿ ಅಯ್ಯರ್ ಅವರ ದಾರಿ. ಯೋಗ್ಯತಾಪರೀಕ್ಷೆಯನ್ನು ಸ್ವತಂತ್ರವಾಗಿ ಮಾಡಬೇಕು, ಮತ್ತು ಅದು ಪ್ರಮಾಣವತ್ತಾದ ಪರೀಕ್ಷೆ.

# ನೈಘಂಟುಕರು

ವೆಂಕಟರಾಮ ಶಾಸ್ತ್ರಿಗಳಿಗೂ ಅದೇ ಗುಣ ಬಂದಿತ್ತು. ಅವರೂ ನೈಘಂಟುಕರು. ಒಂದು ದಿನ ಮದರಾಸಿನಿಂದ ಬಂದು ಬೆಂಗಳೂರಿನಲ್ಲಿ ಇಳಿದವರೇ ಕಾರಿನಲ್ಲಿ ನನ್ನ ಮನೆಗೆ ಬಂದರು. ನಾನು ಕುಶಲಪ್ರಶ್ನೆ ಮಾಡುವಷ್ಟರಲ್ಲಿಯೇ "ನಿನ್ನ ಇಂಗ್ಲಿಷ್ ನಿಘಂಟನ್ನು ತಾ" – ಎಂದರು. ನಾನು "ಇದೇನು ಅವಸರ?" ಎಂದೆ. ಅವರು "ರೈಲು ಇಳಿದು ಹೋಟೆಲಿಗೆ ಬಂದ ಕೂಡಲೆ ಪೆಟ್ಟಿಗೆಯನ್ನು ತೆಗೆದೆ. ಅದರಲ್ಲಿ ಮೇಲುಗಡೆ ಕಾಣುವಂತೆ ಡಿಕ್ಷನರಿ ಇರಿಸುವುದು ಪದ್ಧತಿ. ನಿನ್ನೆ ನನ್ನ ಸಾಮಾನು ಅಣಿಮಾಡಿದ ಮನುಷ್ಯ ಎಲ್ಲೋ ಮರೆತಿದ್ದಾನೆ, ಡಿಕ್ಷನರಿ ಇಲ್ಲ. ಆದರೆ ಅದು ಸರ್ವದಾ ನನ್ನ ಪಕ್ಕದಲ್ಲಿರಬೇಕು, ನಾನು ಅದನ್ನು ನೋಡಬೇಕಾದ ಸಂದರ್ಭ ಬರಲಿ, ಬಾರದಿರಲಿ, ಅದಂತೂ ಹತ್ತಿರವಿರಬೇಕು" ಎಂದರು.

# ಪ್ರಯೋಗ ಸೌಷ್ಠವ

ಇದು ಆ ಕಾಲದ ವಿದ್ವಜ್ಜನರ ಸಾಮಾನ್ಯ ಪದ್ಧತಿಗೆ ನಿದರ್ಶನ. ಯಾವ ಮಾತನ್ನು ಉಪಯೋಗಿಸಿದರೂ ಪ್ರಾಮಾಣಿಕವಾಗಿರಬೇಕು, ಹೆಚ್ಚು ಕಡಮೆಗಳಿರದಂತೆ ಇರಬೇಕು ಮತ್ತು ಸ್ವಚ್ಛವಾಗಿರಬೇಕು. ಹೇಗೆಂದರೆ ಹಾಗೆ ಮಾತನಾಡುವವರಲ್ಲ ಅವರು "ಗೇಣತ್ತ, ಮೊಳ ಇತ್ತ" ಕೂಡದು.

"ಸತ್ಯಾಯ ಮಿತಭಾಷಿಣಾಮ್" – ಇದು ಅವರ ಸೂತ್ರ.

ವೆಂಕಟರಾಮಶಾಸ್ತ್ರಿಗಳು ಭಾಷಾಪ್ರಯೋಗದ ವಿಷಯದಲ್ಲಿ ಬಹುಜಾಗರೂಕರಾಗಿರುತ್ತಿದ್ದರು. ಅವರು ವಕೀಲಿಯಲ್ಲಿ ಯಶಸ್ವಿಯಾದದ್ದನ್ನು ನೋಡಿ ಅವರಲ್ಲಿ ಸಲಿಗೆಯಿದ್ದ ಸ್ನೇಹಿತರು ಪರಿಹಾಸ ಮಾಡುತ್ತಿದ್ದ ಎರಡು ಸಂದರ್ಭಗಳನ್ನು ನಾನು ಹಾಜರಿದ್ದು ಕೇಳಿದೆ.

(೧) "ಶಾಸ್ತ್ರಿಗಳೆ, ಕೋರ್ಟಿನಲ್ಲಿ ನಿಮ್ಮ ವಾದದಿಂದ ನೀವು ಗೆದ್ದಿರಿ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಭ್ರಾಂತಿ. ನೀವು ಗೆದ್ದದ್ದು ನಿಮ್ಮ ಪರ್ಸನಾಲಿಟಿ (Personality) ಯಿಂದ. ನಿಮ್ಮ ಎತ್ತರ, ನಿಮ್ಮ ಮೇಲುಹಲ್ಲಿನ ಕೊಂಚ ಉಬ್ಬು, ಅಭಿಪ್ರಾಯ ನಿವೇದನೆಯ ವಿನಯ, ಉಚ್ಚಾರಣೆಯ ಸೊಗಸು–ಇದಕ್ಕೆ ಮರುಳಾಗಿ ಜಡ್ಜಿಗಳು ನಿಮ್ಮ ಪರವಾಗಿ ತೀರ್ಮಾನ ಕೊಟ್ಟುಬಿಡುತ್ತಾರೆ."

# ವಾದಕೌಶಲ

(೨) “ಶಾಸ್ತ್ರಿಗಳೆ, ನಿಮ್ಮ ವಾದ ಬಹು ಚೆನ್ನಾಗಿತ್ತು. ಅದರಲ್ಲಿ ಚೆನ್ನಿನ ಭಾಗ ನಿಮ್ಮ ಇಂಗ್ಲಿಷ್ ವಾಕ್ಯಗಳ ಸೊಗಸು. ಇಷ್ಟು ಸೊಗಸಾಗಿ ಇಂಗ್ಲಿಷ್ ಮಾತುಗಳನ್ನು ಉಚ್ಚಾರಣೆ ಮಾಡಿ ವಾಕ್ಯರಚನೆ ಮಾಡಿದರೆ ಜಡ್ಜಿಗಳು ಬೆರಗಾಗರೆ? ನಿಮ್ಮ ಲಾ ಪಾಯಿಂಟುಗಳನ್ನು ಯಾರು ಕೇಳುತ್ತಾರೆ?”

ಈ ಎರಡೂ ಕೇವಲ ಹಾಸ್ಯದ ಮಾತು. ಸ್ತೋತ್ರರೂಪವಾದ ಹಾಸ್ಯ. ವಾಸ್ತವವಾಗಿ ವೆಂಕಟರಾಮಶಾಸ್ತ್ರಿಗಳು ಲಾ ವಿಜ್ಞಾನದಲ್ಲಿ ತಲಸ್ಪರ್ಶಿಯಾದ ಪರಿಜ್ಞಾನವುಳ್ಳವರು. ಅವರು ಒಂದು ಜಟಿಲವಾದ ಪ್ರಶ್ನೆಯನ್ನು ಬಿಡಿಸಿ ಬಿಡಿಸಿ ಸಿಕ್ಕು ಬಿಚ್ಚಿ, ಆ ಪ್ರಶ್ನೆಯಲ್ಲಿ ಮುಖ್ಯವಾದ ತೊಡಕೇನೆಂಬುದನ್ನು ಬಿಚ್ಚಿ ತೋರಿಸುತ್ತಿದ್ದರು. ಒಂದಾನೊಂದು ಮೊಕದ್ದಮೆಯಲ್ಲಿ ಉಭಯ ಪಕ್ಷದ ವಾದಗಳನ್ನೂ ನೋಡಿದಾಗ ಜಡ್ಜಿ ತೀರ್ಮಾನ ಮಾಡಬೇಕಾದದ್ದು ಮುಖ್ಯವಾಗಿ ಯಾವುದೋ ಒಂದು ಅಂಶವನ್ನು ಕುರಿತು. ಈ ಪಕ್ಕದ ಲಾಯರು ಹತ್ತು ಅಂಶಗಳನ್ನು ಮುಂದಿಡಬಹುದು. ಎದುರು ಪಕ್ಕದ ಲಾಯರು ಹದಿನೈದು ಅಂಶಗಳನ್ನು ಮುಂದಿಡಬಹುದು. ಆದರೆ ತೀರ್ಮಾನವಾಗುವುದಕ್ಕೆ ಆ ಇಪ್ಪತ್ತೈದು ಅಂಶಗಳೂ ಅಷ್ಟೂ ಅವಶ್ಯವಿಲ್ಲ. ಅವುಗಳಲ್ಲಿ ಯಾವುದೋ ಎರಡು ಮುಖ್ಯಾಂಶಗಳಾಗಿರುತ್ತವೆ. ಆ ಮುಖ್ಯಾಂಶಗಳು ತೀರ್ಮಾನವಾದರೆ ಉಳಿದ ಇಪ್ಪತ್ತು ಅಂಶಗಳು ಗಣನೆಗೇ ಬರಬೇಕಾಗುವುದಿಲ್ಲ. ಆ ಎರಡು ಮೂರು ಅಂಶಗಳನ್ನು ಆರಿಸಿ ಗಟ್ಟಿಯಾಗಿ ಹಿಡಿದು ತೋರಿಸುತ್ತಿದ್ದದ್ದು ವೆಂಕಟರಾಮ ಶಾಸ್ತ್ರಿಗಳ ಕುಶಲತೆ.

# ಮಿತಭಾಷಿತ್ವ

ಬೆಂಗಳೂರಿನಲ್ಲಿ ನನ್ನ ಸ್ನೇಹಿತರೊಬ್ಬರು ವೆಂಕಟರಾಮ ಶಾಸ್ತ್ರಿಗಳಿಗೆ ಒಂದು ಭಾರಿ ಮೊಕದ್ದಮೆಯನ್ನು ಒಪ್ಪಿಸಿದರು. ಶಾಸ್ತ್ರಿಗಳು ಕಾಗದಪತ್ರಗಳ ಕಟ್ಟನ್ನು ಪರಿಶೀಲಿಸಿ ನೋಡಿ ಹೀಗೆ ಹೇಳಿದರು. ಎರಡೇ ವಾಕ್ಯ:

“ನಿಮ್ಮ ಕೇಸು ಒಂದು ದಾಖಲೆಯನ್ನು ಅವಲಂಬಿಸಿಕೊಂಡಿದೆ. ಆ ದಾಖಲೆಯನ್ನು ಕುರಿತು ಜಡ್ಜಿಯಾಗಲಿ ಎದುರು ಕಡೆಯ ಲಾಯರಾಗಲಿ ಪ್ರಶ್ನೆ ಎತ್ತದೆಹೋದರೆ ನಿಮ್ಮ ಕೇಸು ಗೆಲ್ಲುತ್ತದೆ; ಅಥವಾ ಆ ಪ್ರಶ್ನೆಯನ್ನೆತ್ತಿದಾಗ ದಾಖಲೆಯನ್ನು ನೀವು ತೋರಿಸಿದರೆ ನಿಮ್ಮ ಕೇಸು ನಿಲ್ಲುತ್ತದೆ. ಕೇಳಿದಾಗ ಆ ದಾಖಲೆ ಇಲ್ಲದೆಹೋದರೆ ಯಾವ ಕೋರ್ಟಿಗೆ ಹೋದರೂ ನಿಮ್ಮ ಕೇಸು ಊರ್ಜಿತವಾಗಲಾರದು.”

ಇದು ವೆಂಕಟರಾಮ ಶಾಸ್ತ್ರಿಗಳ ದಾರಿ. ಮಾತು ಒಂದೋ, ಎರಡೋ, ಅಷ್ಟೆ. ಕೋರ್ಟಿನಲ್ಲಿ ವಾದ ಮಾಡುವಾಗ ಅವರು ಭಂಡಿಗಟ್ಟಲೆ ಪುಸ್ತಕಗಳನ್ನು ತರುತ್ತಿರಲಿಲ್ಲ. ಧ್ವನಿಯೆತ್ತಿ ಕೂಗುತ್ತಿರಲಿಲ್ಲ. ಮೇಜಿನ ಮೇಲೆ ಗುದ್ದುತ್ತಿರಲಿಲ್ಲ. ಅವರು ಬಹು ದೀರ್ಘವಾಗಿ ವಾದ ಮಾಡಿದರೆಂದರೆ ಅರ್ಧ ಘಂಟೆಗೆ ಹೆಚ್ಚಿಲ್ಲ.

ಅವರು ಒಂದು ಸಾರಿ ಬೆಂಗಳೂರು ಹೈಕೋರ್ಟಿನಲ್ಲಿ ವಾದ ಮಾಡಿದಾಗ ನಾನು ಹಾಜರಿದ್ದೆ. ಮೊಕದ್ದಮೆ ಎಲ್. ಎಸ್. ರಾಜು ಅವರ ಸಂಬಂಧದ್ದು. ಶಾಸ್ತ್ರಿಗಳು ಬಂದಿದ್ದದ್ದು ಕೋರ್ಟಿಗೆ ಸಹಾಯ ಮಾಡುವುದಕ್ಕೋಸ್ಕರ (*Amicus curiae*). ಆಗ ವೆಂಕಟರಾಮ ಶಾಸ್ತ್ರಿಗಳು ಆ ಮೊಕದ್ದಮೆಯಿಂದ ತಮ್ಮ ಮನಸ್ಸಿಗಾದ ವಿಷಾದವನ್ನು ಸೂಚಿಸಿ, ರಾಜ್ಯದಲ್ಲಿ ಮಂತ್ರಿ ವರ್ಗಕ್ಕೂ ನ್ಯಾಯಸ್ಥಾನಕ್ಕೂ ಇರಬೇಕಾದ ಪರಸ್ಪರ ಮೈತ್ರಿ ಎಂಥಾದ್ದೆಂಬುದನ್ನು ಸೂಚಿಸಿ, ಪ್ರಜಾವ್ಯಕ್ತಿಯ ಸ್ವಾತಂತ್ರ್ಯವನ್ನು ಕುರಿತು ೧೫-೨೦ ನಿಮಿಷ ಮಾತನಾಡಿದರು. ಆಗ ನಾವೆಲ್ಲ ಅಂದುಕೊಂಡೆವು, ಈ ಭಾಷಣವನ್ನು ಟೇಪ್‌ರೆಕಾರ್ಡರಿನಲ್ಲಿ ತೆಗೆದಿರಿಸಲಿಲ್ಲವಲ್ಲ! ಷಾರ್ಟ್‌ಹ್ಯಾಂಡಿನಲ್ಲಿ ಕೂಡ ಯಾರೂ ಬರೆದಿರಿಸಿಕೊಳ್ಳಲಿಲ್ಲವಲ್ಲ!-ಎಂದು. ಅಷ್ಟು ಕೊಂಚ ಪ್ರಮಾಣದಲ್ಲಿ ಅಷ್ಟು ಬಿಗಿಯಾಗಿ ನಾನಾ ಪ್ರಶ್ನೆಗಳನ್ನು ಗರ್ಭೀಕರಿಸಿಕೊಂಡಿದ್ದ ಭಾಷಣ ಸಮಸ್ತ ಜನಕ್ಕೂ ಉಪಯುಕ್ತವಾಗತಕ್ಕದ್ದು. ಎಂಥ ಮಹಾನುಭಾವರು! ಎಂದು ನಾವೆಲ್ಲ ಸಂತೋಷಪಟ್ಟೆವು, ಹೆಮ್ಮೆಪಟ್ಟೆವು.

# ವೃತ್ತಿನೀತಿ

ವೆಂಕಟರಾಮಶಾಸ್ತ್ರಿಗಳ ವೃತ್ತಿನೀತಿಯನ್ನು ಕುರಿತು ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತಿದೆ. ಅವರು ಸಾಮಾನ್ಯವಾಗಿ ಫೀಸು ತೆಗೆದುಕೊಳ್ಳುತ್ತಿದ್ದ ದರ ೧, ೫೦೦ ರೂಪಾಯಿ. ಇದರ ಜೊತೆಗೆ ಅವರ ಮತ್ತು ಸಿಬ್ಬಂದಿಯ ಪ್ರಯಾಣದ ವೆಚ್ಚ ಹೋಟಲು ವೆಚ್ಚ ಆ ಕಾಲಕ್ಕೆ ಇದು ಸ್ವಲ್ಪ ಹೆಚ್ಚಿನ ದರ. ಆದದ್ದರಿಂದ ಬಂದ ಗಿರಾಕಿಯನ್ನು ಶಾಸ್ತ್ರಿಗಳು ಸುಲಭವಾಗಿ ಅಂಗೀಕಾರ ಮಾಡುತ್ತಿರಲಿಲ್ಲ. “ನೀವು ಏಕೆ ಇಷ್ಟು ಖರ್ಚು ಇಟ್ಟುಕೊಳ್ಳುತ್ತೀರಿ? ನಿಮ್ಮ ಊರಿನ ಲಾಯರಿಂದಲೇ ಈ ಕೆಲಸ ಆಗುತ್ತದೆ” -ಎಂದು ಹೇಳುತ್ತಿದ್ದರು. ಹೊರಗಿನ ಕೆಲಸವನ್ನು ಅವರು ಒಪ್ಪಿಕೊಳ್ಳುತ್ತಿದ್ದದ್ದು ಅಪರೂಪ.

ಒಂದು ಸಾರಿ ಶಿವಮೊಗ್ಗದ ಕಡೆಯ ಒಂದಾನೊಂದು ಮೊಕದ್ದಮೆಯಲ್ಲಿ ಒಂದು ಕಕ್ಷಿಯ ಪರವಾಗಿ ವೆಂಕಟರಾಮಶಾಸ್ತ್ರಿಗಳು ಬೆಂಗಳೂರಿಗೆ ಬಂದಿದ್ದರು. ಆ ದಿನ ಹೈಕೋರ್ಟಿನಲ್ಲಿ ಆ ಮೊಕದ್ದಮೆಯ ವಿಚಾರಣೆ ಪ್ರಾರಂಭವಾಗಿ ಮುಗಿಯದೆ ನಿಂತಿತು. ಮಾರನೆಯ ದಿನ ಅದು ಮುಂದುವರಿಯತಕ್ಕದ್ದಾಗಿತ್ತು. ವೆಂಕಟರಾಮಶಾಸ್ತ್ರಿಗಳು ಆ ಮಾರನೆಯ ದಿನ ಇದ್ದರೆ ಮತ್ತಷ್ಟು ಫೀಸು ಸಂಪಾದಿಸಬಹುದಾಗಿತ್ತು. ಆದರೆ ಆ ಮಾರನೆಯ ದಿನ ಅವರು ಬೆಂಗಳೂರಿನಲ್ಲಿ ನಿಲ್ಲುವುದು ಸಾಧ್ಯವಿರಲಿಲ್ಲ. ಅದಕ್ಕಾಗಿ ಅವರು ತಮ್ಮ ಕಕ್ಷಿಯ ಬೆಂಗಳೂರು ಲಾಯರ ಮನೆಗೆ ಬಂದು ಮೊದಲನೆಯ ದಿವಸದ ಲೆಕ್ಕಕ್ಕೆ ತಮ್ಮ ಕೈಗೆ ಬಂದಿದ್ದ ಹಣದಲ್ಲಿ ತಮಗಾಗಿದ್ದ ಪ್ರಯಾಣದ ಖರ್ಚು ಹೋಗಲಾಗಿ ಮಿಕ್ಕದ್ದನ್ನು ವಾಪಸು ಮಾಡಿದರು.

ನಾನು ಇದು ಏನೆಂದು ಕೇಳಿದೆ. ಅವರು ಹೇಳಿದರು:

“ನಾಳೆಯ ದಿನ ಎಂ. ಎಲ್. ಪರೀಕ್ಷೆಯ ಬೋರ್ಡಿನ ಮೀಟಿಂಗು ಇದೆ. ನಾನು ಅದರ ಚೇರ್ಮನ್ (ಅಧ್ಯಕ್ಷ). ಇತರ ಮೆಂಬರುಗಳಿಗೂ ನೋಟೀಸು ಕೊಟ್ಟಾಗಿದೆ. ಈಗ ನಾನು ಸಂಪಾದನೆಗೆ ಬೆಂಗಳೂರಿನಲ್ಲಿ ನಿಂತರೆ ಆ ಕೆಲಸ ಏನಾದೀತು? ಅವರೇನೆಂದುಕೊಂಡಾರು? ನಾನು ಇಲ್ಲಿಯ ಕೆಲಸ ಮುಗಿಸಿದ್ದಿದ್ದರೆ ನನ್ನ ಫೀಸಿನ ಹಕ್ಕು ಸಲ್ಲುತ್ತಿತ್ತು ಒಪ್ಪಿಕೊಂಡ ಕೆಲಸ ಪೂರ್ತಿ ಮಾಡಲು ಸಾಧ್ಯವಿಲ್ಲದಾಗ ಫೀಸು ನನಗೆ ಸಲ್ಲದು. ಆದ್ದರಿಂದ ವಾಪಸು ಮಾಡಿದ್ದೇನೆ.”

# ಸಾರ್ವಜನಿಕೋತ್ಸಾಹ

ವೆಂಕಟರಾಮಶಾಸ್ತ್ರಿಗಳು ಶಿವಸ್ವಾಮಿ ಅಯ್ಯರವರ ಸಂಪ್ರದಾಯಕ್ಕೆ ಸೇರಿದವರೆಂದು ಹೇಳಿದೆನಷ್ಟೆ. ರಾಜಕೀಯದಲ್ಲಿ ಇಬ್ಬರದೂ ಒಂದೇ ಮಾರ್ಗ. ಅದು ಸೌಮ್ಯ ಮಾರ್ಗ, ಸಮಜಾಯಿಷಿಯ ಮಾರ್ಗ: ಕ್ರಾಂತಿಕಾರಕವಲ್ಲ. ಯಾವ ಸಾರ್ವಜನಿಕ ಪ್ರಶ್ನೆ ಮೇಲೆದ್ದರೂ ಆ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕೆಂಬ ಸಂಕಲ್ಪ ಇಬ್ಬರಿಗೂ ಇತ್ತು. ಆದರೆ ವೆಂಕಟರಾಮಶಾಸ್ತ್ರಿಗಳಲ್ಲಿ ಆ ಸಂಕಲ್ಪದ ಒತ್ತಡವೂ ಕಾವೂ ಹೆಚ್ಚಾಗಿರುತ್ತಿತ್ತು.

ಇಂಥ ಒಂದಾನೊಂದು ಸಂದರ್ಭದಲ್ಲಿ ಒಂದು ಅಭಿಪ್ರಾಯ ನಿರೂಪಣೆ (Statement) ಯನ್ನು ಪ್ರಕಟಪಡಿಸಬೇಕೆಂದು ವೆಂಕಟರಾಮಶಾಸ್ತ್ರಿಗಳಿಗೆ ತೋರಿತು. ಅವರು ಕೂಡಲೆ ಒಂದು ನಕಲನ್ನು ತಯಾರು ಮಾಡಿದರು, ಅದನ್ನು ಕೈಯಲ್ಲಿ ಹಿಡಿದು ಶಿವಸ್ವಾಮಿ ಅಯ್ಯರವರ ಮನೆಗೆ ಹೊರಟರು. ಹೊತ್ತು ಮಧ್ಯಾಹ್ನ. ಬಿಸಿಲು, ತಲೆ ಸುಡುತ್ತಿದೆ. ಶಾಸ್ತ್ರಿಗಳಾದರೊ ಒಂದು ಮುಂಡು ಸುತ್ತಿಕೊಂಡು, ಮೈಯ ಮೇಲೆ ಒಂದು ಟವಲು ಕೂಡ ಹಾಕಿಕೊಳ್ಳದೆ ಹೊರಟಿದ್ದಾರೆ. ದಾರಿಯಲ್ಲಿ ಎದುರುಗಡೆಯಿಂದ ಕಾರಿನಲ್ಲಿ ಬರುತ್ತಿದ್ದ ಸ್ನೇಹಿತರೊಬ್ಬರು ಕಾರನ್ನು ನಿಲ್ಲಿಸಿ ಹೇಳಿದರು:

ಸ್ನೇ: “ಇದೇನು ಶಾಸ್ತ್ರಿಗಳೆ-ಹೀಗೆ ಹೊರಟಿದ್ದೀರಿ? ಮೈಮೇಲೆ ಬಟ್ಟೆಯನ್ನೇ ಹೊದ್ದಿಲ್ಲವಲ್ಲ! ಬಿಸಿಲು ಜೋರಾಗಿದೆ.”

ವೆಂ: “ಇಲ್ಲೇ ಇದೆಯಲ್ಲ ಶಿವಸ್ವಾಮಿ ಅಯ್ಯರವರ ಮನೆ-ಹತ್ತಿರವೇ.”

ಸ್ನೇ: (ನಕ್ಕು) “ಬನ್ನಿ, ಕಾರಿನಲ್ಲಿ ಹೋಗೋಣ.”

ವೆಂ: “ಬೇಡ ಬೇಡ. ಇಲ್ಲಿಂದಿಲ್ಲಿಗೆ ಕಾರು ಏತಕ್ಕೆ?”

ಹೀಗೆ ಹೇಳಿ ಶಾಸ್ತ್ರಿಗಳು ಮುಂದಕ್ಕೆ ನಡೆದರು. ಅಲ್ಲಿ ನಡೆದದ್ದು ಇನ್ನೂ ಸ್ವಾರಸ್ಯ.

ಶಿವಸ್ವಾಮಿ ಅಯ್ಯರವರು ತಮ್ಮ ಮನೆಯ ವರಾಂಡದಲ್ಲಿ ಕುಳಿತಿದ್ದಾರೆ. ವೆಂಕಟರಾಮಶಾಸ್ತ್ರಿಗಳು ಆತುರಾತುರವಾಗಿ ನುಗ್ಗಿಕೊಂಡು ಹುಲ್ಲುಗಾವಲಿನ ಮೇಲೆ

ಬೇಗ ಬೇಗ ನಡೆಯುತ್ತಿದ್ದಾರೆ. ಅವರು ಶಿವಸ್ವಾಮಿ ಅಯ್ಯರವರ ಹತ್ತಿರ ಹೋಗುತ್ತಲೇ ಅಯ್ಯರವರು ಕೇಳಿದರು:

ಶಿ: "ಶಾಸ್ತ್ರಿ, ಅಲ್ಲಿ ನೋಟೀಸ್ ಬೋರ್ಡಿದೆಯಲ್ಲ, ಕಾಣಲಿಲ್ಲವೊ?"

(ಆ ನೋಟೀಸ್ ಬೋರ್ಡೆಂಬುದರ ಮೇಲೆ "ಹುಲ್ಲುಗಾವಲಿನ ಮೇಲೆ ನಡೆಯ ತಕ್ಕದ್ದಲ್ಲ" ಎಂದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಣ್ಣದಿಂದ ಬರೆದಿತ್ತು.)

ವೆಂಕಟರಾಮ ಶಾಸ್ತ್ರಿಗಳು ಕ್ಲಾಸಿನಲ್ಲಿ ಚೀಮಾರಿ ಹಾಕಿಸಿಕೊಂಡ ವಿದ್ಯಾರ್ಥಿಯಂತೆ ಮುಖ ಮಾಡಿ ಹೇಳಿದರು:

ವೆಂ: "ಅವಸರದಲ್ಲಿ ಬಂದುಬಿಟ್ಟೆ."

ಶಿ: "ಏನು, ಸ್ಟೇಟ್‌ಮೆಂಟ್ (ಅಭಿಪ್ರಾಯ ನಿರೂಪಣೆ) ಬರೆದಿದ್ದೀರೋ?"

ವೆಂ: "ಹೌದು. ಇದು ಮುಖ್ಯವಾದ ವಿಷಯ. ತಮಗೆ ತೋರಿಸಬೇಕೆಂದು ತಂದೆ."

ಶಿ: "ಏನಾದರೂ ಮಾಡುತ್ತ ಇರಬೇಕಲ್ಲ! ಇಲ್ಲದಿದ್ದರೆ ಕೈ ಕಾಲಿನಲ್ಲಿ ಕಾವು ಇಳಿದು ಹೋಗಬಹುದು; ಬಟ್ಟೆ ತಣ್ಣಗಾಗುತ್ತದೆ–ಅಲ್ಲವೆ?"

ವೆಂ: "ಇದನ್ನು ನಿಮಗೆ ತೋರಿಸಿ ಆಮೇಲೆ ಶ್ರೀನಿವಾಸಶಾಸ್ತ್ರಿಗಳಿಗೆ ತೋರಿಸುತ್ತೇನೆ."

ಶಿ: "ಆಗಬಹುದು. ಇದರಲ್ಲಿ ಕಾಗುಣಿತ ದೋಷಗಳು, ವ್ಯಾಕರಣ ದೋಷಗಳು ಇದ್ದರೆ ಶ್ರೀನಿವಾಸಶಾಸ್ತ್ರಿಗಳು ತಾನೆ ತಿದ್ದಬೇಕು!"

# ಗುರು ಶಿಷ್ಯ ಸಂವಾದ

ಮೇಲೆ ಹೇಳಿದ ಸಂಗತಿ ಒಂದು ಸ್ಯಾಂಪಲ್ (Sample). ಇಂಥಾದ್ದು ಆಗಾಗ ನಡೆಯುತ್ತಿತ್ತು.

ವೆಂಕಟರಾಮಶಾಸ್ತ್ರಿಗಳ ಉದ್ದೇಶಗಳ ವಿಷಯದಲ್ಲಿಯೂ ಬರವಣಿಗೆಗಳ ವಿಷಯದಲ್ಲಿಯೂ ಶಿವಸ್ವಾಮಿ ಅಯ್ಯರವರಿಗೆ ಸಂಪೂರ್ಣವಾದ ನಂಬಿಕೆ. ಸಂಪೂರ್ಣವಾದ ಮೆಚ್ಚಿಕೆ. ಆದರೆ ಕೊಂಚಕೊಂಚ ಆಕ್ಷೇಪಣೆಯ ರೂಪದಲ್ಲಿ ಹಾಸ್ಯ ಮಾಡುತ್ತಿದ್ದುದು ಒಂದು ರೂಢಿಯಾದ ವಿನೋದ. ಶಿವಸ್ವಾಮಿ ಅಯ್ಯರವರು ಕುಚೋದ್ಯದ ಟೀಕೆ ಮಾಡಿದರೆ, ಶಾಸ್ತ್ರಿಗಳು ಬಹು ವಿನಯದಿಂದ ಅದನ್ನು ಸ್ವೀಕರಿಸಿ ಕೊಂಚ ನಗುವರು.

ಶಿವಸ್ವಾಮಿ ಅಯ್ಯರವರಿಗೆ ಸಂಗೀತದಲ್ಲಿ ಹೆಚ್ಚು ಇಷ್ಟ. ಅವರು ಕೊಂಚ ಕಾಲ ಪಿಟೀಲು ಕಲಿಯಲು ಶ್ರಮಪಟ್ಟಿದ್ದರು. ಅವರಿಗೆ ಸ್ವಾಭಾವಿಕವಾದ ಪರಿಷ್ಕಾರ ಮಾರ್ಗದಲ್ಲಿ ಕಲಿಯಬೇಕಾದರೆ ಅಷ್ಟು ಪುರಸತ್ತಿಲ್ಲ, ಆದದ್ದರಿಂದ ಆ ಆಶೆಯನ್ನು ಕೈಬಿಡಬೇಕಾಯಿತು. ಆದರೆ ಒಳ್ಳೆಯ ಸಂಗೀತವನ್ನು ಕೇಳಬೇಕೆಂಬ ಆಶೆಯುಂಟು. ಇದಕ್ಕೆ ಪ್ರತಿಬಂಧಕವಾಗಿ ಕಿವಿ ಕೊಂಚ ಮಂದ. ಆದರೂ ಗಮನವಿಟ್ಟು ಒಳ್ಳೆಯ ಹಾಡಿಕೆ ಕೇಳುವರು.

ಒಂದಾನೊಂದು ಸಂದರ್ಭದಲ್ಲಿ ಯಾರೋ ಒಬ್ಬ ಘನ ವಿದ್ವಾಂಸರು ಹಾಡುತ್ತಿದ್ದಾಗ ಶಿವಸ್ವಾಮಿ ಅಯ್ಯರವರು ಅದನ್ನು ಕೇಳಿ ಆನಂದಿಸಿ, ತಮ್ಮ ಪಕ್ಕದಲ್ಲಿ ಕುಳಿತಿದ್ದ ವೆಂಕಟರಾಮಶಾಸ್ತ್ರಿಗಳನ್ನು ಕುರಿತು ಪಿಸುಮಾತಿನಲ್ಲಿ ಹೇಳಿದರು:

ಶಿ: "ಇದನ್ನು ನಾನು ಕೇಳಿದ್ದೇನೆ, ಬಹಳ ಕೇಳಿದ್ದೇನೆ, ಪರಿಚಯವಾಗಿದೆ."

ವೆಂ: "ಹೌದು, ಹೌದು, ನಿಮಗೆ ಪರಿಚಯವಾದದ್ದೇ; ಯಾವಾಗಲೂ ಮನೆಯಲ್ಲಿ ಜೊತೆಯಾಗಿರುವುದೇ."

ಅದು ಕಲ್ಯಾಣಿ ರಾಗ. ಶಿವಸ್ವಾಮಿ ಅಯ್ಯರವರ ಭಾರ್ಯೆಯ ಹೆಸರು ಕಲ್ಯಾಣಿ. ಶಾಸ್ತ್ರಿಗಳ ಮಾತನ್ನು ಕೇಳಿ ಶಿವಸ್ವಾಮಿ ಅಯ್ಯರವರು ನಕ್ಕರು. ಗುರುದಕ್ಷಿಣೆ ಸಂದಿತು.

ಹೀಗೆ ಆ ಗುರು ಶಿಷ್ಯರ ಮಾತುಕಥೆ.

# ವೇದಾಧ್ಯಯನ

ವೆಂಕಟರಾಮಶಾಸ್ತ್ರಿಗಳು ಶಿವಸ್ವಾಮಿ ಅಯ್ಯರವರಂತೆಯೇ ಸಂಸ್ಕೃತದಲ್ಲಿ ವಿದ್ವಾಂಸರು. ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾನ್ವೊಕೇಷನ್ ಭಾಷಣ ಕೊಟ್ಟಾಗ ತೈತ್ತಿರೀಯೋಪನಿಷತ್ತಿನಿಂದ ಅಧ್ಯಯನ ಶೈಲಿಯಲ್ಲಿ ವಾಕ್ಯಗಳನ್ನು ಉದಾಹರಿಸಿದ್ದು ಅದನ್ನು ಕೇಳಿದವರ ಜ್ಞಾಪಕದಲ್ಲಿರಬಹುದು.

ಒಂದು ಸಾರಿ ಅವರು ಬೆಂಗಳೂರಿಗೆ ಬಂದಿದ್ದಾಗ, ಅಂದು ಶನಿವಾರ-ಅವರು ಮಾರನೆಯ ದಿನ ನನ್ನ ಯಾವುದೋ ಗೃಹಕೃತ್ಯಕ್ಕಾಗಿ ಬೆಂಗಳೂರಿನಲ್ಲಿ ನಿಲ್ಲಬೇಕೆಂದು ಬೇಡಿದೆ. ಅವರು ಹೇಳಿದ್ದು ಹೀಗೆ:

“ನಿನ್ನ ಮನೆಯಲ್ಲಿ ಶುಭಕಾರ್ಯ ನಡೆಯುವಾಗ ನಾನು ಇರಬೇಕಾದದ್ದು ನನ್ನ ಕರ್ತವ್ಯ. ಅದು ಸಂತೋಷದ ಕರ್ತವ್ಯ. ಆದರೆ ಅದಕ್ಕೊಂದು ಅಡಚಣೆ ಬಂದಿದೆ. ನಾಳೆ ಭಾನುವಾರ. ನಾಳೆ ನಾನೂ ನನ್ನ ಸ್ನೇಹಿತ ಭಾಸ್ಕರಯ್ಯರೂ ನಮ್ಮ ಬಾಲ್ಯದ ಅಧ್ಯಯನವನ್ನು ಪುನಃ ಪ್ರಾರಂಭ ಮಾಡತಕ್ಕದ್ದು ಎಂದು ನಿಶ್ಚಯ ಮಾಡಿಕೊಂಡಿದ್ದೇವೆ. ಭಾಸ್ಕರಯ್ಯರ್ ಇದುವರೆಗೂ ಚೀಫ್ ಇಂಜಿನಿಯರ್ ಹುದ್ದೆಯಲ್ಲಿದ್ದರು, ಅಧ್ಯಯನಕ್ಕೆ ಪುರಸತ್ತಿರಲಿಲ್ಲ. ಈಗ ಮೊನ್ನೆ ತಾನೆ ಆತ ರಿಟೈರಾಗಿದ್ದಾರೆ. ಇನ್ನು ನಾವಿಬ್ಬರೂ ಹಿಂದಿನಂತೆ ಜೊತೆ ಸೇರಿ ಅಧ್ಯಯನ ಮಾಡತಕ್ಕದೆಂದು ನಿರ್ಧರಿಸಿದ್ದೇವೆ. ಅದೂ ವೈದಿಕ ಕಾರ್ಯ. ನಾಳೆ ನಿನ್ನ ಮನೆಯಲ್ಲಿ ನಡೆಯಬೇಕಾದದ್ದೂ ವೈದಿಕ ಕಾರ್ಯ. ನಾವು ಮದರಾಸಿನಲ್ಲಿ ಮಾಡುವ ವೇದಪಾಠ ನಿನ್ನ ಮನೆಯಲ್ಲಿ ನಡೆಯಲಿರುವ ವೈದಿಕ ಕರ್ಮದ ಒಂದು ಅಂಗವೆಂದೇ ಭಾವಿಸೋಣ.”

ಹೀಗೆ ಸಮಾಧಾನ ಹೇಳಿದರು.

ವೆಂಕಟರಾಮ ಶಾಸ್ತ್ರಿಗಳು ವೈದಿಕ ವಂಶದಲ್ಲಿ ಹುಟ್ಟಿದವರು. ಮಹಾ ಪ್ರಸಿದ್ಧರಾದ ಅಪ್ಪಯ್ಯದೀಕ್ಷಿತರ ವಂಶದ ಒಂದು ಶಾಖೆಗೆ ಸೇರಿದವರು ಅವರು.

ಅವರ ತಂದೆಗಳು ಅಹಿತಾಗ್ನಿಯಾಗಿದ್ದವರು. ಅವರಿಗೆ ತಮ್ಮ ಅವಸಾನ ಕಾಲ ಸನ್ನಿಹಿತವಾಗಿದ್ದದ್ದು ಹೇಗೋ ತೋರಿತು. ಆಗ ಅವರು ತಮ್ಮ ಧರ್ಮಪತ್ನಿಗೆ ಆ ಕಟು ವಾರ್ತೆಯನ್ನು ಹೇಳಿ, ಅತ್ತು ಗೋಳಾಡಬಾರದೆಂದು ತಿಳಿವಳಿಕೆ ಕೊಟ್ಟು, ನಾಲ್ಕು ಮಂದಿ

ಬ್ರಾಹ್ಮಣರಿಗೆ ಹೇಳಿ ಕಳುಹಿಸಿ, ಅವರು ಬಂದ ಬಳಿಕ ಶಾಸ್ತ್ರವಿಧಿಯಂತೆ ಆತ್ಮ ಸಮಾರೋಪಣೆ ಮೊದಲಾದ ಶಾಸ್ತ್ರಕರ್ಮಗಳನ್ನು ಮಾಡಿಸಿಕೊಂಡು, ದರ್ಭಾಸನದ ಮೇಲೆ ಮಲಗಿ ಕರ್ಣಮಂತ್ರವನ್ನು ಹೇಳಿಸಿಕೊಂಡು ಉಪನಿಷದ್ವಾಕ್ಯಗಳನ್ನು ನುಡಿಯುತ್ತಿದ್ದಾಗ ಕಳೇಬರವನ್ನು ತ್ಯಜಿಸಿದರಂತೆ. ಆಗ ವೆಂಕಟರಾಮಶಾಸ್ತ್ರಿಗಳಿಗೆ ಏಳೆಂಟು ವರ್ಷ ಇದ್ದಿರಬಹುದು.

# ಶಾಸ್ತ್ರಶ್ರದ್ಧೆ

ಇಂಥ ವಾತಾವರಣದಲ್ಲಿ ಬೆಳೆದವರು ಅವರು, ಅವರು ಶಾಸ್ತ್ರಕರ್ಮಗಳನ್ನು ಬಿಟ್ಟವರಲ್ಲ. ಅವರು ಪ್ರತಿ ಅಮಾವಾಸ್ಯೆಯೂ ತಪ್ಪದೆ ತರ್ಪಣ ಕೊಡುತ್ತಿದ್ದದ್ದನ್ನು ನಾನು ನೋಡಿದ್ದೇನೆ. ಒಂದು ಸಾರಿ ಬೆಂಗಳೂರಿನಲ್ಲಿ ಡಿಸೆಂಬರ್ ತಿಂಗಳಿನಲ್ಲಿ ಬಲು ಚಳಿಯಾಗಿ ಮೋಡವಾಗಿದ್ದ ದಿವಸ. ಆ ದಿನ ಬೆಳಗ್ಗೆ ಅವರು ಆಹ್ನಿಕ ಮಾಡುತ್ತಿದ್ದ ಕೊಠಡಿಯಿಂದ ಹೊರಕ್ಕೆ ಹಾಲಿಗೆ ಬಂದು ನನ್ನನ್ನು ಕಂಡು ಕೇಳಿದರು:

ವೆಂ: “ಏನಯ್ಯ-ನಿಮ್ಮ ಊರಿನಲ್ಲಿ ಪಿತೃಗಳು ಕೋಟು ಹಾಕಿಕೊಂಡು ಬರುತ್ತಾರೆಯೊ, ಶಾಲು ಹೊದ್ದುಕೊಂಡೊ?”

ನಾನು: “ಯಾರು?”

ವೆಂ: “ಪಿತೃದೇವತೆಗಳು.”

ನಾನು: “ಸ್ವಲ್ಪ ಬಿಸಿಲು ಬಂದಮೇಲೆ ಮಾಡಬಹುದಾಗಿತ್ತಲ್ಲ?”

ವೆಂ: “ನನ್ನ ಚಳಿಗೋಸ್ಕರ ಅವರನ್ನು ಕಾದಿರುವಂತೆ ಹೇಳುವುದೆ? ಅಮಾವಾಸ್ಯೆಯ ದಿನ ಮೊದಲು ಮಾಡಬೇಕಾದ ಕೆಲಸ ತರ್ಪಣ.”

ಅಂಥಾದ್ದು ವೆಂಕಟರಾಮಶಾಸ್ತ್ರಿಗಳ ಕರ್ಮನಿಷ್ಠೆ.

# ಜ್ಞಾನಪಿಪಾಸೆ

ಅವರು ಹತ್ತಿರ ಹತ್ತಿರ ಎಂಭತ್ತು ವಯಸ್ಸಿನವರಾಗಿದ್ದಾಗ, ವಕೀಲಿ ಉದ್ಯೋಗದಿಂದ ವಿರಾಮ ಮಾಡಿಕೊಂಡು ಗ್ರೀಕ್ ಭಾಷೆಯನ್ನು ಕಲಿಯಲಾರಂಭಿಸಿದರು. ಅದಕ್ಕಾಗಿ ಒಬ್ಬ ಮೇಷ್ಟರು. ಕ್ರಮವಾದ ಅಭ್ಯಾಸ. ಮಧ್ಯೇಮಧ್ಯೇ ಗ್ರೀಕ್ ಭಾಷೆಯ ಪದಗಳಿಗೂ ವ್ಯಾಕರಣ ನಿಯಮಗಳಿಗೂ ಸಂಸ್ಕೃತದ ಪ್ರಯೋಗಗಳಿಗೂ ಇದ್ದ ಸಾದೃಶ್ಯ-ಅಸಾದೃಶ್ಯಗಳ ಚರ್ಚೆ; ಆ ಚರ್ಚೆಯಲ್ಲಿ ಬಂದ ಸಂಶಯಗಳನ್ನು ಕುರಿತು ಇತರ ಸ್ನೇಹಿತರೊಡನೆ ಪತ್ರವ್ಯವಹಾರ. ನನ್ನಂಥವರಿಗೆ ಅದೊಂದು ಚೋದ್ಯ.

“ಈ ವಯಸ್ಸಿನಲ್ಲಿ ಇದೇನು ವಿದ್ಯಾಭ್ಯಾಸ?” ಎಂದು ನಾನು ಕೇಳಿದರೆ, ಅವರು “ವಿದ್ಯಾಭ್ಯಾಸಕ್ಕೆ ಕಾಲವೇನು? ಯಾವಜ್ಜೀವವೂ ವಿದ್ಯಾರ್ಥಿಯಾಗಿರಬೇಕಾದದ್ದೇ” ಎಂದು ಜವಾಬು ಕೊಡುತ್ತಿದ್ದರು. ಈ ಅಭಿಪ್ರಾಯವನ್ನು ಸಮರ್ಥನೆ ಮಾಡಲು ವೇದ ವಾಕ್ಯಗಳ ಉದಾಹರಣೆ- ‘ಯದೇವ ವಿದ್ಯಯಾ ಕರೋತಿ’ ಇತ್ಯಾದಿ.

ಹೀಗೆಯೇ ಅವರ ಸ್ನೇಹರೀತಿಯ ಪತ್ರವ್ಯವಹಾರದಲ್ಲಿ ಭಾಗವತದಿಂದಲೂ ಭಾರತದಿಂದಲೂ ಶ್ಲೋಕಗಳ ಉದಾಹರಣೆ ಪದೇ ಪದೇ ಇರುತ್ತಿತ್ತು.

ವೆಂಕಟರಾಮಶಾಸ್ತ್ರಿಗಳು ಉದಾರಿಗಳು. ಅವರು ಅನೇಕ ಮಂದಿ ವಿದ್ವಾಂಸರಿಗೂ ಗ್ರಂಥಲೇಖಕರಿಗೂ ವಿಪುಲವಾಗಿ, ಆದರೆ ಗೋಪ್ಯವಾಗಿ ದ್ರವ್ಯಸಹಾಯ ಕೊಟ್ಟಿದ್ದರು. ಅವರದು ಬಹಳ ದೊಡ್ಡ ಕುಟುಂಬ. ಗಂಡುಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮುಮ್ಮಕ್ಕಳು, ಬಂಧುಗಳು ಮನೆಯ ತುಂಬ ಇರುತ್ತಿದ್ದರು. ಅವರದು ದೊಡ್ಡ ಮನೆ. ಆ ಮನೆ ಯಾವಾಗಲೂ ಭರ್ತಿಯಾಗಿರುತ್ತಿತ್ತು. ಅವರ ಜೊತೆಗೆ ಮಿತ್ರ ಗೋಷ್ಠಿ ದಿನದಿನವೂ ಸೇರುತ್ತಿತ್ತು.

# ಒಂದು ಬೇಡಿಕೆ

ಇನ್ನೊಂದು ಸಂಗತಿ ಹೇಳಬೇಕಾದದ್ದು.

ಸುಮಾರು ೧೯೩೮–೩೯ರಲ್ಲಿ ಅವರು ನನಗೆ ಒಂದು ಕಾಗದ ಬರೆದರು. ಹೀಗೆ: "ಇದರೊಡನೆ ನಾನು ಒಬ್ಬಾತನ ಕಾಗದವನ್ನಿರಿಸಿದ್ದೇನೆ. ಈ ಮನುಷ್ಯ ಬಹು ಕಷ್ಟದಲ್ಲಿರುವಂತೆ ಕಾಣುತ್ತದೆ. ನೀನು ನಾಳೆಯೇ ದಿವಾನ್ ಮಿರ್ಜಾ ಅವರನ್ನು ಕಂಡು ಈತನಿಗೆ ಸಹಾಯ ಮಾಡಬೇಕೆಂದು ನಮ್ಮಿಬ್ಬರ ಪರವಾಗಿ ಬೇಡಿಕೆ ಸಲ್ಲಿಸಿ ಅವರ ಭರವಸೆಯನ್ನು ಪಡೆದು ನನಗೆ ಜವಾಬು ಬರೆಯತಕ್ಕದ್ದು."

ಈಗ ಆ ಮಲಪೂಫಿಯ ವಿಷಯ. ಕಾಗದ ಬರೆದಾತನ ಹೆಸರನ್ನು ನಾನು ಇಲ್ಲಿ ಹೇಳಲಾರೆ. ಆತ ಆ ಕಾಗದವನ್ನು ತಿರುವಣ್ಣಾಮಲ್ಯೆ ಕ್ಷೇತ್ರದಿಂದ ಬರೆದಿದ್ದ. ವಿಷಯವೇನೆಂದರೆ– "ನಾನು ಬಿ.ಎ., ಬಿ.ಎಲ್. ಪಾಸುಮಾಡಿದ್ದೇನೆ. ಮೈಸೂರು ಸರಕಾರದ ಒಂದಾನೊಂದು ಸಬ್ ಕೋರ್ಟಿನಲ್ಲಿ ಗುಮಾಸ್ತನಾಗಿದ್ದೇನೆ. ಆದರೆ ಸಂಬಳ ಕಡಮೆ. ನನ್ನ ಸಂಸಾರ ಬಹಳ ದೊಡ್ಡದು. ಆದದ್ದರಿಂದ ಋಣದಲ್ಲಿ ಮುಳುಗಿದ್ದೇನೆ. ಈ ಕಾಗದದಿಂದ ನಿಮ್ಮ ಸಹಾಯ ಬೇಡಬೇಕಾಗಿದೆ. ಆದರೆ ನನಗೆ ಧರ್ಮಾರ್ಥವಾಗಿ ಕೊಡಬೇಕಾದದ್ದಿಲ್ಲ. ಬಿಸಿನೆಸ್ ರೀತಿಯಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳ ಸಾಲವನ್ನು ಕೊಡಿಸಬೇಕು. ನಾನು ಆ ಮೊಬಲಗನ್ನು ಬೇಬಾಕಾಗಿ ತೀರಿಸುವವನು. ನನಗೆ ದಾನ ಬೇಡ. ಸಾಲ ತೀರಿಸುವ ಬಗೆ ಹೇಗೆಂದರೆ: ತಾವು ದಿವಾನ್ ಮಿರ್ಜಾರವರಿಗೆ ಶಿಫಾರಸು ಮಾಡಿ ನನ್ನನ್ನು ಅವರ ಸೆಕ್ರೆಟೇರಿಯಟ್ಟಿಗೆ ಬಡ್ತಿಯ ಮೇಲೆ ವರ್ಗಾಯಿಸುವಂತೆ ಹೇಳಬೇಕು. ಹಾಗಾದರೆ ಆಗ ನಾನು ಈಗಿನ ನನ್ನ ಸಂಬಳಕ್ಕೂ ಆಮೇಲೆ ಬರುವ ಸಂಬಳಕ್ಕೂ ಇರುವ ಹೆಚ್ಚುವರಿಯನ್ನು ನನ್ನ ಸಾಲಕ್ಕೆ ಉತ್ತಾರಹಾಕುತ್ತೇನೆ. ಕೆಲವು ವರ್ಷಗಳೊಳಗಾಗಿ ನನ್ನ ಬಡ್ತಿಹಣದಿಂದ ಸಾಲ ತೀರುತ್ತದೆ. ಈ ಉಪಕಾರವನ್ನು ತಾವು ನಡಸುವಿರಾಗಿ ನನಗೆ ಭರವಸೆ ಕೊಡಬೇಕು. ನಿಮ್ಮ ಭರವಸೆಯ ಪತ್ರ ಇನ್ನು ಐದು ದಿವಸಗಳೊಳಗಾಗಿ ನನ್ನ ಕೈ ಸೇರದೆ ಹೋದರೆ ನಾನು ಆರನೆಯ ದಿನ ಈ ತಿರುವಣ್ಣಾಮಲ್ಯೆ ಬೆಟ್ಟದ ತುದಿಯಿಂದ ಕೆಳಕ್ಕೆ ಹಾರಿ ಪ್ರಾಣತ್ಯಾಗ ಮಾಡಿಕೊಳ್ಳುತ್ತೇನೆ. ನನ್ನ ತುರ್ತು ಹಾಗಿದೆ."

# ನನ್ನ ಪ್ರತಿಕ್ರಿಯೆ

ನಾನು ಈ ಪತ್ರವನ್ನು ಓದಿ ನೋಡಿಕೊಂಡೆ. ಶಾಸ್ತ್ರಿಗಳಿಗೆ ಕೂಡಲೆ ಜವಾಬು ಕಳಿಸಿದೆ: "(೧) ಆ ಮನುಷ್ಯ ಆತ್ಮಹತ್ಯೆ ಮಾಡಿಕೊಳ್ಳಲಿ. ನಾನು ಅದನ್ನು ತಡೆಯುವವನಲ್ಲ. ಆತ್ಮಹತ್ಯೆಯ ಯೋಚನೆ ಇಟ್ಟುಕೊಂಡಿರುವ ಮನುಷ್ಯ ಶುದ್ಧ ಹೇಡಿ. ಅವನಿಗೆ ಬದುಕಲು ಅಧಿಕಾರವಿಲ್ಲ. (೨) ಆತನಿಗೆ ಕಳಿಸಬೇಕಾದ ಜವಾಬನ್ನು ನಾನೇ ಕಳಿಸುತ್ತೇನೆ, ನೀವು ಪ್ರಯಾಸ ಪಡಬೇಕಾಗಿಲ್ಲ. (೩) ನೀವು ದಯಾಳುಗಳೆಂದು ನಾನು ಬಲ್ಲೆ. ಆದರೆ ನಿಮ್ಮ ದಯೆ ಇಷ್ಟು ದೂರ ಹೋಗುತ್ತದೆಂದು ನನಗೆ ಅನ್ನಿಸಿರಲಿಲ್ಲ. ಈಗ ಅದು ರುಜುವಾತಾದ ಮೇಲೆ ನನಗೆ ಧೈರ್ಯ ಬಂದಿದೆ. ಆ ಇಪ್ಪತ್ತು ಸಾವಿರ ರೂಪಾಯನ್ನು ಈ ಫಕೀರನ ಕಡೆಗೆ ಎಸೆಯೋಣವಾಗಲಿ. ಇವನೂ ದಾರಿದ್ರ್ಯದಲ್ಲಿದ್ದಾನೆ. ನಿಮ್ಮ ಹಣ ಸದ್ವಿನಿಯೋಗವಾಗುತ್ತದೆ. (೪) ನಾನು ಮಿರ್ಜಾ ಸಾಹೇಬರಲ್ಲಿ ಹೋಗುವವನಲ್ಲ. ಈ ವಿಷಯಕ್ಕೆ ಮಾತ್ರವಲ್ಲ, ಯಾವ ಬೇಡಿಕೆಗಾಗಿಯೂ ಹೋಗಲಾರೆ."

ನನ್ನ ಈ ಪ್ರತ್ಯುತ್ತರವನ್ನು ವೆಂಕಟರಾಮಶಾಸ್ತ್ರಿಗಳವರು ನೋಡಿ "ಅಯ್ಯ, ನೀನು ಪರಿಹಾಸ ಮಾಡುತ್ತಿದ್ದಿ. ಆ ಮನುಷ್ಯ ಪ್ರಾಣ ಬಿಟ್ಟರೆ ಏನು ಗತಿ ಆತನ ಹೆಂಡಿರು ಮಕ್ಕಳಿಗೆ?"

"ಸ್ವಾಮಿ, ನಿಮಗೆ ಏಕೆ ಆ ಭ್ರಾಂತಿ? ಆ ಮನುಷ್ಯ ಅಷ್ಟು ಸುಲಭವಾಗಿ ಸಾಯುವವನಲ್ಲ. ಆ ಮನುಷ್ಯನನ್ನು ನಾನು ಬಲ್ಲೆ. ಉಪಾಯವಾಗಿ ಯಾರಿಂದಲಾದರೂ ಕಾಸು ಗಿಟ್ಟಿಸುವುದು ಸಾಧ್ಯವೆಂದು ತೋರಿದರೆ ಆತ ಸ್ವಲ್ಪ ಕೈ ನಡಸುತ್ತಾನೆ. ಅದಕ್ಕೆ ಸಿಕ್ಕುವ ಬೆಪ್ಪರು ಎಲ್ಲಿದ್ದಾರೆ?"

ವೆಂಕಟರಾಮಶಾಸ್ತ್ರಿಗಳು "ಏನು, ನನ್ನನ್ನು ಬೆಪ್ಪನನ್ನಾಗಿ ಮಾಡಿದೆಯಾ?" ಎಂದರು. ಆಮೇಲೆ ನನ್ನನ್ನು ಕೇಳಿದರು: "ಮಿರ್ಜಾಗೂ ನಿನಗೂ ಜಗಳ ಬಂದಿದೆಯೆ?"

ಇದು ಕಥಾಂತರಕ್ಕೆ ತೆಗೆದುಕೊಂಡು ಹೋಗುವ ವಿಷಯ; ಅದು ಸದ್ಯಕ್ಕೆ ಅಪ್ರಕೃತ. ವೆಂಕಟರಾಮಶಾಸ್ತ್ರಿಗಳ ಮನಸ್ಸೆಂಥಾದ್ದೆಂಬುದನ್ನು ತೋರಿಸುವುದಷ್ಟೇ ನನ್ನ ಉದ್ದೇಶ.

# ಸುಧಾರಣೆ

ವೆಂಕಟರಾಮಶಾಸ್ತ್ರಿಗಳು ಸಂಪ್ರದಾಯವರ್ತಿಗಳು. ಹಾಗೆಯೇ ಸ್ವತಂತ್ರ ವಿಚಾರಶೀಲರು. ಎಂದರೆ ಪೂರ್ವಸಂಪ್ರದಾಯಕ್ಕೂ ಸದ್ಯದ ಸ್ವತಂತ್ರ ವರ್ತನೆಗೂ ಪರಸ್ಪರ ವಿರೋಧವಿಲ್ಲದಂತೆ ಸಮನ್ವಯಮಾಡುವ ಪ್ರವೃತ್ತಿಯುಳ್ಳವರು. ಹಿಂದೂ ಸಮಾಜದ ಚರಿತ್ರೆಯಲ್ಲಿ ಸಮಯಾಚಾರವು ಆಗಿಂದಾಗ್ಗೆ ಬದಲಾಯಿಸಿಕೊಂಡು ಬಂದಿದೆ. ಮನುಮಹರ್ಷಿಗಳ ಕಾಲದಲ್ಲಿದ್ದಂತೆ ಅದೇ ತದ್ವತ್ತಾಗಿ ಸಮಾಜ ಉಳಿದುಕೊಂಡಿಲ್ಲ. ಕಾಲ ದೇಶ ವರ್ತಮಾನಗಳನ್ನನುಸರಿಸಿ ಸಮಾಜ ಅಷ್ಟಿಷ್ಟು ತಿದ್ದಿಕೊಂಡಿದೆ, ಬದಲಾಯಿಸಿದೆ. ಪರಿಷ್ಕರಣೆ (Reform) ಆಗಾಗ ನಡೆದಿದೆ. ಹೀಗೆ ಮೂಲತತ್ತ್ವಕ್ಕೆ ವಿರೋಧವಿಲ್ಲದಂತೆ ಆಗಿಂದಾಗ್ಗೆ ಸುಧಾರಣೆ ಮಾಡಿಕೊಳ್ಳುವುದೇ ನಮ್ಮ ಜನಸಮಾಜಕ್ಕೆ ಸಂರಕ್ಷಣೆಯ ದಾರಿ. ಹೀಗೆಂದು ಅವರು ಪದೇಪದೇ ಹೇಳುತ್ತಿದ್ದರು. ಸುಧಾರಣೆ ಕೆಟ್ಟದ್ದಲ್ಲ. ಆದರೆ ಅವಶ್ಯವಾದ ಸುಧಾರಣೆ ಯಾವುದು, ಅನಾವಶ್ಯಕವಾದದ್ದು ಯಾವುದು; ಯಾವ ಸುಧಾರಣೆ ಸಮಾಜ ಜೀವನದ ಮೂಲತತ್ತ್ವಕ್ಕೆ ಸಾಧಕವಾದದ್ದು, ಯಾವುದು ಪ್ರತಿಕೂಲವಾದದ್ದು-ಹೀಗೆ ವಿಚಾರ ಮಾಡಿ ವಿವೇಕದಿಂದ ಸಿದ್ಧವಾದ ಸುಧಾರಣೆ ಕ್ಷೇಮಕರವಾದದ್ದು. ಇಂಥ ಸುಧಾರಣೆಯನ್ನು ನಮ್ಮ ಶಾಸ್ತ್ರಕಾರರು ಅಂಗೀಕರಿಸಿಕೊಂಡೇ ಬಂದಿದ್ದಾರೆ. ಯಾಜ್ಞವಲ್ಕ್ಯ, ಪರಾಶರ, ಗೌತಮ ಮೊದಲಾದವರ ಸ್ಮೃತಿನಿಬಂಧಗಳಲ್ಲಿ ಇದು ಕಾಣಬರುತ್ತದೆ. ಹೀಗೆಂಬ ತತ್ತ್ವವನ್ನು ವೆಂಕಟರಾಮಶಾಸ್ತ್ರಿಗಳು ಅವರ ಹಿಂದೂ ವ್ಯವಹಾರ ಪರಿಷ್ಕರಣ ಸಮಿತಿಯ (Hindu Law Reform Committee) ವರದಿಯಲ್ಲಿ ಸೋಪಪತ್ತಿಕವಾಗಿ ಸ್ಪಷ್ಟಪಡಿಸಿದ್ದಾರೆ.

ವೆಂಕಟರಾಮಶಾಸ್ತ್ರಿಗಳು ಮನಸಾರ ವೇದಶಾಸ್ತ್ರಗಳಲ್ಲಿ ಶ್ರದ್ಧೆಯಿಟ್ಟಿದ್ದವರು. ಕಡೆ ಕಡೆಯ ದಿನಗಳಲ್ಲಿ ಅವರ ಮನಸ್ಸು ಕ್ರಿಶ್ಚಿಯನ್ ಮಿಷನರಿಗಳು ನಡಸುವ ಮತಪರಿವರ್ತನೆಯ ಚಟುವಟಿಕೆಗಳ ಕಾರಣದಿಂದ ಕೊಂಚ ತಲ್ಲಣಗೊಂಡಿತ್ತು. ಒಬ್ಬಾನೊಬ್ಬ ಯುವಕನು ತಾನು ಅಮೆರಿಕಕ್ಕೆ ಹೋಗುವ ದಿನ ಶಾಸ್ತ್ರಿಗಳವರಲ್ಲಿ ಹೋಗಿ ನಮಸ್ಕರಿಸಿ ಆಶೀರ್ವಾದ ಬೇಡಿದಾಗ ಶಾಸ್ತ್ರಿಗಳು ಹೇಳಿದರು:

“ಮಗು, ನೀನು ಏನಾದರೂ ಮಾಡು, ಎಲ್ಲಿಗಾದರೂ ಹೋಗಿಬಾ. ಆದರೆ ಹಿಂದೂ ಆಗಿಯೇ ಬಾ. ಇಷ್ಟೇ ನನ್ನ ಬೇಡಿಕೆ. ಹಿಂದೂಧರ್ಮ ಬಹಳ ದೊಡ್ಡದು, ಅದನ್ನು ತೊರೆದುಕೊಳ್ಳಬೇಡ.”

ಹೀಗೆ ಅಂಗಲಾಚಿದರು. ಅವರ ಕಣ್ಣು ಒದ್ದೆಯಾಗಿತ್ತು.

# ಆತ್ಮಗೌರವ

ವೆಂಕಟರಾಮಶಾಸ್ತ್ರಿಗಳು ಶಿವಸ್ವಾಮಿ ಅಯ್ಯರವರಂತೆ ಅಡ್ವೊಕೇಟ್ ಜನರಲ್ ಆಗಿದ್ದರು. ಆಮೇಲೆ ಮದರಾಸಿನ ಸರಕಾರದ ಮಂತ್ರಿಸಂಪುಟದಲ್ಲಿ ಸಿ.ಪಿ. ರಾಮಸ್ವಾಮಿ ಅಯ್ಯರವರ ನಿವೃತ್ತಿಯ ಕಾರಣದಿಂದ ಲಾ ಮಂತ್ರಿಯ ಸ್ಥಾನ ಖಾಲಿಯಾದಾಗ ಆ ಸ್ಥಾನಕ್ಕೆ ವೆಂಕಟರಾಮಶಾಸ್ತ್ರಿಗಳವರನ್ನು ನಿಯಮಿಸಲಾಯಿತು. ಆಗ ಒಂದು ಸಂಗತಿ ನಡೆಯಿತು. ಸರಕಾರದ ನಾನಾ ಇಲಾಖೆಗಳ ದಫ್ತರಗಳನ್ನು ಹಂಚಿಕೆ ಮಾಡುವಾಗ ಅದುವರೆಗೆ ಲಾ ಮಂತ್ರಿಯ ವಶದಲ್ಲಿದ್ದ ಪೊಲೀಸ್ ದಫ್ತರವನ್ನು ವೆಂಕಟರಾಮಶಾಸ್ತ್ರಿಗಳವರಿಗೆ ಒಪ್ಪಿಸದೆ ಒಬ್ಬ ಯುರೋಪಿಯನ್ ಕೌನ್ಸಿಲರಿಗೆ ಅದನ್ನು ಕೊಡತಕ್ಕದ್ದೆಂದು ಆಗಿನ ಗವರ್ನರು ನಿಶ್ಚಯಿಸಿದ. ವೆಂಕಟರಾಮಶಾಸ್ತ್ರಿಗಳು ಇದು ಅಪನಂಬಿಕೆಯ ಸೂಚನೆಯೆಂದು ಭಾವಿಸಿ ಕೂಡಲೆ ಅಲ್ಲಿಯೇ ರಾಜಿನಾಮೆ ಕೊಟ್ಟರು. “ಒಬ್ಬ ಭಾರತೀಯನ ಕೈಗೆ ಪೊಲೀಸ್ ಇಲಾಖೆಯ ದಫ್ತರವನ್ನು ಕೊಡುವುದು ಅಪಾಯಕರವೆಂದು ಬ್ರಿಟಿಷ್ ಸರಕಾರದ ಪ್ರತಿನಿಧಿ ಅಭಿಪ್ರಾಯಪಟ್ಟಿದ್ದಾನೆ. ಈ ಅಭಿಪ್ರಾಯದ ಅರ್ಥವನ್ನು ಸಹಿಸಿಕೊಳ್ಳುವುದು ಆತ್ಮಗೌರವವುಳ್ಳ ಭಾರತೀಯನಿಗೆ ಅಸಾಧ್ಯ” -ಇದು ಶಾಸ್ತ್ರಿಗಳ ಕಾರಣ.

ಎಷ್ಟೋಮಂದಿ ಇದಕ್ಕಾಗಿ ಶಾಸ್ತ್ರಿಗಳನ್ನು ಆಕ್ಷೇಪಿಸಿದರು. ಅವರು ದುಡುಕಬಾರದಾಗಿತ್ತು; ಭಾರಿ ಹುದ್ದೆಯನ್ನು ಆತುರದಲ್ಲಿ ತ್ಯಾಗಮಾಡಿದರು-ಈ ರೀತಿಯಲ್ಲಿ ನೂರಾರು ಮಂದಿಯಿಂದ ಮಾತು ಕೇಳಿ ಶಾಸ್ತ್ರಿಗಳು ನಗುತ್ತಿದ್ದರು. “ನಾನು ಸಂಬಳಕ್ಕಾಗಿ ಆ ಚಾಕರಿ ಹಿಡಿಯಬೇಕಾಗಿರಲಿಲ್ಲ. ಆ ಚಾಕರಿಯಲ್ಲಿದ್ದರೆ ಸ್ವಜನಕ್ಕೂ ಸ್ವದೇಶಕ್ಕೂ ಏನಾದರೂ ಒಂದಿಷ್ಟು ಒಳ್ಳೆಯದು ಮಾಡುವ ಅವಕಾಶ ಬಂದೀತೆಂದು ನಿರೀಕ್ಷಿಸಿ ನಾನು ಆ ಹುದ್ದೆಗೆ ಒಪ್ಪಿಕೊಂಡದ್ದು. ದೇಶಕಾರ್ಯಕ್ಕೆ ಉಪಯೋಗವಾಗುವವಕಾಶ ನನಗಿಲ್ಲದಿದ್ದರೆ ನನಗೆ ಆ ಕೆಲಸ ಏತಕ್ಕೆ? ಸಂಬಳಕ್ಕಾಗಿಯೇ? ಛೆ!” ಎಂದರು ಶಾಸ್ತ್ರಿಗಳು.

ವೆಂಕಟರಾಮಶಾಸ್ತ್ರಿಗಳಿಗೆ ಹೈಕೋರ್ಟಿನ ಪದವಿಯೇನೂ ದುರ್ಲಭವಾಗಿರಲಿಲ್ಲ. ನಾಲ್ಕೈದು ಸಾರಿ ಹೈಕೋರ್ಟ್ ಜಡ್ಜಿಯ ಕೆಲಸವನ್ನು ಸರಕಾರ ಅವರಿಗೆ ನೀಡಿದ್ದು ನನಗೆ ಗೊತ್ತಿದೆ. ಅವರು ಅದನ್ನು ಬೇಡವೆಂದದ್ದಕ್ಕಾಗಿ ಅವರ ಮನೆಯಲ್ಲಿ ಹೆಣ್ಣುಮಕ್ಕಳೂ ಇತರ ಬಳಗವೂ ತಕರಾರು ಮಾಡಿದ್ದೂ ನನಗೆ ತಿಳಿದಿದೆ. ಅವರು ಒಂದು ಸಾರಿ ಒಬ್ಬಾಕೆಯನ್ನು ಕೇಳಿದರು:

“ನಿನಗೆ ಬೆಳ್ಳಿಯ ಕೋಲು, ಚಿನ್ನದ ಕೋಲು ಹಿಡಿದ ಆಳು ಕಾರಿನ ಮುಂಭಾಗದಲ್ಲಿ ಕುಳಿತು ನೀನೂ ನಿನ್ನ ಮಕ್ಕಳೂ ಸವಾರಿ ಮಾಡುವುದು ಬೇಕೆ? ಅಥವಾ ಬೆಳ್ಳಿಯ ಕೋಲೂ ಚಿನ್ನದ ಕೋಲೂ ಇಲ್ಲದೆ, ಡವಾಳಿ ಧರಿಸಿದ ಆಳಿಲ್ಲದೆ, ನಿನ್ನ ಮಕ್ಕಳಿಗೆ, ನಿನ್ನ ಅಕ್ಕ ತಂಗಿಯರ ಮಕ್ಕಳಿಗೆ ವಿದ್ಯೆ, ಮುಂಜಿ, ಮದುವೆ, ಇದೆಲ್ಲ ಆಗುವುದು ಮುಖ್ಯವೆ?”

ವೆಂಕಟರಾಮಶಾಸ್ತ್ರಿಗಳು ಮದರಾಸಿನ ಸಂಸ್ಕೃತ ಕಾಲೇಜಿನ ಕಾರ್ಯ ಸಮಿತಿಗೂ ಕುಪ್ಪುಸ್ವಾಮಿಶಾಸ್ತ್ರಿ ಸಂಶೋಧನ ಸಂಸ್ಥೆಯ ಕಾರ್ಯಕಾರಿ ಸಮಿತಿಗೂ ಅಧ್ಯಕ್ಷರಾಗಿದ್ದರು. ಹಾಗೆಯೇ ಹತ್ತಾರು ವಿದ್ವತ್ಸಂಸ್ಥೆಗಳಿಗೂ ಸಾರ್ವಜನಿಕ ಸಂಸ್ಥೆಗಳಿಗೂ ನಾಯಕರಾಗಿದ್ದರು. ಲಿಬರಲ್ ಪಕ್ಷದ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದರು. ಅವರು ವಿದ್ವತ್ತಿನಿಂದಲೂ ಅಧಿಕಾರಸ್ಥಾನದಿಂದಲೂ ಮಾನ್ಯರಾಗಿದ್ದಂತೆ ತಮ್ಮ ಸ್ನೇಹದಿಂದಲೂ ಸೌಜನ್ಯದಿಂದಲೂ ಜನಾನುರಾಗದಿಂದಲೂ ಪ್ರಿಯರಾಗಿದ್ದರು. ಒಟ್ಟಿನ ಮೇಲೆ ಪ್ರೀತಿಯನ್ನು ಉಕ್ಕಿಸುವ ಸ್ವಭಾವ ಅವರದು.

# ೪ ಸಿ. ರಾಜಗೋಪಾಲಾಚಾರ್ಯರು

ಚಕ್ರವರ್ತಿ ರಾಜಗೋಪಾಲಾಚಾರ್ಯರು ಯಾವಾಗಲೂ ಕರಿಯ ಬಣ್ಣದ ಕನ್ನಡಕಗಳನ್ನು (Smoked glasses) ಧರಿಸಿರುತ್ತಿದ್ದರು. ಇದು ಕುಚೋದ್ಯಕ್ಕೆ ಅವಕಾಶ ಕೊಟ್ಟಿತು. ಅವರಿಗೆ ಕಣ್ಣೇನೋ ದುರ್ಬಲವಾಗಿದ್ದದ್ದು ನಿಜ ಎಷ್ಟೋ ಮಂದಿಗಿರುವಂತೆ. ಆದರೆ ಗಾಜು ಕಪ್ಪು ಬಣ್ಣ ಏಕೆ? ಅವರ ಕಣ್ಣು ಗುಡ್ಡೆ ಹೇಗೆಹೇಗೆ ತಿರುಗುತ್ತದೆಯೋ ಅದು ಇತರರಿಗೆ ತಿಳಿಯಬಾರದೆಂದು; ಮನಸ್ಸಿನ ಕೆಲಸವನ್ನು ಕಣ್ಣು ಗುಡ್ಡೆಯ ಹೊರಳಿಕೆ ಹೊರಪಡಿಸುತ್ತದೆ; ಮನಸ್ಸು ಕೋಪತಾಪಗಳಿಗೆ ವಶವಾದಾಗ, ಅಥವಾ ಏನಾದರೂ ಕೃತ್ರಿಮವನ್ನು ಯೋಚಿಸುತ್ತಿರುವಾಗ, ಅದರ ಸೂಚನೆ ಕಣ್ಣಿನಿಂದ ಹೊರಪಡುತ್ತದೆ; ಜಾಣರಾದವರು ಅದನ್ನು ಅರ್ಥಮಾಡಿಕೊಂಡಾರು; ಅದನ್ನು ತಪ್ಪಿಸಲು- ತಮ್ಮ ಅಂತರಂಗವನ್ನು ಬಚ್ಚಿಟ್ಟುಕೊಳ್ಳುವುದಕ್ಕಾಗಿ ಕರಿಯಬಣ್ಣದ ಕನ್ನಡಕ-ಎಂದು ಪ್ರವಾದ ಹರಡಿತ್ತು. ಇದು ಮೊದಲು ಮಿತ್ರರಿಂದ ಹೊರಟದ್ದೋ ಶತ್ರುಗಳಿಂದ ಹೊರಟದ್ದೋ ನಾನು ಹೇಳಲಾರೆ. ಆ ಪ್ರವಾದವೇನೋ ಸಾರ್ವಜನಿಕರಲ್ಲಿ ಹರಡಿತ್ತು. ಇದು ಅಪಾರ್ಥವೆಂದು ನಾನು ಧಾರಾಳವಾಗಿ ಹೇಳಬಲ್ಲೆ.

ರಾಜಗೋಪಾಲಾಚಾರ್ಯರಿಗೂ ನನಗೂ ಸುಮಾರು ೫೦ ವರ್ಷಗಳ ಪರಿಚಯ. ಅವರು ನವರತ್ನ ರಾಮರಾಯರ ಸಹಾಧ್ಯಾಯಿಯೂ ಆಪ್ತಸ್ನೇಹಿತರೂ ಆಗಿದ್ದರು. ಅದು ಕಾವ್ಯಯೋಗ್ಯವಾದ ಸ್ನೇಹ. ಒಂದು ನಿದರ್ಶನ ಕೊಡುತ್ತೇನೆ.

## ಸ್ನೇಹಸ್ವಭಾವ

ನವರತ್ನ ರಾಮರಾಯರು ತೀರಿಕೊಂಡ ವರ್ತಮಾನ ರಾಜಗೋಪಾಲಾಚಾರ್ಯರಿಗೆ ತಂತಿಯ ಮೂಲಕ ತಿಳಿಯಿತು. ಆಗ ಅವರು ಕೇರಳ ಪ್ರಾಂತದಲ್ಲಿ ಸಂಚಾರದಲ್ಲಿದ್ದರು. ಸ್ನೇಹಿತರ ಮರಣವಾರ್ತೆ ತಿಳಿದ ಕೂಡಲೆ ಇನ್ನು ಮುಂದಿನ ಸಂಚಾರವನ್ನು ನಿಲ್ಲಿಸಿ ಕಾರಿನಲ್ಲಿ ಬೆಂಗಳೂರಿಗೆ ಬಂದರು. ಅದು ಸಂಜೆಯ ವೇಳೆಗೆ. ದಹನಕ್ರಿಯೆ ಮುಗಿದುಹೋಗಿತ್ತು. ಅವರ ಮನೆಗೆ ಹೋಗಿ ವಿಚಾರಿಸಿಕೊಂಡು.

"ಈಗ ಕತ್ತಲಾಗಿದೆ. ನಾಳೆ ಬೆಳಗ್ಗೆ ಯಾರಾದರೂ ನನ್ನ ಜೊತೆಯಲ್ಲಿ ಶ್ಮಶಾನಕ್ಕೆ ಬಂದು ಆ ಜಾಗವನ್ನು ನನಗೆ ತೋರಿಸಬೇಕಲ್ಲ?"

–ಎಂದರು. ಅದರಂತೆ ಆ ಮಾರನೆಯ ದಿನ ಬೆಳಗ್ಗೆ ೫ ಘಂಟೆಗೆ ರಾಮರಾಯರ ಮನೆಗೆ ಬಂದು ಆಗ ಅಲ್ಲಿಗೆ ಬಂದಿದ್ದ (ರಾಮರಾಯರ ತಮ್ಮ) ಕೃಷ್ಣಸ್ವಾಮಿಯನ್ನು ಜೊತೆಮಾಡಿಕೊಂಡು ರುದ್ರಭೂಮಿಗೆ ಹೋಗಿ ಚಿತೆಗೆ ಪ್ರದಕ್ಷಿಣೆ ಮಾಡಿ ಕೈಮುಗಿದು ಬಂದರು. ಹಾಗೆಯೇ ನೂತನ ವಸ್ತ್ರಗಳನ್ನು ತಂದು ರಾಮರಾಯರ ಮಗಳು ಶುಭ ಸ್ವೀಕಾರದ ದಿವಸ ಆ ವಸ್ತ್ರಗಳನ್ನು ಧರಿಸತಕ್ಕದ್ದೆಂದು ಸೂಚಿಸಿದರು. ಕೆಲವು ತಿಂಗಳಾದ ಮೇಲೆ ಆ ಕನ್ಯಕೆಯ ಮದುವೆಗೆ ಏರ್ಪಾಟು ಮಾಡುವುದರಲ್ಲಿಯೂ ಮುಖ್ಯಭಾಗ ರಾಜ ಗೋಪಾಲಾಚಾರ್ಯರದು.

# ಅವ್ಯಾಜ ಸ್ನೇಹ

ಇಂಥದು ರಾಜಗೋಪಾಲಾಚಾರ್ಯರ ಸ್ನೇಹ. ಈ ಸ್ನೇಹ ರಾಮರಾಯರೂ ರಾಜಾಜಿಯವರೂ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ ಪ್ರಾರಂಭವಾದದ್ದು. ಇಬ್ಬರಿಗೂ ಇಂಗ್ಲಿಷ್ ಸಾಹಿತ್ಯದಲ್ಲಿ ಗಾಢವಾದ ಪ್ರೇಮ. ಇಬ್ಬರೂ ಷೇಕ್‌ಸ್ಪಿಯರನ ಭಕ್ತರು. ಇಬ್ಬರಿಗೂ ವಾದವಿವಾದಗಳಲ್ಲಿ ಸಾಮರ್ಥ್ಯ. ತತ್ತ್ವವಿಚಾರಗಳಲ್ಲಿ ಇಬ್ಬರಿಗೂ ಕುತೂಹಲ. ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬರಿಗೊಬ್ಬರಲ್ಲಿ ಮೆಚ್ಚಿಕೆ. ಮೆಚ್ಚಿಕೆಗೆ ಕಾರಣ ಹೇಳಲಾದೀತೆ? ವಿದ್ಯಾಭ್ಯಾಸ ಮುಗಿದ ತರುವಾಯ ರಾಮರಾಯರೂ ಶಾಲ್ಯದಲ್ಲಿ (Salem) ಕೆಲವು ಕಾಲ ವಕೀಲಿ ನಡಸಿದರಂತೆ-ರಾಜಗೋಪಾಲಾಚಾರ್ಯರ ಸಹೋದ್ಯೋಗಿಯಾಗಿ. ಅವರಿಬ್ಬರಿಗೂ ಬೆಳೆದಂಥ ಸ್ನೇಹ ತುಂಬ ಅಪರೂಪವಾದದ್ದು. ಈ ಮಾತನ್ನು ರಾಜಗೋಪಾಲಾಚಾರ್ಯರೇ ಮೈಸೂರಿನ ಒಂದು ಸಾರ್ವಜನಿಕ ಭಾಷಣದಲ್ಲಿ ಹೇಳಿದರು: “ಈಗ ಕಾಲ ವಿಷಮವಾಗುತ್ತಿದೆ. ಸಂದರ್ಭಗಳು ಬದಲಾಯಿಸಿವೆ. ಈಗ ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನು, ತನ್ನ ಆದಾಯ ತನ್ನದು-ಎಂದು ನೋಡುತ್ತಾನೆ. ಈಗ ಸ್ನೇಹವೇನಿದ್ದರೂ ಸ್ವಪ್ರಯೋಜನ ದೃಷ್ಟಿಯದು. ಸ್ವಕಾರ್ಯದ ಅವಸರವಿಲ್ಲದಿದ್ದರೆ ಸ್ನೇಹಕ್ಕೆ ಅವಕಾಶವಿಲ್ಲ. ಪ್ರತಿಫಲವನ್ನು ಎದುರುನೋಡದ ಸ್ನೇಹಕ್ಕೆ ಈಗ ಹೀಗೆ ನಿರುತ್ಸಾಹವಾಗಿದೆ. ರಾಮರಾಯರಿಗೂ ನನಗೂ ಇದ್ದ ಸ್ನೇಹದಲ್ಲಿ ಸ್ವಲಾಭ ಚಿಂತೆಗೆ ಅವರಿಗೂ ಕಾರಣವಿರಲಿಲ್ಲ. ನನಗೂ ಕಾರಣವಿರಲಿಲ್ಲ. ಅದು ಸ್ನೇಹಕ್ಕಾಗಿ ಆದ ಸ್ನೇಹ: ನಿಜವಾದ ಪರಸ್ಪರ ಸ್ನೇಹ, ಮೆಚ್ಚಿಕೆ.”

# ಉಪಾಯ ತತ್ಪರತೆ

ಆದರೆ ರಾಜಗೋಪಾಲಾಚಾರ್ಯರಲ್ಲಿ ಉಪಾಯತತ್ಪರತೆ ಇರಲಿಲ್ಲವೆಂದು ನಾನು ಹೇಳುತ್ತಿಲ್ಲ. ಅವರಲ್ಲಿ ಕೃತ್ರಿಮವಿರಲಿಲ್ಲ, ಉಪಾಯವಿತ್ತು. ಉದಾಹರಣೆ: ಒಂದು ಸಾರ್ವಜನಿಕ ಸಭೆ. ವ್ಯವಸ್ಥಾಪಕರು ಮೊದಲೇ ರಾಜಾಜಿಯವರ ಸೂಚನೆಯನ್ನು ಕೇಳುತ್ತಾರೆ. ಆ ದಿನ ಮಾತನಾಡತಕ್ಕವರಾರೆಂಬುದನ್ನು ರಾಜಾಜಿ ಹೇಳುತ್ತಾರೆ. ಅನಂತರ ಹಾಗೆ ಚುನಾಯಿಸಿದ ಜನ ಯಾವ ಕ್ರಮದಲ್ಲಿ-ಯಾರಾದ ಮೇಲೆ ಯಾರು ಮಾತನಾಡತಕ್ಕದ್ದೆಂದು ಹೇಳುತ್ತಾರೆ. ಅನಂತರ ಸಭೆಗೆ ಇನ್ನು ಯಾರು ಬಂದಿದ್ದಾರೆಂದು ಕನ್ನಡಕದ ಕೆಳಗಿನಿಂದ ನೋಡಿ ಗುರುತಿಸುತ್ತಾರೆ. ಅವರಲ್ಲಿ ಭಾಷಣ ಮಾಡಲು ಯಾರು ಸಿದ್ಧರಾಗಿದ್ದಾರೆಂಬುದನ್ನು ಅವರು ಅರಿತಿರುತ್ತಾರೆ. ಇಂಥವರನ್ನು ಭಾಷಣಕ್ಕೆ ಕರೆಯುತ್ತಾರೆ. ಈ ಐದಾರು ಜನರೂ ಭಾಷಣ ಮಾಡುತ್ತಾರೆ. ಇವರೆಲ್ಲ ಮುಗಿಸಿದ ಮೇಲೆ ಏಳುವವರು ರಾಜಾಜಿ. ಅದುವರೆಗೆ ಮಾತನಾಡಿದವರು ಹೇಳಿದ ಅಂಶಗಳನ್ನು ತಮಗೆ ಯುಕ್ತ ತೋರಿದಂತೆ ವಿವರಿಸುವುದು, ಪುಷ್ಟೀಕರಿಸುವುದು ಮಾತ್ರವೇ ಅಲ್ಲದೆ ಅವರ ಲೋಪಗಳನ್ನು ಭರ್ತಿಮಾಡುವರು, ಮತ್ತು ಅದಕ್ಕಿಂತ ಹೆಚ್ಚಾಗಿ, ಅವರಲ್ಲಿ ಯಾರಾದರೂ ಏನಾದರೂ ಸವಾಲು ಹಾಕಿದ್ದರೆ ತಾವು ಅದಕ್ಕೆಲ್ಲ ಜವಾಬು ಹೇಳುವರು.

ಹೀಗೆ ಕಡೆಯ ಭಾಷಣ ರಾಜಾಜಿಯವರದು-ವಿಷಯಗಳನ್ನೆಲ್ಲ ಸರಿಪಡಿಸುವುದು. ಇದರಲ್ಲಿ ಕೃತ್ರಿಮವೇನೂ ಇಲ್ಲ. ಅಂದಿನ ಕೆಲಸ ರಗಳೆಯಿಲ್ಲದೆ ಸುಸೂತ್ರವಾಗಿ ನಡೆಯಬೇಕೆಂಬ ಉಪಾಯ.

‘ಮುದ್ರಾರಾಕ್ಷಸ’ ಎಂಬ ಸಂಸ್ಕೃತ ನಾಟಕದಲ್ಲಿ ಒಂದು ಪದ್ಯ ಬರುತ್ತದೆ:

> ಮುಹುರ್ಲಕ್ಷ್ಯೋದ್ಭೇದಾ ಮುಹುರಧಿಗಮಾಭಾವಗಹನಾ
> ಮುಹುಃ ಸಂಪೂರ್ಣಾಂಗೀ ಮುಹುರತಿಕೃಶಾ ಕಾರ್ಯವಶತಃ ।
> ಮುಹುರ್ನಶ್ಯದ್ಬೀಜಾ ಮುಹುರಪಿ ಬಹುಪ್ರಾಪಿತಫಲೇ-
> ತ್ಯಹೋ ಚಿತ್ರಾಕಾರಾ ನಿಯತಿರಿವ ನೀತಿರ್ನಯವಿದಃ ॥

–(ಮುದ್ರಾರಾಕ್ಷಸ, ೫–೩)

ಮಂತ್ರಿಯಾದವನು ಕೆಲವು ಸಂದರ್ಭಗಳಲ್ಲಿ ಸಿಂಹದಂತೆ ಗರ್ಜನೆ ಮಾಡಬೇಕಾಗುತ್ತದೆ; ಕೆಲವು ಸಂದರ್ಭಗಳಲ್ಲಿ ಪಕ್ಷಿಯಂತೆ ಹಾಡಬೇಕಾಗುತ್ತದೆ; ಕೆಲವು ಸಲ ಕುದುರೆಯಂತೆ ಓಡಬೇಕಾಗುತ್ತದೆ; ಕೆಲವು ಸಲ ಹಾವಿನಂತೆ ನುಣುಚಿಕೊಂಡು ಹೋಗಬೇಕಾಗುತ್ತದೆ. ರಾಜಕೀಯದಲ್ಲಿ ಹೀಗೆ ನಾನಾ ವಿಧ ನೀತಿಗಳು, ಉಪಾಯಗಳು, ನಾನಾ ಮಾರ್ಗಗಳು. ರಾಜಾಜಿಯವರನ್ನು ಆಕ್ಷೇಪಿಸುವವರು ಈ ವಾಕ್ಯವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಅವರದು ಬರಿಯ ಭಾಷಣಪಾಂಡಿತ್ಯವಲ್ಲ. ಅದಕ್ಕಿಂತ ಮೇಲಿನ ಕಾರ್ಯಸಾಧನೆ ಅವರ ಕೆಲಸ. ಸಮಯ ಸಂದರ್ಭಗಳಿಗೆ ತಕ್ಕಂತೆ ಕಾರ್ಯವಿಧಾನವನ್ನೂ ಸಾಧನವನ್ನೂ ಹವಣಿಸಿಕೊಳ್ಳುತ್ತಾರೆ. ಸಾಮಾನ್ಯರ ಮನಸ್ಸಿಗೆ ಇದು ಅರ್ಥವಾಗುವುದು ಕಷ್ಟ. ಅರಬ್ಬಿ ಭಾಷೆಯಲ್ಲಿ ಒಂದು ಹೇಳಿಕೆಯುಂಟಂತೆ: ರಾಜರ ಮನೋಗತವನ್ನು ರಾಜನಾದವನೇ ಬಲ್ಲ-ಎಂದು.

ರಾಜಗೋಪಾಲಾಚಾರ್ಯರು ಉದ್ದೇಶಚಿಂತಕರು ಮಾತ್ರವೇ ಅಲ್ಲ; ಉಪಾಯಚಿಂತಕರೂ ಹೌದು.

# ತರ್ಕಶೀಲಬುದ್ಧಿ

ಅವರದು ತರ್ಕಶೀಲವಾದ ಬುದ್ಧಿ. ಯಾವ ಸಂಗತಿಯಾದರೂ ಅದನ್ನು ಹೇಳುವ ವಾಕ್ಯವನ್ನು ಮೊದಲು ಪರಿಶೀಲಿಸುವರು; ಅದರ ಶಬ್ದಾರ್ಥ ಭಾವಾರ್ಥಗಳನ್ನು ವಿಮರ್ಶನ ಮಾಡುವರು; ಅನಂತರ ಹೇಳಿದ ಸಂಗತಿಯನ್ನು ಅದು ನಿಜವೆ? -ಎಂದು ಪರೀಕ್ಷಿಸುವರು. ಒಂದಕ್ಕಿಂತ ಹೆಚ್ಚು ಸಂಗತಿಗಳಿದ್ದರೆ ಅವುಗಳ ಹೊಂದಾವಣೆಯನ್ನು ಪರೀಕ್ಷಿಸುವರು. ಹೀಗೆ ಪ್ರತಿಯೊಂದು ವಿಷಯವನ್ನು ಬಿಡಿಬಿಡಿಯಾಗಿ ಬಿಡಿಸಿ ತೂಗಿ ಬೆಲೆಕಟ್ಟುವುದು ಅವರ ಪದ್ಧತಿ. ಇದು ತರ್ಕಪದ್ಧತಿ. ಇದು ಲಾ ಅಭ್ಯಾಸದಿಂದ ಬಂದದ್ದೆಂದು ಯಾರಾದರೂ ಹೇಳಬಹುದು. ಆದರೆ ಈ ಪರೀಕ್ಷೆಯ ಗುಣ ನೈಜವಾಗಿ ಬಂದಿರಬೇಕು. ಈ ವಿಶದತೆಯಿಲ್ಲದ ಲಾಯರುಗಳನ್ನು ಎಷ್ಟೋ ಮಂದಿಯನ್ನು ನಾನು ಬಲ್ಲೆ. ಅವರು ಬಹುಶಬ್ದಗಳನ್ನು ಉಪಯೋಗಿಸುತ್ತಾರೆ, ದಪ್ಪದಪ್ಪ ಮಾತುಗಳನ್ನಾಡುತ್ತಾರೆ. ಅಲಂಕಾರಗಳನ್ನು ಉಪಯೋಗಿಸುತ್ತಾರೆ, ಪ್ರಸಿದ್ಧಪುರುಷರ ಉಕ್ತಿಗಳನ್ನು ಉದಾಹರಿಸುತ್ತಾರೆ. ಆದರೆ ತರ್ಕಶುದ್ಧಿಯಿಲ್ಲ, ವಾಕ್ಯಪರಿಷ್ಕಾರವಿಲ್ಲ, ತಿರುಳಿಲ್ಲ. ಒಬ್ಬ ಪೌರಾಣಿಕರು ಓದಿದರಂತೆ, ಗ್ರಂಥದಿಂದ:

ಕುಂಡಿನೀನಾಮನಗರೇ

ಅಲ್ಲಿದ್ದ ಶ್ರೋತೃಗಳಲ್ಲಿ ಒಬ್ಬಾಕೆ ಕೇಳಿದಳು:

“ಹಾಗೆಂದರೆ ಏನು ಆಚಾರ್ಯರೆ?”

ಆಚಾರ್ಯರು: “ಏನಮ್ಮಾ, ತಿಳಿಯದೆ? ಸುಲಭವಾಗಿ ಅದಲ್ಲ? ಕುಂಡೀಮ್ಯಾಲೆ ನಾಮ ಹಚ್ಚಿಕೊಂಡರೆ ಜನ ನಗುವುದಿಲ್ಲವೆ? ನಿಮಗಿದು ತಿಳಿಯದೆ?”

ಆಕೆ: “ಹೀಗೇನೆ ಅದರ ಅರ್ಥ? ಅದು ಸಂಸ್ಕೃತಭಾಷೆಯಲ್ಲವೆ?”

ಆಚಾರ್ಯರು: “ಏನು-ನನ್ನ ಮಾತಿನಲ್ಲಿ ನಂಬಿಕೆಯಿಲ್ಲದಿದ್ದರೆ ರಮಾಬಾಯಿಯನ್ನು ಕೇಳ್ರಿ. ಅವರು ಮೊನ್ನೆ ತಾನೆ ಉಡುಪಿಗೆ ಹೋಗಿ ಬಂದಿದ್ದಾರೆ. ಏನು ತಾಯಿ-ಕೃಷ್ಣ ದೇವರ ಕೈಯಾಗೆ ಬೆಣ್ಣೆಮುದ್ದೆ ಅದೊ ಇಲ್ಲೊ? ನೀವು ಹೇಳಿ ಸೀತಾಬಾಯಿ, ನೀವು ಹೇಳಿ ರುಕ್ಮಿಣೀಬಾಯಿ...”

ಇಂಥಾದ್ದು ಎಷ್ಟೋ ಮಂದಿ ಲಾಯರುಗಳ, ರಾಜಕೀಯಸ್ಥರ ವಾದಸರಣಿ. ಇದಕ್ಕೆ ವ್ಯತಿರಿಕ್ತವಾದದ್ದು ಶುದ್ಧ ತರ್ಕ. ಅದು ಕುಂಡಿನೀ, -ನಗರ, ಉಡುಪಿ, -ಕೃಷ್ಣ -ಇವುಗಳ ಅನ್ಯೋನ್ಯ ಸಂಬಂಧಗಳೇನೆಂದು ಕೇಳುತ್ತದೆ. ಜನ ನಕ್ಕರೆ ಅಷ್ಟರಿಂದ ತೃಪ್ತಿಯಾಗುವುದಿಲ್ಲ.

ಉಡುಪಿ ಕೃಷ್ಣ
ಪಡವಿಗೊಡೆಯಾ

ಇಂಥ ಹಾಡುಗಳಲ್ಲಷ್ಟೇ ಪರ್ಯವಸಾನವಾಗಬಾರದು. ವಾಕ್ಯಪರಿಷ್ಕಾರ ಮಾಡಬೇಕು. ಸತ್ಯಾಂಶವನ್ನು ಹೊರಕ್ಕೆ ತೆಗೆಯಬೇಕು. ಇದು ತರ್ಕಪದ್ಧತಿ. ರಾಜಗೋಪಾಲಾಚಾರ್ಯರು ಈ ಕಷ್ಟಮಾರ್ಗವನ್ನು ಹಿಡಿದದ್ದರಿಂದ ಬಹುಮಂದಿಗೆ ಗೊತ್ತಾದದ್ದು ಅವರ ವಾದಚಮತ್ಕಾರ, ಅವರ ಸತ್ಯಕುತೂಹಲವಲ್ಲ. ಸಾಮಾನ್ಯಜನಕ್ಕೆ ತಿಳಿಯಲಾದದ್ದು ಮಾತಿನ ನವುರು, ವಾಕ್ಯಚಮತ್ಕಾರ. ಸೂಕ್ಷ್ಮವಾಗಿ ನೋಡದೆ ಮೇಲ್ಮೇಲಿನ ಒರಟೊರಟು ದಪ್ಪದಪ್ಪ ಹೇಳಿಕೆಯಿಂದ ತೃಪ್ತರಾಗುತ್ತಿದ್ದ ಜನಕ್ಕೆ ರಾಜಗೋಪಾಲಾಚಾರ್ಯರ ನವುರು ಅರ್ಥವಾಗಲಿಲ್ಲ. ಅವರ ಮಾತಿನ ಚಮತ್ಕಾರದಿಂದ ಬೇಸರವಾಯಿತು, ಕೊಂಚ ಕೋಪವೂ ಬಂತು. ಆದರೆ ಗಾಂಧಿಯವರಿಗೆ ನವುರಾದ ತರ್ಕ ಬೇಕಿತ್ತು. ಅವರು ರಾಜಗೋಪಾಲಾಚಾರ್ಯರ ಬುದ್ಧಿಸೂಕ್ಷ್ಮತೆಯನ್ನು ಗ್ರಹಿಸಿ ಮೆಚ್ಚಿಕೊಂಡಿದ್ದರು. ಗಾಂಧಿಯವರು ಅಷ್ಟೊಂದು ಗೌರವಿಸುತ್ತಿದ್ದ ಒಬ್ಬ ಸಮೀಪದ ಕಾರ್ಯಕರ್ತರನ್ನು ಎದುರಿಸುವುದು ಇತರರಿಗೆ ಶಕ್ಯವಿಲ್ಲದೆ ಅವರು ತಮ್ಮ ಅಸಮಾಧಾನವನ್ನು ನುಂಗಿಕೊಂಡಿದ್ದರು. ಅಂಥವರೇ ರಾಜಾಜಿಯವರನ್ನು ಸೀಆರ್ (= ನರಿ) ಮುಂತಾದ ಅವಹೇಳನದ ಹೆಸರುಗಳಿಂದ ಕರೆದರು. ಒಟ್ಟಿನಲ್ಲಿ ಉತ್ತರದೇಶದ ಜನರಿಗೆ ರಾಜಗೋಪಾಲಾಚಾರ್ಯರಲ್ಲಿ ದಕ್ಷಿಣದವರಿಗಿದ್ದಷ್ಟು ಮಮತೆ ಬರಲಿಲ್ಲ.

# ಮುಖ್ಯ ಸಾಧನೆ

ಈಗ ರಾಜಗೋಪಾಲಾಚಾರ್ಯರು ಹಿಡಿದಿದ್ದ ಮುಖ್ಯ ಕಾರ್ಯಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅವುಗಳಲ್ಲಿ ಮುಖ್ಯವಾದವು ಇವು:

1. ಮದ್ಯ ನಿರೋಧ
2. ಖಾದಿ
3. ಹರಿಜನೋದ್ಧಾರ
4. ಹಿಂದೀ ಪ್ರಚಾರ
5. ಸ್ವರಾಜ್ಯ ಸಂಪಾದನೆ
6. ರಾಜ್ಯದ ವೆಚ್ಚದಲ್ಲಿ ಮಿತವ್ಯಯ
7. ಆಡಳಿತದಲ್ಲಿ ವಿಚಕ್ಷಣೆ
8. ಆಡಳಿತದಲ್ಲಿ ಪರಿಶುದ್ಧತೆ
9. ಧರ್ಮಸಂಪ್ರದಾಯಗಳು
10. ಸಾಹಿತ್ಯಕಾರ್ಯ-ತಮಿಳು ಸಾಹಿತ್ಯ

**ಮದ್ಯನಿರೋಧ:** ಮಹಾತ್ಮ ಗಾಂಧಿಯವರ ಮುಖ್ಯ ಉದ್ದೇಶಗಳಲ್ಲಿ ಇದು ಒಂದು. ರಾಜಗೋಪಾಲಾಚಾರ್ಯರು ಇದಕ್ಕಾಗಿ ಪಟ್ಟ ಶ್ರಮ ಜ್ಞಾಪಕಾರ್ಹವಾದದ್ದು. ಆದರೆ, ಅದರ ಫಲ ಸದ್ಯಕ್ಕೆ ತೀರ ಸ್ವಲ್ಪದ್ದಾಗಿದೆ. ಅವರ ತರುವಾಯ ಬಂದ ಮದರಾಸಿನ ಮುಖ್ಯಮಂತ್ರಿಗಳೂ, ಇತರ ಮಂತ್ರಿಗಳೂ ಈ ವಿಷಯದಲ್ಲಿ ಉದಾಸೀನರಾಗಿದ್ದಾರೆ, ವಿರೋಧಿಗಳೇ ಆಗಿದ್ದಾರೆ. ಮದ್ಯನಿಷೇಧದ ಏರ್ಪಾಟನ್ನೇ ವಜಾಮಾಡಿದ್ದಾರೆ.

**ಖಾದಿ:** ರಾಜಗೋಪಾಲಾಚಾರ್ಯರು ಖಾದಿಯ ಪ್ರಚಾರಕ್ಕೆ ಮಾತ್ರವೇ ಅಲ್ಲದೆ ಕೈಮಗ್ಗದವರ ಸಂರಕ್ಷಣೆಗಾಗಿಯೂ ನಿರಂತರ ಶ್ರಮ ಪಟ್ಟಿದ್ದಾರೆ. ತಾವೇ ಸ್ವತಃ ಚರಕದಿಂದ ನೂಲು ತೆಗೆಯುತ್ತಿದ್ದರು. ಆದರೆ, ಅದರಿಂದ ಮೆಷಿನ್ (ಮಿಲ್) ಬಟ್ಟೆಗಳ ವ್ಯಾಪಾರಕ್ಕೇನೂ ಅಪಾಯವಾಗಿಲ್ಲ. ಕೈಮಗ್ಗದವರಾದರೋ ಕೈಯಿಂದ ನೂತ ನೂಲನ್ನೆ ಬಳಸುತ್ತಿರುವರೆಂಬ ಖಾತರಿಯಿಲ್ಲ. ಕೈಮಗ್ಗದವರು ಈ ಅವಕಾಶದ ಪ್ರಯೋಜನವನ್ನು ಹೆಚ್ಚಾಗಿ ಪಡೆದಂತೆ ತೋರುವುದಿಲ್ಲ. ಇದಕ್ಕೆ ಕಾರಣ ಅವರೇ: ಅವರು ಜನದ ನಂಬಿಕೆ ಸಂಪಾದಿಸಿಕೊಂಡಿಲ್ಲ.

**ಹರಿಜನೋದ್ಧಾರ:** ಈ ಪ್ರಯತ್ನದಲ್ಲಿ ತಿರುವನಂತಶಯನ ಮುಂತಾದ ಕಡೆ ರಾಜಗೋಪಾಲಾಚಾರ್ಯರ ಪ್ರಯತ್ನದಿಂದ ಹರಿಜನರಿಗೆ ದೇವಸ್ಥಾನ ಪ್ರವೇಶ ದೊರೆಯಿತು. ಆದರೆ ದೇವಸ್ಥಾನ ಪ್ರವೇಶದ ಸೌಕರ್ಯವನ್ನು ಹರಿಜನರು ಎಷ್ಟು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆಯೋ ಕಂಡವರಿಲ್ಲ. ಆ ಜನ ಈ ವಿಷಯದಲ್ಲಿ ಅಷ್ಟು ಉತ್ಸಾಹಿಗಳಾಗಿರುವಂತೆ ತೋರುವುದಿಲ್ಲ. ಇನ್ನು ಸರಕಾರಿ ಚಾಕರಿಗಳ ವಿಷಯದಲ್ಲಾದರೋ ಅದು ನಡೆಯುತ್ತಿದೆ. ಹೆಚ್ಚಾಗಿಯೇ ನಡೆಯುತ್ತಿದೆ. ಇದರಿಂದ ಆ ಜನಾಂಗದ ಮೇಲೆ ಏನು ಪರಿಣಾಮವಾಗಿದೆ? ಸಾಮಾನ್ಯ ಸಾರ್ವಜನಿಕ ಆಡಳಿತದ ಮೇಲೆ ಏನು ಪರಿಣಾಮವಾಗಿದೆ? ಎಂಬುದನ್ನು ವಿಚಾರ ಮಾಡಬೇಕಾಗಿದೆ.

**ಹಿಂದೀ ಪ್ರಚಾರ:** ರಾಜಗೋಪಾಲಾಚಾರ್ಯರು ಮೊದಲು ಹಿಂದೀ ಉತ್ಸಾಹಿಗಳಾಗಿದ್ದರು. ಅದಕ್ಕಾಗಿ ಬಹು ಕೆಲಸ ನಡಸಿದರು. ಹಿಂದಿಯಿಂದ ನಮ್ಮ ಇತರ ದೇಶ ಭಾಷೆಗಳಿಗೂ ಇಂಗ್ಲಿಷ್ ವಿದ್ಯಾಭ್ಯಾಸಕ್ಕೂ ಎಷ್ಟು ಅಪಾಯವೆಂಬುದನ್ನು ಕಂಡುಕೊಂಡ ಬಳಿಕ ತಮ್ಮ ಪೂರ್ವೋತ್ಸಾಹವನ್ನು ಬದಿಗಿಟ್ಟು ಇಂಗ್ಲಿಷ್ ಪರವಾಗಿಯೂ ದೇಶಭಾಷೆಗಳ ಪರವಾಗಿಯೂ ವಾದಿಸುವವರಾದರು. ಹಿಂದಿಯನ್ನು ಅವರು ಕೈಬಿಟ್ಟಂತೆ ತೋರಿತು.

**ಸ್ವರಾಜ್ಯ ಸಂಪಾದನೆ:** ಇದಕ್ಕಾಗಿ ಅವರು ಪಟ್ಟ ಶ್ರಮ ಅಷ್ಟಿಷ್ಟೆಂದು ಹೇಳಲಾಗದು. ಗಾಂಧಿಯವರಿಗೆ ಸಮಾನವಾಗಿ ದುಡಿದರು. ಪರಕೀಯರನ್ನು ನಮ್ಮ ದೇಶದಿಂದ ತೊಲಗಿಸಿ ಸ್ವದೇಶವನ್ನು ಸ್ವತಂತ್ರ ಪಡೆಯಬೇಕೆಂಬುದೇ ರಾಜಗೋಪಾಲಾಚಾರ್ಯರ ಕೇಂದ್ರ ಧ್ಯೇಯ. ಅವರು ರಾಜಕೀಯಕ್ಕೆ ಕಾಲಿಟ್ಟಿದ್ದೇ ಈ ಉದ್ದೇಶದಿಂದ ಅದು ಸಫಲವಾಗಿದೆ.

**ಮಿತವ್ಯಯ:** ಆದರೆ, ರಾಜ್ಯ ಹೇಗೆ ನಡೆಯಬೇಕು ಎಂಬ ವಿಚಾರದಲ್ಲಿ ರಾಜಗೋಪಾಲಾಚಾರ್ಯರ ಮಾತು ಸಫಲವಾಗಿಲ್ಲ. ಮಿತವ್ಯಯ ಬಂದಿಲ್ಲ. ಸ್ವರಾಜ್ಯಾನಂತರದ ಸರಕಾರಗಳ ಆರ್ಥಿಕ ನೀತಿಯನ್ನು ಅವರು ಡಂಭಾಚಾರ ವಿಲಾಸವೆಂದು ಕರೆಯುತ್ತಿದ್ದರು.

**ವಿಚಕ್ಷಣೆ ಪರಿಶುದ್ಧಿ:** ವಿಚಕ್ಷಣೆ-ಪರಿಶುದ್ಧಿಗಳು ಅಸಾಧ್ಯವಾಗುವಂಥ ಕಾರ್ಯ ಧೋರಣೆಗಳನ್ನು ಸ್ವರಾಜ್ಯಾನಂತರ ಸರಕಾರಗಳು ಕೈಕೊಂಡವು. ಲಂಚ, ಮತ್ತು ಸ್ವಕುಲಾಭಿಮಾನಗಳು ಪ್ರಬಲಿಸಿವೆ-ಎಂಬ ಮಾತು ಮನೆಮನೆಯಲ್ಲೂ ಹರಡಿದೆ. ರಾಜಗೋಪಾಲಾಚಾರ್ಯರು Permit-Licence Raj ಎಂದರೆ ಪರವಾನಿಗೆ-

ರಿಯಾಯಿತಿಗಳ ರಾಜ್ಯ ಎಂದು ಅವಹೇಳನ ಮಾಡಿ ಸರಕಾರಗಳ ಅಪನೀತಿಯನ್ನು ಬಲವಾಗಿ ಖಂಡಿಸಿದರು.

**ಧರ್ಮ:** ರಾಜಗೋಪಾಲಾಚಾರ್ಯರು ಮೊದಲಿನಿಂದ ಧರ್ಮಶ್ರದ್ಧೆಯುಳ್ಳವರೇ. ಆದರೂ ಈಚೀಚೆಗೆ ಅವರು ಈ ವಿಷಯಕ್ಕೆ ಹೆಚ್ಚು ಗಮನಕೊಟ್ಟಿದ್ದರು. ಅವರು ಪ್ರತಿಯೊಂದು ಲೇಖನದಲ್ಲಿಯೂ ಪ್ರತಿಯೊಂದು ಭಾಷಣದಲ್ಲಿಯೂ ಧರ್ಮದ ಪ್ರಸ್ತಾವ ಹೆಚ್ಚಾಗಿ ಬರುತ್ತಿತ್ತು. ಈ ದೇಶ ಉಳಿಯಬೇಕಾದರೆ ನಮ್ಮ ಮೊದಲನೆಯ ಗಮನ ಧರ್ಮದ ಕಡೆಗಿರಬೇಕಾದದ್ದೆಂದು ನಿಸ್ಸಂಕೋಚವಾಗಿ ಸಾರುತ್ತಿದ್ದರು.

# ಸಾಹಿತ್ಯಕಾರ್ಯ

ವಾಸ್ತವವಾಗಿ ರಾಜಗೋಪಾಲಾಚಾರ್ಯರಿಗಿದ್ದ ಒಲವು ಮೊದಲು ಸಾಹಿತ್ಯದ ಕಡೆ. ಅವರಿಗೆ ಸದ್ಗ್ರಂಥಗಳಲ್ಲಿ ಬಹು ಆಸಕ್ತಿ. ಅವರು ಗವರ್ನರ್ ಜನರಲ್ ಆಗಿದ್ದಾಗ ಒಂದು ಸಾರಿ ಬೆಂಗಳೂರಿಗೆ ಬಂದವರು ನನ್ನನ್ನು ನೋಡಬೇಕೆಂದು ಹೇಳಿಕಳುಹಿಸಿದರು. ಅದರಂತೆ ನಾನು ರೆಸಿಡೆನ್ಸಿ ಬಂಗಲೆಗೆ ಹೋದೆ. ಅವರು ಆ ಕಟ್ಟಡದ ಒಳಗಡೆ ಕೂಡದೆ ಕಟ್ಟಡದಿಂದ ಕೆಲ ಗಜ ದೂರದಲ್ಲಿ ಹೊರಚ್ಚಾಗಿ ಗಿಡ ಪೊದರುಗಳ ಮರೆಯಲ್ಲಿ ಕುರ್ಚಿ ಮೇಜು ಹಾಕಿಸಿಕೊಂಡು ಆರಾಮಕುರ್ಚಿಯಲ್ಲಿ ಕುಳಿತಿದ್ದರು. ಮೇಜಿನ ಮೇಲೆ ಇದ್ದದ್ದು ಎರಡುಮೂರು ಪುಸ್ತಕಗಳು: ಒಂದನ್ನು ಹಿಡಿದು ಓದುತ್ತಿದ್ದರು. ಇಂಥ ಗ್ರಂಥ ಕಾಲಕ್ಷೇಪಕ್ಕೆ ತಮಗೆ ಕಾಲ ಸಾಲದಲ್ಲಾ! -ಎಂಬುದು ಅವರ ಆಗಿನ ಕೊರತೆ. ಇದನ್ನು ಪದೇಪದೇ ಹೇಳುತ್ತಿದ್ದರು. ಅವರೊಡನೆ ಸೇರಿದಾಗಲೆಲ್ಲ ಯಾವುದೋ ಗ್ರಂಥ ವಿಚಾರ ಚರ್ಚೆಗೆ ಬರುವುದು. ಒಂದು ದಿನ

ಯಸ್ಯ ಕ್ಷಯಾಯ ಜಿನ್ವಥ

ಎಂಬ ಮಂತ್ರದಲ್ಲಿಯ 'ಕ್ಷಯಾಯ' ಎಂಬ ಮಾತಿನ ಅರ್ಥವನ್ನು ಕುರಿತು ಜಿಜ್ಞಾಸೆ ನಡೆಯಿತು. ನಾನು ಭಾಷ್ಯವನ್ನು ನೋಡಿ ತದನುಸಾರವಾಗಿ ಅರ್ಥ ಹೇಳಿದ್ದನ್ನು ಅವರು ಬಹುವಾಗಿ ಮೆಚ್ಚಿಕೊಂಡದ್ದು ನನಗೆ ಸ್ಮರಣೀಯವಾದ ಸಂಗತಿ.

ಇನ್ನೊಂದು ದಿನ ಅವರೂ ನವರತ್ನ ರಾಮರಾಯರೂ ನಾನೂ ರಾಮರಾಯರ ಮನೆಯಲ್ಲಿ ಮಾತನಾಡುತ್ತ ಕುಳಿತಿದ್ದೆವು. ಆ ಸಮಯದಲ್ಲಿ ಕೌನ್ಸಿಲರಾಗಿದ್ದ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ರಾಜಗೋಪಾಲಾಚಾರ್ಯರನ್ನು ನೋಡುವುದಕ್ಕಾಗಿ ಅಲ್ಲಿಗೆ ದಯಮಾಡಿಸಿದರು. ಅದಕ್ಕೆ ಎರಡು ದಿವಸ ಹಿಂದೆ ನವರತ್ನ ರಾಮರಾಯರು ಬೆಂಗಳೂರಿನ ಒಂದಾನೊಂದು ಸಂಸ್ಕೃತಿ ಸಂಘದಲ್ಲಿ ಮೊಪಾಸಾ (Maupassant) ಎಂಬ ಫ್ರೆಂಚ್ ಲೇಖಕನ ಗ್ರಂಥಗಳನ್ನು ಕುರಿತು ಉಪನ್ಯಾಸ ಮಾಡಿದ್ದರು. ಆ ವಿಷಯದ ಪ್ರಸ್ತಾವ ಬಂತು. ಆಗ ರಾಮರಾಯರು ಹೇಳಿದರು: "ಮೊಪಾಸಾನ ಗ್ರಂಥಗಳನ್ನು ಓದದ ಮನುಷ್ಯ ತಾನು ಸುಸಂಸ್ಕೃತ ಮನುಷ್ಯನೆಂದು ಹೇಳಿಕೊಳ್ಳಲು ಅಧಿಕಾರವಿಲ್ಲದವನು" - ಎಂದು. ಇದರಿಂದೆ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರಿಗೆ ಮನಸ್ಸು ಕೆರಳಿತು. ಅವರು

ಹೇಳಿದರು: "ಯಾರು ದಿವ್ಯಪ್ರಬಂಧಗಳನ್ನು ಕಲಿತಿಲ್ಲವೋ ಅವನಿಗೆ ತಾನು ಸುಸಂಸ್ಕೃತನೆಂದು ಹೇಳಿಕೊಳ್ಳಲು ಅಧಿಕಾರವಿಲ್ಲ" -ಎಂದು.

ಇದರ ಮೇಲೆ ವಾಗ್ವಾದ ವಿಪುಲವಾಗಿ ಬೆಳೆಯಿತು. ರಾಜಗೋಪಾಲಾಚಾರ್ಯರಾದರೊ ತಮಿಳು ಪ್ರಬಂಧಗಳನ್ನು ತಮ್ಮ ಮತಗ್ರಂಥಗಳೆಂಬ ಭಕ್ತಿಯಿಂದ ಮಾತ್ರವಲ್ಲದೆ ಉತ್ತಮ ಸಾಹಿತ್ಯವೆಂಬ ಆದರದಿಂದಲೂ ವ್ಯಾಸಂಗ ಮಾಡಿದ್ದವರು. ಇದು ನನಗೆ ಚೆನ್ನಾಗಿ ತಿಳಿದಿತ್ತು. ಅವರು ನನಗೆ ಬರೆದಿದ್ದ ಒಂದಾನೊಂದು ಕಾಗದದಲ್ಲಿ ಒಂದು ತಮಿಳು ಪ್ರಬಂಧ ವ್ಯಾಖ್ಯಾನದಿಂದ ಉದಾಹರಿಸಿದ್ದರು, ತಮಿಳಿನಲ್ಲಿ. ಅದರ ತಾತ್ಪರ್ಯ ಹೀಗೆ: "ನೀನು ನಿಜವಾಗಿ ವೈಷ್ಣವನು ಹೌದೊ, ಅಲ್ಲವೊ-ಎಂದು ಶಂಕೆ ಬಂದ ಪಕ್ಷದಲ್ಲಿ ಹೀಗೆ ಮಾಡು-ನಿನಗೆ ವಿರೋಧಿಯಾದ ಒಬ್ಬ ಮನುಷ್ಯನಿಗೆ ಏನೋ ಆಪತ್ತು ಬಂತೆಂದು ನಿನಗೆ ತಿಳಿದುಬಂದಿದೆ. ಆಗ ನೀನು ನಿನ್ನ ಮನಸ್ಸಿನಲ್ಲಿ 'ಆಹಾ! ಅವನಿಗೆ ತಕ್ಕದ್ದೇ ಆಯಿತು' -ಎಂದುಕೊಳ್ಳುವೆಯೋ? ಅಥವಾ 'ಅವನಿಗೆ ಹೀಗಾಯಿತಲ್ಲ!' ಎಂದು ಪರಿತಾಪ ಪಡುವೆಯೊ? ನಿನ್ನಲ್ಲೇ ವಿಚಾರ ಮಾಡಿಕೊ. ಅನ್ಯನ ಕಷ್ಟ ಕೇಳಿ ನಿನ್ನಲ್ಲಿ ಮರುಕವುಂಟಾಗಿದ್ದರೆ ನೀನು ವೈಷ್ಣವ. ಹಾಗಲ್ಲದೆ ದ್ವೇಷಿಯ ಮನಸ್ಸುಂಟಾಗಿದ್ದರೆ ನೀನು ವೈಷ್ಣವನಲ್ಲ."

ಇಂಥ ವಾಕ್ಯಗಳು ನೂರಾರು ರಾಜಗೋಪಾಲಾಚಾರ್ಯರಿಗೆ ಮುಖಸ್ಥವಾಗಿದ್ದವು. ಹೀಗೆ ಅವರು ಪ್ರಬಂಧ ಸಾಹಿತ್ಯದಲ್ಲಿ ಪರಿಣತರಾಗಿದ್ದರೂ ಆ ದಿನ ರಾಮರಾಯರಿಗೂ ಶ್ರೀನಿವಾಸಯ್ಯಂಗಾರ್ಯರಿಗೂ ವಾದಪ್ರಸಂಗ ನಡೆಯುತ್ತಿದ್ದಷ್ಟು ಹೊತ್ತೂ ರಾಜಗೋಪಾಲಾಚಾರ್ಯರು ಮಧ್ಯೆ ಮಾತನಾಡದೆ ಕೇಳುತ್ತಿದ್ದರು. ಅವರ ಮಾತು ಮುಗಿದ ಬಳಿಕ ಕಡೆಯಲ್ಲಿ ರಾಜಗೋಪಾಲಾಚಾರ್ಯರೂ ನಾನೂ ಎರಡು ಮಾತನಾಡಿದೆವು. ಆಗ ವಿಶದವಾಯಿತು ನಿಜವಾದ ಪಾಂಡಿತ್ಯ. "ಸಂಸ್ಕೃತಿ ಎಂದರೆ ವಿನಯ. ಅದರಿಂದ ಪರಗುಣ ಗ್ರಹಣ. ಅದರಿಂದ ಪರರಲ್ಲಿ ಗೌರವಬುದ್ಧಿ. ಹಾಗೆ ಸ್ನೇಹ, ಸಹಾನುಭೂತಿ..." ಈ ರೀತಿ ಅಂದಿನ ವಾದ ಉಪಸಂಹಾರವಾಗಿ ಎಲ್ಲರಿಗೂ ಸಮಾಧಾನವಾಯಿತು. ರಾಜಗೋಪಾಲಾಚಾರ್ಯರ ಪಾಂಡಿತ್ಯ ಸಂಸ್ಕೃತಿಗಳಿಗೆ ನಿದರ್ಶನ.

ರಾಜಗೋಪಾಲಾಚಾರ್ಯರು ಮಹಾಗ್ರಂಥವಾವುದನ್ನೂ ಬರೆಯಹೊರಟವರಲ್ಲ. ಅವರದೇನಿದ್ದರೂ ವಿವರಣೆ ವ್ಯಾಖ್ಯಾನಗಳು.

ಇಂಗ್ಲಿಷಿನಲ್ಲಿ ತಾತ್ಕಾಲಿಕವಾದ ರಾಜಕೀಯ ಪ್ರಸಂಗಗಳನ್ನು ಕುರಿತು ಒಂದೆರಡು ಲಘುಪುಸ್ತಕಗಳನ್ನು ಪ್ರಕಟಿಸಿದರು. ಹೆಚ್ಚು ಗಂಭೀರ ವಿಷಯವೇನೆಂದರೆ ಅವರ ಉಪನಿಷದ್ವಿವರಣೆ. ಅವರು ಮುಖ್ಯ ಉಪನಿಷತ್ತುಗಳನ್ನು ಆರಿಸಿಕೊಂಡು ಅವಕ್ಕೆ ತಿಳಿಯಾದ ಇಂಗ್ಲಿಷ್ ಭಾಷೆಯಲ್ಲಿ ತಾತ್ಪರ್ಯ ಹೇಳಿದ್ದಾರೆ. ಈ ಗ್ರಂಥವನ್ನು ಬರೆಯುವಾಗ ಪ್ರಕೃತ ಕಾಲದ ಇಂಗ್ಲಿಷನ್ನೇ ಹೆಚ್ಚಾಗಿ ಬಳಸುವ ಜನದ ಮನಸ್ಸಿನ ಶಂಕೆಗಳನ್ನೂ ಪ್ರಶ್ನೆಗಳನ್ನೂ ಉದ್ದೇಶದಲ್ಲಿರಿಸಿಕೊಂಡು ಈಗಿನ ಸಾಮಾನ್ಯ ಜನಕ್ಕೆ ದೊಡ್ಡ ದೊಡ್ಡ ತತ್ತ್ವಗಳನ್ನು ಸ್ಫುರಿಸುವಂತೆ ಮಾಡಿದ್ದಾರೆ.

ಇದಲ್ಲದೆ ಅವರು ಅನೇಕ ಯೂನಿವರ್ಸಿಟಿಗಳಲ್ಲಿ ವಿದ್ವದ್ವಿಷಯಗಳನ್ನು ಕುರಿತು ಕಾನ್ವೊಕೇಷನ್ ಮೊದಲಾದ ಸಂದರ್ಭಗಳಲ್ಲಿ ಭಾಷಣ ಮಾಡಿದ್ದು ಗ್ರಂಥರೂಪದಲ್ಲಿ ಪ್ರಕಟವಾಗಿವೆ.

'ಸತ್ಯಮೇವ ಜಯತೇ' ಎಂಬ ಹೆಸರಿನಲ್ಲಿ ಅವರ ತಾತ್ಕಾಲಿಕ ಇಂಗ್ಲಿಷ್ ಲೇಖನಗಳು ಮೂರು ಸಂಪುಟವಾಗಿ ಪ್ರಕಟವಾಗಿವೆ.

ತಮಿಳಿನಲ್ಲಿ ರಾಜಾಜಿ ಹೆಚ್ಚು ಶ್ರಮಪಟ್ಟರು. ಭೌತಶಾಸ್ತ್ರ, ಸಸ್ಯಶಾಸ್ತ್ರ ಮೊದಲಾದ ವಿಜ್ಞಾನ ವಿಷಯಗಳನ್ನು ಕುರಿತು ಅವರು ಗ್ರಂಥ ಬರೆದಿದ್ದಾರೆ. ಸಸ್ಯಶಾಸ್ತ್ರದ ಬಗೆಗೆ ಅವರು ತಮಿಳಿನಲ್ಲಿ ಬರೆದಿರುವ ಸಣ್ಣ ಗ್ರಂಥ ಪ್ರಮಾಣ ಭೂತವಾಗಿದೆಯೆಂದು ಕೆಲವರು ತಿಳಿದವರು ನನಗೆ ಹೇಳಿದ್ದಾರೆ.

ಮುಖ್ಯವಾಗಿ ಅವರು ಸಾಕ್ರಟೀಸ್, ಮಾರ್ಕಸ್ ಅರೀಲಿಯಸ್, ಎಪಿಕ್ಟೀಟಸ್ ಮೊದಲಾದ ಪಾಶ್ಚಾತ್ಯ ತತ್ತ್ವವಿಚಾರಿಗಳನ್ನು ಕುರಿತು ವಿವರಣೆ ಮಾಡಿಯೂ ಆ ಮೂಲ ಗ್ರಂಥಗಳನ್ನು ತಮಿಳಿಗೆ ತರ್ಜುಮೆ ಮಾಡಿಯೂ ಪ್ರಕಾಶಪಡಿಸಿದ್ದಾರೆ. ಅವರಿಗೆ ತತ್ತ್ವ ಕುತೂಹಲ ತೀವ್ರವಾಗಿತ್ತು. 'ಚಕ್ರವರ್ತಿಯ ತಿರುಮಗನ್' ಎಂಬ ಹೆಸರಿನಿಂದ ಶ್ರೀಮದ್ರಾಮಾಯಣದ ವಚನ ಸಂಗ್ರಹವನ್ನೂ 'ವ್ಯಾಸರ್ ವಿರುಂದು' ಎಂಬ ಹೆಸರಿನಿಂದ ಮಹಾಭಾರತದ ಸಂಗ್ರಹವನ್ನೂ ಸುಲಭವಾದ ತಮಿಳಿನಲ್ಲಿ ಒದಗಿಸಿದ್ದಾರೆ. ಈ ಎರಡು ಗ್ರಂಥಗಳೂ ವಿಸ್ತಾರವಾಗಿ ಪ್ರಚಾರಗೊಂಡಿವೆ. ಇದು ದೊಡ್ಡ ಉಪಕಾರ.

ರಾಜಗೋಪಾಲಾಚಾರ್ಯರಿಗೆ ತಿರುವಳ್ಳುವರ್ ತಾತ್ತ್ವಿಕ ಕವಿಯ ವಿಷಯದಲ್ಲಿ ಹೆಚ್ಚು ಭಕ್ತಿ. ಅದರಂತೆಯೇ ಅವ್ವೈಯಾರ್ ಎಂಬ ಕವಯಿತ್ರಿಯ ಬಗೆಗೆ. ಇವರಿಬ್ಬರ ವಾಕ್ಯಗಳನ್ನೂ

ಅವರು ಪದೇಪದೇ ಉದಾಹರಿಸುತ್ತಿದ್ದರು.

ಹೀಗೆ ನನಗನ್ನಿಸುತ್ತದೆ, ರಾಜಗೋಪಾಲಾಚಾರ್ಯರ ರಾಜಕೀಯ ಸಾಧನೆಗಿಂತ ಅವರ ಸಾರಸ್ವತ ಸಾಧನೆ ಹೆಚ್ಚು ಕಾಲ ಬಾಳುತ್ತದೆಂದು.

# ಧನ್ಯಜೀವಿ

ಒಟ್ಟು ತೀರ್ಮಾನದಲ್ಲಿ ರಾಜಗೋಪಾಲಾಚಾರ್ಯರು ಅವರ ಕಾಲದ ಮಹಾ ಮಹನೀಯ ಪಂಕ್ತಿಯಲ್ಲಿ ಪ್ರಮುಖಪೀಠದಲ್ಲಿರತಕ್ಕವರೆಂದು ಹೇಳಬಹುದು. ಭಗವಂತನು ಅವರಿಗೆ ಅನೇಕ ವಿಧದ ಶಕ್ತಿಗಳನ್ನು ಅನುಗ್ರಹಿಸಿದ್ದನು. ವಿದ್ಯೆ, ಬುದ್ಧಿವ್ಯಾಪನೆ, ಧೈರ್ಯ-ಸಾಹಸಗಳು, ಲೌಕಿಕ ಯುಕ್ತಿ, ದೂರದೃಷ್ಟಿ, ಪಾಂಡಿತ್ಯ-ಇನ್ನೂ ಅನೇಕ ಸತ್ತ್ವಪ್ರಭಾವಗಳು ಅವರಿಗೆ ಬಂದಿದ್ದವು. ಇಷ್ಟು ಹೇಳಿದ್ದರಿಂದ ಅವರು ಸರ್ವ ಸಮ್ಮತರಾದರೆಂದು ಹೇಳಿದಂತೇನೂ ಆಗಲಿಲ್ಲ. ಎಷ್ಟೋ ವಿಷಯಗಳಲ್ಲಿ ಅವರ ದಾರಿ ಅವರದಾಯಿತು; ಮಿಕ್ಕವರದಾಗಲಿಲ್ಲ. ಅಭಿಪ್ರಾಯ ವಿಷಯದಲ್ಲಿ ಅಸಮ್ಮತಿಯೂ ವಿರೋಧವೂ ಇರಲೇ ಇದ್ದವು. ಆದಕಾರಣ, ಅವರು ಹಿಡಿದಿದ್ದ ಕಾರ್ಯಗಳಿಗೆ ಸಂಪೂರ್ಣವಾದ ಬೆಂಬಲ ದೊರೆಯದೆ ಹೋಯಿತು. ಆದರೆ, ಸಂಪೂರ್ಣ ಐಕಮತ್ಯ ನಮ್ಮ ದೇಶದಲ್ಲಿ ಯಾವ ವಿಷಯದಲ್ಲಿ ಉಂಟಾಗಿದೆ? ಯಾವ ಜನನಾಯಕನು ಸರ್ವಪ್ರಜೆಯ ಏಕೈಕನಾಯಕನಾಗಿದ್ದಾನೆ? ಅಭಿಪ್ರಾಯಭೇದವೆಂಬುದು ಸ್ವಾಭಾವಿಕ ಸಂಗತಿ. ಭೇದವು ಮನುಷ್ಯರ ದೇಹ-ಬುದ್ಧಿ ರಚನೆಯಲ್ಲಿಯೇ ಇದೆ. ಅದನ್ನು ಸಂಪೂರ್ಣವಾಗಿ ಪರಿಹರಿಸಿ ಐಕಮತ್ಯವನ್ನು ಸ್ಥಾಪಿಸುವ ಕಾರ್ಯ ಸಾಮಾನ್ಯಸಾಧ್ಯವಾದದ್ದಲ್ಲ. ಕಟ್ಟಕಡೆಗೆ ರಾಜಗೋಪಾಲಾಚಾರ್ಯರು ಈಶ್ವರಸಾನ್ನಿಧ್ಯದಲ್ಲಿ ನಿಂತಾಗ ಇಷ್ಟು ಹೇಳಬಹುದು: "ಭಗವನ್, ನೀನು ಕೊಟ್ಟ ಶಕ್ತಿ-ಸಾಧನಗಳನ್ನು ನಾನು ನಿರ್ವಂಚನೆಯಿಂದ ನಿನ್ನ ಸೇವೆಗಾಗಿ ವಿನಿಯೋಗಿಸಿದ್ದೇನೆ. ಕೆಲವು ದಾರಿಗಳಲ್ಲಿ ಅದು ಫಲಕಾರಿಯಾಗದೆ ಹೋಗಿದ್ದರೆ ಅದಕ್ಕೆ ಕಾರಣ ನಾನು ಮಾಡಿದ ಲೋಪಗಳಲ್ಲ. ಎಲ್ಲ ಲೋಪಗಳನ್ನೂ ಹೋಗಲಾಡಿಸಿ, ಸರಿಪಡಿಸುವ ಪ್ರಭಾವ ನಿನಗೆ ಸೇರಿದ್ದು. ನನಗೆ ಕೊಟ್ಟಷ್ಟನ್ನು ಮುಡುಪು ಸಲ್ಲಿಸುವ ಅವಕಾಶ ಮಾತ್ರ ನನಗೆ ಸೇರಿದ್ದು" -ಎಂದು ಧಾರಾಳವಾಗಿ ಹೇಳಿಕೊಳ್ಳಬಹುದು. ಇಷ್ಟು ಮಾತ್ರ ಹೇಳಬಲ್ಲವರು ಎಲ್ಲರೂ ಅಲ್ಲ. ಯಾರು ಹೀಗೆ ಹೇಳಲಾದೀತೋ ಅವರು ಧನ್ಯರು. ರಾಜಗೋಪಾಲಾಚಾರ್ಯರು ಅಂಥ ಧನ್ಯಶ್ರೇಣಿಯಲ್ಲಿ ಮುಖ್ಯರಾಗಿ ಸ್ಮರಣೀಯರಾಗಿರುತ್ತಾರೆ.

# ರಾಜ್ಯನೇತಾ

ರಾಜಕೀಯಸ್ಥರಲ್ಲಿ ವಿಚಕ್ಷಣ (ಸ್ಟೇಟ್ಸ್ ಮನ್) ಎಂಬ ದರ್ಜೆಯುಂಟು. ಈತನೇ ಉತ್ತಮೋತ್ತಮನು. ಇವನೇ ರಾಜ್ಯದ ನೇತಾ ಅಥವಾ ನಾಯಕ, ಎಂದರೆ ನಡಸುವವನು. ರಾಜ್ಯನೇತನಲ್ಲಿ ಅನೇಕ ಗುಣವಿಶೇಷಗಳು ಸೇರಿರುತ್ತವೆ. ಅವುಗಳಲ್ಲಿ ಮುಖ್ಯವಾದವು ಎರಡು: (೧) ವಿವೇಕ, (೨) ಸ್ಥೈರ್ಯ.

ವಿವೇಕವು ಮೂರು ತೆರನಾದದ್ದು:

1. ಶ್ರೇಯ ಪ್ರೇಯ ವಿವೇಕ
2. ಸಾಧ್ಯಾಸಾಧ್ಯ ವಿವೇಕ
3. ಪೌರ್ವಾಪರ್ಯ ವಿವೇಕ

ಇವುಗಳ ಜೊತೆಗಿರಬೇಕಾದದ್ದು ಸ್ಥೈರ್ಯ.

ಜನಕ್ಕೆ ಬೇಕಾದದ್ದರಲ್ಲಿ ಶ್ರೇಯಃಕಾರ್ಯಗಳೂ ಇರುತ್ತವೆ, ಪ್ರೇಯಃ ಕಾರ್ಯಗಳೂ ಇರುತ್ತವೆ. ಶ್ರೇಯಃಕಾರ್ಯವೆಂದರೆ ನಿಜವಾದ ಹಿತ. ಪ್ರೇಯಃಕಾರ್ಯವೆಂದರೆ ಕ್ಷಣ ಮಾತ್ರಕ್ಕೆ ಮನೋರಂಜವಾದದ್ದು. ದೇಶಕ್ಕೆ ವಿದ್ಯಾಶಾಲೆಗಳು ಬೇಕು: ಇದು ಶ್ರೇಯಸ್ಸು, ಹಿತ. ನೃತ್ಯಶಾಲೆಗಳೂ ಬೇಕು: ಇದು ಪ್ರೇಯಸ್ಸು, ರಂಜನೆ.

ಚಂದ್ರಮಂಡಲಕ್ಕೆ ಸೋಪಾನ ಕಟ್ಟುವುದು ಬಹು ಜನಕ್ಕೆ ಹಿತವೇ. ಆದರೆ ಅದು ಸಾಧ್ಯವೋ? ಹಿತಕರವಾದದ್ದೆಲ್ಲಾ ಕಾರ್ಯಸಾಧ್ಯವಾಗುವುದಿಲ್ಲ. ರಾಜ್ಯನೇತಾ ಆದವನು ಒಳ್ಳೆಯ ಸಂಕಲ್ಪಗಳನ್ನು ತನ್ನ ಮನಸ್ಸಿನಲ್ಲಿ ಮಾಡಿಕೊಳ್ಳಬಹುದು. ಆದರೆ ತನ್ನ ಸಂಕಲ್ಪಕ್ಕೆ ಅನುಕೂಲವಾದ ಸಾಧನಗಳು ಉಂಟೇ, ದ್ರವ್ಯವುಂಟೇ, ಇದನ್ನು ನೋಡಿಕೊಳ್ಳಬೇಕು.

ಒಂದಾನೊಂದು ಕಾರ್ಯಯೋಜನೆಯು ಹಿತವೂ ಹೌದು, ಸಾಧ್ಯವೂ ಹೌದು ಎಂದು ಇಟ್ಟುಕೊಳ್ಳೋಣ. ಆದರೆ ಅದು ಅವಸರವಾದದ್ದೋ? ಅದಕ್ಕಿಂತ ಅವಸರವಾದದ್ದು ಬೇರೆ ಯಾವುದೂ ಇಲ್ಲವೋ? ಇದನ್ನು ನೋಡಬೇಕು. ಮಗನಿಗೆ ವಿದ್ಯೆಯು ಬೇಕು, ವಿವಾಹವೂ ಬೇಕು. ಎರಡೂ ಅವಶ್ಯವೇ. ಆದರೆ ಯಾವುದನ್ನು ಮೊದಲು ಚಿಂತಿಸಬೇಕು?

ಹೀಗೆ ಆಲೋಚನೆಗಳು ಮೂರು ಬಗೆಗಳಲ್ಲಿಯೂ ನಡೆದು ಮುಗಿದ ಬಳಿಕ ಕಾರ್ಯ ನಿಷ್ಕರ್ಷೆ. ಹಾಗೆ ನಿಷ್ಕರ್ಷೆಯಾದ ಕಾರ್ಯವಿಧಾನಕ್ಕೆ ರಾಜ್ಯ ನೇತಾ ಆದವನು ಕದಲದೆ ತನ್ನಿಷ್ಠನಾಗಬೇಕು. ಇದೇ ಸ್ಥೈರ್ಯ. ಇದಕ್ಕೆ ಬೇಕಾದದ್ದು ಧೈರ್ಯ. ಯಾರು ಏನು ಬೇಕಾದರೂ ಹೇಳಲಿ, ಎಂಥ ವಿಘ್ನವಾದರೂ ಬರಲಿ, ಅದನ್ನು ಮಾಡಿಯೇ ತೀರುತ್ತೇನೆಂಬ ಹಠ ಬರಬೇಕು. ಈ ತೀರ್ಮಾನಕ್ಕೆ ತುಂಬ ಧೈರ್ಯ ಬೇಕು.

ನಿಂದಂತು ನೀತಿನಿಪುಣಾ ಯದಿ ವಾ ಸ್ತು ವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಂ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ ಪಥಾತ್ ಪ್ರವಿಚಲಂತಿ ಪದಂ ನ ಧೀರಾಃ ॥

ಶ್ರೀರಾಮಚಂದ್ರನು ತನ್ನ ತಮ್ಮನಾದ ಭರತನನ್ನು ಕುರಿತು ಏನು ಹೇಳಿದ?

ಲಕ್ಷ್ಮೀಶ್ಚಂದ್ರಾದಪೇಯಾದ್ವಾ ಹಿಮವಾನ್ ವಾ ಹಿಮಂ ತ್ಯಜೇತ್ ।
ಅತೀಯಾತ್ ಸಾಗರೋ ವೇಲಾಂ ನ ಪ್ರತಿಜ್ಞಾಮಹಂ ಪಿತುಃ ॥

ಇದು ಧೈರ್ಯ ಸ್ಥೈರ್ಯಗಳಿಗೆ ಉದಾಹರಣೆ. ರಾಜಗೋಪಾಲಾಚಾರ್ಯರು ರಾಮಭಕ್ತರು. ಅದಕ್ಕನುಗುಣವಾಗಿ ಧೈರ್ಯ ಸ್ಥೈರ್ಯಗಳನ್ನು ಅವಲಂಬಿಸಿದ್ದವರು. ಆದದ್ದರಿಂದ ರಾಜ್ಯನೇತಾ ಎನ್ನಿಸಿಕೊಳ್ಳುವುದಕ್ಕೆ ಎಲ್ಲ ವಿಧಗಳಲ್ಲಿಯೂ ಅರ್ಹರಾದವರು.

# ೫ ಪಂಕ್ತಿಪಾವನ ವೆಂಕಟಕೃಷ್ಣಯ್ಯನವರು

ಎಂ. ವೆಂಕಟಕೃಷ್ಣಯ್ಯನವರ ಪ್ರಸ್ತಾವದಲ್ಲಿ ನಮ್ಮ ಮೊದಲ ನಮಸ್ಕಾರ ಸಲ್ಲಬೇಕಾದದ್ದು ಅವರ ಶುಶ್ರೂಷೆಯಲ್ಲಿದ್ದ ನಾಲ್ಕಾರು ಮಂದಿ ಶಿಷ್ಯರಿಗೆ. ವೆಂಕಟಕೃಷ್ಣಯ್ಯನವರ ಊಟ ಉಪಚಾರಗಳ ವಿಷಯದಲ್ಲಿಯೂ ದೇಹಾರೋಗ್ಯ ವಿಷಯದಲ್ಲಿಯೂ ಅವರ ಸಾರ್ವಜನಿಕ ಕಾರ್ಯಗಳ ವಿಷಯದಲ್ಲಿಯೂ ಕಾಲಕಾಲಕ್ಕೆ ತಕ್ಕ ಸೇವೆ ಸತ್ಕಾರಗಳನ್ನು ಭಕ್ತಿ ಶ್ರದ್ಧೆಗಳಿಂದ ನಡಸಿದವರು ಆ ವಿದ್ಯಾರ್ಥಿಗಳು. ಅವರ ಗುರುಭಕ್ತಿಯೂ ವೃದ್ಧೋಪಾಸನೆಯೂ ಅಷ್ಟಿಲ್ಲದೆ ಹೋಗಿದ್ದಿದ್ದರೆ ವೆಂಕಟಕೃಷ್ಣಯ್ಯನವರು ಅಷ್ಟು ದೀರ್ಘಕಾಲ ದಕ್ಷತೆಯಿಂದ ಜೀವಿಸಿರುವುದು ಸಾಧ್ಯವಾಗುತ್ತಿರಲಿಲ್ಲವೆಂದು ನನಗೆ ತೋರುತ್ತದೆ. ಅವರು ಎಲ್ಲಿಂದ ಬಂದವರೋ, ಈಗ ಎಲ್ಲೆಲ್ಲಿದ್ದಾರೋ ತಿಳಿಯದು. ಅವರು ಮಹತ್ತ್ವವನ್ನು ಗುರುತಿಸಿ ಅದನ್ನು ಸೇವಿದವರು. ಅವರಿಗೆ ನಮಸ್ಕಾರ.

## ಪ್ರಥಮ ದರ್ಶನ

ವೆಂಕಟಕೃಷ್ಣಯ್ಯನವರನ್ನು ನಾನು ಮೊದಲ ಸಾರಿ ಕಂಡದ್ದು ೧೯೦೨ರಲ್ಲಿ. ಅದಕ್ಕೆ ಮುಂಚೆ ಅವರ ಹೆಸರನ್ನು ಕೇಳಿ ಪ್ರಸಿದ್ಧಿಯನ್ನು ತಿಳಿದಿದ್ದೆ. ೧೯೦೨ರಲ್ಲಿ ನಾನು ಮೈಸೂರಿನ ಮಹಾರಾಜಾ ಕಾಲೇಜಿನ ಹೈಸ್ಕೂಲ್ ವಿಭಾಗದ ಫೋರ್ತ್ ಫಾರ್ಮ್ ತರಗತಿಯ ವಿದ್ಯಾರ್ಥಿ. ಅದು ವೈಸರಾಯ್ ಲಾರ್ಡ್ ಕರ್ಜನ್ ಕಾಲ. ಮೈಸೂರಿನ ಯಾವುದೋ ಸಂಸ್ಥೆಯ-ಬಹುಶಃ ಲಿಟರರಿ ಯೂನಿಯನ್-ಬ್ಯಾರೋ (Barrow) ಎಂಬವನ ಜ್ಞಾಪಕಾರ್ಥವಾಗಿ ಮೌಲ್ಟನ್ (Moulton) ಎಂಬ ಆಂಗ್ಲೇಯ ವಿದ್ವಾಂಸನಿಂದ (ಅಥವಾ ಕತ್ಬರ್ಟ್- Cuthbert ಇರಬಹುದು, ಜ್ಞಾಪಕವಿಲ್ಲ) ಒಂದು ಭಾಷಣ ಮಾಲೆಯನ್ನೇರ್ಪಡಿಸಿತ್ತು. ಅದು ರಂಗಾಚಾರ್ಲು ಸ್ಮಾರಕ ಭವನದಲ್ಲಿ. ಆ ಭಾಷಣ ಮಾಲೆಯ ಕಡೆಯ ದಿನ ನಾನು ಅದಕ್ಕಾಗಿ ಹೋಗಿದ್ದೆ. ಭವನವು ಭರ್ತಿಯಾಗಿತ್ತು. ನಾನು ಹೇಗೆಹೇಗೋ ನುಗ್ಗಿ ಹೋಗಿ ಒಂದು ಕಿಟಕಿಯ ಇಕ್ಕಟ್ಟಿನಲ್ಲಿ ನಿಂತಿದ್ದೆ. ಆಗ ನನಗೆ ಇಂಗ್ಲಿಷ್ ಭಾಷೆಯ ಪರಿಚಯವಾಗಲಿ ಲೌಕಿಕ ಪ್ರಜ್ಞೆಯಾಗಲಿ ಆ ಉಪನ್ಯಾಸವನ್ನು ಗ್ರಹಿಸುವಷ್ಟರದಾಗಿರಲಿಲ್ಲ. ಏನೋ ಹುಡುಗು ಹುಚ್ಚುತನ. ನಾಲ್ಕು ಮಂದಿ ಸ್ನೇಹಿತರು ಹೋದ ಕಡೆಗೆ ನಾನೂ ಹೋದೆ. ಭಾಷಣಕಾರನ ಠೀವಿ, ಅವನ ವಾಕ್ಪ್ರಕಾರ, ಅವನ ಶೈಲಿ-ಇವು ನನಗೆ ಮೆಚ್ಚಿಗೆಯಾದವು. ಬ್ರಿಟಿಷ್ ಸರಕಾರದಿಂದ ಇಂಡಿಯಕ್ಕೆ ದೊರೆತಿರುವ ಮತ್ತು ಇನ್ನೂ

ದೊರೆಯಬಹುದಾದ ಲಾಭಗಳನ್ನು ಆತ ವಿಸ್ತರಿಸಿದ್ದ. ಉಪನ್ಯಾಸ ಮುಗಿದ ಮೇಲೆ ಭಾಷಣಕಾರನಿಗೆ ವಂದನೆ ಹೇಳುವುದಕ್ಕಾಗಿ ಗೊತ್ತಾಗಿದ್ದವರು ಯಾರೋ ಎದ್ದು ನಿಲ್ಲುವುದರಲ್ಲಿದ್ದರು. ಅಷ್ಟರೊಳಗಾಗಿ ಸಭಿಕರಲ್ಲಿ ಯಾರೋ ಒಬ್ಬರು

"Mr Venkatakrishnaiah Please"

ಎಂದು ಕೂಗಿದರು. ಇನ್ನು ಯಾರೋ ಇಬ್ಬರು ಮೂವರು ಅದನ್ನು ಅನುಮೋದಿಸಿ ಕೇಳಿಕೊಂಡರು. ವೆಂಕಟಕೃಷ್ಣಯ್ಯನವರು ಎದ್ದು ನಿಂತು ಹೇಳಿದ್ದರ ಸಾರಾಂಶವೇನೆಂದರೆ- "ಈ ಉಪನ್ಯಾಸಗಳು ಚೆನ್ನಾಗಿದ್ದವು. ಒಳ್ಳೆಯ ಭಾಷೆ, ಒಳ್ಳೆಯ ವಾಗ್ಸರಿ. ನಮ್ಮ ಹುಡುಗರು ಇದನ್ನು ಕಲಿತುಕೊಳ್ಳಬೇಕು. ಭಾಷಣಕಾರರು ಬ್ರಿಟಿಷ್ ಸರಕಾರದಿಂದ ಇಂಡಿಯಕ್ಕೆ ಆಗಿರುವ ಉಪಕಾರಗಳನ್ನು ಕುರಿತು ವಿವರಣೆಕೊಟ್ಟರು. ನಾವೆಲ್ಲ ಸಾಮಾನ್ಯವಾಗಿ ಅದನ್ನು ಒಪ್ಪಿಕೊಂಡವರೇ. ಆದರೆ ಇಂಡಿಯ ದೇಶದ ಜನಕ್ಕೆ ತಾವೂ ಬೆಳೆಯಬೇಕು, ತಮ್ಮ ಶಕ್ತಿಯಿಂದ ತಮ್ಮ ದೇಶದ ಆಡಳಿತಗಳನ್ನು ತಾವೇ ನಡಸಿಕೊಳ್ಳಬೇಕು ಎಂದು ಆಶೆಯಿರುವುದು ಸ್ವಾಭಾವಿಕ ತಾನೆ? ಈ ಬಗೆಗೆ ಬ್ರಿಟಿಷ್ ಸರಕಾರದ ಯೋಚನೆ ಹೇಗಿದೆಯೆಂಬುದನ್ನು ನಮ್ಮ ಉಪನ್ಯಾಸಕರು ವಿವರಿಸಿದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಅವರು ಮತ್ತೊಂದು ಸಾರಿ ಮೈಸೂರಿಗೆ ಬಂದು ಈ ವಿಷಯವನ್ನು ಕುರಿತು ಉಪನ್ಯಾಸ ಕೊಡಲು ಅವಕಾಶವಾದರೆ ಚೆನ್ನಾದೀತು."

ಇದು ಸುಮಾರು ಐದಾರು ನಿಮಿಷಗಳ ಭಾಷಣ. ಸಭೆಯ ನಾಲ್ಕು ಕಡೆಗಳಿಂದಲೂ ವೆಂಕಟಕೃಷ್ಣಯ್ಯನವರ ಭಾಷಣಕ್ಕೆ ಚಪ್ಪಾಳೆಗಳ ಸುರಿಮಳೆ. ಆಮೇಲೆ ಒಂದು ತಿಂಗಳು ಜನಕ್ಕೆ ಅದೇ ಮಾತು. ನಾನು ಹಾಸ್ಟಲಿನಲ್ಲಿ ವಾಸವಾಗಿದ್ದೆ. ಅಲ್ಲಿನ ವಿದ್ಯಾರ್ಥಿಗಳೆಲ್ಲ "ಏನು ಹೊಡೆದರಯ್ಯ!" "ಎಷ್ಟು ಚೆನ್ನಾಗಿ ಗಸ್ತು ಕೊಟ್ಟರಯ್ಯ!" -ಹೀಗೆ ಕೊಂಡಾಟ.

# ಪ್ರಿಂಟಿಂಗ್ ಆಫೀಸು

ಆಗ ನಂಜನಗೂಡಿನಲ್ಲಿ ನನ್ನ ಸ್ವಜನ ಕೆ. ಲಕ್ಷ್ಮೀನಾರಣಪ್ಪನವರು ಮುನ್ಸೀಫರಾಗಿದ್ದರು. ಅವರಿಗೂ ವೆಂಕಟಕೃಷ್ಣಯ್ಯನವರಿಗೂ ತುಂಬ ಗಾಢವಾದ ಸ್ನೇಹ. ಲಕ್ಷ್ಮೀ ನಾರಣಪ್ಪನವರ ಮಗ ಪದ್ಮನಾಭಯ್ಯನೂ ನಾನೂ ಸಹಪಾಠಿಗಳು. ಒಂದೇ ಕೊಠಡಿಯಲ್ಲಿದ್ದೆವು. ನಾವಿಬ್ಬರೂ ವಾರಕ್ಕೊಂದು ಸಲ ವೆಂಕಟಕೃಷ್ಣಯ್ಯನವರನ್ನು ನೋಡಿ ಬರತಕ್ಕದ್ದೆಂದು ವಿಧಾಯಕ ಮಾಡಿದ್ದರು. ಆಗ ವೆಂಕಟಕೃಷ್ಣಯ್ಯನವರು ವಾಸವಾಗಿದ್ದದ್ದು "ಪದ್ಮಾಲಯ" ಎಂಬ ವಿಸ್ತಾರವಾದ ಭವ್ಯವಾದ ಮನೆಯಲ್ಲಿ. ಆ ಮನೆಯ ಹಿಂಭಾಗದಲ್ಲಿ ಪ್ರಿಂಟಿಂಗ್ ಆಫೀಸು. ಅಲ್ಲಿಯೇ "ಮೈಸೂರು ಹೆರಾಲ್ಡ್" ಇಂಗ್ಲಿಷ್ ಪತ್ರಿಕೆಯೂ "ವೃತ್ತಾಂತ ಚಿಂತಾಮಣಿ" ಕನ್ನಡ ಪತ್ರಿಕೆಯೂ ಅಚ್ಚಾಗುತ್ತಿದ್ದದ್ದು. ಒಂದು ನ್ಯೂಸ್ ಪೇಪರ್ ಆಫೀಸು ಎಷ್ಟು ಗಲಿಬಿಲಿಯಾಗಿರುತ್ತದೆ, ಕಾಗದಗಳು ಎಷ್ಟು ಚೆಲ್ಲಾಪಿಲ್ಲಿಯಾಗಿರುತ್ತದೆ, ಅಚ್ಚಿನ ಮಸಿ ಎಲ್ಲೆಲ್ಲಿಯೂ ಹೇಗೆ ಚೆಲ್ಲಿರುತ್ತದೆ-ಎಂಬುದರ ಪರಿಚಯ ನನಗೆ ಮೊದಲು ಆದದ್ದು ಆಗ. ವೆಂಕಟಕೃಷ್ಣಯ್ಯನವರ ವಿಷಯದಲ್ಲಿ ನಮಗೆ ಭಯಭಕ್ತಿಗಳು ಮನಸ್ಸಿನ ತುಂಬ ಇದ್ದವು. ಭಯವಿದ್ದದ್ದರಿಂದ ಸಲಿಗೆಯಿರಲಿಲ್ಲ. ಅವರಿಗೆ ಬಹಳ ಹತ್ತಿರ ನಾನು ಹೋಗಲಿಲ್ಲ; ದೂರದರ್ಶನ, ಅಷ್ಟೆ.

# ವ್ಯಕ್ತಿಗುಣ

ವೆಂಕಟಕೃಷ್ಣಯ್ಯನವರ ಆಕಾರ ನೋಟಕ್ಕೆ ಇಷ್ಟವಾಗುವಂಥಾದ್ದು. ಮೂರ್ತಿ ಎತ್ತರ, ಅದಕ್ಕೆ ತಕ್ಕ ಗಾತ್ರ. ಬಣ್ಣ ಕೊಂಚ ಮಾಸಲು ಬಿಳುಪು. ಪ್ರಸನ್ನವೂ ಗಂಭೀರವೂ ಆದ ಮುಖಭಾವ. ಮುಖ ಉದ್ದುದ್ದವಲ್ಲ, ಗುಂಡು ಗುಂಡೂ ಅಲ್ಲ. ಆದರೂ ಕೆಲವು ಭಾಗಗಳಲ್ಲಿ ದುಂಡಿನ ತೋರಿಕೆ. ಕಣ್ಣುಗಳಲ್ಲಿ ಸೌಮ್ಯಕಾಂತಿ. ಯೌವನದಲ್ಲಿ ಬಹುಶಃ ರೂಪವಂತರಲ್ಲಿ ಗಣನೆಯಾಗುತ್ತಿದ್ದರೆಂದು ನನಗನ್ನಿಸುತ್ತದೆ.

ಅವರು ಭಾಷಣಕಾರರೆಂದು ಹೆಸರಾಗಿದ್ದರೂ ಬಹುಭಾಷಿಯಲ್ಲ, ಮಾತಿನಲ್ಲಿ ಬಹುಮಿತ. ಅವಶ್ಯವಿದ್ದಷ್ಟು ಮಾತ್ರ ಮಾತು. ಅವರಿಗೆ ತಾವು ಮಾತನಾಡುವುದಕ್ಕಿಂತ ಇತರರು ಮಾತನಾಡುವುದನ್ನು ಕೇಳುವುದರಲ್ಲಿ ಹೆಚ್ಚು ಇಷ್ಟವೆಂದು ತೋರುತ್ತದೆ.

ಸ್ನೇಹ ಸಂಭಾಷಣೆಯಲ್ಲಿ ಅವರು ಕಟುಪದಗಳನ್ನು ಉಪಯೋಗಿಸುತ್ತಿರಲಿಲ್ಲ. ಧ್ವನಿ ಎತ್ತಿ ಮಾತನಾಡುತ್ತಿರಲಿಲ್ಲ. ಮಾತೂ ಧ್ವನಿಯೂ ಮೃದುವಾಗಿ ಗಂಭೀರವಾಗಿರುತ್ತಿದ್ದವು.

"ಪುಣ್ಯಾತ್ಮ", "ದೇವರು", "ಮಹಾನುಭಾವ", "ಮಹರಾಯ" –ಇಂಥ ವಿಶೇಷಣ ಪದಗಳು ಅವರಿಗೆ ಬಹುರೂಢಿ. ಅದರಿಂದಲೇ ಎಲ್ಲರನ್ನೂ ಸಂಬೋಧಿಸುವರು. ಅಶ್ಲೀಲ ಪದಗಳನ್ನು ಯಾರಿಗೂ ಪ್ರಯೋಗಿಸಿದ್ದಿಲ್ಲ.

ಅವರಿಗೆ ಕೋಪ ಬರುತ್ತಿದ್ದದ್ದು ಅಪರೂಪ. ಬಂದಾಗ ಅದು ವಿಶೇಷವಾಗಿ ಮುಖಭಾವದಲ್ಲಿ ತೋರುತ್ತಿತ್ತೇ ಹೊರತು ಬಾಯ ಮಾತಿನಲ್ಲಿ ಹೊರಡುತ್ತಿರಲಿಲ್ಲ. ರೇಗುವುದೂ ಕೂಗಾಡುವುದೂ ಬಯ್ಯುವುದೂ ಅವರ ದಾರಿಯಲ್ಲವೆಂದೇ ಹೇಳಬೇಕು.

ಅವರು ಯಾರನ್ನೂ ಅಸಮಾಧಾನಪಡಿಸಲಾರದವರು. ಬೆಂಗಳೂರಿಗೆ ಬಂದಾಗ ಅವರಿಗೆ ನಾಲ್ಕಾರು ಕಡೆ ತಿಂಡಿ ಊಟಗಳ ಅವಾಂತರ. ಲಕ್ಷ್ಮೀನಾರಣಪ್ಪನವರ ಮನೆಯಲ್ಲಿ ಬೆಳಗ್ಗೆ ಉಪಾಹಾರ ಕಾಫಿಗಳನ್ನು ತಪ್ಪಿಸಿಕೊಳ್ಳುವಂತಿಲ್ಲ. ಬಳಿಕ ಎಂ. ಶಾಮರಾಯರ ಮನೆಗೆ ಹೋಗುವರು. ಅಲ್ಲಿ ಕಾಫಿ ಬೇಡವೆಂದರೆ ಅಸಮಾಧಾನವಾದೀತು, ಕುಡಿದ ಶಾಸ್ತ್ರ ಮಾಡುವರು. ಅಲ್ಲಿಂದ ಎಚ್. ವಿ. ನಂಜುಂಡಯ್ಯನವರ ಮನೆಗೆ. ಅಲ್ಲಿ ಊಟಕ್ಕೆಬ್ಬಿಸುವರು. 'ಲಕ್ಷ್ಮೀನಾರಣಪ್ಪ ಕಾದಿರುತ್ತಾರೆ' ಎಂದು ನೆವ ಹೇಳಿದರೆ, ಅವರು 'ಇಲ್ಲಿ ಕೊಂಚ ರುಚಿ ನೋಡಿದರೆ ಸರಿ' ಎನ್ನುವರು. ಅದರಂತೆ ಅಲ್ಲಿ. ಆಮೇಲೆ ಮಧ್ಯಾಹ್ನ

ಲಕ್ಷ್ಮೀನಾರಣಪ್ಪನವರ ಮನೆಗೆ ಬಂದು ಅಲ್ಲಿ ಭೋಜನಕ್ಕೆ ಮುಂಚೆ ಎನಿಮಾ. ಹೀಗೆ ತಾವು ಕಷ್ಟಪಟ್ಟುಕೊಂಡು ಸ್ನೇಹಿತರ ಇಷ್ಟವನ್ನು ನಡಸುವರು. ಅವರು ಎಲ್ಲರಿಗೂ ಎನಿಮಾ ಚಿಕಿತ್ಸೆಯನ್ನು ಉಪದೇಶಿಸುತ್ತಿದ್ದರು. ನನಗೂ ಆ ಉಪದೇಶ ಆಗಿದೆ.

***

ಮತಾಚಾರ ವಿಷಯದಲ್ಲಿ ವೆಂಕಟಕೃಷ್ಣಯ್ಯನವರ ಅಂತರಂಗ ಹೇಗಿತ್ತೆಂಬುದನ್ನು ನಾನರಿಯೆ. ಅವರಿಗೆ ದೃಢವಾದ ಭಗವದ್ಭಕ್ತಿಯಿತ್ತೆಂಬುದನ್ನು ಮಾತ್ರ ನಾನು ಹೇಳಬಲ್ಲೆ. ಅವರು ಯಾವ ಬಾಹ್ಯಾನುಷ್ಠಾನವನ್ನೂ ಇಟ್ಟುಕೊಂಡಿದ್ದಂತೆ ನನಗೆ ತೋರುವುದಿಲ್ಲ. ವಿಭೂತಿ, ಜಪ, ಪೂಜೆ, ಪಾರಾಯಣವ್ರತ, ಶಾಸ್ತ್ರಕರ್ಮ-ಇಂಥಾದ್ದು ಯಾವುದನ್ನೂ ಅವರು ಇಟ್ಟುಕೊಂಡಿದ್ದವರಲ್ಲ. ತಮ್ಮ ಮತ ತಮ್ಮ ಅಂತರಂಗದ್ದು; ಅದನ್ನು ಬಹಿರಂಗದಲ್ಲಿ ಇತರರಿಗಾಗಿ ಪ್ರದರ್ಶನ ಮಾಡಬೇಕಾದದ್ದಿಲ್ಲ-ಎಂದು ಅವರು ನಿಶ್ಚಯ ಮಾಡಿಕೊಂಡಿದ್ದಿರಬೇಕು.

ವಿಶ್ವೇಶ್ವರಯ್ಯನವರು ಮತಪ್ರದರ್ಶನ ಮಾಡಿದವರಲ್ಲ. ಗೋಖಲೆಯವರೂ ಹಾಗೆಯೇ. ಆದರೆ ಅವರು ಯಾರೂ ನಾಸ್ತಿಕರಲ್ಲ; ಆಚಾರ ಅನುಷ್ಠಾನಗಳನ್ನಿಟ್ಟುಕೊಂಡವರನ್ನು ಆಕ್ಷೇಪಿಸಿದವರೂ ಹಾಸ್ಯಮಾಡಿದವರೂ ಅಲ್ಲ.

ವೆಂಕಟಕೃಷ್ಣಯ್ಯನವರ ಅಂತರಂಗವನ್ನು ಸೂಚಿಸುವ ಒಂದು ವಾಕ್ಯವನ್ನು ಅವರು "ವೃತ್ತಾಂತ ಚಿಂತಾಮಣಿ" ಪತ್ರಿಕೆಯ ಮುಖಪತ್ರದ ಮೇಲೆ ವಾರವಾರವೂ ಅಚ್ಚು ಮಾಡಿಸುತ್ತಿದ್ದರು.

> ಶ್ಲೋಕಾರ್ಧೇನ ಪ್ರವಕ್ಷ್ಯಾಮಿ
> ಯದುಕ್ತಂ ಗ್ರಂಥಕೋಟಿಭಿಃ ।
> ಪರೋಪಕಾರಃ ಪುಣ್ಯಾಯ
> ಪಾಪಾಯ ಪರಪೀಡನಮ್ ॥

# ವಾತ್ಸಲ್ಯ

೧೯೦೭ರ ವೇಳೆಗೆ ನನ್ನ ವಿದ್ಯೆ ಪಾರವನ್ನು ಮುಟ್ಟಿತ್ತು. ನಾನು ಬೆಂಗಳೂರಿನಲ್ಲಿ ನಿರುದ್ಯೋಗಿಯಾಗಿ ಅಲೆಯುತ್ತಿದ್ದೆ. ಆ ವರ್ಷ ಸೂರತ್ ಪಟ್ಟಣದಲ್ಲಿ ಕಾಂಗ್ರೆಸ್ ಸಭೆ ಸೇರಿದ್ದು ಸಂಸ್ಥೆ ದ್ವಿಪಕ್ಷವಾಗಿ ಒಡೆದಿತ್ತು: ಅತಿವಾದಿಗಳ ಪಕ್ಷ ಒಂದು, ಮಿತವಾದಿಗಳ ಪಕ್ಷ ಒಂದು. ಆ ಸಂದರ್ಭ ದೇಶದಲ್ಲೆಲ್ಲ ಕಳವಳವನ್ನುಂಟುಮಾಡಿತು. ನಾನು ಒಂದು ಸಾಹಸ ಮಾಡಿದೆ: "ಸಂಯುಕ್ತ ಅಂಡ್ ಯುನೈಟೆಡ್ ಇಂಡಿಯ" ಎಂದು ಇಂಗ್ಲಿಷಿನಲ್ಲಿ ಒಂದು ಲೇಖನ ಬರೆದು ಅದನ್ನು ವೆಂಕಟಕೃಷ್ಣಯ್ಯನವರಲ್ಲಿಗೆ ಕಳುಹಿಸಿದೆ. ಅವರು ಅದನ್ನು ಮೆಚ್ಚಿ ನನಗೆ ಕಾಗದ ಬರೆದದ್ದಲ್ಲದೆ "ಮೈಸೂರು ಹೆರಾಲ್ಡ್" ಪತ್ರಿಕೆಯಲ್ಲಿ ಪ್ರಕಟಪಡಿಸಿದರು. ಅದನ್ನು ಒಂದು ಲಘುಪುಸ್ತಕ (Pamphlet) ರೂಪದಲ್ಲಿ ಪುನರ್ಮುದ್ರಣ ಮಾಡಿಸಿದರು. ಅದು ನನ್ನ ಬಾಲಭಾಷಿತಗಳಲ್ಲಿ ಒಂದು. ಇಲ್ಲಿ ಪ್ರಸ್ತಾವಿಸಿರುವುದರ ಉದ್ದೇಶ ವೆಂಕಟಕೃಷ್ಣಯ್ಯನವರ ವಾತ್ಸಲ್ಯವೆಂಥಾದ್ದೆಂಬುದನ್ನು ತೋರಿಸುವುದಲ್ಲದೆ ಬೇರೆಯಲ್ಲ.

ಪರಗುಣಪರಮಾಣೂನ್ ಪರ್ವತೀಕೃತ...!

ಇದು ಅವರ ಸ್ವಭಾವ.

***

೧೯೦೭ರಲ್ಲಿ ನನ್ನ ತಂಗಿಗೆ ವೈಧವ್ಯ ಪ್ರಾಪ್ತವಾಯಿತು. ಆಗ ಆಕೆ ಸುಮಾರು ಹತ್ತು ವರ್ಷದವಳು. ವೆಂಕಟಕೃಷ್ಣಯ್ಯನವರಿಗೆ ಈ ವರ್ತಮಾನ ಹೇಗೋ ತಿಳಿಯಿತು. ಅವರು ನನಗೆ ಕಾಗದ ಬರೆದು ಸಂತಾಪವನ್ನು ಸೂಚಿಸಿ.

"ನೀನು ಆ ಮಗುವನ್ನು ಇಲ್ಲಿಗೆ ಕರೆದುಕೊಂಡು ಬಾ. ನನ್ನ ಮನೆಯಲಿಟ್ಟುಕೊಂಡು ನಾನು ಸಾಕುತ್ತೇನೆ; ವಿದ್ಯಾಭ್ಯಾಸ ಮಾಡಿಸುತ್ತೇನೆ. ಆಕೆಯನ್ನು ನಿರುತ್ಸಾಹಪಡಿಸಬಾರದು. ಆಕೆ ಸಂತೋಷದ ವಾತಾವರಣದಲ್ಲಿರಬೇಕು. ಇಲ್ಲಿಗೆ ನೀನೇ ಕರೆದುಕೊಂಡು ಬಾ."

-ಎಂದರು. ಆದರೆ ನನ್ನ ತಂದೆತಾಯಿಗಳು ಹಳೆಯ ಕಾಲದವರು; ಪೂರ್ವಾಚಾರ ನಿಷ್ಠರು. ವೆಂಕಟಕೃಷ್ಣಯ್ಯನವರ ಸಲಹೆಯನ್ನು ಅವರು ಅಂಗೀಕರಿಸದೆ ಬಿಟ್ಟಿದ್ದರೂ

ವೆಂಕಟಕೃಷ್ಣಯ್ಯನವರ ಹೃದಯ ಎಂಥಾದ್ದೆಂಬುದನ್ನು ಈ ಪ್ರಸಂಗ ತೋರಿಸುತ್ತದೆ.

# ಜನಸಂಗ್ರಹ

೧೯೦೮ರಲ್ಲಿ ಮೈಸೂರಿನ ವೃತ್ತಪತ್ರಿಕಾವಾಗ್ಬಂಧದ ಕಾನೂನಾಯಿತಷ್ಟೆ? ಅದಕ್ಕೆ ವಿರೋಧ ಪ್ರದರ್ಶನ ಮಾಡಬೇಕೆಂದು ಆಗ ಸಂಸ್ಥಾನದಲ್ಲಿ ನಡೆಯುತ್ತಿದ್ದ ವೃತ್ತ ಪತ್ರಿಕೆಗಳು ಎರಡು ಮೂರರ ವಿನಾ ಎಲ್ಲವೂ ಬಾಗಿಲು ಮುಚ್ಚಿದವು. ಅದರಿಂದ ಸರಕಾರಕ್ಕೇನೂ ನಷ್ಟವಾಗಲಿಲ್ಲ. ಅದು ವಿ.ಪಿ. ಮಾಧವರಾಯರ ಕಾಲ. ಕೆಲಮಂದಿ ದೊಡ್ಡ ಅಧಿಕಾರಿಗಳ ಸಹಾಯ ಪ್ರೋತ್ಸಾಹಗಳಿಂದ ಬೇರೆ ಜನ ಬಂದು ಬೆಂಗಳೂರಿನಲ್ಲಿ ಪತ್ರಿಕೆಗಳನ್ನು ಹೊರಡಿಸಿದರು. “ಮೈಸೂರು ಮೈಲ್” ಎಂಬ ಇಂಗ್ಲಿಷ್ ದಿನಪತ್ರಿಕೆ ಒಂದು. ಅದನ್ನು ನಡಸುತ್ತಿದ್ದಾತ ಷಂಗುಣ್ಣಿ ಮೆನನ್ ಎಂಬ ಮಲೆಯಾಳಿ ದೊಡ್ಡ ಮನುಷ್ಯ. ವೆಂಕಟಕೃಷ್ಣಯ್ಯನವರು ಒಂದು ದಿನ ಮಧ್ಯಾಹ್ನಾನಂತರ ಸುಮಾರು ನಾಲ್ಕು ಘಂಟೆಗೆ ನನ್ನ ಮನೆಗೆ ಬಂದು “ಆತನನ್ನು ಹೋಗಿ ನೋಡೋಣ ಬಾ”, ಎಂದು ಕರೆದರು. ನಾನು ಹೇಳಿದೆ:

“ಆತ ನಮಗೆ ಪ್ರತಿಕಕ್ಷಿಸ್ಥಾನದಲ್ಲಿದ್ದಾನೆ. ಆತನಿಂದ ನಮಗೇನಾದೀತು?”

ಇದಕ್ಕೆ ವೆಂಕಟಕೃಷ್ಣಯ್ಯನವರು ಹೇಳಿದರು.

“ಆತನ ದಾರಿ ಆತ ಹಿಡಿಯಲಿ. ನಮ್ಮ ದಾರಿಯಲ್ಲಿ ನಾವಿರೋಣ. ನಮ್ಮ ಮರ್ಯಾದೆಯನ್ನು ನಾವು ತೋರಿಸಿದ್ದರಿಂದ ಏನೂ ಬಾಧಕವಿಲ್ಲ, ಸಾರ್ವಜನಿಕ ಕಾರ್ಯದಲ್ಲಿರುವವರು ದ್ವೇಷ ಹಠಗಳನ್ನು ಬಹು ದೂರ ತೆಗೆದುಕೊಂಡು ಹೋಗಬಾರದು. ಯಾವುದೋ ಒಂದು ವಿಷಯದಲ್ಲಿ ಅವನ ಸಹಾಯ ನಮಗೆ ಬೇಕಾಗಬಹುದು.”

***

ಆ ದಿನ ನಾವು “ಮೈಸೂರು ಮೈಲ್” ಕಾರ್ಯಾಲಯಕ್ಕೆ ಜಟಕಾದಲ್ಲಿ ಕುಳಿತು ಹೋಗುತ್ತಿದ್ದಾಗ ನಾನು ಹೇಳಿದೆ:

“ದೇಶಕ್ಕಾಗಿ ಸಂತತವಾಗಿ ಕೆಲಸ ಮಾಡುವ ಒಂದು ಸಂಸ್ಥೆ ಅವಶ್ಯ. ಆ ಸಂಸ್ಥೆಯಲ್ಲಿ ದೀಕ್ಷೆತೊಟ್ಟ ಸಮರ್ಥರಾದ ಯುವಜನ ಹತ್ತು ಮಂದಿ ಇರಬೇಕು.”

ಇದಕ್ಕೆ ವೆಂಕಟಕೃಷ್ಣಯ್ಯನವರು

“ನೀವು ಹೇಳುವುದು ಸರಿಯೇ. ಆದರೆ ಆ ಪ್ರಯತ್ನಕ್ಕೆ ಈಗ ಸದ್ಯ ಇರುವ ಪೀಡೆ ತೊಲಗಲಿ. ಆಮೇಲೆ ಸಂಘದ ಯೋಚನೆ ಮಾಡೋಣ.”

ವೆಂಕಟಕೃಷ್ಣಯ್ಯನವರಿಗೆ ಪತ್ರಿಕಾಲೇಖನ ಅನ್ನೋದಕಗಳಂತೆ ಇತ್ತು. ಒಂದೆರಡು ಆರ್ಟಿಕಲ್ಲುಗಳನ್ನಾದರೂ ಬರೆಯದಿದ್ದರೆ ಅವರಿಗೆ ಊಟ ರುಚಿಸದು, ನಿದ್ರೆ ಬಾರದು. ಅವರು ತಮ್ಮ ಪತ್ರಿಕೆಗಳನ್ನು ನಿಲ್ಲಿಸಿದ ಮೇಲೆ “ಮೈಸೂರು ಪೇಟ್ರಿಯಟ್”, “ಸಾಧ್ವಿ” ಈ ವಾರಪತ್ರಿಕೆಗಳನ್ನು ಹೊರಡಿಸಿದ್ದಲ್ಲದೆ “ಸಂಪದಭ್ಯುದಯ” ಎಂಬ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಗಳ ಚರಿತ್ರೆಯನ್ನು ಬರೆಯಲು ನನಗಿಂತ ಸಮರ್ಥರಾದ ಬೇರೆ ಸ್ನೇಹಿತರಿದ್ದಾರೆ. ‘ವೃತ್ತಾಂತ ಚಿಂತಾಮಣಿ’ ಯ ಕಾಲದ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ.

# “ಆಟೀನ್ ರಾಜಾ”

ವೆಂಕಟಕೃಷ್ಣಯ್ಯನವರದು ತಮ್ಮ ದಿನದ ಕೆಲಸಗಳೆಲ್ಲ ಮುಗಿದ ಬಳಿಕ ರಾತ್ರಿ ಒಂಭತ್ತು ಘಂಟೆಯ ಸುಮಾರಿನಲ್ಲಿ ಪದ್ಮಾಲಯದ ಮುಂದುಗಡೆಯ ಹಾಲಿನಲ್ಲಿ ಒಬ್ಬರೆ ಕುಳಿತು ಕೊಂಚ ಹೊತ್ತು ನಿಶ್ಶಬ್ದವಾದ ವಾತಾವರಣದಲ್ಲಿರುವುದು ಪದ್ಧತಿ. ಆಗ ಯಾರೂ ಅಲ್ಲಿಗೆ ಬರುತ್ತಿರಲಿಲ್ಲ. ಅವರು ಒಬ್ಬರೇ ಕುಳಿತು ನಿಶ್ಚಿಂತೆಯಿಂದ ಧ್ಯಾನ ಮನನಗಳಲ್ಲಿ ಇರುತ್ತಿದ್ದರು. ಇಂಥ ಒಂದು ರಾತ್ರಿ ಒಬ್ಬ ಭೇಟಿಗಾರರು ಬಂದು ಮುಂಬಾಗಿಲು ತಟ್ಟಿದ ಮೇಲೆ ವೆಂಕಟಕೃಷ್ಣಯ್ಯನವರು ಕೂಗಿ ಕೇಳಿದರು:

“ಯಾರೋ ಅದು?”

“ನಾನ್‌ದಾ ಸಾರ್, ಆಟೀನ್ ರಾಜಾ.”

ವೆಂಕಟಕೃಷ್ಣಯ್ಯನವರು ಎದ್ದು ಹೋಗಿ ಬಾಗಿಲು ತೆಗೆದು ನೋಡಿದರು. ಬಂದಿದ್ದವರು ಆಗಿನ ಪೊಲೀಸ್ ಸೂಪರಿಂಟೆಂಡೆಂಟರು. ಅವರ ಹೆಸರು ಕೆ. ಶ್ರೀನಿವಾಸರಾವ್ ಎಂದೊ, ಏನೋ. ತಮ್ಮ ಮಾತಿನ ವಿವರಣೆಗಳನ್ನು ಅವರೇ ಕೊಟ್ಟರು-ತಮಿಳುಗನ್ನಡದಲ್ಲಿ. ಇದು ಕೊಯಮತ್ತೂರು ಕುಂಭಕೋಣಗಳ ಕನ್ನಡಿಗಳ ಭಾಷೆ.

“ನಾನು ಓದಿದೆ ಸಾರ್ ತಮ್ಮ ಪೇಪರಿನಲ್ಲಿ-ವಿಧುರನ ವಿಲಾಪಗಳನ್ನು (Woes of Widower). ಭೋ ಛಂದಾಗಿ ಬರೆದಿದ್ದಾರು. ನಾ ಏನು ಮಾಡಲಿ ಸಾರ್? ಆಟೀನ್ ರಾಜಾ ಅಂತ ಕರೆದಿದ್ದಾರೆ ನನ್ನ. ದೇವರು ನನ್ನ ಹಾಗೆ ಮಾಡಿಧಾನ....”

ಹೇಳುವವರು ಕೇಳುವವರು ಇಬ್ಬರೂ ನಗುತ್ತಿದ್ದರು. ಆ ಅಸಾಮಿ ಒಳ್ಳೆಯ ರಸಿಕ, ಹಣವಂತ, ಧೈರ್ಯಶಾಲಿ, ಮತ್ತು ಸರಕಾರದಲ್ಲಿ ಪ್ರತಿಷ್ಠೆಯುಳ್ಳವನು, ಆತ ಲಂಚಕೋರನಲ್ಲ; ಇತರರಿಂದ ಹಣಕಾಸು ಅಪೇಕ್ಷಿಸಿದವನಲ್ಲ. ಆದರೆ ರಸಿಕ.

# ಮನಸ್ತಾಪ

ಪದ್ಮಾಲಯದ ಎದುರುಮನೆ ಕುಮಾರಭವನ-ದಿವಾನ್ ಸರ್.ಕೆ. ಶೇಷಾದ್ರ್ಯಯ್ಯರ್ರವರ ವಾಸಗೃಹ. ಶೇಷಾದ್ರ್ಯಯ್ಯರವರನ್ನು ನೋಡಲಿಕ್ಕಾಗಿ ಪರದೇಶಗಳಿಂದ ಗಣ್ಯ ಜನರು ಆಗಾಗ ಬರುತ್ತಿದ್ದರು. ಶೇಷಾದ್ರ್ಯಯ್ಯರ್ರವರು ಬಂದವರೊಡನೆ ಮಾತುಕಥೆ ನಡೆಸುತ್ತಿದ್ದಾಗ ಬಂದವರು "ಈ ಊರಿನಲ್ಲಿ ನಾವು ನೋಡಬೇಕಾದದ್ದು ಏನೇನಿದೆ?" ಎಂದು ವಿಚಾರಿಸುವರು. ಶೇಷಾದ್ರ್ಯಯ್ಯರ್ರವರು "ಎದುರುಮನೆಯಲ್ಲಿದ್ದಾರೆ ನನ್ನ ಪ್ರತಿಕಕ್ಷಿ. ಅವರನ್ನು ನೀವು ನೋಡಬೇಕಾದದ್ದು. ಆತ ಹರ್ಬರ್ಟ್ ಸ್ಪೆನ್ಸರ್ ತಾತ್ತ್ವಿಕನು ಬರೆದಿರುವ ಎಲ್ಲ ಗ್ರಂಥಗಳನ್ನೂ ವ್ಯಾಸಂಗ ಮಾಡಿದ್ದಾರೆ-ಒಂದು ಚೂರು ಬಿಡದೆ. ಸ್ಪೆನ್ಸರ್ ಸಾಹಿತ್ಯಕ್ಕೆ ಅಧಿಕಾರಿಗಳಾಗಿದ್ದಾರೆ. ಆತ ವಿಚಾರಶೀಲ; ಮತ್ತು ಪ್ರಾಮಾಣಿಕ" -ಎಂದು ಹೇಳಿ ವೆಂಕಟಕೃಷ್ಣಯ್ಯನವರನ್ನು ಮೆಚ್ಚಿಕೊಳ್ಳುತ್ತಿದ್ದರು.

೧೮೯೪ರಲ್ಲಿ ಮಹಾರಾಜ ಚಾಮರಾಜ ಒಡೆಯರವರು ದೈವಾಧೀನರಾದ ಬಳಿಕ ರಾಜ್ಯವನ್ನು ಯಾರು ಹೇಗೆ ನಿರ್ವಹಿಸತಕ್ಕದ್ದೆಂಬ ಪ್ರಶ್ನೆ ಎದ್ದಿತ್ತು. ಸರ್. ಕೆ. ಶೇಷಾದ್ರ್ಯಯ್ಯರವರು ತಾವೇ (ರೀಜೆಂಟ್) ರಾಜಪ್ರತಿನಿಧಿಯಾಗಬೇಕೆಂಬ ಉದ್ದೇಶವಿಟ್ಟುಕೊಂಡಿದ್ದರೆಂದೂ ಅದಕ್ಕಾಗಿ ಇಂಡಿಯ ಸರಕಾರದೊಡನೆ ತರದೂದು ನಡಸುತ್ತಿದ್ದರೆಂದೂ ಒಂದು ಜನಪ್ರವಾದ ಹೊರಟಿತ್ತು. ರಾಜ್ಯವ್ಯವಸ್ಥೆ ಹಾಗಾಗತಕ್ಕದ್ದಲ್ಲವೆಂದೂ, ಮಹಾರಾಣಿ ವಾಣೀವಿಲಾಸ ಸನ್ನಿಧಾನದವರೇ ರಾಜಪ್ರತಿನಿಧಿಯಾಗಿ ನಿಯಮಿಸಲ್ಪಡಬೇಕೆಂದೂ, ದಿವಾನರು ಆಕೆಗೆ ಅಧೀನರಾಗಿರತಕ್ಕದ್ದೆಂದೂ ಇನ್ನೊಂದು ಅಭಿಪ್ರಾಯ ಹೊರಟಿತು. ಈ ಎರಡನೆಯ ಅಭಿಪ್ರಾಯಕ್ಕೆ ಮುಂದಾಳಾದವರು ವೆಂಕಟಕೃಷ್ಣಯ್ಯನವರು. ಹೀಗೆ ಶೇಷಾದ್ರ್ಯಯ್ಯರವರಿಗೂ ವೆಂಕಟಕೃಷ್ಣಯ್ಯನವರಿಗೂ ಮನಸ್ತಾಪ ಪ್ರಾರಂಭವಾಯಿತು.

ವೆಂಕಟಕೃಷ್ಣಯ್ಯನವರು ದಿವಾನ್ ರಂಗಾಚಾರ್ಲುರವರ ಇಷ್ಟ ಶಿಷ್ಯರು. ರಂಗಾಚಾರ್ಲುರವರು ಯಾವ ಬ್ರಿಟಿಷ್ ತಾತ್ತ್ವಿಕ ಗ್ರಂಥಗಳಿಂದ ರಾಜಕೀಯ ಭಾವನೆಗಳನ್ನು ಸಂಪಾದಿಸಿಕೊಂಡಿದ್ದರೋ ಆ ಗ್ರಂಥಗಳನ್ನು ವೆಂಕಟಕೃಷ್ಣಯ್ಯನವರೂ ಚೆನ್ನಾಗಿ ನೋಡಿದ್ದರು. ರಂಗಾಚಾರ್ಲುರವರ ಪ್ರಾಮಾಣಿಕತೆಯೂ ಚಾರಿತ್ರವೂ ರಾಜ್ಯತಂತ್ರ ದೂರ ದೃಷ್ಟಿಯೂ ವೆಂಕಟಕೃಷ್ಣಯ್ಯನವರ ಮನಸ್ಸನ್ನು ಪಟ್ಟಾಗಿ ಹಿಡಿದಿದ್ದವು. ರಂಗಾಚಾರ್ಲು ಸ್ಥಾಪನೆ ಮಾಡಿದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಅದರ ನಾಲ್ಕನೆಯ

ಅಥವಾ ಐದನೆಯ ಅಧಿವೇಶನದಿಂದ ವೆಂಕಟಕೃಷ್ಣಯ್ಯನವರು ಸದಸ್ಯರಾಗಿದ್ದರು. ಆಗ ಪ್ರಾರಂಭವಾದ ಸದಸ್ಯತ್ವವನ್ನು ಅವರು ಯಾವಜ್ಜೀವವೂ ಶ್ರದ್ಧೆಯಿಂದ ಉಳಿಸಿಕೊಂಡಿದ್ದರು. ಶೇಷಾದ್ರಯ್ಯರ್ರವರಿಗಾದರೋ ಪ್ರಜಾಪ್ರತಿನಿಧಿ ಸಭೆಯ ವಿಷಯದಲ್ಲಿ ಅಷ್ಟು ಹೆಚ್ಚಿನ ಅಭಿಮಾನವಿರಲಿಲ್ಲ. ಆಡಳಿತದ ಕಾರ್ಯಗಳು ಬೇಗಬೇಗನೆಯೂ ನಿರಾತಂಕವಾಗಿಯೂ ನಡೆಯಲು ಸಭೆಯಿಂದ ಅಡ್ಡಿಯೆಂದು ಶೇಷಾದ್ರಯ್ಯರ್ರವರ ಅಭಿಪ್ರಾಯ. ರಾಜ್ಯದ ರಥಕ್ಕೆ ಪ್ರಜಾಸಭೆಯು ಹೆದ್ದಡಂತೆ ಆಗುತ್ತದೆಂದು ಕಾರ್ಯತತ್ಪರರಾದ ರಾಜ್ಯ ನಿರ್ವಾಹಕರು ಭಾವಿಸಿರುತ್ತಾರೆ. ಹೀಗೂ ವೆಂಕಟಕೃಷ್ಣಯ್ಯನವರ ಮನೋಗತಕ್ಕೂ ಶೇಷಾದ್ರಯ್ಯರ್ರವರ ಮನೋಗತಕ್ಕೂ ವಿರೋಧ ಅನಿವಾರ್ಯವಾಯಿತು.

ವೆಂಕಟಕೃಷ್ಣಯ್ಯನವರು ತಮ್ಮ ಪತ್ರಿಕಾಲೇಖನಗಳಲ್ಲಿ ಶೇಷಾದ್ರಯ್ಯರ್ರವರ ಆಡಳಿತದ ನ್ಯೂನತೆಗಳನ್ನು ನಿಸ್ಸಂಕೋಚವಾಗಿ ಎತ್ತಿಹಾಕುತ್ತ ಬಂದರು. ಇದರ ಘಾಟು ಶೇಷಾದ್ರಯ್ಯರ್ರವರಿಗೆ ಸಹಿಸಲಾಗದಷ್ಟು ಕಟುವಾಯಿತು.

# ಪ್ರಜಾಪ್ರತಿನಿಧಿಸಭೆಯಲ್ಲಿ

ಒಂದು ಸಾರಿ ಪ್ರಜಾಪ್ರತಿನಿಧಿಸಭೆಯಲ್ಲಿ ವೆಂಕಟಕೃಷ್ಣಯ್ಯನವರ ಮುಂದಾಳುತನದಲ್ಲಿ ಕೆಲಮಂದಿ ಸದಸ್ಯರು ಸೇರಿ ಸರಕಾರಕ್ಕೆ ಒಂದು ಮನವೆ ಮಾಡಿದರು. ಸಭೆ ಹನ್ನೆರಡು ತಿಂಗಳಿಗೆ ಒಂದು ಸಲ ಸೇರುತ್ತದೆ. ಪ್ರಜಾಪರವಾದ ವಿಚಾರಣೆ ಮೇಲ್ತನಿಖೆಗಳಿಗೆ ಅಷ್ಟು ಸಾಲದು. ಪ್ರಜಾಪ್ರತಿನಿಧಿಗಳು ಒಂದು ಸಾರಿ ಸಭೆ ಸೇರಿ ಆದ ಬಳಿಕ ಇನ್ನೊಂದು ಸಾರಿ ಸೇರುವಷ್ಟರೊಳಗಾಗಿ ಸರಕಾರದ ಕಾರುಬಾರುಗಳನ್ನು ಪ್ರಜಾಸಭೆಯ ದೃಷ್ಟಿಯಿಂದ ವಿಮರ್ಶನೆ ಮಾಡುವುದಕ್ಕೂ ಹೊಸಹೊಸ ಕಾನೂನು ಕಟ್ಟುಪಾಡುಗಳನ್ನು ಪರಿಶೀಲಿಸಿ ಸೂಚನೆ ಕೊಡುವುದಕ್ಕೂ ಒಂದು ಸ್ಥಾಯೀ ಸಮಿತಿಯನ್ನು (Standing Committee) ಸರಕಾರವು ರಚಿಸಿ ಅದಕ್ಕೆ ತಕ್ಕ ಅಧಿಕಾರ ಕೊಡಬೇಕು. ಇದು ಆ ಮನವೆಯ ಸಾರಾಂಶ. ಸರಕಾರವು ಇದಕ್ಕೆ ಲಕ್ಷ್ಯ ಕೊಡಲಿಲ್ಲ. ಮನವೆ ಮಾಡಿದವರಲ್ಲಿ ಯೂರೋಪಿಯನ್ ಪ್ಲ್ಯಾಂಟರುಗಳಾದ ಕ್ರಾಫರ್ಡ್ ಮೊದಲಾದವರೂ ಇದ್ದರು. ಮನವೆದಾರರ ಪರವಾಗಿ ಸರಕಾರಕ್ಕೆ ಜ್ಞಾಪಕ ಪತ್ರಗಳನ್ನೂ ಬರೆದದ್ದಾಯಿತು. ಸರಕಾರ ಅದನ್ನು ಗಮನಿಸಲಿಲ್ಲ. ಅನಂತರ ಮನವೆದಾರರು ತಮ್ಮ ಸಹಸದಸ್ಯರ ಸಭೆಯೊಂದನ್ನು ಕರೆದು ಆ ಸಭೆ ತಾನೇ ಒಂದು ಸ್ಥಾಯೀ ಸಮಿತಿಯನ್ನು ನಿಯಮಿಸುವಂತೆ ಮಾಡಿದರು. ಹೀಗೆ ನಿಯಮಿತವಾದ ಸಮಿತಿಯ ಪರವಾಗಿ ಅದನ್ನು ಸರಕಾರ ಅಂಗೀಕರಿಸಿ ಮನ್ನಿಸಬೇಕೆಂದು ಪತ್ರ ಬರೆದದ್ದಾಯಿತು. ಅದಕ್ಕೂ ಜವಾಬು ಬರಲಿಲ್ಲ. ಅಲ್ಲಿಂದ ಮುಂದೆ ನಡೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಸಮಿತಿಯ ವಿಚಾರವನ್ನು ಸದಸ್ಯರು ಎತ್ತಿದರು. ಸಭಾಧ್ಯಕ್ಷರಾದ ದಿವಾನ ಶೇಷಾದ್ರಯ್ಯರ್ರವರಿಗೆ ಕೋಪ ಬಂದಿತು. ಮಾತುಗಳು ಎರಡು ಕಡೆಯೂ ಬಿಸಿಬಿಸಿಯಾದವು. ವೆಂಕಟಕೃಷ್ಣಯ್ಯನವರು ಕೇಳಿದರು:

V: “What about that Committee?”

S: “That Committee is burnt.”

V: “Many members of it do not burn their bodies.”

S: “Then it is buried.”

V: “Its ghosts will be raised.”

ಹೀಗೆ ನಡೆಯಿತು ಕೋಲಾಹಲ.

# ಶೇಷಾದ್ರಯ್ಯರ್ರವರ ದೊಡ್ಡತನ

ಆದರೆ ಶೇಷಾದ್ರಯರ್ರವರು ವ್ಯಕ್ತಿಶಃ ದೊಡ್ಡಮನುಷ್ಯರು. ರಾಜಕೀಯ ರಂಗದ ಸ್ನೇಹ-ವಿರೋಧಗಳನ್ನು ವೈಯಕ್ತಿಕ ಕ್ಷೇತ್ರಕ್ಕೆ ತರುತ್ತಿರಲಿಲ್ಲ. ವೈಯಕ್ತಿಕ ಕ್ಷೇತ್ರದಲ್ಲಿ ಅವರು ವೆಂಕಟಕೃಷ್ಣಯ್ಯನವರ ದೊಡ್ಡತನವನ್ನು ಮನಸಾರ ಒಪ್ಪಿಕೊಂಡಿದ್ದರು. ಶೇಷಾದ್ರಯ್ಯರ್ರವರ ಮಕ್ಕಳಲ್ಲಿ ಇಬ್ಬರು ಮೂವರು ವೆಂಕಟಕೃಷ್ಣಯ್ಯನವರ ಖಾಸಾ ಶಿಷ್ಯರು. ಕೃಷ್ಣಯ್ಯರ್ರವರು ಡೆಪ್ಯುಟಿ ಕಮಿಷನರಾಗಿದ್ದಾಗ ವೆಂಕಟಕೃಷ್ಣಯ್ಯನವರು ಮಾಡಿದ ಶಿಫಾರಸುಗಳಿಗೆಲ್ಲ ಗೌರವ ಕೊಟ್ಟು ನಡಸಿದರು.

ವೆಂಕಟಕೃಷ್ಣಯ್ಯನವರು ಶಿಫಾರಸುಪತ್ರ ಕೊಡುವುದರಲ್ಲಿ ನಿಸ್ಸೀಮರು. ಯಾರಿಗೆ ಏನು ಬೇಕಾದರೂ ಬರೆದುಕೊಡುವರು. ಬೇಕೆಂದು ಕೇಳಿದವನಿಗೆ ಇಲ್ಲವೆಂದದ್ದೇ ಇಲ್ಲ. ಹೀಗೆ ಅಯೋಗ್ಯರು ಮುಂದೆ ಬಂದ ಸಂದರ್ಭಗಳೂ ಎಷ್ಟೋ ಉಂಟು.

# ಅವಿಚಾರದ ಶಿಫಾರಸು

ಒಂದಾನೊಂದು ಇಲಾಖೆಯ ಒಬ್ಬ ಭಾರಿ ಉದ್ಯೋಗಸ್ಥರು ಯಾವುದೋ ಅಕಾರ್ಯ ನಡಸಿದ್ದರೆಂದು ಅವರ ಮೇಲೆ ದೂರು ಬಂದು ಅದರ ವಿಚಾರಣೆಯಾದ ಅನಂತರ ಆ ಅಧಿಕಾರಿಯನ್ನು ನಿರ್ಬಂಧವಾಗಿ ನಿವೃತ್ತಿ ಮಾಡಿಸಲಾಯಿತು. ಆ ಅಧಿಕಾರಿ ವೆಂಕಟಕೃಷ್ಣಯ್ಯನವರಲ್ಲಿ ಮರೆಹೊಕ್ಕ. ಆತನಿಂದ ಆಗಿದ್ದ ಅನ್ಯಾಯವೆಂದು ಹೇಳಲಾದ ದೂರು ಸತ್ಯವಲ್ಲವೆಂದೂ ಆ ಅಧಿಕಾರಿ ಪರಮ ಪ್ರಾಮಾಣಿಕನೆಂದೂ ಸತ್ಯಸಂಧನೆಂದೂ ಭಗವದ್ಭಕ್ತನೆಂದೂ ಮಹಾನಿಃಸ್ಪೃಹನೆಂದೂ ದಿನದಿನವೂ ಲೇಖನಗಳು ಆರಂಭವಾದವು. ಬಹುದಿನ ಹೀಗೆ ನಡೆಯಿತು. ಅದರಿಂದ ಏನೂ ಫಲವಾದಂತೆ ತೋರಲಿಲ್ಲ. ಆಮೇಲೆ ವೆಂಕಟಕೃಷ್ಣಯ್ಯನವರು ಆ ಅಧಿಕಾರಿಯನ್ನು ಕುರಿತು ಪ್ರಶಂಸೆ ಮಾಡಿ ಒಂದು ಪತ್ರವನ್ನು ದಿವಾನ್ ವಿಶ್ವೇಶ್ವರಯ್ಯನವರಿಗೆ ಕಳಿಸಿದರು. ದಿವಾನರು ಪ್ರತ್ಯುತ್ತರ ಬರೆದು ವೆಂಕಟಕೃಷ್ಣಯ್ಯನವರನ್ನು ಮುಖತಃ ನೋಡುವಂತೆ ಆಹ್ವಾನಿಸಿದರು. ಅಂದು ವೆಂಕಟಕೃಷ್ಣಯ್ಯನವರ ಜೊತೆಯಲ್ಲಿ ನಾನೂ ಹೋಗಿದ್ದೆ. ವಿಶ್ವೇಶ್ವರಯ್ಯನವರು ಕುಶಲಪ್ರಶ್ನೆಗಳಾದ ಮೇಲೆ ಒಂದು ಕಾಗದದ ಕಟ್ಟನ್ನು (File) ವೆಂಕಟಕೃಷ್ಣಯ್ಯನವರ ಕೈಗೆಕೊಟ್ಟು ಅದನ್ನು ನೋಡಬೇಕೆಂದರು. ವೆಂಕಟಕೃಷ್ಣಯ್ಯನವರು ಅದನ್ನೆಲ್ಲ ಸಾವಧಾನವಾಗಿ ಓದಿ ಕಾಗದದ ಕಟ್ಟನ್ನು ಮೇಜಿನ ಮೇಲಿಟ್ಟು,

“ನೋಡಿದಿರಾ! ಆತ ಇದನ್ನೆಲ್ಲ ನನಗೆ ಹೇಳಲೇ ಇಲ್ಲವಲ್ಲ! ಏನೇನೋ ಮಾಡಿಕೊಂಡಿದ್ದಾನಲ್ಲ!”

-ಎಂದರು. ವಿಶ್ವೇಶ್ವರಯ್ಯನವರು ಹೇಳಿದರು:

“ನೋಡಿ. ನೀವು ಪೇಪರುಗಳಲ್ಲಿ ಬರೆದು ನನಗೆ ಕಾಗದ ಕಳಿಸಿ ಇಷ್ಟೆಲ್ಲ ರಗಳೆ ಮಾಡಿದಿರಿ. ನಿಮ್ಮ ಕೈಗೆ ನಾನು ಕೊಟ್ಟದ್ದು ಒಂದು ಸಮಿತಿಯವರ ರಿಪೋರ್ಟು. ಆ ಸಮಿತಿಯ ಮೆಂಬರುಗಳಿಗಿಂತ ಸತ್ಯಸಂಧರೂ ಸಮರ್ಥರೂ ಆದ ದೊಡ್ಡ ಮನುಷ್ಯರನ್ನು ನಾನು ಎಲ್ಲಿಯೂ ಕಂಡಿಲ್ಲ. ನೀವು ಅದನ್ನು ಅಂಗೀಕರಿಸುತ್ತೀರಷ್ಟೆ?”

ವೆಂಕಟಕೃಷ್ಣಯ್ಯನವರು: “ಇಲ್ಲದೆ ಉಂಟೆ? ಅವರೆಲ್ಲ ಸತ್ಯಸಂಧರು. ನಿಃಸ್ಪೃಹರಾದವರು.”

ವಿಶ್ವೇಶ್ವರಯ್ಯನವರು: “ನಿಮ್ಮ ಸ್ನೇಹಿತರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ನಿಮಗಾಗಿ ಆ ಪ್ರಾಸಿಕ್ಯೂಷನ್ ಕ್ರಮವನ್ನು ನಾನು ತಡೆದಿದ್ದೇನೆ. ಇನ್ನು ಮೇಲೆ ಆ ಮನುಷ್ಯನ ವಿಷಯ ರಗಳೆ ಮಾಡಿದರೆ ಪ್ರಾಸಿಕ್ಯೂಷನ್ ಮಾಡಿಸಿ ಕೋರ್ಟಿನವರು ಸತ್ಯಾಂಶವನ್ನು ಹೊರಗೆ ಹಾಕುವಂತೆ ಮಾಡಬೇಕಾಗುತ್ತದೆ.”

ವೆಂಕಟಕೃಷ್ಣಯ್ಯನವರು ಆ ಮನುಷ್ಯನನ್ನು ಒಳ್ಳೆಯ ಮಾತುಗಳಲ್ಲಿ ಶಪಿಸುತ್ತ, ನಗುತ್ತ ಹೊರಕ್ಕೆ ಬಂದರು. ಪ್ರೊ ॥ ವೆಂಕಟನಾರಣಪ್ಪನವರಂತೆ ವೆಂಕಟಕೃಷ್ಣಯ್ಯನವರೂ ಮೊದಲು ನಂಬುವುದು; ಮನುಷ್ಯ ಅಯೋಗ್ಯನೆಂದು ಗೊತ್ತಾದ ಮೇಲೆ “ಎಂಥ Clever rascal!” ಎಂದು ಶ್ಲಾಘನೆ ಮಾಡುವುದು ಪದ್ಧತಿ.

# ಬರವಣಿಗೆ

ವೆಂಕಟಕೃಷ್ಣಯ್ಯನವರು ಒಳ್ಳೆಯ ವಿದ್ವಾಂಸರು. ಆದರೆ ವಿದ್ವತ್ತೆಯನ್ನು ಎಂದೂ ಪ್ರಕಾಶಪಡಿಸಿದವರಲ್ಲ. ಅವರು ಸಂಸ್ಕೃತ ಸಾಹಿತ್ಯದಲ್ಲಿ ಚೆನ್ನಾಗಿ ಪರಿಶ್ರಮ ಮಾಡಿದ್ದರು. ಅವರ ಇಂಗ್ಲಿಷಂತೂ ವೀರ್ಯವತ್ತಾದದ್ದು, ಮತ್ತು ಗಂಭೀರವಾದದ್ದು. ಅವರ ಕನ್ನಡ ಸರಳತೆಗೂ ಲಾಲಿತ್ಯಕ್ಕೂ ಓಜಸ್ಸಿಗೂ ಆದರ್ಶಪ್ರಾಯವಾದದ್ದು. ಅವರ ಕನ್ನಡ ಗ್ರಂಥಗಳಲ್ಲಿ ನಮ್ಮ ಲಕ್ಷ್ಮೀನಾರಣಪ್ಪನವರು ಎರಡನ್ನು ಪದೇ ಪದೇ ಉದಾಹರಿಸುತ್ತಿದ್ದರು: ಒಂದು "ಧನಾರ್ಜನೆಯ ಕ್ರಮ" ; ಇನ್ನೊಂದು "ಚೋರಗ್ರಹಣ ತಂತ್ರ." ಈ ಮಾತನ್ನು ಲಕ್ಷ್ಮೀನಾರಣಪ್ಪನವರು ವೆಂಕಟಕೃಷ್ಣಯ್ಯನವರ ಎದುರಿಗೇ, ಅವರ ಮುಖಕ್ಕೆ ತಿಕ್ಕಿದಂತೆ ಹೇಳುವರು; ವೆಂಕಟಕೃಷ್ಣಯ್ಯನವರು ತಾವೂ ಮನಸಾರ ನಗುವರು.

"ಧನಾರ್ಜನೆಯ ಕ್ರಮ ತಿಳಿದವರು ನ್ಯೂಸ್ ಪೇಪರ್ ಕೆಲಸಕ್ಕೆ ಬರುವುದಿಲ್ಲ" - ಎಂಬುದು ಲಕ್ಷ್ಮೀನಾರಣಪ್ಪನವರ ಮೊದಲನೆಯ ಟೀಕೆ. "ನಿಮ್ಮ ಕ್ರಮದಲ್ಲಿ ಧನಾರ್ಜನೆ ಮಾಡ ಹೊರಟರೆ ಪದ್ಮಾಲಯವನ್ನು ಮಾರಬೇಕಾಗಿ ಬಂದದ್ದೇ ಅದಕ್ಕೆ ದೃಷ್ಟಾಂತ."

"ಇನ್ನು ಚೋರಗ್ರಹಣ ತಂತ್ರ. ನಿಮಗೆ ಮನಿ ಆರ್ಡರು ಬರುತ್ತದಲ್ಲ ಚಂದಾ ಹಣ- ನೀವು ಆಗ ಕೂಪನ್ನಿಗೆ ರುಜುಹಾಕಿದ್ದೀರಲ್ಲ-ಎಂದಾದರೂ ಹಣ ಎಣಿಸಿದ್ದೀರಾ?"

ಅವರ ಚೋರಗ್ರಹಣ ತಂತ್ರವು ಅವರ ಧನಾರ್ಜನೆಯ ಕ್ರಮಕ್ಕೆ ಸಹಕಾರಿಯಾಗಿದ್ದಿತು. ಅವರ ಪತ್ರಿಕೆಯ ಆಫೀಸಿನಲ್ಲಿಯೇ ಚೋರರಿದ್ದಿದ್ದು ಎಲ್ಲ ಕೆಲಸಗಾರರಿಗೂ ಗೊತ್ತಿತ್ತು. ಮನಿ ಆರ್ಡರುಗಳು ಬಂದಾಗ, ಯಾರು ಹತ್ತಿರವಿದ್ದರೆ ಅವರು ಹಣವನ್ನು ಸ್ವಾಯತ್ತ ಮಾಡಿಕೊಳ್ಳುವರು. ಅವರ ಮನೆಗೂ ಆಫೀಸಿಗೂ ಸ್ಕೂಲಿಗೂ ಸಾಮಾನುಗಳನ್ನು ತರುವ ಜನರಲ್ಲಿಯೂ ಅವರು ಕೊಟ್ಟ ಹಣವನ್ನು ತಲಪಿಸುವವರಲ್ಲಿಯೂ ಚೌರ್ಯ ದಿನೇ ದಿನೇ ನಡೆಯುತ್ತಿತ್ತು. ಅದು ಎಲ್ಲರಿಗೂ ಗೊತ್ತಿತ್ತು-ವೆಂಕಟಕೃಷ್ಣಯ್ಯನವರ ವಿನಾ. ಅವರು ಆ ಚೋರರನ್ನು "ಏನೋ ಪುಣ್ಯಾತ್ಮ" "ಏನೋ ಮಹನೀಯ" ಎಂದು ಕರೆಯುವುದನ್ನು ಮಾತ್ರ ನಿಲ್ಲಿಸಲೇ ಇಲ್ಲ.

# ಧನಾರ್ಜನೆಯ ಕ್ರಮ

ಲಕ್ಷ್ಮೀನಾರಣಪ್ಪನವರು ಒಂದು ಜಾಗರೂಕತೆಯನ್ನು ಪದ್ಧತಿಯಲ್ಲಿಟ್ಟುಕೊಂಡಿದ್ದರು. ವೆಂಕಟಕೃಷ್ಣಯ್ಯನವರು ಯಾವಾಗ ಬೆಂಗಳೂರಿಗೆ ಬಂದರೂ ಲಕ್ಷ್ಮೀನಾರಣಪ್ಪನವರ ಮನೆಯಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಅವರು ವಾಪಸ್ ಹೊರಟಾಗ ಲಕ್ಷ್ಮೀನಾರಣಪ್ಪನವರು ರೈಲ್ವೆ ಸ್ಟೇಷನ್ನಿಗೆ ಬಂದು ಒಂದು ಚೀಟಿಯಲ್ಲಿ ಎಷ್ಟು ಹಣವಿದೆಯೆಂದು ಗುರುತುಹಾಕಿ ಆ ಚೀಟಿಯನ್ನೂ ಆ ಹಣವನ್ನೂ ವೆಂಕಟಕೃಷ್ಣಯ್ಯನವರ ಧೋತ್ರದ ಸೆರಗಿನಲ್ಲಿ ಗಂಟು ಹಾಕಿ, ಆ ಗಂಟನ್ನು ಹಿಡಿಯಲ್ಲಿ ಸಿಕ್ಕಿಸಿ "ಭದ್ರ, ಭದ್ರ" ಎನ್ನುತ್ತಿದ್ದರು.

ಇಷ್ಟೆಲ್ಲ ಮಾಡಿದರೂ ಅಷ್ಟು ಹಣ ಮೈಸೂರಿಗೆ ತಲಪುತ್ತಿರಲಿಲ್ಲ. ಬಿಡದಿ ಸ್ಟೇಷನ್ನಿನಲ್ಲಿ ಬೆತ್ತ ಮಾರುವವನು ಒಂದು ಬೆತ್ತ ತೋರಿಸಿದನೆನ್ನಿ.

"ಇದೆಷ್ಟೋ ಪುಣ್ಯಾತ್ಮ?"

"ಮೂರೇ ರೂಪಾಯಿ ಬುದ್ಧಿ. ಬಲು ಪಸಂದಾಗೈತೆ."

ಮೂರು ರೂಪಾಯಿ ಕಳೆಯಿತು.

ರಾಮನಗರದ ಸ್ಟೇಷನ್ನಿನಲ್ಲಿ ಬಾಳೆಹಣ್ಣು. ನಾಲ್ಕು ಬಾಳೆ ಹಣ್ಣಿಗೆ ಎಂಟಾಣೆ ಹೋಯಿತು. ಎಷ್ಟೋ ಸಾರಿ ಒಂದು ರೂಪಾಯಿ ಬಂದಾ ಕೊಡುವರು. ಚಿಲ್ಲರೆ ವಾಪಸ್ ಕೇಳೋಣವೇ ಇಲ್ಲ.

***

ಒಂದು ಸಾರಿ ಚನ್ನಪಟ್ಟಣದ ಸ್ಟೇಷನ್ನಿಂದ ಬಣ್ಣದ ಬೊಂಬೆ ಬುಗುರಿಗಳನ್ನು ತಂದರು. ಲಕ್ಷ್ಮೀನಾರಣಪ್ಪನವರು ಕೇಳಿದರು:

"ಇದು ಯಾರಿಗೆ?"

"ಮಕ್ಕಳಿಗೆ ಆಡೋದಕ್ಕೆ, ಇರಲಿ."

“ಈ ಮನೆಯಲ್ಲಿ ಬೊಂಬೆಯಾಟ ಆಡುವವರು ಯಾರಿದ್ದಾರೆ?”

ವೆಂಕಟಕೃಷ್ಣಯ್ಯನವರು ನನ್ನ ಕಡೆ ಕೈ ತೋರಿಸಿದರು. ನಾನು ಕೇಳಿದೆ: “ನನಗೇನು?”

“ಹೌದು.”

ಇನ್ನೊಂದು ಸಾರಿ ಖಾರಾಬೂಂದಿ ಲಡ್ಡು ಪಟ್ಟಣಗಳನ್ನು ಮದ್ದೂರಿನಿಂದ ತಂದರು. ಲಕ್ಷ್ಮೀನಾರಣಪ್ಪನವರು ರೇಗಿ ಕೂಗಾಡಿದರು. ವೆಂಕಟಕೃಷ್ಣಯ್ಯನವರು,

“ಪಾಪ ಮಗು, ತಿನ್ನಲಿ”

ಎಂದು ಅದನ್ನೆಲ್ಲ ನನ್ನ ಕೈಯಲ್ಲಿ ರಾಶಿ ಮಾಡಿದರು.

ಹೀಗೆ ಹುಚ್ಚಾಟ. ಹಣವೆಂದರೆ ಹಿಡಿತವಿಲ್ಲ.

ಇದು ಅವರ ಧನಾರ್ಜನೆಯ ಕ್ರಮ.

# ಧರ್ಮಸತ್ರ

ವೆಂಕಟಕೃಷ್ಣಯ್ಯನವರ ಜೀವಮಾನದಲ್ಲಿ ಅವರು ವ್ಯಕ್ತಿಶಃ ಶಾಂತಿ ವಿಶ್ರಾಂತಿಗಳನ್ನು ಅನುಭವಿಸಿದ ಕಾಲ ಯಾವುದೋ ನಾನು ಕಾಣೆ. ನನ್ನ ಐವತ್ತು ಅರವತ್ತು ವರ್ಷಗಳ ಅನುಭವದಲ್ಲಿ ಅವರಿಗೆ ಖಾಸಗಿ ವ್ಯಕ್ತಿಜೀವನ (Private life) ಇದ್ದಂತೆಯೇ ತೋರಲಿಲ್ಲ. ಅವರ ಮನೆ ಧರ್ಮಸತ್ರ. ಅವರು ಕುಳಿತಿದ್ದ ಕಡೆ ಸಂತೆ. ಊಟಕ್ಕೂ ಮಾತಿಗೂ ಯಾರುಯಾರೋ ಬಂದು ಸೇರುತ್ತಿದ್ದರು. ಪರಿಚಿತರು, ಅಪರಿಚಿತರು, ಸ್ನೇಹಿತರು, ಕಪಟ ಸ್ನೇಹಿತರು, ವಿದ್ಯಾರ್ಥಿಗಳು, ಸಾರ್ವಜನಿಕರು, ಅಧಿಕಾರಿಗಳು, ಲಾಯರುಗಳು, ಪಂಡಿತರು, ಉಪಾಧ್ಯಾಯರು ಇರುತ್ತಿದ್ದರು. ಯಾರಿಗೆ ಏನು ಉದ್ದೇಶವಿತ್ತೋ ಗೊತ್ತಾಗುತ್ತಿರಲಿಲ್ಲ. ಗೊತ್ತಾದ ಉದ್ದೇಶವಿದ್ದವರು ಇಬ್ಬರೋ ಮೂವರೋ ಇದ್ದರೆ, ಬೇರೋಜುಗಾರರು ಎಂಟುಹತ್ತು ಮಂದಿ. ಹೀಗೆ ಸಾಗುತ್ತಿತ್ತು ದಿನ, ಬೆಳಗ್ಗೆ ಐದು ಘಂಟೆಯಿಂದ ರಾತ್ರಿ ಹತ್ತು ಘಂಟೆಯವರೆಗೂ. ಅವರಿಗೆ ಊಟದ ಹೊತ್ತು, ನಿದ್ದೆ ಹೊತ್ತು ಎನ್ನದೆ ಜನ ಬಂದದ್ದೂ, ಬಂದದ್ದೇ, ಹೋದದ್ದೂ ಹೋದದ್ದೇ. ಈ ಜನ ಸಂದಣಿ ದಸರಾ ಕಾಲದಲ್ಲಿಯೂ ಮಹಾರಾಜರ ವರ್ಧಂತಿಯ ಕಾಲದಲ್ಲಿಯೂ ಇನ್ನೂ ಹೆಚ್ಚಾಗಿರುತ್ತಿತ್ತು.

ಅವರು ಪದ್ಮಾಲಯದಲ್ಲಿದ್ದಾಗ ನಾನು ಕಂಡ ಒಂದು ಬೆಳಗ್ಗಿನ ಅನುಭವವನ್ನು ಹೇಳುತ್ತೇನೆ.

ಸುಮಾರು ಆರೂಮುಕ್ಕಾಲು ಘಂಟೆಯ ವೇಳೆಗೆ ಇಬ್ಬರು ಮೂರು ಮಂದಿ ಬಂದಿರುವರು. ಏಳು ಘಂಟೆಯ ವೇಳೆಗೆ ಐದಾರು ಮಂದಿ. ಅವರಲ್ಲಿ ಕೆಲವರು ಲಾಯರುಗಳು. ಒಬ್ಬಿಬ್ಬರು ಇತರ ಗಣ್ಯವ್ಯಕ್ತಿಗಳು. ಅವರಲ್ಲಿ ಯಾರೋ ಒಬ್ಬರು ಯಾವುದೋ ಊರಿನ ಸುದ್ದಿಯನ್ನೆತ್ತುವರು. ಆ ನೆವದಿಂದ “ಏನು ಅನ್ಯಾಯ!” “ಕೇಳುವವರೇ ಇಲ್ಲ” ಎಂದು ಕೂಗಾಡುವರು. ಇನ್ನೊಬ್ಬರು ಯಾವನೋ ಅಧಿಕಾರಿಯನ್ನು ನಿಂದಿಸುವರು. ಹೀಗೆ ಕೂಗಾಟ ರೇಗಾಟಗಳು ಏಳೂವರೆ ಘಂಟೆಯವರೆಗೆ ನಡೆಯುವುದು. ಎಲ್ಲರಿಗೂ ಉಪ್ಪಿಟ್ಟು ಕಾಫಿಗಳ ಸೇವೆ ನಡೆಯುವುದು. ಬಳಿಕ ಅವರೆಲ್ಲ ಎದ್ದು ಒಬ್ಬೊಬ್ಬರಾಗಿ ತಮ್ಮ ದಾರಿ ಹಿಡಿಯುವರು. ಇದು ಆ ದೊಡ್ಡ ಮನುಷ್ಯರುಗಳ ದೇಶಸೇವೆಯ ರೀತಿ.

ವೆಂಕಟಕೃಷ್ಣಯ್ಯನವರಿಗೆ ಆ ಜನದ ಯೋಗ್ಯತೆ ತಿಳಿದಿರಲಿಲ್ಲವೆಂದಲ್ಲ. ಅನೇಕ ಮಂದಿ ಸ್ನೇಹಿತರು ಅವರನ್ನು ಯಾವುದೋ ತಂಟೆಗೆ ಸಿಕ್ಕುಹಾಕಿಸಿ ಸಮಯದಲ್ಲಿ ಕೈಕೊಟ್ಟದ್ದನ್ನು

ಅವರು ಮರೆತಿರಲಿಲ್ಲ. ಆದರೆ ಅವರು ಯಾರನ್ನೂ ಎಂದೂ ಹಂಗಿಸಿದವರಲ್ಲ, ಆಕ್ಷೇಪಿಸಿದವರಲ್ಲ, ಅಸಮಾಧಾನಪಡಿಸಿದವರಲ್ಲ. ಅವರು ಹೀಗೆ ಎಲ್ಲರನ್ನೂ ಕ್ಷಮಿಸಿ ಎಲ್ಲರನ್ನೂ ಆದರಿಸುತ್ತಿದ್ದುದಕ್ಕೆ ಮೂರು ಕಾರಣಗಳನ್ನು ನಾನು ಊಹಿಸಿಕೊಂಡಿದ್ದೇನೆ: (೧) ಅವರದು ದಾಕ್ಷಿಣ್ಯದ ಪ್ರಕೃತಿ. ಸ್ವಭಾವದಲ್ಲಿಯೇ ಅವರು ಮೃದುಲ. (೨) ಸಾರ್ವಜನಿಕ ಕಾರ್ಯದಲ್ಲಿರುವವರು ಯಾರನ್ನೂ ವಿರೋಧ ಮಾಡಿಕೊಳ್ಳಬಾರದು. ಯಾವ ಸಮಯದಲ್ಲಿ ಯಾರಿಂದ ಏನು ಸಹಾಯ ಬೇಕಾದೀತೋ. (೩) ಪ್ರತಿಯೊಬ್ಬನಿಗೂ ತನ್ನನ್ನು ತಾನು ತಿದ್ದಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು. ಅವನನ್ನು ಬೈದು ಛೀಮಾರಿ ಹಾಕಿದರೆ ಅವನಿಗೆ ರೋಷ ಬರುತ್ತದೆ; ತಿದ್ದಿಕೊಳ್ಳುವ ಪ್ರವೃತ್ತಿಯನ್ನು ಆ ರೋಷ ಹೋಗಲಾಡಿಸುತ್ತದೆ.

ಈ ಯೋಚನೆಗಳಿಂದಲೋ ಹೇಗೋ; ವೆಂಕಟಕೃಷ್ಣಯ್ಯನವರು ಎಲ್ಲರಲ್ಲಿಯೂ ವಿನಯದಿಂದಲೂ ವಿಶ್ವಾಸದಿಂದಲೂ ನಡೆದುಕೊಳ್ಳುತ್ತಿದ್ದರು. ಜನ ಅವರನ್ನು ದಯಾಸಾಗರ, ಭೀಷ್ಮಾಚಾರ್ಯ-ಎಂದು ಮೊದಲಾಗಿ ಕರೆದಿದ್ದಾರೆ. ಅದು ಅನುಚಿತವೆಂದಾಗಲಿ ಉತ್ಪ್ರೇಕ್ಷೆಯೆಂದಾಗಲಿ ಯಾರೂ ಹೇಳರು. ಆದರೆ ನಾನು ಅವರನ್ನು ಜೋನಿಬೆಲ್ಲದ ಗುಡಾಣ ಎಂದು ಕರೆದೇನು. ಅವರನ್ನು ಬೇಕಾದವರು ಬೇಕಾದಂತೆ ಕಿತ್ತು ತಿಂದರು.

# ಸರ್ವತೋಮುಖತೆ

ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್ ಶ್ರೀನಿವಾಸರಾಯರು ವೆಂಕಟಕೃಷ್ಣಯ್ಯನವರನ್ನು ಅತ್ಯಂತ ಪ್ರೀತಿಯಿಂದ ಹಾಸ್ಯ ಮಾಡುತ್ತಿದ್ದರು: ಮೈಸೂರಿನ ದರೋಡೆಕಾರರ ಸಂಘ ಎಂದು ಪುಂಡಾಡಿ ಜನರು ಒಂದು ಸಂಘ ಮಾಡಿ ಅದಕ್ಕೆ ಅಧ್ಯಕ್ಷರಾಗಬೇಕೆಂದು ವೆಂಕಟಕೃಷ್ಣಯ್ಯನವರನ್ನು ಕೇಳಿದ್ದಿದ್ದರೆ ಇವರು ಅದಕ್ಕೆ ಬೇಡವೆನ್ನುತ್ತಿರಲಿಲ್ಲ-ಎಂದು.

೧೯೧೦–೧೧ ರಲ್ಲಿ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಒಂದು ಮಧ್ಯಾಹ್ನ ಎರಡು ಘಂಟೆಯಿಂದ ಏಳರವರೆಗೆ ಮೂರೋ ನಾಲ್ಕೋ ಕಾನ್‌ಫರೆನ್ಸುಗಳು ನಡೆದವು. ಪ್ರತಿಯೊಂದಕ್ಕೂ ವೆಂಕಟಕೃಷ್ಣಯ್ಯನವರೇ ಅಧ್ಯಕ್ಷರು. ಥಿಯೊಸಾಫಿಕಲ್ ಸೊಸೈಟಿ, ಆರ್ಯ ಸಮಾಜ, ಸಮಾಜಸುಧಾರಣೆ, ವಿತಂತು ಸಂರಕ್ಷಣೆ, ಗೋಸಂರಕ್ಷಣೆ ಈ ನಾನಾ ಉದ್ದೇಶಗಳಲ್ಲಿ ಒಂದೊಂದಕ್ಕೂ ಒಂದೊಂದು ಪರಿಷತ್ತು. ಎಲ್ಲದರಲ್ಲಿಯೂ ವೆಂಕಟಕೃಷ್ಣಯ್ಯನವರದೇ ಮುಖ್ಯ ಪಾತ್ರ. ನಾನು ಆ ಸಭೆಗಳಲ್ಲಿ ಹಾಜರಿದ್ದೆ, ಅವರ ವಿವಿಧಾಸಕ್ತಿಯನ್ನು ನೋಡಿದೆ. ಪ್ರತಿಯೊಂದು ವಿಷಯದಲ್ಲಿಯೂ ಯಾರಿಗೂ ಬೇಸರವಾಗದಂತೆ, ಅಸಮಾಧಾನವಾಗದಂತೆ ಮಾತನಾಡಿದರು. ಆಯಾ ವಾದದಲ್ಲಿದ್ದ ಗುಣಗಳನ್ನು ಮಾತ್ರ ಒಂದೆರಡು ಮಾತುಗಳಲ್ಲಿ ಗಂಭೀರವಾಗಿ ಹೇಳುವರು.

ಹೀಗೆ ಅವರು ಎಲ್ಲರಿಗೂ ಬೇಕಾದವರು. “ಅಂದರಿಕೀ ಮಂಚಿವಾಡು ಅನಂತಯ್ಯ.”

# ಶಾಸನಸಭೆಯಲ್ಲಿ

೧೯೧೫–೧೬ರಲ್ಲಿ ಮೈಸೂರಿನ ಶಾಸನಸಭೆಯಲ್ಲಿ (ಲೆಜಿಸ್ಲೆಟಿವ್ ಕೌನ್ಸಿಲ್) ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಒಂದು ಕಾನೂನು ವಿಚಾರದಲ್ಲಿತ್ತು. ವೆಂಕಟಕೃಷ್ಣಯ್ಯನವರೂ ಆಗ ಆ ಸಭೆಯಲ್ಲಿದ್ದರು. ಆಗ ಕೌನ್ಸಿಲ್ ಮೆಂಬರಾಗಿದ್ದ ಸರ್ ಎ. ಆರ್. ಬ್ಯಾನರ್ಜಿಯವರು ಆ ಕಾನೂನನ್ನು ಸಭೆಗೆ ಒಪ್ಪಿಸಿದರು. ಆ ಸಂದರ್ಭದಲ್ಲಿ ಅವರು ಹೀಗೆ ಹೇಳಿದರು:

"ಮೈಸೂರು ಪಟ್ಟಣದಿಂದ ಅನೇಕ ಮನವಿಗಳು ಬಂದಿವೆ. ಅವುಗಳಲ್ಲಿ ಒಂದು: 'ಮಿ ॥ ಎಂ. ವೆಂಕಟಕೃಷ್ಣಯ್ಯ, ಲಿಟೆರರಿ ಯೂನಿಯನ್ನಿನ ಪ್ರೆಸಿಡೆಂಟರು ಹೀಗೆ ಬರೆದಿದ್ದಾರೆ.' ಇನ್ನೊಂದು 'ಮಿ ॥ ಎಂ. ವೆಂಕಟಕೃಷ್ಣಯ್ಯ, ಮ್ಯುನಿಸಿಪಲ್ ಕೌನ್ಸಿಲ್ ಮೆಂಬರು ಕೌನ್ಸಿಲಿನಲ್ಲಿ ಹೀಗೆ ಸೂಚಿಸಿದ್ದಾರೆ.' ಮೂರನೆಯದು 'ಮಿ ॥ ವೆಂಕಟಕೃಷ್ಣಯ್ಯ, ಉಪಾಧ್ಯಾಯ ಸಂಘದ ಅಧ್ಯಕ್ಷರು ಹೀಗೆ ಬರೆದಿದ್ದಾರೆ.' 'ಮಿ ॥ ವೆಂಕಟಕೃಷ್ಣಯ್ಯನವರು, ಪಂಡಿತ ಮಂಡಲಿ ಹೀಗೆ ಬರೆದಿದ್ದಾರೆ.' ಐದನೆಯದು 'ಮಿ ॥ ವೆಂಕಟಕೃಷ್ಣಯ್ಯನವರು, ಮಹಾಜನಸಭೆಯ ಅಧ್ಯಕ್ಷರು ಹೀಗೆ ಹೇಳಿದ್ದಾರೆ.'..."

ಬ್ಯಾನರ್ಜಿಯವರು ಈ ರೀತಿ ಏಳೆಂಟು ಸಂಸ್ಥೆಗಳ ಹೆಸರನ್ನು ಹೇಳಿ ಈ ಅಭಿಪ್ರಾಯಗಳನ್ನು ಓದಿ ಕಡೆಗೆ

"ಈ ಸಭೆಯಲ್ಲಿ ಒಬ್ಬ ವೆಂಕಟಕೃಷ್ಣಯ್ಯನವರು ಕುಳಿತಿದ್ದಾರೆ. ಅವರು ಏನು ಹೇಳುತ್ತಾರೋ ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದೇನೆ. ಈ ಮೇಲಣ ಏಳೆಂಟು ಅಭಿಪ್ರಾಯಗಳಲ್ಲಿ ಇವರದು ಯಾವುದಾದರೂ ಉಂಟೆ? ಅಥವಾ ಇವರದು ಒಂಭತ್ತನೆಯದೊ?"

ಬ್ಯಾನರ್ಜಿಯವರ ಈ ವ್ಯಾಖ್ಯಾನವನ್ನು ವೆಂಕಟಕೃಷ್ಣಯ್ಯನವರು ಕೇಳುತ್ತ, ಎಲ್ಲರೊಡನೆಯೂ ಸೇರಿ ನಕ್ಕು, ಆಮೇಲೆ ಹೀಗೆ ಉತ್ತರ ಕೊಟ್ಟರು:

"ನಾನು ಅನೇಕ ಸಭೆ ಸಂಸ್ಥೆಗಳಿಗೆ ಸೇರಿದ್ದೇನೆ. ಆಯಾ ಸಭೆಯ ಆಯಾ ಸಂಸ್ಥೆಯ ಅಭಿಪ್ರಾಯವನ್ನು ಅಲ್ಲಲ್ಲಿ ನಿರ್ಣಯವಾದಂತೆ ಮನವೆ ಮಾಡಿದ್ದೇನೆ. ಅದು ಸಭೆಯ ಅಧ್ಯಕ್ಷನ ಕರ್ತವ್ಯ. ಈಗ ನಾನು ಇಲ್ಲಿ ನನ್ನ ಸ್ವಂತ ಅಧಿಕಾರದಲ್ಲಿ (Personal capacity) ತೋರಿದ್ದನ್ನು ಹೇಳುತ್ತೇನೆ."

ಇದು ವೆಂಕಟಕೃಷ್ಣಯ್ಯನವರ ಸರ್ವತೋಮುಖತೆ. ಅವರು ಯಾರನ್ನೂ ನೋಯಿಸಲಾರರು.

# ಗೃಹಜೀವನ

ವೆಂಕಟಕೃಷ್ಣಯ್ಯನವರು ನೆಮ್ಮದಿಯನ್ನು ಕಂಡ ಕಾಲ ಯಾವುದೋ ಕಾಣೆನೆಂದು ಹೇಳಿದೆ. ೧೯೧೩ರಲ್ಲೋ ೧೯೧೪ರಲ್ಲೋ ದಸರಾ ಸಮಯದಲ್ಲಿ ನಾನು ಅವರ ಅತಿಥಿಯಾಗಿದ್ದೆ. ಆಗ ಅವರು ರಮಾವಿಲಾಸ ಅಗ್ರಹಾರದ ಒಂದು ಮನೆಯಲ್ಲಿದ್ದರು. ಅವರ ಮಗ ನಾರಾಯಣರಾಯರು ನನಗೆ ಪ್ರಿಯ ಮಿತ್ರರಾಗಿದ್ದರು. ನಾರಾಯಣರಾಯರ ಕುಟುಂಬ ಶ್ರೀಮತಿ ರುಕ್ಮಿಣಿಯಮ್ಮನವರು ನನ್ನ ಪತ್ನಿಗೆ ಒಡಹುಟ್ಟಿದವರೋ ಎಂಬಂತೆ ಇದ್ದರು. ನನ್ನ ಹೆಂಗಸಿನ ಪ್ರಾಣ ಹೋದಾಗ ಹತ್ತಿರ ಇದ್ದವರು ರುಕ್ಕಮ್ಮನವರು. ನಾರಾಯಣರಾಯರೂ ರುಕ್ಕಮ್ಮನವರೂ ಅವರ ಮಗ (ಉತ್ತರೋತ್ತರ ಐ.ಸಿ.ಎಸ್.) ೫-೬ ವರ್ಷದ ಹುಡುಗ ಎಂ. ಸುಬ್ಬರಾಯರೂ ವೆಂಕಟಕೃಷ್ಣಯ್ಯನವರೊಡನೆ ಇದ್ದರು. ನಾನು ಅಲ್ಲಿ ಬಿಡಾರ ಮಾಡಿದ್ದು ನಾರಾಯಣರಾಯರ ಮತ್ತು ಅವರ ಭಾರ್ಯೆಯ ಪ್ರೀತಿಯ ಒತ್ತಾಯದ ಕಾರಣದಿಂದ. ವೆಂಕಟಕೃಷ್ಣಯ್ಯನವರು ಗೃಹಜೀವನದಲ್ಲಿ ಅಷ್ಟಿಷ್ಟು ನೆಮ್ಮದಿ ಕಂಡ ಕಾಲ ಇದು ಎಂದು ನನ್ನ ತಿಳಿವಳಿಕೆ. ಮಗು ಸುಬ್ಬರಾಯನನ್ನು ಬಂದವರೆಲ್ಲ ನೋಡಿ ಸಂತೋಷಪಡುತ್ತಿದ್ದರು. ಸುಂದರವಾದ ರೂಪ, ಸುಂದರವಾದ ಬಣ್ಣ, ಮುಖದಲ್ಲಿ ಬಹುಮಟ್ಟಿಗೆ ತಾತನ ಹೋಲಿಕೆ. ಮಾತಿನಲ್ಲಿ ಚಟುವಟಿಕೆ. ಇದನ್ನೆಲ್ಲ ಬಂದವರು ಮೆಚ್ಚಿಕೊಂಡಿದ್ದರು. ಆ ಮೆಚ್ಚಿಕೆಯನ್ನು ವೆಂಕಟಕೃಷ್ಣಯ್ಯನವರು ದೂರದಿಂದ ಕಂಡು ಹಿಗ್ಗುತ್ತಿದ್ದರು. ಆ ಹಿಗ್ಗು ವೆಂಕಟಕೃಷ್ಣಯ್ಯನವರ ಕಣ್ಣುಗಳಿಂದಲೂ ಮತ್ತು ಕಾಂತಿಯಿಂದಲೂ ತೋರುತ್ತಿತ್ತೇ ಹೊರತು ಅವರ ಬಾಯಿಂದ ಹೊರಟದ್ದಲ್ಲ.

ವೆಂಕಟಕೃಷ್ಣಯ್ಯನವರಿಗೆ ಮೊದಲನೆಯ ಭಾರ್ಯಾವಿಯೋಗವಾದ ತರುವಾಯದ ಎರಡನೆಯ ಭಾರ್ಯೆ ವೆಂಕಟಲಕ್ಷ್ಮಮ್ಮನವರೆಂಬವರು. ಈಕೆಯ ಅಣ್ಣಂದಿರ ಮಕ್ಕಳೇ ಶಿವಮೊಗ್ಗದಲ್ಲಿ ಲಾಯರಾಗಿ ಸಾಮರ್ಥ್ಯದಿಂದಲೂ ಸೌಜನ್ಯದಿಂದಲೂ ಪ್ರಸಿದ್ಧರಾಗಿದ್ದ ಟಿ. ವೆಂಕಟಸುಬ್ಬಶಾಸ್ತ್ರಿಗಳು, ವೆಂಕಟಲಕ್ಷ್ಮಮ್ಮನವರು ವಿದ್ಯಾವತಿ; ಸಂಸ್ಕೃತ ಆಕೆಗೆ ಚೆನ್ನಾಗಿ ಬರುತ್ತಿತ್ತು, ಆಕೆಯ ಗುಣಾತಿಶಯಗಳನ್ನೂ ಶೀಲಸಂಪನ್ನತೆಯನ್ನೂ ಕುರಿತು ನಾನು ಅನೇಕರಿಂದ ಕೇಳಿದ್ದೇನೆ.

ಆ ದೀಪ ನಂದಿಹೋದ ಮೇಲೆ ವೆಂಕಟಕೃಷ್ಣಯ್ಯನವರ ಗೃಹಜೀವನ ಮತ್ತಷ್ಟು ಬಡವಾಯಿತು; ಕಷ್ಟದ್ದಾಯಿತು.

ವೆಂಕಟಕೃಷ್ಣಯ್ಯನವರಿಗೆ ನಾನು ಕಂಡಂತೆ ಇಬ್ಬರು ಸೋದರಿಯರಿದ್ದರು. ಇಬ್ಬರೂ ಮಡಿಯುಟ್ಟಿದ್ದವರು. ಒಬ್ಬಾಕೆ ಕಣ್ಣಿಲ್ಲದವಳು; ಇನ್ನೊಬ್ಬಾಕೆ ಕಾಲಿಲ್ಲದವಳು. ಈ ಇಬ್ಬರೂ ಸಹಕರಿಸಿಕೊಂಡು ಒಬ್ಬ ವ್ಯಕ್ತಿಯೇ ಎಂಬಂತೆ ಮನೆಗೆಲಸ ನಡಸುತ್ತಿದ್ದರು. ಆ ಮನೆಯಲ್ಲಿ ಸೌಖ್ಯವೂ ಉತ್ಸಾಹವೂ ಎಷ್ಟು ಮಟ್ಟಿಗಿದ್ದಿರಬಹುದೆಂಬುದನ್ನು ಇದರಿಂದ ಊಹಿಸಿಕೊಳ್ಳಬಹುದು.

# ಅಪಘಾತ

ವೆಂಕಟಕೃಷ್ಣಯ್ಯನವರ ಎರಡನೆಯ ಮಗ ನಾರಾಯಣರಾಯರು ಅಮಲ್ದಾರ ದರ್ಜೆಯಲ್ಲಿದ್ದರು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಎಫಿಷನ್ಸಿ ಆಡಿಟ್ (ಕಾರ್ಯವಿಚಕ್ಷಣೆಯ ಪರಿಶೋಧನೆ) ಎಂಬ ಇಲಾಖೆ ಏರ್ಪಟ್ಟಿತ್ತು. ಅದಕ್ಕೆ ನ್ಯಾಪತಿ ಮಾಧವರಾಯರು ಮುಖ್ಯಸ್ಥರಾಗಿದ್ದರು. ಅವರ ಸಹಾಯಕರು ಎಂ. ನಾರಾಯಣರಾಯರು- ಎಂ. ವೆಂಕಟಕೃಷ್ಣಯ್ಯನವರ ಮಕ್ಕಳು. ಹೀಗಿದ್ದಾಗ ಒಂದು ಸಂಜೆ ನಾರಾಯಣರಾಯರು ಆಫೀಸು ಮುಗಿಸಿಕೊಂಡು ಬೈಸಿಕಲ್ಲಿನ ಮೇಲೆ ಮನೆಗೆ ಹಿಂತಿರುಗುತ್ತಿದ್ದರು. ಅವರ ದಾರಿ ಶೇಷಾದ್ರಿ ಮೆಮೋರಿಯಲ್ ಕಟ್ಟಡದ ಪಕ್ಕದಲ್ಲಿ ಹೊರಟು ಸ್ಟಾಚ್ಯು ಮುಂದುಗಡೆಯಿಂದ ದಕ್ಷಿಣದ ದೊಡ್ಡರಸ್ತೆಗೆ ಸೇರತಕ್ಕದ್ದು. ಈ ದಾರಿಯಲ್ಲಿ ನಾರಾಯಣರಾಯರು ಬೈಸಿಕಲ್ ಮೇಲೆ ಬಂದು ದೊಡ್ಡ ರಸ್ತೆಯನ್ನು ಸೇರುವ ಕ್ಷಣಕ್ಕೆ ಸರಿಯಾಗಿ ಸಿಟಿಯ ಪಕ್ಕದಿಂದ ಜಟಕಾ ಗಾಡಿಯೊಂದು ವೇಗದಿಂದ ಬರುತ್ತಿದ್ದದ್ದು ನಾರಾಯಣರಾಯರ ಬೈಸಿಕಲ್ಲಿಗೆ ಡಿಕ್ಕಿ ಹೊಡೆಯಿತು. ಜಟಕಾದ ಒಂದು ಬಾಹು (Shaft) ನಾರಾಯಣರಾಯರ ಎದೆಗೆ ತಗುಲಿತು, ಅವರು ಕೆಳಕ್ಕೆ ಬಿದ್ದರು. ಅವತಾರ ಮುಗಿಯಿತು.

ಆ ಘೋರಪ್ರಕರಣದ ದಿನ, ಅದು ನಡೆದ ಕೆಲವು ನಿಮಿಷಗಳೊಳಗಾಗಿ ಲಕ್ಷ್ಮೀನಾರಣಪ್ಪನವರ ಮನೆಗೆ ವರ್ತಮಾನ ಬಂತು. ಆಗ ನಾನು ಅಲ್ಲಿದ್ದೆ. ಅಲ್ಲಿಂದ ಮುಂದಿನ ಕಾರ್ಯವನ್ನು ವರ್ಣನೆ ಮಾಡಲು ನನಗೆ ಬಾಯಿಬರದು. ಅದು ಅವಶ್ಯವೂ ಅಲ್ಲ. ಅಂದಿನಿಂದ ಹದಿನೈದಿಪ್ಪತ್ತು ದಿವಸ ಕಳೆದ ಮೇಲೆ, ಕರ್ಮಾಂತರಗಳು ಮುಗಿದ ಮೇಲೆ ಒಂದು ದಿನ ವೆಂಕಟಕೃಷ್ಣಯ್ಯನವರು ತಮ್ಮ ಮೊಮ್ಮಗ ಸುಬ್ಬರಾಯನನ್ನು ಹತ್ತಿರ ಕೂಡಿಸಿಕೊಂಡು ಹೀಗೆ ಹೇಳಿದರು:

“ನೋಡಪ್ಪಾ ಮಗು. ಇನ್ನು ಮುಂದೆ ನೀನು ಇರುವುದಕ್ಕೆ ಎರಡು ಜಾಗಗಳಿವೆ. ಒಂದು ಮೈಸೂರಿನಲ್ಲಿರುವ ನನ್ನ ಮನೆ. ಇನ್ನೊಂದು ಬೆಂಗಳೂರಿನಲ್ಲಿ ನಿಮ್ಮ ತಾಯಿಯ ತಂದೆ ಡಾ॥ ಸಿ.ಬಿ. ರಾಮರಾಯರ ಮನೆ, ಈ ಎರಡು ಕಡೆಗಳಲ್ಲಿ ನಿನಗೆ ಎಲ್ಲಿ ಇಷ್ಟವಿದ್ದರೆ ಅಲ್ಲಿ ನೀನಿರಬಹುದು. ಮೈಸೂರಿಗೆ ಬಂದರೆ ಅಲ್ಲಿ ನಿನ್ನನ್ನು ಸಂರಕ್ಷಣೆ ಮಾಡುವವರು ಯಾರೂ ಇಲ್ಲ. ನೀನು ಅನಾಥಾಲಯದ ಹದಿನೈದಿಪ್ಪತ್ತು ಮಂದಿ ಹುಡುಗರೊಡನೆ ಒಬ್ಬನಾಗಿ ಇರಬೇಕಾಗುತ್ತದೆ. ಅವರಂತೆ ನೀನು. ಅವರಿಗಾದದ್ದು ನಿನಗಾಗುತ್ತದೆ. ಬೆಂಗಳೂರಿನಲ್ಲಿ ನಿಮ್ಮ ತಾತನ ಮನೆಯಲ್ಲಿ ನಿಮ್ಮ ತಾತನೂ ಅಜ್ಜಿಯೂ ನಿಮ್ಮ ತಾಯಿಯೂ

ನೋಡಿಕೊಳ್ಳುತ್ತಾರೆ. ರಾಮರಾಯರಿಗೆ ದ್ರವ್ಯಾನುಕೂಲವಿರುವುದರಿಂದ ಅವರು ನಿನ್ನ ಮೇಲ್ದರ್ಜೆಯ ಓದಿಗೂ ಉತ್ತರೋತ್ತರ ಭವಿಷ್ಯಕ್ಕೂ ಸಹಾಯಮಾಡುವ ಶಕ್ತಿ ಅವರಿಗಿದೆ.

“ಇದರಲ್ಲಿ ನಿನಗೆ ಯಾವುದು ಇಷ್ಟವೋ ಅದರಂತೆ ಮಾಡು. ಆಲೋಚನೆ ಮಾಡಿ ನಿನ್ನ ಜಾಗ ಗೊತ್ತುಮಾಡಿಕೊ. ನೀನು ನನ್ನ ಬಳಿ ಇರುವುದಾದರೆ ನನಗೆ ಪರಮ ಸಂತೋಷ. ನೀನು ನನಗೆ ಭಾರವಲ್ಲ, ಅತ್ಯಂತ ಪ್ರಿಯನಾಗಿದ್ದೀ. ಆದರೆ ನಿನ್ನ ಭವಿಷ್ಯವನ್ನು ಚಿಂತಿಸಬೇಕಾದದ್ದು ನನಗೆ ಕರ್ತವ್ಯ. ನೋಡು-ನಿಮ್ಮ ತಾಯಿ, ನಿಮ್ಮ ಅಜ್ಜಿ, ನಿಮ್ಮ ತಾತ-ಅವರೊಡನೆ ಮಾತನಾಡಿ ಗೊತ್ತುಮಾಡು.”

ಇದು ವೆಂಕಟಕೃಷ್ಣಯ್ಯನವರ ಆತ್ಮಗುಣ.

ಅಯಂ ನಿಜಃ ಪರೋ ವೇತಿ
ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು
ವಸುಧೈವ ಕುಟುಂಬಕಮ್ ॥

ವೆಂಕಟಕೃಷ್ಣಯ್ಯನವರದು ಸಮಸ್ತ ಲೋಕವೂ ಸ್ವಂತ ಕುಟುಂಬವೆಂಬಂತೆಯೇ ಎಣಿಕೆ.

***

# ಲೇಖನಕಾರ್ಯ

ವೆಂಕಟಕೃಷ್ಣಯ್ಯನವರು ಬೆಳಗಿನ ಜಾವ ನಾಲ್ಕು ಘಂಟೆಗೇ ಏಳುತ್ತಿದ್ದರು. ಸುಮಾರು ಐದು ಘಂಟೆಗೆ ತಲೆಗೆ ಒಂದು ಲಪ್ಪಟ್ಟೆ ಬಿಗಿದು ಆರ್ಟಿಕಲ್ ಬರಸಲು ಕೂಡುತ್ತಿದ್ದರು. ಅವರು ಹೇಳಿದ್ದನ್ನು ಶಿಷ್ಯರೊಬ್ಬರು ಬರೆದುಕೊಳ್ಳುತ್ತಿದ್ದರು, ಇಂಗ್ಲಿಷಿನಲ್ಲಿ ಅಥವಾ ಕನ್ನಡದಲ್ಲಿ. ವೆಂಕಟಕೃಷ್ಣಯ್ಯನವರು ಸಾಮಾನ್ಯವಾಗಿ "ಮದರಾಸು ಮೈಲ್" ಪತ್ರಿಕೆಯ ಒಂದು ಸಂಚಿಕೆಯನ್ನು ಕೈಯಲ್ಲಿ ಹಿಡಿದು ಅಂದಿನ ವಿಷಯವನ್ನು ಆರಿಸಿಕೊಳ್ಳುತ್ತಿದ್ದರು. ಆ ಪತ್ರಿಕೆ ವೆಂಕಟಕೃಷ್ಣಯ್ಯನವರಿಗೆ ಸೂಚನೆ ಕೊಟ್ಟು ಮನಸ್ಸನ್ನೆಬ್ಬಿಸುತ್ತಿತ್ತು. ಬರವಣಿಗೆಯ ಮನೋಭಾವವೂ ಶೈಲಿಯೂ ವೆಂಕಟಕೃಷ್ಣಯ್ಯನವರದೇ. ಅವರದು ಸರಳವಾದ ಶೈಲಿ; ಸ್ವಾಭಾವಿಕವಾದದ್ದು. ಅವರ ಕನ್ನಡವು ಜನರೂಢಿಗೆ ಅನುಸಾರವಾಗಿ, ಆದರೆ ಸಂಸ್ಕೃತದಲ್ಲಿ ವ್ಯುತ್ಪನ್ನರಾದವರ ಪದಸೌಷ್ಠವದಿಂದ ಕೂಡಿ ರಂಜಕವಾಗಿರುತ್ತಿತ್ತು. ಅವರ ಇಂಗ್ಲಿಷು ವೀರ್ಯವತ್ತಾದದ್ದು. ಅದರಲ್ಲಿ ಒಳ್ಳೊಳ್ಳೆಯ ಇಡಿಯಮುಗಳನ್ನು (Idiom) ಉಪಯೋಗಿಸುತ್ತಿದ್ದರು.

ಈ ಲೇಖನಕಾರ್ಯ ಸುಮಾರು ಏಳರವರೆಗೆ ನಡೆಯುವುದು. ಅದರ ಮಧ್ಯದಲ್ಲಿ ಕಾಫಿ. ಅನಂತರ ವಾಕಿಂಗ್.

# ವ್ರತನಿಷ್ಠೆ

ಅವರು ಪತ್ರಿಕಾ ವ್ಯವಸಾಯವನ್ನು ನೆನಪಿಗೆ ತಂದುಕೊಂಡಾಗ ಒಂದು ದುಃಖದ ಪ್ರಕರಣ ಜ್ಞಾಪಕಕ್ಕೆ ಬರುತ್ತದೆ. ಸುಮಾರು ೧೯೦೨ ರಲ್ಲೋ ೧೯೦೩ ರಲ್ಲೋ ಅವರಿಗೆ ಒಂದು ಪುತ್ರವಿಯೋಗವಾಯಿತು. ಅವರಿಗಿದ್ದ ಒಬ್ಬ ಮಗಳೂ ಆಕೆಯ ಗಂಡ ದಕ್ಷಿಣಾ ಮೂರ್ತಿ ಎಂಬಾತನೂ (ಬಹುಶಃ ಪ್ಲೇಗಿನಿಂದ) ತೀರಿಕೊಂಡರು. ಈ ದುಃಖಸಂದರ್ಭಗಳಲ್ಲಿ ಯಾವುದೋ ಒಂದು ನಡೆದಾಗ ಮನೆಯಿಂದ ಶವ ಹೊರಡುವುದರ ಮುನ್ನ ವೆಂಕಟಕೃಷ್ಣಯ್ಯನವರು–

“ಏನೋ ಪುಣ್ಯಾತ್ಮ-ಈ ಹೊತ್ತಿನ ಆರ್ಟಿಕಲ್ ಇನ್ನೂ ಬರೆಯಲಿಲ್ಲವೇನೋ? ಕಾಗದ ಕಡ್ಡಿ ತೆಗೆದುಕೊಂಡು ಬಾ” -ಎಂದು ಹೇಳಿ ಅಂದಿನ ಲೇಖನ ಬರೆಯಿಸಿ ಮುಗಿಸಿದರು. ಇಂಥಾದ್ದು ಅವರಿಗಿದ್ದ ಕರ್ತವ್ಯನಿಷ್ಠೆ.

# ಪರಿಹಾಸಾಸ್ಪದ

ವೆಂಕಟಕೃಷ್ಣಯ್ಯನವರು ಬ್ರಿಟಿಷ್ ರೆಸಿಡೆಂಟರೊಡನೆ ಮರ್ಯಾದೆಗೆ ತಕ್ಕಷ್ಟು ಸಂಪರ್ಕವನ್ನಿಟ್ಟುಕೊಂಡಿದ್ದರು. ಒಂದು ಸಾರಿ ಡೊನಾಲ್ಡ್ ರಾಬರ್ಟ್ಸನ್ ಎಂಬ ರೆಸಿಡೆಂಟ್ ಸಾಹೇಬನನ್ನು ನೋಡಲು ಹೋದರು. ಆತನು ಇವರನ್ನು ಸ್ನೇಹದಿಂದ ಸ್ವಾಗತಿಸಿ ಸೋಫದ ಮೇಲೆ ಕುಳ್ಳಿರಿಸಿ ಮಾತುಕಥೆಗೆ ಆರಂಭಿಸಿದನು. ಮೂರು ನಾಲ್ಕು ನಿಮಿಷ ಕಳೆದ ಮೇಲೆ.

"ಮಿ ॥ ವೆಂಕಟಕೃಷ್ಣಯ್ಯನವರೇ, ಒಂದು ನಿಮ್ಮ ಸ್ವಂತ ವಿಷಯ ಹೇಳಬೇಕೆಂದು ನನಗನ್ನಿಸಿದೆ. ಮಾಫ್ ಮಾಡಬೇಕು."

"ಏನದು? ಅಪ್ಪಣೆಯಾಗಲಿ."

"ನಿಮಗೆ ಏನೋ ನೋವಿರುವಂತೆ ಕಾಣುತ್ತದೆ."

"ಏನೂ ಇಲ್ಲವಲ್ಲ?"

"ಇಲ್ಲ. ನೀವು ಕುಳಿತಿರುವ ರೀತಿಯನ್ನು ನೋಡಿದರೆ ನನ್ನ ಮನಸ್ಸಿಗೆ ಹಾಗನ್ನಿಸುತ್ತದೆ. ಆದದ್ದರಿಂದ ನನಗೆ ಅಪ್ಪಣೆ ಕೊಡಬೇಕು."

-ಹೀಗೆ ಹೇಳುತ್ತ ಆ ಸಾಹೇಬನು ತನ್ನ ಜವಾನನನ್ನು ಕರೆದು "ವೆಂಕಟಕೃಷ್ಣಯ್ಯನವರ ಪಾದಗಳ ಕಡೆ ನೋಡು" ಎಂದ. ಆ ಜವಾನನು ವೆಂಕಟಕೃಷ್ಣಯ್ಯನವರ ಬೂಡ್ಸು ಎಡಗಾಲಿನದು ಬಲಗಾಲಿನ ಮೇಲೆಯೂ ಬಲಗಾಲಿನದು ಎಡಗಾಲಿನ ಮೇಲೆಯೂ ಬಿಗಿಯಾಗಿ ಕಟ್ಟಿದ್ದದ್ದನ್ನು ನೋಡಿ ಮುಸಿನಗೆ ನಗುತ್ತ ದಾರಗಳನ್ನು ಬಿಚ್ಚಿ ಎಡಗಾಲಿನದನ್ನು ಎಡಗಾಲಿಗೂ ಬಲಗಾಲಿನದನ್ನು ಬಲಗಾಲಿಗೂ ತೊಡಿಸಿ ಬಿಗಿಯಿಲ್ಲದಂತೆ ದಾರಗಳನ್ನು ಕಟ್ಟಿದ. ವೆಂಕಟಕೃಷ್ಣಯ್ಯನವರು "ನನಗೆ ತಿಳಿಯಲೇ ಇಲ್ಲವಲ್ಲ ಇದು!" ಎಂದು ನಗುತ್ತ ಉತ್ತರ ಹೇಳಿದರು. ಕಸ ಗುಡಿಸಿದವರು ಬೂಡ್ಸನ್ನು ಹೇಗೆ ಇಟ್ಟಿದ್ದರೋ ಹಾಗೆಯೇ ಇವರು ಮೆಟ್ಟಿಕೊಂಡು ದಾರ ಕಟ್ಟಿಕೊಂಡಿದ್ದರಂತೆ.

# ಬೋಧನಕ್ರಮ

ವೆಂಕಟಕೃಷ್ಣಯ್ಯನವರ ಬೋಧನಕ್ರಮವನ್ನು ಕುರಿತು ಅನೇಕ ಮಂದಿ ಶಿಷ್ಯರಿಂದ ನಾನು ಕೇಳಿದ್ದೇನೆ. ಅವರು ವಿಶೇಷವಾಗಿ ಪಾಠ ಹೇಳುತ್ತಿದ್ದ ವಿಷಯಗಳು ಇಂಗ್ಲಿಷ್ ಸಾಹಿತ್ಯ ಮತ್ತು ಚರಿತ್ರೆ. ಆದರೆ ವಿಷಯದ ನಿಷ್ಕರ್ಷೆ ಎಷ್ಟು ಮಾತ್ರವೂ ಇರಲಿಲ್ಲ. ಪಠ್ಯಪುಸ್ತಕದ ಒಂದು ಪಾಠವನ್ನು ನೆವ ಮಾತ್ರವಾಗಿರಿಸಿಕೊಂಡು ಆ ಪ್ರಸ್ತಾವದಿಂದ ಪ್ರಪಂಚದ ಎಲ್ಲ ಭಾಗಗಳಿಗೂ ಪ್ರಯಾಣ ಮಾಡುತ್ತಿದ್ದರು. ಕೆಲವು ಹೆಸರುಗಳನ್ನಂತೂ ಅವರು ದಿನದಿನವೂ ಸ್ಮರಣೆ ಮಾಡಬೇಕು. ರಗ್ಬಿಯ ಆರ್ನಾಲ್‌ಡ್, ಗ್ಲ್ಯಾಡ್‌ಸ್ಟನ್, ಟೆಲೆಮಾಕಸ್, ಲಿಂಕನ್, ಜಾರ್ಜ್ ವಾಷಿಂಗ್‌ಟನ್, ಬೂಕರ್ ಟಿ. ವಾಷಿಂಗ್‌ಟನ್, ಬೆಂಜಮಿನ್ ಫ್ರಾಂಕ್‌ಲಿನ್-ಇನ್ನೂ ಅನೇಕ ಮಂದಿ ಮಹಾಪುರುಷರು ಪಾಠಕಾಲದಲ್ಲಿ ಅಲ್ಲಿ ತಾಂಡವವಾಡುತ್ತಿದ್ದರು. ವಿದ್ಯಾರ್ಥಿಗಳಿಗಾದರೋ ಕುತೂಹಲ ಕ್ಷಣೇ ಕ್ಷಣೇ ಹೊಸದಾಗುತ್ತಿತ್ತು. ಮಾತಿನ ಝುರಿ, ವಿಷಯದ ಗಾಂಭೀರ್ಯ, ಎಲ್ಲಕ್ಕಿಂತ ಹೆಚ್ಚಾಗಿ ಹೇಳುವವರು ತಮ್ಮನ್ನೇ ಮರೆತುಕೊಂಡು ಉತ್ಸಾಹಪಡುತ್ತಿದ್ದದ್ದು ವಿದ್ಯಾರ್ಥಿಗಳಿಗೆ ಸ್ಫೂರ್ತಿಕಾರಕವಾಗಿರುತ್ತಿತ್ತು. ಪರೀಕ್ಷಾರ್ಥವಾಗಿ ಅವರು ಪಾಠ ಹೇಳಿದವರಲ್ಲ. ವಿದ್ಯಾರ್ಥಿಗಳು ಶೀಲವಂತರಾಗಬೇಕೆಂಬುದು ಅವರ ಮುಖ್ಯ ಉದ್ದೇಶ. ದೇಶ ಭಕ್ತಿ ಬೋಧನೆ ಅವರಲ್ಲಿ ಪ್ರತ್ಯಕ್ಷವಾಗಿತ್ತು.

# ದಂಡನೆ

ವೆಂಕಟಕೃಷ್ಣಯ್ಯನವರು ವಿದ್ಯಾರ್ಥಿಗಳನ್ನು ದಂಡಿಸುತ್ತಿದ್ದದ್ದೂ ಉಂಟು. ತಪ್ಪು ಮಾಡಿದವನೆಂದು ತಿಳಿದ ವಿದ್ಯಾರ್ಥಿಯನ್ನು ಬೆತ್ತದಿಂದ ತೀಡುತ್ತಿದ್ದರು. ಅವನ ಕಣ್ಣಿನಲ್ಲಿ ನೀರು ಉಕ್ಕಿದೊಡನೆಯೇ ಗುರುಗಳ ಕಣ್ಣು ನೀರು ತುಂಬುವುದು. ಬೆತ್ತವನ್ನು ಬದಿಗೆ ಹಾಕಿ ಹುಡುಗನನ್ನು ಬಾಚಿ ತಬ್ಬಿಕೊಳ್ಳುವರು. ತಮ್ಮ ಕೊಠಡಿಗೆ ಅವನನ್ನು ಕರೆದುಕೊಂಡು ಹೋಗಿ ಬಾಯಿತುಂಬ ಪೆಪ್ಪರ್ಮಿಂಟು ದ್ರಾಕ್ಷಿ ಕಲ್ಲುಸಕ್ಕರೆಗಳನ್ನು ತುಂಬುತ್ತಿದ್ದರು. ಅವರ ರೂಮಿನಲ್ಲಿ ಖರ್ಜೂರ ಬಾದಾಮಿ ಮೊದಲಾದವನ್ನು ತುಂಬಿದ ಗಾಜಿನ ಜಾಡಿಗಳನ್ನು ಬೀರುವಿನಲ್ಲಿ ನಾನು ಕಣ್ಣಾರ ಕಂಡಿದ್ದೇನೆ. ಅದೆಲ್ಲ ವಿದ್ಯಾರ್ಥಿಗಳಿಗಾಗಿ-ಮುಖ್ಯವಾಗಿ ಏಟು ತಿಂದ ವಿದ್ಯಾರ್ಥಿಗಳಿಗಾಗಿ. ಹೀಗಾಗಿ ವಿದ್ಯಾರ್ಥಿಗಳಲ್ಲಿಯೇ ಒಂದು ಸಂಚು ನಡೆಯುತ್ತಿತ್ತು; ಒಬ್ಬನನ್ನು ಒಡಂಬಡಿಸಿ ಅವನ ಮೇಲೆ ದೂರು ಹೇಳಿ ಅವನನ್ನು ಹೊಡಿಸುವುದು; ಆಮೇಲೆ ಬಂದ ತಿಂಡಿಗಳನ್ನು ಎಲ್ಲರೂ ಹಂಚಿಕೊಳ್ಳುವುದು. ಹೀಗೆ ಮಾಡಿದವರಲ್ಲಿ ಒಬ್ಬ ವಿದ್ಯಾರ್ಥಿ ನನಗೆ ಸ್ನೇಹಿತನಾಗಿದ್ದವ.

# ಸತ್ಕಾರ

ಕಡೆಯ ದಿನಗಳಲ್ಲಿ ಅವರು ಅಡ್ವೊಕೇಟ್ ಚಂದ್ರಶೇಖರಯ್ಯರ್‌ರವರ ಮನೆಯಲ್ಲಿ ಹಗಲಿನ ಭೋಜನ ಮಾಡುತ್ತಿದ್ದರು. ರಾತ್ರಿ ಉಪವಾಸ. ಹಾಲು ನೀರು ಬೇಕಾದರೆ ವಿದ್ಯಾರ್ಥಿಗಳು ತಂದುಕೊಡುವರು. ರೈ॥ ಆ ॥ ಶ್ರೀನಿವಾಸ ಶಾಸ್ತ್ರಿಗಳಿಗೆ ವೆಂಕಟಕೃಷ್ಣಯ್ಯನವರಲ್ಲಿ ಅತ್ಯಂತ ಪೂಜ್ಯಭಾವ. ಅವರು ಮೈಸೂರಿಗೆ ಹೋದಾಗಲೆಲ್ಲ ಮೊದಲೆ ವೆಂಕಟಕೃಷ್ಣಯ್ಯನವರಿಗೆ ತಿಳಿಸಿ ಅವರ ದರ್ಶನಕ್ಕಾಗಿ ಹೋಗುತ್ತಿದ್ದರು. ಒಂದು ಸಾರಿ ಶಾಸ್ತ್ರಿಗಳು ಅಲ್ಲಿಗೆ ಹೋಗಿದ್ದಾಗ ವೆಂಕಟಕೃಷ್ಣಯ್ಯನವರು ಒಂದು ತಟ್ಟೆಯ ತುಂಬ ಹಣ್ಣು, ಖರ್ಜೂರ ದ್ರಾಕ್ಷಿಗಳನ್ನೂ ಇತರ ತಿಂಡಿಗಳನ್ನೂ ಇರಿಸಿ ಶಾಸ್ತ್ರಿಗಳ ಮುಂದೆ ಇಟ್ಟರು. “ನಾನು ಏನೂ ಮುಟ್ಟುವಂತಿಲ್ಲವಲ್ಲ? ವ್ಯಾಧಿಗ್ರಸ್ತನಾಗಿದ್ದೇನಲ್ಲ?” ಎಂದರು. ವೆಂಕಟಕೃಷ್ಣಯ್ಯನವರು “ನಿಮ್ಮಂಥವರು ಬಂದರೆ ನಿಮ್ಮನ್ನು ಊಟಕ್ಕೆ ಏಳಿರೆಂದು ಹೇಳುವ ಸಂತೋಷ ನನ್ನ ಪಾಲಿಗೆ ಇಲ್ಲವಲ್ಲ? ನೀವು ಏನೂ ತೆಗೆದುಕೊಳ್ಳದೆ ಹೋದರೆ ನನ್ನ ಮನಸ್ಸು ಕಳವಳ ಪಡುತ್ತದೆ” ಎನ್ನುತ್ತ ಕಣ್ಣೀರಿಟ್ಟರು. ನಾನು ಆಗ ಅಲ್ಲಿದ್ದೆ.

# ಪ್ರಜಾಪಕ್ಷ

೧೯೨೬–೨೭ ರಲ್ಲಿ ಪ್ರಜಾಪಕ್ಷವೆಂಬ ಕಕ್ಷಿ ಮೈಸೂರಿನಲ್ಲಿ ಪ್ರಬಲವಾಗಿತ್ತಷ್ಟೆ? ಆಗ ಒಂದು ಸಂಗತಿ ನಡೆಯಿತು. ಪ್ರಜಾಪ್ರತಿನಿಧಿ ಸಭೆ ಆಗ ಜಗನ್ಮೋಹನ ಬಂಗಲೆಯಲ್ಲಿ ಸೇರುತ್ತಿತ್ತು. ಸಭೆಯ ವೇದಿಕೆಯ ಮೇಲೆ ದಿವಾನರೂ ಅವರ ಸಹೋದ್ಯೋಗಿಗಳೂ ಕೂಡುತ್ತಿದ್ದರು. ಅವರ ಎಡಗಡೆ ಪಶ್ಚಿಮಾಭಿಮುಖವಾಗಿ ಮುಂದುಗಡೆ ಸಾಲಿನ ಮೊದಲಿನ ಐದಾರು ಕುರ್ಚಿಗಳಲ್ಲಿ ವೆಂಕಟಕೃಷ್ಣಯ್ಯನವರು, ಶ್ರೀನಿವಾಸರಾಯರು, ವಾಸುದೇವರಾಯರು ಮೊದಲಾದ ಹಿರಿಯ ಸದಸ್ಯರು ಕೂಡುತ್ತಿದ್ದರು. ಇದು ಬಹು ವರ್ಷಗಳಿಂದ ಬಂದಿದ್ದ ರೂಢಿ. ಪ್ರಜಾಪಕ್ಷದ ನಾಯಕರು ಕೆಲವರು ವೆಂಕಟಕೃಷ್ಣಯ್ಯನವರದು ಏನು ಹೆಚ್ಚು? ಅವರೇಕೆ ಮೊದಮೊದಲಿನ ಪೀಠಗಳಲ್ಲಿ ಕೂಡಬೇಕು? ನಾವೇಕೆ ಕೂಡಬಾರದು?” ಎಂದು ಮಾತನಾಡಿಕೊಂಡು ಹನ್ನೆರಡು ಘಂಟೆಗೆ ಪ್ರಾರಂಭವಾಗಬೇಕಾಗಿದ್ದ ಸಭೆಗೆ ಹನ್ನೊಂದಕ್ಕೇ ಬಂದು ಮೊದಲಿನ ಪೀಠಗಳಲ್ಲಿ ಕುಳಿತರು. ಅಬ್ಬಾಸ್‌ಖಾನ್ ಸಾಹೇಬರು, ಜಿ. ಪರಮಶಿವಯ್ಯನವರು, ಎಚ್. ಸಿ. ದಾಸಪ್ಪನವರು ಮೊದಲಾದವರು ಆ ಪೀಠಗಳಲ್ಲಿದ್ದವರು.

ಹನ್ನೆರಡು ಘಂಟೆಗೆ ಸರಿಯಾಗಿ ದಿವಾನ್ ಮಿರ್ಜಾಸಾಹೇಬರು ಸಭಾ ಮಂದಿರವನ್ನು ಪ್ರವೇಶಿಸಿ ಅಲ್ಲಿ ಮುಂದುಗಡೆ ಪೀಠಸ್ಥರಾಗಿದ್ದವರನ್ನು ಕಂಡರು. ಯಾವ ಮಾತನ್ನೂ ಆಡಲಿಲ್ಲ. ಅದಕ್ಕೆ ಎಂಟು ಹತ್ತು ನಿಮಿಷಕ್ಕೆ ಮುಂಚೆ ವೆಂಕಟಕೃಷ್ಣಯ್ಯನವರೂ ಅವರ ಸ್ನೇಹಿತರೂ ಬಂದಿದ್ದರು. ಮುಂದಿನ ಸಾಲಿನ ಪೀಠಗಳು ಭರ್ತಿಯಾಗಿದ್ದದ್ದನ್ನು ಕಂಡು

“ಅವರು ಅಲ್ಲಿರಲಿ. ಜಾಗ ಖಾಲಿಯಿರುವ ಕಡೆ ನಾವು ಕೂಡೋಣ. ಅದರಲ್ಲೇನು ವ್ಯತ್ಯಾಸ?”

-ಎನ್ನುತ್ತ ಒಂದು ಮೂಲೆಯಲ್ಲಿದ್ದ ಕುರ್ಚಿಗಳ ಮೇಲೆ ಕುಳಿತರು. ಸಭಾಕಾರ್ಯ ಆರಂಭವಾಯಿತು. ಯಾವುದೋ ವಿಷಯ ಚರ್ಚೆಗೆ ಬಂದಿತು. ಅದನ್ನು ಕುರಿತು ಅಗ್ರಾಸನದ ಸಮೀಪದಲ್ಲಿದ್ದ ಮುಖಂಡರುಗಳೆಲ್ಲ ಭಾಷಣ ಮಾಡಿದರು. ಆ ಭಾಷಣಗಳು ಮುಗಿದ ಮೇಲೆ, ವಿಷಯವನ್ನು ಸಭೆಯ ತೀರ್ಮಾನಕ್ಕೊಡ್ಡುವ ಮುನ್ನ ಮಿರ್ಜಾ ಸಾಹೇಬರವರು ಅಧ್ಯಕ್ಷಸ್ಥಾನದಿಂದ ವೆಂಕಟಕೃಷ್ಣಯ್ಯನವರ ಕಡೆ ತಿರುಗಿ ಕೇಳಿದರು:

M: “Mr. Venkatakrishnaiya, have you nothing to say?”

V: “Many members have spoken. Perhaps they have discussed it enough.”

M: “I am anxious to know your views. Government cannot ignore the views of a veteran like you.”

ಸಭೆಯ ಬಹುಭಾಗಕ್ಕೆ ಸಂತೋಷವಾಗಿ ಚಪ್ಪಾಳೆ ಬಂದಿತು. ಮಿರ್ಜಾರವರು ಪಕ್ಷಪಾತ ಮಾಡಿದರೆಂದೂ ಸಭೆಗೆ ಅವಮಾನಮಾಡಿದರೆಂದೂ ಗುಸುಗುಸು ನಡೆಯಿತು. ವೆಂಕಟಕೃಷ್ಣಯ್ಯನವರ ನಡತೆಯಲ್ಲಾಗಲಿ ಅಂತರಂಗದಲ್ಲಾಗಲಿ ಯಾವ ಹೆಚ್ಚು ಕಡಮೆಯೂ ಆಗಲಿಲ್ಲ.

***

ಕಡೆಕಡೆಯ ದಿನಗಳಲ್ಲಿ ಮಿರ್ಜಾಸಾಹೇಬರಿಗೂ ವೆಂಕಟಕೃಷ್ಣಯ್ಯನವರಿಗೂ ಮನಸ್ತಾಪ ಬಂದದ್ದುಂಟು. ಮಿರ್ಜಾಸಾಹೇಬರು ಆಗ ಮಾಡಿದ್ದನ್ನು ನಾನು ಆಗಲೂ ಒಪ್ಪಲಿಲ್ಲ. ಅದು ಘನತೆಯ ದಾರಿಯಲ್ಲವೆಂದೂ ಉದಾರತೆಯಲ್ಲವೆಂದೂ ಈಗಲೂ ಅಭಿಪ್ರಾಯವಿಟ್ಟುಕೊಂಡಿದ್ದೇನೆ.

ವೆಂಕಟಕೃಷ್ಣಯ್ಯನವರ ಅವಸಾನಕಾಲದಲ್ಲಿ ಅವರ ದರ್ಶನಕ್ಕಾಗಿ ನಾನು ಕೃಷ್ಣರಾಜೇಂದ್ರ ಆಸ್ಪತ್ರೆಗೆಹೋಗಿದ್ದೆ. ಅವರು ಎಂದಿನಂತೆ ಪ್ರಸನ್ನಚಿತ್ತರಾಗಿದ್ದರು. ಚಿಂತೆಯ ಚಿಹ್ನೆಯೇನೂ ಕಾಣಿಸಲಿಲ್ಲ. ಆಗ ಸುತ್ತಮುತ್ತ ಇದ್ದ ಶುಶ್ರೂಷಾಕರ್ತರು ಅವರ ಶಿಷ್ಯರು. ಬಹು ವರ್ಷಗಳಿಂದ ವೆಂಕಟಕೃಷ್ಣಯ್ಯನವರು ಮನಸ್ಸನ್ನು ತಯಾರು ಮಾಡಿಕೊಂಡಿದ್ದರು.

> ಏಕಾಕೀ ನಿಃಸ್ಪೃಹಃ ಶಾನ್ತಃ ಪಾಣಿಪಾತ್ರೋ ದಿಗಂಬರಃ ।
> ಕದಾ ಶಂಭೋ ಭವಿಷ್ಯಾಮಿ ಕರ್ಮನಿರ್ಮೂಲನಕ್ಷಮಃ ॥

# ೬ ಕೆ. ಪಿ. ಪುಟ್ಟಣ್ಣಶೆಟ್ಟರು

ಕೆ.ಪಿ. ಪುಟ್ಟಣ್ಣಶೆಟ್ಟರವರು ೧೯೦೩-೪ರಲ್ಲಿ ಕೋಲಾರದ ಡೆಪ್ಯುಟಿ ಕಮಿಷನರಾಗಿದ್ದರು. ಆಗ ಒಂದು ದಿನ ಕೋಲಾರದ ಕ್ಲಬ್ಬಿನಲ್ಲಿ ಗ್ರಂಥಭಂಡಾರದ ಪ್ರಾರಂಭೋತ್ಸವ ಪುಟ್ಟಣ್ಣಶೆಟ್ಟರವರ ಹಸ್ತದಿಂದ ನಡೆಯಿತು. ಆಗ ಅವರು ಮಾಡಿದ ಭಾಷಣವನ್ನು ನಾನು ಕೇಳಿದೆ. ನಾನು ಹೈಸ್ಕೂಲು ವಿದ್ಯಾರ್ಥಿ. ಯಾರೋ ನನ್ನನ್ನು ಆ ಸಮಾರಂಭಕ್ಕೆ ಕರೆದುಕೊಂಡು ಹೋಗಿದ್ದರು. ಭಾಷಣ ಆದದ್ದು ಐದಾರು ನಿಮಿಷ ಇರಬಹುದು. ಅದು ಇಂಗ್ಲಿಷಿನಲ್ಲಿ. ಅವರು ಉಪಯೋಗಿಸಿದ ಪದಗಳೂ ಅವುಗಳಲ್ಲಿ ಅಡಗಿದ್ದ ಭಾವಗಳೂ ಬಹು ಚೆನ್ನವೆಂದು ನನ್ನ ಮನಸ್ಸಿಗನ್ನಿಸಿತು. ಎಷ್ಟು ಉಚಿತವೋ ಅಷ್ಟೇ ಇತ್ತು; ಸಣ್ಣದಾಗಿ ಸರಣವಾಗಿತ್ತು. ಹೀಗೆ ನನಗೆ ಇವರ ವಿಷಯದಲ್ಲಿ ಮೆಚ್ಚಿಕೆಯೂ ಮನ್ನಣೆಯೂ ಉಂಟಾದವು.

ಅಲ್ಲಿಂದ ಸುಮಾರು ಒಂದು ವರ್ಷ ಕಳೆದ ಬಳಿಕ ಅವರು ಮುಳುಬಾಗಲಿಗೆ ಸರ್ಕೀಟು ಬಂದರು. ಆಗ ನಾನು ಅಲ್ಲಿಯ ಸ್ಕೂಲಿನಲ್ಲಿ ಬದಲಿ ಮೇಷ್ಟರಾಗಿ ಕೆಲಸಮಾಡುತ್ತಿದ್ದೆ. ಆಗ ನಡೆಯಿತು ಒಂದು ಪ್ರಕರಣ. ಇದರಲ್ಲಿ ಕೊಂಚ ಸ್ವಪ್ರಶಂಸೆ ಕಾಣಬಹುದು; ವಾಚಕರು ಮನ್ನಿಸಬೇಕು.

## ಶಾಲೆಯ ತನಿಖೆ

ಪುಟ್ಟಣ್ಣಶೆಟ್ಟರು ಸ್ಕೂಲಿಗೆ ಬಂದು ಎಲ್ಲ ತರಗತಿಗಳನ್ನೂ ಪರೀಕ್ಷೆಮಾಡಿದರು. ಆ ಕಾಲದಲ್ಲಿ ಡೆಪ್ಯುಟಿ ಕಮಿಷನರು ಸರಕಾರದ ಎಲ್ಲ ಇಲಾಖೆಗಳ ಸಂಸ್ಥೆಗಳನ್ನೂ ತನಿಖೆ ಮಾಡುವುದು ಪದ್ಧತಿ. ಅದರಂತೆ ಅವರು ಸ್ಕೂಲಿಗೆ ಬಂದಿದ್ದರು. ನಾನು ನಡಸುತ್ತಿದ್ದ ತರಗತಿಗೆ ಬಂದು ಏನೋ ಒಂದು ಮಾತು ಕೇಳಿದರು. ನಾನು ಏನೋ ಜವಾಬು ಹೇಳಿದೆ. ಸ್ಕೂಲಿನ ತನಿಖೆ ಮುಗಿದ ಮೇಲೆ ನಮ್ಮ ಹೆಡ್‌ಮಾಸ್ಟರು "ವಿಸಿಟರ್ಸ್ ಬುಕ್" ಎಂಬ ಭೇಟಿಗಾರರ ಅಭಿಪ್ರಾಯಗಳ ಪುಸ್ತಕವನ್ನು ಅವರ ಮುಂದಿಟ್ಟರು. ಪುಟ್ಟಣ್ಣಶೆಟ್ಟರು ಆ ಪುಸ್ತಕದಲ್ಲಿ ತಮ್ಮ ಮೆಚ್ಚಿಕೆಯನ್ನು ಒಂದೆರಡು ಮಾತುಗಳಲ್ಲಿ ತಿಳಿಸಿ, ಅದರಲ್ಲಿ ನನ್ನ ವಿಷಯ ಒಂದೆರಡು ಮಾತು ಬರೆದಿದ್ದರು. ಅದನ್ನು ನೋಡಿ ನಮ್ಮ ಹೆಡ್‌ಮಾಸ್ಟರು ಹಿಗ್ಗಿದರು. ಸಂಜೆಯೊಳಗಾಗಿ

ಅದು ಊರೆಲ್ಲಾ ಹರಡಿ ಕೋಲಾಹಲವನ್ನುಂಟುಮಾಡಿತು. ನನಗೆ ಅದರಿಂದ ಆದದ್ದು ಹಿಂಸೆ, ಹೀಗೆ:

ನನ್ನ ತಂದೆ, ಅವರ ಸ್ನೇಹಿತರು ಸೇರಿ ಯೋಚನೆ ಮಾಡಿದರು: ಇದು ಅದೃಷ್ಟಕಾಲ. ಇದನ್ನು ಹಾಗೆಯೇ ಬಿಡಬಾರದು, ಉಪಯೋಗಕ್ಕೆ ತಂದುಕೊಳ್ಳಬೇಕು. ಎಂದರೆ ಈ ಚಿರಂಜೀವಿಯ ಕೈಯಿಂದ ಚಾಕರಿಗಾಗಿ ಒಂದು ಅರ್ಜಿ ಬರಸಿ ಡೆಪ್ಯುಟಿ ಕಮಿಷನರಿಗೆ ಖುದ್ದು ಒಪ್ಪಿಸತಕ್ಕದ್ದು. ಅರ್ಜಿ ನೋಡಿದ ಕೂಡಲೆ ಚಾಕರಿಯಾಗುವುದು ಖಂಡಿತ! ಹೀಗೆ ತೀರ್ಮಾನಮಾಡಿ ಅರ್ಜಿ ಬರೆಯಬೇಕೆಂದು ನನ್ನನ್ನು ಒತ್ತಾಯಪಡಿಸಿದರು. ನಾನಾದರೋ ಸರಕಾರಿ ಚಾಕರಿ ಸೇರುವುದಿಲ್ಲವೆಂದು ಹಟ. ರಾತ್ರಿ ಹನ್ನೆರಡು ಘಂಟೆಯವರೆಗೆ ಈ ವಾದಗಳು ನಡೆದವು. ನಾನು ಪೂರ್ವಕಾಲದವನಾದದ್ದರಿಂದ ಹಿರಿಯರ ಮಾತಿಗೆ ತಲೆಬಾಗಲೇಬೇಕೆನ್ನಿಸಿತು. ಒಂದು ಅರ್ಜಿಯನ್ನು ಬರೆದದ್ದೂ ಆಯಿತು. ಮಾರನೆಯ ದಿನ ಮಧ್ಯಾಹ್ನ ಟ್ರಾವಲರ್ಸ್ ಬಂಗಲೆಗೆ ಹೋಗಿ ಅರ್ಜಿ ಒಪ್ಪಿಸತಕ್ಕದ್ದೆಂದು ತೀರ್ಮಾನ.

# ಏರ್ಪಾಟು

ಡೆಪ್ಯುಟಿ ಕಮಿಷನರು ಮಧ್ಯಾಹ್ನ ಮೂರು ಘಂಟೆಯಿಂದ ನಾಲ್ಕರವರೆಗೆ ಅರ್ಜಿಗಳನ್ನು ತೆಗೆದುಕೊಳ್ಳುತ್ತಾರೆ; ಅವರಿಗೆ ಬೇರೆ ಹೊತ್ತಿಲ್ಲ, ಆದದ್ದರಿಂದ ನಾನೂ ನನ್ನ ತಂದೆಯೂ ಅವರ ಸ್ನೇಹಿತರು ಮೂವರು ನಾಲ್ವರೂ ಮೂರು ಘಂಟೆಗೆ ಸರಿಯಾಗಿ ಟ್ರಾವಲರ್ಸ್ ಬಂಗಲೆಯಲ್ಲಿರತಕ್ಕದ್ದು-ಅರ್ಜಿಯ ಸಮೇತರಾಗಿ. ಇದು ಏರ್ಪಾಟು.

ಆಗ ಇನ್ನೊಂದು ತಕರಾರು ಹುಟ್ಟಿತು: ನಾನು ರುಮಾಲು ಧರಿಸಿರಬೇಕೆಂದು. ಇದು ದೊಡ್ಡ ಗದ್ದಲಕ್ಕಿಟ್ಟುಕೊಂಡಿತು. ನಾನು ಟೋಪಿ ಧರಿಸುತ್ತಿದ್ದವನು. ರುಮಾಲು ನನಗೆ ಇಷ್ಟವಾಗಲಿಲ್ಲ. ಈ ಚರ್ಚೆ ದೀರ್ಘವಾಗಿ ಬೆಳೆದ ಮೇಲೆ ನನ್ನ ತಂದೆಯ ಸ್ನೇಹಿತ ಸುಬ್ಬಾಭಟ್ಟರು ಮಧ್ಯಸ್ಥಿಕೆ ಮಾಡಿದರು. ನಾನು ರುಮಾಲನ್ನು ಧರಿಸಿಕೊಂಡು ಬೀದಿಯಲ್ಲಿ ನಡೆಯಬೇಕಾದದ್ದಿಲ್ಲ; ಟೋಪಿಯನ್ನೇ ಹಾಕಿಕೊಂಡು ಬರಬಹುದು-ಬಂಗಲೆಯವರೆಗೂ. ಕಾಂಪೌಂಡ್ ಒಳಹೊಕ್ಕ ಬಳಿಕ ಸಾಹೇಬರನ್ನು ನೋಡುವ ಒಂದು ಕ್ಷಣ ಮಾತ್ರ ತಲೆಗೆ ಸಿಂಬಿಸುತ್ತಿರಬೇಕಾದದ್ದು.

# ನನ್ನ ಅದೃಷ್ಟ ಪರೀಕ್ಷೆ

ಇದಕ್ಕೆ ನಾನು ಒಪ್ಪಿಕೊಂಡೆ, ಗತ್ಯಂತರವಿಲ್ಲದೆ. ರುಮಾಲಿನ ಸುರುಳಿ ಕೈಯಲ್ಲಿ ಹಿಡಿದು ಹಿಂದೆ ನಡೆದೆ. ನನ್ನ ತಂದೆ ಅರ್ಜಿಯನ್ನು ಹಿಡಿದು ಮುಂದೆ ನಡೆದರು. ಈ ಮೆರವಣಿಗೆ ಟ್ರಾವಲರ್ಸ್ ಬಂಗಲೆಯ ಉತ್ತರದ ಕಡೆಯ ಹಿಂಬಾಗಿಲಿನಿಂದ ಒಳಕ್ಕೆ ಹೋಯಿತು. ಈ ವೇಳೆಗೆ ಘಂಟೆ ನಾಲ್ಕಾಗಿ ಬಿಟ್ಟಿತ್ತು.

ನನ್ನ ತಂದೆ ಬಂಗಲೆಯ ಮುಂದುಗಡೆ ಹೋಗಿ ವಿಚಾರಿಸಲು ಅಲ್ಲಿದ್ದ ಗುಮಾಸ್ತರು "ಸಾಹೇಬರು ಈಗ ತಾನೆ ಒಳಕ್ಕೆ ಹೋದರು. ಈಗ ನಿಮಗೆ ಸಿಕ್ಕುವುದಿಲ್ಲ. ನಿಮ್ಮ ಅರ್ಜಿಯನ್ನು ಪೋಸ್ಟಿನಲ್ಲಿ ಕಳುಹಿಸಿ" ಎಂದರು.

ಅಲ್ಲಿಗೆ ಅರ್ಜಿಯ ವಿಚಾರ ಮುಗಿಯಿತು. ಆದರೆ ನನಗೆ ಸಲ್ಲತಕ್ಕದ್ದು, ಸಾವಕಾಶವಾಗಿ ಎರಡು ಮೂರು ವಾರ ದಿನದಿನವೂ ಸಲ್ಲುತ್ತಿತ್ತು. "ಹೇಳಿದ ಮಾತನ್ನು ಕೇಳುವವನಲ್ಲ" "ಮಖೇಡಿ" "ದುರಹಂಕಾರಿ." "ದೊಡ್ಡವರ ಮಾತಿನಲ್ಲಿ ಗೌರವವಿಲ್ಲ." "ತಲೆಹೋಕ ಮುಂಡೇದು" "ಪಕ್ಕ ಕೆಟ್ಟು ಹೋಯಿತು" "ಪೋಲಿಪುಂಡರ ಸಹವಾಸ" -ಹೀಗೆ. ನನ್ನ ತಂದೆಗೆ ತುಂಬ ನಿರಾಶೆಯಾಯಿತು. ಆ ನಿರಾಶೆಗೆ ತಕ್ಕಂತೆ ನನ್ನ ಮೇಲೆ ಶಬ್ದಪ್ರಯೋಗ. ಕಡೆಗೆ ಮಹಾನುಭಾವ ಸುಬ್ಬಾಭಟ್ಟರು ನನ್ನ ಪರವಾಗಿ ನಿಂತರು. "ಹೋಗಲಿ ಬಿಡಿ. ಅವನ ಅದೃಷ್ಟ ಹೋಯಿತೆ ಇದರಲ್ಲಿ? ದೇವರ ದಯೆಯಿದ್ದರೆ ಯಾವುದೋ ಚಾಕರಿ ಆಗುತ್ತದೆ. ಉಪವಾಸ ಸಾಯುವುದಿಲ್ಲ." ಈ ರೀತಿ ಭರವಸೆ ಹೇಳಿದರು.

ನಾನು ಈ ಸಂಗತಿಯನ್ನು ಬಹು ವರ್ಷಗಳಾದ ಮೇಲೆ ಪುಟ್ಟಣ್ಣಶೆಟ್ಟರವರಲ್ಲಿ ಒಂದು ಸಲ ಹೇಳಿದೆ. ಅವರು ಗಟ್ಟಿಯಾಗಿ ಮುಖದ ತುಂಬ ನಕ್ಕರು.

# ನಿತ್ಯಹಸನ್ಮುಖಿತ್ವ

ನಾನು ಬೆಂಗಳೂರಿಗೆ ಬಂದ ಬಳಿಕ (೧೯೦೫-೭) ಅವರ ಪರಿಚಯ ನನಗೆ ಹೇಗಾಯಿತೋ ಈಗ ಜ್ಞಾಪಕವಿಲ್ಲ. ನನ್ನ "ರಂಗಾಚಾರ್ಲು" ಪುಸ್ತಕ ಪ್ರಕಟವಾದ ಮೇಲೆ ಕೆ. ರಾಮಚಂದ್ರರಾಯರವರು ನನ್ನನ್ನು ಪುಟ್ಟಣ್ಣಶೆಟ್ಟರವರಲ್ಲಿಗೆ ಕರೆದುಕೊಂಡು ಹೋಗಿದ್ದದ್ದು ಜ್ಞಾಪಕವಿದೆ. ಪುಟ್ಟಣ್ಣಶೆಟ್ಟರು ನನ್ನನ್ನು ಯಾವಾಗಲೂ ವಿಶ್ವಾಸದಿಂದ ಕಾಣುತ್ತಿದ್ದರೆಂದು ನಾನು ಹೇಳಿದರೆ ಅದರಲ್ಲಿ ಇತರರಿಗೆ ವಿಶೇಷಾಂಶವೇನೂ ತೋರಲಾರದು. ಪುಟ್ಟಣ್ಣಶೆಟ್ಟರು ಎಲ್ಲರನ್ನೂ ವಿಶ್ವಾಸದಿಂದಲೇ ಕಾಣುತ್ತಿದ್ದರು. ಅವರ ಬಳಿಗೆ ಹೋದವರಾರನ್ನೂ ಅವರು ಮುಖ ಗಂಟು ಹಾಕಿಕೊಂಡು ನೋಡಿದವರಲ್ಲ. ಎಲ್ಲರನ್ನೂ ಹಸನ್ಮುಖದಿಂದ ಮಾತನಾಡಿಸುತ್ತಿದ್ದರು. ಇದರಲ್ಲೇನು ವಿಶೇಷ?

ನಿತ್ಯಹಸನ್ಮುಖಿತ್ವವೇ ವಿಶೇಷ.

ಪ್ರಶ್ನೆ ಕೇಳುವವರು ಹಾಗೆ ಸರ್ವದಾ ಹಸನ್ಮುಖಿಗಳಾಗಿರುತ್ತಾರೋ? ಯಾರಿಗೆ ನೈಜವಾದ ಒಳ್ಳೆಯತನವೂ ಮನಸ್ಸಿನಲ್ಲಿ ಪ್ರಸನ್ನತೆಯೂ ಇರುತ್ತವೋ ಅವರಿಗೆ ಮಾತ್ರ ಸಾಧ್ಯವಾದದ್ದು ನಿತ್ಯಹಸನ್ಮುಖಿತ್ವ. ಹಾಗಿಲ್ಲದ ಹಸನ್ಮುಖಿತ್ವವು ಬರಿಯ ಕಪಟ. ಪುಟ್ಟಣ್ಣಶೆಟ್ಟರು ಕಪಟಿಗಳೆಂದು ನಾನು ಸರ್ವಥಾ ಒಪ್ಪಿಕೊಳ್ಳಲಾರೆ. ಅವರು ಶ್ರೀರಾಮ ಚಂದ್ರನ ಒಂದು ಗುಣವನ್ನು ಹೇಗೋ ಸಂಪಾದಿಸಿಕೊಂಡಿದ್ದರು. ಶ್ರೀರಾಮನದು,

> ಸ್ಮಿತಪೂರ್ವಾಭಿಭಾಷೀ

"ಮೊದಲು ಮುಗುಳ್ನಗೆ. ಅನಂತರ ಮಾತು" ಎಂದು ವಾಲ್ಮೀಕಿಗಳು ನಮಗೆ ತಿಳಿವಳಿಕೆ ಕೊಟ್ಟಿದ್ದಾರೆ. ಆ ನಿತ್ಯಪ್ರಸನ್ನತೆ ಪುಟ್ಟಣ್ಣಶೆಟ್ಟರಿಗೆ ಬಂದಿತ್ತು. ಇದನ್ನು ನಾನು ನೂರಾರು ಸಾರಿಯ ಅನುಭವದಿಂದ ಕಂಡುಕೊಂಡಿದ್ದೇನೆ.

# ಪೌರಸಭಾಧ್ಯಕ್ಷತೆ

ಪುಟ್ಟಣ್ಣಶೆಟ್ಟರವರ ಶೀಲ ಸ್ವಭಾವಗಳು ವಿಶ್ವೇಶ್ವರಯ್ಯನವರಿಗೆ ಮೆಚ್ಚಿಕೆಯಾಗಿದ್ದವು. ವಿಶ್ವೇಶ್ವರಯ್ಯನವರು ಆಗಾಗ ಪುಟ್ಟಣ್ಣಶೆಟ್ಟರವರ ಮನೆಗೆ ಬಂದು ಗೌರವ ತೋರಿಸುತ್ತಿದ್ದರು. ಅಷ್ಟು ಮಾತ್ರ ಆಡಳಿತದ ಅನುಭವವನ್ನು ಪಡೆದು ದೇಶದ ವಿದ್ಯಮಾನಗಳನ್ನು ಸ್ವತಃ ಕಂಡು ಬಹುಜನದ ಪ್ರೀತಿಯನ್ನೂ ಮರ್ಯಾದೆಯನ್ನು ಸಹ ಗಳಿಸಿಕೊಂಡಿರುವಂಥ ಮಹನೀಯರಿಂದ ದೇಶೋಪಕಾರಗಳಾದ ಕೆಲಸಗಳು ಎಷ್ಟೋ ನಡೆದಾವು; ಅಂಥವರಿಗೆ ಅವಕಾಶ ಕಲ್ಪಿಸಿ ಪ್ರೋತ್ಸಾಹಕೊಡುವುದು ಸರಕಾರದ ಅವಶ್ಯ ಕರ್ತವ್ಯವೆಂದು ವಿಶ್ವೇಶ್ವರಯ್ಯನವರು ಭಾವಿಸಿದ್ದರು. ಅದರಂತೆ ಅವರ ದಿವಾನಗಿರಿಯ ಹೊಸತಿನಲ್ಲಿಯೇ ಪುಟ್ಟಣ್ಣಶೆಟ್ಟರವರಿಗೆ ಅಂಥ ಅವಕಾಶವನ್ನು ಕೊಟ್ಟರು. ಬೆಂಗಳೂರಿನ ಪೌರಸಭೆಗೆ (ಮ್ಯುನಿಸಿಪಲ್ ಕೌನ್ಸಿಲ್) ಪುಟ್ಟಣ್ಣಶೆಟ್ಟರಂಥ ಘನತೆವೆತ್ತವರು ಅಧ್ಯಕ್ಷರಾಗಿರಬೇಕೆಂದು ವಿಶ್ವೇಶ್ವರಯ್ಯನವರ ತಾತ್ಪರ್ಯ. ಇದನ್ನು ಪುಟ್ಟಣ್ಣಶೆಟ್ಟರವರಿಗೆ ಸೂಚಿಸಿದಾಗ ಶೆಟ್ಟರವರು ಒಂದು ಕರಾರು ಹಾಕಿದರು: “ಕೆಲಸ ಬೇಗ ಬೇಗ ನಡೆಯಬೇಕಾದರೆ ಮ್ಯುನಿಸಿಪಾಲಿಟಿಗೆ ಸರಕಾರದಿಂದ ಬರಬೇಕಾದ ಮಂಜೂರಾತಿ ಮೊದಲಾದ ಹುಕುಮುಗಳು ಬೇಗ ಬೇಗ ಬರಬೇಕು. ಇದು ಸಾಧ್ಯವಾಗಬೇಕಾದರೆ ದಿವಾನರು ಬೆಂಗಳೂರು ಮ್ಯುನಿಸಿಪಾಲಿಟಿಯ ದಫ್ತರವನ್ನು (ಪೋರ್ಟ್‌ಫೋಲಿಯೋ) ತಮ್ಮ ಸ್ವಂತ ವಶದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸರಕಾರದ ಕಡೆಯ ಒಬ್ಬ ಕೌನ್ಸಿಲರಿಗೂ ಮ್ಯುನಿಸಿಪಾಲಿಟಿಯ ರಿಟೈರ್ಡ್ ಕೌನ್ಸಿಲರಿಗೂ ನಡುವೆ ತಕರಾರಿಟ್ಟುಕೊಳ್ಳಬಾರದು. ಸರಕಾರದ ಜವಾಬ್ದಾರಿಯನ್ನು ನೀವು ಸ್ವಂತವಾಗಿ ವಹಿಸಿಕೊಳ್ಳುವುದಾದರೆ ನಿಮ್ಮ ಇಷ್ಟದಂತೆ ನಡೆಯುವ ಭಾರವನ್ನು ನಾನು ಹೊತ್ತುಕೊಳ್ಳುತ್ತೇನೆ” ಎಂದರು; ವಿಶ್ವೇಶ್ವರಯ್ಯನವರು ಸಂತೋಷದಿಂದ ಒಪ್ಪಿದರು.

ಆ ದಿನಗಳಲ್ಲಿ ನನಗೆ ಪುಟ್ಟಣ್ಣಶೆಟ್ಟರವರಲ್ಲಿ ಹೋಗಿಬರುವುದು ರೂಢಿಯಾಗಿತ್ತು. ಒಂದು ದಿನ ಮಧ್ಯಾಹ್ನ ಯಾವುದೋ ಮೋಟಾರ್ ಕಂಪೆನಿಯ ಏಜೆಂಟರು ಪುಟ್ಟಣ್ಣಶೆಟ್ಟರವರಲ್ಲಿಗೆ ಬಂದು ಒಂದು ಹೊಸ ಕಾರನ್ನು ತೋರಿಸಿ ಅದರಲ್ಲಿ ಅವರು ಬರಬೇಕೆಂದು ಬೇಡಿದರು. ಪುಟ್ಟಣ್ಣಶೆಟ್ಟರು ನನ್ನ ಕಡೆಗೆ ತಿರುಗಿ ಹೇಳಿದರು:

“ನಾನು ಇನ್ನೂ ಪ್ರೆಸಿಡೆಂಟ್ ಆಗಿಲ್ಲ. ಅಷ್ಟರೊಳಗೇ ಈ ಮೋಟಾರ್ ಗಿರಾಕಿಗಳ ಅವಾಂತರ!”

ನಾನು ಅವರಲ್ಲಿಗೆ ಹೋದಾಗಲೆಲ್ಲ ಯಾವುದೋ ಒಂದು ಸಾರ್ವಜನಿಕ ವಿಚಾರವನ್ನು ಕುರಿತು, ಅಥವಾ ಪೂರ್ವಚರಿತ್ರೆಯ ಯಾವುದೋ ಸಂಗತಿಯನ್ನು ಕುರಿತು, ಅಥವಾ ಒಂದಾನೊಂದು ನೀತಿತತ್ತ್ವವನ್ನು ಕುರಿತು ಮಾತನಾಡುವರು. ಮಾತು ಮಿತ, ಆದರೆ ಸಾರವುಳ್ಳದ್ದು. ಪೊಳ್ಳುಮಾತಿಗೆ ಅವಕಾಶವಿರಲಿಲ್ಲ.

ಅವರು ಪ್ರೆಸಿಡೆಂಟರಾದ ಕೆಲವು ದಿವಸಗಳೊಳಗಾಗಿ ವಿಶ್ವೇಶ್ವರಯ್ಯನವರು ಪುರಾಭಿವೃದ್ಧಿಯ ಏರ್ಪಾಟುಗಳನ್ನು ಆಲೋಚನೆ ಮಾಡಿದರು. ಸಿಟಿ ಮಾರ್ಕೆಟ್ ಚೌಕದಲ್ಲಿ ಒಂದು ಪುರಜನ ಸಭೆಯನ್ನು ಕರೆದಿದ್ದರು. ಬಹಳ ದೊಡ್ಡ ಗುಂಪು ಬಂದಿತ್ತು. ದಿವಾನರು ಏನೋ ವಿಚಾರ ಹೇಳುತ್ತಿದ್ದರು. ನಾನು ಆಗ ಒಂದು ಮಾತನ್ನಾಡಿದೆ. ವಿಶ್ವೇಶ್ವರಯ್ಯನವರು ನನ್ನ ಕಡೆ ತಿರುಗಿ ಹೇಳಿದರು:

“ನೀನು ದೊಡ್ಡ ಆಕ್ಷೇಪಕರ್ತ (Critic). ಬರಿಯ ಆಕ್ಷೇಪಣೆಯಿಂದ ಏನಾಗುತ್ತದೆ? ಕೆಲಸಕ್ಕಿಳಿದು ನಮ್ಮ ಕಷ್ಟಗಳನ್ನು ತಿಳಿದುಕೊಳ್ಳಬೇಕು.”

ನಾನು ಸುಮ್ಮನಿದ್ದೆ.

# ಪೌರಸಭೆಯ ಪುನರ್ವಿರಚನೆ

ಇದಾದ ಎಂಟು ಹತ್ತು ದಿವಸಗಳಲ್ಲಿ ಪೌರಸಭೆಯನ್ನು ಪುನರ್ವಿರಚನೆ ಮಾಡಬೇಕಾದ ಪ್ರಸಂಗ ಬಂದಿತು. ಆ ಬಗೆಗೆ ಕೆಲವರನ್ನು ನಾಮಿನೇಟ್ ಮಾಡಲಿಕ್ಕಾಗಿ ಮ್ಯುನಿಸಿಪಲ್ ಪ್ರೆಸಿಡೆಂಟರ ಕಡೆಯಿಂದ ಸರಕಾರಕ್ಕೆ ಶಿಫಾರಸು ಹೋಯಿತು. ಆ ಶಿಫಾರಸು ಪಟ್ಟಿಯಲ್ಲಿ ದಿವಾನ್ ವಿಶ್ವೇಶ್ವರಯ್ಯನವರು ತಾವಾಗಿ ನನ್ನ ಹೆಸರನ್ನು ಸೇರಿಸಿದ್ದರು. ಇದು ಪುಟ್ಟಣ್ಣಶೆಟ್ಟರಿಗೆ ತಿಳಿದ ಕೂಡಲೆ ಅವರಿಗೆ ಬಹು ಸಂತೋಷವಾಯಿತಂತೆ. ಅವರು ನನಗೆ ಹೇಳಿ ಕಳುಹಿಸಿ, ತಮ್ಮ ಸಂತೋಷವನ್ನು ತಿಳಿಸಿದರು. “ನಾನು ದಿವಾನರಿಗೆ ಕೃತಜ್ಞನಾಗಿರುವುದೇನೋ ಸರಿ. ಆದರೆ ಇದು ನನಗೆ ಬೇಕಿಲ್ಲದ ಹುದ್ದೆ. ನಾನು ಮಾಡಿಕೊಂಡಿರುವ ಕೆಲಸ ನನಗೆ ಸಾಕಾಗಿದೆ. ಈ ಕೆಲಸದಿಂದ ನನ್ನ ಮನಸ್ಸಿಗೆ ವಿಕ್ಷೇಪ (Disturbance) ವಾದೀತು” ಎಂದು ನಾನು ಹೇಳಿದೆ. ಅದಕ್ಕೆ ಪ್ರತಿಯಾಗಿ ಪುಟ್ಟಣ್ಣಶೆಟ್ಟರು ಹೇಳಿದರು:

# ಸಭೆಯ ಕಾರ್ಯರೀತಿ

“ದಿವಾನರು ಹೇಳಿದ್ದು ಮನಸ್ಸಿಗೆ ಬರಲಿಲ್ಲವೆ? ನಿಮ್ಮ ಕ್ರಿಟಿಸಿಸ್‌ಮ್ (ಆಕ್ಷೇಪಣೆ) ಪ್ರಯೋಜನಕ್ಕೆ ಬರಬೇಕಾದರೆ ಅದರಲ್ಲಿ ತಿಳಿವಳಿಕೆ ಇರಬೇಕು. ಕೆಲಸದ ಒಳಹೊಕ್ಕು ನೋಡದಿದ್ದರೆ ನಿಮಗೆ ತಿಳಿವಳಿಕೆ ಹೇಗೆ ಬರುತ್ತದೆ? ನಿಮ್ಮಂಥ ಚಿಕ್ಕ ವಯಸ್ಸಿನವರು ಈ ಜವಾಬ್ದಾರಿಯನ್ನು ಅಭ್ಯಾಸಮಾಡಿಕೊಳ್ಳಬೇಕು.”

ನಾಲ್ಕೈದು ವರ್ಷಕಾಲ ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಾನು ಮ್ಯುನಿಸಿಪಲ್ ಕೌನ್ಸಿಲರಾಗಿದ್ದದ್ದು ನನಗೆ ಸಂತೋಷದ ಅನುಭವ, ಮತ್ತು ಲೋಕಜೀವನದ ಅನುಭವ. ನನ್ನ ಜೊತೆಯಲ್ಲಿ ಕೌನ್ಸಿಲರುಗಳಾಗಿದ್ದವರು ಎಲ್ಲ ವರ್ಗಗಳಿಂದಲೂ ಸನ್ಮಾನ್ಯರಾಗಿದ್ದವರು. ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್ಯರು, ಎಸ್. ವೆಂಕಟರಂಗಯ್ಯಂಗಾರ್ಯರು, ಆದೆಪ್ಪನವರು, ಚಿನ್ನಸ್ವಾಮಿಶೆಟ್ಟರು, ಉಸ್ಮಾನ್‌ಖಾನ್ ಸಾಹೇಬರು, ಕರಣಿಕ ಕೃಷ್ಣಮೂರ್ತಿಗಳು-ಇವರೆಲ್ಲ ಮರ್ಯಾದಸ್ಥರು; ಉಚಾಯಿಸಿ ಮಾತನಾಡುವವರಲ್ಲ. ಹೇಳಬೇಕಾದದ್ದನ್ನು ಗಂಭೀರವಾಗಿ ಹೇಳಿ ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳುತ್ತಿದ್ದರು. ರೋಷಾವೇಶಗಳು ಬಂದಾಗ ಅಧ್ಯಕ್ಷರಾದ ಪುಟ್ಟಣ್ಣಶೆಟ್ಟರು ತಡೆ ಹಾಕಿ ಚರ್ಚೆಯನ್ನು ಹದಕ್ಕೆ ತರುತ್ತಿದ್ದರು. ಒಂದು ಉದಾಹರಣೆಯನ್ನು ಹೇಳುತ್ತೇನೆ.

ಒಂದು ಸಾರಿ ನೀರಿನ ಸರಬರಾಯಿಯನ್ನು ಕುರಿತು ಚರ್ಚೆಯೆದ್ದಿತು. ಆ ವರ್ಷ ಮಳೆಬಾರದಿದ್ದ ಕಾರಣದಿಂದಲೋ ಹೇಗೋ, ಹೆಸರುಘಟ್ಟದ ಕೆರೆಯಲ್ಲಿ ನೀರು ತೀರಾ ಕಡಮೆಯಾಗಿತ್ತು. ಇದರ ಮೇಲೆ ಚರ್ಚೆ. ಆ ಅವಸರದಲ್ಲಿ ಉಸ್ಮಾನ್‌ಖಾನ್ ಸಾಹೇಬರು ಹೀಗೆ ಹೇಳಿದರು:

“ಸ್ವಾಮಿ, ಒಂದು ಜನ ಇದಾರೆ. ನಲ್ಲಿಯ ಹತ್ತಿರ ಬಂದುಬಿಟ್ಟರೆ ಒಂದು ಘಂಟೆಯಾದರೂ ಹೋಗುವುದೇ ಇಲ್ಲ. ಮೈತಿಕ್ಕಿದ್ದೂ ತಿಕ್ಕಿದ್ದೇ. ಬಟ್ಟೆ ಒಗೆದದ್ದೂ ಒಗೆದದ್ದೇ. ನೀರು ಹೀಗೆ ಹಾಳಾಗಿಹೋಗುತ್ತದೆ ಸ್ವಾಮಿ.”

ಕರಣಿಕ ಕೃಷ್ಣಮೂರ್ತಿಗಳು ಎದ್ದುನಿಂತರು: “ಸ್ವಾಮಿ, ಇವರು ಬ್ರಾಹ್ಮಣರನ್ನು ತಾನೆ ಅನ್ನುತ್ತಿರುವುದು?” ಎನ್ನುತ್ತ ತೋಳುಗಳನ್ನು ಚಾಚಿ ಕೈಜಾಡಿಸಿದರು-ಕುಸ್ತಿಗೆ ಬರುವಂತೆ. ಇನ್ನು ಮೂರು ನಾಲ್ಕು ಮಂದಿ ಮೇಲಕ್ಕೇಳಲು ಸಿದ್ಧರಾದರು. ಪುಟ್ಟಣ್ಣಶೆಟ್ಟರು ಹೇಳಿದರು:

ಪು: "ತಾಳಿ ತಾಳಿ, ಅವರ ಅಭಿಪ್ರಾಯ ಕೇಳೋಣ. ಉಸ್ಮಾನ್‌ಖಾನ್ ಸಾಹೇಬರೆ ಬ್ರಾಹ್ಮಣರು ನೀರನ್ನು ಪೋಲು ಮಾಡುತ್ತಿದ್ದಾರೆಂದು ನಿಮ್ಮ ಅಭಿಪ್ರಾಯವೆ?"

ಉ: "ಎಲ್ಲಾದರೂ ಉಂಟೆ ಸ್ವಾಮಿ? ನನ್ನ ಅಂಗಡಿಗೆ ಬಂದು ಲೆಕ್ಕದ ಪುಸ್ತಕಗಳನ್ನು ನೋಡಲಿ. ನಮ್ಮ ದೊಡ್ಡ ದೊಡ್ಡ ಜವಳಿ ಗಿರಾಕಿಗಳೆಲ್ಲ ಬ್ರಾಹ್ಮಣರೇ. ಅವರು ಜವಳಿ ಕೊಂಡ ಹಾಗೆ ಇನ್ನು ಯಾರು ಕೊಳ್ಳುತ್ತಾರೆ? ಅವರಿಂದಲೇ ಸ್ವಾಮಿ ನನಗೆ ಅನ್ನ."

ಹೀಗೆ ಕೋಪದಲ್ಲಿ ಪ್ರಾರಂಭವಾದದ್ದು ನಗುವಿನಲ್ಲಿ ಪರ್ಯಾವಸಾನ.

ಪುಟ್ಟಣ್ಣಶೆಟ್ಟರಲ್ಲಿ ದೊಡ್ಡ ಮನುಷ್ಯತನವಿದ್ದದ್ದರಿಂದ ಎಲ್ಲರೂ ದೊಡ್ಡ ಮನುಷ್ಯತನವನ್ನು ತೋರಿಸುತ್ತಿದ್ದರು. ಸಭೆಯಲ್ಲಿ ದೊಂಬಿ ಗದ್ದಲಗಳೇಳುತ್ತಿರಲಿಲ್ಲ.

# ಲೌಕಿಕ ವಿವೇಕ

ಪುಟ್ಟಣ್ಣಶೆಟ್ಟರವರ ಬಹು ಮುಖ್ಯ ಗುಣ ಲೌಕಿಕ ವಿವೇಕ. ಅದು ನಯ ವಿನಯ ಪೂರ್ವಕವಾದ ವಿವೇಕ. ಯಾವ ನಾಜೂಕನ್ನು ಇಂಗ್ಲಿಷಿನಲ್ಲಿ Tact ಎಂದು ಕರೆಯುತ್ತಾರೋ ಅದು ಲೋಕದಲ್ಲಿ ಎಷ್ಟು ಅಪರೂಪವಾದ ಗುಣವೋ ಅಷ್ಟು ಬೆಲೆಯುಳ್ಳ ಗುಣ. "ಟ್ಯಾಕ್ಟ್" ಇಲ್ಲದಿದ್ದರೆ ನಮ್ಮ ಜೀವನ ಒರಟಾಟವಾದೀತು. "ಟ್ಯಾಕ್‌ಟ್", "ನಾಜೂಕು" ಎಂದರೆ ಅಸತ್ಯ, ಸುಳ್ಳು ಎಂದು ಅರ್ಥಮಾಡತಕ್ಕದ್ದಲ್ಲ. ಸತ್ಯವನ್ನು ಕಟುತೆಯಿಲ್ಲದಂತೆ, ಯಾವ ಕಾಲಕ್ಕೆ ಎಷ್ಟು ಆವಶ್ಯಕವೋ ಅಷ್ಟನ್ನು ಮಾತ್ರ, ಅದನ್ನು ಹೇಳುವ ರೀತಿಯಿಂದ ಯಾರಿಗೂ ಹಾನಿಯಾಗದಂತೆ ಹೇಳುವುದು "ಟ್ಯಾಕ್‌ಟ್".

ಲೋಕದಲ್ಲಿ ಬಹುಜನರು ಸತ್ಯವೆಂಬುದು ಅವಶ್ಯವಾಗಿ ಒರಟು, ಅದರ ಮುಖ ಮುಳ್ಳು ಮುಳ್ಳು, ಅದರ ಧ್ವನಿ ಗಡಸು-ಎಂದು ತಿಳಿದುಕೊಂಡಿರುತ್ತಾರೆ. ಅವರು ಯಾವ ಮಾತನ್ನು ಹೇಳಬೇಕಾದರೂ ಅನಾವಶ್ಯಕವಾದ ಸ್ವರಭಾವವನ್ನು (Emphasis) ಹಾಕಿ ವೀರಾವೇಶದ ಧ್ವನಿಯಲ್ಲಿ ಹೇಳುವ ಅಭ್ಯಾಸಮಾಡಿಕೊಂಡಿರುತ್ತಾರೆ. ಇಂಥ ಸತ್ಯ ವಚನದಿಂದ ಕೇಳುವವರಿಗೆ ಬೋಧೆಯಾಗುವುದು ಸತ್ಯಾಂಶಕ್ಕಿಂತ ಹೆಚ್ಚಾಗಿ ಆವೇಶ. "ನೀರು ಬಿಸಿಯಾಗಿದೆ" ಎಂದು ಹೇಳುವುದಕ್ಕೂ "ನೀರು ಸುಡುತ್ತಿದೆ" ಎಂದು ಹೇಳುವುದಕ್ಕೂ ವ್ಯತ್ಯಾಸವಿದೆಯಲ್ಲವೆ? ಈ ಭೇದಗ್ರಹಣವೇ ಸತ್ಯವಚನದ ಒಂದು ವಿಶೇಷ ಗುಣ. ವಸ್ತುಸಂಗತಿಯನ್ನು ಅದಕ್ಕೆ ಬಣ್ಣ ಕಟ್ಟಿ ಹೇಳುವುದು ಕೆಲವರ ವಾಡಿಕೆ. ಇರುವ ಬಣ್ಣವನ್ನು ತೇಲಿಸಿ ಹೇಳುವುದು ಇನ್ನು ಕೆಲವರ ವಾಡಿಕೆ. ಬಣ್ಣ ಹೆಚ್ಚೂ ಇಲ್ಲದೆ ಕಡಮೆಯೂ ಇಲ್ಲದೆ ಹೇಳುವುದು ಮತ್ತೆ ಕೆಲವರ ವಾಡಿಕೆ. ಲೋಕವ್ಯವಹಾರದಲ್ಲಿ ಈ ಮೂರು ಬಗೆಗಳಿಗೂ ಉಚಿತ ಸ್ಥಾನವುಂಟು. ಹಾಗಾದರೆ ಆ ಔಚಿತ್ಯವೆಂಬುದೇನು? ಯಾವ ರೀತಿಯ ಮಾತಿನಿಂದ ಹಿತಸಾಧನೆ ಹೆಚ್ಚಾಗಿ ಅಹಿತ ಕಡಮೆಯಾದೀತೋ ಅದು ಉಚಿತ.

> ಯದ್ಭೂತಹಿತಮತ್ಯಂತಂ
> ತತ್ಸತ್ಯಮಿತಿ ಧಾರಣಾ ॥

ಆದದ್ದರಿಂದ ಆಡಿದ ಮಾತೂ ನಡೆದ ನಡವಳಿಕೆಯೂ ಹಿತಪ್ರಯೋಜಕವಾಗಬೇಕು. ಈ ಹಿತಸಿದ್ಧಿಗೋಸ್ಕರ ಕೆಲವು ಸಂದರ್ಭದಲ್ಲಿ ಧ್ವನಿಯನ್ನೆತ್ತಬೇಕಾಗುತ್ತದೆ; ಬಲವಾದ

ಮಾತುಗಳನ್ನು ಬಳಸಬೇಕಾಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಮಾತುಗಳನ್ನು ಮೃದುಮಾಡಬೇಕಾಗುತ್ತದೆ; ಮೆಲುದನಿಯಲ್ಲಿ ಹೇಳಬೇಕಾಗುತ್ತದೆ. ಧ್ವನಿ ಎಂಥಾದ್ದಾಗಲಿ, ಮಾತು ಎಂಥಾದ್ದಾಗಲಿ, ವಿಷಯವು ಹಿತಕರವಾಗಿ ಕೇಳಿದವರ ಮೇಲೆ ಪರಿಣಾಮ ಮಾಡುವುದು ಮುಖ್ಯ. ಎಂದರೆ ಮಾತಿನ ರೀತಿ ಮಾತನಾಡುವವನೊಬ್ಬನನ್ನೇ ಅಲ್ಲ, ಮಾತು ಕೇಳುವವನನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮಾತೆಂಬುದು ದ್ವಿಪಕ್ಷ ಗ್ರಾಹ್ಯವಾಗಿರಬೇಕು. ಇದನ್ನು ಪೂರ್ವಿಕರು ಬಹುಚೆನ್ನಾಗಿ ಗ್ರಹಿಸಿದ್ದರು.

ಆಶ್ಚರ್ಯೋ ವಕ್ತಾ ಕುಶಲೋऽಸ್ಯ ಶ್ರೋತಾ
ವಕ್ತಾ ಶ್ರೋತಾ ಚ ದುರ್ಲಭಃ ॥

ಹೀಗೆ ಎಲ್ಲ ಸಂವಾದದಲ್ಲಿಯೂ ಮಾತು ಸತ್ಯವನ್ನೊಳಕೊಂಡಿರಬೇಕು; ಮತ್ತು ಕೇಳುವವನ ಯೋಗ್ಯತೆ ಮನೋಧರ್ಮಗಳಿಗೆ ಅನುಕೂಲವಾಗಿರಬೇಕು. ಇದು ಟ್ಯಾಕ್ಟಿನ ಮರ್ಮ.

ಪುಟ್ಟಣ್ಣಶೆಟ್ಟರವರು ಈ ತತ್ತ್ವವನ್ನು ಅನುಸರಿಸಿದ್ದವರೆಂದು ನನ್ನ ನಂಬಿಕೆ

ಅನುದ್ವೇಗಕರಂ ವಾಕ್ಯಮ್ ॥

ಇದು ಅವರ ವ್ರತ.

ಅದು ಬಹುಕಷ್ಟವಾದ ವ್ರತ. ನಮಗೆಲ್ಲ ಕಾಫಿ ಕೊಂಚ ತಣುವಾಗಿದ್ದರೆ ಕೋಪಬಂದುಬಿಡುತ್ತದೆ. ಕೊಂಚ ಬಿಸಿ ಹೆಚ್ಚಾಗಿದ್ದರೆ ಮತ್ತೂ ರೇಗುತ್ತೇವೆ. ನಮ್ಮ ಮನಸ್ಸಿನ ಕಾವುಗಳು ನಮ್ಮ ಹಿಡಿತದಲ್ಲಿರುವುದಿಲ್ಲ.

ಪುಟ್ಟಣ್ಣಶೆಟ್ಟರಿಗೆ ಹೇಗೋ ಈ ವಾಙ್ನಿಯಮ ಬಂದಿತ್ತು. ಇದನ್ನೇ ಭಗವದ್ಗೀತೆಯಲ್ಲಿ

ವಾಙ್ಮಯಂ ತಪ ಉಚ್ಯತೇ ॥

ಎಂದು ಪ್ರಶಂಸೆ ಮಾಡಿದ್ದಾರೆ.

# ಯಾಚಕರ ಹಾವಳಿ

ಪುಟ್ಟಣ್ಣಶೆಟ್ಟರು ದೊಡ್ಡ ಅಧಿಕಾರದಲ್ಲಿದ್ದವರು, ಮತ್ತು ಪ್ರಭಾವಶಾಲಿಗಳು. ಆದದ್ದರಿಂದ ಅವರಲ್ಲಿಗೆ ಯಾಚನಾರ್ಥವಾಗಿ ಬರುತ್ತಿದ್ದವರ ಸಂಖ್ಯೆ ಹೆಚ್ಚಿನದು: ಅವರು ಯಾಚಿಸುತ್ತಿದ್ದದ್ದೆಲ್ಲ ಎಲ್ಲ ಸಂದರ್ಭದಲ್ಲೂ ಸಕಾರಣವಾದದ್ದೆಂದು ಯಾರೂ ಹೇಳರು. ಕಾರ್ಯಸಾಧ್ಯವಲ್ಲದ ಬೇಡಿಕೆಗಳೇ ಹೆಚ್ಚು. ಇಂಥ ಅಸಾಧ್ಯವಾದ ಬೇಡಿಕೆಗಳನ್ನು ಬೇಡಿದವರ ವಿಷಯದಲ್ಲಿ ಪುಟ್ಟಣ್ಣಶೆಟ್ಟರು ಅನುಸರಿಸಬೇಕಾಗಿದ್ದ ನೀತಿ ಯಾವುದು? "ನಿಮ್ಮ ಬೇಡಿಕೆ ಅಯುಕ್ತವಾದದ್ದು" ಎಂದರೆ ಬೇಡುವವರ ಮೇಲೆ ಏನು ಪರಿಣಾಮವಾದೀತು? "ಅದನ್ನು ಮಾಡಿಕೊಟ್ಟೇನು" ಎಂದು ಹೇಳಿದರೆ ಏನು ಪರಿಣಾಮವಾದೀತು? ದಿಟ ಹೇಳಿದರೆ ಯಾಚಕರಿಗೆ ನಿರಾಶೆ: ಸಟೆ ಹೇಳುವುದು ಅಂತಸ್ಸಾಕ್ಷಿಗೆ ವಿರೋಧ.

ಪುಟ್ಟಣ್ಣಶೆಟ್ಟರು ದಿನದಿನವೂ ಇಂಥ ಸಂದರ್ಭಗಳಲ್ಲಿ ಸಿಕ್ಕಿ ಸಂಕಟಪಡುತ್ತಿದ್ದರು. "ಆಗಲಿ, ನೋಡೋಣ" ಎನ್ನುವರು; "ಯೋಚನೆ ಮಾಡುತ್ತೇನೆ" ಎನ್ನುವರು; "ಹೇಳಿ ನೋಡುತ್ತೇನೆ" ಎನ್ನುವರು. ಬೇಡಿಕೆ ಅಸಾಧ್ಯವಾದದ್ದೆಂಬುದನ್ನು ಅವರು ಸೂಚಿಸಿಯೇ ಸೂಚಿಸುವರು; ಯಾಚಕರು ಅದು ಕಿವಿಗೆ ಬೀಳಲಿಲ್ಲವೆಂಬಂತೆಯೇ ನಡೆಯುವರು. ಬಂದ ಜನಕ್ಕೆ ಮುಖ ಮುರಿಯುವುದು ಒಂದು ದೊಡ್ಡ ವಿಷಯವಲ್ಲ. ಅವರ ಬೇಡಿಕೆ ಅಸಂಗತವೆಂದು ಧ್ವನಿತವಾಗಿ ಹೇಳಿದರೆ ಅವರು ಅದನ್ನು ಗ್ರಹಿಸಿ ನಡೆದುಕೊಂಡಲ್ಲಿ ಕಷ್ಟವೇನೂ ಇಲ್ಲ. ಗ್ರಹಿಸದೆಹೋದರೆ ಆಗ ಏನಾದರೂ ಒಂದು ಲಘುವಾದ ಸಮಾಧಾನದ ಮಾತನ್ನು ಆಡಿ ಅವರನ್ನು ಕಳುಹಿಸಬೇಕಾಗುತ್ತದೆ.

ಇಂಥ ಅಸಾಧ್ಯ ಯಾಚಕರಿಂದ, ಕಾರಣ ವಿಚಾರ ಮಾಡದ ಜನದಿಂದ ಪುಟ್ಟಣ್ಣಶೆಟ್ಟರವರ ಹೆಸರಿಗೆ ಅವರು ಬರಿಯ ಮೇಲ್ನಗುವಿನ ಮನುಷ್ಯರೆಂದು ಅಪಕೀರ್ತಿ ಬಂದಿದೆ. ವಾಸ್ತವವಾಗಿ ಅವರು ಯಾರಿಗೂ ಎಂದೂ ಒಂದು ಅಸಭ್ಯದ ಮಾತನ್ನಾಡಿದವರಲ್ಲ; ಸುಳ್ಳು ವಾಗ್ದಾನ ಮಾಡಿದವರಲ್ಲ.

# ಚಾಮರಾಜಪೇಟೆಯ ಮನೆ

ಪುಟ್ಟಣ್ಣಶೆಟ್ಟರವರ ಮನೆ ಚಾಮರಾಜಪೇಟೆಯ ಐದನೆಯ ರಸ್ತೆಯಲ್ಲಿದ್ದದ್ದು ಎಲ್ಲ ದೃಷ್ಟಿಗಳಿಂದಲೂ ಸೊಗಸಾದದ್ದು. ವಿಶಾಲವಾದ ಪರಿಸರ (ಕಾಂಪೌಂಡು), ಎತ್ತರವಾದ ನಿವೇಶನ, ಗಾಳಿ ಬೆಳಕುಗಳು ಯಥೇಷ್ಟವಾಗಿದ್ದವು. ಎಲ್ಲೆಡೆಯೂ ಹುಲ್ಲು ಬಯಲು, ಅಲ್ಲಲ್ಲಿ ಸಣ್ಣ ಸಣ್ಣ ಮರಗಳು. ಸಂಪಿಗೆ ನಾಗಲಿಂಗ, ಪಾದರಿ ಇಂಥವು; ಮಲ್ಲಿಗೆ ಮೊದಲಾದ ಹೂಗಿಡಗಳ ಪೊದರುಗಳು. ದಿನ ದಿನವೂ ಒಣಗೆಲೆ ತರಗು ಕಸ ತೆಗೆದು ಯಾವಾಗಲೂ ಚೊಕ್ಕಟವಾಗಿರುತ್ತಿದ್ದವು. ಈ ವಿಶಾಲವಾದ ಆವರಣದ ನಡುವೆ ಬೈಠಕ್ಕುಮನೆ, ಅದರ ಹಿಂದೆ ಭೋಜನಶಾಲೆ. ಅದರಿಂದಾಚೆಗೆ ಗಾಡೀಖಾನೆ. ನಾಲ್ಕು ಕಡೆಯೂ ಪ್ರಾಕಾರದ ಗೋಡೆಯ ಬದಿಯಲ್ಲಿ ಕಾಲುದಾರಿಗಳು. ಪುಟ್ಟಣ್ಣಶೆಟ್ಟರ ಬೆಳಗಿನ ಅಂಗವ್ಯಾಯಾಮವು ಈ ಸುಂದರವಾದ ತೋಟದಲ್ಲಿ ಲಘುಸಂಚಾರದಿಂದ.

ಅವರನ್ನು ನೋಡಲು ಬರುತ್ತಿದ್ದ ಜನದಲ್ಲಿ ಮೂರು ನಾಲ್ಕು ದರ್ಜೆ. ಒಂದು ದರ್ಜೆಯವರು, ಪುಟ್ಟಣ್ಣಶೆಟ್ಟರು ವಾಯುಸೇವನೆಗಾಗಿ ಸಂಚಾರ ಮಾಡುತ್ತಿದ್ದಾಗ ಕಾಂಪೌಂಡಿನಲ್ಲಿ ಅವರ ಪಕ್ಕದಲ್ಲಿಯೂ ಹಿಂದೆಯೂ ನಡೆದು ಮಾತು ಮುಗಿಸಿ ಹೋಗುವರು. ಇಂಥವರು ನೂರರಲ್ಲಿ ಐವತ್ತರಷ್ಟು. ಇನ್ನು ಮೂವತ್ತು ಮಂದಿ ಬೈಠಕ್ಕು ಮನೆಯ ವರಾಂಡದಲ್ಲಿ. ಇದು ಮಧ್ಯಾಹ್ನ ನಾಲ್ಕು ಘಂಟೆಯವರೆಗೆ. ಭೇಟಿಗಾರರಲ್ಲಿ ಸುಮಾರು ಹತ್ತು ಹದಿನೈದು ಮಂದಿಗೆ ಮಾತ್ರ ಬೈಠಕ್ಕು ಖಾನೆಯ ನಡುಮನೆಯೊಳಕ್ಕೆ ಪ್ರವೇಶ. ಅಲ್ಲಿ ಸೋಫಾ, ಮೆತ್ತೆಯ ಕುರ್ಚಿ ಮೊದಲಾದ ಪರಿಕರಗಳು. ಇನ್ನೂ ಅಪರೂಪದ ದರ್ಜೆಯವರು ನೂರಕ್ಕೆ ಐದು ಮಂದಿ. ಇವರನ್ನು ಒಳಗಡೆಯ ಕೊಠಡಿಯೊಳಕ್ಕೆ ಕರೆದುಕೊಂಡು ಹೋಗಿ ಅಂತರಂಗ ಸಂಭಾಷಣೆ.

ಹೀಗೆ ವಿಸಿಟರುಗಳಿಗೆ ಜಾಗ ಗೊತ್ತಾಗಿತ್ತು. ಆದರೆ ಎಲ್ಲೆಲ್ಲಿಯೂ ಮರ್ಯಾದೆಯೇ. ಬೇಕೋಬಿಟ್ಟಿಯೆಂಬುದಿಲ್ಲ. ಎಲ್ಲೆಲ್ಲಿಯೂ ಚೊಕ್ಕಟ. ಎಲ್ಲೆಲ್ಲಿಯೂ ಅಚ್ಚುಕಟ್ಟು. ಎಲ್ಲಿಯೂ ಒಂದು ಧೂಳಿನ ಕಣವಿಲ್ಲ; ಎಲ್ಲಿಯೂ ಮಾಸಲು ಮುರಕಲು ಇಲ್ಲ. ಎಂಥವರಿಗೂ ಆಪ್ಯಾಯನಕಾರಿಯಾದ ವಾತಾವರಣ. ಶೇಷಾದ್ರಿ ಅಯ್ಯರವರ ಮನೆಯ ಡೌಲಿಲ್ಲ; ಆನಂದರಾಯರ ಮನೆಯ ಇಕ್ಕಟ್ಟಿಲ್ಲ. ಪುಟ್ಟಣ್ಣಶೆಟ್ಟರ ಮನೆಯು ನೆಮ್ಮದಿಯ ಅಂದವೂ ಅನುಕೂಲವೂ ಸೇರಿದ್ದದ್ದು.

# ಹಿತವಾದ

ಒಂದು ದಿನ ಮಧ್ಯಾಹ್ನ ಒಬ್ಬ ವಕೀಲರು ಪುಟ್ಟಣ್ಣಶೆಟ್ಟರವರಲ್ಲಿಗೆ ಬಂದರು. ಅವರನ್ನು ಒಂದು ಬುದ್ಧಿವಾದ ಕೇಳಿದರು, ಹೀಗೆ:

ವ: "ಸರಕಾರದವರು ನನಗೆ ಇದೇನೋ ಒಂದು ಕಾಗದ ಕಳಿಸಿದ್ದಾರೆ. ಇದಕ್ಕೆ ಏನು ಜವಾಬು ಬರೆಯಬೇಕೋ ಅಪ್ಪಣೆಯಾಗಬೇಕು."

ಪು: "ಅದೇನು ಕಾಗದ?"

ವಕೀಲರು ಕೊಟ್ಟ ಕಾಗದವನ್ನು ನೋಡಿದರು. ಅದರಲ್ಲಿ ಆ ವಕೀಲರಿಗೆ ಸಬ್‌ಜಡ್ಜಿ ಕೆಲಸವನ್ನು ಕೊಡಲಿರುವುದಾಗಿಯೂ ಅವರು ತಮ್ಮ ಉತ್ತರ ಕಳಿಸಬೇಕೆಂಬುದಾಗಿಯೂ ಇತ್ತು. ಪುಟ್ಟಣ್ಣಶೆಟ್ಟರು ಕೊಂಚ ಮುಗುಳ್ನಗೆ ನಕ್ಕು ವಕೀಲರನ್ನು ಕುರಿತು ಕೇಳಿದರು:

ಪು: "ಬಹಳ ಸಂತೋಷ. ನೀವು ಈಗ ಎಷ್ಟು ಇನ್‌ಕಮ್ ಟ್ಯಾಕ್ಸ್ ಕೊಡುತ್ತಿದ್ದೀರೋ?"

ವಕೀಲರು ಜವಾಬು ಹೇಳಲು ಕೊಂಚ ಹಿಂತೆಗೆದು ಮೆಲ್ಲಗೆ ಹೇಳಿದರು:

ವ: "ಈಗ ಸದ್ಯ ಏನೂ ಕೊಡುತ್ತಿಲ್ಲ."

ಪು: "ಹಾಗಾದರೆ ಇನ್ನೊಬ್ಬರನ್ನು ಕೇಳಬೇಕಾದದ್ದೇ ಇಲ್ಲವಲ್ಲ? ಅಗತ್ಯವಾಗಿ ಒಪ್ಪಿಕೊಳ್ಳಿ. ಅದರಿಂದ ನಿಮಗೆ ಒಳ್ಳೆಯದಾಗುತ್ತದೆ."

# ಲೆಕ್ಕಾಚಾರ

ಇನ್ನೊಂದು ಪ್ರಕರಣ:

ಒಂದು ದಿನ ಮಧ್ಯಾಹ್ನ ಹಯವದನರಾಯರವರು ದಯಮಾಡಿಸಿ ಶೆಟ್ಟರವರ ಎದುರಿಗೆ ಕುಳಿತಿದ್ದರು. ನಾನೂ ಅಲ್ಲಿದ್ದೆ. ಆಗ ಇನ್ನೊಬ್ಬಾತ ಬೀದಿಯಿಂದ ಒಳಕ್ಕೆ ಬಂದು ಯಜಮಾನರಿಗೆ ಕೈಮುಗಿದರು. ಅವರು ಪುಟ್ಟಣ್ಣಶೆಟ್ಟರವರ ಮನೆಯ ಯಾವುದೋ ರಿಪೇರಿ ಕೆಲಸವನ್ನು ಮಾಡಿಸಿದ್ದರಂತೆ. ಆ ಕಂಟ್ರಾಕ್ಟರು ವರಾಂಡದಿಂದ ಹೊರಗಡೆ ನಿಂತುಕೊಂಡರು. ಶೆಟ್ಟರವರು "ಏನ್ರಿ?" ಎಂದು ವಿಚಾರಿಸಿದರು. ಆತ "ನನ್ನ ಬಿಲ್ಲು..." ಎಂದರು. ಅಷ್ಟರೊಳಗಾಗಿ ಹಯವದನರಾಯರು ಆತನ ಕಡೆಗೆ ತಿರುಗಿ "ನಿಮ್ಮ ಬಿಲ್ ಸೆಟ್ಲ್ ಆಗಿದೆಯಪ್ಪ. ನನ್ನ ಆಫೀಸಿಗೆ ಬಂದುಬಿಡಿ. ಚೆಕ್ ಬರೆದು ಇಟ್ಟಿರುತ್ತೇನೆ" ಎಂದರು. ಹಯವದನರಾಯರು ಇಂಥ ಹಣಕಾಸಿನ ವಿಷಯಗಳಲ್ಲಿ ಪುಟ್ಟಣ್ಣಶೆಟ್ಟರವರಿಗೆ ಆಪ್ತ ಸಹಾಯಕರಾಗಿದ್ದರು. ಕಂಟ್ರಾಕ್ಟರು "ಯಾವಾಗ ಬರಬೇಕೆಂದು ಅಪ್ಪಣೆಯಾಗುತ್ತದೆ?" ಎಂದರು. ಹಯವದನರಾಯರು "ನಾಳೆಯೇ ಬನ್ನಿ, ಸಂಜೆ. ಮುನ್ನೂರ ಎಂಭತ್ತಕ್ಕೆ ಬರೆದಿಟ್ಟಿರುತ್ತೇನೆ" ಎಂದರು. ಕಂಟ್ರಾಕ್ಟರು "ತಮ್ಮಿಷ್ಟ" ಎಂದರು.

ಪುಟ್ಟಣ್ಣಶೆಟ್ಟರು "ಬಿಲ್ಲಿನ ಮೊಬಲಗು ಎಷ್ಟು?" ಎಂದರು. ಹಯವದನರಾಯರು "ಮುನ್ನೂರೆಂಭತ್ತೈದು ರೂಪಾಯಿ, ಆರಾಣೆ, ಎಂಟು ಕಾಸು" ಎಂದರು. ಕೆಲಸ ಮುಗಿದು ಅಜಮಾಯಿಷಿಯಾದ ಮೇಲೆ ತೀರ್ಮಾನವಾಗಿದ್ದದ್ದು ಆ ಮೊಬಲಗು. ಶೆಟ್ಟರವರು ಹಯವದನರಾಯರನ್ನು "ಐದೂ ಚಿಲ್ಲರೆ ಯಾಕೆ ಕತ್ತರಿಸುತ್ತೀರಿ?" ಎಂದರು. ರಾಯರು "ಅದೇನು ಜುಜುಬಿ" ಎಂದರು. ಶೆಟ್ಟರು "ಜುಜುಬಿಯಾದರೆ ಕೊಟ್ಟುಬಿಡಬಹುದಲ್ಲ!" ಎಂದರು.

ಇದು ಅವರ ಸ್ವಭಾವ.

ಒಟ್ಟಿನ ಮೇಲೆ ಲೆಕ್ಕಾಚಾರದ ಸ್ವಭಾವ. ಲೆಕ್ಕಾಚಾರ ನಡೆದ ಮೇಲೆ ಔದಾರ್ಯವೂ ಉಂಟು.

# ಪಾಂಡಿತ್ಯವೆ?

ಪುಟ್ಟಣ್ಣಶೆಟ್ಟರವರು ಲೋಕನಿರ್ವಾಹದಲ್ಲಿ ಜಯಶಾಲಿಯಾದದ್ದು ಬರಿಯ ನವುರು ಉಪಾಯ ಇಷ್ಟರಿಂದಲೇನೋ. ಅವರ ಬುದ್ಧಿಶಕ್ತಿಯೂ ದೊಡ್ಡದೋ? ಈ ಪ್ರಶ್ನೆಯನ್ನು ಬಹು ಜನ ನನ್ನೊಡನೆ ಎತ್ತಿದ್ದಾರೆ. ಪುಟ್ಟಣ್ಣಶೆಟ್ಟರವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಎಲ್.ಎಲ್.ಡಿ. ಪ್ರಶಸ್ತಿಯನ್ನು ಕೊಟ್ಟಾಗ ಆ ಪ್ರಶ್ನೆ ಪ್ರಬಲವಾಗಿತ್ತು. ಈ ಪ್ರಶ್ನೆಗೆ ಯಾವ ಪರೀಕ್ಷೆಯನ್ನೂ ಪ್ಯಾಸ್ ಮಾಡದ ನನ್ನಂಥವನು ಉತ್ತರ ಕೊಡಹೊರಡುವುದು ಅಧಿಕಪ್ರಸಂಗಿತನವಾದೀತೋ ಏನೋ.

ಪುಟ್ಟಣ್ಣಶೆಟ್ಟರವರು ಯಾವ ಪರೀಕ್ಷೆಯನ್ನೂ ಪ್ಯಾಸ್ ಮಾಡಿದವರಲ್ಲ. ತಾವು ಪಂಡಿತರೆಂದು ಹೇಳಿಕೊಳ್ಳಲು ಆಸೆಪಟ್ಟವರೂ ಅಲ್ಲ. ಯಾವ ಶಾಸ್ತ್ರವನ್ನೂ ಅಭ್ಯಾಸ ಮಾಡಿದವರೂ ಅಲ್ಲ. ಅವರಿಗಿದ್ದ ಬಂಡವಾಳ ಅವರ ನೈಜವಾದ ಲೌಕಿಕ ವಿವೇಕ, ಕಾಮನ್‌ಸೆನ್ಸ್ (Common sense).

> ಅನಪೇಕ್ಷಿತಗುರುವಚನಾ
> ಸರ್ವಾನ್ ಗ್ರಂಥೀನ್ ವಿಭೇದಯತಿ ಸಮ್ಯಕ್ ।
> ವಿಘಟಿಯತಿ ಪರರಹಸ್ಯಂ
> ವಿಮರ್ಶಶಕ್ತಿರ್ನಿಜಾ ಜಯತಿ ॥

ನನ್ನ ಒಂದು ಅನುಭವವನ್ನು ಹೇಳುತ್ತೇನೆ. ಮೊದಲನೆಯ ಪ್ರಪಂಚ ಯುದ್ಧದ ಕಾಲದಲ್ಲಿ- ಸುಮಾರು ೧೯೧೫ರಲ್ಲಿ-ಬ್ರಿಟಿಷ್ ಸೈನ್ಯದ ಒಂದು ತುಕಡಿ ಬೆಂಗಳೂರಿನಲ್ಲಿ ತಂಗಿತ್ತು. ಅದು ಟೆರಿಟೋರಿಯಲ್ಸ್ (Territorials) ಎಂಬ ದಳ. ಆ ದಳದಲ್ಲಿದ್ದ ಜನ ವಿದ್ಯಾವಂತರು. ಇಂಗ್ಲೆಂಡಿನ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮೊದಲಾದ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಾಗಿದ್ದ ಯುವಕರು. ಕೇವಲ ಸ್ವದೇಶಾಭಿಮಾನದ ಕಾರಣದಿಂದ ಈ ಟೆರಿಟೋರಿಯಲ್ಸ್ ದಳದಲ್ಲಿ ಸೇರಿದ್ದವರು. ಇಂಥ ವಿದ್ವಜ್ಜನ ನಮ್ಮ ದೇಶಕ್ಕೆ ಬಂದು ಇಲ್ಲಿ ತಂಗಿರುವಾಗ ಅವರಿಗೆ ಇಂಡಿಯದೇಶದ ಚರಿತ್ರೆ, ಸಾಹಿತ್ಯ, ಸಮಾಜ ಸಂಪ್ರದಾಯ ಮುಂತಾದ ಮುಖ್ಯ ಮುಖ್ಯ ವಿಷಯಗಳನ್ನು ಪರಿಚಯ ಮಾಡಿಸಿದರೆ ಅದರಿಂದ ಇಂಗ್ಲೆಂಡ್, ಇಂಡಿಯ ಎರಡು ದೇಶಗಳಿಗೂ ಒಳ್ಳೆಯದಾಗಬಹುದೆಂದು ಆಗಿನ ಬ್ರಿಟಿಷ್ ರೆಸಿಡೆಂಟ್ ಸರ್ ಹ್ಯೂ ಡಾಲಿ ಅವರು ಆಲೋಚಿಸಿದರು. ಆ ಆಲೋಚನೆಯ ಮೇರೆಗೆ

ಮೈಸೂರಿನ ಆಡಳಿತವನ್ನೂ ಚರಿತ್ರೆಯನ್ನೂ ಕುರಿತು ಉಪನ್ಯಾಸ ಮಾಡಬೇಕೆಂದು ಪುಟ್ಟಣ್ಣಶೆಟ್ಟರವರನ್ನು ಕೇಳಿಕೊಂಡಿದ್ದರಂತೆ. ಉಪನ್ಯಾಸ ನಲವತ್ತು ನಲವತ್ತೈದು ನಿಮಿಷಗಳಿಗೆ ಮೀರಬಾರದು. ಪುಟ್ಟಣ್ಣಶೆಟ್ಟರವರು ಒಪ್ಪಿಕೊಂಡಿದ್ದರು. ನನಗೆ ಈ ವಿಷಯ ಗೊತ್ತಿರಲಿಲ್ಲ. ಆದರೆ ಒಂದು ದಿನ ಮಧ್ಯಾಹ್ನ ನಾನು ಅವರ ಮನೆಗೆ ಹೋಗಬೇಕೆಂದು ಕರೆ ಬಂದಿತ್ತು. ಅದರಂತೆ ನಾನು ಸುಮಾರು ಮಧ್ಯಾಹ್ನ ಎರಡೂವರೆ ಘಂಟೆಗೆ ಅವರ ಮನೆಗೆ ಹೋದೆ. ಪುಟ್ಟಣ್ಣಶೆಟ್ಟರವರು ನನಗೆ ಹೇಳಿದರು:

“ನೀವು ಇಲ್ಲಿ (ವರಾಂಡದಲ್ಲಿ) ಈ ಕುರ್ಚಿಯ ಮೇಲೆ ಕುಳಿತುಕೊಳ್ಳಿ. ನಾನು ಈ ಕೋಣೆಯಲ್ಲಿ ಮೇಜಿನ ಮುಂದೆ ಕುಳಿತು ಬರೆಯುತ್ತೇನೆ. ಹಾಳೆ ಹಾಳೆಯಾಗಿ ಬರೆದು ಬರೆದಂತೆ, ಅದನ್ನು ನಿಮ್ಮ ಕೈಗೆ ಕೊಡುತ್ತೇನೆ. ನೀವು ಓದಿ ನೋಡಿ ತಿದ್ದುವುದೇನಾದರೂ ಇದ್ದರೆ ಹೇಳಿ.”

ಅದರಂತೆ ನಡೆಯಿತು. ಯಾವುದೋ ಹಳೆಯ ಕ್ಯಾಲೆಂಡರಿನ ಹಾಳೆಗಳ ಹಿಂಭಾಗದ ಮೇಲೆ ಅವರು ಬರೆದು ಬರೆದು ನನ್ನ ಕೈಗೆ ಕೊಡುತ್ತಿದ್ದರು. ಆ ಬರವಣಿಗೆ ನಾನು ಮೇಲೆ ಹೇಳಿದ ವಿಷಯವನ್ನು ಕುರಿತದ್ದು-ಆಧುನಿಕ ಮೈಸೂರಿನ ಚರಿತ್ರೆ ಮತ್ತು ಆಡಳಿತ. ನಾನು ಪ್ರತಿಯೊಂದು ಹಾಳೆಯನ್ನೂ ಸಾವಧಾನವಾಗಿ ಓದಿದೆ. ಸುಮಾರು ಒಂದು ಘಂಟೆಯೊಳಗಾಗಿ ಇಷ್ಟುದೊಡ್ಡ ವಿಷಯವನ್ನು ಕುರಿತು ಇಷ್ಟು ಸಂಗ್ರಹವಾಗಿ, ಇಷ್ಟು ವಿಶದವಾಗಿ ಮತ್ತು ಇಷ್ಟು ಪ್ರಮಾಣವತ್ತಾಗಿ ಬರೆಯಬಲ್ಲವರು ಯಾವ ಪರೀಕ್ಷೆಯನ್ನೂ ಪ್ಯಾಸ್ ಮಾಡದಿದ್ದರೂ ಪಂಡಿತರೇ, ಶಕ್ತಿವಂತರೇ-ಎಂದು ನನಗನ್ನಿಸಿತು.

# ಸಂತೋಷಜನಕತ್ವ

ಅವರ ಬುದ್ಧಿಗುಣಗಳಲ್ಲಿ ಮುಖ್ಯವಾದದ್ದು ಯುಕ್ತಾಯುಕ್ತ ವಿವೇಕ ಮತ್ತು ನಯವಿನಯ ಎಂದು ಹೇಳಿದೆ. ಅವರ ನೀತಿಗುಣಗಳಲ್ಲಿ ಮುಖ್ಯವಾದದ್ದು ಸಂತೋಷ ಪ್ರದಾಯಕತ್ವ. ಅವರು ಎಲ್ಲರೊಡನೆಯೂ ಹಿತಕರವಾದ ರೀತಿಯಲ್ಲಿ ವರ್ತಿಸಬೇಕೆಂದಿದ್ದವರು. ಯಾರೊಡನೆಯೂ ಒಂದು ಕಠಿನವಾದ ಮಾತನ್ನಾಗಲಿ ಮಾನಹಾನಿಕರವಾದ ಮಾತನ್ನಾಗಲಿ ಆಡಿದವರಲ್ಲ; ಮತ್ತು ಎಲ್ಲರಿಗೂ ಕೂಡಿದಷ್ಟು ಸಂತೋಷವನ್ನುಂಟು ಮಾಡಬೇಕೆಂದು ಅವರ ತಾತ್ಪರ್ಯ.

> ಸಂತೋಷಂ ಜನಯೇತ್ ಪ್ರಾಜ್ಞಃ
> ತದೇವೇಶ್ವರಪೂಜನಮ್ ॥

ಅವರು ಬಹುಮಂದಿಗೆ ಉಪಕಾರಿಗಳಾಗಿದ್ದರು. ಉದಾರಿಗಳಾಗಿದ್ದರು. ೧೯೩೭ರ ಸುಮಾರಿನಲ್ಲಿ ಹಳೆಯ ಅತಾರಾ ಕಛೇರಿಯ ಪೂರ್ವಭಾಗದಲ್ಲಿ, ಮ್ಯೂಸಿಯಮ್ಮಿಗೆ ಎದುರಾಗಿ ಒಂದು ಸೋಪಾನ ವೇದಿಕೆಯನ್ನು ಶ್ರೀಮನ್ಮಹಾರಾಜನ ಅಪ್ಪಣೆಯ ಮೇರೆಗೆ ಕಟ್ಟಲಾಗುತ್ತಿತ್ತು: ಅರಮನೆಯ ಓಲಗ ಮೊದಲಾದವನ್ನು ಜನ ಕುಳಿತು ಕೇಳುವುದಕ್ಕಾಗಿ. ಆ ಕೆಲಸ ನಡೆಯುತ್ತಿದ್ದಾಗ ಒಂದು ದಿನ ಸಂಜೆ ನಾನು ತಂಗಾಳಿಗೋಸ್ಕರವೆಂದು ಅಲ್ಲಿಗೆ ಹೋದೆ. ಅದು ಬೇಸಗೆಯ ಕಾಲ. ಪುಟ್ಟಣ್ಣಶೆಟ್ಟರು ಅಲ್ಲಿಗೆ ಆ ವೇಳೆಗೇ ಬಂದಿದ್ದರು. ಆಗ ಅವರು ನನಗೆ ಹೇಳಿದರು, ಮಾರನೆಯ ದಿನ ನಾನು ಅವರ ಮನೆಗೆ ಹೋಗತಕ್ಕದ್ದೆಂದು.

ನನ್ನನ್ನು ಮನೆಯ ಒಳಗಡೆ ಒಂದು ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿ ಕುಳಿತು ಪುಟ್ಟಣ್ಣಶೆಟ್ಟರು ತಮ್ಮ ಆಲೋಚನೆಯೊಂದನ್ನು ಹೇಳಿದರು:

“ನನಗೆ ವಯಸ್ಸಾಗುತ್ತ ಬಂತು. ದೇವರು ಕೊಟ್ಟದ್ದನ್ನು ಧರ್ಮಕಾರ್ಯಕ್ಕೆ ಕೊಡಬೇಕೆಂದು ತೋಚಿತು. ಕೊಂಚ ಹಣವನ್ನು ಪುರಭವನಕ್ಕಾಗಿ (Town Hall) ಕೊಟ್ಟಿದ್ದೇನೆ. ಕೊಂಚವನ್ನು ವಿಕ್ಟೋರಿಯ ಆಸ್ಪತ್ರೆಗೋಸ್ಕರ ಕೊಟ್ಟಿದ್ದೇನೆ. ಇನ್ನು ಕೊಂಚ ಹಣವನ್ನು ಒಂದು ಧರ್ಮಾರ್ಥವಾದ ವಿದ್ಯಾರ್ಥಿನಿಲಯಕ್ಕೆ (Student's Hostel) ವಿನಿಯೋಗಿಸಬೇಕೆಂದು ಯೋಚನೆ. ನಿಮ್ಮ ಅಭಿಪ್ರಾಯವೇನು? ಆ ವಿದ್ಯಾರ್ಥಿನಿಲಯದಲ್ಲಿ ಎಲ್ಲ ಹಿಂದೂ ಜನರಿಗೂ ಅವಕಾಶ ಇರಬೇಕು. ಬ್ರಾಹ್ಮಣರು

ಅವಶ್ಯವಾಗಿ ಅಲ್ಲಿರಬೇಕು. ಹದಿನೈದಿಪ್ಪತ್ತು ಮಂದಿಯಾದರೂ ಬ್ರಾಹ್ಮಣರಿರಬೇಕು. ಲಿಂಗಾಯತ ಮತದವರೂ ಇರಬೇಕು: ಇವರ ಸಂಖ್ಯೆ ಕೊಂಚ ಹೆಚ್ಚಾಗಿದ್ದರೂ ಇರಬಹುದು. ಹೇಗಿದೆ ಈ ಯೋಚನೆ?"

ನನಗೆ ಅತ್ಯಂತ ಸಂತೋಷವಾಯಿತು. "ಅದು ತುಂಬ ದೊಡ್ಡಮನಸ್ಸಿನ ಆಲೋಚನೆ. ಔದಾರ್ಯವನ್ನು ತೋರಿಸುವುದು ಮಾತ್ರವಲ್ಲದೆ ದೂರದೃಷ್ಟಿಯನ್ನೂ ತೋರಿಸುತ್ತದೆ. ತುಂಬ ಒಳ್ಳೆಯದು" ಎಂದೆ, ಅವರು "ಸಂತೋಷ" ಎಂದು ಹೇಳಿ "ಆದರೆ ವಿವರಗಳು (Details) ಇನ್ನೂ ನಿಶ್ಚಯವಾಗಿಲ್ಲ; ಇನ್ನೂ ಒಬ್ಬಿಬ್ಬರನ್ನು ನಾನು ಕೇಳಬೇಕಾಗಿದೆ. ಯೋಚನೆ ಪೂರ್ತಿಯಾದ ಮೇಲೆ ಮತ್ತೆ ಮಾತಾನಾಡೋಣ" ಎಂದರು.

ಆಮೇಲೆ ಬಹುಶಃ ಒಂದು ತಿಂಗಳು ಕಳೆಯಿತೆಂದು ತೋರುತ್ತದೆ. ಆಗ ಅವರು ನನ್ನನ್ನು ಕಂಡಾಗ "ಆ ಆಲೋಚನೆ ಈಗ ಸದ್ಯ ನಡೆಯುವ ಹಾಗಿಲ್ಲ. ಅದಕ್ಕೆ ಬಹುಕಡೆಯಿಂದ ಅಡ್ಡಿ ಬಂದಿದೆ. ಈಗ ಮೊದಲು ಲಿಂಗಾಯತ ಜನಕ್ಕೆ ಮಾತ್ರ ಆ ವಿದ್ಯಾರ್ಥಿನಿಲಯದ ಉಪಯೋಗ. ಆದರೆ ಒಂದು ಸರ್ವಜಾತೀಯವಾದ (Cosmopolitan) ವಿದ್ಯಾರ್ಥಿನಿಲಯದ ಯೋಚನೆಯನ್ನು ನಾನು ಬಿಟ್ಟಿಲ್ಲ. ಕಾಲ ಕಳೆದ ಮೇಲೆ ಆ ಯೋಚನೆಯನ್ನು ರೂಪುಗೊಳಿಸುವುದು ಸಾಧ್ಯವಾದೀತು" ಎಂದರು.

ಇದಾದ ಒಂದು ವಾರದೊಳಗಾಗಿ ಬುಲ್‌ಟೆಂಪಲ್ ರಸ್ತೆಯಲ್ಲಿರುವ ವೀರಶೈವ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಮಿರ್ಜಾ ಸಾಹೇಬರು ಆ ದಿನದ ಉತ್ಸವವನ್ನು ನಡಸಿದರು. ಉತ್ತಮವಾದ ಉಪನ್ಯಾಸಗಳಾದವು. ಅದಾದ ಕೊಂಚ ಕಾಲದೊಳಗಾಗಿ ಪುಟ್ಟಣ್ಣಶೆಟ್ಟರ ಆಯುಸ್ಸು ಮುಗಿಯಿತು. ಆಗ ಅವರ ವಯಸ್ಸು ೮೨.

# ಆಡಳಿತ ವಿಚಕ್ಷಣೆ

ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ವಿಚಕ್ಷಣೆಯೂ ಜನಸಮಾಧಾನವೂ ಎರಡೂ ಮಿಳಿತವಾಗಿದ್ದುವು. ಅವರ ಕಾಲದಲ್ಲಿ ಮ್ಯುನಿಸಿಪಲ್ ಸಭೆಯಲ್ಲಿ ಬಹುಮಂದಿ ಸದಸ್ಯರು ವ್ಯಾಪಾರಸ್ಥರು, ಪಿಂಛನ್‌ದಾರರು-ಇಂಥವರು. ಅವರೆಲ್ಲ ನಿಧಾನಸ್ಥರು. ಆದರೂ ತಕರಾರು ಆಸಾಮಿಗಳೂ ಕೆಲವರಿದ್ದರು.

ಪುಟ್ಟಣ್ಣಶೆಟ್ಟರು ಎಲ್ಲರನ್ನೂ ಒಟ್ಟುಗಟ್ಟಿಕೊಂಡು ಎಲ್ಲರಿಗೂ ಸಮಜಾಯಿಷಿ ಹೇಳಿಕೊಂಡು ಸುಸೂತ್ರವಾಗಿ ಕಾರ್ಯ ನಡಸಿದರು. ಸಭೆಯಲ್ಲಿ ನಡೆದ ಒಂದೆರಡು ಪ್ರಸಂಗಗಳನ್ನು ಹಿಂದೆ ಸ್ಮರಿಸಿದ್ದೇನೆ.

# ಆರ್. ಸುಬ್ಬರಾಯರು

ಪುಟ್ಟಣ್ಣಶೆಟ್ಟರವರು ಎಲ್ಲರಲ್ಲಿಯೂ ತಾಳ್ಮೆಯಿಂದಲೂ ಗೌರವಬುದ್ಧಿಯಿಂದಲೂ ನಡೆಯುತ್ತಿದ್ದದ್ದು ಅವರ ಯಶಸ್ಸಿಗೆ ಒಂದು ಮುಖ್ಯ ಕಾರಣ. ಇನ್ನೊಂದು ಕಾರಣ ಅವರು ಸಹಾಯಕರನ್ನು ಆರಿಸಿಕೊಂಡದ್ದರಲ್ಲಿ ತೋರಿಸಿದ ವಿವೇಕ ಜಾಗರೂಕತೆಗಳು. ಇಂಥ ಸಹಾಯಕರಲ್ಲಿ ಬಹು ಮುಖ್ಯರಾದವರು ಡಾ || ಆರ್. ಸುಬ್ಬರಾಯರು. ಸುಬ್ಬರಾಯರು ಎಂ.ಬಿ.ಬಿ.ಎಸ್. ವೈದ್ಯ ಪದವಿಯನ್ನು ಸಂಪಾದಿಸಿ ಹೆಲ್ತ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದರು. ಅವರ ತಮ್ಮಂದಿರೇ ಮೈಸೂರು ಸರಕಾರದ ಚೀಫ್ ಸೆಕ್ರೆಟರಿಯಾಗಿದ್ದ ಆರ್. ರಂಗರಾಯರು. ಪುಟ್ಟಣ್ಣಶೆಟ್ಟರು ಡಾ || ಆರ್. ಸುಬ್ಬರಾಯರನ್ನು ಮೊದಲು ಹೆಲ್ತ್ ಆಫೀಸರ್ ಹುದ್ದೆಗೆ ತಂದರು. ಸುಬ್ಬರಾಯರು ಮೇಧಾವಿಗಳು. ಬರವಣಿಗೆಯಲ್ಲಿ ನಿಪುಣರು. ಪುರನಿರ್ಮಲತೆಯ ವಿಷಯದಲ್ಲಿ ನೈಜವಾದ ಶ್ರದ್ಧೆಯುಳ್ಳವರು, ಮತ್ತು ಸ್ನೇಹತತ್ಪರರು. ಅವರು ಖುದ್ದಾಗಿ ಪರೀಕ್ಷಿಸದಿದ್ದ ಗಲ್ಲಿಯಿಲ್ಲ.

ಪ್ರತಿದಿನವೂ ಬೆಳಗ್ಗೆ ಏಳು ಘಂಟೆಗೆ ಮುಂಚೆ ತಮ್ಮ ಟೂ ಸೀಟರ್ ಕಾರಿನಲ್ಲಿ ಹೊರಡುವರು. ಎಷ್ಟೋ ಸಾರಿ ನಾನು ಅವರ ಪಕ್ಕದಲ್ಲಿರುತ್ತಿದ್ದೆ. ಅವರೇ ಡ್ರೈವ್ ಮಾಡುವರು. ಬಳೇಪೇಟೆ ಅರಳೇಪೇಟೆಯ ಸಂದಿಗಳು. ಚಿಕ್ಕಪೇಟೆಯ ಸಂದಿಗೊಂದಿಗಳು, -ಇಂಥ ಎಲ್ಲ ಕಡೆಯೂ ಹೋಗಿ ಹೇಸಿಗೆಯ ಮಕ್ಕರಿಗಳು ಸಾಗಿವೆಯೆ ಇಲ್ಲವೆ ಎಂದು ಅಜಮಾಯಿಷಿ ಮಾಡುವರು. ಬೆಳಗ್ಗೆ ಏಳೂವರೆ ಎಂಟರ ಒಳಗಾಗಿ ಸಿಟಿಯ ಎಲ್ಲ ಭಾಗಗಳಲ್ಲೂ ಆ ಕೆಲಸ ಮುಗಿದಿರಬೇಕೆಂದು ಅವರ ಕಟ್ಟುನಿಟ್ಟಾದ ಏರ್ಪಾಟು. ಈ ತನಿಖೆಯ ವಿಷಯದಲ್ಲಿ ಅವರು ದಿನವೂ ಪಾಲುಮಾರಿದವರಲ್ಲ. ಇದು ಅವರ ಸ್ವಭಾವಕ್ಕೆ ಒಂದು ದೃಷ್ಟಾಂತ.

# ರೋಗಿಗಳಿಗಾಗಿ ಉತ್ಸವ ಸಮಾರಂಭ

ಸರಕಾರಿ ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಅವರು ವೈದ್ಯವೃತ್ತಿಯನ್ನು ಅವಲಂಬಿಸಿದ್ದರು- ಬಳ್ಳಾರಿಯಲ್ಲಿ. ಜನಪ್ರಿಯರಾಗಿದ್ದರು; ಒಳ್ಳೆಯ ಸಂಪಾದನೆಯಿತ್ತು. ಅವರ ತಂದೆತಾಯಿಗಳ ನಿರ್ಬಂಧದ ಕಾರಣದಿಂದ ಅವರು ಸರಕಾರಿ ಉದ್ಯೋಗಕ್ಕೆ ಸೇರಬೇಕಾಯಿತು.

ಬೆಂಗಳೂರಿಗೆ ಅವರು ಹೆಲ್ತ್ ಆಫೀಸರಾಗಿ ಬಂದದ್ದು ಜನಕ್ಕೆ ಅನುಕೂಲವಾಯಿತು. ಊರಿನ ನೈರ್ಮಲ್ಯ ಉತ್ತಮಪಟ್ಟಿದ್ದಲ್ಲದೆ ಅನೇಕ ಸಮಾಜಸೇವಾಕಾರ್ಯಗಳು ನಡೆದವು. ಮಾಗಡಿ ರಸ್ತೆಯಲ್ಲಿರುವ ಸಾಂಕ್ರಾಮಿಕ ವ್ಯಾಧಿಗಳ ಆಸ್ಪತ್ರೆ ಮತ್ತು ಕುಷ್ಠರ ಆಸ್ಪತ್ರೆಗಳಲ್ಲಿ ಯುಗಾದಿ ದೀವಳಿಗೆಗಳ ಉತ್ಸವಕಾಲದಲ್ಲಿ, ಸಿಹಿ ತಿಂಡಿ ಹಣ್ಣು ಹೂವು, ಗಂಡಸರಿಗೂ ಹೆಂಗಸರಿಗೂ ಬಟ್ಟೆ ಮೊದಲಾದವನ್ನು ಧರ್ಮಾರ್ಥವಾಗಿ ಹಂಚಿ ಕೊಂಚ ಸಂಗೀತವಿಟ್ಟು, ಹಬ್ಬದ ಅನುಭವವನ್ನು ಆ ರೋಗಿಗಳಿಗೆ ಕೊಂಚವಾದರೂ ಮಾಡಿಕೊಡಬೇಕೆಂಬ ಯೋಚನೆ ಡಾ ॥ ಸುಬ್ಬರಾಯರದು. ಆ ಯೋಚನೆಗೆ ಪುಟ್ಟಣ್ಣಶೆಟ್ಟರ ಪ್ರೋತ್ಸಾಹವೂ ಬೆಂಬಲವೂ ಸಂಪೂರ್ಣವಾಗಿತ್ತು. ಸುಬ್ಬರಾಯರಿಗೆ ಪೇಟೆಯಲ್ಲಿ ತುಂಬ ಪ್ರಭಾವವಿದ್ದ ಕಾರಣ ಆ ಧರ್ಮಕಾರ್ಯವು ಸಾಧ್ಯವಾಯಿತು. ಹಣವನ್ನೂ ತಿಂಡಿಯನ್ನೂ ಬಟ್ಟೆಯನ್ನೂ ಎಷ್ಟೋ ಜನ ದಾನವಾಗಿ ಕೊಡುತ್ತಿದ್ದರು. ಈ ಧರ್ಮದ ಏರ್ಪಾಟನ್ನು ಆಮೇಲೆ ಎಂ.ಜಿ. ವರದಾಚಾರ್, ಮೋಕ್ಷಗುಂಡಂ ಕೃಷ್ಣಮೂರ್ತಿ ಮೊದಲಾದ ಮಿತ್ರಗೋಷ್ಠಿ ಸುಬ್ಬರಾಯರ ಕೈಯಿಂದ ವಹಿಸಿಕೊಂಡಿತು. ಅನಂತರ ಗೋಖಲೆ ಎಜುಕೇಷನ್ ಲೀಗ್ ಎಂಬ ಸಂಸ್ಥೆ ಅದನ್ನು ಕೊಂಚ ಕಾಲ ನಡಸಿತು. ಡಾ ॥ ಸುಬ್ಬರಾಯರ ಹೃದಯ ಎಂಥಾದ್ದೆಂಬುದನ್ನು ಅವರು ಮಾಡಿದ ಯೋಚನೆ ತೋರಿಸುತ್ತದೆ.

# ಸಹಕಾರ ಸಂಘ

ಡಾ ॥ ಸುಬ್ಬರಾಯರು ಮ್ಯುನಿಸಿಪಾಲಿಟಿಯ ಕೆಳದರ್ಜೆಯ ನೌಕರರ ಪ್ರಯೋಜನಕ್ಕಾಗಿ ಒಂದು ಕೋ-ಆಪರೇಟಿವ್ ಸಂಘವನ್ನೂ ಅದರ ಆಶ್ರಯದಲ್ಲಿ ವಿದ್ಯೆ ವಿನೋದಗಳ ಏರ್ಪಾಟನ್ನೂ ಸ್ಥಾಪನೆಮಾಡಿಸಿದರು. ಕೋಟೆಯಲ್ಲಿ ಈಗ ಡೆಂಟಲ್ ಕಾಲೇಜ್ ಇರುವ ಜಾಗದ ಸುಮಾರಿನಲ್ಲಿ, ಹಳೆಯ ಕೋಟೆ ಗೋಡೆಯ ಪಕ್ಕದಲ್ಲಿ ಈ ಕೆಲಸ ಪ್ರಾರಂಭವಾದದ್ದು. ಆಗ ಅಲ್ಲಿ ಒಂದು ಕಾರಂಜಿ (ವಾಟರ್ ಫೌಂಟನ್) ಇತ್ತು. ಅದರ ಮಧ್ಯದಲ್ಲಿ ಸುಂದರವಾದ ಪಾರ್ವತೀಪರಮೇಶ್ವರ ವಿಗ್ರಹವೊಂದನ್ನು ಇರಿಸಿದ್ದರು. ನೀರಿನ ಬುಗ್ಗೆ ಶಿವಮಸ್ತಕದಿಂದ ಮೇಲಕ್ಕೆದ್ದು ಅಭಿಷೇಕಮಾಡುತ್ತಿತ್ತು. ಅಲ್ಲಿ ವರ್ಷಕ್ಕೆ ಎರಡು ಮೂರು ಸಲ ಒಳ್ಳೆಯ ಓಲಗ, ಗ್ರಾಮಫೋನ್ ಸಂಗೀತ, ಕೊಂಚ ತಿಂಡಿ, ಬಡಬಗ್ಗರಿಗೆ ದಾನ-ಇದೆಲ್ಲ ನಡೆಯುತ್ತಿತ್ತು. ನಾನು ಅದನ್ನು ಮೂರು ನಾಲ್ಕು ಸಲಕಂಡಿದ್ದೇನೆ. ಝಾಡಮಾಲಿಗಳೂ ಆ ಸಮಾರಂಭದಲ್ಲಿ ಸೇರಿ ಸಂತೋಷಪಡುತ್ತಿದ್ದರು.

ಪುಟ್ಟಣ್ಣಶೆಟ್ಟರವರು ಆ ಏರ್ಪಾಟಿಗೂ ಪ್ರೋತ್ಸಾಹ ಕೊಡುತ್ತಿದ್ದರು.

# ಇನ್‌ಫ್ಲುಯೆಂಜಾ

ಡಾ ॥ ಸುಬ್ಬರಾಯರ ಪ್ರಜೋಪಕಾರಗಳಲ್ಲಿ ಬಹು ದೊಡ್ಡದೆಂದರೆ ೧೯೧೭-೧೮ರಲ್ಲಿ ಇನ್‌ಫ್ಲುಯೆಂಜಾ ವ್ಯಾಧಿ ಹರಡಿದ್ದಾಗ ಅವರು ಮಾಡಿಸಿದ್ದ ರಿಲೀಫ್ ಏರ್ಪಾಟುಗಳು. ಈ ಏರ್ಪಾಟುಗಳಲ್ಲಿ ಶ್ರೀಮಾನ್ ಪಿ. ಕೋದಂಡರಾಯರೂ, ಬಿ. ಕೆ. ರಾಮಪ್ರಸಾದ್ ಅವರೂ, ಕೆ. ಎಸ್. ಕೃಷ್ಣಯ್ಯರ್ ಅವರೂ, ನನ್ನ ಇತರ ಸ್ನೇಹಿತರೂ, ನಾನೂ ಬಹುಮಂದಿ ಸೇರಿದ್ದೆವು: ನಾವು ಹದಿನೈದಿಪ್ಪತ್ತು ತಂಡಗಳಾಗಿ ಒಂದೊಂದು ತಂಡಗಳಲ್ಲಿ ಇಬ್ಬರು ಅಥವಾ ಮೂವರು ಕೈಯಲ್ಲಿ ಬಿಸಿಬಿಸಿ ಗಂಜಿಯನ್ನೂ, ಔಷಧಿಯನ್ನೂ ಅದರ ಜೊತೆಗೆ 'ಅಜಮಲ್' ಎಂಬ ವಾಮದ ದ್ರಾವಕವನ್ನೂ ತೆಗೆದುಕೊಂಡು ಹೋಗಿ ರೋಗಿಗಳ ಮನೆಯಲ್ಲಿ ಅದನ್ನು ಹಂಚಿ, ಅವರಿಗೆ ಏನು ಸಹಾಯಬೇಕೆಂದು ವಿಚಾರಿಸಿ ಆ ಸಹಾಯಕ್ಕಾಗಿ ಏರ್ಪಾಟು ಮಾಡತಕ್ಕದ್ದು.

ಹೀಗೆ ಕೆಲವು ತಿಂಗಳು ಮಾಡಿದೆವು. ನೂರಾರು ಗಲ್ಲಿಗಳಲ್ಲಿ ನೂರಾರು ಮನೆಗಳ್ನು ನೋಡಿದೆವು. ಕೆಲವು ಕಡೆ ಬಹು ಘೋರವಾಗಿತ್ತು. ಅರಳೇಪೇಟೆಗೂ ಅಕ್ಕಿಪೇಟೆಗೂ ಮಧ್ಯೆ ಯಾವುದೋ ಸಂಧಿಯಲ್ಲಿ ಒಂದು ಮನೆ. ತಲೆಬಾಗಿಲಿ ಹತ್ತಿರ ಎರಡು ಮೂರು ವರ್ಷದ ಒಂದು ಮಗು ಏನೋ ಹಾಡಿಕೊಂಡು ಆಟವಾಡುತ್ತಿತ್ತು. ನಾವು "ಯಾರಾದರೂ ಕಾಯಿಲೆ ಇದ್ದಾರೆಯೆ?" ಎಂದು ಕೇಳಿದೆವು. ಮಗುವಿಗೆ ಉತ್ತರ ಹೇಳಲು ಬರಲಿಲ್ಲ. ನಮ್ಮ ಪ್ರಶ್ನೆ ಅರ್ಥವಾಯಿತೋ ಇಲ್ಲವೋ. ಒಳಗೆ ಹೋದೆವು. ಹಾಸಿಗೆಯ ಮೇಲೆ ಒಬ್ಬಾತ ನರಳುತ್ತಿದ್ದ. ಕೈಕಾಲು ಬಿಗಿದುಕೊಂಡಿತ್ತು. ಆತ ಬಹುಶಃ ಆ ಮಗುವಿನ ತಂದೆ. ಆತನನ್ನು ಮಾತನಾಡಿಸಿದಾಗ "ನನ್ನನ್ನೇನು ನೋಡುತ್ತೀರಿ? ನನ್ನ ಕಥೆ ಮುಗಿಯಿತು. ಆ ಕಡೆ ನನ್ನ ಹೆಂಡತಿ ಮಲಗಿದ್ದಾಳೆ. ಮಗುವಿಗೆ ಈ ತಾಯಿಯನ್ನಾದರೂ ಉಳಿಸಿಕೊಡಿ" ಎಂದ. ನಾವು ಆಕೆಯನ್ನು ನೋಡಿದೆವು. ಆಕೆ ಸತ್ತು ಹೆಣವಾಗಿದ್ದಳು. ಮಾರನೆಯ ದಿವಸ ನಮಗೆ ತಿಳಿಯಿತು, ಆ ಮನುಷ್ಯನೂ ತೀರಿಕೊಂಡನೆಂದು.

ಇಂಥ ದೃಶ್ಯಗಳನ್ನು ಸುಬ್ಬರಾಯರು ನೂರಾರು ನೋಡಿದ್ದರು. ಅಂಥ ಮಹಾನುಭಾವರು ರಿಲೀಫ್ ಯತ್ನ ಮಾಡಿದ್ದರಿಂದ ಎರಡು ತಿಂಗಳೊಳಗಾಗಿ ಉಪದ್ರವ ಹತೋಟಿಗೆ ಬಂದಿತು. ಇನ್ನೆರಡು ವಾರದೊಳಗಾಗಿ ಊರು ತನ್ನ ಹಿಂದಿನ ಸಮಾಧಾನಕ್ಕೆ ಬಂದಿತು.

# “ನೀರೋಧನೀಯ ವ್ಯಾಧಿಗಳು”

ಡಾ ॥ ಸುಬ್ಬರಾಯರು ಕನ್ನಡ ಸಾಹಿತ್ಯದ ವಿಷಯದಲ್ಲಿ ತುಂಬ ಉತ್ಸಾಹಿಗಳು. ಅವರು ಪಂಪರಾಮಾಯಣದ ಕೆಲವು ಭಾಗಗಳನ್ನು ನನ್ನ ಜೊತೆಯಲ್ಲಿ ಓದಿ ಆನಂದಪಟ್ಟದ್ದು ನನಗೆ ಜ್ಞಾಪಕದಲ್ಲಿದೆ. ಅವರು ಒಂದು ಅಮೂಲ್ಯವಾದ ಗ್ರಂಥವನ್ನು ಬರೆದರು: “ನಿರೋಧನೀಯ ವ್ಯಾಧಿಗಳು” (Preventable diseases). ಇದಕ್ಕಾಗಿ ಬಹುಶ್ರಮಪಟ್ಟರು. ಚಿತ್ರಗಳನ್ನು ಬರೆಯಿಸಿ ಅವನ್ನು ವರ್ಣರಂಜಿತವಾಗಿ ಮುದ್ರಣ ಮಾಡಿಸಲು ಬಹು ಪ್ರಯಾಸಪಟ್ಟರು. ಗ್ರಂಥವು ಸರಕಾರಿ ಮುದ್ರಣಾಲಯದಲ್ಲಿ ಮುದ್ರಿತವಾಯಿತು. ಚಿತ್ರಗಳು ಜರ್ಮನಿಯಿಂದ ಬಂದವು. ಆ ಪುಸ್ತಕಕ್ಕಾಗಿ ನಾನೂ ಏನೋ ಕೆಲಸಮಾಡಿದೆನೆಂದು ಜ್ಞಾಪಕ. ಅಂಥ ಪುಸ್ತಕ ಜನದಲ್ಲಿ ಪ್ರಚಾರಕ್ಕೆ ಬರಬೇಕಾದದ್ದು. ಅದು ಹಾಗೆ ಪ್ರಚಾರಕ್ಕೆ ಬಾರದೆ ಸರಕಾರದ ಪ್ರಕಟನ ಶಾಖೆಯ ಯಾವುದೋ ಕೋಣೆಯಲ್ಲಿ ಬಹು ಕಾಲ ಕೇಳುವವರಿಲ್ಲದೆ ಬಿದ್ದಿತ್ತು. ಅದು ಈಗ ದೊರೆಯಬಹುದೋ ಇಲ್ಲವೋ ನಾನು ಕಾಣೆ. ಅದರ ಜ್ಞಾಪಕ ಮಾತ್ರ ನನಗೆ ಒಂದು ದೊಡ್ಡ ವಸ್ತುವಾಗಿದೆ.

ಈ ಎಲ್ಲ ಏರ್ಪಾಟುಗಳಲ್ಲಿಯೂ ಪುಟ್ಟಣ್ಣಶೆಟ್ಟರವರ ಜನಪ್ರೀತಿ ಮಾತ್ರವಲ್ಲದೆ ಅವರ ಕಾರ್ಯಶ್ರದ್ಧೆ, ಮೇಲ್ವಿಚಾರಣೆಯ ಜಾಗೂರತೆ ಮತ್ತು ಪ್ರೋತ್ಸಾಹಶೀಲತೆ ಎದ್ದುಕಾಣುತ್ತಿದ್ದವು.

# ಸಂಶಯ

ಪುಟ್ಟಣ್ಣಶೆಟ್ಟರವರ ಕಡೆಕಡೆಯ ದಿನಗಳು ಅಷ್ಟೇನೂ ಸುಖಮಯವಾಗಿರಲಿಲ್ಲ. ಗೃಹ ಕೃತ್ಯದಲ್ಲಿ ಏನೇನೋ ಚಿಂತೆಗಳೂ ತೊಡಕುಗಳೂ ಬಂದವು. ಒಂದು ದಿನ ನನ್ನನ್ನು ಬರಹೇಳಿದರು. ಅಂದು ಅವರ ಮನಸ್ಸು ಏನೋ ತುಂಬ ನೊಂದಿತ್ತು. ಮನೆಯ ಒಳಗಿನ ಒಳಕೋಣೆಗೆ ನನ್ನನ್ನು ಕರೆದುಕೊಂಡು ಹೋದರು. ನಾನು "ಮೈಯಲ್ಲಿ ಸ್ವಸ್ಥವಿಲ್ಲವೆ?" ಎಂದು ಕೇಳಿದೆ. ಅವರು "ಈ ವಯಸ್ಸಿಗೆ ಮೈ ಇನ್ನು ಹೇಗಿರುತ್ತದೆ? ಮೈಗಿಂತ ಮನಸ್ಸು ಮುಖ್ಯವಾದದ್ದು. ನೋಡಿ, ಮುಖದ ಮೇಲೆ, ಹಿಂದೆ ತುಂಬಿಕೊಂಡಿದ್ದದ್ದು ಈಗ ಗುಳಿ ಗುಳಿಯಾಗಿದೆ. ಕಣ್ಣ ಕೆಳಗಿನ ಎಲುಬುಗಳು ಮುಂದಕ್ಕೆ ಚಾಚಿಕೊಂಡಿವೆ. ಮನಸ್ಸಿನ ವಿಚಾರಗಳೂ ಹೀಗೆಯೇ ತಾನೆ? ವಯಸ್ಸಾದಂತೆಲ್ಲ ದೇಹದ ವಿಕಾರಗಳು ಮೇಲಕ್ಕೆ ಬರುತ್ತವೆ. ಮನಸ್ಸಿನ ವಿಕಾರಗಳೂ ಹಾಗೆಯೇ ಅಲ್ಲವೆ? ನಾನು ಕೋಪತಾಪಗಳನ್ನು ಮೊದಮೊದಲು ಅಣಗಿಸಿಟ್ಟಿದ್ದೆ. ಈಗ ಹಾಗೆ ಅಣಗಿಸಲಾರೆ. ಕೋಪ ಈಗ ಬೇಗ ಹೊರಕ್ಕೆ ಬರುತ್ತದೆ...ನೋಡಿ, ಶಿವ ನನಗೆ ಈ ವಯಸ್ಸಿನಲ್ಲಿ ಏನೇನಿಟ್ಟಿದ್ದಾನೆ! ಇದನ್ನೆಲ್ಲ ಸಹಿಸುವ ಶಕ್ತಿ ಈಗ ಇಲ್ಲವಲ್ಲ? ಏನೇನು ಶಿವನ ಪರೀಕ್ಷೆ!" ಎಂದರು.

ಮನಸ್ಸಿನ ಯಾವುದೋ ಒಂದು ಉಮ್ಮಳವನ್ನು ಹೊರಗೆ ಹಾಕಿ ಕಳೆದುಕೊಳ್ಳುವುದಕ್ಕಾಗಿ ಅವರು ಈ ಮಾತನ್ನಾಡಿರಬೇಕು. ಒಂದು ಕ್ಷಣದೊಳಗಾಗಿ ಅವರು ತಾಳ್ಮೆ ತಂದುಕೊಂಡರು. ಮತ್ತೆ ನಗುಮುಖದಿಂದ ಮಾತನಾಡಿದರು.

ಪುಟ್ಟಣ್ಣಶೆಟ್ಟರು ತ್ರಿಕರಣಪೂರ್ವಕವಾಗಿ ಪರಮೇಶ್ವರ ಭಕ್ತರು. ಅವರು ಒಂದು ಬೆಳ್ಳಿಯ ಪಾರ್ವತೀಪರಮೇಶ್ವರ ವಿಗ್ರಹವನ್ನು ಮಾಡಿಸಿಟ್ಟುಕೊಂಡು ಪ್ರತಿದಿನವೂ ಪೂಜೆಮಾಡುತ್ತಿದ್ದರು. ನಡವಳಿಕೆಯಲ್ಲಿ ಲೇಶಮಾತ್ರವೂ ಕಳಂಕವಿಲ್ಲದವರು. ಕೈ, ಬಾಯಿ, ಮೈ ಎಲ್ಲ ಕೊಳಕಿಲ್ಲದ್ದು. ಅವರ ಮನಸ್ಸು ಯಾವಾಗಲೂ ದೊಡ್ಡ ದೊಡ್ಡ ವಿಚಾರಗಳನ್ನು ಹಿಡಿದು ದೊಡ್ಡ ದಾರಿಗಳಲ್ಲಿ ಹೋಗುತ್ತಿತ್ತು.

ಸಾರ್ವಜನಿಕದಲ್ಲಿ ಅವರು ಅನುಕರಣೀಯರು. ಹಿಂದೂಗಳೂ ಮುಸಲ್ಮಾನರೂ, ಸ್ವದೇಶೀಯರೂ ವಿದೇಶೀಯರೂ ಬೆಳಿಗ್ಗೆ ಏಳರಿಂದ ರಾತ್ರಿ ಒಂಭತ್ತೂವರೆಯವರೆಗೂ ಅವರ ಬಳಿಗೆ ತಂಡತಂಡವಾಗಿ ಬರುತ್ತಿದ್ದರು. ಬೇಡಿಕೆ ಬೇಡುವುದಕ್ಕಾಗಿ, ಸಲಹೆ ಪಡೆಯುವುದಕ್ಕಾಗಿ, ಹಿಗ್ಗು ಹೇಳಿಕೊಳ್ಳುವುದಕ್ಕಾಗಿ, ಗೌರವ ತೋರಿಸುವುದಕ್ಕಾಗಿ, ಹೀಗೆ

ಯಾವಯಾವುದೋ ಕಾರಣದಿಂದ ಅವರಿಗೆ ಬಿಡುವು ಕೊಡದೆ ಜನ ಬರುತ್ತಿದ್ದರು. ಅವರ ಬಳಿಗೆ ಜನ ಹೋದಂತೆ ಇನ್ನಾರ ಬಳಿಗೂ-ಮೈಸೂರಿನ ವೆಂಕಟಕೃಷ್ಣಯ್ಯನವರ ವಿನಾ-ಜನ ಹೋದದ್ದನ್ನು ನಾನು ನೋಡಿಲ್ಲ. ವಿದ್ವಾಂಸರು, ವಿರಕ್ತರು, ವರ್ತಕರು, ಹುದ್ದೆದಾರರು, ಯಾಚಕರು, ಸಾಮಾನ್ಯರು-ಎಲ್ಲರೂ ಅವರನ್ನು ಕಂಡು ಸಂತೋಷಪಟ್ಟು ಬರುತ್ತಿದ್ದರು.

ಸಾರ್ವಜನಿಕ ಜೀವನದಲ್ಲಿ ಪುಟ್ಟಣ್ಣಶೆಟ್ಟರವರು ಅನುಸರಿಸಿದ್ದ ನೀತಿಯನ್ನು ಜನದ ಜ್ಞಾಪಕಕ್ಕೆ ತರುವುದು ಈಗ ಅವಶ್ಯವಾಗಿದೆಯೆಂದು ತೋರುತ್ತದೆ.

> ನೀಚಾಃ ಕಲಹಮಿಚ್ಛನ್ತಿ
> ಸಂಧಿಮಿಚ್ಛನ್ತಿ ಸಾಧವಃ ॥

ಪುಟ್ಟಣ್ಣಶೆಟ್ಟರವರು ಜನರನ್ನು ಒಟ್ಟುಗೂಡಿಸುವುದರಲ್ಲಿ ತಾತ್ಪರ್ಯವುಳ್ಳವರು: ಜನವನ್ನು ಒಡೆದು ಸಂತೋಷಪಡುವವರಲ್ಲ. ಅಂಥ ಸಾರ್ವಜನಿಕರನ್ನು ಈಗ ನಾನು ಒಬ್ಬರನ್ನೂ ಕಾಣೆ.

# ಸಾರ್ವಜನಿಕ ಸಾಧನೆ

ಪುಟ್ಟಣ್ಣಶೆಟ್ಟರವರು ಎಷ್ಟು ಸಾರ್ವಜನಿಕ ಸಂಸ್ಥೆಗಳಲ್ಲಿ ಆಸಕ್ತಿ ಇಟ್ಟುಕೊಂಡಿದ್ದರೆಂಬುದನ್ನು ಸಂಪೂರ್ಣವಾಗಿ ಪಟ್ಟಿ ಮಾಡುವುದು ಅಸಾಧ್ಯ. ಬಹುಶಃ ಅವರ ಸಂಬಂಧ ಇಲ್ಲದಿದ್ದ ಸಂಸ್ಥೆ ಯಾವುದೂ ಇಲ್ಲವೆನಿಸುತ್ತದೆ. ನನಗೆ ಜ್ಞಾಪಕಕ್ಕೆ ಬಂದ ಕೆಲವು ಹೆಸರುಗಳನ್ನು ಹೇಳುತ್ತೇನೆ.

1. ಮೈಸೂರು ಬ್ಯಾಂಕು. ಬ್ಯಾಂಕಿಗೆ ಪುಟ್ಟಣಶೆಟ್ಟರವರೇ ಮೂಲಕರ್ತರೆಂದು ಹೇಳಬಹುದು. ಅವರ ಪ್ರಭಾವದಿಂದಲೇ ಜನಕ್ಕೆ ನಂಬಿಕೆ ಹುಟ್ಟಿ ಆ ಸಂಸ್ಥೆ ಪ್ರಾರಂಭವಾದದ್ದು.
2. ಮೈಸೂರು ಕೃಷ್ಣರಾಜೇಂದ್ರ ಮಿಲ್ಸ್. ಈ ವಿಷಯದಲ್ಲಿ ಅವರು ತೋರಿದ ಉತ್ಸಾಹವೂ ಪಟ್ಟ ಶ್ರಮವೂ ಅಷ್ಟಿಷ್ಟಲ್ಲ.
3. ಕನ್ನಡ ಸಾಹಿತ್ಯ ಪರಿಷತ್ತು. ಚಿಕ್ಕಮಗಳೂರಿನಲ್ಲಿ ನಡೆದ ಸಮ್ಮೇಳನಕ್ಕೆ ಪುಟ್ಟಣ್ಣಶೆಟ್ಟರವರು ಅಧ್ಯಕ್ಷರಾಗಿದ್ದರು. ಮತ್ತು ಷರಿಷನ್ಮಂದಿರದಲ್ಲಿ ಅನೇಕ ಸಭೆಗಳಿಗೆ ದಯಮಾಡಿಸಿದ್ದರು.
4. ವಿದ್ಯಾಭ್ಯಾಸ ಕ್ರಮವನ್ನು ಸುಧಾರಣೆ ಮಾಡುವ ಅನೇಕ ಸಾರ್ವಜನಿಕ ಪ್ರಯತ್ನಗಳಿಗೆ ಅಧ್ಯಕ್ಷರಾಗಿದ್ದರು.
5. ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಅಧ್ಯಕ್ಷರು.
6. ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಅಧ್ಯಕ್ಷರು.
7. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಅರ್ಧ ಶತಮಾನೋತ್ಸವದ ಜೂಬಿಲಿ ಸಭೆಗೆ ಅಧ್ಯಕ್ಷರಾಗಿದ್ದರು. ಆಗ ಸಭಾಸದರಾಗಿದ್ದವರಲ್ಲಿ ಮಿರ್ಜಾ ಸಾಹೇಬರು ಮುಖ್ಯರು.
8. ತೋಟದಪ್ಪನವರ ಧರ್ಮನಿಧಿ, ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ ಧರ್ಮನಿಧಿ ಮುಂತಾದ ಎಷ್ಟೋ ಧರ್ಮಸಂಸ್ಥೆಗಳಿಗೆ ನ್ಯಾಸಪಾಲಕ (ಟ್ರಸ್ಟಿ)ರಾಗಿದ್ದರು.
9. ಬೆಂಗಳೂರಿನಲ್ಲಿ ನಡೆದ ವೀರಶೈವ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದರು.
10. ಮೆಡಿಕಲ್ ಕಾಲೇಜನ್ನು ಬೆಂಗಳೂರಿನಿಂದ ಮೈಸೂರಿಗೆ ವರ್ಗಾಯಿಸಬಾರದೆಂದು ಬೇಡಿಕೊಳ್ಳಲು ಏರ್ಪಟ್ಟಿದ್ದ ನಿಯೋಗಗೋಷ್ಠಿಗೆ ಅಧ್ಯಕ್ಷರಾಗಿದ್ದರು.

11. ಬೆಂಗಳೂರು ಕಂಟೋನ್ಮೆಂಟಿನ ಹೆಚ್ಚು ವರಮಾನವು ಮೈಸೂರಿಗೆ ಸಲ್ಲತಕ್ಕದೆಂದೂ ಬ್ರಿಟಿಷ್ ಸರಕಾರಕ್ಕೆ ಕಂಟೋನ್ಮೆಂಟಿನ ಮೇಲೆ ಸ್ವಾಮ್ಯವಿಲ್ಲವೆಂದೂ ಮೈಸೂರಿನ ಪೊಗದಿಯನ್ನು ಪೂರ್ತಿ ವಜಾಮಾಡಬೇಕೆಂದೂ ಹೊರಟ ಪ್ರಜಾಸಮಾರಂಭಗಳಿಗೆ ಪುಟ್ಟಣ್ಣಶೆಟ್ಟರು ಮುಂದಾಗಿದ್ದರು.
12. ಅಮೆಚ್ಯೂರ್ ನಾಟಕಸಂಸ್ಥೆಗೆ ಪ್ರೋತ್ಸಾಹಕರ್ತರಾಗಿದ್ದರು. ಆ ಸಂಸ್ಥೆ ಷೇಕ್ಸ್ಪಿಯರಿನ "ರೋಮಿಯೋ ಅಂಡ್ ಜುಲಿಯೆಟ್" ನಾಟಕವಾಡಿದಾಗ ಅದರಲ್ಲಿ ಬಳ್ಳಾರಿ ರಾಘವಾಚಾರ್ಯರೂ ಬೆಂಗಳೂರಿನ ವೆಂಕಟಾಚಾರ್ಯರೂ ಮೆಡಿಕಲ್ ಇಲಾಖೆಯ ಶಿವರಾಯರೂ ಬಹುಶಃ ಕೆ. ಗುರುದತ್ ಅವರೂ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಪುಟ್ಟಣ್ಣಶೆಟ್ಟರು ಮಾಡಿದ ಭಾಷಣ ಸೊಗಸಾಗಿತ್ತು.

# ಸಮಾಧಾನ ಪ್ರವೃತ್ತಿ

ಹೀಗೆ ಇನ್ನೂ ಎಷ್ಟೋ ಸಮಿತಿ ಸಮಾರಂಭಗಳಿಗೆ ಅವರು ಅಧ್ಯಕ್ಷರಾಗಿ ಬಲಕೊಟ್ಟರು. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಯಾವ ಸಾರ್ವಜನಿಕ ಸಮಾರಂಭವೂ ಪುಟ್ಟಣ್ಣಶೆಟ್ಟರ ಅನುಮೋದನೆ ಬೆಂಬಲಗಳಿಲ್ಲದೆ ನಡೆದದ್ದಲ್ಲ. ಅದರಲ್ಲಿಯೂ ಕೋಮುವಾರು ತಕರಾರುಗಳಾಗಲಿ ಬೇರೆ ವೈಷಮ್ಯವಾಗಲಿ ಮೇಲಕ್ಕೇಳಬಹುದೆಂಬ ಭೀತಿ ತೋರಿದಾಗ ಅಧ್ಯಕ್ಷ ಸ್ಥಾನಕ್ಕೆ ಪುಟ್ಟಣ್ಣಶೆಟ್ಟರನ್ನು ಆಹ್ವಾನಿಸಲು ಎಲ್ಲ ಪಕ್ಷದವರದೂ ಒಪ್ಪಿಕೆ. ಅವರ ನಿಷ್ಪಕ್ಷಪಾತದಲ್ಲಿಯೂ ಸಮಾಧಾನಪ್ರವೃತ್ತಿಯಲ್ಲಿಯೂ ಸರ್ವಜನಹಿತ ದೃಷ್ಟಿಯಲ್ಲಿಯೂ ಎಲ್ಲ ವರ್ಗಗಳವರಿಗೂ ನಂಬಿಕೆ ಅಷ್ಟು ಆಳವಾಗಿ ದೃಢವಾಗಿತ್ತು.

"ನಮ್ಮ ದೂರುಗಳನ್ನೂ ಕಷ್ಟಗಳನ್ನೂ ಅವರಲ್ಲಿ ಹೇಳೋಣ. ಅವರು ಹಿತಚಿಂತನೆ ಹೇಳಿದಂತೆ ನಡೆದುಕೊಳ್ಳೋಣ" ಎಂಬ ವಿಶ್ವಾಸ ಸರ್ವಜನವರ್ಗದಲ್ಲಿಯೂ ಸಾಮಾನ್ಯವಾಗಿತ್ತು. ಇಂಥ ನಂಬಿಕೆಯನ್ನು ಸಂಪಾದಿಸಿಕೊಂಡಿದ್ದದ್ದು ಒಂದು ಮಹಾ ಸಿದ್ಧಿಯೆಂದು ಎಲ್ಲರೂ ಒಪ್ಪಿಕೊಂಡಾರು. ಅಂಥ ಜನ ಈ ಹೊತ್ತು ಒಬ್ಬರೂ ಇಲ್ಲವಲ್ಲಾ ಎಂದು ನಾವು ಕೊರತೆಪಡುತ್ತಿರುವುದು ಪುಟ್ಟಣ್ಣಶೆಟ್ಟರ ದೊಡ್ಡತನಕ್ಕೆ ಗುರುತು. ಅವರು ಏನು ಮಾಡಲಿ ಏನು ಮಾಡದಿರಲಿ, ಅವರು ಪಂಡಿತರಾಗಿರಲಿ ಬಹುಸಾಮಾನ್ಯರೇ ಆಗಿರಲಿ; ಯಾರ ಮಾತಿನಲ್ಲಿ ಸಮಸ್ತ ಜನರಿಗೂ ನೈಜವಾದ ನಂಬಿಕೆಯೂ ವಿಶ್ವಾಸವೂ ಇರುತ್ತದೆಯೋ ಅಂಥ ಜನವೇ ಆ ಸಮಾಜದ ಸತ್ತ್ವ. ಅಂಥವರಿಂದಲೇ ಸಮಾಜಕ್ಕೆ ಕ್ಷೇಮ.

# ಜೀವನದ ಮೈಲಿಗಲ್ಲುಗಳು

೧೮೫೬, ಏಪ್ರಿಲ್ ೨೯ ಜನನ (ಬೆಂಗಳೂರು ಬಳಿಯ ಕೃಷ್ಣರಾಜಪುರದಲ್ಲಿ)

೧೮೭೫ ಮೈಸೂರು ಸರಕಾರದಲ್ಲಿ ಉದ್ಯೋಗಾರಂಭ

೧೮೮೬ ಅಸಿಸ್ಟೆಂಟ್ ಕಮಿಷನರ್

೧೮೯೮ ಡೆಪ್ಯುಟಿ ಕಮಿಷನರ್

೧೯೦೫ ಅಖಿಲಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ

೧೯೨೭ ಅಖಿಲಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ

೧೯೧೧ ಫಸ್ಟ್ ಮೆಂಬರ್ ಆಫ್ ಕೌನ್ಸಿಲ್; ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರಿಂದ “ರಾಜಸಭಾಭೂಷಣ” ಪ್ರಶಸ್ತಿ.

೧೯೧೨ ಸರಕಾರದಿಂದ ನಿವೃತ್ತಿ. ಮೈಸೂರು ಬ್ಯಾಂಕಿನ ಅಧ್ಯಕ್ಷ

೧೯೧೩ ಪೌರಸಭಾಧ್ಯಕ್ಷ

೧೯೨೦ ಪೌರಸಭಾಧ್ಯಕ್ಷ

೧೯೧೪ “ಕೈಜರ್-ಇ-ಹಿಂದ್” ಪದಕ

೧೯೧೫ ಬೆಂಗಳೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ

೧೯೨೨ ಬೆಂಗಳೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ

೧೯೧೭ “ಸಿ.ಐ.ಇ.” ಸನ್ಮಾನ

೧೯೨೧ ಚಿಕ್ಕಮಗಳೂರು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ

೧೯೨೪ ನ್ಯಾಯವಿಧಾಯಕ ಸಭೆಯ (ಚುನಾಯಿತ) ಸದಸ್ಯ

೧೯೨೫ "ಸರ್" ಪ್ರಶಸ್ತಿ

೧೯೨೭ ನಾಲ್ವಡಿ ಕೃಷ್ಣರಾಜ ಒಡೆಯರ್ ರಜತೋತ್ಸವ ಸಮಿತಿಯ ಅಧ್ಯಕ್ಷ

೧೯೩೬ ಮೈಸೂರು ವಿಶ್ವವಿದ್ಯಾನಿಲಯದಿಂದ "ಎಲ್.ಎಲ್.ಡಿ." ಹಂಪೆಯ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಅಧ್ಯಕ್ಷ

೧೯೩೮ ಬೆಂಗಳೂರು ವೀರಶೈವ ವಿದ್ಯಾರ್ಥಿನಿಲದ ಸ್ಥಾಪನೆ

೧೯೩೮, ಜುಲೈ ೨೩ ನಿಧನ

# ೭ ಮೂವರು ಸಾರ್ವಜನಿಕರು

## ೧. ಶಂಕರನಾರಾಯಣರಾಯರು

ನನಗೆ ಅತ್ಯಂತ ಪ್ರಿಯರಾದ ಸಾಧುಸತ್ಪುರುಷರಲ್ಲಿ ಕೆ. ಶಂಕರನಾರಾಯಣರಾಯರು ಒಬ್ಬರು. ಇವರ ಪರಿಚಯ ನನಗೆ ಮೊದಲು ಆದಾಗ ಅವರು ಶಿವಮೊಗ್ಗದಲ್ಲಿ ಅಡ್ವೊಕೇಟರಾಗಿದ್ದರು. ಅವರು ವಕೀಲಿ ವೃತ್ತಿಯಲ್ಲಿ ಮೊದಲನೆಯ ಶ್ರೇಣಿಗೆ ಸೇರಿದ್ದದ್ದಲ್ಲದೆ ಸಾರ್ವಜನಿಕರಲ್ಲಿಯೂ ಮುಂದಾಳಾಗಿದ್ದರು. ಒಂದಾನೊಂದು ಕಾಲದಲ್ಲಿ ಶಿವಮೊಗ್ಗೆಯು ಹಳೆಯ ಮೈಸೂರಿನ ರಾಜಕೀಯ ಕೇಂದ್ರವಾಗಿತ್ತು. ಮೈಸೂರು ಬೆಂಗಳೂರುಗಳನ್ನು ಬಿಟ್ಟರೆ ದೇಶದ ರಾಜಕೀಯ ವಿಷಯಗಳಲ್ಲಿ ಶ್ರದ್ಧಾಸಕ್ತಿಗಳುಳ್ಳ ಮಹಾಜನರು ಅಲ್ಲಿ ಮಿಕ್ಕ ಮುಖ್ಯ ಜಿಲ್ಲೆಗಳಿಗಿಂತ ಹೆಚ್ಚಾಗಿದ್ದರು. ನಗರಸಭಾ ಎಂಬ ಸಂಸ್ಥೆಯ ಹೆಸರಿನಿಂದ ಶಿವಮೊಗ್ಗ ಪ್ರಾಂತದ ಮಹಾಜನರು ರಾಜಕೀಯ ವಿಚಾರ ನಡಸುತ್ತಿದ್ದರು. ಆ ಸಭೆಯಲ್ಲಿ ಪ್ರಮುಖರಾಗಿದ್ದವರ ಪೈಕಿ ಶಂಕರನಾರಾಯಣರಾಯರು ಒಬ್ಬರು.

ಶಂಕರನಾರಾಯಣರಾಯರಿಗೆ ಆಗಾಗ ಕಷ್ಟ ಬರುತ್ತಿದ್ದದ್ದು ಅವರ ಒಳ್ಳೆಯತನದ ಕಾರಣದಿಂದ. ಯಾರುಯಾರನ್ನೋ ನಂಬಿ ಮೋಸಕ್ಕೊಳಗಾದರು. ಹೀಗೆ, ಅವರಿಗೆ ಕೈ ತುಂಬ ಸಂಪಾದನೆ ಇದ್ದರೂ, ಅದರಲ್ಲಿ ಅರ್ಧದಷ್ಟು ಕೃತ್ರಿಮಕ್ಕೆ ಬಲಿಯಾಗುತ್ತಿತ್ತು. ಮಿಕ್ಕ ಅರ್ಧದಷ್ಟು ದಾನಧರ್ಮಕ್ಕೆ ವಿನಿಯೋಗವಾಗುತ್ತಿತ್ತು.

ಶಂಕರನಾರಾಯಣರಾಯರು ಥಿಯೊಸಾಫಿಕಲ್ ಸೊಸೈಟಿ ಸಂಸ್ಥೆಗೆ ಸೇರಿದ್ದವರು. ಪೂರಾ ಭಗವದ್ಭಕ್ತರು. ಪೂಜೆ, ಪಾರಾಯಣ, ವ್ರತ ಇದನ್ನೆಲ್ಲ ನಡೆಸುತ್ತಿದ್ದವರು. ಆದದ್ದರಿಂದ ಅವರಿಗೆ ಮೋಸ ಮಾಡುವುದು ಸುಲಭವಾಗಿತ್ತು.

ಅವರು ನ್ಯಾಯಶಾಸ್ತ್ರದಲ್ಲಿ ಮೇಲ್ದರ್ಜೆಯ ಪಾಂಡಿತ್ಯ ಪಡೆದಿದ್ದವರು. ಸತ್ಯಕ್ಕಾಗಿ ನಿಲ್ಲುವುದರಲ್ಲಿ ನಿರ್ಭೀತರು, ಮತ್ತು ವಾದದಲ್ಲಿ ಜಡ್ಜಿಗಳ ಮತ್ತು ಕಕ್ಷಿಗಾರರ ಮೆಚ್ಚಿಕೆಯನ್ನು ಸಂಪಾದಿಸಿದ್ದವರು. ಒಳ್ಳೆಯ ವಾಗ್ಮಿ.

# ಪರಿಚಯ

೧೯೦೮ರಲ್ಲಿ ಮೈಸೂರು ವೃತ್ತಪತ್ರಿಕಾ ವಾಗ್ಬಂಧನದ ಕಾನೂನು ಆಯಿತಷ್ಟೆ. ಆ ಕಾನೂನನ್ನು ಖಂಡಿಸಿ ಸರಕಾರವನ್ನು ಪ್ರತಿಭಟಿಸಿದವರಲ್ಲಿ ಶಂಕರನಾರಾಯಣರಾಯರು, ಎಸ್. ಆರ್. ಬಾಲಕೃಷ್ಣರಾಯರು ಅತಿ ಮುಖ್ಯರು. ಶಂಕರನಾರಾಯಣರಾಯರ ಹೆಸರು ನನಗೆ ತಿಳಿದುಬಂದದ್ದು ಆ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಪತ್ರಿಕಾಶಾಸನವನ್ನು ಖಂಡಿಸಿ ಅವರು ಮಾಡಿದ ಭಾಷಣಗಳಿಂದ. ಆಗ ನಾನು ಅವರ ಪರಿಚಯವನ್ನು ಸಂಪಾದಿಸಿಕೊಂಡೆ. ೧೯೧೪-೧೫ರ ಸುಮಾರಿನಲ್ಲಿ ಶಂಕರನಾರಾಯಣರಾಯರು ಶಿವಮೊಗ್ಗೆಯನ್ನೂ ವಕೀಲಿ ವೃತ್ತಿಯನ್ನೂ ಬಿಟ್ಟು ಬೆಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಆಗಿ ಬಂದು ಸೇರಿದರು. ಅಲ್ಲಿಂದಾಚೆಗೆ ಅವರಿಗೂ ನನಗೂ ಬಳಕೆ ಹೆಚ್ಚಾಯಿತು.

ಅವರ ಸ್ವಭಾವಕ್ಕೆ ನಿದರ್ಶನವಾಗಿ ಒಂದೆರಡು ಸಂಗತಿಗಳನ್ನು ಹೇಳಬಹುದೆನಿಸುತ್ತದೆ.

ಶಂಕರನಾರಾಯಣರಾಯರು ಯಾವಾಗಲೂ ದೊಡ್ಡ ದೊಡ್ಡ ಮನೆಗಳಲ್ಲಿ ವಾಸವಾಗಿರುತ್ತಿದ್ದರು. ಮನೆಯ ತುಂಬ ಜನ ಇರುತ್ತಿದ್ದರು. ಬಂಧುಗಳು, ಸ್ನೇಹಿತರು, ಇತರರು.

ಒಂದು ದಿನ ಶಂಕರನಾರಾಯಣರಾಯರ ಕೈಗೆ ಒಂದು ಪತ್ರ ಬಂತು. ಅದು ಪೋಸ್ಟ್ ಮೂಲಕ. ಅದರಲ್ಲಿ ಇದ್ದ ಕಾಗದ ಒಬ್ಬ ಹೆಂಗಸಿನದು. ಆಕೆ ಬರೆದಿದ್ದಳು: “ನನ್ನ ಗಂಡ ಚಾಕರಿ ಸಂಪಾದಿಸುವುದಕ್ಕೆಂದು ಬೆಂಗಳೂರಿಗೆ ಬಂದ. ಆತ ನಿಮ್ಮ ಆಶ್ರಯದಲ್ಲಿರುವುದಾಗಿ ನನಗೆ ಹೇಳಿದ. ಆದರೆ ಎರಡು ಮೂರು ತಿಂಗಳಾದರೂ ಆತನಿಂದ ನನಗೆ ಪತ್ರ ಬಂದಿಲ್ಲ. ಆತನ ಕ್ಷೇಮ ಸಮಾಚಾರ ನನಗೆ ತಿಳಿದಿಲ್ಲ. ಆದದ್ದರಿಂದ ಮನಸ್ಸಿಗೆ ತುಂಬ ಚಿಂತೆಯಾಗಿದೆ. ಆತ ತಮ್ಮಲ್ಲಿದ್ದಾರೆಯೆ? ಚಾಕರಿ ಆಗಿದೆಯೇ? ದಯಮಾಡಿ ತಿಳಿಸಬೇಕು.”

ಈ ಕಾಗದ ತಮ್ಮ ಕೈಗೆ ಬಂದ ಹೊತ್ತಿನಲ್ಲಿ ಶಂಕರನಾರಾಯಣರಾಯರು ಆಫೀಸಿಗೆ ಹೊರಡುವ ಅವಸರದಲ್ಲಿದ್ದರು. ತಮ್ಮ ಭಾರ್ಯೆಯನ್ನು ಕರೆದು, ಅವರ ಕೈಗೆ ಆ ಕಾಗದ ಕೊಟ್ಟು “ಇದೇನೋ ಹೆಂಗಸರ ಕಾಗದ. ಅದಕ್ಕೆ ಏನು ಜವಾಬು ಕೊಡಬೇಕೋ ಕೊಡಿ” ಎಂದು ಹೇಳಿ ಹೊರಟುಹೋದರು.

ಇನ್ನೊಂದು ತಿಂಗಳು ಕಳೆಯಿತು. ಮತ್ತೆ ಆಕೆಯಿಂದ ಕಾಗದ ಬಂತು. ಶಂಕರನಾರಾಯಣರಾಯರು ಈ ಸಾರಿಯೂ ಅದನ್ನು ಹೆಂಡತಿಯ ಕೈಗೆ ಕೊಟ್ಟು ವಿಷಯ ಅಲ್ಲಿಗೆ ಮುಗಿಯಿತೆಂದುಕೊಂಡರು.

ಮೂರನೆಯ ತಿಂಗಳು ಕಳೆದ ಮೇಲೆ ಆಕೆಯಿಂದ ಮತ್ತೂ ಒಂದು ಕಾಗದ ಬಂತು. ಅದನ್ನು ಶಂಕರನಾರಾಯಣರಾಯರು ತಮ್ಮ ಹೆಂಡತಿಯ ಕೈಗೆ ಕೊಟ್ಟರು. ಈ ಸಾರಿ ಆಕೆ ಒಂದು ಕೆಲಸ ಮಾಡಿದರು. ಆ ದಿನದಿಂದ ಮುಂದಿನ ಭಾನುವಾರ ಶಂಕರನಾರಾಯಣರಾಯರು ಭೋಜನದ ವೇಳೆಗೆ ಮನೆಯಲ್ಲೇ ಇದ್ದು ಪಂಕ್ತಿಯಲ್ಲಿ ಕೂಡತಕ್ಕದ್ದೆಂದು ಅಪ್ಪಣೆ ಮಾಡಿದರು. ಅದರಂತೆ ಆ ಭಾನುವಾರ ಭೋಜನ ನಡೆಯಿತು. ೨೦-೨೫ ಮಂದಿ ಕುಳಿತಿದ್ದರು. ಆಗ ಆಕೆ ಬಂದು ಯಜಮಾನರ ಪಕ್ಕದಲ್ಲಿ ನಿಂತು ಕೈತೋರಿಸಿ.

“ಅಲ್ಲಿ ನೋಡ್ರಿ, ಎದುರು ಸಾಲಿನಲ್ಲಿ ಆ ಕಡೆಯಿಂದ ಐದನೆಯ ಮನುಷ್ಯ ಇದ್ದಾನಲ್ಲ-ಆತನ ಹೆಂಡತಿಯೇ ಆ ಕಾಗದ ಬರೆದಿರುವುದು. ಮಿಕ್ಕ ವಿಷಯ ವಿಚಾರಿಸಿರಿ.”

ಅನಂತರ ವಿಚಾರ ನಡೆಯಿತು.

ತಮ್ಮ ಮನೆಯಲ್ಲಿ ನಾಲ್ಕೈದು ತಿಂಗಳಿಂದ ಊಟ ಮಾಡಿಕೊಂಡಿದ್ದ ಮನುಷ್ಯನನ್ನು ಈತ ಯಾರು? ಏತಕ್ಕಾಗಿ ಬಂದ-ಎಂದು ವಿಚಾರ ಮಾಡುವ ಗೋಜಿಗೆ ಹೋಗಲಿಲ್ಲ ಶಂಕರನಾರಾಯಣರಾಯರು. ಸತ್ರ ನಡೆಯುತ್ತಿತ್ತು -ಶಿವಸತ್ರ. ಯಾರುಯಾರಿಗೆ ಊಟ ಲಭ್ಯವೋ ಅವರವರಿಗೆ. ಎಲ್ಲ ಈಶ್ವರ ಲೀಲೆ-ಎಂದು ಇದ್ದರು ಶಂಕರನಾರಾಯಣರಾಯರು.

# ಗೋವಿಂದರಾಘವಯ್ಯರ್

ಹೀಗೆ ಇದ್ದ ಇನ್ನೊಬ್ಬರ ಹೆಸರೂ ನನ್ನ ತಿಳಿವಳಿಕೆಯಲ್ಲಿದೆ. ಮದರಾಸಿನಲ್ಲಿ ಎಲ್. ಎ. ಗೋವಿಂದರಾಘವಯ್ಯರ್ ಎಂಬ ಪ್ರಸಿದ್ಧ ವಕೀಲರಿದ್ದರು. ಅವರಿಗೆ ದಿವಾನ್ ಬಹದ್ದೂರ್ ಮೊದಲಾದ ಪ್ರಶಸ್ತಿಗಳು ಬಂದಿದ್ದವು. ಅವರು ಮಹಾವಾಗ್ಮಿ. ಲಾ ಶಾಸ್ತ್ರದಲ್ಲಿ ಉದ್ದಾಮ ಪಂಡಿತರು. ಸಂಸ್ಕೃತ ವ್ಯಾಕರಣದಲ್ಲಿಯೂ ಹಾಗೆಯೇ. ಅವರು ಕೆಲವು ಕಾಲ ತತ್ತ್ವಶಾಸ್ತ್ರ ಬೋಧಕರಾಗಿದ್ದರು. ಬೇಸಗೆ ಕಾಲದಲ್ಲಿ ಬೆಂಗಳೂರಿಗೆ ಬಂದಿರುತ್ತಿದ್ದರು. ಒಂದೊಂದು ಸಾರಿ ಹಂಪೆಗೆ ಹೋಗುವರು. ಸ್ನಾನ ಪೂಜೆಗಳ ಅನಂತರ ವಿರೂಪಾಕ್ಷ ದೇವಾಲಯದ ಗೋಪುರದ ಎರಡನೆಯ ಅಂತಸ್ತಿನಲ್ಲಿ ಹೋಗಿ ಸೇರುವರು. ೧೨ ಘಂಟೆಯವರೆಗೂ ಅಲ್ಲಿ ಗ್ರಂಥವ್ಯಾಸಂಗ-ವಿಶೇಷವಾಗಿ ಉಪನಿಷತ್ತುಗಳು, ವೇದ ಭಾಗಗಳು.

ಈ ಮಹನೀಯರ ಮನೆಯೂ ಒಂದು ಧರ್ಮಸತ್ರ, ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಆಧಾರ. ಭೋಜನಕಾಲದಲ್ಲಿ ಯಾರು ಬೇಕಾದರೂ ಹೋಗಿ ಒಂದು ಎಲೆಯ ಮುಂದೆ ಕುಳಿತರೆ ಸರಿ. ನೀವು ಯಾರು? ಏನು ಮಾಡುತ್ತಿದ್ದೀರಿ? ಎಂದು ಕೇಳುವವರೇ ಇಲ್ಲ. ಮನುಷ್ಯ ಎಲೆಯ ಮುಂದೆ ಕುಳಿತರೆ ಅವನಿಗೆ ಪುಷ್ಕಳವಾಗಿ ಬಡಿಸಬೇಕಾದದ್ದು ಪರಿಚಾರಕರಿಗೆ ನಿಯತವಾಗಿದ್ದ ಕರ್ತವ್ಯ. ಹೀಗೆ ನಡೆಯಿತು ಕಡೆಯವರೆಗೂ. ಬಡ ಯಾಚಕರಿಗೆ ದಾನಮಾಡಿ ದಾನಮಾಡಿ ಹಣ ಕಳೆದುಕೊಂಡವನ ಬಡತನ ಒಂದು ದೊಡ್ಡ ಸೊಗಸೆಂದು ಕವಿ ಹೇಳಿದ್ದಾನೆ.

೧೯೩೮–೩೯ ರಲ್ಲಿ ಬೆಂಗಳೂರು ಮಹಾಜನರಲ್ಲಿ ಒಂದು ಹೊಸ ಭೀತಿ ಹರಡಿತ್ತು. ಜರ್ಮನಿ ದೇಶದ ಎಮ್‌ಡನ್ ಹಡಗು ಮದರಾಸಿನ ಬಳಿ ಕಾಣಿಸಿಕೊಂಡು ಅಪಘಾತ ಮಾಡುವ ಸೂಚನೆಯನ್ನು ತೋರಿಸಿತ್ತು. ಜರ್ಮನಿಯ ಧಾಳಿ ಯಾವಾಗ, ಎಲ್ಲಿ, ಯಾವ ರೂಪದಲ್ಲಿ ಬಂದೀತೋ ಎಂದು ಜನಕ್ಕೆ ಭಯ. ಹೊರಗಣಿಂದ ಧಾಳಿ ನಡೆದು ಜನದ ಮನಸ್ಸು ಚದರಿರುವಾಗ ಊರಿನಲ್ಲಿನ ಪುಂಡಪೋಕರಿಗಳು ಅದನ್ನೇ ಒಂದು ನೆವಮಾಡಿಕೊಂಡು ಎಲ್ಲಿ ಎದ್ದು ಬಂದಾರೋ ಎಂಬುದು ಇನ್ನೊಂದು ಭಯ. ಈ ಭಯಗಳಿಂದ ಜನ ತಲ್ಲಣಿಸುತ್ತಿದ್ದಾಗ ಅವರಿಗೆ ಒಂದು ಧೈರ್ಯವನ್ನುಂಟುಮಾಡಿ ಪ್ರತಿಭಟನ ಶಕ್ತಿಯನ್ನುಂಟುಮಾಡಿಕೊಡಬೇಕೆಂಬ ಉದ್ದೇಶದಿಂದ ಕೆಲವರು ಪ್ರಜಾ ಆತ್ಮ ರಕ್ಷಣಾ ಸಮಿತಿ ಎಂಬ ಒಂದು ಸಂಸ್ಥೆಯನ್ನು ಬಸವನಗುಡಿಯಲ್ಲಿ ಮಾಡಿಕೊಂಡೆವು. ಆ ಸಂಸ್ಥೆಯ ಮುಖ್ಯಕಾರ್ಯವೆಂದರೆ ಪ್ರತಿ ರಾತ್ರಿಯೂ ನಾಲ್ಕು ನಾಲ್ಕು ಮಂದಿ ಯುವಕರು

ಒಂದೊಂದು ಗುಂಪು ಮಾಡಿಕೊಂಡು ಬೀದಿ ಬೀದಿಯೂ ಗಸ್ತು ತಿರುಗತಕ್ಕದ್ದು ಮತ್ತು ಜನಕ್ಕೆ ಎಚ್ಚರಿಕೆ ಕೊಡತಕ್ಕದ್ದು.

ಈ ಕೆಲಸಕ್ಕಾಗಿ ಕೆಲವು ಸೌಕರ್ಯಗಳು ಬೇಕಾಯಿತು: ಗಸ್ತು ತಿರುಗುವ ಯುವಕರಿಗೆ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ದೊಣ್ಣೆ, ಒಂದೊಂದು ಗುಂಪಿಗೆ ಒಂದೊಂದು ಲಾಂದ್ರ, ಗಸ್ತು ತಿರುಗಿ ಆಯಾಸಪಟ್ಟವರಿಗೆ ರಾತ್ರಿ ಒಂದೆರಡು ಸಾರಿ ಟೀ ಅಥವಾ ಕಾಫಿ. ಈ ಅನುಕೂಲಗಳನ್ನೊದಗಿಸಲು ಒಂದಿಷ್ಟು ಹಣ ಶೇಖರಿಸಬೇಕೆಂದು ಗೊತ್ತುಮಾಡಿಕೊಂಡೆವು. ಅದರಂತೆ ಬಸವನಗುಡಿಯ ಕೆಲಮಂದಿ ಪ್ರಮುಖ ಜನರಿಗೆ ಕಾಗದ ಬರೆದು ಎರಡು ಬೇಡಿಕೆಗಳನ್ನು ಸಲ್ಲಿಸಿದೆವು:

1. ಖರ್ಚಿಗೆ ಬೇಕಾದ ಹಣಕ್ಕಾಗಿ ಚಂದಾ.
2. ಗಸ್ತುಗುಂಪಿಗೆ ಸೇರಲು ಒಂದೊಂದು ಮನೆಯಿಂದ ಒಬ್ಬೊಬ್ಬಾಳು.

ಇಂಥ ಕಾಗದವೊಂದು ಶಂಕರನಾರಾಯಣರಾಯರವರಿಗೂ ಹೋಯಿತು. ಇನ್ನು ಕೆಲಮಂದಿ ದೊಡ್ಡ ಮನುಷ್ಯರಿಗೂ ಹೋಯಿತು. ಯಾರಿಂದಲೂ ಜವಾಬು ಬರಲಿಲ್ಲ. ನಮ್ಮ ಹುಡುಗರಲ್ಲಿ ಕೆಲವರು ತಾಳ್ಮೆ ಕಳೆದುಕೊಂಡು,

“ಏನು ಸಾರ್ ನೀವು ದೊಡ್ಡ ಮನುಷ್ಯರು ದೊಡ್ಡ ಮನುಷ್ಯರು ಎಂದು ಹೇಳುತ್ತೀರಲ್ಲ-ಇದೇನೇ ಸಾರ್ ದೊಡ್ಡ ಮನುಷ್ಯತನ? ಅವರು ಬರದಿದ್ದರೆ ನಾವು ಅವರ ಮನೆ ಕಾಯಲು ಹೋಗಬೇಕಾದದ್ದೇಕೆ?”

-ಹೀಗೆಲ್ಲ ಕೂಗಾಡುತ್ತಿದ್ದರು.

# ದೇಶಕಾರ್ಯ ಶ್ರದ್ಧೆ

ನನ್ನ ಕಾಗದ ಹೋಗಿ ಒಂದು ತಿಂಗಳಾದ ಮೇಲೆ ಒಂದು ಜವಾಬು ಬಂತು. ಅದು ಶಂಕರನಾರಾಯಣರಾಯರಿಂದ. ಅದರ ವಿವರ ಹೀಗೆ:

"ನಿಮ್ಮ ಕಾಗದ ಬಂದಾಗ ನಾನು ಊರಿನಲ್ಲಿರಲಿಲ್ಲ. ನಿನ್ನೆ ಸಂಜೆ ಬಂದೆ. ಅದನ್ನು ನೋಡಿ ಈಗ ಉತ್ತರ ಬರೆಯುತ್ತಿದ್ದೇನೆ. ತಡವಾದದ್ದಕ್ಕಾಗಿ ಕ್ಷಮೆ ಬೇಡುತ್ತೇನೆ."

"ನೀವು ಮಾಡಿರುವ ಏರ್ಪಾಡು ತುಂಬ ಅವಶ್ಯವಾದದ್ದು. ತುಂಬ ಶ್ಲಾಘ್ಯವಾದದ್ದು. ಅದರ ಖರ್ಚಿಗಾಗಿ ಇದರೊಡನೆ ಒಂದು ಮೊಬಲಗನ್ನು ಚೆಕ್ ಮೂಲಕ ಕಳುಹಿಸಿದ್ದೇನೆ. ಇದನ್ನು ಸ್ವೀಕರಿಸಬೇಕು, ಮತ್ತು ಸಾಲದೆ ಹೋದಲ್ಲಿ ಪುನಃ ನನ್ನನ್ನು ಹಣಕ್ಕಾಗಿ ಕೇಳಬೇಕು. ಹಣದ ಅಭಾವದ ಕಾರಣದಿಂದ ಕೆಲಸ ನಿಲ್ಲಿಸಬಾರದು.

"ನಾನು ನನ್ನ ಮಗನಿಗೆ ಗಸ್ತು ಗುಂಪಿಗೆ ಸೇರಬೇಕೆಂದು ಹೇಳಿದ್ದೇನೆ. ನನ್ನಿಂದ ಉಪಯೋಗವಾಗುವುದಾದರೆ ನಾನೇ ಬರಲು ಸಿದ್ಧನಾಗಿದ್ದೇನೆ.

"ನನ್ನಿಂದ ಏನು ಸಹಾಯವಾಗಬಹುದೆಂದು ಯಾವಾಗ ನಿಮಗೆ ತೋರಿದರೂ ಅದನ್ನು ನನಗೆ ಅಪ್ಪಣೆ ಮಾಡಲು ನೀವು ಸ್ವತಂತ್ರರಿದ್ದೀರಿ."

ಇಂಥವರು ಶಂಕರನಾರಾಯಣರಾಯರು.

# ೨. ಬಾಲಕೃಷ್ಣರಾಯರು

ಶಂಕರನಾರಾಯಣರಾಯರ ಹೆಸರು ಜ್ಞಾಪಕಕ್ಕೆ ಬಂದಾಗ ಅವರ ಜೊತೆಯಲ್ಲಿಯೇ ಬರುವುದು ಎಸ್. ಆರ್. ಬಾಲಕೃಷ್ಣರಾಯರ ಹೆಸರು. ಶಂಕರನಾರಾಯಣರಾಯರೂ ಬಾಲಕೃಷ್ಣರಾಯರೂ ಶಿವಮೊಗ್ಗೆಯ ಯಮಳರೆಂದು ಹೇಳುವುದು ವಾಡಿಕೆಯಾಗಿತ್ತು. ಅಷ್ಟುಮಟ್ಟಿನದು ಅವರ ಅನ್ಯೋನ್ಯ.

ಬಾಲಕೃಷ್ಣರಾಯರು ವಕೀಲರು. ಮತ್ತು ಆ ವೃತ್ತಿಯಲ್ಲಿ ಅಗ್ರಪಂಕ್ತಿಯಲ್ಲಿದ್ದವರು. ವಯಸ್ಸಿನಲ್ಲಿಯೂ ಅವರು ಶಂಕರನಾರಾಯಣರಾಯರಿಗೆ ಸರಿಸಮಾನರೆಂದು ತೋರುತ್ತದೆ. ಅನೇಕ ವಿಷಯಗಳಲ್ಲಿ ಅವರಿಬ್ಬರೂ ಸಮಾನಧರ್ಮಿಗಳು. ಸರಕಾರವನ್ನು ನಿರ್ದಾಕ್ಷಿಣ್ಯವಾಗಿ ಪರೀಕ್ಷೆಮಾಡುವುದು, ಪ್ರಜಾತತ್ತ್ವವನ್ನು ಎತ್ತಿಹಿಡಿಯುವುದು, ತೆರಿಗೆ ಸುಂಕಗಳ ಭಾರವನ್ನು ಇಳಿಸುವುದು-ಈ ಉದ್ದೇಶಗಳಲ್ಲಿ ಇಬ್ಬರದೂ ಸಮಾನವಾದ ಉತ್ಸಾಹ.

೧೯೦೮ರ ಪತ್ರಿಕಾ ವಾಗ್ಬಂಧನದ ಕಾನೂನನ್ನು ಖಂಡಿಸುವುದರಲ್ಲಿ ಬಾಲಕೃಷ್ಣರಾಯರದು ಮೇಲ್ಕೈ. ನನಗೆ ಅವರ ಪರಿಚಯವಾದದ್ದು ಆ ಸಂದರ್ಭದಲ್ಲಿಯೇ.

ಬಾಲಕೃಷ್ಣರಾಯರೂ ಶಂಕರನಾರಾಯಣರಾಯರೂ ಎಷ್ಟೋ ವಿಷಯಗಳಲ್ಲಿ ಅವಳಿ ಜವಳಿಯಂತೆ ಇದ್ದವರು. ಆದರೆ ಅವರಲ್ಲಿ ವೈಲಕ್ಷಣ್ಯಗಳೂ ಉಂಟು. ಬಾಲಕೃಷ್ಣರಾಯರು ಮಾತಿನಲ್ಲಿಯೂ, ನಡವಳಿಕೆಯಲ್ಲಿಯೂ ಕೊಂಚ ಕಟ್ಟುನಿಟ್ಟಾದವರು. ಅವರೊಡನೆ ಸಲಿಗೆ ತೆಗೆದುಕೊಳ್ಳಲಾಗುತ್ತಿರಲಿಲ್ಲ. ಸಾರ್ವಜನಿಕ ಭಾಷಣದಲ್ಲಿಯೂ ಹಾಗೆಯೇ. ಬಾಲಕೃಷ್ಣರಾಯರಿಗೆ ವಾಸ್ತವಿಕಾಂಶಗಳ (Facts) ಆಧಾರವಿರಬೇಕು. ಮತ್ತು ವಾದವು ಕಾರ್ಯ ಕಾರಣಸರಣಿಯನ್ನು ತಪ್ಪದೆ ಹೊಂದಿಕೊಂಡಿರಬೇಕು. “ಒಂದು ಮಾತು ಹೆಚ್ಚುಕಡಮೆ ಆದರೆ ಪರವಾಯಿಲ್ಲ” ಎಂಬ ಬೋಲಾಭಾಯಿ ಧೋರಣೆಯಿಲ್ಲ. ಮತ್ತು ಭಾಷಣದಲ್ಲಿ ಅಲಂಕಾರವಾಗಲಿ ಅತ್ಯುಕ್ತಿಯಾಗಲಿ ಇರುತ್ತಿರಲಿಲ್ಲ. ಅವರು ಲೆಕ್ಕಾಚಾರಸ್ಥರು.

೧೯೧೩–೧೪ ಸುಮಾರಿನಲ್ಲಿ-ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ-ಸಂಸ್ಥಾನದ ಆಯವ್ಯಯಗಳನ್ನು ಪರೀಕ್ಷೆ ಮಾಡಿ ಎಲ್ಲಿ ದುಂದಾಗುತ್ತಿದೆ, ಎಲ್ಲಿ ವೆಚ್ಚವನ್ನು

ತಗ್ಗಿಸಬಹುದು-ಎಂದು ಶೋಧಿಸಿ ಶಿಫಾರಸುಗಳನ್ನು ಮಾಡುವುದಕ್ಕಾಗಿ ಒಂದು ಸಮಿತಿ ಏರ್ಪಾಡಾಯಿತು. ಆ ಸಮಿತಿಗೆ ಬಾಲಕೃಷ್ಣರಾಯರು ಸದಸ್ಯರಾಗಿದ್ದರು. ಆಗ ಅವರು ಸುಮಾರು ಮೂರು ನಾಲ್ಕು ತಿಂಗಳ ಕಾಲ ಸಮಿತಿಯ ಕೆಲಸಕ್ಕಾಗಿ ಬೆಂಗಳೂರಿನಲ್ಲಿ ತಂಗಬೇಕಾಯಿತು. ಅವರು ಶಂಕರಪುರದ ಉತ್ತರಾದಿ ಮಠದ ಒಂದು ಮನೆಯಲ್ಲಿ ವಾಸವಿದ್ದರು. ನಾನು ವಾಸವಿದ್ದ ಮನೆಗೂ ಅಲ್ಲಿಗೂ ಸಮೀಪ-ಹತ್ತು ಹದಿನೈದು ಗಜ. ಇದು ನಾವಿಬ್ಬರೂ ಪದೇ ಪದೇ ಕಲೆತು ಪ್ರಶ್ನೆಗಳನ್ನು ಚರ್ಚಿಸಲು ಅನುಕೂಲವಾಯಿತು. ಆಗ ನಾನು ಕಂಡುಕೊಂಡೆ, ಅವರ ವ್ಯಾಸಂಗ ವಿಧಾನವನ್ನು. ಅದು ಬಹುಶಃ ಗೋಖಲೆಯವರು ಒಪ್ಪಿ ಮೆಚ್ಚಿಕೊಳ್ಳುತ್ತಿದ್ದ ವಿಧಾನ. ವಿಷಯದ ಒಂದೊಂದು ಅಂಶವನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ತೆಗೆದುಕೊಂಡು ತೂಕಮಾಡಿ ಅದರ ಪೂರ್ವಾಪರ ಸಂದರ್ಭಗಳನ್ನು ವಿಮರ್ಶೆಮಾಡಿ, ಹೀಗೆ ಒಂದು ವಾಸ್ತವಿಕ ಬುದ್ಧಿಯಿಂದ ಆ ಸಂಗತಿಗೆ ಬೆಲೆ ಕಟ್ಟತಕ್ಕದ್ದು. ಈ ಬಗೆಯ ವ್ಯಾಸಂಗ ಕಷ್ಟಸಾಧ್ಯವಾದದ್ದು. ಬೇಸರವನ್ನುಂಟುಮಾಡತಕ್ಕದ್ದು. ಆದರೆ ಅನಿವಾರ್ಯವಾದದ್ದು. ಸಾರ್ವಜನಿಕ ಹಿತವನ್ನು ಪ್ರವರ್ತನ ಮಾಡಬೇಕೆಂಬ ಮನಸ್ಸುಳ್ಳವನು ಅವನು ಪ್ರಾಮಾಣಿಕನಾಗಿದ್ದ ಪಕ್ಷದಲ್ಲಿ ತನ್ನ ಮುಂದಿರುವ ಪ್ರಶ್ನೆಯ ಅಂಶಗಳನ್ನು ಬಿಡಿಸಿ ಬಿಡಿಸಿ ತೂಕಮಾಡಿ ಒಂದೊಂದಕ್ಕೂ ಅದಕ್ಕೆ ಸಲ್ಲುವ ಬೆಲೆಯನ್ನು ಸಲ್ಲಿಸಬೇಕಾದದ್ದು ಅವನ ಮೊಟ್ಟಮೊದಲನೆಯ ಕರ್ತವ್ಯ. ಕೈತೂಕ, ಬಾಯಿ ಬಣ್ಣ-ಎಂಬ ಸುಲಭದ ನೀತಿ ಅಲ್ಲಿ ತಕ್ಕದ್ದಲ್ಲ. ಇದನ್ನು ಬಾಲಕೃಷ್ಣರಾಯರು ಚೆನ್ನಾಗಿ ಗ್ರಹಿಸಿದ್ದರು. ಆದದ್ದರಿಂದ ದುಡುಕಿನ ಮಾತು ಅವರ ಬಾಯಿಂದ ಬಾರದು. ಅವರ ಮಾತಿನಲ್ಲಿ ಖಾರಕ್ಕಿಂತ, ಉದ್ವೇಗಕ್ಕಿಂತ ಕಾರಣಸಾಮಂಜಸ್ಯವೂ ಒಡಂಬಡಿಸುವ ಮನೋಭಾವವೂ ಹೆಚ್ಚಾಗಿ ತೋರಿಬರುತ್ತಿತ್ತು.

ಬಾಲಕೃಷ್ಣರಾಯರು ಮತಶ್ರದ್ಧೆಯಿದ್ದವರು. ಆಗಾಗ ಹಂಪೆಗೆ ಹೋಗಿ ನವವೃಂದಾವನ ಸನ್ನಿಧಿಯಲ್ಲಿ ಸೇವೆಮಾಡಿ ಬರುವರು.

ಅವರು ಸದಾಚಾರ ಸಂಪನ್ನರು. ನಡೆನುಡಿಗಳಲ್ಲಿ ಸ್ವಸಮಾಜಸಮ್ಮತರಾಗಿದ್ದವರು.

ನಮ್ಮ ಸಾರ್ವಜನಿಕರಲ್ಲಿ ಬಾಲಕೃಷ್ಣರಾಯರಂಥವರು ಅಧಿಕ ಸಂಖ್ಯೆಯವರಾಗಿದ್ದಾಗ ಪ್ರಜಾರಾಜ್ಯ ಪದ್ಧತಿಗೆ ನಾನು ಮನಸಾರೆ ತಲೆಬಾಗಬಹುದು.

# ೩. ವಾಸುದೇವರಾಯರು

ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್ ವಾಸುದೇವರಾಯರು ಅವರ ಅಣ್ಣಂದಿರು ಶ್ರೀನಿವಾಸರಾಯರಂತೆಯೇ ಸುಮಾರು ಇಪ್ಪತ್ತೈದು ವರ್ಷಕಾಲ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಅವರಿಬ್ಬರೂ ವೆಂಕಟಕೃಷ್ಣಯ್ಯನವರ ಸಮೀಪದ ಮಿತ್ರಗೋಷ್ಠಿಗೆ ಸೇರಿದವರು. ಸಭೆಯಲ್ಲಿ ಇಬ್ಬರೂ ಪಕ್ಕ ಪಕ್ಕದಲ್ಲಿ ಕೂಡುತ್ತಿದ್ದರು. ಸಭಿಕರಿಗೆ ಸಾಮಾನ್ಯವಾಗಿ ಅವರಿಬ್ಬರಲ್ಲಿಯೂ ಒಂದೇ ತೆರನಾದ ಗೌರವ. ಇಬ್ಬರೂ ವಿಶ್ವಾಸಾರ್ಹರು.

ಆದರೆ ಸಭಾಕಾಲದಲ್ಲಿ ವಿಷಯಗಳು ಚರ್ಚೆಗೆ ಬಂದಾಗ ಇಬ್ಬರ ದಾರಿಗಳೂ ಬೇರೆ ಬೇರೆ, ಶ್ರೀನಿವಾಸರಾಯರು ಭಾಷಣ ಮುಗಿಸಿ ಕೂಡುತ್ತಿದ್ದಂತೆಯೇ ಅವರ ಪಕ್ಕದ ಕುರ್ಚಿಯಿಂದ ವಾಸುದೇವರಾಯರು ಎದ್ದು ನಿಂತು,

“ಸ್ವಾಮಿ, ಹಿಂದಿನ ಭಾಷಣಕಾರರು...” ಎಂದು, ಅಥವಾ

“ಶ್ರೀನಿವಾಸರಾಯರು ಅಪ್ಪಣೆಕೊಡಿಸಿದ್ದನ್ನು ಒಪ್ಪುವುದು ಸಾಧ್ಯವಿಲ್ಲ” ಎಂದು ತಕರಾರು ಮಾಡುವರು. ಸಭಿಕರು ನಗುವರು. ವೆಂಕಟಕೃಷ್ಣಯ್ಯನವರು ನಗುವರು. ಶ್ರೀನಿವಾಸರಾಯರು ಮುಖ ಕೊಂಚ ಕಹಿಮಾಡಿಕೊಂಡು,

“ಇವರು ಏನೋ ವಾದ ಹೇಳುತ್ತಾರಲ್ಲಪ್ಪ!” ಎನ್ನುವರು. ಇಂಥಾದ್ದು ಸಾರ್ವಜನಿಕ ವಿಚಾರಗಳಲ್ಲಿ ವಾಸುದೇವರಾಯರಿಗಿದ್ದ ವಿಚಾರ ಸ್ವಾತಂತ್ರ್ಯ.

# ಪೌರಸಭಾಧ್ಯಕ್ಷ

ವಾಸುದೇವರಾಯರನ್ನು ಸರಕಾರದವರು ಚಿಕ್ಕಮಗಳೂರು ಮ್ಯುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರಾಗಿರುವಂತೆ ನಿಯಮಿಸಿದರು. ಸರಕಾರಿ ಚಾಕರಿಯಲ್ಲಿಲ್ಲದ ಖಾಸಗಿ ಸಾರ್ವಜನಿಕರನ್ನು ಮುಂದಕ್ಕೆ ತರಬೇಕೆಂದು ವಿಶ್ವೇಶ್ವರಯ್ಯನವರು ಮಾಡುತ್ತಿದ್ದ ಏರ್ಪಾಟುಗಳಲ್ಲಿ ಇದೂ ಒಂದು.

ವಾಸುದೇವರಾಯರು ಅಧಿಕಾರವನ್ನು ವಹಿಸಿಕೊಂಡ ಮೇಲೆ ಆಡಳಿತವನ್ನು ಬಿಗಿ ಮಾಡಹೊರಟರು. ಯಾವ ಯಾವ ಮ್ಯುನಿಸಿಪಲ್ ಕೌನ್ಸಿಲರ್ ಕಂದಾಯ ನಿಲ್ಲಿಸಿಕೊಂಡಿದ್ದಾರೆ, ಯಾವ ಯಾವ ಪ್ರಬಲರು ಜಮೀನು ಮಾಡಿಕೊಂಡಿದ್ದಾರೆ, ಯಾರು ಯಾರು ಸಾರ್ವಜನಿಕ ವಸ್ತುಗಳನ್ನು ದುರುಪಯೋಗ ಮಾಡುತ್ತಿದ್ದಾರೆ-ಇದನ್ನೆಲ್ಲ ತನಿಖೆ ಮಾಡಿ ಕ್ರಮ ನಡಸಹೊರಟರು. ಇದು ಆರೆಂಟು ತಿಂಗಳು ನಡೆದಮೇಲೆ ಅಲ್ಲಲ್ಲಿ ಗುಸುಗುಸುಗಳೂ ಹಾಹಾಕಾರಗಳೂ ಹೊರಟು ವಾಸುದೇವರಾಯರಿಗೆ ಜನರಲ್ಲಿ ಬೇಸರ ಹುಟ್ಟುವಂತೆ ಮಾಡಿದವು.

ಜವಾಬ್ದಾರಿ ಹುದ್ದೆಯಲ್ಲಿರುವವನು ಪ್ರಾಮಾಣಿಕರಾಗಿಯೂ ನಿರ್ದಾಕ್ಷಿಣ್ಯವಾಗಿಯೂ ನಡೆದರೆ ಅವನಿಗೆ ಊರ ಜನ ಕೊಡುವ ಪ್ರತಿಫಲ ಎಂಥಾದ್ದೆಂಬುದಕ್ಕೆ ವಾಸುದೇವರಾಯರ ಚರಿತ್ರೆ ಒಂದು ನಿದರ್ಶನ.

# ೮ ಅಬ್ಬಾಸ್‌ಖಾನ್ ಸಾಹೇಬರು

ಮೈಸೂರು ರಾಜ್ಯದ ಪ್ರಜಾಪ್ರಮುಖರಲ್ಲಿ ಭಾಷಣಸಾಮರ್ಥ್ಯದ ದೃಷ್ಟಿಯಿಂದಲೂ, ಕಾರ್ಯಪಟುತ್ವದ ದೃಷ್ಟಿಯಿಂದಲೂ ಅಗ್ರಪಂಕ್ತಿಗೆ ಸೇರತಕ್ಕವರು ಮಹಮದ್ ಅಬ್ಬಾಸ್‌ಖಾನ್ ಸಾಹೇಬರೆಂದು ನಾನು ಮನಸಾರ ಹೇಳುತ್ತೇನೆ.

ರಾಜಕೀಯ ವಿಷಯಗಳಲ್ಲಿ ನನ್ನ ದಾರಿ ಅವರ ದಾರಿಯಿಂದ ಬೇರೆಯಾದದ್ದು. ಅವರ ಕಾರ್ಯನೀತಿಗಳು ಕೂಡ ನನಗೆ ಒಪ್ಪಿಗೆಯಾದವಲ್ಲ. ಆದರೆ ಅಭಿಪ್ರಾಯದ ವಿಷಯವೂ ಸಾಧನೆಯ ವಿಷಯವೂ ಬೇರೆ; ಸಾಮರ್ಥ್ಯದ ವಿಷಯ ಬೇರೆ. ನಾನು ಈಗ ಒತ್ತಿ ಹೇಳುವುದು ಅಬ್ಬಾಸ್‌ಖಾನ್‌ರವರ ಶಕ್ತಿಯನ್ನು ಕುರಿತು. ಅವರ ಚಾಕಚಾಕ್ಯ, ಅವರ ಮುನ್ನುಗ್ಗುವ ಪ್ರವೃತ್ತಿ, ಅವರ ಹಿಂದುಮುಂದು ಆಲೋಚಿಸುವ ಜಾಣತನ-ಈ ಗುಣಗಳು ಸಾರ್ವಜನಿಕದಲ್ಲಿ ಕೆಲಸಕ್ಕೆ ಬಾರವೆಂದು ಯಾರೂ ಹೇಳರು. ಪ್ರತಿಯಾಗಿ, ಕಳೆದ ಇಪ್ಪತ್ತು ವರ್ಷಗಳಲ್ಲಿ ಕಾಣಬಾರದೆ ಹೋಗಿರುವ ಗುಣಗಳು ಅವು.

## ಮಹಮಡನ್ ಅಸೋಸಿಯೇಷನ್

ಅಬ್ಬಾಸ್‌ಖಾನ್ ಸಾಹೇಬರನ್ನು ಅವರು ಪ್ರಸಿದ್ಧಿಗೆ ಬರುವ ದಿನಕ್ಕೆ ಹಿಂದಿನಿಂದಲೂ ನಾನು ಬಲ್ಲೆ. ೧೯೧೦-೧೧ರಲ್ಲಿ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯಲ್ಲಿ ಸೆಂಟ್ರಲ್ ಮಹಮಡನ್ ಅಸೋಸಿಯೇಷನ್ ಒಂದು ಬಾಡಿಗೆ ಮನೆಯಲ್ಲಿತ್ತು. ಅಲ್ಲಿದ್ದ ಒಂದು ವಾಚನಾಲಯಕ್ಕೆ (Reading Room) ಎಲ್ಲ ಜನರೂ ಹೋಗಬಹುದಾಗಿತ್ತು. ಆಗ ಆ ಸಂಸ್ಥೆಯ ಮುಖ್ಯ ಚಾಲಕರು ಅಬ್ಬಾಸ್‌ಖಾನ್ ಸಾಹೇಬರು. ಆ ಸಂಸ್ಥೆಯನ್ನು ಕಟ್ಟುವುದಕ್ಕಾಗಿ ದ್ರವ್ಯಸಂಗ್ರಹಕಾರ್ಯ ನಡೆಯುತ್ತಿತ್ತು. ಈ ಕೆಲಸಕ್ಕಾಗಿ ಅಬ್ಬಾಸ್‌ಖಾನ್ ಸಾಹೇಬರು ಸಂಸ್ಥಾನದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಹಳ್ಳಿಹಳ್ಳಿಯನ್ನೂ ಒಂದು ಜಾಗ ಬಿಡದೆ ಸುತ್ತಿದರು. ದ್ರವ್ಯಶೇಖರವಾದದ್ದರ ಜೊತೆಗೆ ಜನದ ವಿದ್ಯಮಾನಗಳ ಪ್ರತ್ಯಕ್ಷ ಅನುಭವವೂ ಆಯಿತು. ಇದು ಅವರಿಗಿದ್ದ ದೊಡ್ಡ ಬಂಡವಾಳ.

# ಕಲಾಮಿಯವರು

ಆ ಕಾಲದಲ್ಲಿ ಅಬ್ಬಾಸ್‌ಖಾನ್‌ರವರಿಗೆ ಒತ್ತಾಸೆಯಾಗಿದ್ದವರು ನವಾಬ್ ಗುಲಾಂ ಅಹಮದ್ ಕಲಾಮಿಯವರು. ಇವರು ವಾಣಿಯಂಬಾಡಿ ಕಡೆಯವರು, ಮತ್ತು ಮದರಾಸಿನ ಸಾರ್ವಜನಿಕದಲ್ಲಿ ಹೆಸರಾಗಿದ್ದವರು. ಶ್ರೀಮಂತ ಕುಲಕ್ಕೆ ಸೇರಿದ್ದವರು. ಅನುಕೂಲಸ್ಥರು. ತುಂಬ ದೊಡ್ಡ ಮನುಷ್ಯರು. ನಡೆನುಡಿಗಳಲ್ಲಿ ಘನತೆ ಗಂಭೀರಗಳುಳ್ಳವರು.

ದ್ರವ್ಯಸಂಗ್ರಹವಾದ ಬಳಿಕ ಕಟ್ಟಡದ ಕೆಲಸ ಪ್ರಾರಂಭ. ಈಗ ಇರುವ ಸೆಂಟ್ರಲ್ ಮಹಮಡನ್ ಅಸೋಸಿಯೇಷನ್ ಕಟ್ಟಡವು ಜನಾಬ್ ಕಲಾಮಿ ಸಾಹೇಬರು ಖುದ್ದಾಗಿ ನಿಂತು ಕಟ್ಟಿಸಿದ್ದು. ಅವರು ಬಿಸಿಲಿನಲ್ಲಿ ಛತ್ರಿ ಹಿಡಿದು ಕಲ್ಲುಕಲ್ಲನ್ನೂ ಇಟ್ಟಿಗೆ ಇಟ್ಟಿಗೆಯನ್ನೂ ಜೋಡಣೆ ಮಾಡಿಸಿದ್ದನ್ನು ನಾನು ದಿನದಿನವೂ ನೋಡಿದ್ದೇನೆ. ಇಂಥ ದೊಡ್ಡ ಕೆಲಸಕ್ಕೆ ಕೈಹಚ್ಚಿ ಕೃತಕೃತ್ಯರಾದವರು ಕಲಾಮಿ ಸಾಹೇಬರು ಮತ್ತು ಅಬ್ಬಾಸ್‌ಖಾನ್ ಸಾಹೇಬರು.

ಅಬ್ಬಾಸ್‌ಖಾನ್ ಸಾಹೇಬರು ಮೊದಮೊದಲು ಫಾರೆಸ್ಟ್ ಇಲಾಖೆಯಲ್ಲಿಯೋ, ಎಕ್ಸೈಸ್ ಇಲಾಖೆಯಲ್ಲಿಯೋ ಚಾಕರಿ ಮಾಡಿದ್ದರಂತೆ. ಆಮೇಲೆ ಆ ಚಾಕರಿಯನ್ನು ಬಿಟ್ಟು ಚೌಬೀನೆ ವ್ಯಾಪಾರಕ್ಕೆ ಮೊದಲು ಮಾಡಿದರು. ವ್ಯಾಪಾರ ಚೆನ್ನಾಗಿ ನಡೆಯಿತು. ಆ ಸುಮಾರಿನಲ್ಲಿಯೇ ಅವರು ಆರ್ಕಾಟ್ ಶ್ರೀನಿವಾಸಚಾರ್ಲು ರಸ್ತೆಗೆ ಬಂದು ಅವರಿದ್ದ ಮನೆಯನ್ನು ಕೊಂಡುಕೊಂಡರು. ಕಲಾಮಿಯವರಿಗೂ ಅಬ್ಬಾಸ್‌ಖಾನರಿಗೂ ಸ್ನೇಹವಾದದ್ದು ಚೌಬೀನೆ ವ್ಯಾಪಾರದ ಮೂಲಕವೇ ಎಂದು ನಾನು ಕೇಳಿದ್ದೇನೆ.

ಅಬ್ಬಾಸ್‌ಖಾನ್ ಸಾಹೇಬರಿಗೆ ನನ್ನಲ್ಲಿ ಅಭಿಮಾನವಿದ್ದದ್ದಕ್ಕೆ ಕಾರಣ ನಾನು ಮುಳುಬಾಗಿಲಿನವನು ಎಂಬುದು. ಅವರ ಮಾವ ಪಾಥಾಮಿಯಾ ಸಾಹೇಬರು ಮುಳುಬಾಗಲಿನಲ್ಲಿ ಗಣ್ಯರಾಗಿದ್ದವರು. ಅಬ್ಬಾಸ್‌ಖಾನ್ ಸಾಹೇಬರೂ ನಾನೂ ಕಲೆತಾಗ ಪಾಥಾಮಿಯ ಸಾಹೇಬರ ಯೋಗಕ್ಷೇಮವನ್ನು ಕುರಿತು ಮಾತುಕಥೆಯಾಡುತ್ತಿದ್ದದ್ದುಂಟು. ಹಾಗೆ ಬೆಳೆದದ್ದು ನಮ್ಮ ಬಳಕೆ.

# ಗಣಪತಿ ಗಲಭೆ

ಅಬ್ಬಾಸ್‌ಖಾನ್ ಸಾಹೇಬರು ಮೈಸೂರಿನ ಚರಿತ್ರೆಯಲ್ಲಿ ಹೆಸರು ಪಡೆದದ್ದು ಮುಖ್ಯವಾಗಿ ಗಣಪತಿ ಗಲಭೆಗಳ ಕಾರಣದಿಂದ. ಆ ಗಲಭೆಗಳಿಗೆ ಅವರು ಸ್ವಂತವಾಗಿ ವೈಯಕ್ತಿಕವಾಗಿ ಎಷ್ಟು ಮಾತ್ರ ಕಾರಣರಾಗಿದ್ದರೆಂಬುದನ್ನು ನಿಶ್ಚಯಿಸಿ ಹೇಳುವುದು ನನಗೆ ಅಸಾಧ್ಯ. ಅದು ೧೯೨೮ರ ಸುಮಾರಿನಲ್ಲಿ ನಡೆದ ಸಂಗತಿ. ಅದು ನಡೆದಾಗ ನಾನು ಬೆಂಗಳೂರಿನಲ್ಲಿರಲಿಲ್ಲ. ಆ ದಿನ ಬಾಗಲಕೋಟೆಯಲ್ಲಿ ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷಕಾರ್ಯಕ್ಕಾಗಿ ಅಲ್ಲಿಗೆ ಹೋಗಿದ್ದೆ. ಆ ದಿನ ಸಂಜೆ ಅಥವಾ ಮಾರನೆಯ ದಿನ ಸಂಜೆ ನಾನು ಬಿಡಾರ ಮಾಡಿದ್ದ ಮಂಗಳವೇಡೆ ಶ್ರೀನಿವಾಸರಾಯರ ಮನೆಗೆ ಬಂದಾಗ ಅಲ್ಲಿಗೆ 'ಟೈಂಸ್ ಆಫ್ ಇಂಡಿಯ' ದಿನ ಪತ್ರಿಕೆ ಬಂದಿತ್ತು. ಅದರಿಂದಲೇ ನನಗೆ ಮೊದಲು ತಿಳಿದದ್ದು ಬೆಂಗಳೂರಿನ ಗಲಾಟೆ, ಗೋಳಿಬಾರುಗಳ ಸಮಾಚಾರ. ಮೂರು ನಾಲ್ಕು ದಿನಕಳೆದು ನಾನು ಬೆಂಗಳೂರಿಗೆ ಹಿಂತಿರುಗಿ ಬಂದಾಗ ಇಲ್ಲಿಯ ಸ್ಥಿತಿ ತೀರಾ ವಿಷಮಿಸಿತ್ತು. ಎಲ್ಲಿ ನೋಡಿದರೂ ಅದೇ ಆವೇಶ.

# ಆಗ್ರಹ ಕಾರಣ

ಅದರ ಪೂರ್ವಕಥೆ ಹೀಗೆ. ಅಬ್ಬಾಸ್‌ಖಾನ್ ಸಾಹೇಬರ ಮನೆಯ ಎದುರು ಕಟ್ಟಡ ಒಂದು ಮ್ಯುನಿಸಿಪಲ್ ಕೋಠಿಯದು. ಆ ಕಟ್ಟಡದಲ್ಲಿ ಕೆಲವು ದಿನ ಆಕ್ಟ್ರಾಯ್ ಕಛೇರಿಯಿದ್ದದ್ದನ್ನು ನಾನು ನೋಡಿದ್ದೇನೆ. ಅದರ ತರುವಾಯ ಎಸ್. ಆರ್. ನಂಜುಂಡಯ್ಯನವರ ಸುಲ್ತಾನ್ ಪೇಟೆ ಸ್ಕೂಲಿನ ಒಂದು ಶಾಖೆ ನಡೆಯುತ್ತಿತ್ತು. ಆ ಶಾಲೆಯ ವಿದ್ಯಾರ್ಥಿಗಳು ಆ ಆವರಣದಲ್ಲೆಲ್ಲಿಯೋ ಇದ್ದ ಒಂದು ಗಣಪತಿ ಶಿಲಾಮೂರ್ತಿಯನ್ನು ಅಬ್ಬಾಸ್‌ಖಾನ್ ಸಾಹೇಬರ ಮನೆಯ ಹೆಬ್ಬಾಗಿಲಿಗೆ ಎದುರಾಗಿ ಸ್ಥಾಪನೆ ಮಾಡಿ ಪೂಜೆ ನಡೆಸುತ್ತಿದ್ದರಂತೆ. ಆ ದೇವಮೂರ್ತಿಯನ್ನು ವಿದ್ಯಾ ಇಲಾಖೆಯ ಅಧಿಕಾರಿಗಳು ಆ ಜಾಗದಿಂದ ಬೇರೆ ಕಡೆಗೆ ಸಾಗಿಸಿದರಂತೆ. ಇದು ವಿದ್ಯಾರ್ಥಿಗಳ ಮತ್ತು ಅವರ ನಾಯಕರ ಆಗ್ರಹಕ್ಕೆ ಕಾರಣ.

ಹೀಗೆ ಮೊದಲಾದ ರಂಪ ಗೊಂದಲವಾಗಿ ವಿಪರೀತವಾಯಿತು. ‘ವೀರಕೇಸರಿ’, ‘ತಾಯಿನಾಡು’ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟನೆಗಳು ಒಂದಾದ ಮೇಲೊಂದು ಬರತೊಡಗಿದವು.

ಆ ಜಗಳಗಳಲ್ಲಿ ಸಾವುಗಳೂ ಆಯಿತೆಂದು ಸುದ್ದಿ ಹಬ್ಬಿತು. ಕಡೆಗೆ ಮಿರ್ಜಾ ಸರಕಾರವು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕಾಯಿತು. ವಿಶ್ವೇಶ್ವರಯ್ಯನವರು ಆ ಸಮಿತಿಯ ಅಧ್ಯಕ್ಷರಾಗಿದ್ದರು. ಸಾವು ನಡೆದದ್ದು ರುಜುವಾತಿಗೆ ಬರಲಿಲ್ಲ. ಗದ್ದಲ ನಡೆದದ್ದಕ್ಕೆ ರುಜುವಾತು ಬೇಕಾಗಿರಲಿಲ್ಲ. ಪೊಲೀಸ್ ಮೊದಲಾದ ಇಲಾಖೆಗಳ ಅಧಿಕಾರಿಗಳು ಕೈ ಸಡಿಲಬಿಟ್ಟಿದ್ದರೆಂದು ಆ ಸಮಿತಿಯೂ ಗೊತ್ತು ಮಾಡಿ, ಜವಾಬ್ದಾರಿ ಸರಕಾರದ ಪದ್ಧತಿಯಿಂದ ಅಂಥ ಸಡಿಲದ ಅಪಾಯ ನಿವಾರಣೆಯಾದೀತೆಂದು ಸಲಹೆ ಮಾಡಿದರು. ಮೈಸೂರಿನ ಚರಿತ್ರೆಯಲ್ಲಿ ಅದೊಂದು ದೊಡ್ಡ ಕೋಲಾಹಲ. ಆ ಕೋಲಾಹಲಕ್ಕೆ ಕೇಂದ್ರಸ್ಥಾನದಲ್ಲಿದ್ದವರು ಅಬ್ಬಾಸ್‌ಖಾನ್ ಸಾಹೇಬರು.

ಅದು ಯಾರಿಗೂ ಸಂತೋಷಕರವಾದ ಪ್ರಕರಣವಲ್ಲ.

# ಪ್ರಜಾಪಕ್ಷ

ಅಬ್ಬಾಸ್‌ಖಾನ್ ಸಾಹೇಬರು ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಶಾಸನ ಸಭೆಯಲ್ಲಿಯೂ ಕೆಲಸ ಮಾಡಿ ಯಶಸ್ವಿಗಳಾದರು. ಅವರು ಆಗಿನ ಪ್ರಜಾಪಕ್ಷ ಅಥವಾ ಪ್ರಜಾಮಿತ್ರ ಮಂಡಲಿಯ ನಾಯಕರಾಗಿದ್ದರು. ಆ ಪಕ್ಷದ ಧೋರಣೆಯನ್ನು ಧೈರ್ಯದಿಂದಲೂ ವಾಗ್ಝರಿಯಿಂದಲೂ ಪ್ರತಿಪಾದಿಸುತ್ತಿದ್ದರು. ಆ ಪಕ್ಷ ನನ್ನದಲ್ಲ. ನಾನು ಆ ಪಕ್ಷದಿಂದ ದೂರವಾಗಿದ್ದವನು. ಅದಕ್ಕೆ ಪ್ರತಿಕಕ್ಷಿಯಾಗಿ ಒಂದು ಪಕ್ಷವನ್ನು ಕಟ್ಟಬೇಕೆಂದು ನಾನು ವಾದಿಸಿದವನಲ್ಲ. ಆಗ ಬ್ರಾಹ್ಮಣನಾದವನು ಆಡಿದ ಮಾತಿಗೆ ಬಹು ಸಂಖ್ಯಾಕರು ಅಪಾರ್ಥ ಮಾಡಿಯಾರೆಂಬ ಭೀತಿ ಹೆಚ್ಚಾಗಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ವೆಂಕಟಕೃಷ್ಣಯ್ಯನವರೇ ಮೊದಲಾದ ಹಳಬರು ಅನೇಕರಿದ್ದರೂ ಅವರ ಮಾತಿಗೆ ಬೆಲೆ ಬರುವುದು ಅಸಾಧ್ಯವಾಗಿತ್ತು.

ಪ್ರಜಾಪಕ್ಷದ ಅಥವಾ ಮಂಡಲಿಯ ವಾದಗಳಲ್ಲಿ ಒಂದು ವೀರ್ಯವೂ ಜೋರೂ ಇದ್ದದ್ದು ಅಬ್ಬಾಸ್‌ಖಾನ್‌ರವರ ವಾಕ್ಪ್ರಭಾವದಿಂದ. ಆ ಪಕ್ಷದ ಅಂತರಂಗ ಸಭೆಗಳಲ್ಲಿ ಅವರುಗಳ ನೀತಿಯನ್ನು ಸರಿಪಡಿಸಿ ಅವರ ಕಾರ್ಯ ವಿಧಾನವನ್ನು ತೀರ್ಮಾನಿಸುತ್ತಿದ್ದವರು ಬಹುಮಟ್ಟಿಗೆ ಅಬ್ಬಾಸ್‌ಖಾನ್‌ರವರು.

# ವಾಕ್ಪ್ರಭಾವ

ಅಬ್ಬಾಸ್‌ಖಾನ್‌ರವರ ಧೈರ್ಯ ಸಾಹಸಗಳಿಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಯಾವುದೋ ಚಾಕರಿಗೆ ಸಂಬಂಧಪಟ್ಟ ಪ್ರಶ್ನೆ ಎದ್ದಿತು. ಆ ಪ್ರಶ್ನೆಗೆ ಸಂಬಂಧಪಟ್ಟಿದ್ದವರು ರಂಗನಾಥರಾವ್ ಸಾಹೇಬ್ ಎಂಬುವರು. ಬಹುಶಃ ಅದು ಇಂಡಸ್ಟ್ರೀಸ್ ಇಲಾಖೆಯ ಯಾವುದೋ ಪ್ರಶ್ನೆಯೆಂದು ಜ್ಞಾಪಕ. ನಾಲ್ಕೈದು ಮಂದಿ ಸದಸ್ಯರು ಮಾತನಾಡಿದ್ದಾದ ಬಳಿಕ ಅಬ್ಬಾಸ್‌ಖಾನ್‌ರವರು ಎದ್ದರು.

“ಸ್ವಾಮಿ, ಈ ಮಹಾ ಕೆಲಸ ಮಾಡಿದ್ದಾರಲ್ಲ ಈ ಧೀರರು, ಈ ಶೂರರು ಈ ಮಹಾವೀರರು.”

-ಎಂದು ಕೈಗಳನ್ನು ತಿರುಗಿಸುತ್ತಾ ಮುಖ ತಿವಿಯುವವರಂತೆ ಕೈ ಚಾಚಿದರು. ರಂಗನಾಥರಾವ್ ಸಾಹೇಬರು ಜವಾಬು ಹೇಳುವುದಕ್ಕೆಂದು ಎದ್ದುನಿಂತರು. ಮುಖ ಕೆಂಪೇರಿತ್ತು. ಅವರು ವೇದಿಕೆಯ ಅಂಚಿಗೆ ಬಂದಾಗ ಆ ಆತುರದಲ್ಲಿ ಎಲ್ಲಿಯಾದರೂ ಕೆಳಕ್ಕೆ ಉರುಳಿಯಾರೋ ಎಂದು ನೋಟಕರಾದ ನಮಗೆಲ್ಲ ಅನಿಸಿತು. ಅಷ್ಟು ಮಟ್ಟಿನದು ಅಬ್ಬಾಸ್‌ಖಾನರ ಭಾಷಣ ಉಂಟು ಮಾಡಿದ್ದ ಉದ್ವೇಗ.

# ಚಮತ್ಕೃತಿ

ಒಂದು ಸಾರಿ ಶಾಸನ ಸಭೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸಂಬಂಧಪಟ್ಟ ಒಂದು ಮಸೂದೆ ಚರ್ಚೆಯಲ್ಲಿತ್ತು. ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರೆಸಿಡೆಂಟರುಗಳಿಗೆ ಹೆಚ್ಚು ಅಧಿಕಾರ ಕೊಡಬೇಕೆಂಬುದು ಆ ಮಸೂದೆಯ ಉದ್ದೇಶ. ಅದು ಕೂಡದೆಂಬುದು ಅಬ್ಬಾಸ್ ಖಾನ್‌ರವರ ವಾದ. ಆ ಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರಾಗಿದ್ದವರು ಬಿ. ಎಸ್. ಪುಟ್ಟಸ್ವಾಮಿಯವರು. ಮಸೂದೆಗೆ ಅನುಕೂಲವಾಗಿ ಮಾತನಾಡುತ್ತಾ ವಿರೋಧಿಗಳನ್ನು ಕೊಂಚ ಹೀಯಾಳಿಸಿದರು. ಅಬ್ಬಾಸ್‌ಖಾನರು ಉತ್ತರ ಕೊಡಲು ಎದ್ದರು.

“ಸ್ವಾಮಿ, ಈ ಮಸೂದೆಗೆ ವಿರೋಧ ಹೇಳಿದ ನಾನು ವಿಷಯವನ್ನು ತಿಳಿದುಕೊಂಡಿಲ್ಲ, ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸದ ಅನುಭವ ನನಗಿಲ್ಲ-ಎಂದು ಹೇಳಿದರಲ್ಲ, ಒಬ್ಬ ಮಹನೀಯರು-ಅವರಿಗೆ ನಾನು ಸವಾಲು ಹಾಕುತ್ತೇನೆ. ಹುಣಸೂರಿನಿಂದ ಪಿರಿಯಾಪಟ್ಟಣದ ಕಡೆಗೆ ತಿರುಗುವ ರಸ್ತೆಯಲ್ಲಿ ನಾಲ್ಕನೆ ಮೈಲಿಯಲ್ಲಿ ಎಡಪಾರ್ಶ್ವಕ್ಕೆ ಒಂದು ಮುಸಾಫರ್ ಬಂಗಲೆ ಇದೆಯಲ್ಲ-ಅದನ್ನು ಈ ದೊಡ್ಡ ಮನುಷ್ಯರು ಎಷ್ಟು ಸಲ ನೋಡಿದ್ದಾರೆ? ಅದರ ಚಾವಣಿಯ ಹೆಂಚು ಬಿದ್ದು ಹೋಗಿ ಆರು ತಿಂಗಳಿಂದ ದುರಸ್ತಿಲ್ಲದೆ ಇದೆ. ಎಷ್ಟು ಹೆಂಚುಗಳು ಬಿದ್ದಿವೆಯೆಂದು ಈ ಮಹನೀಯರು ಎಣಿಸಿದ್ದಾರೆಯೆ? ಕಾಕನಕೋಟೆ ದಾರಿಯಲ್ಲಿ ಸ್ಕೂಲು ಕಟ್ಟಡ ಬಿದ್ದುಹೋಗಿದೆಯಲ್ಲ ಇವರು ಅದನ್ನು ಎಷ್ಟು ಸಲ ನೋಡಿದ್ದಾರೆ? ಗುಂಡ್ಲುಪೇಟೆ ರಸ್ತೆಯಲ್ಲಿ ಇಷ್ಟು ಹಳ್ಳಗಳಿವೆಯಲ್ಲ-ಈ ಪ್ರೆಸಿಡೆಂಟರು ಆ ರಸ್ತೆಯಲ್ಲಿ ಎಷ್ಟು ಸಲ ಓಡಾಡಿದ್ದಾರೆ? ಅವರು ಹಳ್ಳಗಳನ್ನು ನೋಡಿದರೆ? ನೋಡಿ ಏನು ಮಾಡಿದರು?”

ಈ ರೀತಿಯಾಗಿ ಇದ್ದಿದ್ದ ಅಥವಾ ಇರಬಹುದಾಗಿದ್ದ ಲೋಪದೋಷಗಳನ್ನು ಒಂದೊಂದಾಗಿ ಬೇರೆಬೇರೆಯಾಗಿ ತಪಶೀಲು ಸಹಿತವಾಗಿ ಹೇಳುತ್ತ ಹೊರಟರು ಅಬ್ಬಾಸ್‌ಖಾನರು. ಇದು ವಾದಚಮತ್ಕಾರ.

ಅಬ್ಬಾಸ್‌ಖಾನ್ ಸಾಹೇಬರ ಕನ್ನಡ ಮಾತು ಸೊಗಸಾಗಿತ್ತು. ಅವರ ಇಂಗ್ಲಿಷ್ ಮಾತೂ ಹಾಗೆಯೇ. ಮಾತು ಮಾತಿನಲ್ಲಿಯೂ ವೀರ್ಯವಿರುತ್ತಿತ್ತು. ಆದರೆ ಮರ್ಯಾದೆ ಮೀರುತ್ತಿರಲಿಲ್ಲ. ಗಂಭೀರವಾಗಿರುತ್ತಿತ್ತು.

# ಪೌರಸಭಾಧ್ಯಕ್ಷ

ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟರಾಗಿ ಅಬ್ಬಾಸ್‌ಖಾನ್ ಸಾಹೇಬರು ವಿಚಕ್ಷಣೆಯಿಂದ ಕಾರ್ಯ ನಡಸಿದರು. ಎಷ್ಟೋ ದಿನ ಬೆಳಗಾಗ ಕುದುರೆಯ ಮೇಲೆ ಕುಳಿತು ಪಟ್ಟಣದ ನಾನಾ ಭಾಗಗಳನ್ನು ತನಿಖೆ ಮಾಡುತ್ತಿದ್ದರು. ಎಷ್ಟೋ ದಿನ ಅವರು ದಿವಾನ್ ಮಿರ್ಜಾ ಸಾಹೇಬರ ಜೊತೆಯಲ್ಲಿ ಹೀಗೆ ಊರಿನ ತನಿಖೆ ಮಾಡಿದ್ದುಂಟು. ಈಗ ಇರುವ ಸಿಟಿ ಮಾರ್ಕೆಟ್ ಕಟ್ಟಡವನ್ನು ಕಟ್ಟಿಸಿದ ಕೀರ್ತಿ ಬಹುಮಟ್ಟಿಗೆ ಅಬ್ಬಾಸ್‌ಖಾನ್ ಸಾಹೇಬರಿಗೆ ಸಲ್ಲುತ್ತದೆ. ಅವರು ಪ್ರಜಾಭಿಮಾನಿಗಳೆಂಬುದಕ್ಕೆ ಯಾರೂ ಬದಲು ಹೇಳರು.

ಅಬ್ಬಾಸ್‌ಖಾನರು ಸ್ನೇಹಪರರು. ಉದಾರ ಮನಸ್ಸಿನವರು. ನಾನು ಒಂದು ಸಾರಿ ಅವರ ಮನೆಗೆ ಹೋಗಿದ್ದಾಗ ಒಂದು ಚಿಂತೆಯನ್ನು ಹೇಳಿಕೊಂಡರು: ತಮಗೆ ಮೆಕ್ಕಾ ಯಾತ್ರೆ ಮಾಡುವ ಯೋಗ ಎಂದು ಬಂದಿತೋ ಎಂದು.

ಒಟ್ಟಿನಲ್ಲಿ ಅವರನ್ನು ಜ್ಞಾಪಕ ಮಾಡಿಕೊಳ್ಳುವುದು ನನ್ನ ಮನಸ್ಸಿಗೆ ಒಂದು ಸಂತೋಷ.

# ೯ ಮಾಗಡಿ ಕರಣಿಕ ಕೃಷ್ಣಮೂರ್ತಿಗಳು

ಮಾಗಡಿ ಕರಣಿಕ ಕೃಷ್ಣಮೂರ್ತಿಗಳು ಸ್ಮರಣೆಗೆ ಅರ್ಹರಾದವರು. ಅವರ ಮನಸ್ಸು ಉದಾರವಾದದ್ದು, ಕೈ ಧಾರಾಳವಾದದ್ದು, ಲೋಕವೃತ್ತಿ ಪ್ರಗತಿಪರವಾದದ್ದು. ಅವರಿಗೆ ಲೋಕ ಕೊಟ್ಟ ಪುರಸ್ಕಾರ ಕೊಂಚಮಟ್ಟಿಗೆ ಮೆಚ್ಚಿಕೆಯದು, ಉಪಹಾಸ್ಯದ್ದು.

ಕರಣಿಕರದು ಪ್ರಸಿದ್ಧ ಕೆಂಪೇಗೌಡರಿಗೆ ಮಂತ್ರಿಯಾಗಿದ್ದವರ ಸಂತತಿ. ಇವರಿಗೆ ಆ ಪಾಳೆಯಗಾರ ಪ್ರಭು ಬಹುವಾಗಿ ಭೂದಾನ, ಕನಕದಾನಗಳನ್ನು ಮಾಡಿದ್ದನಂತೆ. ಕೃಷ್ಣಮೂರ್ತಿಗಳವರ ಪೂರ್ವಿಕರು ಧರ್ಮಿಷ್ಠರು; ಪ್ರಭುವಿನಿಂದ ತಮಗೆ ದೊರೆತಿದ್ದ ಧನ ಧಾನ್ಯ ಸಮೃದ್ಧಿಯನ್ನು ವೇದಶಾಸ್ತ್ರ ಪೋಷಣೆಗಾಗಿ ವಿನಿಯೋಗಿಸಿದ್ದರು. ಹತ್ತಾರು ಮಂದಿ ವಿದ್ವಾಂಸರೂ, ವಿದ್ಯಾರ್ಥಿಗಳೂ ಆ ಕಾಲದ ಕರಣಿಕರ ಪೋಷಣೆಯಲ್ಲಿ ಜೀವಿಸಿಕೊಂಡು ವೇದವಿದ್ಯಾನಿಷ್ಠರಾಗಿದ್ದರು.

ಕೃಷ್ಣಮೂರ್ತಿಗಳವರು ಆ ಸಂಪ್ರದಾಯವನ್ನು ಉಳಿಸಿ ಕಾಪಾಡಬೇಕೆಂದು ಪ್ರಯಾಸಪಟ್ಟರು.

## ಮೈಕಟ್ಟು

ಕೃಷ್ಣಮೂರ್ತಿಗಳು ಆಕಾರದಲ್ಲಿ ಧಡೂತಿ ಮನುಷ್ಯರು. ಎತ್ತರವಾದ ಆಳು; ಪುಷ್ಟವಾದ ಮೈ; ಮತ್ತು ವೀರಾವೇಶವನ್ನು ತೋರಿಸುವ ಮೈಕಟ್ಟು, ಮುಖಭಂಗಿ.

ಒಂದು ಸಾರಿ ಮೈಸೂರಿನಲ್ಲಿ ಮಹಾರಾಜರ ಆಶ್ರಯದಲ್ಲಿ ‘ಜಮಖಾನಾ ಕ್ಲಬ್’ ಎಂಬ ಕ್ರೀಡಾ ಸ್ಪರ್ಧೆಯ ಜಾಗದಲ್ಲಿ ನಡೆದ ಒಂದು ದೇಹಬಲ ಪ್ರಯೋಗ ಪಂಥದಲ್ಲಿ ಕೃಷ್ಣಮೂರ್ತಿಗಳೂ ಸೇರಿದ್ದರಂತೆ. ಇವರು ಅಂಗವ್ಯಾಯಾಮ ಕೊಂಚ ಆದಮೇಲೆ ಅಲ್ಲಿ ಮಂಟಪಕ್ಕೆ ಸಿಂಗರಿಸಿದ್ದ ಒಂದು ಬಾಳೆಯ ಕಂಬವನ್ನು ಸೆಳೆದುಕೊಂಡು ಅದನ್ನು ಗದೆಯಾಗಿ ಪ್ರಯೋಗಿಸಲಾರಂಭಿಸಿದರಂತೆ. ಇತರ ಪಂಥಗಾರರು ಹೆದರಿ ಓಡಿಹೋದರಂತೆ. ಇಂಥಾದ್ದು ಕೃಷ್ಣಮೂರ್ತಿಗಳ ಬಲ.

ಕೃಷ್ಣಮೂರ್ತಿಗಳಿಗೆ ಸಾರ್ವಜನಿಕದಲ್ಲಿ ಉತ್ಸಾಹ ೧೯೦೭-೮ ರ ವೇಳೆಗೇ ಉಂಟಾಗಿತ್ತು. ಬಸವನಗುಡಿಯ ಬಡಾವಣೆ ಪ್ರಾರಂಭವಾದ ಮೊದಮೊದಲಲ್ಲಿಯೇ ಅಲ್ಲಿ ಮನೆ ಕಟ್ಟಿದವರ ಪೈಕಿ ಅವರೊಬ್ಬರು. ಅವರು ಆಗಿನ (ರೆಪ್ರೆಸೆಂಟಿಟಿವ್ ಅಸೆಂಬ್ಲಿ) ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಆ ಸಭೆಯ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು.

ನಮ್ಮ ದೇಶದ ಜನದ ನೆಮ್ಮದಿಗೆ ಭೂ ವ್ಯವಸಾಯ ಒಂದು ಮೂಲಭೂತವಾದ ಆವಶ್ಯಕತೆಯೆಂಬುದನ್ನೂ ಭೂವ್ಯವಸಾಯದ ಅಭಿವೃದ್ಧಿಗೆ ಹೊಸ ಹೊಸ ಯಂತ್ರೋಪಕರಣಗಳು ಆವಶ್ಯಕವೆಂಬುದನ್ನೂ ಮನಗಂಡು ಅವರು, ಕೆಲವು ವಿದೇಶೀ ಕಂಪೆನಿಗಳೊಡನೆ ಪತ್ರವ್ಯವಹಾರ ನಡಸಿ ಹೊಸ ಹೊಸ ನಮೂನೆಯ ವ್ಯವಸಾಯ ಯಂತ್ರೋಪಕರಣಗಳನ್ನು ತರಿಸಿ, ತಮ್ಮ ಮನೆಯ ಮುಂಭಾಗದ ದೊಡ್ಡ ರೂಮಿನಲ್ಲಿ ಪ್ರದರ್ಶನ ಮಾಡಿದ್ದರು. ಉಳುವ ನೇಗಿಲು, ಹೊಸ ನಮೂನೆಯ ಕುಂಟೆ ಹೊಡೆಯುವ ಯಂತ್ರ, ಬಿತ್ತನೆಯ ಯಂತ್ರ, ಕಳೆ ತೆಗೆಯುವ ಯಂತ್ರ, ಮಣ್ಣು ಹೆಂಟೆಗಳನ್ನು ಪುಡಿ ಮಾಡುವ ಯಂತ್ರ, ಬತ್ತದ ಹೊಟ್ಟು ತೆಗೆಯುವ ಯಂತ್ರ, ಹತ್ತಿಯನ್ನು ಬಿಡಿಸಿ ಬೀಜವನ್ನು ಬೇರೆ ಮಾಡುವ ಯಂತ್ರ, ನವ ನಮೂನೆಯ ಸನಿಕೆಗಳು, ಗುದ್ದಲಿಗಳು, ಕುಡುಗೋಲುಗಳು ಮೊದಲಾದ ಪರಿಕರಗಳನ್ನು ಪ್ರದರ್ಶನ ಮಾಡಿದ್ದರು, ಇದನ್ನು ಕುರಿತು ಪತ್ರಿಕೆಗಳಲ್ಲಿ ಜಾಹೀರಾತುಗಳನ್ನೂ ಹಾಕಿಸಿದ್ದರು. ನಾನು ಆ ಜಾಹಿರಾತುಗಳನ್ನು ವಿದ್ಯಾರ್ಥಿಯಾಗಿದ್ದಾಗಲೇ ನೋಡಿದ್ದೆ. ನನಗೆ ಅದರಲ್ಲಿ ಕುತೂಹಲವೂ ಉಂಟಾಗಿತ್ತು, ಆದರೆ ಆ ಯಂತ್ರಪ್ರದರ್ಶನವನ್ನು ನೋಡಿದ ಜನರ ಸಂಖ್ಯೆ ಹೆಚ್ಚಿನದೇನೂ ಅಲ್ಲ. ಅವರ ಸ್ನೇಹಿತರು ಬೇರೆ ಕೆಲಸವಿಲ್ಲದಿದ್ದಾಗ ಅಲ್ಲಿಗೆ ಹೋಗಿ ಆ ಸಾಮಾನುಗಳನ್ನು ದೂರದಿಂದ ನೋಡಿ ಮುಸಿ ನಗು ನಗುತ್ತ,

“ಕರಣಿಕರೆ, ಬಹು ಮೆಹನತ್ತು ಮಾಡಿದ್ದೀರಪ್ಪ, ಏನೇನೋ ಇದೆಯಲ್ಲ ಚಮತ್ಕಾರ!”

-ಹೀಗೆ ಹೇಳಿಕೊಂಡು ಹಿಂತಿರುಗುವರು.

ಇವರಿಗೆ ನಷ್ಟವಿಲ್ಲ; ಕರಣಿಕರಿಗೆ ಆದಾಯವಿಲ್ಲ.

ಕೆಲವು ವರ್ಷ ಇದನ್ನು ನಡಸಿ ಆಮೇಲೆ ಅಂಗಡಿಯನ್ನು ಮುಚ್ಚಬೇಕಾಯಿತು. ಅಲ್ಲಿದ್ದ ಕೆಲವು ಸಾಮಾನುಗಳೂ ಮಾಯವಾಗಿದ್ದವು. ಇದು ನೂತನ ಪ್ರಗತಿಯ ಪ್ರಾರಂಭಕರ್ತರ

ಅನುಭವ.

# ಸಂಘಟಿತ ಸಮಾಲೋಚನೆ

ಇನ್ನೊಂದು ಯೋಚನೆ ನಮ್ಮ ಕೃಷ್ಣಮೂರ್ತಿಗಳಿಗೆ ಬಂತು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳು ದಿಕ್ಕು ದಿಕ್ಕಿನಿಂದಲೂ ಮೈಸೂರಿಗೆ ಬರುತ್ತಾರಲ್ಲ-ಜನದ ಹೆಸರಿಟ್ಟುಕೊಂಡು ಬಂದು ಜನದ ಹಣ ತಿಂದು ಅವರು ಮಾಡುವುದೇನು? ಅವರು ತಮ್ಮ ಕರ್ತವ್ಯಕ್ಕೆ ಸಂಬಂಧಪಟ್ಟ ಯಾವ ವಿಚಾರವನ್ನೂ ಚೆನ್ನಾಗಿ ತಿಳಿದುಕೊಂಡಿರುವುದಿಲ್ಲ. ತಮ್ಮ ಅಭಿಪ್ರಾಯದ ವಿಷಯದಲ್ಲಿ ಇತರ ಸದಸ್ಯರು ಹೇಗೆ ಯೋಚಿಸಿದ್ದಾರೆಂಬುದರ ತಿಳಿವಳಿಕೆ ಅವರಿಗಿಲ್ಲ. ಆ ಪ್ರತಿನಿಧಿಗಳು ಹೀಗೆ ಬಿಡಿಬಿಡಿಯಾಗಿರದೆ ಸುಸಂಘಟಿತ (Organised) ರೀತಿಯಲ್ಲಿ ಕೆಲಸ ಮಾಡಬೇಕು. ಅದಕ್ಕಾಗಿ ಮೈಸೂರಿನಲ್ಲಿ ಅವರು ಒಂದೇ ಕಡೆ ಬಿಡಾರ ಮಾಡಿ ತಮ್ಮ ಪುರಸತ್ತಿನ ಹೊತ್ತನ್ನು ಅಭಿಪ್ರಾಯ ವಿನಿಮಯಕ್ಕಾಗಿಯೂ ಚರ್ಚೆಗಾಗಿಯೂ ವಿನಿಯೋಗಿಸಬೇಕು. ಹೀಗೆಂದು ಕೃಷ್ಣಮೂರ್ತಿಗಳು ಯೋಚಿಸಿ, ತಾವು ಏರ್ಪಡಿಸುವ ಬಿಡಾರದಲ್ಲಿ ಸದಸ್ಯರೆಲ್ಲ ನೆಲಸಬೇಕೆಂದು ಕೋರಿಕೆ ಸಲ್ಲಿಸಿದರು. ನಂಜರಾಜ ಬಹಾದ್ದೂರ್ ಸತ್ರವನ್ನು ಇದಕ್ಕಾಗಿ ತಮ್ಮ ವಶಕ್ಕೆ ತೆಗೆದುಕೊಂಡರು. ಇದು ಬಹುಶಃ ೧೯೦೮-೯ರಲ್ಲಿ.

ನಾನು ಆಗ ನಂಜರಾಜ ಬಹಾದ್ದೂರ್ ಸತ್ರಕ್ಕೆ ಹೋಗಿ ಆ ಪ್ರಯತ್ನವನ್ನು ನೋಡಿಬಂದದ್ದು ಜ್ಞಾಪಕವಿದೆ. ಬಹುಮಂದಿ ಗಣ್ಯರಾದವರು ಅಲ್ಲಿ ಸೇರಿದ್ದರು. ವೆಂಕಟಕೃಷ್ಣಯ್ಯನವರಿದ್ದರು. ಸಂತೆಬಾಚಹಳ್ಳಿ ನಂಜಪ್ಪನವರಿದ್ದರು.

ನಂಜಪ್ಪನವರ ಕೈಬರಹ ನೋಡಬೇಕಾದದ್ದು. ಇಂಗ್ಲಿಷಿನಲ್ಲಾಗಲಿ ಕನ್ನಡದಲ್ಲಾಗಲಿ, ಗೆರೆಗಳು, ಗೆರೆಗಳ ಬಾಗುಗಳು, ಅಕ್ಷರಗಳು, ಸಾಲುಗಳು, ಅಕ್ಷರ ಅಕ್ಷರಕ್ಕೂ ನಡುವೆ ಇರುತ್ತಿದ್ದ ಒಂದೇ ಪ್ರಮಾಣದ ತೆರಪು-ಇವೆಲ್ಲ ನನ್ನ ಕಣ್ಣಿಗೆ ತುಂಬ ಸೊಗಸೆನಿಸಿದವು.

ನಂಜಪ್ಪನವರಲ್ಲಿ ಆಕರ್ಷಕವಾಗಿದ್ದ ಇನ್ನೊಂದು ಗುಣ ಅವರ ಹಾಸ್ಯಪ್ರವೃತ್ತಿ. ಅವರು ಹೆಚ್ಚು ಮಾತಿನವರೇನೂ ಅಲ್ಲ, ಆದರೆ ಆಡಿದ ಮಾತಿನಲ್ಲಿ ಕೊಂಕಿಲ್ಲದಿರುತ್ತಿರಲಿಲ್ಲ. ಸಂಸ್ಕೃತ ಪಂಡಿತರನ್ನು ಕುರಿತು ಅವರು ಹೇಳಿದ ಒಂದೆರಡು ಕಥೆಗಳು ಈಗಲೂ ನೆನಸಿಕೊಂಡರೆ ನಗು ಬರುತ್ತದೆ.

# ‘ಮಂಗಲಕರ್ಮ’

ಆ ಹೊತ್ತು ಅಲ್ಲಿಯ ವಿಷಯ ಶ್ರೀಮನ್ಮಹಾರಾಜರಿಗಾಗಿ ಒಂದು ಸತ್ಕಾರ ಕೂಟವನ್ನು (At home) ಏರ್ಪಡಿಸಬೇಕೆಂಬುದು. ನನಗೆ ಈ ವಿಷಯದಲ್ಲಿ ಆಸಕ್ತಿ ಇರಲಿಲ್ಲ. ನಾನು ಅಲ್ಲಿಗೆ ಹೋಗಿದ್ದದ್ದರ ಉದ್ದೇಶ, ಹಿಂದಿನ ವರ್ಷ ಸ್ಥಾಪನೆ ಮಾಡಿದ್ದ ಮಹಾ ಜನಸಭೆ ಏನಾಯಿತೆಂದು ತಿಳಿದುಕೊಳ್ಳಬೇಕೆಂಬುದು. ಆ ಮಹಾಜನಸಭೆಯ ಗೌರವ ಕಾರ್ಯದರ್ಶಿ ಸಂತೆಬಾಚಹಳ್ಳಿಯ ನಂಜಪ್ಪನವರು. ನಾನು ಅವರನ್ನು ಕೇಳಿದಾಗ ಅವರು ನಗುತ್ತ,

“ಏನಯ್ಯ ಆತುರ? ಆತುರ ಪಡಬಾರದಪ್ಪ” ಎಂದು ಹೇಳಿ ಕೂಡಿಸಿದರು. ಪ್ರಶ್ನೆಗೆ ಉತ್ತರ ಬರಲಿಲ್ಲ. ಏನೋ ತಮಾಷೆ ಮಾಡಿ ಮುಗಿಸಿದರು.

ಈ ವಿಚಾರ ಹೀಗಿರಲಿ. ಇದಕ್ಕಿಂತ ದೊಡ್ಡ ವಿಚಾರ ಅಲ್ಲಿ ನಡೆದದ್ದು ಮಾಗಡಿ ಕೃಷ್ಣಮೂರ್ತಿಗಳು ಪಾಕಶಾಲೆಯಲ್ಲಿ ತಯಾರು ಮಾಡಿಸಿದ್ದ ಸಜ್ಜಿಗೆ, ಬೋಂಡ ಮೊದಲಾದ ತಿಂಡಿಗಳ ವಿತರಣೆ. ಜನ ಬಂದಿದ್ದದ್ದು ಇದಕ್ಕೆಂದು ನಾನು ಆಗಲೇ ಅರ್ಥ ಮಾಡಿಕೊಂಡೆ.

ಮೊದಲೇ ರುಚಿ. ಬಿಟ್ಟಿಯಾದರೆ ಇನ್ನೂ ರುಚಿ.

ಕೃಷ್ಣಮೂರ್ತಿಗಳು ಶ್ರೀಮಂತರೆಂದೂ, ಉದಾರಿಗಳೆಂದೂ ಹೆಸರಾಗಿದ್ದವರು. ಮತ್ತು ಎಲ್ಲರಿಗೂ ಸ್ನೇಹಿತರ ಆಶ್ರಯದಲ್ಲಿ ಮಾಡಿದ ಊಟಕ್ಕೂ ಫಲಾಹಾರ ಪೂಜೆಗೂ ಹಣ ಕೊಡವೆವೆನ್ನಬಹುದೆ? ಅವರು ಏನಂದುಕೊಂಡಾರು?

ಹೀಗಾಯಿತು ಕೃಷ್ಣಮೂರ್ತಿಗಳಿಗೆ ಮಂಗಲಕರ್ಮ.

# ಪುನಃಪ್ರಯತ್ನ

ಕೃಷ್ಣಮೂರ್ತಿಗಳಾದರೋ ಇಂಥ ಅನುಭವಗಳಿಂದ ಪಾಠ ಕಲಿಯುವ ಮನಸ್ಸಿಲ್ಲದವರು. ಬೆಂಗಳೂರಿನಲ್ಲಿ ಶಾಸನಸಭೆ (ಲೆಜಿಸ್ಲೆಟಿವ್ ಕೌನ್ಸಿಲ್) ನಡೆಯುತ್ತಿದ್ದಾಗಲೂ ಅವರು ತಮ್ಮ ಸುಸಂಘಟನೆಯ ಪ್ರಯತ್ನವನ್ನು ಮತ್ತೆ ನಡೆಸಿದರು. ಆದರೆ ಈ ಸಾರಿ ಜನಸಂಖ್ಯೆ ಅಷ್ಟು ದೊಡ್ಡದಲ್ಲ. ಈ ಪ್ರಯತ್ನ ನಡೆಯುತ್ತಿದ್ದಾಗ ಮೋಕ್ಷಗುಂಡಂ ರಾಮಚಂದ್ರರಾಯರವರೂ ಶಾಸನಸಭೆಯ ಸದಸ್ಯರಾಗಿದ್ದರು. ಅವರು ನನ್ನನ್ನು ಬಲಾತ್ಕಾರಪಡಿಸಿ ಆ ಸುಸಂಘಟನೆಗೆ ಸಹಾಯವಾಗಿರಬೇಕೆಂದು ಕರೆದುಕೊಂಡುಹೋಗುತ್ತಿದ್ದರು. ಬಡ್ಜೆಟ್ಟಿನ ಮುಖ್ಯ ಮುಖ್ಯ ಅಂಶಗಳನ್ನು ನಾನು ಎತ್ತಿ ತೋರಿಸತಕ್ಕದ್ದು, ವಿವರಣೆಕೊಡತಕ್ಕದ್ದು; ಅದರ ಮೇಲೆ ಮೆಂಬರುಗಳು ಚರ್ಚೆ ನಡೆಸತಕ್ಕದ್ದು, ಕೊನೆಯಲ್ಲಿ ಒಂದು ನಿರ್ಣಯವನ್ನು ಗೊತ್ತುಮಾಡತಕ್ಕದ್ದು. ಅನಂತರ ಆ ದಿನದ ಶಾಸನ ಸಭೆಯಲ್ಲಿ ಆ ನಿರ್ಣಯದಂತೆ ಸಭಿಕರು ವಾದಮಾಡಬೇಕಾದದ್ದು.

ಇದು ಆಲೋಚನೆ.

ನನ್ನ ಕೈಯಲ್ಲಾದದ್ದನ್ನು ನಾನು ಶ್ರದ್ಧೆಯಿಂದ ಮಾಡಿದೆ. ಆದರೆ ನಾನು ಬಡ್ಜೆಟ್ ಅಂಶವನ್ನು ತೆಗೆದುಕೊಂಡ ಕೂಡಲೆ ಅಲ್ಲಿದ್ದ ನಾಲ್ಕೈದು ಮಂದಿ ಸದಸ್ಯರಲ್ಲೊಬ್ಬರು “ಬಂದೆ” ಎಂದು ಹೊರಕ್ಕೆ ಹೋಗುವರು. ಇನ್ನೊಬ್ಬರು “ಏನೋ ಚಳಿಚಳಿಯಾಗಿದೆ. ಬಿಸಿ ಕಾಫಿಯಾದರೆ ಒಳ್ಳೆಯದು” ಎನ್ನುವರು. ಮತ್ತೊಬ್ಬರು ನಸ್ಯ ತೀಡುವರು. ನಮಗೆ ದೊರೆತಿದ್ದ ಒಂದೆರಡು ಘಂಟೆಗಳ ಅವಕಾಶ ಹೀಗೆ ಮುಗಿದುಹೋಗುವುದು.

ಈ ಅನುಭವವಾದ ಮೇಲೆ ರಾಮಚಂದ್ರರಾಯರಿಗೂ ಕೂಡ ಹಿಂದೆ ನಾನು ಆಡಿದ್ದ ನಿರುತ್ಸಾಹದ ಮಾತು ನಿಜದ ಮಾತೇ ಎನ್ನಿಸಿತು. ನಮ್ಮಲ್ಲಿ ಯಾವ ಒಳ್ಳೆ ಪ್ರಯತ್ನವೂ ಸಾಗದೆಂದು ಕೈಬಿಟ್ಟೆವು.

ಈ ಪ್ರಯತ್ನಗಳಿಗೆಲ್ಲ ಖರ್ಚುಪಟ್ಟಿಯನ್ನು ಭರಿಸಿದವರು ಮಾಗಡಿ ಕೃಷ್ಣಮೂರ್ತಿಗಳು. ಅವರಿಗೆ ತುಂಬ ಬೇಸರವಾಯಿತು.

# ಬಡ್ಜೆಟ್ ಭಾಷಣ

ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಮಾಗಡಿ ಕೃಷ್ಣಮೂರ್ತಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿಯೂ (ಲೆಜಿಸ್ಲೆಟಿವ್) ಶಾಸನಸಭೆಯಲ್ಲಿಯೂ ಸದಸ್ಯರಾಗಿದ್ದರು. ಆಗ ಅವರು ಮಾಡಿದ ಬಡ್ಜೆಟ್ ಭಾಷಣದಲ್ಲಿ ಶ್ರೀಮದ್ರಾಮಾಯಣದ ಕಚ್ಚಿತ್ಸರ್ಗದ ಬಹುಭಾಗವನ್ನು ಓದಿ ಉದಾಹರಿಸಿದರು. ಕಚ್ಚಿತ್ಸರ್ಗದಲ್ಲಿ ಶ್ರೀರಾಮದೇವರು ತಮ್ಮನಾದ ಭರತನಿಗೆ ಆತ ಹೇಗೆ ರಾಜ್ಯಭಾರ ನಡಸಬಹುದೆಂಬುದನ್ನು ಉಪದೇಶಿಸ ಹೊರಟು ರಾಜ್ಯದ ಕೋಶನೀತಿ ಹೇಗೆ ಹೇಗಿರಬೇಕು ಎಂಬುದನ್ನು ತಿಳಿಸುತ್ತಾನೆ.

> ಆಯಸ್ತೇ ವಿಪುಲಃ ಕಚ್ಚಿತ್
> ಕಚ್ಚಿದಲ್ಪತರೋ ವ್ಯಯಃ ||...

ಈ ವಾಕ್ಯಗಳ ಉದಾಹರಣೆಯನ್ನು ಕೇಳಿ ಸಭಿಕರು ಲಘು ಹಾಸ್ಯದಿಂದ ನಗುತ್ತಿದ್ದರು. ವಿಶ್ವೇಶ್ವರಯ್ಯನವರಾದರೋ ಅದನ್ನು ಮೆಚ್ಚಿಕೊಂಡು “ನೀವು ಹೇಳುವುದು ಚೆನ್ನಾಗಿದೆ. ಆ ತತ್ತ್ವವನ್ನು ನಾವು ಅನುಸರಿಸಬೇಕು. ನಮ್ಮ ಈ ಹೊತ್ತಿನ ಸಂದರ್ಭದಲ್ಲಿ ಅದನ್ನು ಹೇಗೆ ಮಾಡಬೇಕೆಂದು ಯೋಚಿಸೋಣ” ಎಂದರು.

# ಪೌರಸಭೆಯಲ್ಲಿ

ಕೃಷ್ಣಮೂರ್ತಿಗಳು ಬೆಂಗಳೂರು ಪೌರಸಭೆಯ (ಮುನಿಸಿಪಾಲಿಟಿ) ಸದಸ್ಯರಾಗಿದ್ದರು, ಕೆಲವು ವರ್ಷ. ಆಗ ನಾನು ಅವರ ಸಹೋದ್ಯೋಗಿಯಾಗಿದ್ದೆ. ಕೃಷ್ಣಮೂರ್ತಿಗಳವರದು ಕೊಂಚ ವೀರಾವೇಶದ ಸ್ವಭಾವ. ಸಂಗತಿಯನ್ನು ಮುಚ್ಚಿ ಹೇಳುವುದೂ, ನಯಪಡಿಸುವುದೂ ಅವರಿಗೆ ಅಭ್ಯಾಸವಿರಲಿಲ್ಲ. ಒಂದು ಕಡೆ ನಯ ನಾಜೂಕಿಲ್ಲದ ಇವರ ಮಾತು, ಇನ್ನೊಂದು ಕಡೆ ನಯ ನಾಜೂಕಿನಿಂದ ಸೊಗಯಿಸುತ್ತಿದ್ದ ಅಧ್ಯಕ್ಷ ಪುಟ್ಟಣ್ಣಶೆಟ್ಟರ ರೀತಿ-ಇದನ್ನು ನೋಡುವುದು ನಮಗೊಂದು ವಿನೋದವಾಗಿತ್ತು.

ಬೆಂಗಳೂರಿನಲ್ಲಿ ನೀರು ಸರಬರಾಯಿ ತಕರಾರು. ಉಸ್ಮಾನ್‌ಖಾನ್ ಸಾಹೇಬರು ಎದ್ದು ಹೇಳಿದರು:

ಉ: “ಸ್ವಾಮಿ, ಒಂದು ಜನ ಇದ್ದಾರೆ. ಬೀದಿ ನಲ್ಲಿ ಹತ್ತಿರ ಬಂದು ಬಟ್ಟೆ ಒಗೀತಾರೆ, ಒಗೀತಾರೆ, ಪಾತ್ರೆ ತಿಕ್ತಾರೆ ತಿಕ್ತಾರೆ, ಮೈ ಉಜ್ತಾರೆ ಉಜ್ತಾರೆ ಉಜ್ತಾರೆ...”

ಇದನ್ನು ಮೈ ಕೈ ಅನುಕರಣ ಸಹಿತವಾಗಿ ತೋರಿಸಿದರು. ಅವರಿಗೆ ಎದುರಾಗಿ ಕುಳಿತಿದ್ದ ಕೃಷ್ಣಮೂರ್ತಿಗಳೆದ್ದು ನಿಂತು “ಸ್ವಾಮಿ” ಎಂದು ಹೇಳುತ್ತ ಷರಟು ಕೋಟುಗಳನ್ನು ಮೊಳಕೈಯಿಂದ ಮೇಲಕ್ಕೆಳೆದುಕೊಂಡು ನಿಂತರು.

“ನಮ್ಮ ಸ್ನೇಹಿತರು...”

ಈ ವೇಳೆಗೆ ಪುಟ್ಟಣ್ಣಶೆಟ್ಟರು ಅರ್ಥಮಾಡಿಕೊಂಡು ಸಾಹೇಬರನ್ನು ಕುರಿತು ಕೇಳಿದರು.

ಪು: “ಯಾರನ್ನ ನೀವು ಹೇಳಿದ್ದು ನಲ್ಲಿಯ ಹತ್ತಿರ ಹೊತ್ತು ಮಾಡುತ್ತಾರೆ ಅಂತ?”

ಉ: “ನಾನು ಬ್ರಾಹ್ಮಣರನ್ನು ಅನ್ನಲಿಲ್ಲ ಸ್ವಾಮಿ. ನನ್ನ ಗಿರಾಕಿಗಳೆಲ್ಲ ಅವರೇ. ಬೇಕಾದರೆ ಲೆಕ್ಕದ ಪುಸ್ತಕ ತೋರಿಸುತ್ತೇನೆ.”

ನಾವೆಲ್ಲ ನಗದೆ ಇನ್ನೇನು ಮಾಡಲಾಗುತ್ತಿತ್ತು?

# ಒಂದು ಯೋಜನೆ

ನಮ್ಮ ಕೃಷ್ಣಮೂರ್ತಿಗಳಿಗೆ ಇತರ ಜನಕ್ಕೆ ಹೊಳೆಯದ ಆಲೋಚನೆಗಳು ಹೊಳೆಯುತ್ತಿದ್ದವು. ಅವುಗಳಲ್ಲಿ ಒಂದನ್ನು ಹೇಳುತ್ತೇನೆ.

"ಬ್ರಾಹ್ಮಣರಿಗೆ ಉದ್ಯೋಗ ದೊರೆಯುವ ಕಾಲ ಹೋಯಿತು. ಇನ್ನು ಅವರಿಗೆ ಜೀವನಕ್ಕೆ ಕಷ್ಟ ಬರುತ್ತದೆ. ದಿನೇ ದಿನೇ ಆ ಕಷ್ಟ ಹೆಚ್ಚುತ್ತದೆ. ಆ ಕಷ್ಟವನ್ನು ಅವರು ಎದುರಿಸಬೇಕಾದರೆ, ಬೇರೆ ಜೀವಿಕಾ ವೃತ್ತಿಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅಂಥ ಜೀವಿಕಾ ವೃತ್ತಿ ಕ್ಷೌರಿಕನದು. ಈಗ ಜೀವನಕ್ಕಾಗಿ ಬ್ರಾಹ್ಮಣರು ಹೋಟಲುಗಳನ್ನು ತೆರೆದಿದ್ದಾರೆ. ಅನ್ನವಿಕ್ರಯ ಬ್ರಾಹ್ಮಣನಿಗೆ ನಿಷಿದ್ಧವೆಂದು ಶಾಸ್ತ್ರ ಹೇಳುತ್ತದೆ. ಆದರೆ ಆ ನಿಯಮಪಾಲನೆ ಈಗ ಅಸಾಧ್ಯ. ಬ್ರಾಹ್ಮಣ ಹೋಟಲಿಡಬಹುದಾದರೆ ಅವನು ಕ್ಷೌರದ ಕಟ್ಟೆಯನ್ನು ಏಕೆ ಇಡಬಾರದು? 'ಬ್ರಾಹ್ಮಣ ಕ್ಷೌರಶಾಲೆ' ಎಂದು ಬೋರ್ಡು ಹಾಕಿ ಅಲ್ಲಿ ಕೆಲಸ ಚೆನ್ನಾಗಿ ನಡಸಿದರೆ ಬ್ರಾಹ್ಮಣರೆಲ್ಲ ಅಲ್ಲಿಗೇ ಹೋಗಬಹುದು. ಒಂದು ಕುಟುಂಬಕ್ಕೆ ಅದರಿಂದ ಜೀವನವಾಗದೆ? ಬ್ರಾಹ್ಮಣ ಗಂಡಸರೇ ಏಕೆ ಬ್ರಾಹ್ಮಣ ವಿಧವೆಯರಿಗಾಗಿಯೇ ಪ್ರತ್ಯೇಕವಾಗಿ ಒಂದು ಕ್ಷೌರಶಾಲೆಯನ್ನು ಏಕೆ ಮಾಡಬಾರದು? ಅದು ನಮ್ಮ ಮಡಿ ಆಚಾರಗಳಿಗೆ ತಕ್ಕಂತಿರುತ್ತದೆ. ಅಬ್ರಾಹ್ಮಣರ ಕೈ ಸೋಕದೆ ಇರುತ್ತದೆ."

ಈ ರೀತಿ ವಾದ ಮಾಡುತ್ತಿದ್ದರು.

ನಮ್ಮಲ್ಲಿ ಕೆಲವರು ಅದನ್ನೆತ್ತಿ ಪರಿಹಾಸ ಮಾಡುತ್ತಿದ್ದದ್ದೂ ಉಂಟು.

# ಪೆಟ್ಟು

ಕೃಷ್ಣಮೂರ್ತಿಗಳ ಕಡೆಕಡೆಯ ದಿನಗಳು ಸಂತೋಷಕರವಾಗಿರಲಿಲ್ಲ. ಮಿರ್ಜಾ ಸಾಹೇಬರ ದಿವಾನಗಿರಿಯ ಪ್ರಾರಂಭ ಕಾಲದಲ್ಲಿ ಕೃಷ್ಣಮೂರ್ತಿಗಳು ಒಂದು ದಿನ ಮಾಗಡಿಗೆ ತಮ್ಮ ಜಮೀನು ನೋಡಿಕೊಂಡು ಬರುವುದಕ್ಕಾಗಿ ಹೋಗಿದ್ದರು. ಆಗ ಯಾರೋ ನಾಲ್ಕೈದು ಮಂದಿ ಬಂದು ಸುತ್ತುಗಟ್ಟಿ ಅವರನ್ನು ಹೊಡೆದರು. ಕೃಷ್ಣಮೂರ್ತಿಗಳು ಗಾಯಪಟ್ಟು ಚಿಕಿತ್ಸೆಗಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲವು ದಿನ ಇರಬೇಕಾಯಿತು. ಆಗ ಒಂದು ದಿನ ಅವರ ಯೋಗಕ್ಷೇಮ ವಿಚಾರಿಸಲು ಮಿರ್ಜಾ ಸಾಹೇಬರು ಅಲ್ಲಿಗೆ ಬಂದರು. ಕೃಷ್ಣಮೂರ್ತಿಗಳು ನೋವು ಯಾತನೆ ಪಡುತ್ತಿದ್ದುದನ್ನು ನೋಡಿ ವ್ಯಸನವನ್ನು ಸೂಚಿಸಿದರು. ಕೃಷ್ಣಮೂರ್ತಿಗಳು ತಮಗಾದ ಅನುಭವವನ್ನು ಹೇಳುತ್ತ ಹೀಗೆಂದರು:

“ಸ್ವಾಮಿ, ಅವರು ನನ್ನನ್ನು ಹೊಡೆಯುವಾಗ ಹಿಂದೂಸ್ಥಾನಿ ಭಾಷೆಯಲ್ಲಿ ‘ಹಮಾರಾ ಆದ್ಮಿ ದಿವಾನ್ ಸಾಹೇಬ್ ಹೈರೇ, ಮಾರೋ, ಹಮಾರಾ ಮಿರ್ಜಾ ಸಾಹೇಬ್ ಹೈ’ ಎಂದು ಹೇಳಿಕೊಳ್ಳುತ್ತಿದ್ದರು.”

ಕೃಷ್ಣಮೂರ್ತಿಗಳು ಭಗವದ್ಭಕ್ತಿಯಿದ್ದವರು, ಸಂಪ್ರದಾಯಶ್ರದ್ಧೆ ಇದ್ದವರು. ಅವರು ಬದರೀಯಾತ್ರೆ ಮಾಡಿಬಂದು ಅನಂತರ ತಮ್ಮ ಆಸ್ತಿಪಾಸ್ತಿಗಳ ವಿನಿಯೋಗವನ್ನು ಗೊತ್ತುಮಾಡಲು ಅದು ಸಕಾಲವೆಂದು ತಿಳಿದುಕೊಂಡು ಹಂಚಿಕೆ ಮಾಡಿದರು. ಆ ಹಂಚಿಕೆಯ ಒಂದು ಭಾಗ ‘ಕರಣಿಕ ಕೃಷ್ಣಮೂರ್ತಿಗಳ ವೇದಪಾಠಶಾಲೆ’ ಮತ್ತು ಅದರಲ್ಲಿರುವ ಶ್ರೀ ಬದರೀನಾರಾಯಣ ದೇವತಾಲಯ. ಕೃಷ್ಣಮೂರ್ತಿಗಳು ಸತ್ಪುರುಷರು. ಪ್ರಪಂಚದ ಕಪಟಾಟಗಳನ್ನು ಸಹಿಸದವರು. ಆ ಕಪಟಾಟವನ್ನು ಎದುರಿಸುವ ಪ್ರತ್ಯುಪಾಯಗಳನ್ನು ಕಾಣದವರು. ನಮಗೆ ಈ ಹೊತ್ತು ಜ್ಞಾಪಕದಲ್ಲಿರಬೇಕಾದದ್ದು ನಿಷ್ಕಪಟತೆಯಿಂದ ಅವರಿಗಾದ ನಷ್ಟವಲ್ಲ, ಅವರ ನೈಜದಿಂದ ಜನಕ್ಕಾದ ಮತ್ತು ಆಗಿರುವ ಸಂತೋಷ ಲಾಭಗಳು.

# ೧೦ ಕೆಲವು ಸಾರ್ವಜನಿಕ ಸಂಸ್ಥೆಗಳು

ಬೆಂಗಳೂರಿನ ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟಂತೆ ನನಗಿರುವ ಜ್ಞಾಪಕಗಳನ್ನು ಹೇಳುತ್ತೇನೆ. ಬೇರೊಂದು ಕಡೆ ರಾಜಕೀಯ ಸಂಸ್ಥೆಗಳನ್ನು ಕುರಿತು ಬರೆದದ್ದಾಗಿದೆ. [2] ಇಲ್ಲಿ ಸಮಾಜ ಸಂಸ್ಕೃತಿಗಳನ್ನು ಕುರಿತ ಸಂಸ್ಥೆಗಳನ್ನು ಸ್ಮರಿಸಬೇಕೆಂದಿದ್ದೇನೆ.

## ರಾನಡೆ ಸೊಸೈಟಿ

ಸಮಾಜ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಹುಟ್ಟಿದ ಸಂಸ್ಥೆಗಳಲ್ಲಿ ಪ್ರಾಚೀನವಾದದ್ದು ರಾನಡೆ ಸೊಸೈಟಿ ಎಂಬುದೊಂದು.

ರಾನಡೆ ಸೊಸೈಟಿಗಿಂತಲೂ ಹಿಂದೆ ಸ್ಥಾಪಿತವಾದದ್ದು ಲಿಟರರಿ ಯೂನಿಯನ್ ಎಂಬುದು. ಇದು ೧೮೮೦ಕ್ಕೆ ಹಿಂದೆಯೇ ಹುಟ್ಟಿತ್ತೆಂದು ತೋರುತ್ತದೆ. ದಿವಾನ್ ರಂಗಾಚಾರ್ಲುರವರು, ರಾಯರು ಮುಂತಾದ ಆ ಕಾಲದ ಗಣ್ಯ ಪುರುಷರು ಈ ಲಿಟರರಿ ಯೂನಿಯನ್ನಿನ ಪ್ರಮುಖ ಸದಸ್ಯರಾಗಿದ್ದರು. ಆ ಸಂಸ್ಥೆ ಈಗಲೂ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿನ ಒಂದು ಭಾಗದಲ್ಲಿದೆ. ನಾನು ಅಲ್ಲಿ ಭಾಷಣಮಾಡಿದ್ದು ಜ್ಞಾಪಕವಿದೆ.

ರಾನಡೆ ಸೊಸೈಟಿಯನ್ನು ಸ್ಥಾಪಿಸಿದವರು ಬಿ.ವಿ. ಸುಬ್ಬರಾಯಪ್ಪ ಮೊದಲಾದ ಮಿತ್ರರು. ಅದರಲ್ಲಿ, ಕೆಲವು ಕಾಲ ಕೌನ್ಸಿಲ್ ಮೆಂಬರಾಗಿದ್ದ ಪಿ.ಜಿ. ಡಿಸೂಜ ಅವರೂ ಇದ್ದರೆಂದು ಕೇಳಿದ್ದೇನೆ. ಇತರ ಸದಸ್ಯರಲ್ಲಿ ನನಗೆ ತಿಳಿದವರು ಸೆಷನ್ಸ್ ಜಡ್ಜಿ ಆಗಿದ್ದ ಎಸ್. ರಾಮಚಂದ್ರ ಶಾಸ್ತ್ರಿ, ಮೋಕ್ಷಗುಂಡಂ ಕೃಷ್ಣಮೂರ್ತಿ, ಬೇಲೂರು ಶ್ರೀನಿವಾಸ ಅಯ್ಯಂಗಾರ್, ಡಾ ॥ ಬಿ.ಎನ್. ಐಯ್ಯಂಗಾರ್ ಮೊದಲಾದ ಸೆಂಟ್ರಲ್ ಕಾಲೇಜಿನ ಪ್ರಮುಖ ವಿದ್ಯಾರ್ಥಿಗಳು.

# ರಾನಡೆ

ಈ ಸೊಸೈಟಿಯು ಮಹಾದೇವ ಗೋವಿಂದ ರಾನಡೆಯವರ ಜ್ಞಾಪಕಾರ್ಥವಾಗಿಯೂ ಅವರು ಬೋಧಿಸಿದ ತತ್ತ್ವಗಳನ್ನು ಪ್ರಚುರಪಡಿಸುವುದಕ್ಕಾಗಿಯೂ ಹುಟ್ಟಿದ್ದು. ಆ ಕಾಲದಲ್ಲಿ ರಾನಡೆಯವರ ಕೀರ್ತಿ ಇಂಡಿಯದ ಇಲ್ಲ ಭಾಗಗಳಲ್ಲಿಯೂ ವ್ಯಾಪಿಸಿತ್ತು. ರಾನಡೆಯವರು ಬೊಂಬಾಯಿ ಹೈಕೋರ್ಟಿನ ಜಡ್ಜಿಯಾಗಿದ್ದರು. ಆದರೆ ಅವರ ವಿಷಯದಲ್ಲಿ ವಿಶೇಷ ಮಹತ್ತ್ವದ ಸಂಗತಿ ಅದಲ್ಲ. ಅವರು ಮಹಾ ವಿದ್ವಾಂಸರು, ಮಹಾಮೇಧಾವಿಗಳು, ಇದಕ್ಕಿಂತ ಹೆಚ್ಚಾಗಿ ಅವರು ದೇಶಪ್ರೇಮಿಗಳು. ನಮ್ಮ ದೇಶದ ಜನ ಜೀವನದಲ್ಲಿ ಯಾವ ಯಾವ ಮಾರ್ಪಾಟುಗಳಾಗಬೇಕು? ಇಂಡಿಯ ದೇಶವು ಜಗನ್ಮಾನ್ಯವಾಗುವುದು ಹೇಗೆ? ಮತ್ತು ಜಗತ್ತಿಗೆ ಇಂಡಿಯದಿಂದ ಆಗಬಹುದಾದ ಸೇವೆ ಏನು? ಈ ಪ್ರಶ್ನೆಗಳನ್ನೂ ಅವುಗಳ ಉಪಪ್ರಶ್ನೆಗಳನ್ನೂ ವಿವರವಾಗಿ ಸಂತತವಾಗಿ ಚಿಂತಿಸಿ ವಾಸ್ತವಾಧಾರದ ಮೇಲೆ ತಮ್ಮ ಹಿತಸೂಚನೆಗಳನ್ನು ಬೆಳಸಿ ಪ್ರಜಾಬೋಧನೆ ಮಾಡಿದವರು ಈ ಮಹನೀಯರು. ಅವರ ಪಟ್ಟಶಿಷ್ಯರಲ್ಲೊಬ್ಬರು ಗೋಪಾಲ ಕೃಷ್ಣ ಗೋಖಲೆಯವರು; ಇನ್ನೊಬ್ಬರು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು.

# ಸುಬ್ಬರಾಯಪ್ಪನವರು

ಬಿ.ವಿ. ಸುಬ್ಬರಾಯಪ್ಪನವರು ಉದ್ಯೋಗದ ನಿಮಿತ್ತದಿಂದ ಆಗಾಗ ಬೊಂಬಾಯಿಗೆ ಹೋಗಿಬರುತ್ತಿದ್ದರು. ಅವರು (ಜಿಯಾಲಜಿ) ಭೂಗರ್ಭಶಾಸ್ತ್ರದ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದವರು. ಅವರಿಗೆ ಪ್ರಸಿದ್ಧವಾದ ತಾತಾ ಕಂಪೆನಿಯಲ್ಲಿ ಉದ್ಯೋಗ ದೊರಕಿತ್ತು. ಅವರು ಆಗಾಗ ಬೊಂಬಾಯಿಗೆ ಹೋಗಬೇಕಾದ ಕಾರಣ ಹೀಗೆ ಉಂಟಾದದ್ದು.

ಹೀಗೆ ಬೊಂಬಾಯಿ ಪೂನಾ ಪಟ್ಟಣಗಳ ಪ್ರಭಾವದಿಂದ ಸುಬ್ಬರಾಯಪ್ಪನವರಲ್ಲಿ ರಾನಡೆ ಉತ್ಸಾಹ ಹುಟ್ಟಿ ಬೆಳೆಯಿತೆಂದು ನಾನು ಅಂದುಕೊಂಡಿದ್ದೇನೆ.

ಸುಬ್ಬರಾಯಪ್ಪನವರು ನನಗಿಂತ ಕೊಂಚ ಹಿರಿಯರು. ಆಲೋಚನೆ ಮಾಡುವುದರಲ್ಲಿಯೂ, ಭಾಷೆಯನ್ನು ಉಪಯೋಗಿಸುವುದರಲ್ಲಿಯೂ ಚತುರರು. ಅವರ ವ್ಯಕ್ತಿತ್ವವಂತೂ ತುಂಬಾ ಪ್ರಭಾವಶಾಲಿಯಾದದ್ದು. ಒಳ್ಳೆಯ ಎತ್ತರವಾದ ಆಕಾರ. ಸೊಗಸಾದ ಮೈಬಣ್ಣ. ಹುಲುಸಾದ ಮೀಸೆಗಳು. ಲಘುವಾದ ಹಾಸ್ಯಪ್ರವೃತ್ತಿ. ನಡೆನುಡಿಗಳಲ್ಲಿ ಗಂಭೀರ. ಈ ಲಕ್ಷಣಗಳಿಂದ ಅವರು ಮಾನ್ಯರಾಗಿದ್ದರು.

೧೯೧೮ ರಲ್ಲಿ ಬೊಂಬಾಯಲ್ಲಿ ಸ್ಪೆಷಲ್ ಕಾಂಗ್ರೆಸ್ ನಡೆದಾಗ ನಾನು ಅಲ್ಲಿಗೆ ಹೋಗಿದ್ದೆ. ಆ ಸಭೆಯಲ್ಲಿ ಆಲೋಚನೆಗಾಗಿ ನನ್ನ ಸೂಚನೆಯೂ ಒಂದಿತ್ತು. ಅದು ದೇಶೀಯ ಸಂಸ್ಥಾನಗಳನ್ನು ಕುರಿತದ್ದು. ಆ ಸೂಚನೆಗೆ ಬೆಂಬಲ ಸಂಪಾದಿಸುವುದಕ್ಕಾಗಿ ನಾನು ಹತ್ತಾರು ಮಂದಿ ದೊಡ್ಡ ಮನುಷ್ಯರನ್ನು ಕಂಡುಬರಬೇಕೆಂದು ತೋರಿತು. ಆ ಸಂದರ್ಭದಲ್ಲಿ ಸುಬ್ಬರಾಯಪ್ಪನವರು ನನಗೆ ಒತ್ತಾಸೆ ಕೊಟ್ಟು ನನ್ನ ಜೊತೆಯಲ್ಲಿ ಓಡಾಡಿದರು. ಆಗ ನಾನು ಕಂಡುಕೊಂಡೆ, ಸುಬ್ಬರಾಯಪ್ಪನವರು ಬೊಂಬಾಯಿ ಮಹಾ ಪಟ್ಟಣದಲ್ಲಿ ಎಷ್ಟು ಮಂದಿ ಸ್ನೇಹಿತರನ್ನು ಸಂಪಾದಿಸಿದ್ದರು, ಎಷ್ಟು ದೊಡ್ಡ ಗೌರವವನ್ನು ಗಳಿಸಿಕೊಂಡಿದ್ದರು-ಎಂಬುದನ್ನು.

ಇಂಥವರು ಸುಬ್ಬರಾಯಪ್ಪನವರು. ಅವರು ರಾನಡೆ ಸೊಸೈಟಿಯನ್ನು ಸ್ಥಾಪಿಸಿದವರಲ್ಲಿ ಮುಖ್ಯರು.

# ರಾಮಚಂದ್ರಶಾಸ್ತ್ರಿಗಳು

ನಾನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಬಂದಿದ್ದ ವರ್ಷ ಎಸ್. ರಾಮಚಂದ್ರಶಾಸ್ತ್ರಿಗಳು ರಾನಡೆ ಸೊಸೈಟಿಯ ಕಾರ್ಯದರ್ಶಿಗಳು. ಆಗ ಒಂದು ಸಂಜೆ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ಕಾಲ್ಚೆಂಡಿನ (ಫುಟ್‌ಬಾಲ್) ಪಂದ್ಯ ನಡೆಯುವುದಾಗಿತ್ತು. ಅದಕ್ಕಾಗಿ ದೊಂಬಿ. ಊರ ದೊಂಬಿಯ ಜೊತೆಗೆ ಪರೀಕ್ಷೆಗಳಿಗಾಗಿ ಪರಸ್ಥಳಗಳಿಂದ ಬಂದಿದ್ದ ವಿದ್ಯಾರ್ಥಿಗಳ ತಂಡ. ನಾನೂ ಅದರಲ್ಲಿದ್ದೆ. ಆಗ ರಾಮಚಂದ್ರಶಾಸ್ತ್ರಿಗಳು ಅಲ್ಲಿಗೆ ದಯಮಾಡಿಸಿದ್ದರ ಠೀವಿ ನನಗೆ ಇನ್ನೂ ಜ್ಞಾಪಕವಿದೆ. ಉಟ್ಟಿದ್ದದ್ದು ಸೊಗಸಾದ, ನವುರಾದ ಮಲ್ಲು; ನೇವಿ ಬ್ಲೂ ಬಣ್ಣದ ಜರ್ಬಾದ ಸರ್ಜ್‌ಕೋಟು. ಹೊಳೆಹೊಳೆಯುವ ಪಂಪ್ ಷೂಸ್. ಈ ಪಕ್ಕದಲ್ಲಿ ನಾಲ್ಕು ಮಂದಿ, ಆ ಪಕ್ಕದಲ್ಲಿ ನಾಲ್ಕು ಮಂದಿ ಅಡ್ಮೈರರುಗಳು. ಎಡಬಲ ಭುಜಗಳನ್ನು ಮೆರೆಯಿಸಿಕೊಂಡು ರಾಜಠೀವಿಯಿಂದ ಬಂದರು ಶಾಸ್ತ್ರಿಗಳು. ವಿದ್ಯಾರ್ಥಿಗಳ ತಂಡ ಇಬ್ಭಾಗವಾಗಿ ಅವರಿಗೆ ದಾರಿ ಬಿಟ್ಟು, ಗುಡಿಯಲ್ಲಿ ಮಂತ್ರಪುಷ್ಪ ಹೇಳುವಾಗ ಜನ ಎರಡು ಭಾಗವಾಗಿ ನಿಲ್ಲುವಂತೆ ನಿಂತರು. ಅಂದೋ ಆ ಮಾರನೆಯ ದಿನವೋ ರಾನಡೆ ಸೊಸೈಟಿಯ ಆಶ್ರಯದಲ್ಲಿ ಉಪನ್ಯಾಸ ಏರ್ಪಡಿಸಿತ್ತೆಂದು ತಿಳಿಸುವ ಹಸ್ತಪತ್ರಿಕೆ ಹಂಚಿಕೆಯಾಗಿದ್ದವು. ಅದರಲ್ಲಿ ರಾಮಚಂದ್ರಶಾಸ್ತ್ರಿಯ ಹೆಸರು. ನನ್ನಂಥ ಹಳ್ಳಿಯ ಗುಗ್ಗುಗಳಿಗೆ ಅದಕ್ಕಿಂತ ಏನು ಬೇಕು ಬೆರಗಾಗಲು?

ಶಾಸ್ತ್ರಿಯನ್ನು ನೋಡಿ ನಾನು ಹಿಗ್ಗಿದೆ.

ಕೆಲವು ವರ್ಷಗಳಾದ ಮೇಲೆ ಅವರೆಲ್ಲ ನನಗೆ ಆಪ್ತಸ್ನೇಹಿತರಾದರು. ಶಾಸ್ತ್ರಿ, ಕೃಷ್ಣಮೂರ್ತಿ, ಬೇಲೂರ್, ಸುಬ್ಬರಾಯಪ್ಪ-ನಾವು ಪಟ್ಟ ಲೀಲೆಗಳನ್ನು ವರ್ಣಿಸಲು ಇದು ಸ್ಥಳವಲ್ಲ.

# ಅವಸಾನ

ರಾನಡೆ ಸೊಸೈಟಿ ಐದಾರು ವರ್ಷಗಳಾದ ಬಳಿಕ ಮಾಯವಾಯಿತು. ಅದಕ್ಕೆ ಕಾರಣವಾದ ಒಂದು ಭಾಗವನ್ನು ನಾನು ಕೇಳಿದ್ದೇನೆ. ಸೊಸೈಟಿಯು ನಾಟಕವಾಡಿ ಐದು ನೂರು ಆರು ನೂರು ರೂಪಾಯಷ್ಟು ಹಣವನ್ನು ಶೇಖರಿಸಿಟ್ಟುಕೊಂಡಿತ್ತಂತೆ. ಆ ಸೊಸೈಟಿಯ ಸದಸ್ಯರಲ್ಲಿ ಒಬ್ಬಾನೊಬ್ಬಾತನಿಗೆ ವಿದೇಶಪ್ರವಾಸದ ಅವಕಾಶ ದೊರಕಿತಂತೆ. ಆಗ ಆತನು ಕೋಶಾಧಿಕಾರಿಯಾಗಿದ್ದನಂತೆ. ಆತನ ವಶದಲ್ಲಿತ್ತು ಹಣ. ಆತ ಪರಸ್ಥಳಕ್ಕೆ ಹೋಗುವ ಅವಸರದಲ್ಲಿ ಮರೆವಿನಿಂದ ಆ ಹಣವನ್ನು ತೆಗೆದುಕೊಂಡು ಯಾರಿಗೂ ತಿಳಿಸದೆ ಹೊರಟು ಹೋದನಂತೆ. ಆತ ಹಿಂತಿರುಗಿ ಬರಲು ಐದಾರು ವರ್ಷವಾಯಿತಂತೆ. ಆ ವೇಳೆಗೆ ಎಲ್ಲ ಮರೆತುಹೋಗಿತ್ತು. ಲೆಕ್ಕಗಳ ಪುಸ್ತಕಗಳೂ ಯಾರಲ್ಲಿಯೂ ಇರಲಿಲ್ಲ.

# ರಾನಡೆ ಕಂಪನಿ

ರಾನಡೆ ಸೊಸೈಟಿ ಹೀಗೆ ಮುಗಿದ ಮೇಲೆ ಒಂದೆರಡು ವರ್ಷ ಕಳೆದ ಬಳಿಕ ಸುಬ್ಬರಾಯಪ್ಪನವರು ‘ರಾನಡೆ ಕಂಪನಿ’ ಎಂಬ ವ್ಯಾಪಾರದ ಮಳಿಗೆಯನ್ನು ಪ್ರಾರಂಭಿಸಿದರು. ಇದು ಬಹುಶಃ ೧೯೦೭-ರಲ್ಲಿ.

ಹಿಂದೆ ರಾನಡೆ ಸೊಸೈಟಿಯಲ್ಲಿ ಒಂದು ಸೊಗಸಾದ ರಾನಡೆ ಭಾವಚಿತ್ರವಿತ್ತು. ಅದು ವರ್ಣರಂಜಿತವಾದದ್ದು. ದೊಡ್ಡ ಆಕಾರದ್ದು. ಇದನ್ನು ರಾನಡೆ ಕಂಪೆನಿಯಲ್ಲಿ ನಾನು ನೋಡಿದ್ದೆ. ನಮ್ಮ ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿದ ಮೇಲೆ ಆ ರಾನಡೆಯವರ ಚಿತ್ರವನ್ನು ಇಲ್ಲಿಗೆ ಕೊಡಬೇಕೆಂದು ನಾನು ಸುಬ್ಬರಾಯಪ್ಪನವರನ್ನು ಬೇಡಿಕೊಂಡೆ. ಅವರು ನಿಟ್ಟುಸಿರು ಸೆಳೆದು, ತಮ್ಮ ಪ್ರಯತ್ನಗಳಿಗಾದ ಗತಿಯನ್ನು ಹೇಳಿ ದುಃಖಪಟ್ಟರು. ಆ ಭಾವಚಿತ್ರ ಎಲ್ಲಿ ಹೋಯಿತೋ ಅವರಿಗೆ ತಿಳಿದಿರಲಿಲ್ಲ. ಅದು ಅವರ ಕೈಯಲ್ಲಿ ಅಥವಾ ಅವರ ಕೈಗೆ ಸಿಕ್ಕುವಷ್ಟು ಸಮೀಪದಲ್ಲಿದ್ದಿದ್ದರೆ ಅವರು ಅದನ್ನು ಗೋಖಲೆ ಸಂಸ್ಥೆಗೆ ಕೊಟ್ಟಿರುತ್ತಿದ್ದರೆಂದು ನನ್ನ ಮನಸ್ಸಿಗೆ ನಿಸ್ಸಂದೇಹವಾಗಿದೆ.

ಬೆಂಗಳೂರಿನಲ್ಲಿ ರಾನಡೆ ಸೊಸೈಟಿ ಇತ್ತು. ಅದು ಮಾಡಿದ ಕೆಲಸದ ಚರಿತ್ರೆ ಈಗ ದೊರೆಯುವಂತಿಲ್ಲ.

# ಮಿತ್ರಸಂಘ

ರಾನಡೆ ಸೊಸೈಟಿ ದುರ್ಬಲವಾಗುತ್ತಿದ್ದಾಗ ಪ್ರಾಬಲ್ಯಕ್ಕೆ ಬಂದದ್ದು ಫ್ರೆಂಡ್ಸ್ ಯೂನಿಯನ್ ಅಥವಾ ಮಿತ್ರ ಸಂಘ. ಇದನ್ನು ನಡಸುತ್ತಿದ್ದವರು ಎಲ್. ಸ್ವಾಮಿರಾಯರು; ಅವರ ತಮ್ಮಂದಿರಾದ, ಕಾಲಕ್ರಮದಲ್ಲಿ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಎಲ್. ರಾಮರಾಯರು; ಕೆಲವು ಕಾಲ ಮಂತ್ರಿಯಾಗಿದ್ದ ಕೆ.ಟಿ. ಭಾಷ್ಯಂ ಅವರು; ಮುಸ್ತಫಾ ಎಂಬ ಒಬ್ಬರು-ಇಷ್ಟು ಮಂದಿ ನನಗೆ ತಿಳಿದವರು. ಈ ಸಂಘದ ಕಾರ್ಯಸ್ಥಾನ ಲಂಡನ್ ಮಿಷನ್ ಹೈಸ್ಕೂಲ್-ಮೈಸೂರು ಬ್ಯಾಂಕಿಗೆ ಸಮೀಪವಾದ ನ್ಯೂ ಇಂಗ್ಲಿಷ್ ಹೈಸ್ಕೂಲ್ ಕಟ್ಟಡದಲ್ಲಿ ಪಶ್ಚಿಮ ದಿಕ್ಕಿನಿಂದ ಮೊಟ್ಟಮೊದಲನೆಯ ಸಭಾಮಂದಿರ.

ಸಾಮಾನ್ಯವಾಗಿ ಪ್ರತಿ ಶನಿವಾರವೂ ಅಥವಾ ಭಾನುವಾರವೂ ಅಲ್ಲಿ ಸಭೆ ಸೇರುತ್ತಿತ್ತು. ಉಪನ್ಯಾಸದ ವಿಷಯಗಳು-ಇಂಗ್ಲಿಷ್ ಸಾಹಿತ್ಯ, ಆಗಾಗ ಸಂಸ್ಕೃತ ಸಾಹಿತ್ಯ, ದೇಶ ವಿದೇಶಗಳ ಚರಿತ್ರ ಪ್ರಕರಣಗಳು, ಮಹಾಪುರುಷರ ಜೀವಿತ ವೃತ್ತಾಂತಗಳು, ವಿಜ್ಞಾನ. ಉಪನ್ಯಾಸಕರಲ್ಲಿ ಆಗಾಗ ಐರೋಪ್ಯ ವಿದ್ವಾಂಸರುಗಳೂ ಬರುತ್ತಿದ್ದರು: ಪ್ರೊಫೆಸರ್ ಸೆಲ್. ಪ್ರೊ ॥ ಮೆಕಾಲ್ಟೈನ್, ಕ್ವಿಂಟನ್ ಆಂಡರ್ಸನ್, ತಾತಾ ಇನ್‌ಸ್ಟಿಟ್ಯೂಟಿನ ಡಾ ॥ ಸೆಡ್‌ಬರೋ, ಅಷರ್ ಮೊದಲಾದವರು ಉಪನ್ಯಾಸಕರು. ಹಾಗೆಯೇ ಜೆ. ಸಿ. ಚಕ್ರವರ್ತಿ, ಕೆ. ಕೃಷ್ಣಯ್ಯಂಗಾರ್, ಎಂ. ಜಿ. ವರದಾಚಾರ್, ಕೆ. ರಾಮಚಂದ್ರರಾವ್ ಮೊದಲಾದ ಪ್ರಮುಖ ಜನರನ್ನು ಭಾಷಣಕಾರರಾಗಿಯೋ, ಅಧ್ಯಕ್ಷರಾಗಿಯೋ ಆಹ್ವಾನಿಸುತ್ತಿದ್ದರು. ಶ್ರೋತೃ ಸಮಾಜವು ಸಭಾಮಂದಿರದ ಭರ್ತಿ ಇರುತ್ತಿತ್ತು. ವೇದಿಕೆಯ ಹತ್ತಿರ ಕುಳಿತುಕೊಳ್ಳಬೇಕೆಂದು ಎಷ್ಟೋ ಮಂದಿ ಹದಿನೈದಿಪ್ಪತ್ತು ನಿಮಿಷ ಮುಂಚಿತವಾಗಿಯೇ ಬಂದಿರುತ್ತಿದ್ದರು.

# ‘ಷೆಲ್ಲಿ ಡೇ’

ಈ ಸಂಘದವರು ‘ಷೇಕ್‌ಸ್ಪಿಯರ್ ಡೇ’ ‘ಕಾಳಿದಾಸ ಡೇ’ ಎಂಬ ಹೆಸರಿನ ಉತ್ಸವಗಳನ್ನೇರ್ಪಡಿಸಿ ಆಯಾ ಕವಿಯನ್ನು ಕುರಿತು ಮೂರು ಮಂದಿ ನಾಲ್ಕು ಮಂದಿ ಭಾಷಣ ಮಾಡುವಂತೆ ಏರ್ಪಡಿಸುತ್ತಿದ್ದರು. ಈ ಭಾಷಣಗಳಿಂದ ಜನಸಾಮಾನ್ಯಕ್ಕೆ ಆಯಾ ಕವಿಯ ಕಾವ್ಯ ಬೋಧನೆಗಳನ್ನು ಕುರಿತು ಅಷ್ಟಿಷ್ಟು ತಿಳಿವಳಿಕೆ ಬರುತ್ತಿತ್ತು.

ಒಂದಾನೊಂದು ವರ್ಷ ‘ಷೆಲ್ಲಿ ಡೇ’ ಎಂಬುದನ್ನು ಆಚರಿಸಿದರು. ಅಂದು ಸೇಲ್ ಮಹಾಶಯರು ಅಧ್ಯಕ್ಷರಾಗಿದ್ದರು. ಎಂ. ಜಿ. ವರದಾಚಾರ್ಯರು ಷೆಲ್ಲಿಯ ಜೀವನ ಚರಿತ್ರೆಯನ್ನು ಕುರಿತು ಉಪನ್ಯಾಸ ಮಾಡಿದರು; ಅವರು ಒಂದು ತಮಾಷೆ ಮಾಡಿದರು. ಅವರು ಹೇಳಿದರು:

“ನಾನು ಲಾಯರು. ದಿನದಿನವೂ ಕೋರ್ಟಿನಲ್ಲಿ ದುಡಿಯಬೇಕಾದವನು. ಈ ಹೊತ್ತು ಹಾಗೆ ಕೋರ್ಟುಗಳಲ್ಲಿ ಮಾತನಾಡಿ ದಣಿದು ಇಲ್ಲಿಗೆ ಬಂದಿದ್ದೇನೆ. ಆದದ್ದರಿಂದ ಯಾವ ಗಹನ ವಿಚಾರಕ್ಕೂ ನಾನು ಕೈ ಹಾಕಲಾರೆ. ಇಲ್ಲಿ ನನ್ನ ಸ್ನೇಹಿತ ಕುಳಿತಿದ್ದಾನೆ. ಆತ ಒಂದು ಗಹನ ವಿಚಾರವನ್ನು ಹೇಳಬೇಕೆಂದು ನಾನು ವಿಧಾಯಕ ಮಾಡಿದ್ದೇನೆ, ನೀವು ಕುತೂಹಲದಿಂದ ಕೇಳುವಿರಿ.”

ಹೀಗೆ ಹೇಳಿ ನನ್ನ ಕಡೆಗೆ ಬೆಟ್ಟು ತಿರುಗಿಸಿದರು. ನಾನು ಷೆಲ್ಲಿ ಕವಿಯ ‘ಆಡೊನೇಯ್’ ಎಂಬ ಕಾವ್ಯವನ್ನೂ ಅದರಲ್ಲಿಯ ತತ್ತ್ವವನ್ನೂ ಕುರಿತು ನಾಲ್ಕು ಮಾತನ್ನಾಡಿದೆ. ಹೇಳಬೇಕೆಂದಿದ್ದ ಅಂಶಗಳನ್ನು ಗುರುತು ಮಾಡಿಕೊಂಡು ಹೋಗಿದ್ದೆ. ಆದದ್ದರಿಂದ ಹೆಚ್ಚು ಆಭಾಸ ನಡೆಯಲಿಲ್ಲವೆಂದುಕೊಂಡಿದ್ದೇನೆ.

ನನ್ನ ತರುವಾಯ ಆ ಸಂಜೆ ಮಾತನಾಡಿದ ಪ್ರೊ ॥ ಮೆಕಾಲ್ಪೈನ್, ಆಗಿನ್ನೂ ಆತ ಇಂಡಿಯಕ್ಕೆ ಬಂದಿದ್ದರ ಹೊಸತು. ಬಹುಶಃ ಈ ಕಾರಣದಿಂದ, ಆತನಿಗೆ ವರದಾಚಾರ್ಯರ ಮಾತನ್ನೂ ನನ್ನ ಮಾತನ್ನೂ ಕೇಳಿ ಆಶ್ಚರ್ಯವಾಯಿತಂತೆ-ಈ ದೇಶದ ಜನ ಇಂಗ್ಲಿಷ್ ಇಷ್ಟು ಚೆನ್ನಾಗಿ ಮಾತನಾಡುತ್ತಾರೆಯೆ ಎಂದು.

ಅಧ್ಯಕ್ಷರಾಗಿದ್ದ ಪ್ರೊ ॥ ಫ್ರಾಂಕ್ ಆರ್. ಸೇಲ್ ಅವರು ‘ಆಡೊನೇಯ್’ ಕಾವ್ಯದಲ್ಲಿ ಆತ್ಮವಿಚಾರಕವಾದ ವಾಕ್ಯಗಳು ತಮಗೆ ಚೆನ್ನಾಗಿ ಅರ್ಥವಾಗಿರಲಿಲ್ಲವೆಂದೂ ನನ್ನ

ಉಪನ್ಯಾಸವನ್ನು ಕೇಳಿದ ಮೇಲೆ ಅದು ಕೊಂಚ ಕೊಂಚ ಅರ್ಥವಾದಂತೆ ತೋರಿತೆಂದೂ ಅಪ್ಪಣೆ ಕೊಟ್ಟರು.

ಒಟ್ಟಿನಮೇಲೆ ಆ ಸಭೆ ಚೆನ್ನಾಗಿ ನಡೆಯಿತೆಂದು ಜನ ಹೇಳಿಕೊಂಡರು.

ಕಾಲಕ್ರಮದಲ್ಲಿ ಈ ಸಂಘದ ಕಾರ್ಯಕರ್ತರು ಬೇರೆ ಬೇರೆ ವೃತ್ತಿಗಳಿಗೆ ಹೋದದ್ದರಿಂದ ಚಾಲಕ ಬಲ ತಗ್ಗಿತು. ರಾಮರಾಯರೂ ವಿದ್ಯಾರ್ಥಿ ದಶೆಯಲ್ಲಿದ್ದರು. ಅವರ ಶಾಸ್ತ್ರವ್ಯಾಸಂಗ ಕಾರಣದಿಂದ ಅವರ ಗಮನ ಬೇರೆ ಕಡೆ ಹೋಗಬೇಕಾಯಿತು. ಅವರು ವಿದ್ಯಾರ್ಥಿಗಳಿಗೆ ಆದರ್ಶರಾಗಿರಬೇಕಾದವರು. ತಮ್ಮ ಶಾಸ್ತ್ರದ ಅಧ್ಯಯನದಲ್ಲಿ ಅವರ ದಕ್ಷತೆ ಆಗಲೇ ಹೆಸರುವಾಸಿಯಾಗಿತ್ತು. ಭಾಷ್ಯಂ ಅವರು ಲಾ ವ್ಯಾಸಂಗದ ಕಡೆ ಹೊರಟರು; ಆಮೇಲೆ ವಕೀಲಿ, ರಾಜಕೀಯ. ಮುಸ್ತಫಾ ಅವರು ಆಕಾರದಲ್ಲಿ ಸುಂದರರು. ಪೋಷಾಕಿನಲ್ಲಿ ಸೊಗಸು ಮತ್ತು ಠೀವಿ. ನಯವಿನಯಗಳಲ್ಲಿ ಎಲ್ಲರಿಗೂ ಒಪ್ಪಿತವಾಗುವಂಥವರು. ಅವರ ಮಾತೂ ಬಹು ಸೊಗಸು. ಅವರು ಮದರಾಸು ಸೀಮೆಯಲ್ಲಿ ಯಾವುದೋ ಪೊಲೀಸ್ ಹುದ್ದೆಯನ್ನು ಸಂಪಾದಿಸಿ ಹೊರಟುಹೋದರು.

# ವಿಸರ್ಜನೆ

ಹೀಗೆ ಸಂಘವು ಬಡವಾಯಿತು.

ಸಂಘ ನಡಸಿದ ಕಾರ್ಯ ಉಪನ್ಯಾಸ ಮಾತ್ರವೇ ಅಲ್ಲ. ಆಗಾಗ ಚರ್ಚಾಕೂಟಗಳನ್ನು ಏರ್ಪಡಿಸುತ್ತಿತ್ತು. ಕಾವ್ಯ ಕಂಠಪಾಠ ಸ್ಪರ್ಧೆಗಳನ್ನೂ ಏರ್ಪಡಿಸುತ್ತಿತ್ತು. ಬಹು ವಿಧವಾಗಿ ಜ್ಞಾನಸೇವೆ, ಸಾಹಿತ್ಯ ಸೇವೆಗಳನ್ನು ನಡಸಿ ಕೃತಾರ್ಥವಾದ ಸಂಸ್ಥೆ ಅದು. ಅದು ವಿಸರ್ಜನ ಮಾಡಿಕೊಳ್ಳುವ ಕಾಲ ಬಂದಾಗ ಆ ಸಂಸ್ಥೆಯ ವಶದಲ್ಲಿದ್ದ ಮೊಬಲಗನ್ನು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘಕ್ಕೆ ಒಪ್ಪಿಸಿ ಆ ಮೊಬಲಗಿನ ಬಡ್ಡಿಯಿಂದ ವರ್ಷೇ ವರ್ಷೇ ಬಹುಮಾನ ಕೊಡುವಂತೆ ಏರ್ಪಡಿಸಬೇಕೆಂದು ಅಪೇಕ್ಷಿಸಿತು. ಪ್ರೊ ॥ ಎ. ಆರ್. ಕೃಷ್ಣಶಾಸ್ತ್ರಿಗಳ ಕಾಲದಲ್ಲಿ ಅವರು ಅದನ್ನು ಒಪ್ಪಿಕೊಂಡರೆಂದು ನನ್ನ ಜ್ಞಾಪಕ.

# ೧೧ ಭಜನೆಯ ಸಂಸ್ಥೆಗಳು

ಈಗ ನಾನು ಬರೆಯುತ್ತಿರುವುದು ೧೯೦೫-೧೦ರ ಸುಮಾರಿನ ಬೆಂಗಳೂರಿನ ಪರಿಸ್ಥಿತಿಯನ್ನು. ಆ ಸಮಯದಲ್ಲಿ ಸಂಗೀತ ಸಂಸ್ಥೆಗಳೂ ಕೆಲವಿದ್ದವು. ಆಗ ದೊಡ್ಡಣ್ಣನವರ ಸಭಾಮಂದಿರ ಇನ್ನೂ ಆಗಿರಲಿಲ್ಲ. ಸಾಹಿತ್ಯ ವಿಜ್ಞಾನಗಳಿಗೆ ಲಂಡನ್ ಮಿಷನ್ ಹೈಸ್ಕೂಲು ಕೇಂದ್ರವಾಗಿದ್ದಂತೆ, ಸಂಗೀತಕ್ಕೆ ಚಿಕ್ಕಪೇಟೆಯಲ್ಲಿಯ ಸಾಹುಜಿಯವರ ಮಹಡಿ ಕೇಂದ್ರವಾಗಿತ್ತು. ಬೆಂಗಳೂರು ನಾಗರತ್ನಮ್ಮನವರ ಕಚೇರಿ, ವೀಣೆ ಶೇಷಣ್ಣನವರದು, ಬಿಡಾರ ಕೃಷ್ಣಪ್ಪನವರದು, ಕೆ. ವಾಸುದೇವಾಚಾರ್ಯರದು-ಈ ಕಚೇರಿಗಳೆಲ್ಲ ನಡೆಯುತ್ತಿದ್ದದ್ದು ಸಾಹುಜೀಯವರ ಮನೆಯ ಮಹಡಿಯ ಮೇಲೆ. ಆ ಕಚೇರಿಗಳನ್ನು ನಾನು ಲೆಕ್ಕವಿಲ್ಲದಷ್ಟು ಕೇಳಿದ್ದೇನೆ.

## ಸನ್ಮಾರ್ಗ ಪ್ರವರ್ತಕ ಸಭೆ

ಆ ಸ್ಥಳದಲ್ಲಿ ಸನ್ಮಾರ್ಗ ಪ್ರವರ್ತಕ ಸಭಾ ಎಂಬ ಒಂದು ಸಂಸ್ಥೆ ನಡೆಯುತ್ತಿತ್ತು. ಅದರ ಚಾಲಕರು ಮುಖ್ಯವಾಗಿ ದಿವಾನ್ ಕಚೇರಿಯ ಉದ್ಯೋಗಸ್ಥರು ಕೆಲವರು ಮತ್ತು ಇತರರು. ಭಾಗವತದ ನರಸಿಂಹಯ್ಯನವರು, ನಾರಾಯಣರಾಯರು (ಇವರು ಬಿ.ಎಂ. ಶ್ರೀಕಂಠಯ್ಯನವರ ಬಂಧುಗಳು), ಜೆ. ಶ್ರೀನಿವಾಸಯ್ಯನವರು, ಗಂಜಾಂ ಗುಂಡಪ್ಪನವರು, ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು, ಇವರೆಲ್ಲ ಕೊಂಚ ಕೊಂಚ ಸಂಗೀತ ರಸಿಕರು, ಪ್ರತಿ ಶನಿವಾರವೂ ಭಜನೆ ನಡಸುವರು. ರಾಮೋತ್ಸವ ಕೃಷ್ಣಜಯಂತಿಗಳನ್ನೂ ಕೂಡಿದಷ್ಟು ವಿಜೃಂಭಣೆಯಿಂದ ನಡಸುವರು. ಸಾಧುಸಂತರನ್ನೂ ಯತಿಗಳನ್ನೂ ಗೌರವಿಸುವರು. ಆ ಕಾಲದಲ್ಲಿ ಕೂಡಲಿ ಮಠದ ಸಾಧುಗಳೊಬ್ಬರು ಬೆಂಗಳೂರಿಗೆ ಬಂದು ಹಿಂದೂ ಕಾಫಿ ಕ್ಲಬ್ಬಿನ ಅಪ್ಪಣ್ಣನವರ ಮನೆಯಲ್ಲಿ ಬಿಡಾರ ಮಾಡುತ್ತಿದ್ದರು. ಈ ಸ್ವಾಮಿಗಳ ಸಮಾಧಿ ಚಾಮರಾಜಪೇಟೆಯ ಐದನೆಯ ಬೀದಿಯಲ್ಲಿ ಮೇಲುಗಡೆ ಇದೆಯೆಂದು ಕೇಳಿದ್ದೇನೆ. ಆ ಸ್ವಾಮಿಗಳ ಪ್ರಿಯಶಿಷ್ಯರಲ್ಲೊಬ್ಬರಾದ ರಾಮರಾವ್ ಎಂಬವರು ಸನ್ಮಾರ್ಗ ಪ್ರವರ್ತಕ ಸಭೆಗೆ ಸೇರಿದ್ದರು. ಆ ಸ್ವಾಮಿಗಳು ದಿನವೂ ಭಜನೆ ನಡಸುವರು. ಅದಕ್ಕಾಗಿ ನೂರಾರು ಜನ ಬಂದು ಅಲ್ಲಿ ಸೇರುತ್ತಿದ್ದರು.

ಅದು ಭಜನೆಯ ಉತ್ಸಾಹದ ಕಾಲ. ಬೆಂಗಳೂರಿನಲ್ಲಿ ಭಜನೆ ಪದ್ಧತಿಗೆ ಒಂದು ಹೊಸ ಚೈತನ್ಯವನ್ನು ತಂದವರು ವೆಂಕಟಸುಬ್ಬರಾಯರೆಂಬವರು. ಇವರು ರೈಲ್ವೆ ಗುಡ್ಸ್ ಷೆಡ್ಡಿನಲ್ಲಿ ಉದ್ಯೋಗಸ್ಥರಾಗಿದ್ದರು. ಅವರ ಮನೆ ಇದ್ದದ್ದು ಚಿಕ್ಕಪೇಟೆ, ಬಳೇಪೇಟೆ ಸೇರುವ ಕಡೆಯಿಂದ ಕೊಂಚ ಪಶ್ಚಿಮಕ್ಕೆ. ನಾನು ಆ ಭಜನೆಗೆ ಕೆಲವು ಸಾರಿ ಹೋಗಿದ್ದೇನೆ. ಬಹು ಮಂದಿ ಸೇರುತ್ತಿದ್ದರು. ವೆಂಕಟಸುಬ್ಬರಾಯರು ಮಡಿಯುಟ್ಟು ಪೂಜೆ ಮಾಡಿ ಅನಂತರ ಎದ್ದುನಿಂತು ತಾಳ ಸದ್ದು ಮಾಡಿ,

ಜೈ ರಘುವೀರ ಸಮರ್ಥ್ ॥
ರಘುಪತಿ ರಾಘವ ರಾಜಾರಾಮ್ ॥

ಮೊದಲು ಮಾಡುವರು. ಏಳೆಂಟು ಮಂದಿ ಆ ಪಲ್ಲವಿಯನ್ನು ಹೇಳುತ್ತ ಅವರನ್ನು ಅನುಸರಿಸಿಕೊಂಡು ಮಂಡಲಾಕಾರವಾಗಿ ತಿರುಗುವರು. ಇದು ಒಂದರ್ಧ ಘಂಟೆ. ಆ ಬಳಿಕ ಹಾಡು, ಕೀರ್ತನೆಗಳು. ಇದೆಲ್ಲ ಮುಗಿದ ಮೇಲೆ ಪ್ರಸಾದ.

ಅಕ್ಕಿಪೇಟೆಯ ಲಕ್ಷ್ಮೀನೃಸಿಂಹಸ್ವಾಮಿ ಭಜನೆ ಮಂದಿರದ ವಿಷಯವನ್ನು ದುಷ್ಟ ಬುದ್ಧಿ ಸೂರಪ್ಪನವರ ಪ್ರಕರಣದಲ್ಲಿ ಅರಿಕೆ ಮಾಡಿದ್ದೇನೆ.

# ಸೀತಾರಾಮ ಮಂದಿರ

ಈ ಸುಮಾರಿನಲ್ಲಿ ಹುಟ್ಟಿದ ಇಂಥ ಇನ್ನೊಂದು ಸಂಸ್ಥೆ ಅಲಸೂರು ಪೇಟೆಯ ಸೀತಾ ರಾಮಮಂದಿರ. ಇದನ್ನು ಪ್ರಾರಂಭಿಸಿದವರು ವಿ. ಬಿ. ನಾರಾಯಣರಾವ್ ಎಂಬವರು ಮತ್ತು ಎಂ. ಕೃಷ್ಣರಾಯರು. ಅವರ ಜೊತೆಗೆ ಅಲಸೂರು ಪೇಟೆಯ ವಾದ್ಯಾರುಗಳು, ಟಿ. ವೆಂಕಟರಾಮಯ್ಯ ಎಂಬಾತ, ನನ್ನ ಪೂಜ್ಯ ಬಂಧು ವೆಂಕಪ್ಪಯ್ಯ-ಇವರೆಲ್ಲ ಇದ್ದರು. ಕೃಷ್ಣರಾಯರೆಂಬವರು ಸ್ಪೆನ್ಸರ್ ಕಂಪನಿಯ ಲೆಕ್ಕದ ಇಲಾಖೆಯ ಮ್ಯಾನೇಜರಾಗಿದ್ದರು. ನಾರಾಯಣರಾಯರೂ ವೆಂಕಟರಾಮಯ್ಯನವರೂ ಕೃಷ್ಣರಾಯರ ಸಹೋದ್ಯೋಗಿಗಳು. ಕೃಷ್ಣರಾಯರು, ಪರಮ ಪರಿಶುದ್ಧರು, ವಿನಯಶೀಲರು ಅಂತರಂಗದಲ್ಲಿ ಅವರು ವೇದಾಂತನಿಷ್ಠರು. ಅಲಸೂರುಪೇಟೆಯಲ್ಲಿದ್ದ ವಿದ್ವಾನ್ ಸೀತಾರಾಮಶಾಸ್ತ್ರಿಗಳವರಲ್ಲಿ ವೇದಾಂತಶಾಸ್ತ್ರ ವ್ಯಾಸಂಗಕ್ಕಾಗಿ ಹೋಗುತ್ತಿದ್ದರು. ವಿ. ಬಿ. ನಾರಾಯಣರಾಯರು ಸಂಗೀತಪ್ರಿಯರು. ಅವರೂ ವೆಂಕಪ್ಪಯ್ಯನವರೂ ಸಂಗೀತ ವಿದ್ವಾನ್ ದಕ್ಷಿಣಾಮೂರ್ತಿ ಶಾಸ್ತ್ರಿಗಳ ಶಿಷ್ಯರು.

ಈ ಐದಾರು ಮಂದಿಯ ಉತ್ಸಾಹದಿಂದ ಹುಟ್ಟಿದ್ದು ಸೀತಾರಾಮಮಂದಿರ. ವಿ. ಬಿ. ನಾರಾಯಣರಾಯರ ತದೇಕನಿಷ್ಠೆಯಿಂದ ಅದು ಬೆಳೆದು ಜನಪ್ರಿಯವಾಯಿತು. ಒಳ್ಳೊಳ್ಳೆಯ ಸಂಗೀತಕಚೇರಿಗಳು ಅಲ್ಲಿಯೂ ನಡೆಯುತ್ತಿದ್ದವು. ಹಾಗೆಯೇ ಪುರಾಣ, ಹರಿಕಥೆ ಇತ್ಯಾದಿ ಸಂಗೀತ ಸಾಹಿತ್ಯ ಕಾರ್ಯಗಳು.

# ಶ್ರೀನಿವಾಸ ಸ್ವಾಮಿಗಳು

ಬೆಂಗಳೂರಿನಲ್ಲಿ ಭಜನೆ, ಹರಿಕಥೆಗಳ ಉತ್ಸಾಹ ಹೆಚ್ಚಾಗಿದ್ದ ಕಾಲದಲ್ಲಿ, ಸುಮಾರು ೧೯೦೯-೧೦ರ ವೇಳೆಗೆ-ಶ್ರೀನಿವಾಸ ಬ್ರಹ್ಮಾನಂದದೇಶಿಕರೆಂಬವರೊಬ್ಬರು ಬೆಂಗಳೂರಿನಲ್ಲಿ ಕಾಣಿಸಿಕೊಂಡರು. ಅವರ ಹೆಸರಿನ ಸರಿಯಾದ ರೂಪ ನನಗೆ ಮರೆತುಹೋಗಿದೆ.

ಅವರು ತಮಿಳುದೇಶದವರೆಂದು ತೋರುತ್ತದೆ. ಆಸಾಮಿಯ ಆಕಾರ ವರ್ಚಸ್ಸುಳ್ಳದ್ದು. ಎತ್ತರದಲ್ಲಿ, ದಪ್ಪದಲ್ಲಿ, ಧಡೂತಿ ಮನುಷ್ಯ.

ನಾನು ಆತನ ಹರಿಕಥೆಯನ್ನು ಮೊದಲು ಕೇಳಿದಾಗ ಆತ ಬೆಂಗಳೂರಿಗೆ ತಕ್ಕಮಟ್ಟಿಗೆ ಹಳಬರಾಗಿದ್ದರು. ಅವರಿಗೆ ಸಂಗೀತದ ಪರಿಚಯ ಅಷ್ಟೇನೂ ಹೆಚ್ಚಾಗಿದ್ದಂತೆ ತೋರಲಿಲ್ಲ. ತಮಿಳಿನಲ್ಲಿ ವಾಗ್ಧೋರಣೆ ಚೆನ್ನಾಗಿತ್ತು.

ಆತನಿಗೆ ಮೊದಮೊದಲು ಆಶ್ರಯಕೊಟ್ಟವರು ಬಿ. ವಿ. ಲಕ್ಷ್ಮಣರಾಯರೆಂದು ನನ್ನ ಜ್ಞಾಪಕ. ಬಿ. ವಿ. ಲಕ್ಷ್ಮಣರಾಯರು ದೊಡ್ಡಮನುಷ್ಯರು. ದಿವಾನ್ ಕಚೇರಿಯಲ್ಲಿ ಸೂಪರಿಂಟೆಂಡೆಂಟರಾಗಿದ್ದರು. ನಿಃಸ್ಪೃಹರು, ಪ್ರಾಮಾಣಿಕರು ಮತ್ತು ಕಾರ್ಯದಕ್ಷರು, ಉಪಕಾರಶೀಲರು, ಮೃದುವಾದ ಸ್ವಭಾವ, ಪರಮ ಸಾತ್ತ್ವಿಕರು. ಲಕ್ಷ್ಮಣರಾಯರು ಭಗವದ್ಭಕ್ತರು, ವೇದಾಂತಶಾಸ್ತ್ರವನ್ನು ನೋಡಿದ್ದವರು. ಸಂಗೀತಪ್ರಿಯರು. ಅವರು ಶಂಕರಪುರಕ್ಕೆ ಬಂದ ತರುವಾಯ ಶನಿವಾರ ತಪ್ಪದೆ ಅವರ ಮನೆಯಲ್ಲಿ ಭಜನೆಯನ್ನು ಏರ್ಪಡಿಸಿದರು.

ನಾನು ಹೇಳುತ್ತಿರುವ ತಮಿಳು ಹರಿಕಥಾಕಾರರ ಕಾಲದಲ್ಲಿ ಲಕ್ಷ್ಮಣರಾಯರು ಅರಳೆ ಪೇಟೆಯಲ್ಲಿ ವಾಸವಾಗಿದ್ದರೆಂದು ನೆನಪು. ಹರಿಕಥೆ ನಡೆದದ್ದು ಅರಳೆಪೇಟೆಯಲ್ಲಿ ಕಂಟ್ರಾಕ್ಟರ್ ಬೈಯಣ್ಣನವರ ಮನೆಯಲ್ಲಿ. ಆಮೇಲೆ ಕೆಲವು ದಿವಸ ಒಕ್ಕಲಿಗರ ಸಂಘದ ಅಚ್ಚಿನ ಕಾರ್ಖಾನೆ ಆ ಕಟ್ಟಡದಲ್ಲಿತ್ತು.

ಶ್ರೀ ಶ್ರೀನಿವಾಸದೇಶಿಕ ಸ್ವಾಮಿಗಳು ಹರಿಕಥೆ ಮಾಡುತ್ತಿದ್ದಾಗ ನಡುನಡುವೆ ಕೀರ್ತನೆಗಳು ಬರುತ್ತಿದ್ದವು. ಆ ಕೀರ್ತನೆಗಳನ್ನು ದಾಸರು ಪಲ್ಲವಿ ಸೂಚಿಸುವರು; ಆ ಸೂಚನೆಯನ್ನು ಭಾಸ್ಕರಪಂತ ನಂಜುಂಡಶಾಸ್ತ್ರಿಗಳು ತೆಗೆದುಕೊಂಡು ಕೀರ್ತನೆಯನ್ನು ಪರಿಷ್ಕಾರವಾಗಿ ಹಾಡುವರು. ನಂಜುಂಡಶಾಸ್ತ್ರಿಗಳವರು ಆಗ ಇನ್ನೂ ತರುಣರು. ಒಳ್ಳೆಯ ಶಾರೀರ.

ಒಳ್ಳೆಯ ತಯಾರಿ ಆಗಿತ್ತು. ಆತ ಹಾಡಿದ ಒಂದು ಕೀರ್ತನೆ ನನಗೆ ಜ್ಞಾಪಕದಲ್ಲಿ ನಿಂತಿದೆ. ಅದು ಗೌರೀಮನೋಹರಿರಾಗದ್ದು:

'ಬ್ರೋವ ಸಮಯಮಿದೇರಾ-ರಾಮಯ್ಯ'

ಈ ಕೀರ್ತನೆಯನ್ನು ಕೇಳಿ ಸಭಿಕರು ಬೆರಗಾದರು.

# ಚೂರ್ಣಿಕೆ

ಒಂದು ದಿನ ಹರಿಕಥೆಯ ಧಾರೆಯ ನಡುವೆ, -ಅದು ಬಹುಶಃ ಗಜೇಂದ್ರ ಮೋಕ್ಷದ ಕಥೆ- ಗಜೇಂದ್ರನು ಭಗವಂತನನ್ನು ಕುರಿತು ಮೊರೆಯಿಡುವ ಸಂದರ್ಭದಲ್ಲಿ ಶ್ರೀನಿವಾಸ ಸ್ವಾಮಿಗಳು ಒಂದು ಬಹು ಸೊಗಸಾದ ಸಂಸ್ಕೃತ ಚೂರ್ಣಿಕೆಯನ್ನು ಹೇಳಿದರು. “ಶ್ರೀಮದಖಿಲಾಂಡ ಕೋಟಿ...” ಹೀಗೆ ಪ್ರಾರಂಭವಾಗಿ “ಕೇಶವಂ... ಮಾಧವಂ... ನಾರಾಯಣಂ... ಪಾರಾಯಣಂ...” ಹೀಗೆ ಮಹಾ ವಿಷ್ಣುವಿನ ಚತುರ್ವಿಂಶತಿ ನಾಮಗಳನ್ನು ಬಳಸಿ ಒಂದೊಂದು ನಾಮಕ್ಕೂ ಒಪ್ಪುವ ಅನುಪ್ರಾಸವನ್ನು ಸೇರಿಸಿ ಒಟ್ಟಿನಲ್ಲಿ ದಶಾವತಾರಲೀಲೆ ಸಂಪೂರ್ಣವಾಗುವಂತೆ ರಚಿಸಿದ್ದದ್ದು ಆ ಚೂರ್ಣಿಕೆ. ನಮ್ಮ ಹೊಸ ನಾಗರಿಕತೆಯ ಸಾಹಿತ್ಯದ ರಭಸದಲ್ಲಿ ಕೊಚ್ಚಿಹೋಗಿರುವ ಕಲೆಗಳ ಪೈಕಿ ಚೂರ್ಣಿಕೆ ಒಂದು.

# ಭಗವದಾವೇಶ

ಶ್ರೀನಿವಾಸಸ್ವಾಮಿಗಳು ಚತುರ್ವಿಂಶತಿ ನಾಮದ ಚೂರ್ಣಿಕೆಯನ್ನು ಆರಭಿ ರಾಗದಲ್ಲಿ ಪ್ರಾರಂಭಿಸಿ ಧ್ವನಿಯನ್ನು ಮೇಲಕ್ಕೆತ್ತುತ್ತಾ ರಾಗಗಳನ್ನು ಬದಲಾಯಿಸಿ ಹೇಳುತ್ತ "ಶ್ರೀಮದಧೋಕ್ಷಜಂ" ಎಂದು ಹೇಳುವ ವೇಳೆಗೆ ಕೈಕಾಲುಗಳು ಅದುರುತ್ತ ಆ ಭಕ್ತಿ ಭರದಲ್ಲಿ ನೆಲಕ್ಕೆ ಬೀಳುವರೇನೋ ಎಂದು ಭಯ ತೋರುವಂತೆ ಆಯಿತು. ಆ ವೇಳೆಗೆ ಸರಿಯಾಗಿ ಇಬ್ಬರು ಮೂವರು ಅವರನ್ನು ಹಿಡಿದುಕೊಂಡು ಕಟ್ಟಡದೊಳಗಡೆಗೆ ಕರೆದುಕೊಂಡು ಹೋದರು. ಆಗ ದೇವರ ಹೆಸರುಹೇಳಿ ಕರ್ಪೂರಾರತಿ ಆಯಿತು. ಸಭೆಯಲ್ಲಿ ನಮ್ಮ ಭಾಸ್ಕರಪಂತ ನಂಜುಂಡಶಾಸ್ತ್ರಿಗಳು ಭಜನೆ ಮಾಡುತ್ತಿದ್ದರು. ಮೂರು ನಾಲ್ಕು ನಿಮಿಷಗಳಾದ ಮೇಲೆ ಶ್ರೀನಿವಾಸಸ್ವಾಮಿಗಳು ಚೇತರಿಸಿಕೊಂಡು ಮತ್ತೆ ಸಭೆಗೆ ಬಂದರು. ಅನಂತರ ಪುನಃ ಮಂಗಳಾರತಿ. ಮಿಕ್ಕ ಕಥೆ, ಕೊಂಚ ಭಜನೆ, ಆಮೇಲೆ ಮಂಗಳ.

ನಾನು ಕೇಳಿದ್ದರಲ್ಲಿ ಆಗಾಗ ಈ ರೀತಿ ಆಗುತ್ತಿತ್ತಂತೆ. ಸ್ವಾಮಿಗಳ ಮೈಮೇಲೆ ಭಗವದಾವೇಶ ಬಂತು ಎಂದು ಜನ ಮತ್ತಷ್ಟು ಭಕ್ತಿಯಿಂದ ಹಣ್ಣುಕಾಯಿ ಕಾಣಿಕೆಯನ್ನು ತಂದರು.

# ಪತ್ರಿಕೆ

ಶ್ರೀನಿವಾಸ ಸ್ವಾಮಿಗಳ ಕೀರ್ತಿ ಪ್ರಶಸ್ತಿಗಳು ಹೀಗೆ ಹರಡಿ ಬೆಳೆಯುತ್ತಿದ್ದಾಗ ಅವರಿಗೆ ಒಂದು ಪತ್ರಿಕೆ ನಡಸಬೇಕೆಂದು ಪ್ರೇರಣೆಯಾಯಿತಂತೆ. ಆ ಪತ್ರಿಕೆ ಇಂಗ್ಲಿಷ್ ಭಾಷೆಯದು. ಅದರ ಹೆಸರೇನೆಂಬುದು ಈಗ ನನಗೆ ಮರೆತು ಹೋಗಿದೆ. “Message of the Vedanta” ಎಂದೋ “Message of Bhagavan” ಎಂದೋ ಆ ಹೆಸರು. ಅದು ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯಲ್ಲಿ ನವರತ್ನ ಮುದ್ರಣಾಲಯದಲ್ಲಿ ಅಚ್ಚಾಗುತ್ತಿತ್ತು. ದಿವಾನ್ ಕಛೇರಿಯಲ್ಲಿ ಗುಮಾಸ್ತರಾಗಿದ್ದ ರಂಗಣ್ಣನವರು ಆ ಪತ್ರಿಕೆಯ ನಿರ್ವಾಹಕರು. ಆ ಪತ್ರಿಕೆಯ ಪ್ರೂಫುಗಳಲ್ಲಿ ಕೆಲವನ್ನು ನಾನು ಆಗಾಗ ಓದುತ್ತಿದ್ದದ್ದುಂಟು. ಸುಮಾರು ಒಂದು ವರ್ಷಕ್ಕೆ ಮೇಲ್ಪಟ್ಟು ಆ ಪತ್ರಿಕೆ ನಡೆಯಿತು. ಆದರೆ ಕೆಲವು ಕಾಲದ ತರುವಾಯ ಅಚ್ಚಿನ ಕಾರ್ಖಾನೆಗೆ ಸಲ್ಲಬೇಕಾಗಿದ್ದ ಹಣ ಸಲ್ಲುವುದರಲ್ಲಿ ತಡವಾಗುತ್ತ ಬಂತು. ಕಾರ್ಖಾನೆಯ ಯಜಮಾನರ ಬರಾತವೂ ಹೆಚ್ಚಿತು. ಸ್ವಾಮಿಗಳು ಅವರ ಕೈಗೆ ಸಿಕ್ಕುತ್ತಿರಲಿಲ್ಲ. ರಂಗಣ್ಣನವರನ್ನು ಹಿಂಸೆ ಮಾಡಬೇಕಾಯಿತು. ಅವರೇನು ಮಾಡಿಯಾರು?

ಒಂದಾನೊಂದು ದಿನ ಸ್ವಾಮಿಗಳು ಊರು ಬಿಟ್ಟುಹೋದರೆಂದು ವರ್ತಮಾನ ಬಂತು.

ಇಲ್ಲಿಗೆ ಮುಗಿಯಿತು. ಶ್ರೀನಿವಾಸದೇಶಿಕ ಸ್ವಾಮಿಗಳ ಬೆಂಗಳೂರು ಪ್ರಕರಣ. ಅವರು ಬಹುಶಃ ಮತ್ತೆಲ್ಲಿಯೋ ಭಕ್ತರಿರುವ ಕಡೆ ಕೈಂಕರ್ಯ ನಡಸುತ್ತಿದ್ದಿರಬಹುದು.

# ೧೨ ಅನಾಮಧೇಯ ಗೋಷ್ಠಿ

೧೯೧೬-೧೭ರ ಸುಮಾರಿನಿಂದ ಕೆಲವು ವರ್ಷ ಬದುಕಿ ಕೆಲಸಮಾಡಿದ ಒಂದು ಬಹು ಸಣ್ಣ ಸಂಸ್ಥೆಯ ಮಾತನ್ನು ಈಗ ಹೇಳುತ್ತೇನೆ. ನಾನು ಆ ಸಂಸ್ಥೆಯ ಸದಸ್ಯನಾಗಿದ್ದೆ.

ಆ ಸಂಸ್ಥೆಯ ಹೆಸರು 'ನಾನ್ ಎಂಟಿಟೀಸ್' (Non-entities) ಅನಾಮಧೇಯರು-ಎಂದು. ಅದು ಪ್ರಾರಂಭವಾದ ಸಮಯ ಸಂದರ್ಭಗಳು ನನಗೆ ಪೂರ್ತಿ ತಿಳಿದಿಲ್ಲ.

೧೯೧೮ರಲ್ಲಿ ಬೆಂಗಳೂರಿನಲ್ಲಿ ಇನ್‌ಫ್ಲುಯೆನ್ಜಾ ವ್ಯಾಧಿಯ ಹಾವಳಿ ಭಯಂಕರವಾಗಿತ್ತಷ್ಟೆ. ಆ ವ್ಯಾಧಿಗೆ ತಡೆಗಟ್ಟುವ ಮತ್ತು ಅದರ ಹಾವಳಿಗೆ ಕೊಂಚಮಟ್ಟಿಗಾದರೂ ಉಪಶಮನಮಾಡುವ ಪ್ರಯತ್ನಗಳು ಅಷ್ಟಿಷ್ಟು ನಡೆದಿದ್ದವು. ಆ ಕಾಲದಲ್ಲಿ ಪುಟ್ಟಣ್ಣ ಶೆಟ್ಟರವರು ಪೌರಸಭೆಯ ಅಧ್ಯಕ್ಷರಾಗಿದ್ದರೆಂದೂ ಡಾ ॥ ಆರ್. ಸುಬ್ಬರಾಯರು ಉಪಾಧ್ಯಕ್ಷರಾಗಿದ್ದರೆಂದೂ ಬೇರೆ ಕಡೆ ಹೇಳಿದ್ದೇನೆ. ಸುಬ್ಬರಾಯರು ರೋಗಿಗಳಿಗೆ ಚಿಕಿತ್ಸೋಪಚಾರಗಳ ಏರ್ಪಾಟನ್ನು ಸಂಘಟನೆ ಮಾಡುವುದರಲ್ಲಿ ಅತ್ಯಂತ ಉತ್ಸಾಹಿಗಳಾಗಿದ್ದರು. ನಾನು ಅವರ ಕಿರಿಯ ಸ್ನೇಹಿತನಾಗಿದ್ದು ಅವರೊಡನೆ ಯತ್ಕಿಂಚಿತ್ತಾದರೂ ಸಹಕರಿಸಬೇಕೆಂದು ತವಕಪಡುತ್ತಿದ್ದೆ. ಆ ಕಾಲದಲ್ಲಿ ನಾನು 'ಕರ್ಣಾಟಕ' ಎಂಬ ಇಂಗ್ಲಿಷ್ ವಾರಾರ್ಧಪತ್ರಿಕೆಯನ್ನು ನಡಸುತ್ತಿದ್ದೆ.

ಹೀಗಿದ್ದಾಗ ಒಂದು ದಿನ ಒಬ್ಬ ಸ್ನೇಹಿತರು ನನ್ನಲ್ಲಿ ಬಂದು ಒಂದು ಮೊಬಲಗನ್ನು ಕಷ್ಟನಿವಾರಣೆಯ ಕಾರ್ಯಕ್ಕೆ ಅದು ಉಪಯೋಗವಾಗತಕ್ಕದ್ದೆಂದು ಹೇಳಿ ನನ್ನ ಕೈಯಲ್ಲಿಟ್ಟರು. ಅದು ಬಹುಶಃ ೧೮೦೦ ಅಥವಾ ೨೦೦೦ ರೂಪಾಯಿ. ಮೊಬಲಗಿನ ನಿಶಿತವಾದ ಗಾತ್ರ ಈಗ ಮರೆತುಹೋಗಿದೆ. ಆ ಮೊಬಲಗನ್ನು ಅವರು ನನ್ನ ಕೈಗೆ ಕೊಡುವಾಗ ಅದು ಗೋಪ್ಯವಾಗಿರಬೇಕಾದ ಸಂಗತಿಯೆಂದೂ ಯಾರೊಬ್ಬರ ಹೆಸರೂ ಪ್ರಕಟವಾಗಬಾರದೆಂದೂ ತಿಳಿಸಿದರು. ಅವರು ಹಾಗೆ ಹೇಳಿದ್ದಕ್ಕೆ ಎಷ್ಟೋ ಕಾರಣಗಳಿರಬಹುದು. ಆ ಕಾರಣಗಳಲ್ಲಿ ಒಂದು ಆ ಜನ ಸರಕಾರಿ ಉದ್ಯೋಗದಲ್ಲಿದ್ದರೆಂಬುದು. ಹೆಸರು ಪ್ರಕಟವಾದರೆ ಅದರ ಮೇಲೆ ನಾನಾ ಟೀಕೆಗಳು ಹೊರಡಬಹುದು: ಅದು ಅನಾವಶ್ಯಕ-ಎಂದು ಅವರು ಸೂಚಿಸಿದರು.

ಈಗ ಆ ಸ್ನೇಹಿತರೂ ಅವರ ಸಹಕಾರಿಗಳೂ ಎಲ್ಲರೂ-ನನ್ನ ಮತ್ತು ಇನ್ನೊಬ್ಬರ ವಿನಾ-ದೈವಾಧೀನರಾಗಿದ್ದಾರೆ. ಆದದ್ದರಿಂದ ಅವರ ಹೆಸರನ್ನು ಈಗ ಹೇಳಿದರೆ ಯಾರಿಗೂ ಏನೂ ಅಪಾಯವಾಗಲಾರದು. ನನ್ನ ಬಳಿ ಬಂದು ಹಣ ಕೊಟ್ಟವರು ಎಸ್. ಜಿ. ಶಾಸ್ತ್ರಿಗಳು.

# ಎಸ್. ಜಿ. ಶಾಸ್ತ್ರಿಗಳು

ಎಸ್. ಜಿ. ಶಾಸ್ತ್ರಿಗಳು ಮೈಸೂರಿನ ವಿದ್ವಜ್ಜನದಲ್ಲಿ ಮಾನ್ಯರಾದವರು. ಅವರೂ ನಾನೂ ಒಂದಾನೊಂದು ಕಾಲದಲ್ಲಿ ಸಹಪಾಠಿಗಳಾಗಿದ್ದೆವು. ಅಂದಿನಿಂದ ನಮ್ಮಿಬ್ಬರಿಗೂ ಅಂತರಂಗ ಸ್ನೇಹ ಬೆಳೆದಿತ್ತು.

ಎಸ್. ಜಿ. ಶಾಸ್ತ್ರಿಗಳು ಮಹಾ ಪ್ರಸಿದ್ಧವಾದ ವಿದ್ವಾಂಸ ವಂಶದವರು. ಅವರ ಅಜ್ಜಂದಿರು ಅರಮನೆಯ ಆಸ್ಥಾನ ಪಂಡಿತರಾಗಿದ್ದ ಗರಳಪುರಿ ಶಾಸ್ತ್ರಿಗಳು. ಸಂಸ್ಕೃತ ಭಾಷೆಯಲ್ಲಿ ಅನೇಕ ಕಾವ್ಯಗಳನ್ನೂ ಶಾಸ್ತ್ರಗ್ರಂಥಗಳನ್ನೂ ಬರೆದವರು. ಇವರ ಮಕ್ಕಳು ಕವಿತಿಲಕ ಅಯ್ಯಶಾಸ್ತ್ರಿಗಳು. ಕನ್ನಡದಲ್ಲಿ ಶೇಷರಾಮಾಯಣ, ವಿಕ್ರಮೋರ್ವಶೀಯ ಮೊದಲಾದ ಗ್ರಂಥಗಳನ್ನು ಬರೆದರು. ನನ್ನ ಸ್ನೇಹಿತರಾದ ಎಸ್. ಜಿ. ಶಾಸ್ತ್ರಿಗಳು ಇಬ್ಸನ್ ಕವಿಯ ಕೆಲವು ನಾಟಕಗಳನ್ನು ಕನ್ನಡಿಸಿದರು: ಕನ್ನಡದಲ್ಲಿ ಕೆಲವು ಕಥೆ ಕಾದಂಬರಿಗಳನ್ನೂ ರಚಿಸಿದರು.

ಮೇಲೆ ಬಿನ್ನಯಿಸಿದ ಸಂಗತಿ ನಡೆದು ಕೆಲವು ತಿಂಗಳು ಕಳೆದ ಬಳಿಕ ಎಸ್. ಜಿ. ಶಾಸ್ತ್ರಿಗಳು ಅನಾಮಧೇಯ ಗೋಷ್ಠಿಯ ವಿಷಯವನ್ನು ನನಗೆ ಸಂಗ್ರಹವಾಗಿ ತಿಳಿಸಿ ನನ್ನನ್ನು ಅದರಲ್ಲಿ ಸೇರಿಕೊಂಡಿರುವಂತೆ ಹೇಳಿದರು. ನಾನು ಕೃತಜ್ಞತೆ ಸೂಚಿಸಿದೆ.

ಅನಾಮಧೇಯ ಗೋಷ್ಠಿಗೆ ಪ್ರಾರಂಭಕರ್ತರು ಬಹುಶಃ ಎಸ್. ಜಿ. ಶಾಸ್ತ್ರಿಗಳವರೇ. ಅವರಿಗೆ ಇಂಥ ಯೋಚನೆಗಳು ಆಗಾಗ ಬರುತ್ತಿದ್ದದ್ದುಂಟು. ಅವರ ಸ್ವಭಾವವನ್ನು ನಾನು ಚಿಕ್ಕಂದಿನಿಂದ ಬಲ್ಲವನಾದದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಎಸ್. ಜಿ. ಶಾಸ್ತ್ರಿಗಳು ಇಂಗ್ಲೆಂಡಿಗೆ ಹೋಗಿ ಪ್ರೌಢ ವಿದ್ಯೆಯಲ್ಲಿ ಉತ್ತೀರ್ಣರಾಗಿ ಅಲ್ಲಿಂದ ಬಂದ ಬಳಿಕ ಒಳ್ಳೆಯ ಉದ್ಯೋಗದಲ್ಲಿ ನೆಲಸಿದರಷ್ಟೆ. ಅವರ ವಿದ್ಯೆ ರಸಾಯನಶಾಸ್ತ್ರ (ಕೆಮಿಸ್ಟ್ರಿ). ಅವರು ಬಹುಕಾಲ ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿಯ (ಸಾಬೂನು ಕಾರ್ಖಾನೆ) ವ್ಯವಸ್ಥಾಪಕರಾಗಿದ್ದರು. ಆ ಕಾರ್ಖಾನೆಯನ್ನು ಪ್ರಾರಂಭ ಮಾಡಿದವರೇ ಅವರು.

# ಯೋಜನೆ

ಒಂದು ದಿನ ಅವರಿಗೆ ಒಂದು ಆಲೋಚನೆ ಹೊಳೆಯಿತು: “ನನ್ನಂತೆ ವಿದೇಶಗಳಿಗೆ ಹೋಗಿ ವಿದ್ಯೆ ಸಂಪಾದಿಸಿ ಅಲ್ಲಿಂದ ಬಂದ ಬಳಿಕ ತಕ್ಕಮಟ್ಟಿಗೆ ಒಳ್ಳೆಯ ಸಂಬಳ ಪಡೆಯುತ್ತಿರುವ ಜನ ಮೈಸೂರು ದೇಶದಲ್ಲಿ ನಾಲ್ಕಾರು ಮಂದಿ ಇದ್ದೇವೆ. ನಾವೆಲ್ಲ ಒಟ್ಟುಗೂಡಿ ಒಂದಿಷ್ಟು ಹಣ ಸೇರಿಸಿ, ವಿದ್ಯಾರ್ಜನೆಗಾಗಿ ಉಪಪತ್ತಿಯಿಲ್ಲದೆ ಇರುವ ಜನಕ್ಕೂ ಇತರ ದೇಶಸೇವೆಯ ಉದ್ದೇಶಗಳಿಗೂ ಸಹಾಯಕೊಡುವುದರ ಮೂಲಕ ದೇಶಕ್ಕೆ ಒಂದಿಷ್ಟು ಸೇವೆಮಾಡಲಾಗದೆ? ಒಂದೆರಡು ಗ್ರಂಥಗಳನ್ನು ಪ್ರಕಟಿಸಬಹುದಲ್ಲ? ದೇಶದ ಋಣವನ್ನು ತಿಂದ ನಾವು ದೇಶಕ್ಕೆ ಸಾವಿರದಲ್ಲಿ ಒಂದಂಶವನ್ನಾದರೂ ಹಿಂತಿರುಗಿಸುವುದು ಧರ್ಮವಲ್ಲವೆ?”

ಈ ಆಲೋಚನೆಯನ್ನು ಶಾಸ್ತ್ರಿಗಳು ತಮ್ಮ ಆಪ್ತಸ್ನೇಹಿತರಲ್ಲಿ ಪ್ರಸ್ತಾವಿಸಿದರು. ಬಹುಶಃ ಎಲ್ಲರೂ ತಕರಾರು ಮಾಡದೆ ಒಪ್ಪಿದರು. ಅವರು ಬಹುಶಃ ೧೫-೨೦ ಮಂದಿ ಎಂದು ತೋರುತ್ತದೆ. ಅವರಲ್ಲಿ ಕೆಲವರ ಹೆಸರನ್ನು ಹೇಳುತ್ತೇನೆ: (೧) ಡಾ ॥ ಬಿ.ಕೆ. ನಾರಾಯಣರಾಯರು, (೨) ಎಂ.ಎಸ್. ರಾಮಚಂದ್ರರಾಯರು, (೩) ಬಿ.ವಿ. ರಾಮಯ್ಯಂಗಾರ್ಯರು, (೪) ಡಾ ॥ ಬಿ.ಎನ್. ಅಯ್ಯಂಗಾರ್ಯರು, (೫) ಎನ್.ಎನ್. ಅಯ್ಯಂಗಾರ್ಯರು, (೬) ಎಚ್.ಎಸ್. ನಾರಾಯಣರಾಯರು, (೭) ಎಸ್.ಬಿ. ಅಯ್ಯಂಗಾರ್ಯರು, (೮) ಡಾ ॥ ಎ. ಸುಬ್ಬರಾಯರು, (೯) ಬಿ. ಪುಟ್ಟಯ್ಯನವರು, (೧೦) ಬಿ. ಶ್ರೀನಿವಾಸಯ್ಯಂಗಾರ್ಯರು, (೧೧) ಡಾ ॥ ಎಂ.ವಿ. ಸಂಪತ್ಕುಮಾರನ್. ಇತರರೂ ಹಲವರಿದ್ದರು.

ಇವರಲ್ಲಿ ಕೆಲಮಂದಿ ತಿಂಗಳು ತಿಂಗಳೂ ೨೦-೨೫ ರೂಪಾಯಿನಂತೆ ಕೊಟ್ಟರು: ಕೆಲವರು ೧೫–೨೦ ರೂಪಾಯಿನಂತೆ: ಒಬ್ಬಿಬ್ಬರು ೧೦ ರೂ. ನಂತೆ.

ಈ ಹಣವನ್ನೆಲ್ಲ ವಸೂಲುಮಾಡಿ ಕ್ರಮವಾಗಿ ಲೆಕ್ಕವಿಡುತ್ತಿದ್ದವರು ಬಿ. ಪುಟ್ಟಯ್ಯನವರು.

# ಬರಾತ

ಹಣ ೧, ೦೦೦-೨, ೦೦೦ದಷ್ಟು ಜಮಾಯಿಸಿದ ಕೂಡಲೆ ಅದಕ್ಕೆ ಯಾವುದೋ ವರಾತ ಬರುತ್ತಿತ್ತು. ಉಚ್ಚ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೋ ಜರ್ಮನಿಗೋ ಹೋಗಬೇಕೆಂದು ಯಾರೋ ಆಶೆಪಡುವರು; ಎಸ್. ಜಿ. ಶಾಸ್ತ್ರಿಯಲ್ಲಿ ತಮ್ಮ ಕಷ್ಟವನ್ನು ತೋಡಿಕೊಳ್ಳುವರು. ಈ ಮಾತು ಇತರರಲ್ಲಿ ಚರ್ಚೆಗೆ ಬರುವುದು. ಅವರಿಗೆ ಸಹಾಯ ಸಲ್ಲುವುದು. ಇಂಥ ಶಿಫಾರಸುಗಳು, ಕೆಲವು ಸಂದರ್ಭದಲ್ಲಿ ಗೋಷ್ಠಿಯ ಸದಸ್ಯರ ಬಂಧುಗಳನ್ನು ಕುರಿತೇ ಇರುವುದು. ಆಗ ಕೊಂಚ ಕಾವೇರುವುದು. ಬೇಗನೆ ಅದು ಸಮಾಧಾನಕ್ಕೆ ಬರುವುದು. ಹೀಗೆಲ್ಲ ಆಗಾಗ್ಗೆ ಸಣ್ಣಪುಟ್ಟ ತಕರಾರುಗಳು ನಡೆದು ಪರಿಹಾರವಾಗುವುವು.

ಒಟ್ಟಿನಲ್ಲಿ ಹದಿನೈದಿಪ್ಪತ್ತು ಮಂದಿಗೆ ವಿದೇಶ ವಿದ್ಯಾಭ್ಯಾಸದ ಅನುಕೂಲವು ಅನಾಮಧೇಯ ಗೋಷ್ಠಿಯಿಂದ ಸಂದಿತು. ಮೂರು ನಾಲ್ಕು ಧರ್ಮಕಾರ್ಯಗಳಿಗೂ ಸಹಾಯ ಸಿಕ್ಕಿತು.

ಹಣದ ವಿಷಯವಿರುವ ಕಡೆ ತಕರಾರುಗಳು ಹುಟ್ಟುವುದು ಅಪರೂಪವೇನೂ ಅಲ್ಲವಷ್ಟೆ. ಕೆಲಮಂದಿ ಸದಸ್ಯರು ಚಂದಾಕೊಡುವುದನ್ನು ಸ್ವಸ್ತಿ ಮಾಡಿದರು. ಕೆಲವರು ಕೊನೆಮೊದಲಿಲ್ಲದೆ ವಾಯಿದೆ ಹೇಳುತ್ತಿದ್ದರು. ಕೈಬದಲು ತೆಗೆದುಕೊಂಡವರೂ ಹಾಗೆಯೇ ಮಾಡಿದರು. ಇನ್ನು ಕೆಲವರು ತಮ್ಮ ಸೋದರಳಿಯ, ಅಣ್ಣನ ಮಗ, ಅವರ ಓದಿಗೆ ಪ್ರೋತ್ಸಾಹ ಕೊಟ್ಟರೆ ಅದು ದೇಶಸೇವೆಯಲ್ಲವೆ? ಎಂದು ಕೇಳಿದರು. ಕೆಲವರಂತೂ ತಲಾ ೫-೬ ಸಾವಿರ ರೂ.ಗಳಷ್ಟನ್ನು ಸ್ವಂತಕ್ಕೆ ಸಾಲವಾಗಿ ಪಡೆದು ಸಾಲ ತೀರಿಸುವ ಸೂಚನೆಯನ್ನೇ ತೋರಿಸಲಿಲ್ಲ.

ಕಡೆಗೆ ಎಲ್ಲರಿಗೂ ಬೇಸರವಾಯಿತು. ಗೋಷ್ಠಿಯನ್ನು ನಿಲ್ಲಿಸುವುದು ಅನಿವಾರ್ಯವಾಯಿತು. ಉಳಿದಿದ್ದ ಹಣವನ್ನು ಚಂದಾ ಕೊಟ್ಟಿದ್ದವರಿಗೆ ದಾಮಾಷಾ ಪ್ರಕಾರ ಅವರವರು ಕೊಟ್ಟಿದ್ದ ಮೊತ್ತಕ್ಕನುಸಾರ ಹಂಚಿದ್ದಾಯಿತು.

ಹೀಗೆ ಹಂಚಿದ ಹಣವನ್ನು ಕೆಲವರು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳದೆ ಧರ್ಮಾರ್ಥ ಕಾರ್ಯಗಳಿಗೆ ವಿನಿಯೋಗಿಸಿದರು. ಅಂಥವರ ಪೈಕಿ ಡಾ ॥ ಬಿ. ಕೆ. ನಾರಾಯಣರಾಯರು

ಒಬ್ಬರು. ಅವರು ತಮ್ಮ ಪಾಲಿನ ಮೊಬಲಗನ್ನು ಲಾಲ್‌ಬಾಗಿನಲ್ಲಿ ಮಕ್ಕಳಿಗೆ ವ್ಯಾಯಾಮ ವಿನೋದೋಪಕರಣವನ್ನು ಒದಗಿಸಲಿಕ್ಕೆಂದು ಕೊಟ್ಟರು.

# ವಿಚಾರಗೋಷ್ಠಿ

ಹಣವನ್ನು ಕೂಡಿಸಿ ಹಂಚುವುದಷ್ಟೇ ನಮ್ಮ ಗೋಷ್ಠಿಯ ಉದ್ದೇಶವಾಗಿರಲಿಲ್ಲ. ಆಗಾಗ, ಸಾಮಾನ್ಯವಾಗಿ ತಿಂಗಳಿಗೊಂದು ದಿನವಾದರೂ ಎಲ್ಲರೂ ನಮ್ಮ ಪೈಕಿ ಒಬ್ಬರ ಮನೆಯಲ್ಲಿ ಭೋಜನಕ್ಕೆ ಸೇರುತ್ತಿದ್ದೆವು. ಆಗಣ ಮಿತ್ರಸಂಭಾಷಣೆ ಎಲ್ಲರಿಗೂ ಉಲ್ಲಾಸಪ್ರದವಾಗಿತ್ತು. ಲೋಕದ ಮುನ್ನಡೆ, ದೇಶ ವಿದೇಶಗಳ ಪ್ರಶ್ನೆಗಳು, ನಮ್ಮ ದೇಶದ ಸಮಾಜದ ಲೋಪಗಳು, ನಮ್ಮ ವಿದ್ಯಾಭ್ಯಾಸಕ್ರಮದ ನ್ಯೂನತೆಗಳು, ನಮ್ಮ ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿ-ಇಂಥ ಎಲ್ಲ ವಿಚಾರಗಳನ್ನೂ ಚರ್ಚಿಸುತ್ತಿದ್ದೆವು. ನಡುನಡುವೆ ಪರಸ್ಪರ ಮರ್ಮೋದ್ಘಾಟನೆಗಳೂ ಪರಿಹಾಸ್ಯಗಳೂ ಇರುತ್ತಿದ್ದವು. (ಅಂಥ ಒಂದು ಸಂದರ್ಭದಲ್ಲಿಯೇ ನನ್ನ ಶಿಖೆಯನ್ನು ಕತ್ತರಿಸಲಾದದ್ದು.) ಚರ್ಚೆಯಲ್ಲಿ ಭಾಗವಹಿಸುವವರು ನಾನಾ ದೇಶಗಳ ಪರಿಚಯವಿದ್ದವರು ಮತ್ತು ನಾನಾ ಶಾಸ್ತ್ರಗಳಲ್ಲಿಯೂ ನಾನಾ ವೃತ್ತಿಗಳಲ್ಲಿಯೂ ಪರಿಶ್ರಮ ಮಾಡಿದ್ದವರು. ಆದದ್ದರಿಂದ ಪ್ರತಿಯೊಂದು ವಿಷಯವೂ ನಾನಾಮುಖವಾದ ಪರ್ಯಾಲೋಚನೆಗೆ ಬರುತ್ತಿತ್ತು.

ಹೀಗೆ ನಮ್ಮ ದೇಶಾಭ್ಯುದಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳ ವಿಷಯದಲ್ಲಿ ಪರಿಜ್ಞಾನ ವಿನಿಮಯವೂ ಅಭಿಪ್ರಾಯ ವಿನಿಮಯ ಆಗುತ್ತಿದ್ದದ್ದು ನನ್ನ ಪಾಲಿಗೆ ಒಂದು ದೊಡ್ಡ ಲಾಭವಾಗಿತ್ತು. ಪ್ರಪಂಚದಲ್ಲಿ ಎಲ್ಲವೂ ಮುಗಿಯುತ್ತವೆ. ಸ್ನೇಹವೂ ಎಂದೋ ಒಂದು ದಿನ ಕೊನೆಗಾಣುತ್ತದೆ. ಆದರೆ ಅದು ನಡೆದಷ್ಟು ದಿನ ಸ್ನೇಹವು ಭಗವಂತನ ಒಂದು ಪ್ರಸಾದ. ಪ್ರಸಾದಪುಷ್ಪದ ಘಮಲು ಹಾರಿ ಹೋಗುತ್ತದೆ. ಆದರೆ ಅದರ ನೆನಪು ನಮ್ಮ ಅಂತರಂಗದಲ್ಲಿ ಸೇರಿ ಜನ್ಮಜನ್ಮಾಂತರಕ್ಕೂ ವಾಸನೆಯಾಗಿರುತ್ತದೆ.

# ೧೩ ಇಬ್ಬರು ಮಹನೀಯರು

## ೧. ವೀರೇಶಲಿಂಗಂ ಪಂತುಲು

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಆರ್. ನರಸಿಂಹಾಚಾರ್ಯರಿಗೆ ಯಾವ ಸ್ಥಾನ ಸಲ್ಲುತ್ತದೆಯೋ ಅಂಥ ಉನ್ನತಸ್ಥಾನವನ್ನು ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಸಂಪಾದಿಸಿಕೊಂಡಿರುವವರು ಕಂದುಕೂರಿ ವೀರೇಶಲಿಂಗಂ ಪಂತುಲು ಅವರು.

ವೀರೇಶಲಿಂಗಂ ಅವರು ಆಂಧ್ರದ ಕವಿಗಳ ಚರಿತ್ರೆಗಳನ್ನು ಬರೆದಿದ್ದಾರೆ. ಕೆಲವು ಕಾದಂಬರಿಗಳನ್ನು ಬರೆದಿದ್ದಾರೆ. ಅವರು ಪದ್ಯಕಾವ್ಯಗಳನ್ನೂ ಬರೆದಿದ್ದಾರೆಂದು ನಾನು ಕೇಳಿದ್ದೇನೆ.

ಅವರ ಕಾದಂಬರಿಗಳಲ್ಲಿ ಕೆಲವು ಕನ್ನಡಕ್ಕೆ ಬಂದಿವೆ.

1. ಸತ್ಯವತೀ ಚರಿತ್ರೆ. ಇದನ್ನು ಕನ್ನಡಿಸಿದವರು ಬಹುಶಃ ನಂಜನಗೂಡು ಅನಂತನಾರಾಯಣ ಶಾಸ್ತ್ರಿಗಳು. ಇದು ಗೋಲ್ಡ್‌ಸ್ಮಿತ್ ಕವಿಯ 'ವಿಕಾರ್ ಆಫ್ ವೇಕ್ ಫೀಲ್ಡ್' ಕಾದಂಬರಿಯನ್ನು ಅನುಕರಿಸಿದೆಯೆಂದು ಹೇಳುವುದುಂಟು. ನನ್ನ ಅಭಿಪ್ರಾಯದಲ್ಲಿ 'ಸತ್ಯವತೀ ಚರಿತ್ರೆ' ಒಂದು ಸ್ವತಂತ್ರ ರಚನೆ.
2. ರಾಜಶೇಖರ ಚರಿತ್ರೆ. ಇದನ್ನು ಕನ್ನಡಿಸಿದವರು ಬೆಳ್ಳಾವೆ ಸೋಮನಾಥಯ್ಯನವರು.
3. ಸತ್ಯರಾಜನ ದೇಶಯಾತ್ರೆಗಳು, ಇದನ್ನು ಕನ್ನಡಿಸಿದವರು ಬೆನಗಲ್ ರಾಮರಾಯರು.

ಈ ಮೂರೂ ಒಳ್ಳೆಯ ಕಾದಂಬರಿಗಳು. ಕಥಾವಸ್ತು ನಮಗೆಲ್ಲ ಬಳಕೆಯಾದದ್ದು-ನಮ್ಮ ಜನದ ಮಧ್ಯಮವರ್ಗದ ಗೃಹಜೀವನ ಸಮಾಜಜೀವನದ ಚಿತ್ರಗಳು. ಕಥಾ ಸಂವಿಧಾನವು ಕುತೂಹಲಕರವಾದದ್ದು. ಸತ್ಯರಾಜನ ದೇಶಯಾತ್ರೆಯಲ್ಲಿ ಕೆಲವು ವಿಚಿತ್ರ ಸನ್ನಿವೇಶಗಳೂ, ಹಾಸ್ಯಪ್ರಸಂಗಗಳೂ ಬರುತ್ತದೆಂದು ಜ್ಞಾಪಕ. ಈ ಒಳ್ಳೆಯ ಗ್ರಂಥಗಳು ಈಗ ಅಷ್ಟಾಗಿ ಪ್ರಚಾರದಲ್ಲಿಲ್ಲವೆಂದು ನನಗೆ ವಿಷಾದವುಂಟು. ವಿಷಯದ ದೃಷ್ಟಿಯಿಂದಲೂ ಲೇಖನ ಶೈಲಿಯ ದೃಷ್ಟಿಯಿಂದಲೂ ಆ ಗ್ರಂಥಗಳು ಎಲ್ಲರಿಗೂ ಗ್ರಾಹ್ಯವಾಗಿವೆ.

ವೀರೇಶಲಿಂಗಂ ಪಂತುಲು ಅವರು ಆಂಧ್ರದಲ್ಲಿ ಅವರ ಕಾಲದಲ್ಲಿಯೇ ಮಹಾ ವಿದ್ವತ್ಪಂಕ್ತಿಯಲ್ಲಿ ಪುರಸ್ಕೃತರಾಗಿದ್ದವರು. ಅವರು ಮದರಾಸು ವಿಶ್ವವಿದ್ಯಾನಿಲಯದಲ್ಲಿ ಬಹುಕಾಲ ಬಿ.ಎ., ಎಂ.ಎ. ಮೊದಲಾದ ಉಚ್ಚ ತರಗತಿಗಳಿಗೆ ಪರೀಕ್ಷಕರಾಗಿದ್ದವರು; ಮತ್ತು ಸರಕಾರದ ಇತರ ವಿದ್ಯಾ ಪ್ರಯತ್ನಗಳಲ್ಲಿ ಆಂಧ್ರಭಾಷಾಧಿಕಾರಿಗಳೆಂದು ಪರಿಗಣಿತರಾಗಿದ್ದವರು.

ವಿದ್ವಾಂಸರೂ ಲೇಖಕರೂ ಆಗಿದ್ದದ್ದು ವೀರೇಶಲಿಂಗಂ ಅವರ ಕೀರ್ತಿಯಲ್ಲಿ ಅರ್ಧ ಭಾಗದಷ್ಟು. ಉಳಿದ ಅರ್ಧ ಅವರ ಸಮಾಜಸುಧಾರಣೆಯ ದೀಕ್ಷೆಗೆ ಸಂಬಂಧಪಟ್ಟದ್ದು. ಅವರು ಹಿಂದೂ ಸ್ತ್ರೀಜನದ ಅಭ್ಯುದಯಕ್ಕಾಗಿಯೂ, ಅದರಲ್ಲಿ ವಿಶೇಷವಾಗಿ ವಿತಂತು ವಿವಾಹ ಪ್ರೋತ್ಸಾಹಕ್ಕಾಗಿಯೂ ತಮ್ಮ ಸರ್ವಸ್ವವನ್ನೂ ವಿನಿಯೋಗಿಸಿದರು. ಅವರ ಧರ್ಮಪತ್ನಿ ರಾಜಲಕ್ಷ್ಮಮ್ಮನವರು ಈ ಕಾರ್ಯದಲ್ಲಿ ಅವರಿಗೆ ಸಂಪೂರ್ಣವಾಗಿ ಸಹಭಾಗಿನಿಯಾಗಿದ್ದರು.

ವೀರೇಶಲಿಂಗಂ ಅವರು ಮತಾಚಾರ ವಿಷಯಗಳಲ್ಲಿ ಬಹುಮಟ್ಟಿಗೆ ಬ್ರಹ್ಮ ಸಮಾಜವನ್ನು ಹೋಲುವಂಥ ಪಂಥದವರು. ಅವರು ಬೆಂಗಳೂರು ಅರಳೆಪೇಟೆಯಲ್ಲಿ ಬ್ರಹ್ಮ ಸಮಾಜಕ್ಕಾಗಿ ಒಂದು ಸಭಾಮಂದಿರವನ್ನು ಕಟ್ಟಿಸಿಕೊಟ್ಟರೆಂದು ನಾನು ಕೇಳಿದ್ದೇನೆ. ಆ ಸಭಾಮಂದಿರದಲ್ಲಿ ಆ ಸುತ್ತಮುತ್ತಲಿನ ಬ್ರಹ್ಮ ಸಮಾಜಸ್ಥರು ಸೇರಿ ಭಜನೆ ಮಾಡುತ್ತಿದ್ದದ್ದನ್ನು ನೋಡಿದ್ದೇನೆ. ಆ ಕಟ್ಟಡದಲ್ಲಿ ಈಗ ಒಂದು ಪ್ರೈಮರಿ ಸ್ಕೂಲ್ ನಡೆಯುತ್ತಿದೆ. ಬ್ರಹ್ಮಸಮಾಜ ಈಗ ಆಗಿನಷ್ಟು ಪ್ರಬಲವಾಗಿಲ್ಲ.

# ನನ್ನ ಪೌರೋಹಿತ್ಯ

ವೀರೇಶಲಿಂಗಂ ಅವರು ನಲವತ್ತೈವತ್ತು ವಿತಂತು ವಿವಾಹಗಳನ್ನು ಮಾಡಿಸಿದರು. ಅವುಗಳಲ್ಲಿ ಮೂರು ಬೆಂಗಳೂರಿನಲ್ಲಿ ನಡೆದವು ನನಗೆ ತಿಳಿದಿದೆ. ಆ ವಿವಾಹಗಳ 'ಪೌರೋಹಿತ್ಯ' ದಲ್ಲಿ ನಾನು ಭಾಗವಹಿಸಿದ್ದೂ ಉಂಟು.

ಪೌರೋಹಿತ್ಯದಲ್ಲಿ ಸೇರಿದ್ದ ಇನ್ನೊಬ್ಬರು ಶರ್ಮ ಎಂಬವರು. ಅವರು ಆಂಧ್ರಬ್ರಾಹ್ಮಣರು; ಬಹುಶಃ ಆರ್ಯಸಮಾಜಕ್ಕೆ ಸೇರಿದವರು. ಸ್ಯಾನಿಟರಿ ಇಲಾಖೆಯಲ್ಲೋ ಎಲ್ಲೋ, ಬಹುಶಃ ವ್ಯಾಕ್ಸಿನೇಟರ್ ಆಗಿ ಉದ್ಯೋಗದಲ್ಲಿದ್ದರು. ಅವರು ಆರ್ಯ ಸಮಾಜದವರಾದದ್ದರಿಂದ ಮಂತ್ರಗಳನ್ನು ಕಲಿತಿದ್ದರು. ನನಗೆ ತುಣುಕುಗಳು ಬರುತ್ತಿದ್ದದ್ದರಿಂದ ಈ ವಿತಂತು ವಿವಾಹ ಸಮಾರಂಭಗಳಿಗೆ ಯಜಮಾನರಾಗಿದ್ದ ವೆಂಕಟವರದಯ್ಯಂಗಾರ್ಯರು ನಮ್ಮಿಬ್ಬರನ್ನೂ ಪೌರೋಹಿತ್ಯಕ್ಕೆ ನಿಯಮಿಸುತ್ತಿದ್ದರು. ಈ ಸಮಾರಂಭ ವಿಷಯದಲ್ಲಿ ನನಗೆ ಉತ್ಸಾಹವಿತ್ತು.

ವಿವಾಹವು ಕಂಟೋನ್ಮೆಂಟಿನಲ್ಲಿ ನಡೆಯತಕ್ಕದ್ದೆಂದು ಗೊತ್ತುಮಾಡಲು ಇದ್ದಕಾರಣವನ್ನು ಹೇಳುತ್ತೇನೆ. ಆ ಕಾಲದಲ್ಲಿ ವಿಧವಾವಿವಾಹದ ಕಾನೂನು ಬ್ರಿಟಿಷ್ ಇಂಡಿಯದಲ್ಲಿ ಜಾರಿಯಲ್ಲಿತ್ತು. ಮೈಸೂರು ರಾಜ್ಯವು ಆಗ್ಗೆ ಪ್ರತ್ಯೇಕವಾಗಿದ್ದದ್ದರಿಂದ ಆ ಕಾನೂನು ದೇಶೀಯ ಸಂಸ್ಥಾನದಲ್ಲಿ ಊರ್ಜಿತವಾಗತಕ್ಕದ್ದಾಗಿರಲಿಲ್ಲ. ಬೆಂಗಳೂರು ಕಂಟೋನ್ಮೆಂಟು ಬ್ರಿಟಿಷ್ ಸರಕಾರದ ಅಧೀನದಲ್ಲಿದ್ದ ಕಾರಣದಿಂದ ಬ್ರಿಟಿಷ್ ಇಂಡಿಯದ ಕಾನೂನಿಗೆ ಅಲ್ಲಿ ಬಲವುಂಟು.

ಈ ರೀತಿ ಯೋಚಿಸಿ ಆ ಕಾಲದಲ್ಲಿ ನಡೆದ ಎಲ್ಲ ವಿತಂತುವಿವಾಹಗಳೂ ಕಂಟೋನ್ಮೆಂಟು ಪ್ರದೇಶದಲ್ಲಿಯೇ ನಡೆದವು.

ಆ ಸಮಾಜಸುಧಾರಣೆ ನಾವು ನಿರೀಕ್ಷಿಸಿದಷ್ಟು ಮಟ್ಟಿಗೆ ಯಶಸ್ವಿಯಾಗಲಿಲ್ಲವೆಂದು ನಾನು ಹೇಳಬೇಕಾಗಿದೆ. ಸಾಮಾನ್ಯವಾಗಿ ವಿತಂತುವಿವಾಹದಲ್ಲಿ ಸೇರುತ್ತಿದ್ದ ಹೆಣ್ಣುಗಳು-ನೂರಕ್ಕೆ ಐವತ್ತು ಮಂದಿಯಾದರೂ-ಬೆಳೆದು ಬಲಪಟ್ಟ ಸ್ವಭಾವವುಳ್ಳವರಾದದ್ದರಿಂದ, ವಿವಾಹಾನಂತರ ಗಂಡಹೆಂಡಿರು ಒಗ್ಗಿಕೊಳ್ಳುವುದು ಕಷ್ಟವಾಗಿ ತೋರಿರಬೇಕು. ಹಾಗೆ ನಡೆದ ಕೆಲವು ಅಸಂಗತಗಳ ಕಥೆಗಳನ್ನು ನಾನು ಕೇಳಿಬಲ್ಲೆ.

ಇದರ ಜೊತೆಗೆ ನಮ್ಮ ಸಮಾಜ ಸಂದರ್ಭಗಳು ಬದಲಾಯಿಸುತ್ತಾ ಬಂದಿವೆ. ಬಾಲಾವಿವಾಹ ನಿಂತೇಹೋಗಿದೆ. ಕನ್ಯೆಯರ ವಯಸ್ಸು ಹೆಚ್ಚಿದಂತೆ ಬಾಲವಿತಂತುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅದಲ್ಲದೆ ಕನ್ಯಾರ್ಥಿಗಳ ಸಂಖ್ಯೆಯೂ ಕಡಮೆಯಾಗುತ್ತಿದೆ. ಉದ್ಯೋಗದ ಅಭಾವದ ಕಾರಣದಿಂದಲೂ ಅರ್ಥಸಂಪತ್ತಿನ ಅಭಾವದ ಕಾರಣದಿಂದಲೂ ಕನ್ಯೆಯರಿಗೂ ವರರಿಗೂ ವಿವಾಹದ ವಯಸ್ಸು ಮೇಲಕ್ಕೇರಿ ವಿವಾಹದ ಅಪೇಕ್ಷೆ ಕಡಮೆಯಾಗುತ್ತಿದೆ. ಹೀಗೆ ನಾನಾ ಕಾರಣಗಳಿಂದ ಬಾಲವೈಧವ್ಯದ ಪ್ರಶ್ನೆ ಈಗ ಪೂರ್ತಿ ಹೋಗದಿದ್ದರೂ ಬಹುಮಟ್ಟಿಗೆ ಕಡಮೆಯಾಗಿದೆ.

ಈ ಪ್ರಶ್ನೆ ಎಂದಿಗೂ ಉಂಟಾದದ್ದೇ. 'ಬಾಲ್ಯ' ಎಂಬುದಕ್ಕೆ ಮಿತಿ ಗೊತ್ತು ಮಾಡುವವರು ಯಾರು? ಈ ವಿಷಯವನ್ನು ವೈಯಕ್ತಿಕ ನಿರ್ಣಯಕ್ಕೆ ಬಿಟ್ಟುಕೊಡುವುದು ಒಳ್ಳೆಯದೆಂದು ಈಚೆಗೆ ಸಮಾಜ ನಿಶ್ಚಯಿಸಿದಂತೆ ತೋರುತ್ತದೆ.

ವೀರೇಶಲಿಂಗಂ ಪಂತುಲು ಮತ್ತು ಅವರ ಪತ್ನಿ ರಾಜಲಕ್ಷ್ಮಮ್ಮನವರು ಸೇರಿ-ಬಹುಶಃ ರಾಜಮಹೇಂದ್ರಪುರದಲ್ಲಿ ಒಂದು ಅಬಲಾಶ್ರಮ ನಡಸುತ್ತಿದ್ದರು. ಆ ಆಶ್ರಮದಲ್ಲಿ ಬಾಲವಿತಂತುಗಳಿಗೂ ಇತರ ರೀತಿಯಲ್ಲಿ ನಿರ್ಗತಿಕರಾದ ಹೆಂಗಸರಿಗೂ ಅನಾಥೆಯರಿಗೂ ಅನ್ನವಸ್ತ್ರಗಳನ್ನು ಕೊಟ್ಟು ಅವರನ್ನು ಯಾವುದಾದರೊಂದು ಸ್ವತಂತ್ರ ಜೀವಿಕಾವೃತ್ತಿಗೆ ತಯಾರು ಮಾಡಬೇಕು ಎಂಬುದು ಉದ್ದೇಶ.

# ಒಂದು ಆಪಾದನೆ

ಒಂದಾನೊಂದು ಸಂದರ್ಭದಲ್ಲಿ ವೀರೇಶಲಿಂಗಂ ಅವರ ಮೇಲೆ ಒಂದು ಆಪಾದನೆ ಹೊರಟಿತು: ಅವರು ಆ ಆಶ್ರಮದ ಒಬ್ಬಾನೊಬ್ಬ ಹೆಂಗಸಿನಿಂದ ಸೇವೆ ಮಾಡಿಸಿಕೊಳ್ಳುತ್ತಿದ್ದರೆಂದು. ಆ ಆಪಾದನೆಯನ್ನು ಪ್ರಕಟಪಡಿಸಿದವರು ತಂಗಟೂರು ಶ್ರೀರಾಮುಲು ಎಂಬವರು. ಇವರು ಬ್ಯಾರಿಸ್ಟರ್ ಆಗಿ 'ದಿ ಕಾರ್ಲೈಲಿಯನ್' (The Carlylian) ಎಂಬ ಪತ್ರಿಕೆಯನ್ನು ನಡಸುತ್ತಿದ್ದರು. ಇವರ ಅಣ್ಣಂದಿರೇ ಆಂಧ್ರನಾಯಕರೆಂದು ಪ್ರಸಿದ್ಧರಾಗಿ, 'ಸ್ವರಾಜ್ಯ' ಪತ್ರಿಕೆಯನ್ನು ನಡಸಿ ಕಾಲಕ್ರಮದಲ್ಲಿ ಮದರಾಸ್ ಸರಕಾರದ ಮಂತ್ರಿಯೂ ಮುಖ್ಯಮಂತ್ರಿಯೂ ಆಗಿದ್ದ ತಂಗಟೂರು ಪ್ರಕಾಶಂ ಅವರು.

ಶ್ರೀರಾಮುಲು ಅವರು ಮಾಡಿದ್ದ ಆಪಾದನೆ ಕೋರ್ಟಿನಲ್ಲಿ ಕ್ರಮವಾಗಿ ವಿಚಾರಣೆಗೆ ಬಂತು. ಆಗ ಸ್ಥಿರಪಟ್ಟ ಅಂಶವೇನೆಂದರೆ-ವೀರೇಶಲಿಂಗಂ ಅವರಿಗೆ ಮುಪ್ಪಿನಲ್ಲಿ ಬೆನ್ನ ಮೇಲೆ ಚರ್ಮ ಸುಕ್ಕುಬಿದ್ದು, ಅದು ಅಲ್ಲಲ್ಲಿ ಬಿರಿದು ನವೆಯಾಗಿ ಬಾಧೆ ಕೊಡುತ್ತಿತ್ತು. ಅದಕ್ಕೆ ಔಷಧವಾಗಿ ಒಬ್ಬ ವೈದ್ಯರು ಯಾವುದೋ ಒಂದು ತೈಲವನ್ನು ಕೊಟ್ಟಿದ್ದರು. ಆ ತೈಲವನ್ನು ವೀರೇಶಲಿಂಗಂರವರ ಬೆನ್ನಿಗೆ ಪ್ರತಿ ದಿನವೂ ಯಾರಾದರೂ ತಿಕ್ಕಬೇಕಾಗುತ್ತಿತ್ತು. ಹೀಗೆ ತೈಲವನ್ನು ತಿಕ್ಕುವುದಕ್ಕಾಗಿ ರಾಜಲಕ್ಷ್ಮಮ್ಮನವರು ತಾವು ಮುದುಕರಾಗಿ ಅಶಕ್ತರಾಗಿದ್ದದ್ದರಿಂದ ತಮ್ಮ ಆಶ್ರಮದ ಒಬ್ಬ ಆಶ್ರಿತೆಗೆ ತೈಲಸೇವೆಯ ಕೆಲಸವನ್ನು ಒಪ್ಪಿಸಿದ್ದದ್ದು ನಿಜ. ಆಕೆ ಆ ಸೇವೆಯನ್ನು ನಡಸುತ್ತಿದ್ದದ್ದೂ ನಿಜ. ಇಷ್ಟು ಮಾತ್ರದಿಂದ ಯಾವುದೋ ಅಕಾರ್ಯ ನಡೆಯಿತೆಂದು ಊಹೆಮಾಡುವುದು ಅನ್ಯಾಯವಾದ ಆಪಾದನೆ. ಹೀಗೆ ಕೋರ್ಟು ತೀರ್ಮಾನ ಕೊಟ್ಟಿತು.

ತಂಗಟೂರು ಶ್ರೀರಾಮುಲು ಅವರ ಹೆಸರು ನನ್ನಂಥ ಹಳಬನಿಗೆ ಇಲ್ಲೊಬ್ಬನಿಗೆ ಅಲ್ಲೊಬ್ಬನಿಗೆ ಅಷ್ಟಿಷ್ಟು ಜ್ಞಾಪಕವಿರಬಹುದು; ಮತ್ತು ಆ ಜ್ಞಾಪಕ ವಿಷಮಯವಾಗಿರಬಹುದು. ವೀರೇಶಲಿಂಗಂ ಪಂತಲು ಅವರ ಜ್ಞಾಪಕವಾದರೋ ವಿಸ್ತಾರವಾಗಿ, ಸ್ಥಿರವಾಗಿ ನಿಂತಿದೆ.

ನಾನು ನೋಡಿದಾಗ ವೀರೇಶಲಿಂಗಂ ಅವರು ವೃದ್ಧರು. ಕಾಲಿನಲ್ಲಿ ವಾಯುನೋವು ಬಂದಿದ್ದದ್ದರಿಂದ ಮೊಣಕಾಲವರೆಗೂ ವುಲ್ಲನ್ ಕಾಲಚೀಲ ಹಾಕಿಕೊಂಡಿರುತ್ತಿದ್ದರು. ತಲೆ,

ಮುಖ ಎಲ್ಲ ನರೆತ ಕೂದಲು ಒತ್ತೊತ್ತಾಗಿ ಮಳ್ಳುಮುಳ್ಳಾಗಿ ಬೆಳೆದಿದ್ದದ್ದರಿಂದ ಹೊಸಬರಿಗೆ ಹೆದರಿಕೆಯಾಗುತ್ತಿತ್ತೋ ಏನೋ! ಆದರೆ ಮಾತುಕಥೆಯಾಡಿದರೆ ಅವರು ಎಂಥ ವಿನಯಶಾಲಿಯೆಂಬುದು ಗೊತ್ತಾಗುತ್ತಿತ್ತು.

ವೀರೇಶಲಿಂಗಂ ಪಂತುಲು ಅವರು ಬೆಂಗಳೂರಿನಲ್ಲಿ ಸ್ವಂತ ಮನೆ ಮಾಡಿಕೊಂಡಿದ್ದರು. ಚಾಮರಾಜಪೇಟೆಯ ಮೊದಲನೆ ರಸ್ತೆಯಲ್ಲಿ ಈದಿಗಾ ಸಮೀಪದಲ್ಲಿ ಉತ್ತರಕ್ಕೆ ತಿರುಗುವ ಕಡೆ ಮೂಲೆಯ ಮನೆ ಅವರದು. ಅದನ್ನು ಈಚೆಗೆ ಬೆಂಗಳೂರು ಡೆಪ್ಯುಟಿ ಕಮಿಷನರಾಗಿದ್ದ ಸೈಯದ್ ತಾಜ್ ಪೀರಾನ್ ಸಾಹೇಬರು ಕೊಂಡುಕೊಂಡರೆಂದು ನನ್ನ ತಿಳಿವಳಿಕೆ.

ಇಂಡಿಯದೇಶದ ಸಾಹಿತ್ಯ ವಿದ್ವತ್ಪ್ರಪಂಚದಲ್ಲಿಯೂ ಸಮಾಜ ಪರಿಷ್ಕಾರಕ ಪ್ರಪಂಚದಲ್ಲಿಯೂ ವೀರೇಶಲಿಂಗಂ ಪಂತುಲುರವರಿಗೆ ಒಂದು ಉನ್ನತಸ್ಥಾನ ಶಾಶ್ವತವಾಗಿ ಮೀಸಲಾಗಿರುತ್ತದೆ.

# ೨. ದಯಾರಾಮ್ ಗಿಡೂಮಲ್

ಲೋಕೋಪಕಾರದ ರೀತಿಗಳು ನೂರು ನೂರಿರುತ್ತವೆಯಲ್ಲವೆ? ಆ ನೂರು ರೀತಿಗಳಲ್ಲಿ ಅಪವಾದಸ್ವೀಕಾರದ ರೀತಿಯೂ ಒಂದು. ನ್ಯಾಯವಾಗಿ ತನಗೆ ಸಲ್ಲದೆ ಇರುವ ದೋಷಾರೋಪಣೆಯನ್ನು ತಾನು ಇಷ್ಟದಿಂದ ಹೊತ್ತು ಸಹಿಸಿ, ಇನ್ನೊಬ್ಬರ ಪ್ರಾಣ ಮಾನಗಳನ್ನು ಕಾಪಾಡಿದ ಒಬ್ಬ ಮಹಾನುಭಾವರ ಕಥೆ ಇದು.

ಸುಮಾರು ೫೫-೬೦ ವರ್ಷಗಳ ಹಿಂದಿನ ಮಾತು. ೧೯೧೨-೧೩ರ ಸಮಯದಲ್ಲಿ ಸಿಂಧೂ ಪ್ರಾಂತದಲ್ಲಿ ದಯಾರಾಮ್ ಗಿಡೂಮಲ್ ಎಂಬ ಮಹನೀಯರಿದ್ದರು. ಅವರು ಸಕ್ಕರ್ ಎಂಬಲ್ಲಿಯೋ ಷಿಕಾರಿಪುರ್ ಎಂಬಲ್ಲಿಯೋ ಡಿಸ್ಟ್ರಿಕ್ಟ್ ಜಡ್ಜ್ ಆಗಿದ್ದರು.

ಆ ಕಾಲದಲ್ಲಿ ನಮ್ಮ ವಿದ್ಯಾವಂತರುಗಳಲ್ಲಿ ದೇಶಾಭಿಮಾನವು ವಿಶೇಷವಾಗಿ ಸಮಾಜ ಪರಿಷ್ಕಾರ ಸಮಾಜ ಸೇವೆಗಳ (Social reform) ರೂಪವನ್ನು ತಾಳಿತ್ತು. ಆಗ ಗಾಂಧಿಯವರು ಪ್ರಸಿದ್ಧಿಗೆ ಬಂದಿರಲಿಲ್ಲ. ಅವರಿಗಿಂತ ಪೂರ್ವಿಕರಾದ ರಾಮಮೋಹನ ರಾಯ್, ದಯಾನಂದ ಸರಸ್ವತಿ, ಮಹಾದೇವ ಗೋವಿಂದ ರಾನಡೆ ಇವರುಗಳ ಸಮಾಜ ಸುಧಾರಣೆಯ ಅಭಿಪ್ರಾಯಗಳು ಎಲ್ಲೆಲ್ಲಿಯೂ ಪ್ರಚಲಿತವಾಗಿದ್ದವು. ರಾಜಕೀಯದ ಗೊಂದಲ ಇನ್ನೂ ಎದ್ದಿರಲಿಲ್ಲ. ದಯಾರಾಮ್ ಗಿಡೂಮಲ್‌ರವರು ಸಮಾಜಸೇವೆಯ ಅಭಿಪ್ರಾಯಗಳನ್ನು ಅಂಗೀಕರಿಸಿದ್ದವರು. ಅವರ ಧರ್ಮಪತ್ನಿಯೂ ಅವರ ಈ ಪ್ರಯತ್ನಗಳಲ್ಲಿ ಸಹಭಾಗಿನಿಯಾಗಿದ್ದರು.

# ಅನಾಥಾಲಯ

ಅವರಿಬ್ಬರೂ ಒಂದು ಅನಾಥಾಲಯವನ್ನು ಸ್ಥಾಪಿಸಿದ್ದರು. ಅದರಲ್ಲಿ ವಿಧವೆಯರಿಗೂ ಇತರ ಅನಾಥಸ್ತ್ರೀಯರಿಗೂ ಆಶ್ರಯ ಕಲ್ಪಿಸಿ, ಅಲ್ಲಿ ಅವರಿಗೆ ವಿದ್ಯೆಯನ್ನೂ ಕಸಬುದಾರಿ ಕಲೆಗಳನ್ನೂ ಕಲಿಸುವ ಏರ್ಪಾಟು ಮಾಡಿ ಕಾಲಕ್ರಮದಲ್ಲಿ ಆ ಸ್ತ್ರೀಯರು ಒಂದು ನಿರುಪಾಧಿಕವಾದ ವೃತ್ತಿಯಿಂದ ಜೀವನ ಸಂಪಾದಿಸಿಕೊಂಡು ಸಭ್ಯರಾಗಿ ಬಾಳುವಂತೆ ಅನುಕೂಲ ಮಾಡಿಕೊಡುವುದು ದಯಾರಾಮ್‌ರವರ ಮತ್ತು ಅವರ ಪತ್ನಿಯ ತಾತ್ಪರ್ಯ. ಈ ಅನಾಥಸಂಸ್ಥೆ ಚೆನ್ನಾಗಿ ಬೆಳೆದುಕೊಂಡುಬಂದಿತು. ಮಹಾಜನ ಅದರ ಕಾರ್ಯರೀತಿಗಳನ್ನು ಮೆಚ್ಚಿಕೊಂಡು ಉದಾರವಾಗಿ ಸಹಾಯ ಮಾಡಿದರು. ಎಲ್ಲರೂ ದಯಾರಾಮ್‌ರ ಮತ್ತು ಅವರ ಪತ್ನಿಯ ಉದಾತ್ತ ಧ್ಯೇಯವನ್ನೂ ಕರ್ತವ್ಯನಿಷ್ಠೆಯನ್ನೂ ಕೊಂಡಾಡುತ್ತಿದ್ದರು.

ಹೀಗಿರುವಲ್ಲಿ ಒಂದು ದಿನ ನಿರ್ಮಲಾಕಾಶದಿಂದ ಸಿಡಿಲೆರಗಿದಂತಾಯಿತು. ದಯಾರಾಮ್ ಗಿಡೂಮಲ್‌ರವರು ಒಂದು ಪ್ರಕಟನೆ ಹೊರಡಿಸಿದರು. ತಾವು ಸಾರ್ವಜನಿಕ ಜೀವನದಿಂದ ವಿರಮಿಸಿರುವಂತೆಯೂ ತಾವು ಇಟ್ಟುಕೊಂಡಿದ್ದ ಎಲ್ಲ ಸಾರ್ವಜನಿಕ ಸಂಸ್ಥೆಗಳ ಸಂಬಂಧವನ್ನೂ ಸಂಪೂರ್ಣವಾಗಿ ಪರಿತ್ಯಜಿಸಿರುವಂತೆಯೂ ಆ ಪ್ರಕಟಣೆ ಹೇಳಿತು. ಅದರ ಸುದ್ದಿ ದೇಶದಲ್ಲೆಲ್ಲ ಹರಡಿತು. ವಾರ್ತಾ ಪತ್ರಿಕೆಗಳವರು ಬಗೆಬಗೆಯಾಗಿ ಊಹಾಪೋಹಗಳನ್ನು ಕಟ್ಟಿದರು. ದಯಾರಾಮ್‌ರವರ ಅನಾಥ ಸಂಸ್ಥೆಯಿಂದ ಒಬ್ಬ ಯುವತಿ ತಪ್ಪಿಸಿಕೊಂಡು ಹೋದಳೆಂದು ಒಂದು ವದಂತಿ. ಆಕೆ ಗರ್ಭವತಿಯಾಗಿದ್ದಳೆಂದು ಇನ್ನೊಂದು ವದಂತಿ. ದಯಾರಾಮ್‌ರವರೇ ಗರ್ಭಕ್ಕೆ ಕಾರಣರೆಂದು ಮೂರನೆಯ ವದಂತಿ. ಹೀಗೆಲ್ಲ ಊಹೆಗಳು ಹರಡುತ್ತಿದ್ದವು.

# ನಿರುತ್ತರ

ದಯಾರಾಮ್‌ರವರಾದರೋ ಒಂದು ವದಂತಿಗೂ ಉತ್ತರ ಕೊಡಲಿಲ್ಲ. ಪತ್ರಿಕೆಗಳಿಗೆ ಯಾವ ವಿವರಣೆಯನ್ನೂ ಕೊಡದೆ ಹೋದರು. ಅವರೂ ಅವರ ಪತ್ನಿಯೂ ಎಲ್ಲಿಗೆ ಹೋದರೆಂಬುದೇ ಯಾರಿಗೂ ತಿಳಿಯದು. ಒಂದೆರಡು ವರ್ಷಗಳ ಕಾಲ ಎಲ್ಲರಿಗೂ ಆಶ್ಚರ್ಯ. ಯಾರಿಗೂ ಏನೂ ತಿಳಿಯದೆ ಹೋಯಿತು. ದಯಾರಾಮ್‌ರವರು ಬದುಕಿದ್ದಾರೆಯೆ, ಇಲ್ಲವೆ ಇದನ್ನು ವಿಚಾರಿಸುವವರಿಲ್ಲ. ವಿಚಾರಿಸಿದರೆ ಪ್ರತ್ಯುತ್ತರ ಬರುವ ದಾರಿಯೂ ಇಲ್ಲ. ಹೀಗಾಗಿತ್ತು, ಅದೊಂದು ವಿಚಿತ್ರ ಪರಿಸ್ಥಿತಿ.

ಇನ್ನೆರಡು ವರ್ಷ ಕಳೆದ ಮೇಲೆ ಮರ್ಮ ಕೊಂಚಕೊಂಚವಾಗಿ ಹೊರಕ್ಕೆ ಬಂದಿತು. ದಯಾರಾಮ್‌ರವರ ಅನಾಥ ಸಂಸ್ಥೆಯಲ್ಲಿದ್ದ ಒಬ್ಬಾಕೆ ಗರ್ಭವತಿಯಾಗಿದ್ದದ್ದು ನಿಜ. ಆಕೆ ಆತ್ಮಹತ್ಯೆಯ ಯೋಚನೆಯನ್ನು ಮಾಡಿದ್ದದ್ದೂ ನಿಜ. ಆಕೆಯ ಅವಸ್ಥೆಗೆ ಕಾರಣನಾಗಿದ್ದ ಗಂಡಸು ಯಾರೆಂಬುದನ್ನು ಯಾರೂ ಹೇಳುವಂತಿರಲಿಲ್ಲ. ಆ ವಿಷಮ ಸಂದರ್ಭ ದಯಾರಾಮ್ ಗಿಡೂಮಲ್‌ರವರ ತಿಳಿವಿಗೆ ಬರಲು ಒಂದೆರಡು ವಾರವಾಗಿರಬೇಕು. ಅವರ ಹೆಂಡತಿಯ ಮೂಲಕ ಅದು ಕೊಂಚಕೊಂಚವಾಗಿ ಅವರ ಕಿವಿಯನ್ನು ಮುಟ್ಟಿತು.

# ಸಾರ್ಥಕ ಹೆಸರು

ಇಬ್ಬರೂ ಕಳವಳಪಟ್ಟುಕೊಂಡರು. ಏನು ಮಾಡತಕ್ಕದ್ದೆಂದು ಆಲೋಚಿಸಿದರು. ಅವರ ತೀರ್ಮಾನ ಹೀಗೆ: ಆ ಹೆಂಗಸಿನ ಅವಸ್ಥೆಗೆ ಕಾರಣನಾದ ಗಂಡಸು ಯಾವನಾದರಾಗಿರಲಿ. ಅದನ್ನು ತಿಳಿದು ಮಾಡಬಹುದಾದದ್ದೇನು? ಈಗ ಆಕೆ ವಿಷಮದಲ್ಲಿದ್ದಾಳೆ. ಸಹಾಯ ಕೊಡದೆಹೋದರೆ ಯಾವ ವಿಪರೀತವನ್ನಾದರೂ ಮಾಡಿಯಾಳು. ಆಕೆಯ ಪ್ರಾಣವನ್ನುಳಿಸಬೇಕು: ಅದಕ್ಕೆ ಪೂರ್ವಭಾವಿಯಾಗಿ ಆಕೆಯ ಮಾನವನ್ನುಳಿಸಬೇಕು. ಆಕೆ ನಡಸಿದ್ದು ಅಕ್ರಮ ಸಂಬಂಧವಲ್ಲವೆಂಬಂತಾದರೆ ಆಕೆ ವಿಪರೀತಕಾರ್ಯದ ಯೋಚನೆಯನ್ನು ಬಿಟ್ಟಾಳು. ಇದಾಗಬೇಕಾದರೆ ಸಂಬಂಧಕಾರಣನಾದವನು ತಾನೆಂದು ಒಪ್ಪಿಕೊಂಡು ಆ ಆಪದ್ಗತಳನ್ನು ತನ್ನ ಪತ್ನಿಯೆಂದು ಹೇಳಿಕೊಳ್ಳುವ ಗಂಡಸು ಒಬ್ಬಾತ ದೊರೆಯಬೇಕು. ಅಂಥವನನ್ನು ಎಲ್ಲಿ ಕಂಡುಹಿಡಿಯುವುದು? ಅದು ಬೆಲೆಕೊಟ್ಟುಕೊಳ್ಳಲಾಗುವ ವಸ್ತುವೆ? ಹಣದ ಆಸೆಗೆ ಕೈಚಾಚಿದವನು ಸ್ಥಿರವಾಗಿ ನಿಂತು ತನ್ನ ಜವಾಬ್ದಾರಿಯನ್ನು ಹೊತ್ತಾನೆ?

ಹೀಗೆಲ್ಲ ಗಂಡಹೆಂಡಿರು ಆಲೋಚನೆ ಮಾಡಿ ನೋಡಿ, ಕಡೆಗೆ ದಯಾರಾಮ್ ಗಿಡೂಮಲ್‌ರವರೇ ಆ ಭಾರವನ್ನು ವಹಿಸಿಕೊಳ್ಳಬೇಕೆಂದು ತೀರ್ಮಾನಕ್ಕೆ ಬಂದರು. ಯಾರಿಗೋ ಸಲ್ಲಬೇಕಾಗಿದ್ದ ಜವಾಬ್ದಾರಿಯ ಭಾರವನ್ನು ಒಂದು ಹೆಣ್ಣುಜೀವದ ಮೇಲಣ ಕನಿಕರದಿಂದ ದಯಾರಾಮ್‌ರವರು ಹೊತ್ತುಕೊಂಡರು. ತಮ್ಮ ಮೇಲೆ ಜನ ಅಪವಾದ ಹೊರಿಸಿದರೂ ಹೊರಿಸಲಿ; ಒಂದು ಜೀವಕ್ಕೆ ಅದರಿಂದ ಸದ್ಗತಿಯಾಗುವುದಾದರೆ ಆ ಕಟುವಾದ ಅಪವಾದವನ್ನೂ ತಾವು ಸಹಿಸಬೇಕು-ಎಂದರು ದಯಾರಾಮ್. ಅವರ ಹೆಸರು ಸಾರ್ಥಕವಾಯಿತು.

॥ ಪತಿತಪಾವನ ಸೀತಾರಾಮ್ ॥

1 ಜ್ಞಾಪಕ ಚಿತ್ರಶಾಲೆ, ಸಂಪುಟ ೮.

2 ಡಿ.ವಿ.ಜಿ. ಕೃತಿಶ್ರೇಣಿ-೬